

ಮಸ್ಕಿಕನ್ನಡ : ಒಂದು ಭಾಷಿಕ ಅಧ್ಯಯನ

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ)

ಸಂಶೋಧಕ

ಜೋಗಿನಕಟ್ಟೆ ಮಂಜುನಾಥ

ಮಾರ್ಗದರ್ಶಕರು

ಡಾ.ಪಿ.ಮಹಾದೇವಯ್ಯ

ಸಹ ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ

ಕನ್ನಡ ಭಾಷಾಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೧ - ೧೨

"ಮಸ್ಕಿಕನ್ನಡ : ಒಂದು ಭಾಷಿಕ ಅಧ್ಯಯನ"

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧದ)

ಸಂಶೋಧಕ

ಜೋಗಿನಕಟ್ಟೆ ಮಂಜುನಾಥ

ಮಾರ್ಗದರ್ಶಕರು

ಡಾ.ಪಿ.ಮಹಾದೇವಯ್ಯ

ಸಹ ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ

ಕನ್ನಡ ಭಾಷಾಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೧ - ೧೨

ದೃಢೀಕರಣ ಪತ್ರ

ಶ್ರೀ ಜೋಗಿನಕಟ್ಟೆ ಮಂಜುನಾಥ ಅವರು ''ಮಸ್ಕಿಕನ್ನಡ : ಒಂದು ಭಾಷಿಕ ಅಧ್ಯಯನ'' ಎಂಬ ಶೀರ್ಷಿಕೆಯ ಪಿಎಚ್.ಡಿ ಪದವಿಗಾಗಿ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ಪಿ. ಮಹಾದೇವಯ್ಯ)
ಮಾರ್ಗದರ್ಶಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ದಿನಾಂಕ: ೧೨.೬.೧೧.
ಸ್ಥಳ : ವಿದ್ಯಾರಣ್ಯ

ಪ್ರಮಾಣ ಪತ್ರ

"ಮಸ್ಕಿಕನ್ನಡ : ಒಂದು ಭಾಷಿಕ ಅಧ್ಯಯನ" ಎಂಬ ಮಹಾಪ್ರಬಂಧವನ್ನು ಡಾ.ಪಿ.ಮಹಾದೇವಯ್ಯ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಲಿ ಸಲ್ಲಿಸಲಾಗಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

S. Manjunatha

(ಜೋಗಿನಕಟ್ಟೆ, ಮಂಜುನಾಥ)
ಸಂಶೋಧಕ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ದಿನಾಂಕ: ೩೦.೦೮.೯೯
ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧. ಪ್ರವೇಶ

೧.೨. ಅಧ್ಯಯನದ ಉದ್ದೇಶ ಹಾಗೂ ಮಹತ್ವ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವಿಧಾನ

೧.೫. ಅಧ್ಯಯನದ ಸ್ವರೂಪ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧. ಪ್ರವೇಶ

ಮಾನವ ಸಮಾಜ ಜೀವಿ. ಈ ಸಮಾಜದ ಎಲ್ಲಾ ಆಶೋತ್ತರಗಳನ್ನು ಭಾಷೆ ಎಂಬ ಮಾಧ್ಯಮ ಈಡೇರಿಸುತ್ತದೆ. ಒಂದು ಸಮಾಜದ ಕ್ರಿಯೆಯನ್ನು ಸುಲಭಗೊಳಿಸುವುದು ಭಾಷೆ. ಮಾನವನು ತನ್ನ ಆಲೋಚನೆ, ಅನಿಸಿಕೆ, ವಿಚಾರಗಳನ್ನು ತನ್ನ ಸಮಾಜದೊಂದಿಗೆ ವ್ಯವಹರಿಸಲು ಭಾಷೆಯನ್ನು ಅವಲಂಬಿಸಿದ್ದಾನೆ. ಆಡುವ ಮಾತು ಮತ್ತು ಬರಹವನ್ನು ನಾವು ಭಾಷೆ ಎನ್ನಬಹುದು. ಮಾನವ ಮತ್ತು ಭಾಷೆಗೆ ಅನನ್ಯ ಸಂಬಂಧವಿದೆ. ಮಾನವನು ತನ್ನ ಬುದ್ಧಿವಂತಿಕೆಯಿಂದ ಭಾಷೆಯನ್ನು ಸೃಷ್ಟಿಸಿಕೊಂಡು ಬೆಳೆಸಿದರೆ, ಭಾಷೆ ಮಾನವನನ್ನು ವಿಚಾರವಂತನನ್ನಾಗಿ ಮತ್ತು ಬುದ್ಧಿವಂತನನ್ನಾಗಿ ಬೆಳೆಸಿತು ಎನ್ನಬಹುದು. ಪ್ರಾಚೀನ ಕಾಲದಿಂದಲೂ ಭಾಷೆ ಎಂಬುದು ದೈವಸೃಷ್ಟಿ, ದೇವರಿಂದ ಪಡೆದ ಅಪೂರ್ವವಾದ ವರಗಳಲ್ಲಿ ಒಂದೆಂದು ಭಾವಿಸಲಾಗಿತ್ತಿದ್ದಿತು. ಆದರೆ ಮಾನವನ ಯೋಚನೆ, ಚಿಂತನೆಯ ದೃಷ್ಟಿಕೋನಗಳು ಬೆಳೆದು ನಾಗರಿಕನಾದಂತೆ, ವೈಜ್ಞಾನಿಕ ಮನೋಭಾವ ಬೆಳೆದಂತೆ, ಭಾಷೆಯು ದೇವರ ಸೃಷ್ಟಿಯಲ್ಲ, ಅದು ನಮ್ಮ ಪೂರ್ವಿಕರಿಂದ ವಾಂಶಿಕವಾಗಿ ಬಂದಿದ್ದಲ್ಲ, ಭಾಷೆ ಪ್ರಯತ್ನ ಪೂರ್ವಕವಾಗಿ ಬರುವಂತದ್ದು ಅದು ಮಾನವನ ಸೃಷ್ಟಿ ಎಂಬ ಸತ್ಯವನ್ನು ಕಂಡುಕೊಂಡನು.

ಕನ್ನಡ ಭಾಷೆ ಸಾಕಷ್ಟು ಪ್ರಾಚೀನ ಇತಿಹಾಸವನ್ನು ಹೊಂದಿದೆ. ಭಾರತದ ಎಲ್ಲಾ ಭಾಷೆಗಳಲ್ಲಿ ಪ್ರಾಚೀನತೆಯ ದೃಷ್ಟಿಯಿಂದ ನೋಡಿದರೆ ಕನ್ನಡಕ್ಕೆ ಮೂರನೇ ಸ್ಥಾನ. ಮೊದಲನೆಯದು ಸಂಸ್ಕೃತ, ಎರಡನೆಯದು ತಮಿಳು. ಸಂಸ್ಕೃತದ ಪ್ರಭಾವ ಕನ್ನಡ ಭಾಷೆಯ ಮೇಲೆ ಕ್ರಿಸ್ತಶಕ ಆರಂಭದಲ್ಲಿ ದಟ್ಟವಾಗಿ ಬೆಳೆಯತೊಡಗಿದ್ದನ್ನು ಗಮನಿಸಬಹುದು. ಹಲ್ಮಿಡಿ ಶಾಸನ ದೊರೆತ ಮೇಲೆ ಅನೇಕ ಶಾಸನಗಳು ಕನ್ನಡದಲ್ಲಿ ದೊರೆತಿವೆ. ಈ ಶಾಸನಗಳಲ್ಲಿ ಕನ್ನಡ ಭಾಷೆ ಪ್ರೌಢತೆಯಿಂದ ಸರಳತೆ ಕಡೆಗೆ ಹಾಗೂ ದೇಸಿಯತೆ ಕಡೆಗೆ ಹರಿದು ಬಂದಿರುವುದನ್ನು ನೋಡಬಹುದು. ಸದ್ಯದ ಮಟ್ಟಿಗೆ ಕನ್ನಡದ ಮೊಟ್ಟಮೊದಲ ಕೃತಿ ನೃಪತುಂಗನ ಕ್ರಿ.ಶ. ೮೫೦ರ 'ಕವಿರಾಜಮಾರ್ಗ' ಈ ಕವಿರಾಜಮಾರ್ಗ ಕೃತಿಯಲ್ಲಿ ಕನ್ನಡ ಭಾಷೆಯನ್ನು ಮಾತನಾಡುವ ಜನರ ಸ್ವಭಾವ, ಅವರ ವೈಶಿಷ್ಟ್ಯ, ಕನ್ನಡನಾಡಿನ ವಿಸ್ತಾರ, ಕನ್ನಡ ಭಾಷೆಯಲ್ಲಿರುವ ಪ್ರಭೇದಗಳು ಇನ್ನೂ ಮುಂತಾದವುಗಳನ್ನು ಹೆಸರಿದ್ದಾನೆ. ೯ನೇ ಶತಮಾನದಲ್ಲಿ ಕನ್ನಡ ಭಾಷೆ ಉತ್ಕೃಷ್ಟ ಭಾಷೆಯಾಗಿ ಬೆಳೆದಿದ್ದನ್ನು ಗಮನಿಸಬಹುದು.

ಕವಿರಾಜಮಾರ್ಗದಲ್ಲಿ 'ಕಾವೇರಿಯಿಂದಮಾಗೋದಾವರಿವರಮಿರ್ದನಾಡದಾ ಕನ್ನಡದೊಳ್' ಎಂದು ಹೇಳಿರುವುದು ಗಮನಿಸಿದರೆ ಕನ್ನಡ ಭಾಷೆ ೯ನೇ ಶತಮಾನದ ಸಂದರ್ಭದಲ್ಲಿ ಕಾವೇರಿಯಿಂದ ಗೋದಾವರಿ ನದಿಯವರೆಗೆ ವಿಸ್ತಾರವಾಗಿ ಬೆಳೆದಿದ್ದು ಕಂಡುಬರುತ್ತದೆ.

'ಕನ್ನಡಭಾಷೆ' ೧೯ನೇ ಶತಮಾನದಿಂದ ಈಚೆಗೆ ಸಾಕಷ್ಟು ಸಂಮೃದ್ಧವಾಗಿ ಪ್ರಾದೇಶಿಕ, ಸಾಮಾಜಿಕ ಪ್ರಭೇದಗಳ ವೈವಿಧ್ಯತೆಗಳೊಂದಿಗೆ ಬೆಳೆದಿರುವುದನ್ನು ಕಾಣಬಹುದು. ರಾಜಕೀಯ ಬದಲಾವಣೆಗಳಿಂದ ಕಾಲಕಾಲಕ್ಕೆ ಕನ್ನಡ ಭಾಷೆ ಬೇರೆ ಭಾಷೆಯ ಪ್ರಭಾವಕ್ಕೆ ಒಳಗಾಗಿರುವುದನ್ನು ಗುರುತಿಸಬಹುದು. ಹೊಸಗನ್ನಡ ಭಾಷೆ ಅನೇಕ ಉಪಭಾಷೆಗಳನ್ನು, ಪ್ರಭೇದಗಳನ್ನು ಒಳಗೊಂಡಿದೆ. ಹಲವು ವ್ಯಕ್ತಿಗಳಿಂದ ಕೆಲವು ಭಾಷಾ ವೈಶಿಷ್ಟ್ಯಗಳನ್ನು ಬೆಳೆಸಿಕೊಂಡಿದೆ. ನಿರ್ದಿಷ್ಟ ಪ್ರದೇಶ ಸಾಮಾಜಿಕ ಪರಿಸರದಲ್ಲಿ ಬಳಸಲ್ಪಡುವ ಭಾಷೆಯನ್ನು ಸಾಮಾನ್ಯವಾಗಿ 'ಪ್ರಭೇದಭಾಷೆ' ಎಂದು ಕರೆಯುತ್ತಾರೆ. ಇಂತಹ ವೈಶಿಷ್ಟ್ಯಗಳು ಹೆಚ್ಚು ಇರುವ ಒಂದೇ ಭಾಷೆಯಲ್ಲಿರುವ ಪ್ರಭೇದಗಳ ಗುಂಪನ್ನು 'ಉಪಭಾಷೆ' ಎನ್ನುವರು. ಪ್ರಭೇದ ಭಾಷೆಯು ಒಂದು ಗ್ರಾಮ, ತಾಲ್ಲೂಕು ಅಥವಾ ಅತಿಹೆಚ್ಚು ಅಂದರೆ ಒಂದು ಜಿಲ್ಲೆಗೆ ಸೀಮಿತವಾಗಿರುತ್ತದೆ. ಯಾವುದಾದರೂ ಒಂದು ಭಾಷೆ, ಕಾಲ, ಸ್ಥಳದ ಉಪಭಾಷೆಯ ಧ್ವನಿ, ಪದ, ವಾಕ್ಯ, ಅರ್ಥ, ವ್ಯಾಕರಣ ಮುಂತಾದ ವಿಚಾರಗಳನ್ನು 'ವಿವರಣಾತ್ಮಕ ಉಪಭಾಷಾ ವಿಜ್ಞಾನ' ಎಂದು ಕರೆಯುವರು.

ಅಂತಸ್ತು, ಧರ್ಮ, ಜಾತಿ ಮುಂತಾದ ಸಾಮಾಜಿಕ ಅಂಶಗಳೂ ಭಾಷಾ ಪ್ರಭೇದಗಳಾಗಲು ಕಾರಣ ವಾಗಿರುವುದನ್ನು ಕನ್ನಡದಲ್ಲಿ ಗಮನಿಸಬಹುದು. ಮಾನವ ಸಮಾಜ ಜೀವಿ ಆಗಿದ್ದರಿಂದ ತಾನು ಯಾವ ಸಮಾಜ ಪರಿಸರದಲ್ಲಿ ವಾಸಿಸುವನೋ ಅಂತಹ ಸಾಮಾಜಿಕ ಪರಿಸರದ ಭಾಷೆಯನ್ನು ಅವನು ಅಳವಡಿಸಿ ಕೊಂಡಿರುತ್ತಾನೆ. ಸಾಮಾನ್ಯವಾಗಿ ಕನ್ನಡದಲ್ಲಿ ಹವ್ಯಕ ಕನ್ನಡ, ಬಡಗಕನ್ನಡ, ಮುಸ್ಲಿಂ ಕನ್ನಡ, ಗೌಡಕನ್ನಡ ಇತ್ಯಾದಿಯಾಗಿ ಸಾಮಾಜಿಕ ಪ್ರಭೇದಗಳನ್ನು ಹೆಸರಿಸಬಹುದು. ಭೌಗೋಳಿಕ ಕಾರಣಗಳಿಂದಲೂ ಕನ್ನಡ ಭಾಷಾ ಪ್ರಭೇದಗಳು ಹುಟ್ಟಿಕೊಳ್ಳುವವು. ಇತ್ತೀಚಿನ ದಿನಗಳಲ್ಲಿ ಸಂಪರ್ಕ ಸಾಧನಗಳಿಂದ ಪ್ರಾದೇಶಿಕ ಭಿನ್ನತೆ ಕಡಿಮೆಯಾಗಿದೆ. ಪ್ರಾದೇಶಿಕತೆ ಆಧಾರದ ಮೇಲೆ ಬಳ್ಳಾರಿ ಕನ್ನಡ, ಬೀದರ ಕನ್ನಡ, ಮೈಸೂರುಕನ್ನಡ, ಆದೋನಿಕನ್ನಡ ಇತ್ಯಾದಿಯಾಗಿ ಪ್ರಭೇದಗಳನ್ನು ಗುರುತಿಸಬಹುದು. ಕನ್ನಡ ಭಾಷೆಯಲ್ಲಿ ಇಷ್ಟೆಲ್ಲಾ ದೇಶಿ ಕನ್ನಡ ಭಾಷೆಯ ಪ್ರಭೇದಗಳು ಇದ್ದಾಗ್ಯೂ ಎಲ್ಲಾ ಪ್ರಭೇದಗಳಿಗೂ ಸಾಮಾನ್ಯವಾಗಿರುವ ಶಿಷ್ಟಕನ್ನಡ ಭಾಷೆಯೊಂದು ಇದೆ. ಶಿಷ್ಟಭಾಷೆಯನ್ನು ಪ್ರಮಾಣ ಭಾಷೆ ಎಂತಲೂ ಗುರುತಿಸಲಾಗುತ್ತದೆ. ರಾಯಚೂರು ಜಿಲ್ಲೆಯ ಮಸ್ಕಿ ಪರಿಸರದ ಕನ್ನಡ ತನ್ನದೇ ಆದ ವೈಶಿಷ್ಟ್ಯವನ್ನು ಬೆಳಸಿಕೊಂಡಿದೆ. ಉತ್ತರ ಕರ್ನಾಟಕದ ಕನ್ನಡ ಭಾಷೆಯಲ್ಲಿ ಮಸ್ಕಿಕನ್ನಡ ಭಾಷೆ, ಇತರೆ ಭಾಗದಲ್ಲಿ ಬಳಕೆಯಲ್ಲಿರುವ ಕನ್ನಡಕ್ಕಿಂತ ಭಿನ್ನವಾಗಿ ತೋರುವುದರಿಂದ ಮಸ್ಕಿಕನ್ನಡವನ್ನು ಬೇರೆಯಾಗಿ ಹೇಳಬಹುದು. ಮಸ್ಕಿಕನ್ನಡ ಪ್ರಾದೇಶಿಕ ಪ್ರಭೇದ ಎಂದು ಗುರುತಿಸಲು ಸಾಮಾಜಿಕ ಅಂಶಗಳನ್ನು ಪೂರಕವಾಗಿ ಬಳಸಿಕೊಳ್ಳಲಾಗಿದೆ. ಭಿನ್ನಅಂಶಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕೈಗೊಂಡ ಸಂಶೋಧನೆಯ ಒಂದು ಪ್ರಯತ್ನ 'ಮಸ್ಕಿಕನ್ನಡ : ಒಂದು ಭಾಷಿಕ ಅಧ್ಯಯನ' ಎಂಬ ಮಹಾಪ್ರಬಂಧ ಆಗಿರುತ್ತದೆ.

ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಮಸ್ಕಿ, ಇತಿಹಾಸ ಕಾಲದಿಂದಲೂ ಪ್ರಸಿದ್ಧಿ ಪಡೆದ ಪಟ್ಟಣವಾಗಿದೆ. ಅಶೋಕನ ಹೆಸರಿನೊಂದಿಗೆ 'ದೇವನಾಂಪ್ರಿಯ' ಎನ್ನುವ ಬಿರುದು ಒಳಗೊಂಡ

ಪ್ರಥಮ ಶಾಸನ. ಸಿ.ಬಿಡನ್ ಎನ್ನುವವರು ಕ್ರಿ.ಶ. ೧೯೧೫ರ ಜನವರಿಯಲ್ಲಿ ಈ ಶಾಸನವನ್ನು ಕಂಡುಹಿಡಿದರು. ಮಸ್ಕಿ ಪಟ್ಟಣ ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ. ದೂರದಲ್ಲಿ ದಕ್ಷಿಣ ದಿಕ್ಕಿನಲ್ಲಿದೆ ಮತ್ತು ರಾಯಚೂರು ಜಿಲ್ಲಾ ಕೇಂದ್ರದಿಂದ ೯೫ ಕಿ.ಮೀ. ದೂರದಲ್ಲಿದೆ. ಮಸ್ಕಿಪ್ರದೇಶದ ಒಟ್ಟು ಕ್ಷೇತ್ರ ೯೮೪೩.೩೯ ಎ.ಗು ಭೌಗೋಳಿಕ ವಿಸ್ತೀರ್ಣ ಹೊಂದಿದೆ. ಹಿರಿಯ-ಕಿರಿಯ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು, ಪದವಿ ಪೂರ್ವಕಾಲೇಜುಗಳು ಮತ್ತು ಪ್ರಥಮ ದರ್ಜೆ ಕಾಲೇಜನ್ನು ಹೊಂದಿದೆ. ಶೇ ೬೩.೦೭ ರಷ್ಟು ಸಾಕ್ಷರತೆ ಇದ್ದು, ಶೇ ೭೫.೯ ಪುರುಷ ಸಾಕ್ಷರರು ಮತ್ತು ೫೦.೩ರಷ್ಟು ಮಹಿಳಾ ಸಾಕ್ಷರರಿರುತ್ತಾರೆ.

ಭಾಷಿಕ ಪರಿಸರ

ಮಸ್ಕಿಯಲ್ಲಿ ಪ್ರಧಾನವಾಗಿ ಮಾತನಾಡುವ ಭಾಷೆ ಕನ್ನಡ, ಅಲ್ಲದೆ ಹಲವು ಭಾಷೆಗಳನ್ನು ಮಾತನಾಡುವ ಜನರಿದ್ದಾರೆ. ಆದರೆ ಅನ್ಯಭಾಷಿಕರ ಮನೆಮಾತಿನ ಪ್ರಭಾವ ಮಸ್ಕಿಕನ್ನಡದ ಮೇಲೆ ಪ್ರಭಾವ ಬೀರಿಲ್ಲ. ಮಸ್ಕಿಯಲ್ಲಿ ಕನ್ನಡ ಮಾತೃಭಾಷಿಕರೆಂದರೆ ಲಿಂಗಾಯತ, ನಾಯಕ, ಹರಿಜನ, ಪದ್ಮಶಾಲಿ, ಕಬ್ಬೇರು, ಕುರುಬರು, ದೇವಾಂಗ, ಬೇಡಜಂಗಮ, ಲಿಂಗಾಯತ ಚಿಂಪಿಗ, ಉಪ್ಪಾರ, ಮೇದಾರು, ಒಡ್ಡರು, ಮುಚುಗರು, ಅಡಪದ, ಅಕ್ಕಸಾಲಿಗರು ಮುಂತಾದವರನ್ನು ನೋಡಬಹುದು. ಇವರು ಮನೆಯ ಆವರಣದಲ್ಲಿ ಹಾಗೂ ಹೊರವಲಯದ ಆವರಣದಲ್ಲಿ ಕನ್ನಡವನ್ನೇ ಬಳಸುತ್ತಾರೆ. ಇವರ ಮನೆಯ ವಾತಾವರಣದಲ್ಲಿ ಕಂಡುಬರುವ ಆಕಾಶವಾಣಿ, ದೂರದರ್ಶನ, ಸಂವಹನ ಮಾಧ್ಯಮ ಮುಂತಾದ ವಲಯಗಳಲ್ಲಿ ಕಾರ್ಯಕ್ರಮಗಳನ್ನು ಕನ್ನಡದಲ್ಲಿ ಕೇಳುತ್ತಾರೆ. ವಿದ್ಯಾವಂತರಲ್ಲಿ ಹಿಂದಿ ಮತ್ತು ಇಂಗ್ಲೀಷ್ ಬಳಕೆ ಕಂಡುಬರುತ್ತದೆ. ಮಸ್ಕಿಯಲ್ಲಿ ನೆಲೆಸಿರುವ ಅನ್ಯಭಾಷಿಕರೆಂದರೆ, ಆಂಧ್ರ(ತೆಲುಗರು), ಲಂಬಾಣಿಗರು, ಪಿಂಜಾರ್‌ರರು, ಮುಸ್ಲಿಂಮರು, ಜೈನರು, ಮರಾಠಿಗರು, ತಮಿಳಿಗರು. ಇವರು ಮನೆಯ ಆವರಣದಲ್ಲಿ ತಮ್ಮ ಮಾತೃಭಾಷೆಯನ್ನು ಬಳಕೆಮಾಡುತ್ತಾರೆ. ಹೊರವಲಯದಲ್ಲಿ ಅಂದರೆ ಸಾರ್ವಜನಿಕ ವಲಯಗಳಾದ ಸಾರ್ವಜನಿಕ ವೇದಿಕೆ, ಕಛೇರಿ, ಮನೋರಂಜನ ಸ್ಥಳಗಳು, ಸಿನಿಮಾ ಮಂದಿರ, ಹೋಟೆಲ್ಲುಗಳು ಮುಂತಾದವುಗಳಲ್ಲಿ ಕನ್ನಡ ಭಾಷೆಯನ್ನು ಬಳಕೆಮಾಡುತ್ತಾರೆ. ಇವರು ಸಂವಹನ ಮಾಧ್ಯಮ ಮುಂತಾದವು ವಲಯಗಳಲ್ಲಿ ಕಾರ್ಯಕ್ರಮಗಳನ್ನು ತಮ್ಮ ಮಾತೃಭಾಷೆ ಮಾಧ್ಯಮವನ್ನು ನೋಡಲು ಇಷ್ಟಪಡುತ್ತಾರೆ. ಇವರು ವ್ಯಾಪಾರ ದೃಷ್ಟಿಯಿಂದ ಅಥವಾ ಇನ್ನಾವುದೇ ದೃಷ್ಟಿಯಿಂದ ಬಂದು ನೆಲೆಸಿದ ಅನ್ಯಭಾಷಿಕರು ತಮ್ಮ ಜೀವನದ ನಿರ್ವಹಣೆಗಾಗಿ ಅಗತ್ಯವಿದ್ದಷ್ಟು ಕನ್ನಡವನ್ನು ಕಲಿಯುತ್ತಾರೆ. ಉಳಿದಂತೆ ತಮ್ಮ ಸಮುದಾಯದ ಭಾಷೆಯನ್ನು ಬಳಸಿಕೊಳ್ಳುತ್ತಾರೆ. ಲಂಬಾಣಿಗರು ವ್ಯವಹಾರಕ್ಕಾಗಿ ಜೀವನ ನಿರ್ವಹಣೆಗಾಗಿ ಕನ್ನಡ ಭಾಷಿಕರನ್ನು ಅವಲಂಬಿಸಿದರೂ ಕನ್ನಡಭಾಷಿಕರು ಈ ಸಮುದಾಯಗಳೊಡನೆ ಯಾಜಮಾನ್ಯದ ನೆಲೆಯಲ್ಲೆ ಇರುವುದನ್ನು ಗಮನಿಸಬಹುದು. ಮಸ್ಕಿಕನ್ನಡ ಮಾತೃಭಾಷಿಕರ ಮೇಲೆ ಮರಾಠಿ ಹಾಗೂ ಉರ್ದು ಭಾಷೆಯ ಪ್ರಭಾವವನ್ನು ಸ್ವಲ್ಪಮಟ್ಟಿಗೆ ಗುರುತಿಸಬಹುದು. ಮರಾಠಿ ಹಾಗೂ ಉರ್ದುಭಾಷೆಯ ಪ್ರಭಾವಕ್ಕೆ ಕಾರಣ ಈ ಪ್ರದೇಶದಲ್ಲಿ ಮರಾಠರು ಹಾಗೂ ನಿಜಾಮರ ಆಳ್ವಿಕೆ. ಒಟ್ಟಾರೆಯಾಗಿ ಮಸ್ಕಿಯಲ್ಲಿ ಪ್ರಧಾನವಾಗಿ ಮಾತನಾಡುವ ಭಾಷೆ ಕನ್ನಡ.

೧.೨. ಉದ್ದೇಶ ಹಾಗೂ ಮಹತ್ವ

ಸಾಮಾನ್ಯವಾಗಿ ಕನ್ನಡದಲ್ಲಿ ಎರಡು ಪ್ರಭೇದಗಳಿವೆ ಎಂದು ಈಗಾಗಲೇ ಆಗಿರುವ ಅಧ್ಯಯನದಿಂದ ತಿಳಿದುಬರುತ್ತದೆ. ಈ ವರ್ಗೀಕರಣವನ್ನು ಉತ್ತರಮಾರ್ಗ ಮತ್ತು ದಕ್ಷಿಣ ಮಾರ್ಗವೆಂದು ಶ್ರೀಕಂಠಯ್ಯ

ಮತ್ತು ವೆಂಕಣ್ಣಯ್ಯ ವರ್ಗೀಕರಣ ಮಾಡಿದ್ದಾರೆ. ನೃಪತುಂಗನು ಕವಿರಾಜಮಾರ್ಗದಲ್ಲಿ, ಎರಡನೇ ನಾಗವರ್ಮನು ಕಾವ್ಯಾವಲೋಕನದಲ್ಲಿ, ಮತ್ತು ಭಟ್ಟಾಕಳಂಕನು ಶಬ್ದಾನುಶಾಸನದಲ್ಲಿ ಉತ್ತರ ಮತ್ತು ದಕ್ಷಿಣ ಮಾರ್ಗಗಳಿಂದ ವರ್ಗೀಕರಿಸಿರುವುದು ತಿಳಿದುಬರುತ್ತದೆ. ಈ ಒಂದು ವರ್ಗೀಕರಣ ಸಂಸ್ಕೃತದಲ್ಲಿ ಉತ್ತರ ಮತ್ತು ದಕ್ಷಿಣ ಮಾರ್ಗ ಎಂದು ದಂಡಿಯ ಕಾವ್ಯಾದರ್ಶನದಲ್ಲಿ ಹೇಳಿರುವುದು ಅವುಗಳ ಚರಿತ್ರೆಯನ್ನು ಹೇಳುತ್ತದೆ.

ಕನ್ನಡ ಪ್ರಭೇದಗಳನ್ನು ತಲಸ್ಪರ್ಶಿ ಆಗಿ ಅಧ್ಯಯನ ಮಾಡಿದಾಗ ಭೌಗೋಳಿಕವಾಗಿ ಕರಾವಳಿ ಕನ್ನಡ ಮತ್ತು ಇತರ ಪ್ರದೇಶದ ಕನ್ನಡವೆಂಬುದಾಗಿ ವರ್ಗೀಕರಿಸಬಹುದು. ಡಿ.ಎನ್.ಶಂಕರಭಟ್ಟರು 'ಕನ್ನಡ ಭಾಷೆಯ ಕಲ್ಪಿತ ಚರಿತ್ರೆ'ಯಲ್ಲಿ ಕೊಳ್ಳೆಗಾಲ ಕನ್ನಡ ಮತ್ತು ಕರಾವಳಿ ಕನ್ನಡವನ್ನು ಪೂರ್ವ ಮತ್ತು ಪಶ್ಚಿಮ ವಿಭಾಗದಲ್ಲಿಟ್ಟು ಅಧ್ಯಯನ ಮಾಡಿದ್ದಾರೆ. ಗುಲ್ಬರ್ಗಾ, ಬಳ್ಳಾರಿ, ಉತ್ತರ ಕನ್ನಡ ಮತ್ತು ದಕ್ಷಿಣಕನ್ನಡದ ರಚನೆಗಳನ್ನು ಉತ್ತರ ದಕ್ಷಿಣ ವಿಭಾಗದಲ್ಲಿಟ್ಟು ಅಧ್ಯಯನ ಮಾಡಿದ್ದಾರೆ. ಸಮಕಾಲೀನ ಸಂದರ್ಭದಲ್ಲಿ ಕನ್ನಡದ ಎರಡು ಪ್ರಭೇದಗಳು ಕನ್ನಡ ಭಾಷೆಯ ಚರಿತ್ರೆಯನ್ನು ಕಟ್ಟಲು ಸಹಾಯಕ್ಕೆ ಬರುತ್ತದೆ. ಪೂರ್ವ ಮತ್ತು ಪಶ್ಚಿಮ ವಿಭಾಗದಲ್ಲಿ ಬಳಕೆಯಲ್ಲಿರುವ ಕನ್ನಡ ಮೂಲ ದ್ರಾವಿಡ ಅಂಶಗಳನ್ನು ಉಳಿಸಿಕೊಂಡಿದ್ದರೆ ಉತ್ತರ ಮತ್ತು ದಕ್ಷಿಣ ಪರಿಸರದಲ್ಲಿರುವ ಕನ್ನಡ ಬದಲಾವಣೆಗೆ ಒಳಗಾಗಿದೆ. ಈ ರೀತಿ ಬದಲಾವಣೆಗೆ ಕೆಲವು ಕನ್ನಡಗಳಲ್ಲಿ 'ಮಸ್ಕಿಕನ್ನಡ'ವೂ ಒಂದು ವಿಶೇಷ. ಎಂದರೆ ಕೆಲವು ಭಾಷಿಕ ಅಂಶಗಳಲ್ಲಿ ಮೂಲ ಕನ್ನಡದ ಲಕ್ಷಣವನ್ನು ಉಳಿಸಿಕೊಂಡಿದೆ.

ಈ ಹಿನ್ನೆಲೆಯಿಂದ ರಾಯಚೂರು ಜಿಲ್ಲೆಯ 'ಮಸ್ಕಿಕನ್ನಡ'ವನ್ನು ಉತ್ತರ ದಕ್ಷಿಣದ ವಿಭಾಗದಲ್ಲಿಟ್ಟು ಅಧ್ಯಯನ ಮಾಡಬೇಕಾಗಿದೆ. ಅಲ್ಲದೆ ಮಸ್ಕಿಕನ್ನಡ ಪೂರ್ವ, ಪಶ್ಚಿಮ ಪರಿಸರದಲ್ಲಿ ಬಳಕೆಯಲ್ಲಿರುವ ಮೂಲದ್ರಾವಿಡ ಅಂಶಗಳನ್ನು ಮಸ್ಕಿಕನ್ನಡ ಉಳಿಸಿಕೊಂಡಿದೆಯೋ ಎಂಬುದನ್ನು ಸಹ ಶೋಧಿಸಬೇಕಾಗಿದೆ. ಮೂಲದ್ರಾವಿಡದ ಅಂಶಗಳನ್ನು ಉಳಿಸಿಕೊಂಡಿದ್ದರೆ, ಅದಕ್ಕೂ ಕಾರಣಗಳು ಇವೆ ಎಂಬುದನ್ನು ಪ್ರಸ್ತುತ ಅಧ್ಯಯನದಿಂದ ಸಾಧಿಸಿತೋರಿಸಬೇಕಾಗಿದೆ. ಈ ಎರಡು ಭಾಷಿಕ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದರಿಂದ ಇದೊಂದು ಕನ್ನಡದ ಒಂದು ವಿಶಿಷ್ಟವಾದ ಪ್ರಭೇದ ಎಂಬುದನ್ನು ಶೋಧಿಸುವುದು ಪ್ರಸ್ತುತ ಮಹಾಪ್ರಬಂಧದ ಉದ್ದೇಶವಾಗಿದೆ. ಕನ್ನಡ ಭಾಷೆಯ ಸಮಗ್ರ ಚರಿತ್ರೆಯೊಂದನ್ನು ಬರೆಯಲು ಅದಕ್ಕಿರುವ ಬೇರೆ ಬೇರೆ ಭೌಗೋಳಿಕ, ಚಾರಿತ್ರಿಕ ಮತ್ತು ಸಾಮಾಜಿಕ ಪ್ರಭೇದಗಳನ್ನೆಲ್ಲ ಕೂಲಂಕುಷವಾಗಿ ಅಭ್ಯಾಸಮಾಡುವ ಜರೂರು ಇದೆ. ಮಸ್ಕಿ ಪರಿಸರದಲ್ಲಿ ಲಭ್ಯವಿರುವ ಶಾಸನಗಳಲ್ಲಿ ಬಳಕೆಯಾಗಿರುವ ಆಡುಭಾಷೆ ಇಂದಿಗೂ ಬಳಕೆಯಲ್ಲಿದೆಯೋ ಎಂಬುದನ್ನು ನೋಡಬೇಕಾಗಿದೆ. ಮಸ್ಕಿಪರಿಸರದಲ್ಲಿ ಬಳಕೆಯಲ್ಲಿರುವ ಕನ್ನಡ ತನ್ನ ಅನನ್ಯತೆಯನ್ನು ಉಳಿಸಿಕೊಂಡಿದೆಯೇ, ಒಂದು ವೇಳೆ ಹಾಗೆಯೇ ಉಳಿಸಿಕೊಂಡಿದ್ದರೆ ಅಂತಹ ರಚನೆಗಳನ್ನು ಸಂಗ್ರಹಿಸಿ ಅವುಗಳು ಬಳಕೆಯನ್ನು ಗುರುತಿಸಬೇಕಾಗಿದೆ. ಈ ಹಿನ್ನೆಲೆಯಿಂದ ಮಸ್ಕಿಪರಿಸರದ ಕನ್ನಡದ ಸೀಮಾರೇಖೆಯೊಂದನ್ನು ತಯಾರು ಮಾಡುವ ಉದ್ದೇಶವೊಂದನ್ನು ಇರಿಸಿಕೊಳ್ಳಲಾಗಿದೆ. ಭಾಷಿಕ ವಿವಿಧ ಹಂತಗಳಲ್ಲಿ ಮಸ್ಕಿಕನ್ನಡ ಬರಹ ಕನ್ನಡಕ್ಕಿಂತ ಹೇಗೆ ಭಿನ್ನ ಎಂಬುದನ್ನು ಅಧ್ಯಯನ ಮಾಡಿ ದಾಖಲಿಸಬೇಕಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

ಮಸ್ಕಿ ಒಂದು ಪ್ರಸಿದ್ಧ ಐತಿಹಾಸಿಕ ಸ್ಥಳವಾಗಿರುವುದರಿಂದ ಈ ಭಾಗದ ಕನ್ನಡವನ್ನು 'ಮಸ್ಕಿ' ಊರಿನ ಹೆಸರಿನಿಂದ ಗುರುತಿಸಲಾಗಿದೆ. ಮಸ್ಕಿಯಿಂದ ಸುಮಾರು ೬೫ ರಿಂದ ೭೦ ಕಿ.ಮೀ ಗಳವರೆಗೆ ಮಸ್ಕಿಕನ್ನಡದ

ಸೀಮಾರೇಖೆ ಹಾಕಿಕೊಳ್ಳಲಾಗಿದೆ. ಈ ಸೀಮಾರೇಖೆಗೆ ಮುಖ್ಯವಾಗಿ ಈ ಕೆಳಗಿನ ಊರುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ರಾಯಚೂರು, ಕೊಪ್ಪಳ, ಬಳ್ಳಾರಿ, ಯಾದಗಿರಿ ಜಿಲ್ಲೆಗಳ ಕೆಲವು ಊರುಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ೧. ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ರಾವಿಹಾಳು. ೨. ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಕವಿತಾಳ ಹಾಗು ನುಗುಡೋಣಿ ಹೊಸೂರು. ೩. ಯಾದಗಿರಿ ಜಿಲ್ಲೆ ಸುರಪುರ ತಾಲೂಕಿನ ತಿಂತಿಣಿ. ೪. ಲಿಂಗಸೂಗೂರು ತಾಲೂಕಿನ ಅಮದಿಹಾಳ ೫. ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕಿನ ಗುನ್ನಾಳ. ೬. ಕೊಪ್ಪಳ ಜಿಲ್ಲೆ ಗುಲಬುರ್ಗಾ ತಾಲೂಕಿನ ಪುಟಗಮರಿ, ಮುಂತಾದ ಊರುಗಳನ್ನು ಪ್ರಸ್ತುತ ಅಧ್ಯಯನದ ವಿಶ್ಲೇಷಣೆಗೆ ಆಯ್ಕೆ ಮಾಡಿಕೊಂಡಿದೆ. ಈ ರೇಖೆಗಳ ಒಳಗಡೆ ಬರುವಂತಹ ಕನ್ನಡದ ಸ್ವರೂಪವನ್ನು ಮಸ್ಕಿಪರಿಸರದ ಕನ್ನಡ ಎಂದೆನಿಸಿಕೊಳ್ಳುತ್ತದೆ. ಮಸ್ಕಿಪರಿಸರದಲ್ಲಿ ಬರುವ ಊರುಗಳನ್ನು ಕ್ಷೇತ್ರಕಾರ್ಯಕ್ಕೆ ಬಳಸಿಕೊಳ್ಳಲಾಗಿದೆ. ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯನ್ನು ಆಧರಿಸಿ ಮಸ್ಕಿಕನ್ನಡ ಸ್ವರೂಪದ ನಕ್ಷೆಯನ್ನು ತಯಾರಿಸಬೇಕಾಗುತ್ತದೆ. ಲಭಿಸಿದ ಅಂಶಗಳನ್ನು ಅಧ್ಯಯನದಲ್ಲಿ ಒಳಗು ಮಾಡಿಕೊಂಡು ವರ್ಣನಾತ್ಮಕ ಹಾಗೂ ಸಮಾಜೋಭಾಷಿಕ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಮಸ್ಕಿಕನ್ನಡ ನೈಜ ಸ್ವರೂಪ ತಿಳಿಯಲು ಕೆಲವೊಮ್ಮೆ ರಾಜಕೀಯ ಗಡಿಯನ್ನು ಮೀರಿ ಭಾಷಿಕ ಭೌಗೋಳಿಕ ವ್ಯಾಪ್ತಿಯನ್ನು ಗಮನಿಸಲಾಗಿದೆ.

ಪ್ರಸ್ತುತ 'ಮಸ್ಕಿಕನ್ನಡ' ಎಂಬ ಮಹಾಪ್ರಬಂಧ ರಚನೆಗೆ ಮುಂಚಿತವಾಗಿ ಎತ್ತಿಕೊಂಡ ಸವಾಲುಗಳು ಮುಖ್ಯವಾಗಿ ಇಂತಿವೆ.

೧. ಮಸ್ಕಿ ಪರಿಸರದ ಶಾಸನಗಳಲ್ಲಿ ಬಳಕೆಯಾದ ಆಡುಭಾಷೆ ಇಂದಿಗೂ ಉಳಿಸಿಕೊಂಡು ಬಂದಿದೆಯೇ ಎಂಬುದನ್ನು ಗುರುತಿಸುವುದು.

೨. ಮಸ್ಕಿ ಪರಿಸರದಲ್ಲಿ ಬಳಕೆಯಲ್ಲಿರುವ ವಿಶಿಷ್ಟವಾದ ಧ್ವನಿರಚನೆಯ ನಿಯಮಗಳು ಬರಹ ಕನ್ನಡದ ಧ್ವನಿರಚನೆ ನಿಯಮಗಳಿಗಿಂತ ಹೇಗೆ ಭಿನ್ನ ಎಂಬುದನ್ನು ವಿವರಿಸಲಾಗುವುದು.

೩. ಮಸ್ಕಿ ಪರಿಸರದಲ್ಲಿ ಬಳಕೆಯಲ್ಲಿರುವ ವಿಶಿಷ್ಟವಾದ ಪದರಚನೆ ಬರಹ ಕನ್ನಡದ ಪದರಚನೆಗಿಂತ ಭಿನ್ನ ಹೇಗೆ ಎಂಬುದನ್ನು ಸೂಕ್ತ ನಿದರ್ಶನ ಸಹಿತ ವಿಶ್ಲೇಷಣೆ ಮಾಡಲಾಗುವುದು.

೪. ಮಸ್ಕಿ ಪರಿಸರದಲ್ಲಿ ಸಂಬಂಧವಾಚಕಗಳ ಸ್ವರೂಪ ಹಾಗೂ ಸಂಭೋದನಾ ರೂಪಗಳ ಮಾದರಿ ಭಾಷಿಕ ಹಿನ್ನೆಲೆಯಲ್ಲಿ ಚರ್ಚಿಸಲಾಗುವುದು.

೫. ಸ್ಥಳನಾಮ/ವ್ಯಕ್ತಿನಾಮಗಳ ಬಳಕೆಯ ಚಾರಿತ್ರಿಕ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡಲಾಗುವುದು.

೬. ಮಸ್ಕಿ ಕನ್ನಡದಲ್ಲಿ ವಿಶಿಷ್ಟ ಪದಗಳು ಹಾಗೂ ಪದ ಪ್ರಯೋಗಾರ್ಥವನ್ನು ನಿದರ್ಶನ ಸಹಿತವಾಗಿ ತೋರಿಸಲಾಗುವುದು.

೭. ಮಸ್ಕಿ ಕನ್ನಡ ತನ್ನದೇ ಆದಂತಹ ಪದಕೋಶ ಹೊಂದಿದೆ. ಎಂಬುದರ ಬಗೆಗೆ ಸಂಶೋಧನೆ ನಡೆಸಲಾಗುವುದು.

೮. ಮಸ್ಕಿಕನ್ನಡ ಸೀಮಾರೇಖೆಯನ್ನು ಗುರುತಿಸುವುದು.

೯. ಮಸ್ಕಿಕನ್ನಡ ಬದಲಾವಣೆಯ ಪ್ರಕ್ರಿಯೆಗೆ ಒಳಗಾಗಿದೆಯೇ ಎಂಬುದನ್ನು ಗಮನಿಸುವುದು.

೧.೪. ಅಧ್ಯಯನದ ವಿಧಾನ

ಪ್ರಸ್ತುತ ಮಹಾಪ್ರಬಂಧವು ಕ್ಷೇತ್ರಕಾರ್ಯವನ್ನು ಆಧರಿಸಿದೆ. ಮಸ್ಕಿ ಪರಿಸರವನ್ನು ಸಂಶೋಧನೆಯ ಕೇಂದ್ರವನ್ನಾಗಿ ಆಯ್ಕೆ ಮಾಡಿಕೊಂಡಿದೆ. ಇದು ಪ್ರಸ್ತುತ ಮಹಾಪ್ರಬಂಧದ ಮಿತಿಯೂ ಹೌದು. ಸೂಕ್ತ ಮಾದರಿ ಮೂಲಕ ಪ್ರಶ್ನಾವಳಿ ವಿಧಾನಗಳನ್ನು ಅನುಸರಿಸಿ ಅಧ್ಯಯನಕ್ಕೆ ಬೇಕಾದ ಅಥವಾ ಅಧ್ಯಯನಕ್ಕೆ ಅಗತ್ಯವಾಗಿರುವ ಸೂಚಕವನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ಮಸ್ಕಿಪರಿಸರದಲ್ಲಿ ಲಿಂಗಾಯತ, ನಾಯಕ, ಹರಿಜನ ಈ ಸಾಮಾಜಿಕ ವರ್ಗಗಳಲ್ಲಿ ಜನಸಂಖ್ಯೆ ಹೆಚ್ಚು ಕಂಡುಬರುವುದರಿಂದ ಕ್ಷೇತ್ರಕಾರ್ಯದ ಸಂದರ್ಶನಕ್ಕೆ ಮುಖ್ಯವಾಗಿ ಈ ಮೂರು ಸಾಮಾಜಿಕ ವರ್ಗಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಮಸ್ಕಿಪರಿಸರದ ಭಾಷೆ, ಭೌಗೋಳಿಕ ಪರಿಸರ, ಚರಿತ್ರೆ, ಜನಜೀವನ, ಸಂಸ್ಕೃತಿ ಈ ಎಲ್ಲವನ್ನು ಅಧ್ಯಯನದಲ್ಲಿ ಒಳಗುಮಾಡಿಕೊಂಡು ಭಾಷಿಕ ದತ್ತವನ್ನು ವಿವರಣಾತ್ಮಕ ಮತ್ತು ವಿಶೇಷಣಾತ್ಮಕ ಮಾದರಿಯನ್ನು ಅನುಸರಿಸಿ ವಿಶ್ಲೇಷಿಸಲಾಗುವುದು. ಸಂದರ್ಶನ ಮಾಡಿದ ಹಳ್ಳಿಗಳಲ್ಲಿ ಆಯಾ ಗ್ರಾಮದ ಸುತ್ತಮುತ್ತಲಿನಲ್ಲಿ ಇರುವ ಭೂಮಿಯ ಗುಣ, ಬೆಟ್ಟ, ಗುಡ್ಡ, ನದಿ, ಕೆರೆ ಮುಂತಾದವುಗಳು ಮತ್ತು ಸಮುದಾಯಗಳ ಭಾಷಿಕ ಸ್ವರೂಪ, ಅಲ್ಲಿನ ಚರಿತ್ರೆ, ಶಾಸನಗಳು, ಗುಡಿಗಳು, ಸಾಮಾಜಿಕ ಜೀವನ, ಆರ್ಥಿಕ ಸಂಪನ್ಮೂಲ, ಹಬ್ಬಗಳು, ಹಾಗೂ ಅಲ್ಲಿಯ ವಿಶಿಷ್ಟ ಸಂಸ್ಕೃತಿ ಮುಂತಾದ ವಿವರಗಳನ್ನು ಸಂದರ್ಭಕ್ಕೆ ತಕ್ಕ ಹಾಗೆ ಗಮನಿಸಬೇಕಾಗಿದೆ. ಇವುಗಳ ಮೂಲಕ 'ಮಸ್ಕಿಕನ್ನಡ'ವನ್ನು ಕನ್ನಡದ ಒಂದು ಮಹತ್ವವಾದ ಪ್ರಾದೇಶಿಕ ಪ್ರಭೇದ ಎಂಬುದನ್ನು ಸಾಧಿಸಿ ತೋರಿಸಲಾಗುವುದು.

೧.೫. ಪ್ರಸ್ತುತ ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನದ ಸ್ವರೂಪ ಇಂತಿದೆ.

ಅಧ್ಯಾಯ ೧ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ.

ಈ ಅಧ್ಯಾಯದಲ್ಲಿ ಪ್ರಸ್ತುತ ಮಹಾಪ್ರಬಂಧದ ಉದ್ದೇಶ ಹಾಗೂ ವ್ಯಾಪ್ತಿಯನ್ನು ತಿಳಿಸಲಾಗಿದೆ. ಅಲ್ಲದೇ ಮಹಾಪ್ರಬಂಧದ ಉದ್ದೇಶ ಹಾಗೂ ವ್ಯಾಪ್ತಿಗೆ ಸಂಬಂಧಿಸಿದಂತೆ ಸಂಶೋಧನೆಯ ಚೌಕಟ್ಟನ್ನು ರೂಪಿಸಲಾಗಿದೆ.

ಅಧ್ಯಾಯ ೨ ಮಸ್ಕಿಕನ್ನಡದ ಚಾರಿತ್ರಿಕ ನೆಲೆ.

ಈ ಅಧ್ಯಾಯದಲ್ಲಿ ಮಸ್ಕಿಕನ್ನಡದ ಚಾರಿತ್ರಿಕ ನೆಲೆಯನ್ನು ವಿವರಿಸಲಾಗಿದೆ. ಮಸ್ಕಿಪರಿಸರದಲ್ಲಿ ಸಿಗುವ ಶಾಸನಗಳನ್ನು ಆಧರಿಸಿ ಚರ್ಚೆಮಾಡಲಾಗಿದೆ. ಶಾಸನಗಳು ಒಂದು ಪ್ರಭೇದದ ಚಾರಿತ್ರಿಕ ಹಿನ್ನೆಲೆಯನ್ನು ತಿಳಿಯಲು ಹೇಗೆ ಆಕರವಾಗುತ್ತವೆ ಎಂಬುದರ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಇಲ್ಲಿ ಮುಖ್ಯವಾಗಿ ಮಸ್ಕಿ ಪರಿಸರದಲ್ಲಿ ಲಭ್ಯವಿರುವ ಶಾಸನಗಳಲ್ಲಿ ಬಳಕೆಯಲ್ಲಿರುವ ಕನ್ನಡಕ್ಕೂ ಇಂದಿನ ಮಸ್ಕಿಪರಿಸರದಲ್ಲಿ ಬಳಕೆಯಲ್ಲಿರುವ ಕನ್ನಡಕ್ಕೂ ಸಂಬಂಧವಿದೆಯೆ ಎಂಬುದನ್ನು ತೌಲನಿಕವಾಗಿ ಗಮನಿಸಲಾಗಿದೆ. ಇದರಿಂದ ಇಂದಿನ ಮಸ್ಕಿಕನ್ನಡದ ಸ್ವರೂಪಕ್ಕೆ ಒಂದು ಚಾರಿತ್ರಿಕ ನೆಲೆಯನ್ನು ಕಲ್ಪಿಸಿಕೊಳ್ಳಲಾಗಿದೆ. ಮಸ್ಕಿಕನ್ನಡದಲ್ಲಿ ವಿಭಕ್ತಿ ಪ್ರತ್ಯಯಗಳು ಬೆಳೆದ ರೂಪಗಳನ್ನು ಶಾಸನಗಳ ಆಧಾರದ ಮೂಲಕ ಚರ್ಚಿಸಲಾಗಿದೆ.

ಅಧ್ಯಾಯ ೩. ಮಸ್ಕಿಕನ್ನಡದ ಧ್ವನಿರಚನೆ.

ಈ ಅಧ್ಯಾಯದಲ್ಲಿ ಮಸ್ಕಿಕನ್ನಡದ ಧ್ವನಿರಚನೆಯನ್ನು ವಿವರಿಸಲಾಗಿದೆ. ಮಸ್ಕಿಪರಿಸರದಲ್ಲಿ ಬಳಕೆಯಲ್ಲಿರುವ ಕನ್ನಡದ ರಚನೆಯನ್ನು ಗಮನಿಸಿ ಸ್ವರ ಮತ್ತು ವ್ಯಂಜನ ಧ್ವನಿಗಳ ಪಟ್ಟಿ ನೀಡಲಾಗಿದೆ. ಮಸ್ಕಿಕನ್ನಡ ತನ್ನದೇ ಆದ ಧ್ವನಿಮಾ ರಚನೆಯ ಚಹರೆಯನ್ನು ಉಳಿಸಿಕೊಂಡಿರುವುದಕ್ಕ ನಿಯಮಗಳನ್ನು ರೂಪಿಸಲಾಗಿದೆ. ಹಾಗೆ ಧ್ವನಿ ನಿಯಮಗಳನ್ನು ರೂಪಿಸುವಾಗ ವಿಶಿಷ್ಟವಾದ ಅಂದರೆ ಮಸ್ಕಿಪರಿಸರದಲ್ಲಿ ಬಳಕೆಯಲ್ಲಿರುವ ಕನ್ನಡ ಉಚ್ಚಾರಣೆಯ ನಿಯಮಗಳಿಗೆ ಒತ್ತುನೀಡಲಾಗಿದೆ. ಮೂಲಕನ್ನಡದ ಧ್ವನಿ ಲಕ್ಷಣಗಳನ್ನು ಉಳಿಸಿಕೊಂಡಿರುವುದರ ಬಗೆಗೆ ಚರ್ಚೆಮಾಡಲಾಗಿದೆ. ನಿದರ್ಶನ ಸಹಿತ ಹೇಳಲಾಗಿದೆ.

ಅಧ್ಯಾಯ ೪. ಮಸ್ಕಿಕನ್ನಡದ ಪದರಚನೆ.

ಈ ಅಧ್ಯಾಯದಲ್ಲಿ ಮಸ್ಕಿಕನ್ನಡದ ಪದರಚನೆಯನ್ನು ವಿವರಿಸಲಾಗಿದೆ. ಪದರಚನೆಯಲ್ಲಿ ಬಳಕೆಯಲ್ಲಿರುವ ನಾಮಪದ, ಸರ್ವನಾಮ, ಲಿಂಗವ್ಯವಸ್ಥೆ, ವಚನವ್ಯವಸ್ಥೆ, ವಿಭಕ್ತಿಪ್ರತ್ಯಯಗಳು, ವಿಭಕ್ತಿ ಪಲ್ಲಟ, ಆಖ್ಯಾತ ಪ್ರತ್ಯಯಗಳು, ವಿಧ್ಯರ್ಥಕ ಕ್ರಿಯಾಪದ, ನಿಷೇದಾರ್ಥಕ ಕ್ರಿಯಾಪದ ಈ ಅಂಶಗಳ ಮೂಲಕ ಮಸ್ಕಿಕನ್ನಡದ ಪದರಚನೆಯನ್ನು ಉದಾಹರಣೆ ಸಹಿತ ವಿಶ್ಲೇಷಿಸಲಾಗಿದೆ.

ಅಧ್ಯಾಯ ೫. ಮಸ್ಕಿಕನ್ನಡದ ಸಂಬಂಧವಾಚಕಗಳು ಮತ್ತು ಸಂಬೋಧನಾ ರೂಪಗಳು.

ಪ್ರಸ್ತುತ ಅಧ್ಯಾಯವು ಮಸ್ಕಿಕನ್ನಡದ ಸಂಬಂಧವಾಚಕಗಳು ಮತ್ತು ಸಂಭೋದನಾ ರೂಪಗಳು ಕುರಿತ ಅಧ್ಯಯನವಾಗಿದೆ. ಹಾಗೂ ಈ ಅಧ್ಯಾಯದಲ್ಲಿ ಮಸ್ಕಿಪರಿಸರದಲ್ಲಿನ ಸಂಬಂಧವಾಚಕಗಳು ಹಾಗೂ ಸಂಭೋದನ ರೂಪಗಳನ್ನು ರಕ್ತಸಂಬಂಧ ಹಾಗೂ ಇತರೆ ಸಂಬಂಧ ಎಂದು ವಿಭಾಗಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಮಸ್ಕಿಪರಿಸರಕ್ಕೆ ವಿಶಿಷ್ಟವಾದ ಸಂಬಂಧವಾಚಕ ಮತ್ತು ಸಂಬೋಧನಾರೂಪಗಳು ಇದೆಯೇ ಎಂಬ ಪ್ರಶ್ನೆಯೊಂದಿಗೆ ಚರ್ಚೆ ಬೆಳೆಸಲಾಗಿದೆ.

ಅಧ್ಯಾಯ ೬. ಮಸ್ಕಿಕನ್ನಡದ ಸ್ಥಳನಾಮಗಳು ಮತ್ತು ವ್ಯಕ್ತಿನಾಮಗಳು.

ಈ ಅಧ್ಯಯನದಲ್ಲಿ ಮಸ್ಕಿಕನ್ನಡದಲ್ಲಿರುವ ಸ್ಥಳನಾಮಗಳು ಹಾಗೂ ವ್ಯಕ್ತಿನಾಮಗಳು ಬಗ್ಗೆ ವಿವರಿಸಲಾಗಿದೆ. ಈ ಅಧ್ಯಾಯದಲ್ಲಿ ಚಾರಿತ್ರಿಕ ಹಿನ್ನೆಲೆಯ ಮೂಲಕ ಮಸ್ಕಿಪರಿಸರದ ಶಾಸನಗಳಲ್ಲಿ ಉಲ್ಲೇಖವಾಗಿರುವ ಸ್ಥಳನಾಮಗಳನ್ನು ಇಂದಿಗೂ ಬಳಕೆಯಲ್ಲಿವೆ ಎಂಬುದನ್ನು ಗಮನಿಸಲಾಗಿದೆ.

ಅಧ್ಯಾಯ ೭. ಮಸ್ಕಿಕನ್ನಡದ ವಿಶಿಷ್ಟ ಪದಗಳು ಮತ್ತು ಪದಗಳ ಪ್ರಯೋಗಾರ್ಥವನ್ನು ವಿವರಿಸಲಾಗಿದೆ. ಈ ಅಧ್ಯಯನವು ಮಸ್ಕಿಕನ್ನಡ ಒಂದು ವಿಶಿಷ್ಟ ಪ್ರಬೇಧ ಎಂದು ನಿರ್ಣಯಿಸಲು ಸಹಕಾರಿಯಾಗುತ್ತದೆ. ಲಿಂಗಾಯತ, ನಾಯಕ, ಹರಿಜನ ಮೂರು ಸಾಮಾಜಿಕ ವರ್ಗಗಳ ಹಿನ್ನೆಲೆಯಲ್ಲಿ ವಿಶಿಷ್ಟ ಪದಗಳು ಹಾಗೂ ಪದ ಪ್ರಯೋಗಾರ್ಥವನ್ನು ವಿಶ್ಲೇಷಿಸಲಾಗಿದೆ.

ಅಧ್ಯಾಯ ೮. ಮಸ್ಕಿಕನ್ನಡದ ಪದಕೋಶ.

ಈ ಅಧ್ಯಯನದಲ್ಲಿ ಮಸ್ಕಿಕನ್ನಡದ ಪದಕೋಶವನ್ನು ದಾಖಲಿಸಲಾಗಿದೆ. ಮಸ್ಕಿಪರಿಸರದಲ್ಲಿ ಬಳಕೆಯಲ್ಲಿರುವ ಬಂದುತ್ವ, ಜಾತಿ ಮತ್ತು ವೃತ್ತಿ, ಮಾನವ ದೇಹದ ಸಂಬಂಧ, ಪ್ರಾಣಿ, ಪಕ್ಷಿ, ಸಂಖ್ಯಾವಾಚಕ,

ಆಭರಣಸೂಚಕ, ಕೃಷಿ, ಗಿಡ, ಆಹಾರ, ಸಾಮಾನ್ಯವಾಚಕ, ಸರ್ವನಾಮ ಇತ್ಯಾದಿ ಸಂಬಂಧಿಸಿದ ಪದಗಳನ್ನು ಬರಹದ ಕನ್ನಡದೊಂದಿಗೆ ತೌಲನಿಕವಾಗಿ ನೀಡಲಾಗಿದೆ.

ಅಧ್ಯಾಯ ೯. ಮಸ್ಕಿಕನ್ನಡದ ಸೀಮಾರೇಖೆ.

ಈ ಅಧ್ಯಾಯದಲ್ಲಿ ಮಸ್ಕಿಕನ್ನಡದ ಸೀಮಾರೇಖೆ ಕುರಿತು ವಿವರಿಸಲಾಗಿದೆ. ಹಾಗೆ ವಿವರಿಸುವಾಗ ಧ್ವನಿಹಂತ, ಪದಹಂತ, ವಾಕ್ಯಹಂತ, ಅರ್ಥವ್ಯತ್ಯಾಸ ಮುಂತಾದ ಭಾಷಿಕ ಹಂತಗಳಲ್ಲಿ ಬಳ್ಳಾರಿ, ರಾಯಚೂರು, ಕೊಪ್ಪಳ ಪ್ರಬೇಧಗಳಿಗಿಂತ ಹೇಗೆ ಬೇರೆಯಾಗಿ ಮಸ್ಕಿಕನ್ನಡ ಭಿನ್ನವಾಗಿದೆ ಎಂಬುದನ್ನು ದಾಖಲಿಸಲಾಗಿದೆ. ಧ್ವನಿ, ಪದ, ವಾಕ್ಯ ಮತ್ತು ಅರ್ಥ ಇವುಗಳ ಬಳಕೆಯ ಗಡಿಯನ್ನು ನಕ್ಷೆ ಮೂಲಕ ಚರ್ಚೆಮಾಡಲಾಗಿದೆ. ದಾಖಲಾಗಿರುವ ಧ್ವನಿ, ಪದ, ವಾಕ್ಯ ಮತ್ತು ಅರ್ಥದ ಸಹಾಯದಿಂದ ಮಸ್ಕಿಕನ್ನಡದ ಚಹರೆಯನ್ನು ತಿಳಿಯಬಹುದಾಗಿದೆ. ಈ ಧ್ವನಿ, ಪದ ವಾಕ್ಯ ಮತ್ತು ಅರ್ಥ ಇವುಗಳ ಬಳಕೆಯ ಸೀಮಾರೇಖೆಯನ್ನು ಗುರುತಿಸಲಾಗಿದೆ.

ಅಧ್ಯಾಯ ೧೦. ಮಸ್ಕಿಕನ್ನಡ ಬದಲಾವಣೆ ಪ್ರಕ್ರಿಯೆ.

ಪ್ರಸ್ತುತ ಅಧ್ಯಾಯದಲ್ಲಿ ಮಸ್ಕಿಕನ್ನಡ ಬದಲಾವಣೆ ಆಗುತ್ತಿರುವುದರ ಬಗೆಗೆ ನಿದರ್ಶನ ಮೂಲಕ ಚರ್ಚೆಮಾಡಲಾಗಿದೆ. ಒಂದು ಪ್ರಭೇದ ಹುಟ್ಟುವುದಕ್ಕೆ ಕಾರಣಗಳು ಇರುವಾಗ; ಬದಾವಣೆಗೂ ಕಾರಣಗಳಿವೆ ಎಂಬುದನ್ನು ವಿವರಿಸಲಾಗಿದೆ.

ಅಧ್ಯಾಯ ೧೧. ಸಮಾರೋಪ.

ಕೊನೆಯ ಅಧ್ಯಾಯ ಸಮಾರೋಪವಾಗಿದ್ದು ಈ ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಹೇಳಲಾಗಿದೆ. ಅನುಬಂಧದಲ್ಲಿ ಪಾರಮರ್ಶಿತ ಗ್ರಂಥಗಳ ಸೂಚಿಯನ್ನು ಅಡಕಗೊಳಿಸಲಾಗಿದೆ.

ಅಧ್ಯಾಯ ೨

ಮಸ್ಕಿಕನ್ನಡದ ಚಾರಿತ್ರಿಕ ನೆಲೆ

ಅಧ್ಯಾಯ ೨

ಮಸ್ಕಿಕನ್ನಡದ ಚಾರಿತ್ರಿಕ ನೆಲೆ

ಶಾಸನಗಳು ಭಾಷೆಯ ಅಧ್ಯಯನಕ್ಕೆ ಅತ್ಯಂತ ಉಪಯುಕ್ತ ಸಾಮಾಗ್ರಿಯಾಗಿವೆ. ಶಾಸನಗಳನ್ನಾಧರಿಸಿ ರಾಜಕೀಯ, ಚರಿತ್ರೆಯ ಅಧ್ಯಯನ ನಡೆದಿರುವಂತೆ ಭಾಷಿಕ ಅಧ್ಯಯನಕ್ಕೂ ಈಗ ಹೆಚ್ಚು ಗಮನಹರಿಸಬೇಕಾಗುತ್ತದೆ. ಶಾಸನಗಳು ಇತಿಹಾಸ ಆಕರಗಳ ಮೂಲ ನೆಲೆ ಆಗಿದೆ. ರಾಜ, ಮಹಾರಾಜರುಗಳ ವಂಶವಿವರಗಳು, ಅವರಸಾಧನೆಗಳು ಇತ್ಯಾದಿ ವಿಷಯಗಳು ಶಾಸನಗಳಲ್ಲಿ ಅಡಕವಾಗಿವೆ. ಶಾಸನಗಳು ಇತಿಹಾಸದ ಅಂಶಗಳನ್ನು ಹೇಗೆ ಅಡಕಗೊಳಿಸಿಕೊಂಡಿವೆಯೋ ಅದೇ ರೀತಿ ಭಾಷಿಕ ಮಾಹಿತಿಯನ್ನು ಶಾಸನಗಳು ಅಡಕಗೊಳಿಸಿಕೊಂಡಿವೆ. ಭಾಷಿಕ ಅಧ್ಯಯನ ಕ್ಷೇತ್ರದಲ್ಲಿ ಈ ಹಿಂದೆ ಎ.ಎನ್.ನರಸಿಂಹಯ್ಯನವರಿಂದ ೬ ಮತ್ತು ೭. ನೆಯ ಶತಮಾನದ ಕನ್ನಡ ಶಾಸನಗಳ ಭಾಷೆ ಕುರಿತಂತೆ ಮತ್ತು ಜಿ.ಎಸ್.ಗಾಯಿಯವರಿಂದ ೮, ೯, ೧೦ನೆಯ ಶತಮಾನಗಳ ಭಾಷೆ ಕುರಿತಂತೆ ಅಧ್ಯಯನ ನಡೆದಿದೆ. ಅದೇ ರೀತಿ ಮುಂದಿನ ಶತಮಾನದ ಶಾಸನಗಳನ್ನು ಕುರಿತು ಕೆ.ಕುಶಾಲಪ್ಪಗೌಡ ಇವರು ಅಧ್ಯಯನ ಕೈಗೊಂಡಿದ್ದಾರೆ. ಇನ್ನೂ ಈ ಕ್ಷೇತ್ರದಲ್ಲಿ ಮಾಡಬೇಕಾದ ಕೆಲಸ ಬಹಳಷ್ಟು ಇದೆ. ಆರಂಭದಿಂದ ಮೊದಲುಗೊಂಡು ಹೊಸಗನ್ನಡ ಕಾಲದವರೆಗೂ ಬೆಳೆದುಕೊಂಡು ಬಂದಿರುವ ಭಾಷಾ ಪರಂಪರೆಯ ಹಲವಾರು ಅವಸ್ಥಾಂತರಗಳನ್ನು ಕಂಡುದು ಸಹಜವೇ ಆಗಿದೆ. ಅದರಲ್ಲೂ ಕನ್ನಡ ಭಾಷೆಗೆ ಪೂರ್ವದ ಹಳಗನ್ನಡವೆಂಬ ಅವಸ್ಥೆಯೊಂದಿತ್ತು ಎಂಬುದನ್ನು ಅರಿತುಕೊಳ್ಳಲು ಕನ್ನಡ ಶಾಸನಗಳಿಗೆ ಮೊರೆಹೋಗಬೇಕಾಗುತ್ತದೆ. ಹಳಗನ್ನಡ, ನಡುಗನ್ನಡ, ನಂತರದ ಕನ್ನಡದ ರೂಪಗಳ ಅಧ್ಯಯನಕ್ಕೆ ಬೇಕಾದ ಮೂಲ ಸಾಮಾಗ್ರಿಗಳನ್ನು ಕನ್ನಡ ಶಾಸನಗಳು ದೊರಕಿಸಿಕೊಡುತ್ತವೆ. ಮಸ್ಕಿಕನ್ನಡದ ಪರಿಸರದಲ್ಲಿ ಲಭ್ಯವಿರುವ ಶಾಸನಗಳಿಂದ ಮಸ್ಕಿಕನ್ನಡದಲ್ಲಿ ಈ ಮುಂಚೆ ಬಳಕೆಗೊಂಡಿರುವ ಬಗೆ, ಇಂದು ಬಳಕೆಗೊಂಡಿರುವ ಬಗೆ ಹಾಗೂ ಬಳಕೆಯಲ್ಲಿ ಆಗಿರುವ ವ್ಯತ್ಯಾಸಗಳನ್ನು ಗಮನಿಸಬಹುದು. ಮಸ್ಕಿ ಪರಿಸರದ ಶಾಸನದ ಭಾಷಾ ಬಳಕೆಯು ಇಂದಿಗೂ ಬಳಕೆಯಾಗುತ್ತಿರುವುದನ್ನು ನೋಡಬಹುದು.

'ಮಸ್ಕಿಕನ್ನಡ' ಒಂದು ಇದೆಯೆ? ಮಸ್ಕಿಕನ್ನಡ ಎನ್ನುವುದಕ್ಕೆ ಶಾಸನಗಳಲ್ಲಿ ಬಳಕೆಯಲ್ಲಿರುವ ಭಾಷಿಕ ಅಂಶಗಳು ಆಧಾರವಾಗಿವೆ. ಮಸ್ಕಿಕನ್ನಡ ಬೆಳವಣಿಗೆ ಆಗಿರುವುದನ್ನು ಎರಡು ರೀತಿಯಲ್ಲಿ ಅಧ್ಯಯನ ಮಾಡಬಹುದು.

೧. ಮಸ್ಕಿ ಪರಿಸರದ ಶಾಸನಗಳ ಕನ್ನಡಕ್ಕೂ ಬರಹದ ಕನ್ನಡಕ್ಕೂ ವ್ಯತ್ಯಾಸ ಗುರುತಿಸುವುದು.

೨. ಮಸ್ಕಿ ಪರಿಸರದ ಶಾಸನಗಳ ಕನ್ನಡಕ್ಕೂ ಇಂದಿನ ಮಸ್ಕಿ ಪರಿಸರದ ಕನ್ನಡಕ್ಕೂ ಸಂಬಂಧ ಕಲ್ಪಿಸುವುದು.

ಈ ಎರಡು ಬಗೆಯ ಅಧ್ಯಯನಗಳು ಮಸ್ಕಿಕನ್ನಡದ ಸ್ವರೂಪವನ್ನು ತಿಳಿಯಲು ಸಹಾಯಕ್ಕೆ ಬರುತ್ತವೆ. ಮಸ್ಕಿ ಪರಿಸರದಲ್ಲಿ ಲಭ್ಯವಿರುವ ಮಸ್ಕಿ, ಸಾಲಗುಂದೆ, ಕರಡಿಕಲ್ಲು, ನವಿಲೆ, ಕವುತಾಳ ಇತ್ಯಾದಿ ಶಾಸನಗಳನ್ನು ಮಸ್ಕಿ ಕನ್ನಡದ ಬೆಳವಣಿಗೆಗೆ ಬಳಸಿಕೊಂಡಿದೆ. ಮಸ್ಕಿ ಕನ್ನಡದ ಭಾಷೆ ಬೆಳೆದು ಬಂದ ಬಗೆಯನ್ನು ಅರಿಯುವಲ್ಲಿ ಈ ಶಾಸನಗಳ ನೆರವು ಅತ್ಯಗತ್ಯವಾಗಿದೆ.

ಮಲ್ಲಟದಲ್ಲಿಯ ಕ್ರಿ.ಶ. ೧೧೯೬ರ ಕಲ್ಯಾಣದ ಚಾಳುಕ್ಯರ ಕಾಲದ ಶಾಸನದಲ್ಲಿ ಉಲ್ಲೇಖವಾಗಿರುವ ಶಾಸನ ಸಂಖ್ಯೆ ೧೦೨ ಶಾಸನದ ಸಾಲು ೨೯ ಪುಟಸಂಖ್ಯೆ ೩೨೦ರಲ್ಲಿ 'ಇದಿರಾಗಿ' ಎಂದು ದಾಖಲಾಗಿದೆ. ಇದರ ಪ್ರಯೋಗ ''ವೆತ್ತಿಬರಲು ಇದಿರಾಗಿ ನಡದು ಕಾದಿ'' ಈ ರೀತಿ ಉಲ್ಲೇಖವಿದೆ. ಪದಾದಿಯ 'ಎ' ಕಾರದ ಬದಲಾಗಿ 'ಇ' ಕಾರ ಬಳಕೆಯಿದೆ. ಬರಹಕನ್ನಡದಲ್ಲಿ 'ಎದುರಾಗಿ' ಎನ್ನುವುದು ಮಸ್ಕಿ ಪರಿಸರದ ಶಾಸನದಲ್ಲಿ ಇದುರಾಗಿ ಎಂದಿದೆ. ಮಸ್ಕಿ ಪರಿಸರದ ಕನ್ನಡದಲ್ಲಿ 'ಎದಿರಾಗಿ' ಎಂದು ಉಚ್ಚಾರಗೊಳ್ಳುವುದು. ಇದು ಬರಹಕನ್ನಡಕ್ಕಿಂತ ಭಿನ್ನವಾಗಿರುವುದನ್ನು ಗಮನಿಸಬಹುದು.

ಮಸ್ಕಿಯ ೧೧ನೇ ಶತಮಾನದ ಚಾಳುಕ್ಯ ಅರಸ ಜಗದೇಕಮಲ್ಲನ ಆಳ್ವಿಕೆಯಲ್ಲಿ ಉಲ್ಲೇಖಿತವಾಗಿರುವ ಶಾಸನ ಸಂಖ್ಯೆ ೩೩, ಸಾಲು ೫, ಪು ೧೬೬ರಲ್ಲಿ 'ಸಕವರ್ಷ' ಎಂದುದಾಖಲಾಗಿದೆ. ಇದರ ಪ್ರಯೋಗ ಸಕವರ್ಷ ೯೫೩ ನೆಯ ಪ್ರಜಾಪತಿ ಸಂವತ್ಸರದ ಮುಂದುವರೆಯುತ್ತದೆ. ಪ್ರಸ್ತುತ ಶಾಸನದಲ್ಲಿ 'ಶ' ತಾಲವ್ಯ ಧ್ವನಿಯು 'ಸ' ವತ್ಸ್ರ್ಯಧ್ವನಿಯಾಗಿ ಬಳಸಲಾಗಿದೆ. ಮಸ್ಕಿ ಕನ್ನಡದ ಮೂರು ಸಾಮಾಜಿಕ ವರ್ಗಗಳಲ್ಲಿ ಸಕವರ್ಸ ಎಂಬುದಾಗಿ ಬಳಕೆಯಲ್ಲಿದೆ. ಇದೇ ರೀತಿ ಮಸ್ಕಿಯ ಇನ್ನೊಂದು ೧೧ ನೇ ಶತಮಾನದ ಪಿರಿಯ ಮೊಸಂಗಿಯ ಪರದಾಸಿ ಉಪಸೆಟ್ಟಿಯ ಮಗ ಪೋತಸೆಟ್ಟಿ ಇವರು ದಾನಬಿಟ್ಟಂತಹ ಶಾಸನದಲ್ಲಿ ಮಸ್ಕಿಕನ್ನಡದ ಸ್ವರೂಪವನ್ನು ತಿಳಿಯಬಹುದಾಗಿದೆ. ಇಲ್ಲಿ ಶಾಸನ ಸಂಖ್ಯೆ ೩೪ ಸಾಲು ೮. ಪುಟ ೧೬೮ರಲ್ಲಿ ''ಸುದ್ಧ ಪಂಚಮಿ ಸೋಮವಾರದನ್ನು'' ಮುಂದುವರೆಯುತ್ತದೆ ಎಂಬ ಪ್ರಯೋಗವಾಗಿರುವುದನ್ನು ನೋಡಬಹುದು. ಈ ಶಾಸನದ ಪ್ರಯೋಗದಲ್ಲಿ 'ಶುದ್ಧ' ಬದಲಿಗೆ 'ಸುದ್ಧ' ಎಂಬುದನ್ನು ಬಳಕೆಮಾಡಿದ್ದಾರೆ. ಅಂದರೆ 'ಶ' ಕಾರದ ಬದಲಾಗಿ 'ಸ' ಕಾರ ಬಳಕೆಯಾಗಿದೆ. ಬರಹಕನ್ನಡಕ್ಕಿಂತ ಮಸ್ಕಿ ಪರಿಸರದ ಕನ್ನಡ ಭಿನ್ನವಾಗಿದೆ. ಇಲ್ಲಿ ಮತ್ತೊಂದು ಅಂಶವನ್ನು ಗಮನಿಸುವುದಾದರೆ ಮಸ್ಕಿಪರಿಸರದಲ್ಲಿ ಸಿಕ್ಕಿರುವ ಶಾಸನಗಳ ಭಾಷಿಕ ವಿಚಾರಗಳಿಗೂ ಇಂದಿನ ಮಸ್ಕಿ ಪರಿಸರದ ಭಾಷಿಕ ವಿಚಾರಗಳಿಗೂ ಸಂಬಂಧ ಕಲ್ಪಿಸಬಹುದಾಗಿದೆ. ಉದಾ: ಮಸ್ಕಿಪರಿಸರದ ಶಾಸನದಲ್ಲಿ 'ಸುದ್ಧ' ಎಂದು ಬಳಕೆಯಲ್ಲಿದ್ದರೆ ಬರಹ ಕನ್ನಡದಲ್ಲಿ 'ಶುದ್ಧ' ಎಂದಿದೆ. ಆದರೆ ಇಂದಿನ ಮಸ್ಕಿ ಪರಿಸರದಲ್ಲಿ 'ಸುದ್ಧ' ಎಂದು ಬಳಕೆಯಲ್ಲಿ ಇರುವುದನ್ನು ಗಮನಿಸಬಹುದು. ಮುಖ್ಯವಾಗಿ ಮಸ್ಕಿ ಕನ್ನಡ ಬೆಳವಣಿಗೆಯನ್ನು ತಿಳಿಯಲು ಈ ಮಾದರಿ ಭಾಷಿಕ ವಿಚಾರ ಸಹಾಯಕ್ಕೆ ಬರುತ್ತದೆ.

ಇದೇ ಶಾಸನದಲ್ಲಿ ಇನ್ನೊಂದು ಭಾಷಿಕ ಅಂಶವನ್ನು ಗಮನಿಸುವುದಾದರೆ 'ಮುವತ್ತಯ್ದು' ಎಂಬ ಸಂಖ್ಯಾವಾಚಕ ಪದ. ಶಾಸಸಂಖ್ಯೆ ೩೪, ಸಾಲು ೧೪, ಪುಟ ಸಂಖ್ಯೆ ೧೬೮ ರಲ್ಲಿ ಉಲ್ಲೇಖವಾಗಿದೆ. ಈ

ಸಂಖ್ಯಾವಾಚಕ ಪದಾದಿಯಲ್ಲಿ ದೀರ್ಘಗೊಳ್ಳದೆ ಬಳಕೆಗೊಂಡಿರುವುದು ಹಾಗೂ 'ಐ' ಸಂಯುಕ್ತಾಕ್ಷರ ಸ್ವರಸಹಾಯದಿಂದ ಬಳಕೆಗೊಂಡಿದೆ. ಬರಹಕನ್ನಡದಲ್ಲಿ ಬಳಕೆಯಲ್ಲಿರುವ 'ಮೂವತ್ತೈದು' ಸಂಖ್ಯಾವಾಚಕವು ಪ್ರಸ್ತುತ ಮಸ್ಕಿ ಪರಿಸರದ ಕನ್ನಡದಲ್ಲಿ ಬಳಕೆಯಾಗದೆ ಶಾಸನದಲ್ಲಿ ಬಳಕೆಗೊಂಡಿರುವ 'ಮುವತ್ತಯ್ಬು' ಬಳಕೆಯಲ್ಲಿರುವುದು ಗಮನಿಸಬೇಕಾದ ಅಂಶ. ಮಸ್ಕಿಪರಿಸರದಲ್ಲಿ ಲಭ್ಯವಿರುವ ಶಾಸನಗಳಲ್ಲಿ ದೊರಕಿರುವ ಭಾಷಿಕ ಅಂಶ ಹಾಗೂ ಮಸ್ಕಿ ಪರಿಸರದ ಕನ್ನಡದ ಭಾಷಿಕ ಅಂಶವನ್ನು ಮೇಲಿನ ಉದಾಹರಣೆಯ ಸಂಬಂಧವನ್ನು ಕಲ್ಪಿಸಬಹುದಾಗಿದೆ. ಇದೇ ಊರಿನಲ್ಲಿ ದೊರಕಿರುವ ವಿಜಯನಗರದ ಅರಸ ಅಚ್ಯುತರಾಯನ ಆಳ್ವಿಕೆಕಾಲ ಕ್ರಿ.ಶ. ೧೫೩೭. ಈ ಶಾಸನದಲ್ಲಿ ಶಾಸನ ಸಂಖ್ಯೆ ೩೬ಸಾಲು ೧೭ ಪುಟ ೧೭೦ರಲ್ಲಿ 'ಮುಲಸ್ತಾನ' ಎಂದು ದಾಖಲಾಗಿದೆ. ಇದರ ಪ್ರಯೋಗ ವೊಸಗೆಯ ಮುಲಸ್ತಾನದ ಶ್ರೀ ಮಲಿಕಾರ್ಜುನದೇವರ..... ಮುಂದುವರೆಯುತ್ತದೆ. ಈ ಪ್ರಯೋಗದ 'ಮುಲಸ್ತಾನ'ದಲ್ಲಿ ಪದಾದಿಯಲ್ಲಿ ದೀರ್ಘಸ್ವರ ಬಳಕೆಗೊಳ್ಳದೆ ಹ್ರಸ್ವಸ್ವರ ಬಳಕೆಗೊಂಡಿದೆ. ಮಸ್ಕಿ ಪರಿಸರದ ಕನ್ನಡದಲ್ಲಿ ಹ್ರಸ್ವಸ್ವರಗೊಂಡು 'ಮುಲಸ್ತಾನ' ಎಂದು ಉಚ್ಚಾರಗೊಳ್ಳುತ್ತದೆ. ಇದೇ ಶಾಸನದ ಸಾಲು ೧೮ ರಲ್ಲಿ ಶ್ರೀ ಮಲಿಕಾರ್ಜುನ ಎಂಬುದಾಗಿ ದಾಖಲಾಗಿದೆ. ಇಲ್ಲಿ ದೈವನಾಮವು ಸಜಾತೀಯ ದ್ವಿತ್ವಕ್ಷರಗೊಳ್ಳದೆ ಬಳಕೆಗೊಂಡಿರುವುದು ಮಸ್ಕಿಪರಿಸರದ ಲಿಂಗಾಯತರ ಉಚ್ಚಾರಣೆಯಲ್ಲಿ 'ಮಲ್ಲಿಕಾರ್ಜುನ' ಎಂದು ಉಚ್ಚಾರಗೊಂಡರೆ ನಾಯಕ, ಹರಿಜನರಲ್ಲಿ 'ಮಲಿಕಾರ್ಜುನ' ಎಂಬುದಾಗಿ ಉಚ್ಚಾರಗೊಳ್ಳುತ್ತದೆ. ವಿಜಾತೀಯ ಒತ್ತಕ್ಷರ ಉಚ್ಚಾರಣೆಯಲ್ಲಿ ಇಲ್ಲ.

ಸದಾಶಿವಮಹಾರಾಯ ಆಳುತ್ತಿರುವಾಗಿನ ಕ್ರಿ.ಶ. ೧೫೪೭ರ ಮಸ್ಕಿಯಲ್ಲಿ ದೊರೆತ ಶಾಸನ. ಶಾಸನ ಸಂಖ್ಯೆ ೩೮ ಸಾಲು ೭. ಪುಟಸಂಖ್ಯೆ ೧೭೩ರ ಪ್ರಯೋಗ 'ಮಹಾರಾಯರಿಗೆ ಪುಂಣ್ಯವಾಗಿ ಮೊಸಗೆ ಸೀಮೆಗೆ' ಮುಂದುವರೆದು ಎಂಬಲ್ಲಿಯ ಭಾಷಿಕ ಅಂಶ 'ಪುಂಣ್ಯವಾಗಿ' ಅನುಸ್ವರವನ್ನು ಬಳಸಿ ಪದವನ್ನು ದಾಖಲಿಸಲಾಗಿದೆ. ಮಸ್ಕಿಕನ್ನಡದ ಮೂರು ಸಾಮಾಜಿಕ ವರ್ಗಗಳಲ್ಲಿ ಪುಣ್ಯವಾಗಿ ಎಂದು ಬಳಕೆಗೊಳ್ಳುತ್ತದೆ. ಇದೆ ಶಾಸನದ ಸಾಲು ೯ ಪುಟ. ೧೭೩ರಲ್ಲಿ ಪ್ರಯೋಗ 'ಕಡಾಯ ಯೆಲ್ಲಾ ಸರ್ವಮಾನ್ಯವ ಮಾಡಿದೆ ಉ' ಮುಂದುವರೆಯುತ್ತದೆ. 'ಯೆಲ್ಲಾ' ಎಂಬ ಪದದಲ್ಲಿಸ್ವರ 'ಎ' ಬದಲಾಗಿ 'ಯ' ವ್ಯಂಜನವನ್ನು ಬಳಕೆ ಮಾಡಿದ್ದಾರೆ. ಬರಹಕನ್ನಡದಲ್ಲಿ 'ಎಲ್ಲಾ' ಪದ ಬದಲಿಗೆ ಶಾಸನದಲ್ಲಿ ಹಾಗೂ ಮಸ್ಕಿಪರಿಸರದ ಕನ್ನಡದಲ್ಲಿ 'ಯೆಲ್ಲಾ' ಎಂಬುದಾಗಿಯೇ ಬಳಕೆಗೊಂಡಿದೆ. ಇಲ್ಲಿ ಮಸ್ಕಿ ಪರಿಸರದ ಶಾಸನದ ಭಾಷೆ ಹಾಗೂ ಮಸ್ಕಿ ಪರಿಸರದ ಕನ್ನಡವು ಒಂದೇ ಅಂಶದಿಂದ ಕೂಡಿರುವುದನ್ನು ಗಮನಿಸಬಹುದು. ಇದೇ ಶಾಸನದಲ್ಲಿ ಮುಂದೆ ಸಾಲು ೧೦ರಲ್ಲಿ 'ಸರ್ವಮಾನ್ಯವ ಮಾಡಿದೆಉ ಇದೆಕ' ಮುಂದುವರೆಯುತ್ತದೆ ಎಂಬ ಪ್ರಯೋಗವಿದೆ. 'ಮಾಡಿದೆಉ' ಎಂಬಲ್ಲಿ ಭಾಷಿಕ ಅಂಶವನ್ನು ಗಮನಿಸುವುದಾದರೆ ಈ ಪದದ ಪದಾಂತ್ಯದಲ್ಲಿ ವ್ಯಂಜನದ ಬದಲಾಗಿ 'ಉ' ಹ್ರಸ್ವಸ್ವರವನ್ನು ಬಳಕೆಮಾಡಿದ್ದಾರೆ. ಮಸ್ಕಿ ಪರಿಸರದ ಕನ್ನಡದಲ್ಲಿ 'ಮಾಡಿದೆವು', 'ಮಾಡಿದ್ವಿ' ಎಂಬುದಾಗಿ ಉಚ್ಚಾರಗೊಳ್ಳುತ್ತದೆ. ಶಾಸನದ ಸಾಲು ೧೧ ರಲ್ಲಿಇದೇ ರೀತಿಯ ಇನ್ನೊಂದು ಅಂಶವನ್ನು ಗಮನಿಸಬಹುದು. ಪ್ರಯೋಗ 'ತಂದೆ ತಾಯಿಗಳನು ಗೋಉ,' ಮುಂದುವರೆಯುತ್ತದೆ. ಗೋಉ ಎಂಬಲ್ಲಿ 'ವ' ವ್ಯಂಜನದ ಬದಲಾಗಿ 'ಉ' ಸ್ವರವನ್ನು ಬಳಕೆಮಾಡಿದ್ದಾರೆ. ಬರಹಕನ್ನಡದಲ್ಲಿ 'ಗೋವು'. ಮಸ್ಕಿ ಪರಿಸರದ ಲಿಂಗಾಯತರ ಮಾತಿನಲ್ಲಿ ಗೋವು ಎಂದು ಬಳಕೆಗೊಂಡರೆ, ನಾಯಕ, ಹರಿಜನರು ಶಾಸನದಲ್ಲಿ ಬಳಕೆಗೊಂಡ 'ಗೋಉ' ಅಂಶವನ್ನು ಉಳಿಸಿಕೊಂಡು ಬಳಕೆಮಾಡುತ್ತಾರೆ. ಇದೇ ಶಾಸನದ ಸಾಲು ೧೧ರಲ್ಲಿ ಅಳುಪಿದರು 'ತಂಮ ತಂದೆ ತಾಯಿಗಳನು' ಮುಂದುವರೆಯುತ್ತದೆ. ಎಂಬ ಪ್ರಯೋಗದಲ್ಲಿ 'ತಂಮ' ಎಂಬ ಆತ್ಮಾರ್ಥಕ ಸರ್ವನಾಮ ಬಳಕೆಯು

ಬರಹಕನ್ನಡಕ್ಕಿಂತ ಭಿನ್ನವಾಗಿದೆ. ಮಸ್ಕಿ ಪರಿಸರದ ಈ ಶಾಸನದಲ್ಲಿ 'ಅನುಸ್ವರ'ವನ್ನು ಹೊಂದಿ ಬಳಕೆಮಾಡಲಾಗಿದೆ. ಆದರೆ ಮಸ್ಕಿಪರಿಸರದ ಕನ್ನಡದಲ್ಲಿ 'ತಮ್ಮ' ಎಂಬುದಾಗಿ ಬಳಕೆಮಾಡುತ್ತಾರೆ. ಇದೇ ಶಾಸನದ ಸಾಲು ೧೧ರಲ್ಲಿ 'ತಾಯಿಗಳನು ಗೋಉ ಬ್ರಾಹ್ಮರನು ವಾರಣಾಸಲಿ ಕೊಂದ ಪಾತಕೆ' ಮುಂದುವರೆದು ಎಂದು ಪ್ರಯೋಗಗೊಂಡಿದೆ. ಈ ಪ್ರಯೋಗದಲ್ಲಿ ಮುಖ್ಯವಾಗಿ ನೋಡಬೇಕಾದ ಅಂಶ, ಬ್ರಾಹ್ಮರನು. ಇಲ್ಲಿ 'ಣ' ವ್ಯಂಜನ ಬಳಕೆಗೊಳ್ಳದೆ ಪ್ರಯೋಗಗೊಂಡಿರುವುದು. ಬರಹಕನ್ನಡದಲ್ಲಿ ಬ್ರಾಹ್ಮಣ ಎಂದಿದೆ. ಆದರೆ ಮಸ್ಕಿಪರಿಸರದಲ್ಲಿ ಲಿಂಗಾಯತರಲ್ಲಿ ಬ್ರಾಮ್ಮನ ಎಂದು ನಾಯಕ, ಹರಿಜನರು ಬ್ರಾಂಬ್ರು ಎಂದು ಉಚ್ಚಾರ ಮಾಡುತ್ತಾರೆ.

ಮಸ್ಕಿಯಲ್ಲಿ ದೊರೆತ ಕ್ರಿ.ಶ. ೧೫೩೭ರ ಅಚ್ಯುತರಾಯನು ಆಳುತ್ತಿದ್ದ ಕಾಲದ ಶಾಸನ ಶಾಸನದ ಸಂಖ್ಯೆ ೩೯ ಸಾಲು ೭ ಪುಟಸಂಖ್ಯ ೧೭೪ರಲ್ಲಿ 'ಮೊಸಗೆ ಸೀಮೆಯ ವಳಗೆ' ಎಂಬ ಉಲ್ಲೇಖವಿರುವುದನ್ನು ಗಮನಿಸಬಹುದು. ಪ್ರಸ್ತುತ ಈ ಶಾಸನದಲ್ಲಿ ಭಾಷಿಕವಾಗಿ 'ಒ' ಸ್ವರದ ಬದಲಿಗೆ 'ವ' ವ್ಯಂಜನ ಬಳಕೆಯಾಗಿದೆ. ಆದರೆ ಬರಹಕನ್ನಡ ಮಸ್ಕಿಪರಿಸರದ ಕನ್ನಡಕ್ಕಿಂತ ಭಿನ್ನವಾಗಿದೆ. ಇಲ್ಲಿ ಮತ್ತೊಂದು ಅಂಶವನ್ನು ಗಮನಿಸುವುದಾದರೆ ಮಸ್ಕಿ ಪರಿಸರದಲ್ಲಿ ಸಿಕ್ಕಿರುವ ಶಾಸನಗಳ ಭಾಷಿಕ ವಿಚಾರಗಳಿಗೂ ಇಂದಿನ ಮಸ್ಕಿಪರಿಸರದ ಭಾಷಿಕ ವಿಚಾರಗಳಿಗೂ ಸಂಬಂಧ ಕಲ್ಪಿಸಬಹುದು. ಉದಾ: ಮಸ್ಕಿಪರಿಸರದ ಶಾಸನದಲ್ಲಿ 'ವಳಗೆ' ಎಂದು ಬಳಕೆಗೊಂಡರೆ ಬರಹಕನ್ನಡದಲ್ಲಿ 'ಒಳಗೆ' ಎಂದಿದೆ. ಆದರೆ ಇಂದಿನ ಮಸ್ಕಿ ಪರಿಸರದಲ್ಲಿ ವಳಗೆ, ವಳ್ಗ ಎಂದು ಬಳಕೆಯಲ್ಲಿ ಇರುವುದನ್ನು ಗಮನಿಸಬಹುದು.

ಇದೇ ರೀತಿಯಲ್ಲಿ ಇದೇ ಶಾಸನದ ಸಾಲು ೮ ರಲ್ಲಿ 'ಭುಮಿ ಅಂಬಟಿಗುಡದಲಿ' ಎಂದು ಉಲ್ಲೇಖ ಬಂದಿದೆ. ಪ್ರಸ್ತುತ ಈ ಉಲ್ಲೆಖದಲ್ಲಿ ಭಾಷಿಕ ದೀರ್ಘಸ್ವರದ ಬದಲಾಗಿ ಹ್ರಸ್ವಸ್ವರವನ್ನು ಬಳಕೆಮಾಡಿದ್ದಾರೆ. ಮಸ್ಕಿಪರಿಸರದ ಕನ್ನಡದಲ್ಲಿ 'ಭುಮಿ' ಎಂದು ಬಳಕೆಗೊಂಡರೆ ಬರಹಕನ್ನಡದಲ್ಲಿ 'ಭೂಮಿ' ಎಂದಿದೆ. ಆದರೆ ಇಂದಿನ ಮಸ್ಕಿಪರಿಸರದಲ್ಲಿ 'ಭುಮಿ' ಎಂದೆ ಬಳಕೆಯಲ್ಲಿರುತ್ತದೆ. ಮುಖ್ಯವಾಗಿ ಮಸ್ಕಿಕನ್ನಡ ಬೆಳವಣಿಗೆಯನ್ನು ತಿಳಿಯಲು ಈ ಮಾದರಿ ಭಾಷಿಕ ವಿಚಾರವನ್ನು ಗಮನಿಸಬಹುದು. ಇದೇ ಶಾಸನದ ಸಾಲು ೧೪ರಲ್ಲಿ 'ಕೊಟ ಭು(ದಾ)ನದ ಸಸನ' ಎಂದು ಪ್ರಯೋಗಗೊಂಡಿದೆ. ಈ ಪ್ರಯೋಗದಲ್ಲಿ ಮುಖ್ಯವಾಗಿ ಗಮನಿಸುವಂತಹ ಅಂಶವಂದರೆ ಸಸನ ಪದ. ಬರಹಕನ್ನಡದಲ್ಲಿ ಶಾಸನ ಎಂದು ಬಳಕೆಗೊಳ್ಳುತ್ತದೆ. ಮುಖ್ಯವಾಗಿ ಮಸ್ಕಿಪರಿಸರದ ಕನ್ನಡದಲ್ಲಿ 'ಸಸನ' ಎಂದು ಬಳಕೆಯಾಗುತ್ತದೆ. ಶಾಸನದಲ್ಲಿ ಬಳಕೆಗೊಂಡ ಭಾಷಿಕ ಅಂಶವೇ ಮಸ್ಕಿಪರಿಸರದಲ್ಲಿ ಬಳಕೆಯಾಗಿರುವುದು ವಿಶೇಷ.

ಮಸ್ಕಿಯಲ್ಲಿ ಕ್ರಿ.ಶ. ೧೦೧೦ರಲ್ಲಿ ಚಾಳುಕ್ಯ ಅರಸ ಇಮ್ಮಡಿ ಜಯಸಿಂಹನ ಕಾಲದ ಶಾಸನದಲ್ಲಿ ಮಸ್ಕಿ ಭಾಷೆಯ ಸ್ವರೂಪವನ್ನು ತಿಳಿಯಬಹುದಾಗಿದೆ. ಇಲ್ಲಿ ಶಾಸನ ಸಂಖ್ಯೆ ೩೨ ಸಾಲು ೬ ಪುಟಸಂಖ್ಯೆ ೧೬೫ರಲ್ಲಿ 'ಕೀರ್ತ್ತಿ ವಿದ್ಯಾಧರಂ ಗಣ್ಡರಗಣ್ಡಂ ಗಣ್ಡ' ಎಂಬ ಉಲ್ಲೇಖವಾಗಿರುವುದನ್ನು ಗಮನಿಸಬಹುದು. ಈ ಶಾಸನದಲ್ಲಿ ಭಾಷಿಕವಾಗಿ ಅನುಸ್ವರವನ್ನು ಬಳಸದೇ 'ಣ' ಅನುನಾಸಿಕವನ್ನು ಬಳಸಲಾಗಿದೆ. ಮಸ್ಕಿ ಪರಿಸರದ ಕನ್ನಡದಲ್ಲಿ 'ಗಂಡ' ಎಂಬುದಾಗಿ ಉಚ್ಚಾರಗೊಳ್ಳುತ್ತದೆ. ಇದೇ ಶಾಸನದಲ್ಲಿ ಸಾಲು ೯ರಲ್ಲಿ 'ಬಿದಿಗೆ ಬೃಹಸ್ಪತಿವಾರದನ್ದಾ ಹವಮಲ್ಲ'. ಎಂಬ ಉಲ್ಲೇಖವಿರುತ್ತದೆ. ಈ ಶಾಸನದಲ್ಲಿ 'ಬೃಹಸ್ಪತಿವಾರ' ಬಳಕೆಯಿದೆ. ಬರಹಕನ್ನಡದಲ್ಲಿ

ಗುರುವಾರ ಎಂತಿದೆ. ಮಸ್ಕಿ ಪರಿಸರದ ಕನ್ನಡದಲ್ಲಿ 'ಬ್ರೇಸ್ವಾರ' ಎಂಬುದಾಗಿ ಬಳಕೆಗೊಳ್ಳುತ್ತದೆ. ಮಸ್ಕಿಯ ಇದೇ ಶಾಸನದ ಸಾಲು ೧೧ರಲ್ಲಿ ''ಕರಿಯಾಯ್ಯುಯ್ಯಗೆ ರಾಜಧಾನಿ ಮೊಸಂಗಿಯೊಳ್ಸಬ್ಬ (ಪಾ)'' ಎಂಬುದಾಗಿ ದಾಖಲಾಗಿದೆ. ಇಲ್ಲಿ ಗಮನಿಸಬಹುದಾದ ಅಂಶ 'ಮೊಸಂಗಿ'. ಅನುಸ್ವರವನ್ನು ಬಳಕೆಮಾಡಲಾಗಿದೆ. ಪದಾದಿಯಲ್ಲಿ 'ಓ' ಸ್ವರವನ್ನು ಬಳಸಲಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಮಸ್ಕಿಪರಿಸರದ ಕನ್ನಡದಲ್ಲಿ ಮಸ್ಗಿ, ಮಸ್ಕಿ ಎಂದು ಪ್ರಚಲಿತದಲ್ಲಿದೆ. ಇದೇ ಶಾಸನದ ಸಾಲು ೧೭ರಲ್ಲಿ 'ಕೊನ್ದ ಪಾತಕನುಂ ನರಕಗಾಮಿಯಮಕ್ಕ' ಎಂದು ಮುಂದುವರೆದು ಉಲ್ಲೇಖಗೊಂಡಿದೆ. ನಾವು ಇಲ್ಲಿ ಗಮನಿಸಬೇಕಾದ ಭಾಷಿಕ ಅಂಶ 'ಕೊನ್ದ'. ಈ ಪದದಲ್ಲಿ ಅನುಸ್ವರದ ಬದಲಾಗಿ ಅನುನಾಸಿಕವನ್ನು ಬಳಸಲಾಗಿದೆ. ಆದರೆ ಬರಹಕನ್ನಡದಲ್ಲಿ 'ಕೊಂದ' ಎಂಬುದಾಗಿ ಬಳಕೆ ಇದೆ. ಮಸ್ಕಿಪರಿಸರದ ಕನ್ನಡದಲ್ಲಿ 'ಅನುಸ್ವರ'ವನ್ನು ಬಳಸದೇ ಮಸ್ಕಿ ಪರಿಸರದ ಶಾಸನದಲ್ಲಿ ಬಳಕೆಗೊಂಡ 'ಕೊನ್ದ' ಪದ ಬಳಕೆಯನ್ನು ಬಳಸುತ್ತಾರೆ.

ಸಾಲುಗುಂದೆಯ ಕ್ರಿ.ಶ. ೧೧೫೭ರ ಚಾಳುಕ್ಯರಾಜ ಭೂಲೋಕಮಲ್ಲನ ಕಾಲದ ಶಾಸನದಲ್ಲಿ ಉಲ್ಲೇಖಿತವಾಗಿರುವ ಶಾಸನ ಸಂಖ್ಯೆ ೨, ಸಾಲು ೧೧, ಪುಟಸಂಖ್ಯೆ ೩೪೭ರಲ್ಲಿ 'ಕಾಲಿದಾಸ' ಇದರ ಪ್ರಯೋಗ 'ತತ್ಪೂನು ಕಾಲಿದಾಸ ಚಮೂಪ' ಎಂದು ಮುಂದುವರೆಯುತ್ತಾ ದಾಖಲಾಗಿದೆ. ಪ್ರಸ್ತುತ ಶಾಸನದಲ್ಲಿ 'ಳ' ಕಾರದ ಬದಲಾಗಿ 'ಲ' ಕಾರವನ್ನು ಬಳಸಲಾಗಿದೆ. ಮಸ್ಕಿಪರಿಸರ ಕನ್ನಡದಲ್ಲಿ 'ಕಾಲಿದಾಸ' ಎಂಬುದಾಗಿ ಬಳಕೆಯಲ್ಲಿದೆ. ಬರಹಕನ್ನಡಕ್ಕಿಂತ ಭಿನ್ನವಾಗಿ ಮಸ್ಕಿ ಪರಿಸರದ ಶಾಸನ ಹಾಗೂ ಮಸ್ಕಿ ಪರಿಸರದ ಕನ್ನಡದಲ್ಲಿ ಒಂದೇ ರೀತಿಯಾಗಿ ಬಳಕೆಯಲ್ಲಿದೆ. ಇಲ್ಲಿ ಮಸ್ಕಿ ಪರಿಸರದ ಕನ್ನಡವನ್ನು ಮಸ್ಕಿ ಪರಿಸರದ ಶಾಸನಕ್ಕೆ ಕಲ್ಪಿಸಿ ನೋಡಲಾಗಿದೆ. ಮಸ್ಕಿಕನ್ನಡದ ಬೆಳವಣಿಗೆಯನ್ನು ತಿಳಿಯಲು ಈ ಮಾದರಿ ಭಾಷಿಕ ವಿಚಾರ ಗಮನಿಸುವಂತಾಗಿದೆ. ಇದೇ ಶಾಸನದ ಸಂಖ್ಯೆ ೨ ಸಾಲು ೨೨ರಲ್ಲಿ ''ನೆಲಂ ಹೂವಿಂಗೆ ಬಿಟ್ಟ ತೋಟ'' ಎಂದು ಉಲ್ಲೇಖಿಸುತ್ತದೆ. ಬರಹಕನ್ನಡದಲ್ಲಿ ಹೂವಿಗೆ ಎಂಬುವುದು ಮಸ್ಕಿಪರಿಸರದ ಈ ಶಾಸನದಲ್ಲಿ 'ಅನುಸ್ವರ'ವನ್ನು ಬಳಸಿ 'ಹೂವಿಂಗೆ' ಎಂದು ಬಳಕೆಮಾಡಲಾಗಿದೆ. ಪ್ರಸ್ತುತ ಮಸ್ಕಿಪರಿಸರದ ಕನ್ನಡದಲ್ಲಿ 'ಊವಿಗೆ', 'ಊವ್ಗೆ' ಎಂದು ಬಳಕೆಯಾಗುತ್ತದೆ. ಶಾಸನದಲ್ಲಿ 'ಹೂವಿಂಗೆ' ಬರಹಕನ್ನಡದಲ್ಲಿ 'ಹೂವಿಗೆ' ಮಸ್ಕಿಪರಿಸರದ ಕನ್ನಡದಲ್ಲಿ 'ಊವಿಗೆ', 'ಊವ್ಗೆ' ಎಂಬುದಾಗಿ ಮಸ್ಕಿಕನ್ನಡ ಬೆಳೆದು ಬಂದಿದೆ.

ಕರಡಿಕಲ್ಲಲಿ ದೊರೆತ ಕ್ರಿ.ಶ. ೧೦೨೮ರ ಕಲ್ಯಾಣ ಚಾಳುಕ್ಯ ಅರಸ ಜಯಸಿಂಹನ ಆಳ್ವಿಕೆಯ ಅವಧಿಯ ಶಾಸನ ಈ ಶಾಸನದಲ್ಲಿ ಶಾಸನಸಂಖ್ಯೆ ೬, ಸಾಲು ೧೦, ಪುಟಸಂಖ್ಯೆ ೧೩೬ರಲ್ಲಿ ''ಬೀದಿಯೊಳಗೆ ಮದುವೆಯಲು ಬಂಣ್ಡಿಯನೇಟಿ'' ಉಲ್ಲೇಖಿತವಾಗಿದೆ. ಈ ಶಾಸನದಲ್ಲಿ ಅನುನಾಸಿಕ 'ಣ' ಕಾರ ಬಳಕೆಯಾಗಿರುವುದನ್ನು ಗಮನಿಸಬೇಕಾದ ಅಂಶ. ಅನುನಾಸಿಕ, ಅನುಸ್ವರ ಎರಡು ಬಳಕೆಗೊಂಡಿರುವುದನ್ನು ನೋಡಬಹುದು. ಬರಹಕನ್ನಡದಲ್ಲಿ ಬಂಡಿ ಎಂದು ಬಳಕೆಯಲ್ಲಿದೆ. ಮಸ್ಕಿಪರಿಸರದ ಕನ್ನಡದಲ್ಲಿ ಬಂಡಿ ಎಂದು ಬಳಕೆಯಲ್ಲಿದೆ. ಇದೇ ಶಾಸನದ ಸಾಲು ೩೩ರಲ್ಲಿ ''ಆತಂಗೆ ಸುಂಕಂ ಎಚ್ಚಿನ'' ಎಂದು ಉಲ್ಲೇಖಿಸುತ್ತದೆ. ನಿರ್ದೇಶಾತ್ಮಕ ಸರ್ವನಾಮದ ಮಧ್ಯದಲ್ಲಿ ಅನುಸ್ವಾರ ಬಳಕೆಯಾಗಿದೆ. ಬರಹಕನ್ನಡದಲ್ಲಿ 'ಆತನಿಗೆ' ಎಂದು ಬಳಕೆಯಾಗುತ್ತದೆ. ಮಸ್ಕಿಪರಿಸರದ ಕನ್ನಡದಲ್ಲಿ ಆತಗ, ಆತ್ಗ ಎಂದು ಬಳಕೆಯಲ್ಲಿದೆ. ಶಾಸನದಲ್ಲಿ ಬಿಂದು ಸಹಿತವಾದುದು ಮಸ್ಕಿ ಪರಿಸರದ ಕನ್ನಡದಲ್ಲಿ ಬಿಂದು ರಹಿತವಾಗಿದೆ.

ನವಿಲೆಯಲ್ಲಿಯ ಕ್ರಿ.ಶ. ೧೧೯೯ರ ಕಲ್ಯಾಣ ಚಾಳುಕ್ಯ ಅರಸ ತ್ರಿಭುವನಮಲ್ಲದೇವನ ಕಾಲದ ಶಾಸನ. ಶಾಸನದ ಸಂಖ್ಯೆ ೮, ಸಾಲು ೧೮, ಪುಟಸಂಖ್ಯೆ ೧೪೧ರಲ್ಲಿ ''ಸಂವತ್ಸರದ ಚಯಿತ್ರ ಸುದ್ಧ'' ಎಂಬುದಾಗಿ ಉಲ್ಲೇಖವಿದೆ. ಈ ಉಲ್ಲೇಖದಲ್ಲಿ 'ಐ' ಸಂಯುಕ್ತಾಕ್ಷರದ ಬದಲಾಗಿ ಸ್ವರಸಹಾಯದಿಂದ 'ಚಯಿತ್ರ' ಎಂದು ಬಳಕೆಗೊಂಡಿದೆ. ಮಸ್ಕಿಪರಿಸರದ ಕನ್ನಡದಲ್ಲಿ 'ಚಯಿತ್ರ' ಎಂದು ಬಳಕೆಯಲ್ಲಿದೆ. ಇಲ್ಲಿ ನಾವು ಗಮನಿಸಬಹುದಾದ ಅಂಶವೆಂದರೆ ಬರಹಕನ್ನಡದಲ್ಲಿ ಬಳಕೆಯಲ್ಲಿರುವ ಚೈತ್ರ ಪದಕ್ಕೆ ಭಿನ್ನವಾಗಿ ಮಸ್ಕಿಪರಿಸರದ ಶಾಸನ ಹಾಗೂ ಮಸ್ಕಿ ಪರಿಸರದ ಕನ್ನಡದಲ್ಲಿ ಬಳಕೆಯಲ್ಲಿದೆ.

ಇದೇ ಶಾಸನದ ಸಾಲು ೨೧ರಲ್ಲಿ ''ಗೇಣು ಗಳೆಯಲು ಸತ್ರಕ್ಕೆ ಮತ್ತ ೧೩ ಸತ್ರಕ್ಕೆಂದು'' ಎಂದು ಉಲ್ಲೇಖವಾಗಿದೆ. ಇಲ್ಲಿಯ ಭಾಷಿಕ ಅಂಶ 'ಸತ್ರ'. ಮಹಾಪ್ರಾಣ ಅಕ್ಷರ ಬಳಕೆಗೊಳ್ಳದೆ ಪದಾದಿಯಲ್ಲಿ ಅವರ್ಗೀಯ ವ್ಯಂಜನ 'ಸ' ಕಾರ ಬಳಕೆಯಿದೆ. ಬರಹಕನ್ನಡದಲ್ಲಿ ಛತ್ರ ಎಂದಿದೆ. ಆದರೆ ಮಸ್ಕಿಪರಿಸರದಲ್ಲಿರುವ ಶಾಸನದಲ್ಲಿ ಹಾಗೂ ಮಸ್ಕಿ ಪರಿಸರದ ಕನ್ನಡದಲ್ಲಿ ಬರಹಕನ್ನಡಕ್ಕಿಂತ ಭಿನ್ನ ರೀತಿಯಲ್ಲಿ 'ಸತ್ರ' ಎಂಬುದಾಗಿ ಬಳಕೆಗೊಂಡಿದೆ. ಇಲ್ಲಿ ನಾವು ಮಸ್ಕಿಕನ್ನಡ ಬೆಳೆದ ರೂಪವನ್ನು ಗಮನಿಸಬಹುದು.

ಮುದಗಲ್‌ನಲ್ಲಿಯ ಕ್ರಿ.ಶ. ೧೨೧೫ರ ದೇವಗಿರಿ ಯಾದವ ವಂಶದ ಸಿಂಹಣ ಆಳ್ವಿಕೆಯ ಕಾಲದ ಶಾಸನ. ಈ ಶಾಸನದಲ್ಲಿ ಉಲೇಖವಾಗಿರುವ ಶಾಸನ ಸಂಖ್ಯೆ ೪೯ ಇದೇ ಶಾಸನದ ಸಾಲು ೩೬ರಲ್ಲಿ ''ಭತ್ತ ಗಾಣದಲೊಂದು ಸೌಟು ಎಂಣ್ನೆ'' ಎಂದು ಉಲ್ಲೇಖವಿದೆ. ಇಲ್ಲಿ ಭಾಷಿಕವಾಗಿ 'ಸೌಟು' ಪದವನ್ನು ಗಮನಿಸಬಹುದು. 'ಚ' ಕಾರಕ್ಕೆ ಬದಲಾಗಿ 'ಸ' ಕಾರ ಬಳಕೆಯಾಗಿದೆ. ಮಸ್ಕಿ ಪರಿಸರದ ಕನ್ನಡದಲ್ಲಿ 'ಸೌಟು' ಎಂಬುದಾಗಿಯೇ ಬಳಕೆಯಿದೆ. ನಾಯಕ, ಹರಿಜನರಲ್ಲಿ ಚೌಟು ಎಂದು ಬಳಕೆ ಇದೆ. ಇದೇ ಶಾಸನದಲ್ಲಿ ದೊರೆತ ಇನ್ನೊಂದು ಭಾಷಿಕವನ್ನು ನೋಡುವುದಾದರೆ ಸಾಲು ೩೮ರಲ್ಲಿ ''ಹಣ ಹಾಗ ಮೆಯಿನೆಱದಲ್ಲಿ ಹಾಗವೆರಡು'' ಎಂಬ ಉಲ್ಲೇಖವನ್ನು ನೋಡಬಹುದು. ಈ ಉಲ್ಲೇಖದಲ್ಲಿ ಮುಖ್ಯವಾಗಿ 'ಮೆಯಿನೆಱದಲ್ಲಿ' ಎನ್ನುವುದು. ಬರಹಕನ್ನಡದಲ್ಲಿ 'ಋತುಮತಿ' ಎಂದಿದೆ. ಆದರೆ ಮಸ್ಕಿ ಪರಿಸರದ ಕನ್ನಡದಲ್ಲಿ 'ಮೆಯಿನರದು' ಎಂದಾಗಿ ಬಳಕೆಯಲ್ಲಿದೆ ಇಲ್ಲಿಯೂ ಮಸ್ಕಿಪರಿಸರದ ಶಾಸನದ ಕನ್ನಡ ಮಸ್ಕಿ ಪರಿಸರದಲ್ಲಿ ಉಳಿಸಿಕೊಂಡು ಬಂದಿರುವುದನ್ನು ಮೇಲಿನ ಉದಾಹರಣೆಯಿಂದ ತಿಳಿಯಬಹುದು. ಇದೇ ಶಾಸನದ ಮತ್ತೊಂದು ಭಾಷಿಕ ಸಾಲು ೨೨ರಲ್ಲಿ ನೋಡುತ್ತೇವೆ. ''ಸಂಪದರಾಚಾರ ವಿಚಾರಸಾರರೆಸೆವಾ ರುಗ್ವೇದ'' ಇಲ್ಲಿ ಸ್ವರ 'ಋ'ಕಾರದ ಬದಲಾಗಿ ವ್ಯಂಜನ 'ರ' ಕಾರ ಬಳಕೆಯಲ್ಲಿದೆ. ಮುಖ್ಯವಾಗಿ ಗಮನಿಸಬೇಕಾದ್ದು ಅಂದು ಮಸ್ಕಿ ಪರಿಸರದ ಕನ್ನಡದಲ್ಲಿ 'ಋ' ಕಾರ ಬಳಕೆ ಇಲ್ಲ ಎನ್ನುವುದು. ಇಂದು ಸಹ ಮಸ್ಕಿಪರಿಸರದ ಕನ್ನಡದಲ್ಲಿ 'ಋ' ಕಾರದ ಬಳಕೆ ಇಲ್ಲ. ಬರಹ ಕನ್ನಡದ 'ಋಗ್ವೇದ' ಮಸ್ಕಿ ಪರಿಸರದ ಕನ್ನಡದಲ್ಲಿ ಋಗ್ವೇದದ ಬದಲಿಗೆ ಶಾಸನದಲ್ಲಿ ಬಳಕೆಯಾಗಿರುವ 'ರುಗ್ವೇದ' ಬಳಕೆಯಿದೆ.

ಗಬ್ಬೂರಿನ ಕ್ರಿ.ಶ. ಸು. ೧೧೦೩ ಕಾಲದ್ದು, ಈ ಶಾಸನದಲ್ಲಿ ಹಿರಿಯ ಅಗ್ರಹಾರವಾದ ಗಬ್ಬೂರಿನ ಮಹಾಜನಗಳ ವರ್ಣನೆಯಿದೆ. ಈ ಶಾಸನದ ಸಂಖ್ಯೆ ೭ ಸಾಲು ೩೨ ಪುಟಸಂಖ್ಯೆ ೪೯ರಲ್ಲಿ ''ಶ್ರೀ ಮೇಳೇಶ್ವರ ದೇವರ ಪೂಜೆ ಪುನಸ್ಕಾರ ನಿವೇದ್ಯ'' ಎಂದಾಗಿ ಉಲ್ಲೇಖವಿದೆ. ಈ ಶಾಸನದಲ್ಲಿ 'ಐ' ಸಂಯುಕ್ತಾಕ್ಷರದ ಬದಲಾಗಿ 'ಇ' ಸ್ವರವನ್ನು ಬಳಸಲಾಗಿದೆ. ಶಾಸನದಲ್ಲಿ ಬಳಕೆಗೊಂಡ 'ನಿವೇದ್ಯ' ಪದ ಮಸ್ಕಿಪರಿಸರದ ಕನ್ನಡದಲ್ಲಿ ಬಳಕೆಯಲ್ಲಿದೆ. ಶಾಸನದಲ್ಲಿ ಬಳಕೆಯಲ್ಲಿರುವ ಅಂಶವನ್ನು ಮಸ್ಕಿ ಪರಿಸರದ ಕನ್ನಡವು ಉಳಿಸಿಕೊಂಡು

ಬಂದಿರುವುದು ವಿಶೇಷ. ಇದೇ ಶಾಸನದ ಮುಂದಿನ ಸಾಲು ಸಂಖ್ಯೆ ೩೩ರಲ್ಲಿ ''ಆ ದೇವರ ದೇವಾಲ್ಯದ ಸಕಳ ಕೆಲಸಕ್ಕಂ'' ಎಂದಿದೆ. ಈ ಉಲ್ಲೇಖದಲ್ಲಿ 'ದೇವಾಲ್ಯ' ಎಂಬ ಭಾಷಿಕ ಅಂಶವು ವಿಜಾತೀಯ ಸಂಯುಕ್ತಾಕ್ಷರ ಪದವಾಗಿ ಬಳಕೆಯಾಗಿರುವುದು. ಮಸ್ಕಿಪರಿಸರದ ಕನ್ನಡದಲ್ಲಿ 'ದೇವಾಲ್ಯ' ಎಂದು ಬಳಕೆಯಲ್ಲಿರುವುದು ಗಮನಿಸಬಹುದಾದದ್ದು. ಮಸ್ಕಿ ಪರಿಸರದ ಕನ್ನಡ, ಶಾಸನದಲ್ಲಿ ಬಳಕೆಯಲ್ಲಿರುವ ಅಂಶವನ್ನು ಉಳಿಸಿಕೊಂಡು ಬಂದಿರುವುದು ವೈಶಿಷ್ಟ್ಯವಾಗಿದೆ. ಇದೇ ಶಾಸನದ ಮತ್ತೊಂದು ಸಾಲು ಸಂಖ್ಯೆ ೩೫ರಲ್ಲಿ ''ಆ ಹಿರಿಯ ಮಹಾಜನಂಗಳಿಗೆ ಸೂಡು ಜೋಳಮಂ'' ಎಂದಾಗಿ ಉಲ್ಲೇಖಿತವಾಗಿದೆ. ಇಲ್ಲಿನ ಭಾಷಿಕ ಅಂಶ ಮುಖ್ಯವಾಗಿ ಸೂಡು. ಮಸ್ಕಿಪರಿಸರದಲ್ಲಿ ಸೂಡು ಪದ ಬಳಕೆ 'ಸೂಡು', 'ಸಿವುಡು' ಎಂಬುದಾಗಿದೆ. ಅಂದರೆ ಶಾಸನದ ಬಳಕೆಯ ಮಸ್ಕಿಪರಿಸರದ ಕನ್ನಡದಲ್ಲಿ ಬಳಕೆಯಲ್ಲಿರುವುದನ್ನು ಮೇಲಿನ ಉದಾಹರಣೆಯಿಂದ ತಿಳಿಯಬಹುದು. ಇದೇ ಶಾಸನದ ಮತ್ತೊಂದು ಸಾಲು ೪೦ರಲ್ಲಿ ''ಸಾಸಿರ್ಬ್ಬರುಂ ತಾಂ ಕುಡುಗೋಲ್ಗಳ'' ಎಂದಿದೆ. ಈ ಶಾಸನದಲ್ಲಿ 'ಕುಡುಗೋಲ್ಗಳ' ಬಹುವಚನ ಪ್ರತ್ಯಯ ಬರಹಕನ್ನಡದಲ್ಲಿ 'ಕುಡುಗೋಲುಗಳು' ಎಂದಾಗುತ್ತದೆ. ಆದರೆ ಮಸ್ಕಿಪರಿಸರದ ಕನ್ನಡದಲ್ಲಿ 'ಕುಡುಗೋಲುಗುಳು' ಎಂದಾಗಿದೆ. ಶಾಸನದಲ್ಲಿ ಇರುವ 'ಗಳ' ಬಹುವಚನ ಪ್ರತ್ಯಯ ಮಸ್ಕಿಪರಿಸರದ ಕನ್ನಡದಲ್ಲಿ 'ಗುಳು'. ಮಸ್ಕಿಪರಿಸರದ ಶಾಸನದಲ್ಲಿ 'ಗಳ' ಬಹುವಚನ ಪ್ರತ್ಯಯ ಬರಹ ಕನ್ನಡದಲ್ಲಿ 'ಗಳು' ಎಂದಾಗಿರುತ್ತದೆ. ಮಸ್ಕಿಪರಿಸರದ ಕನ್ನಡದಲ್ಲಿ 'ಗುಳು' ಎಂದಿದೆ. ಮಾನವೇತರ ಬಹುವಚನ ಪ್ರತ್ಯಯವಾದ-'ಗಳು' ಚರಿತ್ರೆಯನ್ನು ಹೇಳುತ್ತದೆ.

ಮಲ್ಲಟದಲ್ಲಿಯ ಕ್ರಿ.ಶ. ೧೧೯೬ರ ಕಲ್ಯಾಣದ ಚಾಳುಕ್ಯರ ಕಾಲದ ಶಾಸನದಲ್ಲಿ ಉಲ್ಲೇಖವಾಗಿರುವ ಶಾಸನ ಸಂಖ್ಯೆ ೧೧೨, ಸಾಲು ೪, ಪುಟ ಸಂಖ್ಯೆ ೩೧೯ರಲ್ಲಿ 'ವಯಿರಿ' ಎಂದು ದಾಖಲಾಗಿದೆ. ಇದರ ಪ್ರಯೋಗ ''ಸಿಂಘಂ ವಯಿರಿ ವೀರಾವನಿಪತಿ'' ಈ ರೀತಿ ಉಲ್ಲೇಖವಾಗಿದೆ. ಪ್ರಸ್ತುತ ಶಾಸನದಲ್ಲಿ 'ಐ' ಸಂಯುಕ್ತಾಕ್ಷರವನ್ನು ಬಳಸದೆ ಸ್ವರದ ಸಹಾಯದಿಂದ ಬಳಕೆಮಾಡಲಾಗಿದೆ. ಮಸ್ಕಿಪರಿಸರದ ಕನ್ನಡದಲ್ಲಿ ಸ್ವರದ ಸಹಾಯದಿಂದಲೇ 'ವಯಿರಿ' ಎಂದು ಬಳಕೆಯಲ್ಲಿದೆ. ಬರಹ ಕನ್ನಡದ ಪ್ರಯೋಗಗೊಂಡಿರುವ 'ವೈರಿ' ಮಸ್ಕಿ ಪರಿಸರದ ಶಾಸನ ಕನ್ನಡ ಹಾಗೂ ಮಸ್ಕಿಪರಿಸರದ ಕನ್ನಡ ಬರಹ ಕನ್ನಡಕ್ಕಿಂತ ಭಿನ್ನವಾಗಿ ನಿಲ್ಲುತ್ತದೆ. ಇಲ್ಲಿ ಮಸ್ಕಿ ಪರಿಸರದ ಶಾಸನದ ಕನ್ನಡವನ್ನು ಮಸ್ಕಿ ಪರಿಸರದ ಕನ್ನಡ ಉಳಿಸಿಕೊಂಡುಬಂದಿದೆ.

ಇದೇ ಶಾನದ ಇನ್ನೊಂದು ಸಾಲು ಸಂಖ್ಯೆ ೨೦ ಪುಟಸಂಖ್ಯೆ ೩೧೯ರಲ್ಲಿ ಮಾಹೇಶ್ವರ ಎಂದಿದೆ. ಇದರ ಪ್ರಯೋಗ ''ಮದನ ಮಾಹೇಶ್ವರ ಪರಹಿತ'' ಈ ರೀತಿ ಉಲ್ಲೇಖವಿದೆ. ಪದಾದಿಯಲ್ಲಿ ಹ್ರಸ್ವಸ್ವರದ ಬದಲಾಗಿ ದೀರ್ಘಸ್ವರ ಬಳಕೆಯಿದೆ. ಮಸ್ಕಿ ಪರಿಸರದ ಕನ್ನಡದಲ್ಲಿ ದೀರ್ಘಸ್ವರವಾಗಿ ಉಚ್ಚಾರಗೊಳ್ಳುತ್ತಿದೆ. ಮಸ್ಕಿ ಪರಿಸರದ ಶಾಸನದ ಕನ್ನಡ ಮಾಹೇಶ್ವರ, ಮಸ್ಕಿ ಪರಿಸರದ ಕನ್ನಡದಲ್ಲಿ ಮಾಯೇಸ್ವರ ಎಂಬುದಾಗಿ ಬಳಕೆಯಲ್ಲಿದೆ. ಇದೇ ಶಾಸನದ ಸಾಲು ೩೦ ಪುಟಸಂಖ್ಯೆ ೩೨೦ರಲ್ಲಿ ''ಹಲಂಬರಂ ಕೊಂದು ನಾಲರು ಸಾಸಿರದೆಳೂನೂಱ'' ಎಂದಿದೆ. ಇಲ್ಲಿ ಭಾಷಿಕ ಅಂಶ ನಾಲರು ಆಗಿದೆ. ಸಂಖ್ಯಾ ವ್ಯಕ್ತಿಸೂಚಕ ಪದ ಬರಹಕನ್ನಡದಲ್ಲಿ 'ನಾಲ್ವರು' ಎಂದಾಗುತ್ತದೆ. ಮಸ್ಕಿ ಪರಿಸರದ ಶಾಸನದಲ್ಲಿ ವಿಜಾತೀಯ ಸಂಯುಕ್ತಾರಗೊಳ್ಳದೆ ಬಳಕೆಯಲ್ಲಿದೆ. ಮಸ್ಕಿಪರಿಸರದ ಕನ್ನಡದಲ್ಲಿಯೂ ಶಾಸನದ ಬಳಕೆಯನ್ನೆ ಮುಂದುವರೆಸಿ 'ನಾಲರು' ಎಂದು ಬಳಕೆಯಲ್ಲಿದೆ. ಇದೇ ಶಾಸನದ ಸಾಲಿನ ಸಂಖ್ಯೆ ೪೩, ಪುಟ ಸಂಖ್ಯೆ ೩೨೧ರಲ್ಲಿ ''ನಂದಾದೀವಿಗೆ ಯೆಣ್ಣೆಗೆ ತೆಱ ಸಹಿತವಾಗಿ'' ಎಂದು ಮುಂದುವರೆಯುತ್ತಾ ಉಲ್ಲೇಖವಾಗಿದೆ. ಮುಖ್ಯವಾಗಿ ಗಮನಿಸಬೇಕಾದುದು 'ಯೆಣ್ಣೆ' ಮಸ್ಕಿಪರಿಸರದ

ಶಾಸನದಲ್ಲಿ ಪದಾದಿ ಸ್ವರದ ಬದಲಾಗಿ ವ್ಯಂಜನ ಬಳಕೆ ಆಗಿದೆ. ಅನುನಾಸಿಕ 'ಣ'ದ ಬದಲಾಗಿ 'ನ'ವನ್ನು ಬಳಕೆಮಾಡಲಾಗಿದೆ. ಇದೇ ರೀತಿ ಮಸ್ಕಿಪರಿಸರದ ಕನ್ನಡದಲ್ಲಿ 'ಯಣ್ಣಿ' ಎಂದು ಬಳಕೆಯಲ್ಲಿದೆ. ಇದೇ ಶಾಸನ ಮತ್ತೊಂದು ಸಾಲು ೪೫ ಪುಟ ಸಂಖ್ಯೆ ೩.೨೧ರಲ್ಲಿ ಸಂಖ್ಯಾ ಸೂಚಕ ಪದ ಅಯಿವತ್ತು ಎಂದು ಬಳಕೆಯಾಗಿದೆ. ಇದರ ಪ್ರಯೋಗ ''ಹಡಪಕ್ಕೆ ಹೆಱಿಗೆ ಅಯಿವತ್ತು ಹೇಱಿಗೆ'' ಎಂದು ದಾಖಲಾಗಿದೆ. ಇಲ್ಲಿಯ 'ಅಯಿವತ್ತು' ಸಂಖ್ಯಾವಾಚಕ ಬರಹ ಕನ್ನಡದಲ್ಲಿ 'ಐವತ್ತು' ಎಂದು ಬಳಕೆಯಲ್ಲಿದೆ. ಆದರೆ ಮಸ್ಕಿಪರಿಸರದ ಶಾಸನ ಕನ್ನಡದಲ್ಲಿ 'ಐ' ಸ್ವರ ಲೋಪಗೊಂಡು ಸ್ವರದ ಸಹಾಯದಿಂದ 'ಅಯಿವತ್ತು' ಎಂದು ಬಳಕೆಗೊಂಡಿದೆ. ಇದೇ ರೀತಿ ಮಸ್ಕಿ ಪರಿಸರದ ಕನ್ನಡದಲ್ಲಿ 'ಅಯಿವತ್ತು' ಎಂದು ಬಳಕೆಯಲ್ಲಿದೆ. ಇದೇ ಮಲ್ಲಟ ಶಾಸನದಲ್ಲಿ ಸಾಲು ೫೦ ಪುಟಸಂಖ್ಯೆ ೩.೨೧ರಲ್ಲಿ 'ಸುತ್ತಿ' ಎಂದಾಗಿ ಬಳಕೆಯಿದೆ. ಇದರ ಪ್ರಯೋಗ ''ಪಾತಕ ನರನುಂ ಸುತ್ತಿ ಕುಟುಂಬ'' ಈ ರೀತಿ ಉಲ್ಲೇಖಗೊಂಡಿದೆ. ಪದಾಂತ್ಯದಲ್ಲಿ 'ಉ' ಕಾರದ ಬದಲಾಗಿ 'ಇ' ಕಾರ ಬಳಕೆಯಾಗಿದೆ. ಬರಹ ಕನ್ನಡದಲ್ಲಿ ಸುತ್ತು ಎಂದಿರುವ ಪದ ಮಸ್ಕಿ ಪರಿಸರದ ಶಾಸನ ಹಾಗೂ ಮಸ್ಕಿ ಪರಿಸರದ ಕನ್ನಡದಲ್ಲಿ 'ಸುತ್ತಿ' ಬಳಕೆಯಲ್ಲಿದೆ.

ಮಲ್ಲಟದಲ್ಲಿ ದೊರೆತಿರುವ ಕ್ರಿ.ಶ. ೧೧೪೮ರಲ್ಲಿ ಜಗದೇಕಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗಿನ ಶಾಸನ. ಈ ಶಾಸನದಲ್ಲಿ ಉಲ್ಲೇಖವಾಗಿರುವ ಶಾಸನ ಸಂಖ್ಯೆ ೧೦೨, ಸಾಲು ೧೧ ಪುಟ ಸಂಖ್ಯೆ ೩.೨೨ರಲ್ಲಿ 'ಮುಂನ' ಬಳಕೆಯಿದೆ. ಇದರ ಪ್ರಯೋಗ ''ದಾನಕ್ಕಂ ಮುಂನ ನಡವ ಪೂರ್ವ್ವವ್ರಿತ್ತಿಯ'' ಈ ರೀತಿ ಉಲ್ಲೇಖಿಸಲಾಗಿದೆ. ಮುಖ್ಯವಾಗಿ ಭಾಷಿಕವಾಗಿ ಗಮನಿಸಬೇಕಾದ ಅಂಶ 'ಮುಂನ'. ಅನುನಾಸಿಕ 'ನ' ದ ಬದಲಾಗಿ ಅನುಸ್ವರ ಬಳಕೆಯಲ್ಲಿದೆ. ಬರಹ ಕನ್ನಡದಲ್ಲಿ 'ಮುನ್ನ' ಎನ್ನುವುದು ಮಸ್ಕಿ ಪರಿಸರದ ಕನ್ನಡದಲ್ಲಿ ಮುಂಚ್ಯಾಕ, ಮುಂಚ್ಯಾಗ ಎಂದು ಬಳಕೆಯಲ್ಲಿದೆ. ಮಸ್ಕಿಕನ್ನಡ ಬೆಳೆದ ರೂಪವನ್ನು ಮಸ್ಕಿಪರಿಸರದ ಶಾಸನದಲ್ಲಿ ಮುಂನ, ಬರಹ ಕನ್ನಡದಲ್ಲಿ 'ಮುನ್ನ' ಮಸ್ಕಿ ಪರಿಸರದ ಕನ್ನಡದಲ್ಲಿ ಮುಂಚ್ಯಾಕ, ಮುಂಚ್ಯಾಗ, ಎಂಬ ರೂಪವನ್ನು ನೋಡಬಹುದು.

ಕವುತಾಳದಲ್ಲಿ ದೊರೆತಿರುವ ಕ್ರಿ.ಶ. ೧೨೧೭ರ ಯಾದವ ಚಕ್ರವರ್ತಿ ಸೇವುಣ ಸಿಂಗಣನ ಕಾಲದ ಶಾಸನ. ಶಾಸನದ ಸಂಖ್ಯೆ ೧೧೫ ಸಾಲು ೩೫, ಪುಟಸಂಖ್ಯೆ ೩.೩೭ರಲ್ಲಿ 'ಊರವೊಲದೊಳ್' ಎಂದಿದೆ. ಇದರ ಪ್ರಯೋಗ ''ಕವತಾಳ ಊರವೊಲದೊಳ್ ನಾಲ್ಕುಂ'' ಈ ರೀತಿ ಉಲ್ಲೇಖವಿದೆ. ಬರಹಕನ್ನಡದಲ್ಲಿ 'ಊರುಹೊಲದಲ್ಲಿ' ಎಂದಿದೆ. ಮಸ್ಕಿ ಪರಿಸರದ ಕನ್ನಡದಲ್ಲಿ 'ಊರವೊಲದಾಗ' ಎಂದು ಬಳಕೆಯಾಗುತ್ತದೆ. ಅಂದರೆ ಮಸ್ಕಿ ಪರಿಸರದ ಶಾಸನದಲ್ಲಿ ಊರವೊಲದೊಳ್, ಬರಹಕನ್ನಡದಲ್ಲಿ ಊರಹೊಲದಲ್ಲಿ, ಮಸ್ಕಿ ಪರಿಸರದ ಕನ್ನಡದಲ್ಲಿ ಊರವೊಲದಾಗ ಎಂದು ಮಸ್ಕಿ ಕನ್ನಡದ ಬೆಳವಣಿಗೆಯನ್ನು ಗುರುತಿಸಬಹುದು. ಈ ರೀತಿಯಾಗಿ ಮಸ್ಕಿಪರಿಸರದ ಶಾಸನಗಳ ಕನ್ನಡಕ್ಕೂ ಇಂದಿನ ಮಸ್ಕಿ ಪರಿಸರದ ಕನ್ನಡಕ್ಕೂ ಸಂಬಂಧ ಕಲ್ಪಿಸಬಹುದಾಗಿದೆ.

ಮಸ್ಕಿಕನ್ನಡದಲ್ಲಿ ವಿಭಕ್ತಿ ಪ್ರತ್ಯಯಗಳ ಬೆಳವಣಿಗೆ

ಮಸ್ಕಿ ಪರಿಸರದ ಶಾಸನಗಳಿಂದ ಮಸ್ಕಿ ಪರಿಸರದ ಕನ್ನಡ ಬೆಳೆದ ಬಗೆಯನ್ನು ಗುರುತಿಸಬಹುದಾಗಿದೆ. ಮಸ್ಕಿ ಪರಿಸರದ ಶಾಸನಗಳಲ್ಲಿಯ ವಿಭಕ್ತಿ ಪ್ರತ್ಯಯಕ್ಕೂ ಬರಹಕನ್ನಡ ವಿಭಕ್ತಿ ಪ್ರತ್ಯಯಕ್ಕೂ ವ್ಯತ್ಯಾಸವನ್ನು ಗುರುತಿಸಲಾಗಿದೆ. ನಂತರ ಮಸ್ಕಿ ಪರಿಸರದ ಶಾಸನಗಳ ವಿಭಕ್ತಿ ಪ್ರತ್ಯಯಗಳು ಇಂದಿನ ಮಸ್ಕಿಪರಿಸರದಲ್ಲಿ

ಬಳಕೆಯಲ್ಲಿರುವ ವಿಭಕ್ತಿಪ್ರತ್ಯಯಗಳಿಗೆ ಸಂಬಂಧವನ್ನು ಗುರುತಿಸಲಾಗಿದೆ. ಮಸ್ಕಿಕನ್ನಡದಲ್ಲಿ ವಿಭಕ್ತಿ ಪ್ರತ್ಯಯಗಳು ಬೆಳವಣಿಗೆಯನ್ನು ತಿಳಿಯಲು ಈ ಮಾದರಿ ಭಾಷಿಕ ವಿಚಾರಗಳು ಗಮನಿಸುವಂತಹ ಅಂಶವಾಗಿದೆ. ಕವುತಾಳದಲ್ಲಿ ದೊರೆತ ಯಾದವ ಚಕ್ರವರ್ತಿ ಸೇವುಣ ಸಿಂಗಮ ಕ್ರಿ.ಶ. ೧೨೧೭ರಲ್ಲಿ ಆಳ್ವಿಕೆ ಮಾಡುವಾಗಿನ ಶಾಸನ. ಶಾಸನದ ಸಂಖ್ಯೆ ೧೧೫ ಸಾಲು ೩೫ ಪುಟ ಸಂಖ್ಯೆ ೩೩೩ರಲ್ಲಿ ''ನಾಲ್ಕು ದೆಸೆಯೊಳು ಲಿಂಗದ ಕಲ್ಲಂ ನಟ್ಟು'' ಎಂಬ ಉಲ್ಲೇಖವಾಗಿರುವುದು ಗಮನಿಸುವಂತಹ ಅಂಶ. ಪ್ರಸ್ತುತ ಈ ಶಾಸನದಲ್ಲಿ ಭಾಷಿಕವಾಗಿ 'ಲಿಂಗದಕಲ್ಲಂ' ದ್ವಿತೀಯ ವಿಭಕ್ತಿ ಪ್ರತ್ಯಯದ ಅರ್ಥದಲ್ಲಿ ಬಳಕೆಯಲ್ಲಿದೆ. ಆದರೆ ಬರಹ ಕನ್ನಡದಲ್ಲಿ 'ಅನ್ನು' ರೂಪ ಬಳಕೆಯಲ್ಲಿದೆ. ಬರಹ ಕನ್ನಡದಲ್ಲಿ 'ಲಿಂಗದಕಲ್ಲನ್ನು' ಎಂದು ಬಳಕೆಯಲ್ಲಿದ್ದರೆ ಮಸ್ಕಿ ಪರಿಸರದ ಕನ್ನಡದಲ್ಲಿ 'ಲಿಂಗದಕಲ್ಲ'ನ್ನ ಎಂದು ಬಳಕೆಯಲ್ಲಿದೆ. ಮಸ್ಕಿ ಪರಿಸರದಲ್ಲಿ 'ಅನ್ನ' ವಿಭಕ್ತಿ ಪ್ರತ್ಯಯ ಬಳಕೆಯಲ್ಲಿದೆ. ಲಿಂಗದಕಲ್ಲಂ> ಲಿಂಗದಕಲ್ಲನ್ನು>ಲಿಂಗದಕಲ್ಲನ್ನ ಈರೀತಿ ಮಸ್ಕಿ ಪರಿಸರದ ಕನ್ನಡದಲ್ಲಿ ದ್ವಿತೀಯ ವಿಭಕ್ತಿ ಪ್ರತ್ಯಯ ಬಳಕೆಯಲ್ಲಿರುವುದನ್ನು ಕಾಣಬಹುದು.

ಇದೇ ರೀತಿ ಇದೇ ಶಾಸನದ ಸಾಲು ೪೪ ಪುಟಸಂಖ್ಯೆ ೩೩೪ರಲ್ಲಿ 'ಆ ಬ್ರಾಹ್ಮಣರನಾ ಕವಿಲೆಯಂ ವಾರಣಾಸಿಯೊಳು' ಎಂದು ದಾಖಲಾಗಿದೆ. 'ಕವಿಲೆಯಂ' ಎಂಬಲ್ಲಿ ದ್ವಿತೀಯ ವಿಭಕ್ತಿ ಪ್ರತ್ಯಯ ಬಳಕೆ ಯಲ್ಲಿರುವುದನ್ನು ಗಮನಿಸಬಹುದು. ಬರಹ ಕನ್ನಡದಲ್ಲಿ 'ಕವಿಲೆಯನ್ನು' ಎಂದು ಬಳಕೆಯಾಗುವುದು. ಮಸ್ಕಿ ಪರಿಸರದ ಕನ್ನಡದಲ್ಲಿ 'ಕವಿಲಿನ್ನ' ಎಂದು ಬಳಕೆಗೊಂಡು 'ಇನ್ನ' ರೂಪ ದ್ವಿತೀಯ ವಿಭಕ್ತಿ ಅರ್ಥದಲ್ಲಿ ಪ್ರಯೋಗ ದಲ್ಲಿರುವುದನ್ನು ಗಮನಿಸಬಹುದು. ಅಂದರೆ ಕವಿಲೆಯಂ>ಕವಿಲೆಯನ್ನು>ಕವಿಲಿನ್ನ ಈ ರೀತಿ ದ್ವಿತೀಯಾ ವಿಭಕ್ತಿ ಪ್ರತ್ಯಯದ ಬೆಳವಣಿಗೆ ಪ್ರಕ್ರಿಯೆಯನ್ನು ಕಾಣಬಹುದು.

ತೃತೀಯ : ವಿಭಕ್ತಿಪ್ರತ್ಯಯ ಹಳಗನ್ನಡದಲ್ಲಿ 'ಇಂ' 'ಇಂದ', 'ಇಂದಂ' ಹಾಗೂ ಹೊಸಗನ್ನಡದಲ್ಲಿ 'ಇಂದ' ಎಂಬ ಪ್ರತ್ಯಯದಿಂದ ಸೂಚಿಸಲ್ಪಡುತ್ತದೆ. ಮಲ್ಲಟದಲ್ಲಿ ದೊರೆತ ಕಲ್ಯಾಣದ ಚಾಳುಕ್ಯ ವಿಕ್ರಮನ ಕಾಲದ ಕ್ರಿ.ಶ. ೧೧೯೬ರ ಶಾಸನದಲ್ಲಿ ಉಲ್ಲೇಖವಾಗಿರುವ ಶಾಸನಸಂಖ್ಯೆ ೧೦೧ ಸಾಲು ೩೭ ಪುಟಸಂಖ್ಯೆ ೩೨೦ರಲ್ಲಿ 'ದಾರಿಯಿಂದಂ' ಎಂದು ದಾಖಲಾಗಿದೆ. ಇದರ ಪ್ರಯೋಗ ''ಹುಣಸೆಯ ಹಟ್ಟಿಯ ದಾರಿಯಿಂದಂ ಮೂಡಲು ಗೊಳಯ್ಯನ'' ಈ ರೀತಿಯ ಉಲ್ಲೇಖವಿದೆ. ಪ್ರಸ್ತುತ ಶಾಸನದಲ್ಲಿ ತೃತೀಯಾ ವಿಭಕ್ತಿ ಪ್ರತ್ಯಯ 'ಇಂದಂ' ಭಾಷಿಕವಾಗಿ ಗಮನಿಸಬೇಕಾಗಿದೆ. ಹಳಗನ್ನಡದಲ್ಲಿ 'ದಾರಿಯಿಂದಂ' ಬರಹಕನ್ನಡದಲ್ಲಿ 'ದಾರಿಯಿಂದ' ಎಂದು ಬಳಕೆಯಿದೆ. ಮಸ್ಕಿಪರಿಸರದ ಕನ್ನಡದಲ್ಲಿ 'ದಾರ್‍ರಿಂದ' ಎಂಬುದಾಗಿ ಬಳಕೆಯಾಗುತ್ತದೆ. ಅಂದರೆ ಮಸ್ಕಿ ಪರಿಸರದ ಕನ್ನಡದಲ್ಲಿ 'ರಿಂದ' ತೃತೀಯಾ ವಿಭಕ್ತಿ ಪ್ರತ್ಯಯ ಅರ್ಥದಲ್ಲಿ ಬಳಕೆಯಲ್ಲಿದೆ. ಹಾಗೆಯೇ ತೃತೀಯ ವಿಭಕ್ತಿ ರೂಪವನ್ನು ಮಸ್ಕಿ ಪರಿಸರದ ಕನ್ನಡದಲ್ಲಿ ದಾರಿಯಿಂದಂ>ದಾರಿಯಿಂದ>ದಾರ್‍ರಿಂದ ಈ ರೀತಿ ಅದರ ಬಳವಣಿಗೆಯನ್ನು ಗುರುತಿಸಬಹುದು.

ಇದೇ ಶಾಸನದ ಸಾಲು ೪೭ ಪುಟಸಂಖ್ಯೆ ೩೨೪ರಲ್ಲಿ ''ದೇವರ ಹೂದೋಟಕ್ಕೆ ಹಳ್ಳದಿಂ ಮೂಡಲು'' ಉಲ್ಲೇಖವಿರುವುದನ್ನು ನೋಡಬಹುದು. ಭಾಷಿಕವಾಗಿ 'ಹಳ್ಳದಿಂ' ಎಂಬಲ್ಲಿ ತೃತೀಯ ವಿಭಕ್ತಿ ಪ್ರತ್ಯಯ ಬಳಕೆ ಇದೆ. ಬರಹ ಕನ್ನಡದಲ್ಲಿ 'ಇಂದ' ಪ್ರತ್ಯಯ 'ಹಳ್ಳದಿಂದ' ಎಂದು ಪ್ರಯೋಗವಾಗುತ್ತದೆ. ಆದರೆ ಮಸ್ಕಿಪರಿಸರದ ಕನ್ನಡದಲ್ಲಿ 'ಲೆ' ಪ್ರತ್ಯಯ ಬಳಕೆಗೊಂಡು 'ಅಳ್ಳದ್ಲೆ' ಎಂದು ಪ್ರಯೋಗವಾಗುವುದು.

ಬರಹ ಕನ್ನಡಕ್ಕಿಂತ ಭಿನ್ನವಾಗಿ ತೃತೀಯ ವಿಭಕ್ತಿ ಪ್ರತ್ಯಯ ಮಸ್ಕಿ ಪರಿಸರದ ಕನ್ನಡದಲ್ಲಿ ಬಳಕೆಯಲ್ಲಿದೆ. ಹಳ್ಳದಿಂ>ಹಳ್ಳದಿಂದ>ಅಳ್ಳುದ್ಲೆ ಈ ಕ್ರಮದಲ್ಲಿ ತೃತೀಯ ವಿಭಕ್ತಿ ಪ್ರತ್ಯಯ ಮಸ್ಕಿ ಪರಿಸರದ ಕನ್ನಡದಲ್ಲಿ ಬಳಕೆಯಲ್ಲಿರುವುದನ್ನು ಗಮನಿಸಬಹುದು.

ಚತುರ್ಥಿ: ಕೆ, ಕ್ಕೆ, ಗೆ ಹಳಗನ್ನಡ ಹಾಗೂ ಹೊಸಗನ್ನಡ ಎರಡರಲ್ಲೂ ಚತುರ್ಥಿ ವಿಭಕ್ತಿ ಪ್ರತ್ಯಯಗಳು ಬಳಕೆಯಲ್ಲಿವೆ. ಕವುತಾಳದ ಕ್ರಿ.ಶ. ೧೨೧೬ರ ಯಾದವ ಚಕ್ರವರ್ತಿ ಸೇವುಣ ಸಿಂಗಣನು ರಾಜ್ಯಭಾರ ಮಾಡುವಾಗಿನ ಕಾಲದ ಶಾಸನ. ಈ ಶಾಸನದ ಸಂಖ್ಯೆ ೧೧೫ ಸಾಲು ೨೬ ಪುಟ ೩೩ರಲ್ಲಿ ''ಶ್ರೀಮತು ಹೆಲ್ಲೇಶ್ವರ ದೇವರ್ಗ್ಗೆ ವ್ರಿತ್ತಿ ಕಲ್ಪನ'' ಎಂಬ ಉಲ್ಲೇಖವಿದೆ. ಈ ಉಲ್ಲೇಖದಲ್ಲಿ ಭಾಷಿಕವಾಗಿ ಗಮನಿಸಬಹುದಾದ ಅಂಶ ಎಂದರೆ 'ದೇವರ್ಗ್ಗೆ'. ಇಲ್ಲಿ ಚುತುರ್ಥಿ ವಿಭಕ್ತಿ ಪ್ರತ್ಯಯ ಬಳಕೆಗೊಂಡಿದೆ. ಮಸ್ಕಿ ಪರಿಸರದ ಶಾಸನದಲ್ಲಿ 'ಗ್ಗೆ' ಚತುರ್ಥಿ ವಿಭಕ್ತಿಪ್ರತ್ಯಯ ಬಳಕೆಯಲ್ಲಿದೆ. ಮಸ್ಕಿ ಪರಿಸರದ ಶಾಸನದಲ್ಲಿ ದೇವರ್ಗ್ಗೆ ಬಳಕೆ ರೂಪವು ಬರಹ ಕನ್ನಡದಲ್ಲಿ ದೇವರಿಗೆ, 'ಗೆ' ಚತುರ್ಥಿ ವಿಭಕ್ತಿ ಪ್ರತ್ಯಯ ಪ್ರಯೋಗವಾಗುತ್ತದೆ. ಆದರೆ ಮಸ್ಕಿಪರಿಸರದ ಚತುರ್ಥಿ ವಿಭಕ್ತಿ ಪ್ರತ್ಯಯ ಬಳಕೆ ದೇವ್ರಿಗೆ ಎಂದಾಗುತ್ತದೆ. ಇಲ್ಲಿ 'ಗೆ' ಚತುರ್ಥಿ ವಿಭಕ್ತಿಪ್ರತ್ಯಯ ಬಳಕೆಯನ್ನು ಗಮನಿಸಬಹುದು. ಮಸ್ಕಿಪರಿಸರದ ಕನ್ನಡದಲ್ಲಿ ದೇವರ್ಗ್ಗೆ>ದೇವರಿಗೆ>ದೇವ್ರಿಗೆ ಈ ರೀತಿ ಬೆಳವಣಿಗೆಯನ್ನು ನೋಡಬಹುದು.

ಮಸ್ಕಿಯಲ್ಲಿ ದೊರೆತ ಕ್ರಿ.ಶ. ೧೦೩೨ರ ಜಗದೇಕಮಲ್ಲನ ಕಾಲದ ಶಾಸನ ಈ ಶಾಸನದ ಸಂಖ್ಯೆ ೩೧ ಸಾಲು ೬ ಪುಟ ೧೬೪ರಲ್ಲಿ ಉಲ್ಲೇಖಿಸಿರುವ 'ಮೊಸಂಗೆಯ' ಇದರ ಪ್ರಯೋಗ ''ಪಿರಿಯ ಮೊಸಂಗೆಯ ಏಕಜೆಡೆಯ'' ಮುಂದುವರೆಯುತ್ತದೆ. ಈ ಶಾಸನದಲ್ಲಿ 'ಮೊಸಂಗೆಯ' ಎನ್ನುವಲ್ಲಿ 'ಅ' ಷಷ್ಟಿವಿಭಕ್ತಿ ಪ್ರತ್ಯಯ ಬಳಕೆ ಇರುವುದನ್ನು ಗಮನಿಸಬಹುದು. ಬರಹಕನ್ನಡದಲ್ಲಿ 'ಮಸ್ಕಿಯ' ಎಂದು ಪ್ರಯೋಗವಾಗುತ್ತದೆ. ಮಸ್ಕಿ ಪರಿಸರದ ಕನ್ನಡದಲ್ಲಿ 'ಮಸ್ಕಿಯ' ಎನ್ನುವಲ್ಲಿ 'ಅ' ಷಷ್ಠಿ ವಿಭಕ್ತಿಯ ಬಳಕೆಯಾಗುತ್ತದೆ. ಮೊಸಂಗೆಯ> ಮಸ್ಕಿಯ>ಮಸ್ಕಿಯ ಈ ರೀತಿ ಮಸ್ಕಿಪರಿಸರ ಕನ್ನಡದ ಷಷ್ಠಿ ವಿಭಕ್ತಿ ಪ್ರತ್ಯಯದ ಬೆಳವಣಿಗೆಯನ್ನು ಗುರುತಿಸಬಹುದು.

ಸಪ್ತಮಿ : ಹಳಗನ್ನಡದಲ್ಲಿ 'ಅಲ್', 'ಒಳ್' ಪ್ರತ್ಯಯ ಹೊಸಗನ್ನಡದಲ್ಲಿ ಸಪ್ತಮಿ ವಿಭಕ್ತಿಗೆ ಸಾಮಾನ್ಯವಾಗಿ 'ಅಲ್ಲಿ' ಎಂಬ ಅರ್ಥದಲ್ಲಿ ಬಳಕೆಯಲ್ಲಿದೆ. ಬಲ್ಲಟಗಿಯ ಶಾಸನದಲ್ಲಿ ಸಪ್ತಮಿ ವಿಭಕ್ತಿ ಪ್ರತ್ಯಯದ ಸ್ವರೂಪವನ್ನು ತಿಳಿಯಬಹುದು. ಬಲ್ಲಟಿಗಿಯ ಕ್ರಿ.ಶ. ೧೦೫೪ರ ಚಾಲುಕ್ಯ ಮೊದಲನೆಯ ತ್ರೈಲೋಕ್ಯಮಲ್ಲ ಸೋಮೇಶ್ವರನ ಆಳ್ವಿಕೆಯ ಕಾಲದ ಶಾಸನದಲ್ಲಿ ಉಲ್ಲೇಖಿತವಾಗಿರುವ ಶಾಸನದ ಸಂಖ್ಯೆ ೯೫ ಸಾಲು ೨೨ ಪುಟಸಂಖ್ಯೆ ೩೧೨ರಲ್ಲಿ 'ಕೋಲೊಳ್' ಎಂದು ದಾಖಲಾಗಿದೆ. ಇದರ ಪ್ರಯೋಗ ''ಪಿರಿಯ ಕೋಲೊಳ್ ಧಾರಾಪೂರ್ವ'' ಮುಂದುವರೆಯುವುದು. ಪ್ರಸ್ತುತ 'ಕೋಲೊಳ್' ಎಂಬಲ್ಲಿ ಸಪ್ತಮಿ ವಿಭಕ್ತಿ ಪ್ರತ್ಯಯ 'ಒಳ್' ಬಳಕೆಯಿರುವುದನ್ನು ಗಮನಿಸಬಹುದು. ಆದರೆ ಬರಹಕನ್ನಡದಲ್ಲಿ 'ಕೋಲಲ್ಲಿ' ಎಂದು 'ಅಲ್ಲಿ' ಪ್ರತ್ಯಯ ಬಳಕೆ ಕಂಡುಬರುತ್ತದೆ. ಬರಹಕನ್ನಡದ ಅಲ್ಲಿ ಸಪ್ತಮಿ ವಿಭಕ್ತಿ ಪ್ರತ್ಯಯ ಮಸ್ಕಿಪರಿಸರದ ಕನ್ನಡದಲ್ಲಿ 'ಕೋಲಾಗ' ಎಂದು ಅಗ ಪ್ರತ್ಯಯ ಬಳಕೆಗೊಳ್ಳುವುದನ್ನು ಕಾಣಬಹುದು. ಇದೇ ರೀತಿಯಾಗಿ ಮಲ್ಲಟದ ಕ್ರಿ.ಶ. ೧೧೯೬ರ ಕಲ್ಯಾಣದ ಚಾಳುಕ್ಯ ವಿಕ್ರಮನ ಕಾಲದ ಶಾಸನದಲ್ಲಿ ಉಲ್ಲೇಖಿತವಾಗಿರುವ

ಶಾಸನದ ಸಂಖ್ಯೆ ೧೦೭, ಸಾಲು ೩೬, ಪುಟಸಂಖ್ಯೆ ೩೨೦ರಲ್ಲಿ 'ಕಲ್ಲಯ್ಯಂಗೆ' ಎಂದು ದಾಖಲಾಗಿದೆ. ಇದರ ಪ್ರಯೋಗ ''ದಾನಕ್ಕಂ ಗಣಮಠವಾಗಿ ಕಲ್ಲಯ್ಯಂಗೆ ಸರ್ವ್ವಭಾದೆ'' ಈ ರೀತಿಯ ಉಲ್ಲೇಖವಾಗಿರುವುದನ್ನು ಕಾಣಬಹುದು. ಪ್ರಸ್ತುತ ಶಾಸನದಲ್ಲಿ 'ಕಲ್ಲಯ್ಯಂಗೆ' ಎಂಬ ನಾಮಪದದಲ್ಲಿ 'ಗೆ' ಚತುರ್ಥಿ ವಿಭಕ್ತಿ ಪ್ರತ್ಯಯ ಬಳಕೆಯಾಗಿದೆ. ಬರಹಕನ್ನಡದಲ್ಲಿ 'ಗೆ' ಚತುರ್ಥಿ ವಿಭಕ್ತಿ ಪ್ರತ್ಯಯ ಬಳಕೆಗೊಂಡು ಕಲ್ಲಯ್ಯನಿಗೆ ಆಗುತ್ತದೆ. ಮಸ್ಕಿ ಪರಿಸರದ ಕನ್ನಡದಲ್ಲಿ 'ಅಗ' ರೂಪ ಬಳಕೆಯಲ್ಲಿದ್ದು ಕಲ್ಲಯ್ಯಗ ಎಂದು ಉಚ್ಚಾರಗೊಳ್ಳುತ್ತದೆ. ಮಸ್ಕಿ ಪರಿಸರದ ಶಾಸನ ರೂಪ ಮಸ್ಕಿ ಪರಿಸರದ ಕನ್ನಡದಲ್ಲಿ ಕಲ್ಲಯಂಗೆ>ಕಲ್ಲಯನಿಗೆ>ಕಲ್ಲಯ್ಯಗ ಈ ರೀತಿ ಬೆಳವಣಿಗೆ ಅಗಿರುವುದನ್ನು ನೋಡಬಹುದು.

ಷಷ್ಟಿ : ಮಸ್ಕಿಯಲ್ಲಿ ದೊರೆತ ಕ್ರಿ.ಶ. ೧೦೩೨ರ ಚಾಳುಕ್ಯ ಅರಸ ಜಗದೇಕಮಲ್ಲನ ಆಳ್ವಿಕೆ ಕಾಲದ ಶಾಸನ. ಈ ಶಾಸನದಲ್ಲಿ ಮಸ್ಕಿ ಕನ್ನಡದ ಷಷ್ಟಿ ವಿಭಕ್ತಿ ಪ್ರತ್ಯಯದ ಸ್ವರೂಪವನ್ನು ತಿಳಿಯಬಹುದು. ಶಾಸನ ಸಂಖ್ಯೆ ೩೩ ಸಾಲು ೯ ಪುಟಸಂಖ್ಯೆ ೧೬೭ರಲ್ಲಿ ''ಸೋದೊರೆ (ವಡಿ) ಯರಂ ಕಾಳಿದಾಸಯ್ಯನ'' ಮುಂದುವರೆಯುತ್ತದೆ. ಈ ಉಲ್ಲೇಖದಲ್ಲಿ 'ಕಾಳಿದಾಸಯ್ಯನ' ಎಂಬಲ್ಲಿ ಷಷ್ಟಿ ವಿಭಕ್ತಿ ಪ್ರತ್ಯಯ 'ಅ' ಬಳಕೆ ಇದೆ. ಬರಹ ಕನ್ನಡದಲ್ಲಿ ಕಾಳಿದಾಸಯ್ಯನ ಎಂಬ ಚತುರ್ಥಿ ವಿಭಕ್ತಿ 'ಅ' ಪ್ರತ್ಯಯ ಪ್ರಯೋಗವಾಗುತ್ತದೆ. ಆದರೆ ಮಸ್ಕಿ ಪರಿಸರದ ಕನ್ನಡದಲ್ಲಿ 'ಕಾಲಿದಾಸಯ್ನ' ಎಂದು ಬಳಕೆಯಾಗುತ್ತದೆ. ಮಸ್ಕಿ ಪರಿಸರದ ಶಾಸನದ ರೂಪವು ಕಾಳಿದಾಸಯ್ಯನ>ಕಾಳಿದಾಸಯ್ಯನ>ಕಾಲಿದಾಸಯ್ನ ಎಂಬುದಾಗಿ ಮಸ್ಕಿ ಪರಿಸರದ ಕನ್ನಡ ಬೆಳವಣಿಗೆ ಆಗಿದೆ ಎಂದೆನಿಸುತ್ತದೆ. ಇನ್ನೊಂದು ಕವುತಾಳದ ಕ್ರಿ.ಶ. ೧೨೧೭ರ ಯಾದವ ಚಕ್ರವರ್ತ್ರಿ ಸೇವುಣ ಸಿಂಗಣನು ರಾಜ್ಯಭಾರ ಮಾಡುತ್ತಿದ್ದಾಗಿನ ಶಾಸನದಲ್ಲಿ, ಶಾಸನದ ಸಂಖ್ಯೆ ೧೧೫ ಸಾಲು ೩೫ ಪುಟಸಂಖ್ಯೆ ೩೩೩ರಲ್ಲಿ 'ಊರವೊಲದೊಳ್' ಎಂದು ದಾಖಲಾಗಿದೆ. ಇದರ ಪ್ರಯೋಗ ''ಕವತಾಳ ಊರವೊಲದೊಳ್ ನಾಲ್ಕುಂ ದಿಕ್ಕಿನೊಳು'' ಮುಂದುವರೆಯುತ್ತದೆ. ಪ್ರಸ್ತುತ ಶಾಸನದಲ್ಲಿ 'ಊರವೊಲದೊಳ್' ಎಂಬಲ್ಲಿ ಸಪ್ತಮಿ ವಿಭಕ್ತಿ ಪ್ರತ್ಯಯ ಬಳಕೆಯಾಗಿದೆ. ಆದರೆ ಬರಹಕನ್ನಡದಲ್ಲಿ 'ಅಲ್ಲಿ' ಪ್ರತ್ಯಯದೊಂದಿಗೆ 'ಊರಹೊಲದಲ್ಲಿ' ಎಂಬ ಪ್ರಯೋಗವನ್ನು ಕಾಣುತ್ತೇವೆ. ಬರಹಕನ್ನಡಕ್ಕಿಂತ ಭಿನ್ನವಾಗಿ ಮಸ್ಕಿ ಪರಿಸರದ ಕನ್ನಡದಲ್ಲಿ 'ಊರವೊಲ್ಟಾಗ' ಎಂದು 'ಅಗ' ಪ್ರತ್ಯಯದ ಬಳಕೆಯನ್ನು ನೋಡುತ್ತೇವೆ. ಊರವೊಲದೊಳ್>ಊರಹೊಲದಲ್ಲಿ>ಊರವಲ್ಟಾಗ ಈ ರೀತಿಯಾಗಿ ಮಸ್ಕಿಪರಿಸರದಲ್ಲಿ ವಿಭಕ್ತಿ ಪ್ರತ್ಯಯಗಳು ಬೆಳವಣಿಗೆ ಆಗಿರುವುದನ್ನು ನೋಡಬಹುದು.

ಅಧ್ಯಾಯ ೩

ಮುಸ್ಲಿಕನ್ನಡದ ಧ್ವನಿ ರಚನೆ

ಅಧ್ಯಾಯ ೩

ಮಸ್ಕಿಕನ್ನಡದ ಧ್ವನಿ ರಚನೆ

ಪ್ರವೇಶ

ಸಮಾಜದಲ್ಲಿರುವ ಅನೇಕ ವ್ಯವಸ್ಥೆಗಳಂತೆ ಭಾಷೆಯೂ ಒಂದು ವ್ಯವಸ್ಥೆ. ನಮ್ಮ ಭಾವನೆಗಳನ್ನು ಬೇರೊಬ್ಬರೊಂದಿಗೆ ಹಂಚಿಕೊಳ್ಳುವಾಗ ಒಂದೊಂದು ಭಾಷೆಯಲ್ಲಿ ಒಂದೊಂದು ಕ್ರಮಬದ್ಧತೆಯನ್ನು ಅನುಸರಿಸುತ್ತೇವೆ. ಮಾನವ ಸಂಘಜೀವಿ. ಅವನು ಒಂದಲ್ಲಾ ಒಂದು ಸಮಾಜದ ಸದಸ್ಯನಾಗಿರುತ್ತಾನೆ. ಅವನು ಸಮಾಜದಲ್ಲಿ ಪ್ರಧಾನವಾಗಿ ಭಾಷೆಯ ಮೂಲಕವೇ ವ್ಯವಹರಿಸುತ್ತಾನೆ. ಈ ಭಾಷೆಯಿಂದಾಗಿ ಅವನ ವ್ಯವಹಾರವೆಲ್ಲಾ ಸುಗಮವಾಗಿವೆ. ಭಾಷೆ ಕೇವಲ ಅಭಿವ್ಯಕ್ತಿ ಮಾಧ್ಯಮವಷ್ಟೆ ಅಲ್ಲ, ಅದು ಸಾಹಿತ್ಯವನ್ನು ಬೆಳೆಸುವ ಸಂಸ್ಕೃತಿಯನ್ನು ಅರಳಿಸುವ ಮಹತ್ತರ ಸಾಧನ.[೧]

ಭಾಷೆ ನಿಂತ ನೀರಾಗಿರುವುದಿಲ್ಲ. ನದಿಯಂತೆ ಸದಾ ಹರಿಯುತ್ತಿರುತ್ತದೆ. ಹಾಗಾಗಿ ನಿರಂತರವಾಗಿ ಬದಲಾವಣೆಗೆ ಒಳಪಡುತ್ತಾ ಬೆಳೆಯುತ್ತಿರುತ್ತದೆ. ಬಳಕೆ ಮತ್ತು ಉಚ್ಚಾರಣೆಯಲ್ಲಿ ಆದಷ್ಟು ಸರಳ ಹಾಗೂ ಸುಲಭಗೊಳಿಸುವುದು ಈ ಬದಲಾವಣೆಯ ಮುಖ್ಯ ಉದ್ದೇಶ. ಮೊದಲು ಧ್ವನಿರಚನೆ, ಪದರಚನೆಯಲ್ಲಿ ಕಾಣಿಸಿಕೊಂಡು ತರುವಾಯ ಉಪಭಾಷೆಗಳ ಅಸ್ಥಿತ್ವಕ್ಕೆ ಕಾರಣವಾಗುವುದು. ''ಒಂದು ಭಾಷಾ ರಚನೆಯಲ್ಲಿ ಕಂಡುಬರುವ ಬದಲಾವಣೆಗೆ ಆ ಭಾಷೆಯಲ್ಲಿ ಕಂಡುಬರುವ ಧ್ವನಿ ಬದಲಾವಣೆ ಪ್ರಮುಖ ಪಾತ್ರವಹಿಸುತ್ತದೆ.[೨]

''ಉಚ್ಚರಿತ ಧ್ವನಿಗಳು ಭಾಷೆಯಿಂದ ಭಾಷೆಗೆ ಒಂದೇ ಆಗಿರದೆ ಬೇರೆ ಬೇರೆ ಆಗಿರುತ್ತವೆ. ಅಂತಹ ಧ್ವನಿಗಳೆಲ್ಲ ಒಂದೇ ಭಾಷೆಯಲ್ಲಿ ಒಂದು ಪಕ್ಕ ಕಂಡು ಬಂದರೂ ಅವುಗಳ ಗುಣಧರ್ಮ ಬೇರೆ ಬೇರೆಯಾಗಿರುತ್ತದೆ. ಹೀಗಾಗಿ ಉಚ್ಚರಿತ ಧ್ವನಿಗಳು ಪ್ರತಿಯೊಂದು ಭಾಷೆಯಲ್ಲೂ ತಮ್ಮದೇ ಆದ ರೀತಿಯಲ್ಲಿರುತ್ತವೆ. ಅಂತಹ ಉಚ್ಚರಿತ ಧ್ವನಿಗಳ ವ್ಯವಸ್ಥೆಯನ್ನು ಆ ಭಾಷೆಯ ಧ್ವನಿವ್ಯವಸ್ಥೆ ಎಂದು ಕರೆಯಲಾಗುವುದು.[೩]

ಒಂದು ಸಮಾಜದ ಜನರು ತಮ್ಮ ಆಂತರಿಕ ಭಾವನೆಗಳನ್ನು ಮತ್ತು ಬಯಕೆಗಳನ್ನು ಇತರರಿಗೆ ತಿಳಿಸಲು ತಮ್ಮ ಉಚ್ಚಾರಣಾವಲಯಗಳ ಸಹಾಯದಿಂದ ಹೊರಬರುವ ಉಚ್ಚರಿತ ಧ್ವನಿ ಸಂಕೇತಗಳನ್ನು ಬಳಸುವುದನ್ನೇ ಒಟ್ಟಾರೆಯಾಗಿ 'ಭಾಷೆ' ಎನ್ನಬಹುದು. ಭಾಷೆ ಉಚ್ಚರಿತ ಧ್ವನಿಗಳ ಒಂದು ಸಮೂಹ,

ಅದು ಉಚ್ಚರಿತ ಧ್ವನಿ ಸಂಕೇತಗಳ ಒಂದು ವ್ಯವಸ್ಥೆಯೂ ಆಗಿರುತ್ತದೆ. ಮಾನವನು ಅಸಂಖ್ಯಾತ ಧ್ವನಿಗಳನ್ನು ಹೊರಡಿಸಬಹುದಾದರೂ ಎಲ್ಲಾ ಧ್ವನಿಗಳನ್ನು ಅವನು ತನ್ನ ಭಾಷೆಯಲ್ಲಿ ಅಥವಾ ಬೇರೆ ಭಾಷೆಗಳಲ್ಲಿ ಅಳವಡಿಸಿಕೊಂಡಿರುವುದಿಲ್ಲ. ಅಸಂಖ್ಯಾತ ಧ್ವನಿಗಳಲ್ಲಿ ತನ್ನ ಅನುಕೂಲತೆಗೆ ತಕ್ಕಂತೆ ಕೆಲಸವನ್ನು ಆಯ್ದುಕೊಂಡು ಅವುಗಳನ್ನು ಮಾತ್ರ ತನ್ನ ಆಡುನುಡಿಯಲ್ಲಿ ಬಳಸುತ್ತಾನೆ. ಆಡುನುಡಿ ಎಂದರೆ 'ನಿರ್ದಿಷ್ಟ ಗುಂಪಿನ ಜನರು ದಿನ ನಿತ್ಯ ಬಳಸುವ ನಿರ್ದಿಷ್ಟ ಭಾಷೆ'. ಆಡುನುಡಿ ಒಂದು ಜೀವಂತ ಭಾಷೆಯ ಲಕ್ಷಣವೂ ಆಗಿರುತ್ತದೆ. ಆಡುನುಡಿ ಉಚ್ಚಾರಣೆಗಳನ್ನು ಅವಲಂಬಿಸಿರುತ್ತದೆ. ಈ ಹಿನ್ನೆಲೆಯಿಂದ ಪ್ರಸ್ತುತ ಅಧ್ಯಾಯದಲ್ಲಿ ಉಚ್ಚಾರಣೆಗೆ ಒತ್ತು ನೀಡಿ ಮಸ್ಕಿಕನ್ನಡದ ಉಚ್ಚಾರಣೆಯ ಧ್ವನಿ ನಿಯಮಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಮಸ್ಕಿಕನ್ನಡದ ಧ್ವನಿರಚನೆ, ಬರಹ ಕನ್ನಡಕ್ಕಿಂತ ಯಾವ ರೀತಿ ಭಿನ್ನವಾಗಿದೆ ಎಂಬುದನ್ನು ಧ್ವನಿರಚನಾ ಮೂಲಕ ಮುಖ್ಯವಾಗಿ ಮೂರು ಸಾಮಾಜಿಕ ವರ್ಗಗಳಾದ ಲಿಂಗಾಯತ, ನಾಯಕ ಹಾಗೂ ಹರಿಜನರ ಉಚ್ಚಾರಣೆಯನ್ನು ಗಮನಿಸಿ ತೋರಿಸಲಾಗಿದೆ.

ಒಂದು ಭಾಷೆಯಲ್ಲಿ ಪ್ರಾದೇಶಿಕ ಹಾಗೂ ಸಾಮಾಜಿಕ ಪ್ರಭೇದಗಳಿಗೆ ಅನುಸಾರವಾಗಿ ಧ್ವನಿಗಳ ಸಂಖ್ಯೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಮಸ್ಕಿಪರಿಸರದ ಕನ್ನಡದಲ್ಲಿ ಸ್ವರ, ವ್ಯಂಜನ ಬಳಕೆಯಲ್ಲಿರುವುದನ್ನು ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯಿಂದ ಅವುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಮಸ್ಕಿಕನ್ನಡದ ಸಮಾಜದಲ್ಲಿ ಹೆಚ್ಚು ಜನಸಂಖ್ಯೆ ಮುಖ್ಯವಾಗಿ ಮೂರು ವರ್ಗಗಳಲ್ಲಿ ಕಂಡುಬರುತ್ತವೆ. ಅತಿಹೆಚ್ಚು ಸಂಖ್ಯೆ ಲಿಂಗಾಯತರು, ನಂತರದಲ್ಲಿ ನಾಯಕ, ಹರಿಜನ ವಾಸವಾಗಿದ್ದಾರೆ. ಮುಖ್ಯವಾಗಿ ಈ ಮೂರು ಸಾಮಾಜಿಕ ವರ್ಗಗಳು ಕಂಡುಬರುವುದರಿಂದ ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯಕ್ಕೆ ಬಳಸಿಕೊಳ್ಳಲಾಗಿದೆ. ಅಂದರೆ 'ಮಸ್ಕಿಕನ್ನಡ' ಒಂದು ವಿಶಿಷ್ಟವಾದ ಪ್ರಾದೇಶಿಕ ಪ್ರಭೇದ ಎಂದು ತೋರಿಸುವುದಕ್ಕೆ ಈ ಸಾಮಾಜಿಕ ವರ್ಗಗಳು ಮಾತನಾಡುವ ಕನ್ನಡದ ರಚನೆಯನ್ನು ತೌಲನಿಕವಾಗಿ ನೀಡಲಾಗಿದೆ. ಇದರಿಂದ ಮಸ್ಕಿಕನ್ನಡದ ಸ್ವರೂಪವನ್ನು ತಿಳಿಯಬಹುದಾಗಿದೆ.

ಮಸ್ಕಿಕನ್ನಡದಲ್ಲಿ ಮಾತಾಡುವ ಕನ್ನಡ ಭಾಷೆಯಲ್ಲಿ ೧೬ ಸ್ವರಗಳು ಬಳಕೆಯಲ್ಲಿವೆ. ಮಸ್ಕಿಕನ್ನಡದಲ್ಲಿ ಮೂಲ ಕನ್ನಡಕ್ಕೆ ಕಲ್ಪಿಸಲಾದ ಹತ್ತು ಸ್ವರಗಳೂ ಬಳಕೆಯಲ್ಲಿವೆ. ಅದರೊಂದಿಗೆ 'ಅ್ಯ' ಮತ್ತು 'ಆ್ಯ' ಸ್ವರಗಳು ಹಾಗೂ 'ಅ್ವ' ಮತ್ತು 'ಆ್ವ' ಸ್ವರಗಳೂ ಬಳಕೆಯಲ್ಲಿವೆ. ಈ ಎರಡು ಸ್ವರಗಳು ಬರಹ ಕನ್ನಡದಲ್ಲಿ ಬಳಕೆಯಲ್ಲಿರುವ ಹ್ರಸ್ವಸ್ವರ ಹಾಗೂ ದೀರ್ಘಸ್ವರದಂತೆ ಇರುವುದನ್ನು ಗಮನಿಸಬಹುದು. ಇದೇ ರೀತಿ 'ಅ್ಹ' ಧ್ವನಿಯನ್ನು 'ಉ್' ಧ್ವನಿಯನ್ನು ಮಸ್ಕಿಕನ್ನಡದಲ್ಲಿ ಗುರುತಿಸಬಹುದು. ೧೫ ವ್ಯಂಜನಗಳು ೦೮ ಅವರ್ಗೀಯ ವ್ಯಂಜನಗಳನ್ನು ಮಸ್ಕಿ ಕನ್ನಡದಲ್ಲಿ ಬಳಕೆಯಲ್ಲಿವೆ. 'ಚ್ಹ' ಮತ್ತು 'ಜ್ಹ' ಎರಡು ವ್ಯಂಜನಗಳ ಬಳಕೆ ಕಂಡುಬರುತ್ತದೆ. ೩೯ ಧ್ವನಿಗಳು ಮಸ್ಕಿಕನ್ನಡದಲ್ಲಿ ಕಂಡುಬರುತ್ತದೆ. 'ಮಸ್ಕಿಕನ್ನಡ' ಎಂದರೆ ಮಸ್ಕಿಪರಿಸರದಲ್ಲಿ ಮಾತನಾಡುವ ಕನ್ನಡ. ಮಸ್ಕಿ ಸುತ್ತಮುತ್ತ ಪ್ರದೇಶಗಳಲ್ಲಿ ವಾಸಿಸುವ ಜನರ ಕನ್ನಡದ ಉಚ್ಚಾರಣೆಯನ್ನು ಗಮನಿಸಿ ದಾಖಲಿಸಲಾಗಿದೆ. ಇಲ್ಲಿ ಧ್ವನಿಮಾಗಳನ್ನು ನೇರವಾಗಿ ವಿಶ್ಲೇಷಣೆ ಮಾಡದೆ ನೇರವಾಗಿ ಜನ ಸಾಮಾನ್ಯರು ಮಾತನಾಡುವ ಕನ್ನಡವನ್ನು ಸಂಗ್ರಹಿಸಿ ಕೆಲವು ನಿಯಮಗಳನ್ನು ರೂಪಿಸಿ ವಿಶ್ಲೇಷಣೆ ಮಾಡಲಾಗಿದೆ. ಅಕ್ಷರ ರಚನೆ, ಸಂಧಿ ನಿಯಮಗಳನ್ನು ವಿಶ್ಲೇಷಣೆಗೆ ಒಳಪಡಿಸಿಲ್ಲ.

ಧ್ವನಿಮಾ ವ್ಯವಸ್ಥೆ

ಸ್ವರಗಳ ಪಟ್ಟಿ ೧

ಉಚ್ಚಾರಣಾಸ್ಥಾನ

ಉಚ್ಚಾರಣಾಸ್ಥಿತಿ		ಅಗ್ರ		ಮಧ್ಯ		ಪಶ್ಚ	
ತುಟಿಸ್ಥಿತಿ		ಅಗೋಳ	ಗೋಳ	ಅಗೋಳ	ಗೋಳ	ಅಗೋಳ	ಗೋಳ
ಉನ್ನತ	ಹ್ರಸ್ವ	i ಇ					u ಉ
	ದೀರ್ಘ	i: ಈ					u: ಊ
ಉನ್ನತ ಮಧ್ಯ	ಹ್ರಸ್ವ	e ಎ					o ಒ
	ದೀರ್ಘ	e ಏ					o: ಓ
ನಡುಮಧ್ಯ	ಹ್ರಸ್ವ			ə ಅ಼			
	ದೀರ್ಘ						
ಅವನತಮಧ್ಯ	ಹ್ರಸ್ವ	æ ವ್ಯ					
	ದೀರ್ಘ	æ ಏ್ಯ					
ಅವನತ	ಹ್ರಸ್ವ			a ಅ			
	ದೀರ್ಘ			a: ಆ			

ವ್ಯಂಜನಗಳ ಪಟ್ಟಿ ೧

ಉಚ್ಚಾರಣಾಸ್ಥಾನ

ಉಚ್ಚಾರಣಾ ರೀತಿ

ಸ್ವರತಂತುವಿನ	ಉಭಯೋಷ್ಠ್ಯ		ದಂತೋಷ್ಠ್ಯ		ದಂತ್ಯ		ಮೂರ್ಧನ್ಯ		ತಾಲವ್ಯ		ಕಂಠ್ಯ	
ಸ್ಥಾನ	ಅಘೋಷ	ಘೋಷ	ಅಘೋಷ	ಘೋಷ	ಅಘೋಷ	ಘೋಷ	ಅಘೋಷ	ಘೋಷ	ಅಘೋಷ	ಘೋಷ	ಅಘೋಷ	ಘೋಷ
ಅಲ್ಪಪ್ರಾಣ	ಪ್	ಬ್			ತ್	ದ್	ಟ್	ಡ್	ಚ್ ಚ್$_\infty$	ಜ್ ಜ್$_\infty$	ಕ್	ಗ್
ಅನುನಾಸಿಕ		ಮ್				ನ್		ಣ್				
ಸಂಘರ್ಷಗಳು					ಸ್		ಷ್		ಶ್			
ಪಾರ್ಶ್ವಿಕಗಳು						ಲ್		ಳ್				
ಕಂಪಿತ						ರ್						
ಅರ್ಧಸ್ವರಗಳು		ವ್								ಯ್		

ತಾಲವ್ಯ ಸ್ಪರ್ಶಗಳ ಪದದಲ್ಲಿರುವ 'ಅ' ಕಾರ 'ಎ' ಕಾರವಾಗುವುದು.

'ಅ' ಕಾರ ವಿಭಜನೆ.

ಪದಾದಿಯ 'ಇ' ಕಾರ 'ಎ' ಕಾರವಾಗುವುದು.

ಪದಮಧ್ಯದ 'ಇ' ಕಾರ 'ಉ' ಕಾರವಾಗುವುದು.

ಪದ ಮಧ್ಯಸ್ವರ ಲೋಪಗೊಂಡು 'ಉ್' ಸ್ವರ ಬಂದು ಸೇರುವುದು.

ಪದಾಂತ್ಯದ 'ಉ' ಕಾರ 'ಅ್ಹ' ಕಾರವಾಗುವುದು.

ಪದಾಂತ್ಯದ 'ಉ' ಕಾರ 'ಅ' ಕಾರೆವಾಗುವುದು.

ಪದಾಂತ್ಯದ 'ಉ' ಕಾರ 'ಒ' ಕಾರವಾಗುವುದು.

ಪದಾಂತ್ಯದ 'ಎ' ಕಾರ 'ಅ' ಕಾರವಾಗುವುದು.

ಪದಾದಿಯ 'ಎ' ಕಾರ 'ಅ್ಯ' ಕಾರವಾಗುವುದು.

ಪದಾಂತ್ಯದ 'ಎ' ಕಾರ 'ಇ' ಕಾರವಾಗುವುದು.

ಪದಾದಿಯ 'ಎ' ಕಾರ 'ಯ' ಕಾರವಾಗುವುದು.

ಪದಾದಿಯ 'ಏ' ಕಾರ 'ಯಾ' ಕಾರವಾಗುವುದು.

ಪದಾದಿಯ 'ಏ' ಕಾರ 'ಆ್ಯ' ಕಾರವಾಗುವುದು.

'ಮ' ಕಾರದ ಪದದಲ್ಲಿರುವ 'ಓ' ಕಾರ 'ಅ' ಕಾರವಾಗುವುದು.

ಪದಾದಿಯ 'ಒ' ಕಾರ 'ವ' ಕಾರವಾಗುವುದು.

ಪದಾದಿಯ ಅಕ್ಷರದ ಪದದಲ್ಲಿರುವ 'ಒ', 'ಓ' ಕಾರಗಳು 'ಅ್ವ' ಮತ್ತು 'ಆ್ವ' ಕಾರವಾಗುವುದು.

ಪದಾದಿಯ 'ಓ' ಕಾರ 'ವಾ' ಕಾರವಾಗುವುದು.

ವ್ಯಂಜನಾಂತ ಪದಗಳಲ್ಲಿ ಸ್ವರಾಗಮ.

ಎರಡನೇ ಸ್ವರ ಬಿದ್ದು ಹೋಗುವುದು.

ಪದಾಂತ್ಯದ 'ಉ' ಕಾರ 'ಅ' ಕಾರವಾಗುವುದು.

'ಕ' ಕಾರ 'ಗ' ಕಾರವಾಗುವುದು.

'ಚ' ಕಾರ 'ಜ' ಕಾರಗಳ ವಿಭಜನೆ.

'ಚ' ಮತ್ತು 'ಜ' ಧ್ವನಿಗಳು ಪದಾದಿ ನಂತರ ಪದಮಧ್ಯದಲ್ಲಿ 'ಚ್ಹ' ಮತ್ತು 'ಜ್ಹ' ಗಳಾಗಿ ಬದಲಾಗಿರುವುದು.

'ಚ' ಕಾರ 'ಜ' ಕಾರವಾಗುವುದು.

'ನ' ಕಾರ 'ಲ' ಕಾರವಾಗುವುದು.

'ರ್' ಧ್ವನಿಲೋಪ

'ಸ' ಕಾರ 'ಚ' ಕಾರವಾಗುವುದು.

'ಷ', 'ಶ' ಕಾರವು 'ಸ' ಕಾರವಾಗುವುದು.

'ವ' ಕಾರ ಲೋಪ

'ಹ' ಕಾರ 'ಅ' ಕಾರವಾಗುವುದು.

ಗಲೀಯ ಘರ್ಷ 'ಹ' ಕಾರವು ನಿಮ್ನ ಪಶ್ಚ 'ಆ' ಸ್ವರವಾಗುವುದು.

ಪದಾದಿಯ ಗಲೀಯ ಘರ್ಷ 'ಹ' ಕಾರವು ಉಚ್ಚ ಪಶ್ಚ 'ಉ', 'ಊ' ಸ್ವರವಾಗುವುದು.

ಪದಾದಿಯ 'ಹ' ಕಾರ 'ವ' ಕಾರವಾಗುವುದು.

ಪದಾದಿಯ 'ಹ' ಕಾರ 'ಯ' ಕಾರವಾಗುವುದು.

ಪದಮಧ್ಯ 'ಹ' ಕಾರಲೋಪ.

ವಿಜಾತೀಯ ವ್ಯಂಜನಗಳು ಸಜಾತೀಯ ವ್ಯಂಜನಗಳಾಗುವುದು.

ಅನುನಾಸಿಕ ಲೋಪ.

ಅನುನಾಸಿಕ ಆಗಮನ.

ಈ ರೀತಿ 'ಮಸ್ಕಿಕನ್ನಡದ' ಉಚ್ಚಾರಣೆಯಲ್ಲಿ ಧ್ವನಿರಚನೆ ನಿಯಮಗಳು ವಿಶಿಷ್ಟವಾಗಿದ್ದು; ಅವುಗಳನ್ನು ನಿದರ್ಶನ ಸಹಿತ ಮುಂದೆ ವಿವರಿಸುವ ಪ್ರಯತ್ನ ಮಾಡಲಾಗಿದೆ.

೩.೧. ತಾಲವ್ಯ ಸ್ಪರ್ಶಗಳ ಪದದಲ್ಲಿರುವ 'ಅ' ಕಾರ 'ಎ' ಕಾರವಾಗುವುದು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಚಂಡು	ಚಂಡು	ಚೆಂಡ	ಚೆಂಡ	ಅ>ಅ>ಎ>ಎ
ಜಗ್ಗು	ಜಗ್ಗು	ಜೆಗ್ಗು	ಜೆಗ್ಗು	ಅ>ಅ>ಎ>ಎ
ಜಡಿ	ಜೆಡಿ	ಜೆಡಿ	ಜೆಡಿ	ಅ>ಎ>ಎ>ಎ
ಚಟ್ನಿ	ಚೆಟ್ನಿ	ಚೆಟ್ನಿ	ಚೆಟ್ನಿ	ಅ>ಎ>ಎ>ಎ
ಚಡ್ಡಿ	ಚೆಡ್ಡಿ	ಚೆಡ್ಡಿ	ಚೆಡ್ಡಿ	ಅ>ಎ>ಎ>ಎ
ಚಪ್ಪರ	ಚಪ್ಪರ	ಚೆಪ್ರ	ಚೆಪ್ರ	ಅ>ಅ>ಎ>ಎ
ಚರಿಗೆ	ಚೆರಿಗೆ	ಚೆರ್ಗಿ	ಚೆರ್ಗಿ	ಅ>ಅ>ಎ>ಎ
ಜಗಲಿ	ಜೆಗಲಿ	ಜೆಗ್ಲಿ	ಜೆಗ್ಲಿ	ಅ>ಅ>ಎ>ಎ

ತಾಲವ್ಯ ಸ್ಪರ್ಶಗಳಾದ 'ಚ' 'ಜ' ಗಳ ಅನಂತರ ಬರುವ 'ಅ' ಕಾರವು ಮಸ್ಕಿ ಕನ್ನಡದ ಪ್ರಭೇದದಲ್ಲಿ 'ಎ' ಕಾರವಾಗಿ ಬದಲಾಗಿರುವುದು ಕಾಣಿಸುತ್ತದೆ. ಹೆಚ್ಚಾಗಿ ಈ ಬದಲಾದ ಪ್ರಕ್ರಿಯೆಯು ನಾಯಕ, ಹರಿಜನರ ಉಚ್ಚಾರಣೆಯಲ್ಲಿ ಕಂಡುಬರುವುದು. ಲಿಂಗಾಯತರ ಉಚ್ಚಾರಣೆಯಲ್ಲಿ ಚಂಡು, ಜಗ್ಗು, ಚಪ್ಪರ ಇವುಗಳು ಬದಲಾಗದೆ, ಉಳಿದ ಪದಗಳು ಬದಲಾಗಿವೆ. ಈ ಪ್ರಕ್ರಿಯೆಯೂ ನಾಮಪದ,ಕ್ರಿಯಾಪದಗಳೆರಡಲ್ಲೂ ಕಾಣಿಸುತ್ತದೆ. ಚಪ್ಪರ ಪದ ನಾಯಕ, ಹರಿಜನರ ಮಾತಿನಲ್ಲಿ ವಿಜಾತೀಯ ಸಂಯುಕ್ತಾಕ್ಷರ ಎರಡಕ್ಷರ ಪದವಾಗಿ ಚೆಪ್ರ, ಜೋಪಡಿಯಾಗಿ ಬಳಕೆಯಲ್ಲಿರುತ್ತದೆ.

೩.೨. ಪದಾದಿಯ 'ಇ' ಕಾರ 'ಎ' ಕಾರವಾಗುವುದು

ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಇ>ಎ ಹಾಗೂ ಉ>ಒ ಕಾರ ಸ್ವರ ಬದಲಾವಣೆಯ ಪ್ರಕ್ರಿಯೆ ವಿಶಿಷ್ಟವಾದುದು. ಆದಿ ಅಕ್ಷರದಲ್ಲಿ ಬರುವ 'ಇ' ಕಾರ ಮತ್ತು 'ಉ' ಕಾರ ಸ್ವರಗಳು ವಿಶಿಷ್ಟ ಪರಿಸರದಲ್ಲಿ 'ಎ' ಕಾರ ಮತ್ತು 'ಒ' ಕಾರಗಳಾಗಿ ದ್ರಾವಿಡ ಭಾಷೆಗಳಲ್ಲಿ ಬದಲಾವಣೆಗೊಂಡಿದೆ. ಈ ಪರಿವರ್ತನೆಯ ಕಾರಣವನ್ನು ವಿದ್ವಾಂಸರು ಮೂಲ ಆದಿ ಅಕ್ಷರದಲ್ಲಿ 'ಇ' ಕಾರ ಅಥವಾ 'ಎ' ಕಾರ ಸ್ವರ ಹಾಗೂ ಅದರ ಮುಂದೆ ಯಾವುದಾದರೂ ವ್ಯಂಜನವಿದ್ದು ಆ ವ್ಯಂಜನದ ಮುಂದೆ 'ಅ' ಕಾರ ಬಂದರೆ ಆದಿ ಅಕ್ಷರದಲ್ಲಿ ಇದ್ದ 'ಇ' ಕಾರವು 'ಎ' ಕಾರವಾಗಿ ಹಾಗೂ 'ಉ' ಕಾರವಾಗಿ 'ಒ' ಕಾರ ಬದಲಾವಣೆಯಾಗುತ್ತದೆ ಎಂದು ಹೇಳಿದ್ದಾರೆ. ಮಸ್ಕಿಕನ್ನಡದಲ್ಲಿ ಈ ರೀತಿಯ ಬದಲಾವಣೆಯನ್ನು ನಾಮಪದ, ಕ್ರಿಯಾಪದ, ಗುಣವಾಚಕಗಳಲ್ಲಿ ನಡೆದಿದೆ. ಈ ಬದಲಾವಣೆಯನ್ನು ಬರಹ ಕನ್ನಡದೊಂದಿಗೆ ಮಸ್ಕಿಕನ್ನಡದ ಪದಗಳನ್ನು ಹೋಲಿಸಿ ನೋಡುವುದರಿಂದ ತಿಳಿಯಬಹುದಾಗಿದೆ.

ಬರಹ ಕನ್ನಡ	**ಲಿಂಗಾಯತ**	**ನಾಯಕ**	**ಹರಿಜನ**	**ವ್ಯತ್ಯಾಸ**
ಪಿಟಾರಿ	ಪೆಟಾರಿ	ಪೆಟಾರಿ/ಪ್ಯಾಟರ್ಕಿ	ಪೆಟಾರಿ/ಪ್ಯಾಟರ್ಕಿ	ಇ>ಎ>ಎ>ಎ
ಬಿಳಿಚಕಲ್ಲು	ಬೆಳಚುಕಲ್	ಬೆಳ್ಚಕಲ್	ಬೆಳ್ಚಕಲ್	ಇ>ಎ>ಎ>ಎ
ಇದರು	ಎರದು	ಎದ್ರು	ಎದ್ರು	ಇ>ಎ>ಎ>ಎ
ಬಿಳಿ	ಬೆಳ್ಳಗ	ಬೆಳ್ಗ	ಬೆಳ್ಗ	ಇ>ಎ>ಎ>ಎ

ಬರಹ ಕನ್ನಡದಲ್ಲಿರುವ ಪದಾದಿ 'ಇ' ಕಾರವು ಮಸ್ಕಿಕನ್ನಡದಲ್ಲಿ 'ಎ' ಕಾರವಾಗಿ ಬಳಕೆಯಲ್ಲಿದೆ. ಬರಹ ಕನ್ನಡದ ಪಿಟಾರಿ ನಾಮಪದರೂಪ ಮಸ್ಕಿಕನ್ನಡದ ಮೂರು ಸಾಮಾಜಿಕ ವರ್ಗಗಳಲ್ಲಿ ಪೆಟಾರಿ ಎಂದು ಉಚ್ಚಾರ ಗೊಳ್ಳುತ್ತದೆ. ನಾಯಕ, ಹರಿಜನರಲ್ಲಿ 'ಪೆಟಾರಿ', 'ಪ್ಯಾಟರ್ಕಿ' ಎರಡು ರೀತಿಯ ಉಚ್ಚಾರಣೆಯನ್ನು ಗಮನಿಸಬಹುದು. 'ಬಿಳಿಚಕಲ್ಲು' ನಾಮಪದ ಮಸ್ಕಿಕನ್ನಡದಲ್ಲಿ ಪದಾದಿಯಲ್ಲಿ 'ಎ' ಕಾರದೊಂದಿಗೆ 'ಬೆಳಚುಕಲ್' ಎಂದು ಲಿಂಗಾಯತರಲ್ಲಿ, ನಾಯಕ, ಹರಿಜನರಲ್ಲಿ ಬೆಳ್ಚಕಲ್ ಎಂದು ಸಂಯುಕ್ತಾಕ್ಷರ ಪದವಾಗಿ ಬಳಕೆಯಲ್ಲಿದೆ. 'ಇದರು' ಕ್ರಿಯಾಪದ ಮಸ್ಕಿಕನ್ನಡದಲ್ಲಿ ಪದಾದಿ 'ಎ' ಕಾರವಾಗಿ 'ಎದರು' ಎಂದು ಲಿಂಗಾಯತರಲ್ಲಿ ಬಳಕೆಯಾದರೆ 'ಎದ್ರು', ಎಂದು ಸಂಯುಕ್ತಾಕ್ಷರ ಪದವಾಗಿ ನಾಯಕ, ಹರಿಜನರಲ್ಲಿ

ಬಳಕೆಯಲ್ಲಿದೆ. ಅದೇ ರೀತಿ ಗುಣವಾಚಕ ಪದ 'ಬಿಳಿ' ಮಸ್ಕಿಕನ್ನಡದಲ್ಲಿ 'ಬೆಳ್ಳಗ' ಎಂಬುದಾಗಿ ಲಿಂಗಾಯತರಲ್ಲಿ ಬಳಕೆಯಾದರೆ 'ಬೆಳ್ಗ' ಎಂದು ನಾಯಕ, ಹರಿಜನರಲ್ಲಿ ಎರಡಕ್ಷರ ಸಂಯುಕ್ತಾಕ್ಷರವಾಗಿ ಬಳಕೆಯಲ್ಲಿದೆ. ಪದಾದಿಯಲ್ಲಿ ಬರಹಕನ್ನಡದ 'ಇ' ಕಾರವು ಮಸ್ಕಿ ಕನ್ನಡದಲ್ಲಿ 'ಎ' ಕಾರವಾಗಿ ಬಳಕೆಯಲ್ಲಿರುವುದನ್ನು ಗಮನಿಸಬಹುದು.

೩.೩. 'ಇ' ಕಾರ 'ಉ' ಕಾರವಾಗುದು. (ಪದಮಧ್ಯ ಪರಿಸರದಲ್ಲಿ)

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಇಳಿಸು	ಇಳುಸು	ಇಳ್ಸು	ಇಳ್ಸು	ಇ>ಉ>ಉ>ಉ
ಕಡಿಸು	ಕಡುಸು	ಕಡ್ಸು	ಕಡ್ಸು	ಇ>ಉ>ಉ>ಉ
ಕುದಿಸು	ಕುದುಸು	ಕುದ್ಸು	ಕುದ್ಸು	ಇ>ಉ>ಉ>ಉ
ತುರಿಸು	ತುರುಸು	ತುರುಸು	ತುರ್ಸು	ಇ>ಉ>ಉ>ಉ
ಉಡಿಸು	ಉಡುಸು	ಉಡ್ಸು	ಉಡ್ಸು	ಇ>ಉ>ಉ>ಉ
ಉಣಿಸು	ಉಣುಸು	ಉಣ್ಸು	ಉಣ್ಸು	ಇ>ಉ>ಉ>ಉ
ಓಡಿಸು	ಓಡುಸು	ಓಡ್ಸು	ಓಡ್ಸು	ಇ>ಉ>ಉ>ಉ
ಕೀಳಿಸು	ಕೀಳುಸು	ಕೀಳ್ಸು	ಕೀಳ್ಸು	ಇ>ಉ>ಉ>ಉ
ಕೂರಿಸು	ಕೂರುಸು	ಕೂರ್ಸು	ಕೂರ್ಸು	ಇ>ಉ>ಉ>ಉ
ಕೊಡಿಸು	ಕೊಡುಸು	ಕ್ವಡ್ಸು	ಕ್ವಡ್ಸು	ಇ>ಉ>ಉ>ಉ
ತೊಡಿಸು	ತೊಡುಸು	ತ್ವಡ್ಸು	ತ್ವಡ್ಸು	ಇ>ಉ>ಉ>ಉ
ನಂಬಿಸು	ನಂಬುಸು	ನಂಬ್ಸು	ನಂಬ್ಸು	ಇ>ಉ>ಉ>ಉ
ಹಾಸಿಗೆ	ಆಸುಗೆ	ಆಸುಗೆ	ಆಸುಗಿ	ಇ>ಉ>ಉ>ಉ

ಮೂರಕ್ಷರ ಹಲವು ಪದಗಳು ಎರಡಯ ಸ್ವರದಲ್ಲಿ ಬರುವ 'ಇ' ಕಾರವು 'ಉ' ಕಾರವಾಗಿ ರೂಪಗಳನ್ನು ಕಾಣಬಹುದು. ಮಸ್ಕಿಕನ್ನಡ ಪದಗಳಲ್ಲಿ ಬಳಕೆಗೊಳ್ಳುವುದನ್ನು ಗಮನಿಸಬಹುದು. ಬರಹ ಕನ್ನಡದ ಮೂರಕ್ಷರದ ಪದಗಳಲ್ಲಿ ಪದಮಧ್ಯ 'ಇ' ಕಾರವು ಅಂದರೆ ಎರಡನೇ ಸ್ವರವು ತಟಸ್ಥ್ಯಹೊಂದಿ ಆ ಜಾಗದಲ್ಲಿ 'ಉ' ಕಾರ ಬಂದು ಸೇರುವುದು ಮಸ್ಕಿಕನ್ನಡದ ವೈಶಿಷ್ಟ್ಯ. ಲಿಂಗಾಯತ ಮಾತಿನಲ್ಲಿ ಬರಹ ಕನ್ನಡದ ಮೂರಕ್ಷರದ ಪದಗಳು ಇವರಲ್ಲಿ ಮೂರಕ್ಷರ ಪದಗಳಾಗಿ ಉಳಿದು ಎರಡನೆಯ ಸ್ವರವು 'ಉ' ಕಾರ ಹೊಂದಿರುತ್ತದೆ. ನಾಯಕ, ಹರಿಜನರಲ್ಲಿ ಮೂರಕ್ಷರದ ಪದಗಳು ಎರಡಕ್ಷರದವುಗಳಾಗಿ ವಿಜಾತೀಯ ಸಂಯುಕ್ತಾಕ್ಷರ ಎರಡಕ್ಷರದವುಗಳಾಗಿ ಬಳಕೆಗೊಳ್ಳುವುದನ್ನು ಗಮನಿಸಬಹುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಕಡಿದ	ಕಡುದ	ಕಡುದ	ಕಡುದ	ಇ>ಉ>ಉ>ಉ

ಬಡಿದ	ಬಡುದ	ಬಡುದ	ಬಡುದ	ಇ>ಉ>ಉ>ಉ
ಹರಿದ	ಅರುದ	ಅರುದ	ಅರುದ	ಇ>ಉ>ಉ>ಉ
ಇಳಿದ	ಇಳುದ	ಇಳುದ	ಇಳುದ	ಇ>ಉ>ಉ>ಉ
ಮುರಿದ	ಮುರುದ	ಮುರುದ	ಮುರುದ	ಇ>ಉ>ಉ>ಉ

ಈ ಮೇಲಿನ ಉದಾಹರಣೆಗಳಲ್ಲಿ ಬರಹ ಕನ್ನಡದ ಎರಡನೆಯ ಸ್ವರದ 'ಇ' ಕಾರ ಮಸ್ಕಿ ಕನ್ನಡದಲ್ಲಿ 'ಉ' ಕಾರವಾಗಿ ಬದಲಾಗಿರುವುದನ್ನು ಗಮನಿಸಬಹುದು. ಮೂರು ಸಾಮಾಜಿಕ ವರ್ಗಗಳಲ್ಲಿ ಮೂರಕ್ಷದ ಪದಗಳಾಗಿಯೇ ಉಳಿದುಕೊಂಡು ಬಳಕೆಗೊಳ್ಳುತ್ತಿವೆ.

೩.೪. 'ಅ' ಕಾರ ವಿಭಜನೆ

ಮಸ್ಕಿ ಕನ್ನಡ ಪ್ರಭೇದದಲ್ಲಿ ಮೂಲ ಕನ್ನಡದ 'ಅ' ಕಾರವು ಪಶ್ಚನಿಮ್ನ ಮತ್ತು ಕೇಂದ್ರ ಮಧ್ಯಗಳೆಂದು ಎರಡು ಬೇರೆ ಬೇರೆ ವರ್ಣಗಳಾಗಿ ಒಡೆದಿರುವುದು ಕಂಡುಬರುವುದು. ಉಚ್ಚಸ್ವರಗಳು ಪದದಲ್ಲಿರುವಾಗ 'ಅ' ಕಾರವು ಕೇಂದ್ರ ಮಧ್ಯಸ್ವರವಾಗಿಯೂ ಮತ್ತು ಇತರ ಸ್ವರಗಳು (ಮಧ್ಯ ಮತ್ತು ನಿಮ್ನ ಸ್ವರಗಳು) ಪದದಲ್ಲಿರುವಾಗ ಪಶ್ಚನಿಮ್ನಸ್ವರವಾಗಿಯೂ ಒಡೆದುಕೊಂಡಿದ್ದು ಅನಂತರ (೧) ಪದದಲ್ಲಿರುವ 'ಎ' ಕಾರ 'ಇ' ಕಾರವಾದಾಗ (೨) ಪದದಲ್ಲಿರುವ ಸ್ವರ ಲೋಪಗೊಂಡಾಗ ಮತ್ತು ಸನ್ನಿವೇಶದಲ್ಲಿ ಕೆಲವು ಬೇರೆ ಬದಲಾವಣೆಗಳುಂಟಾದಾಗ ಈ ಎರಡು 'ಅ' ಕಾರಗಳು ಎರಡು ಸ್ವತಂತ್ರ ವರ್ಣಗಳಾಗಿ ಒಡೆದುಕೊಂಡಿರುವುದೇ ಈ ಬದಲಾವಣೆಯ ಸ್ವರೂಪವೆಂದು ಹೇಳಬಹುದು.

ಈ ಬದಲಾವಣೆಯನ್ನು ಕೆಳಗಿನ ಕ್ರಿಯಾಪದಗಳ ಉದಾಹರಣೆಗಳಿಂದ ತಿಳಿದುಕೊಳ್ಳೋಣ

ಎರಡಕ್ಷರ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಅಗಿ	ಅ್ಹಗಿ	ಅ್ಹಗಿ	ಅ್ಹಗಿ	ಅ>ಅ್ಹ>ಅ್ಹ>ಅ್ಹ
ಅರೆ	ಅರಿ	ಅರಿ	ಅರಿ	ಅ>ಅ>ಅ>ಅ
ಕಲಿ	ಕ್ಹಲಿ	ಕ್ಹಲಿ	ಕ್ಹಲಿ	ಅ>ಅ್ಹ>ಅ್ಹ>ಅ್ಹ
ಕಲೆ	ಕಲಿ	ಕಲ	ಕಲಿ	ಅ>ಅ>ಅ>ಅ
ಬಗಿ	ಬ್ಹಗಿ	ಬ್ಹಗಿ	ಬ್ಹಗಿ	ಅ>ಅ್ಹ>ಅ್ಹ>ಅ್ಹ
ಬಗೆ	ಬಗಿ	ಬಗಿ	ಬಗಿ	ಅ>ಅ>ಅ>ಅ
ಮಸಿ	ಮ್ಹಸಿ	ಮ್ಹಸಿ	ಮ್ಹಸಿ	ಅ>ಅ್ಹ>ಅ್ಹ>ಅ್ಹ
ಮಸೆ	ಮಸಿ	ಮಸಿ	ಮಸಿ	ಅ>ಅ>ಅ>ಅ

ಬರಹ ಕನ್ನಡದ 'ಅಗಿ' ಪದದಲ್ಲಿ ಎರಡನೆಯ ಸ್ವರವಾಗಿ 'ಇ' ಕಾರ ಬಂದಿರುವ ಕಾರಣ ಮೊದಲಿಗೆ ಅದರ 'ಅ' ಕಾರ ನಿಮ್ನ 'ಅ್ಹ' ಕಾರವಾಗಿಯೂ ಮತ್ತು 'ಅರೆ' ಪದದಲ್ಲಿ ಎರಡನೆಯ ಸ್ವರವಾಗಿ 'ಎ' ಕಾರ ಬಂದಿದೆ ಕಾರಣ ಅದರ 'ಅ' ಕಾರ 'ಅ' ಕಾರವಾಗಿಯೂ ಮಸ್ಕಿ ಕನ್ನಡದಲ್ಲಿ ಬಳಕೆಯಲ್ಲಿದೆ. ಅದೇ ರೀತಿಯಾಗಿ 'ಕಲಿ', 'ಬಿಗಿ', 'ಮಸಿ', ಇವುಗಳಲ್ಲಿ 'ಅ್ಹ' ಕಾರವಾಗಿ ಒಡೆದಿರುವುದನ್ನು ಕಾಣುತ್ತೇವೆ. ಹಾಗೂ ಪದಾಂತ್ಯದ 'ಎ' ಕಾರವು 'ಇ' ಕಾರವಾಗಿ ಮೂರು ಸಾಮಾಜಿಕ ವರ್ಗಗಳಲ್ಲಿ ಬಳಕೆಗೊಂಡಿದೆ. ಇದು ಮಸ್ಕಿ ಕನ್ನಡದ ವೈಶಿಷ್ಟ್ಯ.

ಮೂರಕ್ಷರದ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಅಡಿಗಿ	ಅ್ಹಡ್ಗಿ	ಅ್ಹಡ್ಗಿ	ಅ್ಹಡ್ಗಿ	ಅ>ಅ್ಹ>ಅ್ಹ>ಅ್ಹ
ಅಡಿಕೆ	ಅಡ್ಕಿ	ಅಡ್ಕಿ	ಅಡ್ಕಿ	ಅ>ಅ>ಅ>ಅ
ಗಡಿಗಿ	ಗ್ಹಡ್ಗಿ	ಗ್ಹಡ್ಗಿ	ಗ್ಹಡ್ಗಿ	ಅ>ಅ್ಹ>ಅ್ಹ>ಅ್ಹ
ಗಳಗೆ	ಗಳ್ಗಿ	ಗಳ್ಗಿ	ಗಳ್ಗಿ	ಅ>ಅ>ಅ>ಅ

'ಅ' ಕಾರ 'ಅ್ಹ' ಕಾರವಾಗುವಿಕೆಯನ್ನು ಮಸ್ಕಿ ಕನ್ನಡದಲ್ಲಿ ಮೂರಕ್ಷರದ ನಾಮಪದಗಳಲ್ಲಿ ಸಹ ಕಾಣಬಹುದು. ಮೇಲಿನ ಉದಾಹರಣೆಯಲ್ಲಿ ಬರಹ ಕನ್ನಡದ ಅಡಿಗಿ ಪದದಲ್ಲಿ ಮೂರನೇ ಸ್ವರವು 'ಇ' ಕಾರ ಬಂದಿರುವ ಕಾರಣ ಪದದ ಮೊದಲನೆಯ ಸ್ವರ 'ಅ' ಕಾರ 'ಅ್ಹ' ಕಾರವಾಗಿ, ಎರಡಕ್ಷರ ವಿಜಾತೀಯ ಸಂಯುಕ್ತಾಕ್ಷರವಾಗಿದೆ. 'ಅಡಿಗಿ' ಪದ 'ಅ್ಹಡ್ಗಿ', 'ಅಡಿಕೆ' ಪದದ ಮೂರನೇಸ್ವರವು 'ಎ' ಕಾರ ಇರುವ ಕಾರಣ ಪದಾದಿಯ 'ಅ' ಕಾರ 'ಅ' ಕಾರವಾಗಿಯೆ ಉಳಿದುಕೊಂಡು ಎರಡಕ್ಷರ ಪದವಾಗಿ ಪದಾಂತ್ಯ 'ಇ' ಕಾರವಾಗಿ ಬದಲಾಗಿದೆ. ಅಡಿಕೆ>ಅಡ್ಕಿ ಪದಾಂತ್ಯದ 'ಎ' ಕಾರವು 'ಇ' ಕಾರವಾಗಿ ಬದಲಾಗುವುದು ಮಸ್ಕಿಕನ್ನಡದ ವೈಶಿಷ್ಟ್ಯ.

೩.೫. ಪದಮಧ್ಯಸ್ವರ ಲೋಪಗೊಂಡು 'ಉ್' ಸ್ವರ ಬಂದು ಸೇರುವುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಪುಸ್ತಕ	ಪುಸ್ತ್‌ಗ	ಪುಸ್ತ್‌ಗ	ಪುಸ್ತ್‌ಗ	ಅ>ಉ್>ಉ್>ಉ್
ನಾಟಕ	ನಾಟ್‌ಗ	ನಾಟ್‌ಗ	ನಾಟ್‌ಗ	ಅ>ಉ್>ಉ್>ಉ್
ಮುಚ್ಚಳ	ಮುಚ್‌ಳ	ಮುಚ್‌ಳ	ಮುಚ್‌ಳ	ಅ>ಉ್>ಉ್>ಉ್
ಕೌಜುಗ	ಗೌಜ್‌ಗ	ಗೌಜ್‌ಗ	ಗೌಜ್‌ಗ	ಅ>ಉ್>ಉ್>ಉ್

ಮೇಲಿನ ಬರಹ ಕನ್ನಡದಲ್ಲಿ ಪದಮಧ್ಯಸ್ವರ ಲೋಪಗೊಂಡು ಉ್ ಸ್ವರ ಬಂದು ಸೇರಿರುವುದನ್ನು ಮಸ್ಕಿ ಕನ್ನಡದ ಈ ಮೇಲಿನ ಉದಾಹರಣೆಗಳಲ್ಲಿ ಗಮನಿಸಬಹುದು. ಈ ಬದಲಾಗುವ ಪ್ರಕ್ರಿಯೆಯು

ಮೂರು ಸಾಮಾಜಿಕ ವರ್ಗಗಳಲ್ಲಿ ನಡೆದಿದ್ದು ಪದಾಂತ್ಯದ ಅಕ್ಷರವಾದ 'ಕ' ಕಾರವು 'ಗ' ಕಾರವಾಗಿ ಬದಲಾಗಿರುವುದನ್ನು ನೋಡಬಹುದು.

೩.೬. ಪದಾಂತ್ಯದ 'ಉ' ಕಾರ 'ಅ್ಹ' ಕಾರವಾಗಿರುವುದು

ಸಜಾತೀಯ ಸಂಯುಕ್ತಾಕ್ಷರ ನಾಮ ಪದಗಳಲ್ಲಿ

ಬರಹ ಕನ್ನಡದ ಪದಾಂತ್ಯದಲ್ಲಿ ಬರುವ 'ಉ' ಕಾರವು ಮಸ್ಕಿಕನ್ನಡದಲ್ಲಿ 'ಅ' ಕಾರವಾಗಿ ಬದಲಾಗಿದೆ. ಈ ಬದಲಾವಣೆಯು ಮೊದಲನೆ ಸ್ವರವು ದೀರ್ಘವಾದ ಸಂದರ್ಭದಲ್ಲಿ ಹಾಗೂ ಮೊದಲನೆಯ ಸ್ವರದ ಅನಂತರ ಒತ್ತಕ್ಷರವಿದ್ದಲ್ಲಿ, ಎರಡಕ್ಷರ ಪದಗಳಲ್ಲಿ ನಡೆದಿದೆ. ಆದರೆ ಮೊದಲಿನ ಸ್ವರ ದೀರ್ಘಸ್ವರ ವಿರದ ಪದಗಳಲ್ಲಿ ನಡೆದಿಲ್ಲ ಎಂದು ಹೇಳಬಹುದು. ಈ ಬದಲಾಗುವ ಪ್ರಕ್ರಿಯೆ ನಾಮಪದ, ಕ್ರಿಯಾಪದ, ಗುಣವಾಚಕ ಹಾಗೂ ಸಂಖ್ಯಾವಾಚಕಗಳಲ್ಲಿ ನಡೆದಿರುವುದು ಮಸ್ಕಿ ಕನ್ನಡದ ವೈಶಿಷ್ಟ್ಯಗಳಲ್ಲೊಂದು ಎನ್ನಬಹುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಎತ್ತು	ಯತ್ತ್ಹ	ಯತ್ತ್ಹ	ಯತ್ತ್ಹ	ಉ>ಅ್ಹ>ಅ್ಹ>ಅ್ಹ
ಕಣ್ಣು	ಕಣ್ಹ	ಕಣ್ಹ	ಕಣ್ಹ	ಉ>ಅ್ಹ>ಅ್ಹ>ಅ್ಹ
ಕಲ್ಲು	ಕಲ್ಹ	ಕಲ್ಹ	ಕಲ್ಹ	ಉ>ಅ್ಹ>ಅ್ಹ>ಅ್ಹ
ಹದ್ದು	ಅದ್ದ್ಹ	ಅದ್ದ್ಹ	ಅದ್ದ್ಹ	ಉ>ಅ್ಹ>ಅ್ಹ>ಅ್ಹ
ಹಲ್ಲು	ಅಲ್ಲ್ಹ	ಅಲ್ಲ್ಹ	ಅಲ್ಲ್ಹ	ಉ>ಅ್ಹ>ಅ್ಹ>ಅ್ಹ

ಈ ಮೇಲಿನ ಉದಾಹರಣೆಗಳಲ್ಲಿ ಪದಾಂತ್ಯದ 'ಉ' ಕಾರ 'ಅ್ಹ' ಕಾರವಾಗುವ ಬದಲಾವಣೆಯ ಪ್ರಕ್ರಿಯೆಯನ್ನು ಕಾಣುತ್ತೇವೆ. ಈ ಪ್ರಕ್ರಿಯೆಯು ಬರಹಕನ್ನಡದ ಎರಡನೆಯ ಅಕ್ಷರ ಸಜಾತೀಯ ಸಂಯುಕ್ತಾಕ್ಷರದಲ್ಲಿ ನಡೆದಿರುವುದು.

ಮೊದಲನೆಯ ಅಕ್ಷರ ದೀರ್ಘಸ್ವರವಿದ್ದ ನಾಮಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಊರು	ಊರ್ಹ	ಊರ್ಹ	ಊರ್ಹ	ಉ>ಅ್ಹ>ಅ್ಹ>ಅ್ಹ
ಕೂಸು	ಕೂಸ್ಹ	ಕೂಸ್ಹ	ಕೂಸ್ಹ	ಉ>ಅ್ಹ>ಅ್ಹ>ಅ್ಹ
ಮೀನು	ಮೀನ್ಹ	ಮೀನ್ಹ	ಮೀನ್ಹ	ಉ>ಅ್ಹ>ಅ್ಹ>ಅ್ಹ
ಹಾಲು	ಆಲ್ಹ	ಆಲ್ಹ	ಆಲ್ಹ	ಉ>ಅ್ಹ>ಅ್ಹ>ಅ್ಹ
ಹೂವು	ಊವ್ಹ	ಊವ್ಹ	ಊವ್ಹ	ಉ>ಅ್ಹ>ಅ್ಹ>ಅ್ಹ

ಈ ಮೇಲಿನ ಉದಾಹರಣೆಗಳಲ್ಲಿ ಮೊದಲ ಸ್ವರ ದೀರ್ಘಸ್ವರವಾಗಿದ್ದು, ಎರಡಕ್ಷರ ಪದಗಳಲ್ಲಿ ಎರಡನೆಯ ಸ್ವರದ 'ಉ' ಕಾರ 'ಅ್ಹ' ಕಾರವಾಗಿ ಬದಲಾಗಿರುವುದನ್ನು ಮಸ್ಕಿ ಕನ್ನಡದಲ್ಲಿ ನೋಡಬಹುದು.

ಮೂರಕ್ಷರದ ನಾಮಪದಗಳಲ್ಲಿ

ಬರಹ ಕನ್ನಡ	**ಲಿಂಗಾಯತ**	**ನಾಯಕ**	**ಹರಿಜನ**	**ವ್ಯತ್ಯಾಸ**
ಗುಡುಗು	ಗುಡ್ಗ್ಹ	ಗುಡ್ಗ್ಹ	ಗುಡ್ಗ್ಹ	ಉ>ಅ್ಹ>ಅ್ಹ>ಅ್ಹ
ಸಿಡಿಲು	ಸಿಡ್ಲ್ಹ	ಸಿಡ್ಲ್ಹ	ಸಿಡ್ಲ್ಹ	ಉ>ಅ್ಹ>ಅ್ಹ>ಅ್ಹ
ಹಿತ್ತಿಲು	ಇತ್ಲ್ಹ	ಇತ್ಲ್ಹ	ಇತ್ಲ್ಹ	ಉ>ಅ್ಹ>ಅ್ಹ>ಅ್ಹ

ಮೂರಕ್ಷರದ ನಾಮಪದಗಳಲ್ಲಿ ಬರಹ ಕನ್ನಡದ ಎರಡನೆಯ ಸ್ವರವು ಬಿದ್ದು ಹೋಗಿ, ಎರಡಕ್ಷರ ಪದಗಳು ಆಗುವುದರ ಮೂಲಕ ವಿಜಾತೀಯ ಸಂಯುಕ್ತಾಕ್ಷರಗಳಾಗಿ ಪದಾಂತ್ಯದ 'ಉ' ಕಾರ 'ಅ್ಹ'ಕಾರವಾಗಿ ಬದಲಾಗುವ ಪ್ರಕ್ರಿಯೆ ನಡೆಯುತ್ತದೆ.

೩.೭. ಪದಾಂತ್ಯದ 'ಉ' ಕಾರ 'ಅ್ಹ' ಕಾರವಾಗದೇ ಇರುವುದು.

ಮೂರಕ್ಷರದ ನಾಮಪದಗಳಲ್ಲಿ

ಬರಹ ಕನ್ನಡ	**ಲಿಂಗಾಯತ**	**ನಾಯಕ**	**ಹರಿಜನ**	**ವ್ಯತ್ಯಾಸ**
ಬಿಳುಪು	ಬಿಳ್ಪು	ಬಿಳ್ಪು	ಬಿಳ್ಪು	ಉ>ಉ>ಉ>ಉ
ಹಸಿವು	ಅಸ್ವು	ಅಸ್ವು	ಅಸ್ವು	ಉ>ಉ>ಉ>ಉ

ದೀರ್ಘಸ್ವರವಿಲ್ಲದ ಮೂರಕ್ಷರ ಪದಗಳಲ್ಲಿ ಪದಾಂತ್ಯದ 'ಉ' ಕಾರ 'ಅ್ಹ' ಕಾರವಾಗಿ ಬದಲಾವಣೆಗೊಂಡಿರುವುದಿಲ್ಲ. ಬರಹಕನ್ನಡದ ಮೂರಕ್ಷರದ ಪದವು ಮಸ್ಕಿಕನ್ನಡದಲ್ಲಿ ಎರಡಕ್ಷರ ಪದವಾಗಿ ಉಚ್ಚಾರಣೆಗೊಂಡರೂ ಪದಾಂತ್ಯದ 'ಉ' ಕಾರ 'ಅ್ಹ' ಕಾರವಾಗದೇ ಇರುವುದು ಪ್ರಕ್ರಿಯೆಗೆ ಈ ಮೇಲಿನ ಉದಾಹರಣೆಗಳು ಅಪವಾದವೆಂಬಂತೆ ಬದಲಾಗದೆ ಉಳಿದುಕೊಂಡಿರುವುದು ಮಸ್ಕಿಕನ್ನಡದ ವೈಶಿಷ್ಟ್ಯ.

ಕ್ರಿಯಾಪದಗಳಲ್ಲಿ 'ಉ' ಕಾರ 'ಅ್ಹ' ಕಾರವಾಗುವುದು.

ಎರಡಕ್ಷರ ಪದಗಳಲ್ಲಿ

ಬರಹ ಕನ್ನಡ	**ಲಿಂಗಾಯತ**	**ನಾಯಕ**	**ಹರಿಜನ**	**ವ್ಯತ್ಯಾಸ**
ಕೊಳ್ಳು	ಕೊಳ್ಹ	ಕೊಳ್ಹ	ಕೊಳ್ಹ	ಉ>ಅ್ಹ>ಅ್ಹ>ಅ್ಹ
ಚೆಲ್ಲು	ಚೆಲ್ಹ	ಚೆಲ್ಹ	ಚೆಲ್ಹ	ಉ>ಅ್ಹ>ಅ್ಹ>ಅ್ಹ
ಚುಚ್ಚು	ಚುಚ್್ಹ	ಚುಚ್್ಹ	ಚುಚ್್ಹ	ಉ>ಅ್ಹ>ಅ್ಹ>ಅ್ಹ
ತಿನ್ನು	ತಿನ್ಹ	ತಿನ್ಹ	ತಿನ್ಹ	ಉ>ಅ್ಹ>ಅ್ಹ>ಅ್ಹ

ಬಗ್ಗು	ಬಗ್ಗೄ	ಬಗ್ಗೄ	ಬಗ್ಗೄ	ಉ>ಅೄ>ಅೄ>ಅೄ
ಮುಚ್ಚು	ಮುಚ್ಚೄ	ಮುಚ್ಚೄ	ಮುಚ್ಚೄ	ಉ>ಅೄ>ಅೄ>ಅೄ

ನಾಮಪದಗಳಲ್ಲಿ 'ಉ' ಕಾರ 'ಅೄ' ಕಾರವಾಗುವ ಬದಲಾವಣೆಯು ಮಸ್ಕಿಕನ್ನಡದಲ್ಲಿ ಕ್ರಿಯಾಪದಗಳಲ್ಲಿಯೂ ನಡೆದಿರುವುದನ್ನು ಗಮನಿಸಬಹುದು. ಕ್ರಿಯಾಪದದಲ್ಲಿಯೂ ಮೊದಲನೆಯ ಸ್ವರ ದೀರ್ಘವಾಗಿರುವಲ್ಲಿ, ಮೊದಲನೆಯ ಸ್ವರದ ಅನಂತರ ಒತ್ತಕ್ಷರವಿರುವ ಸಂದರ್ಭದಲ್ಲಿ ಈ ಪ್ರಕ್ರಿಯೆ ನಡೆದಿದೆ.

ಈ ಮೇಲಿನ ಎರಡಕ್ಷರದ ಕ್ರಿಯಾಪದಗಳ ಉದಾಹರಣೆಗಳನ್ನು ಗಮನಿಸಿದಾಗ ಮೊದಲನೆ ಸ್ವರದ ನಂತರದ ಸಜಾತೀಯ ಒತ್ತಕ್ಷರವಿರುವಲ್ಲಿ ಬರಹಕನ್ನಡ ಪದಾಂತ್ಯದ 'ಉ' ಕಾರ 'ಅೄ' ಕಾರವಾಗಿ ಬದಲಾಗಿದೆ. ಮಸ್ಕಿ ಕನ್ನಡದ ಮೂರು ಸಾಮಾಜಿಕ ವರ್ಗಗಳಲ್ಲಿ ಬದಲಾದ ಪ್ರಕ್ರಿಯೆಯನ್ನು ನೋಡಬಹುದು.

ಮೂರಕ್ಷರದ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಉರುಳು	ಉಳ್ಳೄ	ಉಳ್ಳೄ	ಉಳ್ಳೄ	ಉ>ಅೄ>ಅೄ>ಅೄ
ಕರಗು	ಕರ್ಗೄ	ಕರ್ಗೄ	ಕರ್ಗೄ	ಉ>ಅೄ>ಅೄ>ಅೄ
ಗುಡಿಸು	ಗುಡ್ಸೄ	ಗುಡ್ಸೄ	ಗುಡ್ಸೄ	ಉ>ಅೄ>ಅೄ>ಅೄ
ಮಡಚು	ಮಡ್ಸೄ	ಮಡ್ಸೄ	ಮಡ್ಸೄ	ಉ>ಅೄ>ಅೄ>ಅೄ
ಸಾರಿಸು	ಸಾರ್ಸೄ	ಸಾರ್ಸೄ	ಸಾರ್ಸೄ	ಉ>ಅೄ>ಅೄ>ಅೄ

ಮೇಲಿನ ಉದಾಹರಣೆಗಳಲ್ಲಿ ಮಸ್ಕಿಕನ್ನಡದ ಮೂರಕ್ಷರ ಕ್ರಿಯಾಪದಗಳಲ್ಲಿ 'ಉ' ಕಾರ 'ಅೄ' ಕಾರವಾಗುವ ಪರಿವರ್ತನೆಯನ್ನು ಕಾಣುತ್ತೇವೆ. ಬರಹ ಕನ್ನಡದ ಮೂರಕ್ಷರದ ಪದವು ಮಸ್ಕಿಕನ್ನಡದಲ್ಲಿ ಎರಡಕ್ಷರ ವಿಜಾತೀಯ ಸಂಯುಕ್ತಾಕ್ಷರ ಪದವಾಗಿ ಬದಲಾವಣೆ ನಡೆದಿದೆ. ಮೂರಕ್ಷರವಿರುವ ಪದಗಳ ಎರಡನೇ ಸ್ವರ ನಷ್ಟವಾಗುವುದರಿಂದ ಎರಡಕ್ಷರದವುಗಳಾಗಿ ಬದಲಾಗಿರುವಂತಹ ಸಂದರ್ಭಗಳಲ್ಲಿ 'ಉ' ಕಾರ 'ಅೄ' ಕಾರವಾಗುವ ಪ್ರಕ್ರಿಯೆ ನಡೆದಿದೆ ಎನ್ನಬಹುದು. 'ಉರುಳು' ಎಂಬ ಮೂರಕ್ಷರದ ಪದವು ಮಸ್ಕಿ ಕನ್ನಡದಲ್ಲಿ ದಂತ್ಯ ಘೋಷ 'ರ' ಕಂಪಿತ ಧ್ವನಿಯು ಲೋಪಗೊಂಡು ಎರಡಕ್ಷರ ಪದ 'ಉಳ್ಳೄ' ಎಂದಾಗಿ 'ಅೄ' ಕಾರ ಅಂತ್ಯಗೊಂಡಿದೆ. ಬರಹ ಕನ್ನಡದ 'ಮಡಚು' ಪದವು ಮಸ್ಕಿಕನ್ನಡದಲ್ಲಿ ತಾಲವ್ಯ ಅಘೋಷ 'ಚ್' ಕಾರವು ಲೋಪಗೊಂಡು ದಂತ್ಯ ಅಘೋಷ 'ಸ್' ಸಂಘರ್ಷ ಧ್ವನಿಯಾಗಿ 'ಮಡ್ಸೄ' ಎಂದು ಬದಲಾಗಿದೆ. ಇಲ್ಲಿ ಮುಖ್ಯವಾಗಿ 'ಚ' ಕಾರ 'ಸ' ಕಾರವಾಗಿ ಚ>ಸ ಬದಲಾಗಿರುವುದನ್ನು ಗಮನಿಸಬಹುದು.

ಸಂಖ್ಯಾವಾಚಕಗಳಲ್ಲಿ ಉ ಕಾರ ಅೄ ಕಾರ ವಾಗುವುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಇಪ್ಪತ್ತು	ಇಪ್ಪತ್ತೄ	ಇಪ್ಪತ್ತೄ	ಇಪ್ಪತ್ತೄ	ಉ>ಅೄ>ಅೄ>ಅೄ
ಎಪ್ಪತ್ತು	ಯಪತ್ತೄ	ಯಪತ್ತೄ	ಯಪತ್ತೄ	ಉ>ಅೄ>ಅೄ>ಅೄ

ನಲ್ವತ್ತು	ನಲ್ವತ್ತ್ಹ	ನಲ್ವತ್ತ್ಹ	ನಲ್ವತ್ತ್ಹ	ಉ>ಅ್ಹ>ಅ್ಹ>ಅ್ಹ
ಹತ್ತು	ಅತ್ತ್ಹ	ಅತ್ತ್ಹ	ಅತ್ತ್ಹ	ಉ>ಅ್ಹ>ಅ್ಹ>ಅ್ಹ

ಮಸ್ಕಿಕನ್ನಡದಲ್ಲಿ ಎರಡಕ್ಷರ, ಮೂರಕ್ಷರದ ಪದಗಳಲ್ಲಿ ಕೊನೆಯ ಅಕ್ಷರ ಸಜಾತೀಯ ಸಂಯುಕ್ತಾಕ್ಷರವಾಗಿದ್ದು ಅಂತಹ ಸಂದರ್ಭಗಳಲ್ಲಿ ಪದಾಂತ್ಯದ 'ಉ' ಕಾರವು 'ಅ್ಹ' ಕಾರವಾಗಿ ಬದಲಾಗಿರುತ್ತದೆ. ನಾಮಪದ, ಕ್ರಿಯಾಪದಗಳಲ್ಲಿ ಮೂರಕ್ಷರವಿರುವ ಪದಗಳ ಎರಡನೇ ಸ್ವರ ನಷ್ಟವಾದುದರಿಂದಾಗಿ ಎರಡಕ್ಷರದವುಗಳಾಗಿ ಬದಲಾಗಿದ್ದು, ಈ ಮೇಲಿನ ಸಂಖ್ಯಾವಾಚಕಗಳಲ್ಲಿ ಸಂಯುಕ್ತಾಕ್ಷರಗೊಳಲ್ಪಡದೆ ಮೂರಕ್ಷರ ಪದಗಳಾಗಿಯೇ ಉಳಿದುಕೊಂಡು ಪದಾಂತ್ಯದ 'ಉ' ಕಾರ 'ಅ್ಹ' ಕಾರವಾಗುವ ಪ್ರಕ್ರಿಯೆಗೆ ಒಳಪಟ್ಟಿರುವುದು ಮಸ್ಕಿ ಕನ್ನಡದ ವೈಶಿಷ್ಟ್ಯ.

೩.೭. ಪದಾಂತ್ಯದಲ್ಲಿ ಬರುವ 'ಉ' ಕಾರವು 'ಅ' ಕಾರವಾಗುವುದು.

ಬರಹ ಕನ್ನಡದ ಎರಡಕ್ಷರ ಮೂರಕ್ಷರ ಹಾಗೂ ನಾಲ್ಕಕ್ಷರದ ಪದಗಳ ಕೊನೆಯಲ್ಲಿ ಬರುವ 'ಉ' ಕಾರವು ಮಸ್ಕಿಕನ್ನಡದಲ್ಲಿ 'ಅ' ಕಾರಾಂತ ಹೊಂದುವುದನ್ನು ಕೆಲವು ಪದಗಳಲ್ಲಿ ಕಾಣಬಹುದು. ಮೂರಕ್ಷರದ ಪದಗಳು ಎರಡಕ್ಷರದವುಗಳಾಗಿ, ನಾಲ್ಕಕ್ಷರದ ಪದಗಳು ಮೂರಕ್ಷರದವುಗಳಾಗಿ ಬದಲಾಗಿವೆ. ಹಾಗೂ ಕೆಲವು ಪದಗಳು ವಿಜಾತೀಯ ಸಂಯುಕ್ತಾಕ್ಷರಗಳಾಗಿಯೂ ಬಳಕೆಗೊಳ್ಳುವುದನ್ನು ಗಮನಿಸಬಹುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಮೀನು	ಮೀನ	ಮೀನ	ಮೀನ	ಉ>ಅ>ಅ>ಅ
ಬೀಳು	ಬೀಳ	ಬೀಳ	ಬೀಳ	ಉ>ಅ>ಅ>ಅ
ಬೆವರು	ಬೆವರ	ಬೆವರ	ಬೆವರ	ಉ>ಅ>ಅ>ಅ
ಸವರು	ಸವರ	ಸವರ	ಸವರ	ಉ>ಅ>ಅ>ಅ
ಬಂದನು	ಬಂದ	ಬಂದ	ಬಂದ	ಉ>ಅ>ಅ>ಅ
ನೋಡಿದನು	ನೋಡಿದ	ನೋಡ್ದ	ನೋಡ್ದ	ಉ>ಅ>ಅ>ಅ
ಮಾಡಿದನು	ಮಾಡಿದ	ಮಾಡ್ದ	ಮಾಡ್ದ	ಉ>ಅ>ಅ>ಅ
ಕೇಳಿದನು	ಕೇಳಿದ	ಕೇಳ್ದ	ಕೇಳ್ದ	ಉ>ಅ>ಅ>ಅ

೩.೮. ಪದಾದಿಯ 'ಉ' ಕಾರ 'ಒ' ಕಾರವಾಗುವುದು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಉಡು	ತೊಡು	ತೊಡು	ತೊಡು	ಉ>ಒ>ಒ>ಒ
ಕುಯ್ಯು	ಕೊಯ್ಯು	ಕೊಯ್ಯು	ಕೊಯ್ಯು	ಉ>ಒ>ಒ>ಒ

ಬರಹ ಕನ್ನಡದ 'ಉಡು' ಕ್ರಿಯಾಪದ ಮಸ್ಕಿಕನ್ನಡದಲ್ಲಿ 'ತೊಡು' ಎಂದು ಬಳಕೆಯಲ್ಲಿದೆ. ಇಲ್ಲಿ ಗಮನಿಸಬೇಕಾದ ಅಂಶ ಪದಾದಿಯಲ್ಲಿ ಬರಹ ಕನ್ನಡದ 'ಉ' ಕಾರ ಮಸ್ಕಿಕನ್ನಡದಲ್ಲಿ 'ಒ' ಕಾರವಾಗಿ ಬಳಕೆಯಾಗಿದೆ. ಈ ಪ್ರಕ್ರಿಯೆ ಮೂರು ಸಾಮಾಜಿಕ ವರ್ಗಗಳಲ್ಲೂ ನಡೆದಿದೆ. ಅದೇ ರೀತಿ ಬರಹ ಕನ್ನಡ 'ಕುಯ್ಯು' ಪದರೂಪ ಮಸ್ಕಿಕನ್ನಡದಲ್ಲಿ ಪದಾದಿ 'ಉ' ಕಾರ 'ಒ' ಕಾರವಾಗಿ 'ಕೊಯ್ಯು' ಎಂದು ಉಚ್ಚಾರಗೊಳ್ಳುತ್ತದೆ. ಈ ಪರಿವರ್ತನೆಯ ಪ್ರಕ್ರಿಯೆ ಮೂರು ಸಾಮಾಜಿಕ ವರ್ಗಗಳಲ್ಲಿ ಗಮನಿಸಬಹುದು. ಈ ಮೇಲಿನ ಉದಾಹರಣೆಗಳಿದ 'ಮಸ್ಕಿಕನ್ನಡ' ಒಂದು ವಿಶಿಷ್ಟವಾದ ಪ್ರಭೇದ ಎಂದು ಗುರುತಿಸಬಹುದು.

೩.೯. ಪದಾಂತ್ಯದ 'ಎ' ಕಾರವು 'ಅ' ಕಾರವಾಗುವುದು

ಬರಹ ಕನ್ನಡದ 'ಎ' ಕಾರಾಂತ ಪದಗಳು ಮಸ್ಕಿ ಕನ್ನಡದ ಭಾಷೆಯೊಂದಿಗೆ ಹೋಲಿಸಿ ನೋಡಿದಾಗ ಇನ್ನೊಂದು ವಿಶಿಷ್ಟವಾದ ಅಂಶ ಗಮನಕ್ಕೆ ಬರುತ್ತದೆ. ಇದರಿಂದ ಮೂಲದ್ರಾವಿಡದ ಅಂಶವನ್ನು ಮಸ್ಕಿ ಕನ್ನಡ ಉಳಿಸಿಕೊಂಡು ಬಂದಿರುವುದು ತಿಳಿಯುತ್ತದೆ.

ನಾಮಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಕೋಗಿಲೆ	ಕೋಗಿಲ	ಕೋಗಿಲ	ಕೋಗಿಲ	ಎ>ಅ>ಅ>ಅ
ಚಿರತೆ	ಚಿರತ	ಚಿರ್ತ	ಚಿರ್ತ	ಎ>ಅ>ಅ>ಅ
ಜಿಂಕೆ	ಜಿಂಕ	ಜಿಂಕ	ಜಿಂಕ	ಎ>ಅ>ಅ>ಅ
ಮುಂಜಾನೆ	ಮುಂಜಾಲ	ಮುಂಜಾಲ	ಮುಂಜಾಲ	ಎ>ಅ>ಅ>ಅ

ಪದಾಂತ್ಯದ 'ಎ' ಕಾರ 'ಅ' ಕಾರವಾಗುವ ಪರಿವರ್ತನೆ ಪ್ರಾಣಿ, ಪಕ್ಷಿ ಸೂಚಕಗಳಲ್ಲಿ ಹೆಚ್ಚಾಗಿ ಕಂಡುಬರುವುದು ಮಸ್ಕಿಕನ್ನಡದ ವೈಶಿಷ್ಟ್ಯ. ಮುಖ್ಯವಾಗಿ ಸಾಮಾಜಿಕ ವರ್ಗಗಳಾದ ನಾಯಕ, ಹರಿಜನರ ಮಾತಿನಲ್ಲಿ ಇದನ್ನು ಗಮನಿಸಬಹುದು.

ಬರಹ ಕನ್ನಡದ 'ಚಿರತೆ' ಪದರೂಪವು ಲಿಂಗಾಯತರ ಮಾತಿನಲ್ಲಿ 'ಚಿರತ' (ಎ>ಅ) ಎಂದು ನಾಯಕ, ಹರಿಜನರ ಮಾತಿನಲ್ಲಿ ವಿಜಾತೀಯ ಸಂಯುಕ್ತಾಕ್ಷರವಾಗಿ 'ಚಿರ್ತ' ಎಂದು ಬಳಕೆಗೊಳ್ಳುತ್ತಿದೆ. ಕಾಲಸೂಚಕ ಪದವಾದ 'ಮುಂಜಾನೆ', 'ಮುಂಜಾಲ' ಎಂದು ಪರಿವರ್ತನೆಗೊಂಡಿರುವುದು. ದಂತ್ಯ ಘೋಷ 'ನ್' ಅನುನಾಸಿಕವು ದಂತ್ಯ ಘೋಷ 'ಲ' ಪಾರ್ಶ್ವಿಕ ಧ್ವನಿಯಾಗಿ (ನ>ಲ) ಬದಲಾವಣೆಗೊಂಡಿರುವುದನ್ನು ಕಾಣಬಹುದು.

ಎರಡಕ್ಷರ ಕ್ರಿಯಾಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಏಕೆ	ಯಾಕ	ಯಾಕ	ಯಾಕ	ಎ>ಅ>ಅ>ಅ

ಮಸ್ಕಿಕನ್ನಡದ ನಾಮಪದಗಳಲ್ಲಿ ಸಂಬವಿಸಿದ 'ಎ' ಕಾರ 'ಅ' ಕಾರವಾಗುವ ಬದಲಾವಣೆಯು, ಕ್ರಿಯಾಪದಗಳಲ್ಲಿ ಸಂಬವಿಸಿರುವುದನ್ನು ಗಮನಿಸಬಹುದು. ಪ್ರಶ್ನಾರ್ಥಕ ಕ್ರಿಯಾಪದ 'ಏಕೆ' ಪದ 'ಯಾಕ' ಎಂದು ಬಳಕೆಗೊಂಡಿದೆ. ಇವುಗಳ ಉದಾಹರಣೆಯಿಂದ ಕ್ರಿಯಾಪದಗಳಲ್ಲಿಯೂ ಪದಾಂತ್ಯದ 'ಎ' ಕಾರ 'ಅ' ಕಾರವಾಗುವುದನ್ನು ಗಮನಿಸಬಹುದು.

ಮೂರಕ್ಷರ ಕ್ರಿಯಾಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಯೋಚನೆ	ಯೋಚನ	ಯೋಚ್ನ	ಯೋಚ್ನ	ಎ>ಅ>ಅ>ಅ
ಸುಮ್ಮನೆ	ಸುಮ್ಮನ	ಸುಮ್ನ	ಸುಮ್ನ	ಎ>ಅ>ಅ>ಅ

ಬರಹ ಕನ್ನಡದ ಮೂರಕ್ಷರದ ಪದಗಳು ಪದಾಂತ್ಯದ 'ಎ' ಕಾರ 'ಅ' ಕಾರಗೊಳ್ಳುವಾಗ ಲಿಂಗಾಯತರ ಧ್ವನಿಯಲ್ಲಿ ಮೂರಕ್ಷರ ಪದಗಳಾಗಿಯೆ ಉಳಿದು ಧ್ವನಿಮಾತ್ರ 'ಎ' ಕಾರ 'ಅ' ಕಾರವಾಗಿ ಬದಲಾದರೆ ನಾಯಕ, ಹರಿಜನರ ಧ್ವನಿಯಲ್ಲಿ ಎರಡಕ್ಷರ ಪದವಾಗಿ ವಿಜಾತೀಯ ಸಂಯುಕ್ತಾಕ್ಷರವಾಗಿ ಬಳಕೆಗೊಳ್ಳುವವು.

ಗುಣವಾಚಕ ಪದಗಳಲ್ಲಿ ಪದಾಂತ್ಯದ 'ಎ' ಕಾರ 'ಅ' ಕಾರವಾಗುವುದು.

ಎರಡಕ್ಷರ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಮುಂದೆ	ಮುಂದ	ಮುಂದ	ಮುಂದ	ಎ>ಅ>ಅ>ಅ
ಸಪ್ಪೆ	ಸಪ್ಪ	ಸಪ್ಪ	ಸಪ್ಪ	ಎ>ಅ>ಅ>ಅ
ಹಿಂದೆ	ಯಿಂದ	ಯಿಂದ	ಯಿಂದ	ಎ>ಅ>ಅ>ಅ

ನಾಮಪದ, ಕ್ರಿಯಾಪದಗಳಲ್ಲಿ ಪದಾಂತ್ಯದ 'ಎ' ಕಾರ 'ಅ' ಕಾರವಾಗುವ ಪರಿವರ್ತನೆ ಸಂಬಂಧಿಸಿದಂತೆಯೇ ಗುಣವಾಚಕಗಳಲ್ಲಿಯೂ ಪರಿವರ್ತನೆಗೊಂಡಿರುವುದನ್ನು ಮಸ್ಕಿ ಕನ್ನಡದಲ್ಲಿ ಗಮನಿಸಬಹುದು. ಈ ಮೇಲಿನ ಉದಾಹರಣೆಗಳಲ್ಲಿ ಬರಹಕನ್ನಡದ 'ಹ' ಗಲೀಯ ಘರ್ಷ ಧ್ವನಿಯು ಲೋಪಗೊಂಡು, ತಾಲವ್ಯ ಘೋಷ 'ಯ್' ಅರ್ಧಸ್ವರವಾಗಿ ಹಿಂದೆ>ಯಿಂದ ಎಂದು ಉಚ್ಚಾರಣೆಗೊಳ್ಳುತ್ತಿದೆ.

ಮೂರಕ್ಷರ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಒಳಗೆ	ವಳಗ	ವಳ್ಗ	ವಳ್ಗ	ಎ>ಅ>ಅ>ಅ
ಕೆಳಗೆ	ಕ್ಯಳಗ	ತ್ಯಳ್ಗ	ತ್ಯಳ್ಗ	ಎ>ಅ>ಅ>ಅ
ಗುಂಡನೆ	ಗುಂಡಕ	ದುಂಡ್ಕ	ದುಂಡ್ಕ	ಎ>ಅ>ಅ>ಅ

ಚೌಕನೆ	ಚೌಕ	ಚೌಕ	ಚೌಕ	ಎ>ಅ>ಅ>ಅ
ತೆಳ್ಳನೆ	ತ್ಯಳಗ	ತ್ಯಳ್ಗ	ತ್ಯಳ್ಗ	ಎ>ಅ>ಅ>ಅ
ದಪ್ಪನೆ	ದಪ್ಪಗ/ಗಡತರ	ದಪ್ಗ/ಗಡತರ	ದಪ್ಗ/ಗಡತರ	ಎ>ಅ>ಅ>ಅ
ನಡುವೆ	ನಡಬರ್ಕ	ನಡಬರ್ಕ	ನಡಬರ್ಕ	ಎ>ಅ>ಅ>ಅ
ಹೊರಗೆ	ವರಗ	ವರಗ	ವರಗ	ಎ>ಅ>ಅ>ಅ

ಬರಹ ಕನ್ನಡದ ಪದಾಂತ್ಯದ 'ಎ' ಕಾರ 'ಅ' ಕಾರವಾಗುವ ಬದಲಾವಣೆಯ ಪ್ರಕ್ರಿಯೆ ಮಸ್ಕಿ ಕನ್ನಡದಲ್ಲಿ ಆಗಿರುವುದನ್ನು ಗಮನಿಸಬಹುದು. ಬರಹ ಕನ್ನಡದ ಮೂರಕ್ಷರ ಪದಗಳು ಲಿಂಗಾಯತರ ಉಚ್ಚಾರಣೆಯಲ್ಲಿ ಮೂರಕ್ಷರ ಪದಗಳಾಗಿಯೇ ಪದಾಂತ್ಯದ 'ಎ' ಕಾರ 'ಅ' ಕಾರವಾಗಿ ಪರಿವರ್ತನೆಗೊಂಡರೆ, ನಾಯಕ, ಹರಿಜನರ ಉಚ್ಚಾರಣೆಯಲ್ಲಿ ಮೂರಕ್ಷರದ ಪದಗಳು ಎರಡಕ್ಷರ ಪದಗಳಾಗಿ ವಿಜಾತೀಯ ಸಂಯುಕ್ತಾಕ್ಷರ ಪದಗಳಾಗಿ ಮಾರ್ಪಟ್ಟಿರುವುದನ್ನು ನೋಡಬಹುದು. ಕೆಲವೊಂದು ಪದಗಳಲ್ಲಿ ಪದಾಂತ್ಯದ ಅಕ್ಷರ ಬಿದ್ದುಹೋಗಿ ಆ ಜಾಗದಲ್ಲಿ ಬೇರೊಂದು ಅಕ್ಷರ ಬಂದು ಸೇರಿರುವುದು, ಇನ್ನೂ ಕೆಲವು ಪದಗಳಲ್ಲಿ ಬೇರೆ ಇನ್ನೊಂದು ಅಕ್ಷರ ಬಂದು ಸೇರಿರುವುದು ವಿಶೇಷ ಸಂಗತಿಯಾಗಿದೆ. ಗುಂಡನೆ ಎಂಬ ಪದವು ಮಸ್ಕಿಕನ್ನಡದಲ್ಲಿ ದಂತ್ಯ ಘೋಷ 'ನ್' ಅನುನಾಸಿಕ ಧ್ವನಿ ಬಿದ್ದು ಹೋಗಿ ಆ ಜಾಗದಲ್ಲಿ ಕಂಠ್ಯ ಅಘೋಷ 'ಕ್' ಅಲ್ಪಪ್ರಾಣ ಧ್ವನಿ ಬಂದು ಸೇರಿರುವುದು. ತೆಳ್ಳನೆ ಪದವು 'ನ' ಧ್ವನಿಯನ್ನು ಕಳೆದುಕೊಂಡು ಕಂಠ್ಯ ಘೋಷ 'ಗ್' ಅಲ್ಪಪ್ರಾಣ ಧ್ವನಿಯು ಬಂದು ತ್ಯಳ್ಗ ಉಚ್ಚಾರಣೆಗೊಳ್ಳುವುದು ತೆಳ್ಳನೆ>ತ್ಯಳ್ಗ, ದಪ್ಪನೆ>ದಪ್ಗ ಈ ರೀತಿಯ ಪ್ರಕ್ರಿಯೆ ನಡೆದಿರುವುದು ಮಸ್ಕಿಕನ್ನಡದ ವೈಶಿಷ್ಟ್ಯ.

ಬರಹ ಕನ್ನಡದ ನಡುವೆ ಪದದಲ್ಲಿ ಉಭಯೋಷ್ಠ್ಯ 'ವ್' ಅರ್ಧಸ್ವರ ಧ್ವನಿಯು ಬಿದ್ದುಹೋಗಿ ಆ ಸ್ಥಾನದಲ್ಲಿ ಕಂಠ್ಯ ಅಘೋಷ 'ಕ್' ಅಲ್ಪ ಪ್ರಾಣಧ್ವನಿಯು ಬಂದು ಸೇರಿ ಲಿಂಗಾಯತರ ನಾಯಕ, ಹರಿಜನರ ಮಾತಿನ ಉಚ್ಚಾರಣೆಯಲ್ಲಿ ನಡುವೆ ಪದವು ನಡ್‌ಬರ್ಕ' ಎಂದು ಅಂದರೆ ಪದದ ಮಧ್ಯೆ ಉಭಯೋಷ್ಠ ಘೋಷ 'ಬ' ಅಲ್ಪಪ್ರಾಣ ಧ್ವನಿಯು ಬಂದು ಸೇರಿರುವುದನ್ನು ಕಾಣಬಹುದು.

ಬರಹ ಕನ್ನಡ ಪದಾಂತ್ಯದ 'ಎ' ಕಾರವು ಮಸ್ಕಿಕನ್ನಡದಲ್ಲಿ ಪದಾಂತ್ಯ 'ಅ' ಕಾರವಾಗಿ ನಾಮಪದ, ಕ್ರಿಯಾಪದ ಹಾಗೂ ಗುಣವಾಚಕಗಳಲ್ಲಿ ಮುಖ್ಯವಾಗಿ ಮೂರು ಸಾಮಾಜಿಕ ವರ್ಗಗಳಲ್ಲಿಯೂ ಈ ಪರಿವರ್ತನೆಗೊಂಡಿರುವುದನ್ನು ನೋಡಬಹುದು.

೩.೧೦. ಪದಾದಿಯ 'ಎ' ಕಾರ 'ಅ್ಯ' ಕಾರವಾಗುವುದು

ಬರಹ ಕನ್ನಡದ ಪದಾದಿಯ 'ಎ' ಕಾರವು ಮಸ್ಕಿಕನ್ನಡದಲ್ಲಿ 'ಅ್ಯ' ಕಾರವಾಗಿ ಬಳಕೆಗೊಂಡಿದೆ. ಈ ಬದಲಾವಣೆಯು ನಾಮಪದ ಮತ್ತು ಕ್ರಿಯಾಪದಗಳೆರಡರಲ್ಲಿಯೂ ಕಾಣಸುತ್ತದೆ.

ಎರಡಕ್ಷರದ ನಾಮಪದಗಳಲ್ಲಿ

ಬರಹಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಬೆಳ್ಳಿ	ಬೆಳ್ಳಿ	ಬ್ಯಳ್ಳಿ	ಬ್ಯಳ್ಳಿ	ಎ>ಎ>ಅ್ಯ>ಅ್ಯ
ಕೆಂಪು	ಕೆಂಪು	ಕ್ಯಂಪು	ಕ್ಯಂಪು	ಎ>ಎ>ಅ್ಯ>ಅ್ಯ
ನೆತ್ತಿ	ನ್ಯತ್ತಿ	ನ್ಯತ್ತಿ	ನ್ಯತಿ	ಎ>ಅ್ಯ>ಅ್ಯ>ಅ್ಯ
ನೆಲ	ನ್ಯಲ	ನ್ಯಲ	ನ್ಯಲ	ಎ>ಅ್ಯ>ಅ್ಯ>ಅ್ಯ
ಪೆನ್ನು	ಪೆನ್	ಪ್ಯನ್	ಪ್ಯನ್	ಎ>ಎ>ಅ್ಯ>ಅ್ಯ
ಬೆಟ್ಟ	ಬೆಟ್ಟ	ಬ್ಯಟ್ಟ	ಬ್ಯಟ್ಟ	ಎ>ಎ>ಅ್ಯ>ಅ್ಯ
ಬೆಣ್ಣೆ	ಬೆಣ್ಣೆ	ಬ್ಯಣ್ಣಿ	ಬ್ಯಣ್ಣಿ	ಎ>ಎ>ಅ್ಯ>ಅ್ಯ
ರೆಕ್ಕೆ	ರ್ಯಕ್ಕಿ	ರ್ಯಕ್ಕಿ	ರ್ಯಕ್ಕಿ	ಎ>ಎ>ಅ್ಯ>ಅ್ಯ
ಸೆಕೆ	ಸೆಕಿ	ಸ್ಯಕಿ	ಸ್ಯಕಿ	ಎ>ಎ>ಅ್ಯ>ಅ್ಯ

ಎರಡಕ್ಷರ ನಾಮಪದಗಳಲ್ಲಿ ಸಾಮಾಜಿಕ ವರ್ಗವಾದ ಲಿಂಗಾಯತರ ಮಾತಿನಲ್ಲಿ ಹೆಚ್ಚಿನ ಪದಗಳಲ್ಲಿ ಪದಾದಿಯ 'ಎ' ಕಾರ 'ಅ್ಯ' ಕಾರವಾಗಿ ಉಚ್ಚಾರಣೆಗೊಳ್ಳುತ್ತಿಲ್ಲ ಆದರೆ ನಾಯಕ ಹರಿಜನ ಮಾತಿನಲ್ಲಿ ಪದಾದಿಯ 'ಎ' ಕಾರ 'ಅ್ಯ' ಕಾರವಾಗಿ ಉಚ್ಚಾರಣೆಗೊಳ್ಳುತ್ತಿವೆ. ಬರಹ ಕನ್ನಡದ ಪದಾಂತ್ಯದಲ್ಲಿ 'ಎ' ಕಾರ ಬಂದಂತಹ ಪದಗಳು 'ಇ' ಕಾರಂತವಾಗಿ ಪೂರ್ಣಗೊಳ್ಳುತ್ತಿವೆ. (ಬ್ಯಣ್ಣಿ, ರ್ಯಕ್ಕಿ)

ಮೂರಕ್ಷರದ ನಾಮಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಕೆಚ್ಚಲು	ಕ್ಯಚ್ಲ್ಳ	ಕ್ಯಚ್ಲ್ಳ	ಕ್ಯಚ್ಲ್ಳ	ಎ>ಅ್ಯ>ಅ್ಯ>ಅ್ಯ
ಗೆಳೆಯ	ಗ್ಯಣ್ಯಾ	ಗ್ಯಣ್ಯಾ	ಗ್ಯಣ್ಯಾ	ಎ>ಅ್ಯ>ಅ್ಯ>ಅ್ಯ
ಪೆಟ್ಟಿಗೆ	ಪೆಟಾರಿ	ಪ್ಯಟ್ಗಿ/ಪ್ಯಟಾರಕ್ಕಿ	ಪ್ಯಟ್ಗಿ/ಪ್ಯಟಾರಕ್ಕಿ	ಎ>ಎ>ಅ್ಯ>ಅ್ಯ
ಬೆರಳು	ಬೆಳ್ಳು	ಬ್ಯಳ್ಳು	ಬ್ಯಳ್ಳು	ಎ>ಎ>ಅ್ಯ>ಅ್ಯ

ಬರಹ ಕನ್ನಡ ಮೂರಕ್ಷರ ಪದಗಳಲ್ಲಿ ಪದಾದಿಯ 'ಎ' ಕಾರವು 'ಅ್ಯ' ಕಾರವಾಗಿ ಬದಲಾಗಿರುವುದನ್ನು ಮಸ್ಕಿ ಕನ್ನಡದಲ್ಲಿ ನೋಡಬಹುದು. ಲಿಂಗಾಯತರ ಉಚ್ಚಾರಣೆಯಲ್ಲಿ ಹೆಚ್ಚು ಪದಗಳಲ್ಲಿ ಬದಲಾಗದೆ ನಾಯಕ, ಹರಿಜನರ ಉಚ್ಚಾರಣೆಯಲ್ಲಿ ಎಲ್ಲಾ ಪದಗಳಲ್ಲಿ ಬದಲಾಗಿದೆ. ಮೂರಕ್ಷರದ ಪದಗಳು ಮಸ್ಕಿ ಕನ್ನಡದಲ್ಲಿ ಎರಡಕ್ಷರ ಸಜಾತೀಯ ಸಂಯುಕ್ತಾಕ್ಷರಗಳಾಗುವುದರೊಂದಿಗೆ ಪದಾದಿಯ 'ಎ' ಕಾರ 'ಅ್ಯ' ಕಾರವಾಗುವ ಪರಿವರ್ತನೆಗೆ ಒಳಪಟ್ಟಿರುತ್ತದೆ.

ಎರಡಕ್ಷರ ಕ್ರಿಯಾಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಕೆರೆ	ಕ್ಯರಿ	ಕ್ಯರಿ	ಕ್ಯರಿ	ಎ>ಅ್ಯ>ಅ್ಯ>ಅ್ಯ
ತೆಗ್ಗು	ತ್ಯಗ್ಗ	ತ್ಯಗ್ಗ	ತ್ಯಗ್ಗ	ಎ>ಅ್ಯ>ಅ್ಯ>ಅ್ಯ
ನೆನೆ	ನ್ಯನಿ	ನ್ಯನಿ	ನ್ಯನಿ	ಎ>ಅ್ಯ>ಅ್ಯ>ಅ್ಯ

ಪದಾದಿಯ 'ಎ' ಕಾರವು 'ಅ್ಯ' ಕಾರವಾಗಿ ಎರಡಕ್ಷರ ಕ್ರಿಯಾಪದಗಳು ಮಸ್ಕಿಕನ್ನಡದಲ್ಲಿ ಬಳಕೆಗೊಂಡಿರುತ್ತವೆ.

ಮೂರಕ್ಷರದ ಕ್ರಿಯಾಪದಗಳು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ನೆನಪು	ನ್ಯನ್ಪು	ನ್ಯಪ್ಪು	ನ್ಯಪ್ಪು	ಎ>ಅ್ಯ>ಅ್ಯ>ಅ್ಯ
ನೆಮ್ಮದಿ	ನಮ್ಮದಿ	ನ್ಯಮ್ದಿ	ನ್ಯಮ್ದಿ	ಎ>ಅ>ಅ್ಯ>ಅ್ಯ
ನೆರಳು	ನರಳ	ನ್ಯಳ್ಳು	ನ್ಯಳ್ಳು	ಎ>ಅ>ಅ್ಯ>ಅ್ಯ
ಸೆಳೆತ	ಸಳತ	ಸ್ಯಳ್ತ	ಸ್ಯಳ್ತ	ಎ>ಅ>ಅ್ಯ>ಅ್ಯ

ಬರಹ ಕನ್ನಡ ಮೂರಕ್ಷರದ ಕ್ರಿಯಾಪದಗಳು ಮಸ್ಕಿಕನ್ನಡದಲ್ಲಿ ಪದಾದಿಯ 'ಎ' ಕಾರ 'ಅ್ಯ' ಕಾರವಾಗಿ ಬಳಕೆಯಲ್ಲಿದೆ. ಲಿಂಗಾಯತರ ಉಚ್ಚಾರಣೆಯಲ್ಲಿ ಹೆಚ್ಚು ಪದಗಳಲ್ಲಿ ಬದಲಾಗದೆ ನಾಯಕ ಹರಿಜನರ ಉಚ್ಚಾರಣೆಯಲ್ಲಿ ಬದಲಾಗಿರುತ್ತದೆ. ನಾಯಕ, ಹರಿಜನರ ಮಾತಿನಲ್ಲಿ ಬರಹ ಕನ್ನಡದ ಮೂರಕ್ಷರದ ಪದಗಳು ಮಸ್ಕಿಕನ್ನಡದಲ್ಲಿ ಪದಮಧ್ಯಸ್ವರ ಲೋಪಗೊಂಡು ಎರಡಕ್ಷರ ಸಂಯುಕ್ತಾಕ್ಷರ ಪದಗಳಾಗಿ ಬಳಕೆಗೊಳ್ಳುತ್ತಿವೆ.

೩.೧೧. ಪದಾಂತ್ಯದ 'ಎ' ಕಾರ 'ಇ' ಕಾರವಾಗುವುದು

ಪದದ ಅಂತ್ಯದಲ್ಲಿ ಬರುವ 'ಎ' ಕಾರವು ಕನ್ನಡದ ಹಲವಾರು ಆಧುನಿಕ ಪ್ರಬೇಧಗಳಲ್ಲಿ 'ಇ'ಕಾರವಾಗಿ ಬದಲಾಗಿರವುದನ್ನು ಕಾಣುತ್ತೇವೆ. ಕರ್ನಾಟಕದ ಉತ್ತರ ಭಾಗದಲ್ಲಿರುವ 'ಮಸ್ಕಿಕನ್ನಡ'ದಲ್ಲಿ ಈ ಬದಲಾವಣೆ ನಾಮಪದ, ಕ್ರಿಯಾಪದ ಮತ್ತು ಗುಣವಾಚಕಗಳಲ್ಲಿ ಕಂಡುಬರುತ್ತದೆ. ಈ ಬದಲಾವಣೆಯನ್ನು ಕೆಳಗಿನ ಬರಹ ಕನ್ನಡದೊಂದಿಗೆ ಹೋಲಿಸುವುದರ ಮೂಲಕ ಸಾಧಿಸಿ ತೋರಿಸಬಹುದು.

ಎರಡಕ್ಷರ ನಾಮಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಅತ್ತೆ	ಅತ್ತಿ	ಅತ್ತಿ	ಅತ್ತಿ	ಎ>ಇ>ಇ>ಇ
ಎಣ್ಣೆ	ಯಣ್ಣಿ	ಯಣ್ಣಿ	ಯಣ್ಣಿ	ಎ>ಇ>ಇ>ಇ
ಓಲೆ	ವಾಲಿ	ವಾಲಿ	ವಾಲಿ	ಎ>ಇ>ಇ>ಇ

ಕಪ್ಪೆ	ಕಪ್ಪಿ	ಕ್ಯಪ್ಪಿ	ಕ್ಯಪ್ಪಿ	ಎ>ಇ>ಇ>ಇ
ಕೋಣೆ	ಕೋಣಿ	ಕೋಣಿ	ಕೋಲಿ	ಎ>ಇ>ಇ>ಇ
ಚಾಪೆ	ಚಾಪಿ	ಚಾಪಿ	ಚಾಪಿ	ಎ>ಇ>ಇ>ಇ
ಬೆಣ್ಣೆ	ಬೆಣ್ಣಿ	ಬ್ಯಣ್ಣಿ	ಬ್ಯಣ್ಣಿ	ಎ>ಇ>ಇ>ಇ

ಬರಹ ಕನ್ನಡದಲ್ಲಿರುವ ಪದಾಂತ್ಯದ 'ಎ' ಕಾರವು ಮಸ್ಕಿಕನ್ನಡ ಪ್ರಭೇದದಲ್ಲಿ 'ಇ'ಕಾರಾಂತ್ಯವಾಗಿ ಪರಿವರ್ತನೆ ಗೊಂಡಿರುವುದನ್ನಿಲ್ಲಿ ಎರಡಕ್ಷರ ನಾಮಪದದಲ್ಲಿ ನೋಡಬಹುದು. ಸಾಮಾಜಿಕ ವರ್ಗಗಳಾದ ಲಿಂಗಾಯತ, ನಾಯಕ, ಹರಿಜನ ಈ ಮೂರರಲ್ಲಿ ಯಾವುದೇ ಉಚ್ಚಾರಣೆಯು ವ್ಯತ್ಯಾಸ ಇರದೆ ಇರುವುದನ್ನು ನೋಡಬಹುದು. ಬರಹ ಕನ್ನಡದ ಕೋಣೆ ಪದವು ಮಸ್ಕಿ ಕನ್ನಡದಲ್ಲಿ ಕೋಲಿ ಎಂಬುದಾಗಿ ಉಚ್ಚಾರಣೆಗೊಳ್ಳುತ್ತದೆ. ಅನುನಾಸಿಕ ಮೂರ್ಧನ್ಯ ಧ್ವನಿಯಾದ 'ಣ್' ಕಾರವು ಮಸ್ಕಿ ಕನ್ನಡದಲ್ಲಿ ಪಶ್ಚ ದಂತ್ಯ ಘೋಷ ಧ್ವನಿ 'ಲ' ಆಗಿ ಬದಲಾವಣೆಯೊಂದಿದೆ. ಇದಕ್ಕೆ ಕಾರಣ ಬಹುಶಃ ಭಾಷೆಯು ಸಂಕೀರ್ಣತೆಯಿಂದ ಸರಳತೆ ಕಡೆಗೆ ಹರಿಯುವುದಾಗಿದೆ. 'ಣ್' ಕಾರವು ಉಚ್ಚಾರಣೆಗೆ ಕಠಿಣವಾದ್ದರಿಂದ ಮಸ್ಕಿ ಪ್ರಭೇದದಲ್ಲಿ ಣ್ ಕಾರವು 'ಲ' ಕಾರವಾಗಿ (ಕೋಣೆ>ಕೋಲಿ) ಬಳಕೆಯಲ್ಲಿದೆ.

ಮೂರಕ್ಷರ ನಾಮಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಅತ್ತಿಗೆ	ಅತ್ತಿಗಿ	ಅತ್ತಿ	ಅತ್ತಿ	ಎ>ಇ>ಇ>ಇ
ಅಡಿಕೆ	ಅಡಿಕಿ	ಅಡ್ಕಿ	ಅಡ್ಕಿ	ಎ>ಇ>ಇ>ಇ
ಅರಕೆ	ಅರಕಿ	ಅರ್ಕಿ	ಅರ್ಕಿ	ಎ>ಇ>ಇ>ಇ
ಅವರೆ	ಅವರಿ	ಅವರಿ	ಅವ್ರಿ	ಎ>ಇ>ಇ>ಇ
ಇರುವೆ	ಇರುಬಿ	ಇರ್‍ಬಿ	ಇರ್‍ಬಿ	ಎ>ಇ>ಇ>ಇ
ಒನಕೆ	ಒನಕಿ	ವಣ್ಕಿ	ವಣ್ಕಿ	ಎ>ಇ>ಇ>ಇ
ಜಿಗಣೆ	ತಿಗಣಿ	ತಿಗ್‍ಣಿ	ತಿಗ್‍ಣಿ	ಎ>ಇ>ಇ>ಇ
ಜಿರಳೆ	ಜಿರಲಿ	ಜಿರ್ಲಿ	ಜಿರ್ಲಿ	ಎ>ಇ>ಇ>ಇ
ಪೆಟ್ಟಿಗೆ	ಪೆಟಾರಿ	ಸಂದ್ಕ/ಪ್ಯಾಟ	ಸಂದ್ಕ/ಪ್ಯಟ	ಎ>ಇ>ಇ>ಇ
ಭಜನೆ	ಭಜನಿ	ಬಜನಿ	ಬಜನಿ	ಎ>ಇ>ಇ>ಇ
ಮಲ್ಲಿಗೆ	ಮಲ್ಲಿಗಿ	ಮಲ್ಗಿ	ಮಲ್ಗಿ	ಎ>ಇ>ಇ>ಇ
ಮಾಳಿಗೆ	ಮಾಳ್ಗಿ	ಮಾಳ್ಗಿ	ಮಾಳ್ಗಿ	ಎ>ಇ>ಇ>ಇ
ಹುಣ್ಣಿಮೆ	ಉಣಿಮಿ	ಉಣ್ವಿ	ಉಣ್ವಿ	ಎ>ಇ>ಇ>ಇ

ಮೂರಕ್ಷರದ ನಾಮಪದದಲ್ಲಿ ಪದಾಂತ್ಯದ 'ಎ' ಕಾರವು 'ಇ' ಕಾರವಾಗಿ ಮಸ್ಕಿಕನ್ನಡ ಈ ಮೇಲಿನ ಸಾಮಾಜಿಕ ವರ್ಗಗಳಲ್ಲಿ ಬದಲಾವಣೆ ಹೊಂದಿದೆ ಎಂದು ಮೇಲಿನ ಉದಾಹರಣೆಯಿಂದ ಕಂಡುಕೊಳ್ಳಬಹುದು. ಬರಹ ಕನ್ನಡದ ಮೂರಕ್ಷರದ ಪದಗಳು ಮಸ್ಕಿ ಕನ್ನಡದಲ್ಲಿ ಪದಾಂತ್ಯದ 'ಎ' ಕಾರ 'ಇ' ಕಾರವಾಗುವುದನ್ನು ನೋಡಬಹುದು. ಲಿಂಗಾಯತರ ಉಚ್ಚಾರಣೆಯಲ್ಲಿ ಮೂರಕ್ಷರದ ಪದಗಳಾಗಿಯೇ 'ಎ' ಕಾರ 'ಇ' ಕಾರಗೊಂಡರೆ, ನಾಯಕ ಹರಿಜನರ ಉಚ್ಚಾರಣೆಯಲ್ಲಿ ವಿಜಾತೀಯ ಸಂಯುಕ್ತಾಕ್ಷರಗಳಾಗಿ ಬಳಕೆಗೊಳ್ಳುತ್ತಿದ್ದು ಪದಮಧ್ಯ ಸ್ವರಲೋಪಗೊಳ್ಳುತ್ತವೆ. (ಅಡ್ಕಿ, ಅರ್ಕಿ, ವಣ್ಕಿ)

ಮೂಲದ್ರಾವಿಡದಲ್ಲಿ ಪದಗಳ ಮೊದಲಿಗೆ ಇದ್ದ 'ವ' ಕಾರವು ಕನ್ನಡದಲ್ಲಿ 'ಬ' ಕಾರವಾಗಿ ಬದಲಾವಣೆಗೊಂಡಿದೆ. ಕನ್ನಡ ಇತಿಹಾಸದಲ್ಲಿ ಈ ತರಹದ 'ವ' ಕಾರ 'ಬ' ಕಾರವಾಗುವ ಬದಲಾವಣೆಯನ್ನು ಆರು ಏಳನೇ ಶತಮಾನದಲ್ಲಿ ಮೊದಲು ಆಗಿರಬೇಕು ಎಂದು ವಾದಿಸಲು ಶಾಸನಗಳ ಆಧಾರವಿದ್ದು ಎಂಟರಿಂದ ಹತ್ತನೇ ಶತಮಾನದವರೆಗಿನ ಶಾಸನಗಳಲ್ಲಿ ಇಂತಹ ಹಲವು ಪದಗಳಿಗೆ 'ಬ' ಕಾರವಿರುವ ರೂಪ ಮಾತ್ರವಲ್ಲದೆ 'ವ' ಕಾರವಿರುವ ರೂಪ ಕಾಣಿಸುತ್ತದೆ. 'ವ' ಕಾರದ ಬದಲು 'ಬ' ಕಾರದ ಬಳಕೆಗೊಂಡಿರುವುದು ನಂತರ ಶತಮಾನಗಳಲ್ಲಿ ಹೆಚ್ಚಾಗುತ್ತಾ ಹೋಗಿ ಪದಗಳ ಮೊದಲಿಗೆ 'ವ' ಕಾರ ಇಲ್ಲವೇ ಇಲ್ಲವೆಂದು ಆಗುವುದನ್ನು ಕನ್ನಡ ಶಾನಗಳಲ್ಲಿ ಕಾಣಬಹುದು.[೪] ಮಸ್ಕಿಕನ್ನಡದ ಕೆಲವು ಪದಗಳ ಪದ ಅಂತ್ಯದಲ್ಲಿ ಕಾಣಿಸುವ 'ಬ' ಕಾರ ಮೂಲದ್ರಾವಿಡದ 'ವ' ಕಾರದಿಂದಲೇ ಬಂದಿದೆ ಎಂದು ಹೇಳಬಹುದು (ಇರುವೆ>ಇರುಬಿ) ಈ ತರಹದ ಬದಲಾವಣೆಯಿಂದ ಮಸ್ಕಿಕನ್ನಡವು ಮೂಲದ್ರಾವಿಡದ ಅಂಶವನ್ನು ಉಳಿಸಿಕೊಂಡುಬಂದಿದೆ ಎಂಬುದು ಗಮನಿಸಬಹುದಾದ ಅಂಶ. ಉಭಯೋಷ್ಟ ಘೋಷ ಧ್ವನಿಯಾದ ಅರ್ಧಸ್ವರ 'ವ್'ಕಾರವು ಉಭಯೋಷ್ಟ ಘೋಷ ಧ್ವನಿಯಾದ ಅಲ್ಪಪ್ರಾಣ 'ಬ' ಕಾರವಾಗಿ ಮಸ್ಕಿಕನ್ನಡದಲ್ಲಿ ಬದಲಾವಣೆಗೊಂಡಿದೆ. (ವ>ಬ)

ಬರಹ ಕನ್ನಡದ ಒನಕೆ ಪದವು ಮಸ್ಕಿಪರಿಸರದ ಸಾಮಾಜಿಕ ವರ್ಗಗಳಾದ ನಾಯಕ, ಹರಿಜನರ ಮಾತಿನಲ್ಲಿ ದಂತ್ಯ ಘೋಷ ಧ್ವನಿ ಅನುನಾಸಿಕ 'ನ' ಕಾರವು ಮೂರ್ಧನ್ಯ ಘೋಷ ಧ್ವನಿ ಅನುನಾಸಿಕ 'ಣ್' ಕಾರವಾಗಿ ಬಳಕೆಗೊಂಡಿದ್ದು ವಿಜಾತಿ ಸಂಯುಕ್ತಾಕ್ಷರ (ಒನಕೆ>ವಣ್ಕಿ)ಯಾಗಿ ಬದಲಾವಣೆಗೊಂಡಿರುತ್ತದೆ.

ನಾಲ್ಕು ಅಕ್ಷರದ ನಾಮಪದವು ಪದಾಂತ್ಯದ 'ಎ' ಕಾರ 'ಇ' ಕಾರವಾಗುವಾಗ ಸಾಮಾಜಿಕ ವರ್ಗಗಳಾದ ಲಿಂಗಾಯತರನ್ನು ಹೊರತುಪಡಿಸಿ ನಾಯಕ, ಹರಿಜನರಲ್ಲಿ ಮೂರಕ್ಷರ ಪದಗಳಾಗಿ, ಪದ ಮಧ್ಯ ಸ್ವರ ಲೋಪಗೊಂಡು ಬಳಕೆಗೊಳ್ಳುತ್ತಿವೆ (ಅಮಾಸಿ, ಅಲ್ಸಂದಿ) ಅಲ್ಪಪ್ರಾಣ ಕಂಠ್ಯ ಅಘೋಷ ಧ್ವನಿಯಾದ 'ಕ' ಕಾರವು ಅಲ್ಪಪ್ರಾಣ ಕಂಠ್ಯಘೋಷ 'ಗ' ಧ್ವನಿಯಾಗಿ ಬದಲಾವಣೆಗೊಂಡಿರುವುದನ್ನು ಕಾಣಬಹುದು. (ಬಾಚಣಿಗೆ> ಬಾಸಿಣ್ಕಿ, ಬೀಸಣಿಗೆ>ಬೀಸಣ್ಕಿ) ಇದಕ್ಕೆ ಕಾರಣ ಕಂಠ್ಯ ಘೋಷ ಧ್ವನಿ 'ಗ' ಕಾರದ ಹಿಂದೆ ಮೂರ್ದನ್ಯ ಅನುನಾಸಿಕ ಘೋಷ 'ಣ್' ಕಾರ ಬಂದಿರುವುದು ಎಂದು ಹೇಳಬಹುದು.

ನಾಲ್ಕು ಅಕ್ಷರದ ನಾಮಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಅಲಸಂದೆ	ಅಲಸಂದಿ	ಅಲಸಂದಿ	ಅಲ್ಸಂದಿ	ಎ>ಇ>ಇ>ಇ
ಅಮವಾಸೆ	ಅಮವಾಸಿ	ಅಮಾಸಿ	ಅಮಾಸಿ	ಎ>ಇ>ಇ>ಇ
ಬಾಚಣಿಗೆ	ಬಾಚಣಿಕಿ	ಬಾಸಣ್ಕಿ	ಬಾಸಣ್ಕಿ	ಎ>ಇ>ಇ>ಇ
ಬೀಸಣಿಗೆ	ಬೀಸಣಿಕಿ	ಬೀಸಣ್ಕಿ	ಬೀಸಣ್ಕಿ	ಎ>ಇ>ಇ>ಇ
ವೀಳ್ಯದೆಲೆ	ವೀಳ್ಯದೆಲಿ	ವೀಳ್ಯದ್ಯಲಿ	ವೀಳ್ಯದ್ಯಲಿ	ಎ>ಇ>ಇ>ಇ

ಬರಹ ಕನ್ನಡಲ್ಲಿರುವ 'ಎ' ಕಾರವು ಮಸ್ಕಿ ಕನ್ನಡದಲ್ಲಿ 'ಇ' ಕಾರವಾಗಿರುವುದನ್ನು ಈ ಮೇಲಿನ ಮೂರು ಸಾಮಾಜಿಕ ವರ್ಗಗಳಲ್ಲಿ ಪದಾಂತ್ಯದ 'ಎ' ಕಾರವು 'ಇ' ಕಾರವಾಗಿ ಬದಲಾಗಿರುವುದನ್ನು ಕಂಡುಕೊಳ್ಳುತ್ತೇವೆ.

ಐದಕ್ಷರ ನಾಮಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಅಡಿಗೆಮನೆ	ಅಡಿಗಿಮನಿ	ಅಡ್ಗಿಮನಿ	ಅಡ್ಗಿಮನಿ	ಎ>ಇ>ಇ>ಇ
ಈಳಿಗೆಮಣೆ	ಈಳಿಗಿಮಣಿ	ಇಳ್ಗಿಮಣಿ	ಇಳ್ಗಿಮಣಿ	ಎ>ಇ>ಇ>ಇ
ಕಸಬರಿಗೆ	ಕಸಬರಿಗಿ	ಕಸ್‌ಬರ್ಗಿ	ಕಸ್‌ಬರ್ಗಿ	ಎ>ಇ>ಇ>ಇ
ದೇವರಮನೆ	ದೇವ್ರಮನಿ	ದ್ಯವ್ರಮನಿ	ದ್ಯವ್ರಮನಿ	ಎ>ಇ>ಇ>ಇ

ಈ ಮೇಲಿನ ಐದಕ್ಷರದ ನಾಮಪದದಲ್ಲಿಯೂ ಸಹ ಬರಹ ಕನ್ನಡದ 'ಎ' ಕಾರವು ಮಸ್ಕಿಕನ್ನಡದಲ್ಲಿ 'ಇ' ಕಾರವಾಗಿದ್ದು ಮೇಲಿನ ಸಾಮಾಜಿಕ ವರ್ಗಗಳಲ್ಲಿ ಬದಲಾಗಿರುತ್ತದೆ.

ಪದದ ಅಂತ್ಯದಲ್ಲಿ ಬರುವ 'ಎ' ಕಾರವು 'ಇ' ಕಾರವಾಗುವ ಪ್ರಕ್ರಿಯೆಯು ನಾಮಪದಗಳಲ್ಲಿ ಆದ ತರಹವೇ ಕ್ರಿಯಾಪದಗಳಲ್ಲಿ ಬದಲಾವಣೆಗೊಳ್ಳುವುದನ್ನು ಮಸ್ಕಿಕನ್ನಡದಲ್ಲಿ ನೋಡಬಹುದು. ಈ ಬದಲಾವಣೆಯನ್ನು ಈ ಕೆಳಗಿನ ಉದಾಹರಣೆಯಿಂದ ತಿಳಿಯಬಹುದು.

ಪದಾಂತ್ಯದ 'ಎ' ಕಾರ 'ಇ' ಕಾರವಾಗುವುದು

ಎರಡಕ್ಷರ ಕ್ರಿಯಾಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಅಲೆ	ಅಲಿ	ಅಲಿ	ಅಲಿ	ಎ>ಇ>ಇ>ಇ
ಅಳೆ	ಅಳಿ	ಅಳಿ	ಅಳಿ	ಎ>ಇ>ಇ>ಇ
ಒಗೆ	ವಗಿ	ವಗಿ	ವಗಿ	ಎ>ಇ>ಇ>ಇ

ಕಳೆ	ಕಳಿ	ಕಳಿ	ಕಳಿ	ಎ>ಇ>ಇ>ಇ
ಕೊರೆ	ಕ್ವರಿ	ಕ್ವರಿ	ಕ್ವರಿ	ಎ>ಇ>ಇ>ಇ
ತೆರೆ	ತೆರಿ	ತೆರಿ	ತೆರಿ	ಎ>ಇ>ಇ>ಇ
ನಡೆ	ನಡಿ	ನಡಿ	ನಡಿ	ಎ>ಇ>ಇ>ಇ
ನೆನೆ	ನೆನಿ	ನೆನಿ	ನೆನಿ	ಎ>ಇ>ಇ>ಇ
ಬರೆ	ಬರಿ	ಬರಿ	ಬರಿ	ಎ>ಇ>ಇ>ಇ
ಹೊಡೆ	ವಡಿ	ವಡಿ	ವಡಿ	ಎ>ಇ>ಇ>ಇ

ಮೇಲಿನ ಮೂರು ಸಾಮಾಜಿಕ ವರ್ಗಗಳಲ್ಲಿ ಯಾವುದೇ ವ್ಯತ್ಯಾಸಗೊಳ್ಳದೆ ಪದಾಂತ್ಯದ 'ಎ' ಕಾರ 'ಇ' ಕಾರವಾಗುವುದನ್ನು ಎರಡಕ್ಷರದ ಕ್ರಿಯಾಪದಗಳಲ್ಲಿ ನೋಡಬಹುದು.

ಮೂರಕ್ಷರದ ಕ್ರಿಯಾಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಇದ್ದೇನೆ	ಆಯ್‌ದೀನಿ	ಅಯ್‌ದೀನಿ	ಅಯ್‌ದೀನಿ	ಎ>ಇ>ಇ>ಇ
ನಂಬಿಕೆ	ನಂಬಿಕಿ	ನಂಬ್ಕಿ	ನಂಬ್ಕಿ	ಎ>ಇ>ಇ>ಇ
ನೋಡ್ತೇನೆ	ನೋಡ್ತೀನಿ	ನೋಡ್ತ್ನಿ	ನೋಡ್ತ್ನಿ	ಎ>ಇ>ಇ>ಇ
ಮಾಡ್ತೇನೆ	ಮಾಡ್ತೀನಿ	ಮಾಡ್ತ್ನಿ	ಮಾಡ್ತ್ನಿ	ಎ>ಇ>ಇ>ಇ

ಮೂರಕ್ಷರ ಕ್ರಿಯಾಪದಗಳಲ್ಲಿ ಪದಾಂತ್ಯದ 'ಎ' ಕಾರ 'ಇ' ಕಾರವಾಗಿರುವುದು ಕಂಡು ಬರುತ್ತದೆ. ಈ ಮೇಲಿನ ಉದಾಹರಣಗಳಲ್ಲಿ ಕ್ರಿಯೆಯು ಪೂರ್ಣಗೊಂಡಿರುವುದನ್ನು ಗಮನಿಸಬಹುದು. ಇದ್ದೇನೆ ಎಂಬ ಪದವು ಪದರೂಪ ಬದಲಾವಣೆಗೊಂಡು 'ಅಯ್‌ದೀನಿ' ಎಂದು ಬಳಕೆಗೊಳ್ಳುವುದು (ನಂಬಿಕೆ>ನಂಬ್ಕಿ ಬರಹ) ಕನ್ನಡ ಪದವು ಮಸ್ಕಿ ಕನ್ನಡದಲ್ಲಿ ಲಿಂಗಾಯತರನ್ನು ಹೊರತುಪಡಿಸಿ ಉಳಿದವರಲ್ಲಿ ವಿಜಾತಿಯ ದ್ವಿತ್ವಕ್ಷರವಾಗಿ 'ನಂಬಿಕೆ' ಪದವು 'ನಂಬ್ಕಿ' ಎಂದು ಉಚ್ಚಾರಣೆಯಲ್ಲಿದೆ. 'ಬಿದ್ದಿದೆ' ಎಂಬ ಪದದಲ್ಲಿ ಪದಮಧ್ಯಸ್ವರ 'ಇ' ಕಾರ ಲೋಪವಾಗಿ 'ಆಯ್' ಕಾರ ಸೇರ್ಪಡೆಗೊಂಡು ಪದದ ಅಂತ್ಯದ 'ಎ' ಕಾರವು 'ಇ' ಕಾರವಾಗಿ ಬಳಕೆಯಲ್ಲಿದೆ. 'ನೋಡ್ತೇನೆ', 'ಮಾಡ್ತೇನೆ' ಪದಗಳು ನಾಯಕ, ಹರಿಜನರ ಮಾತಿನಲ್ಲಿ ಎರಡಕ್ಷರ ಪದವಾಗಿ ವಿಜಾತಿಯ ದ್ವಿತ್ವಗಳಾಗಿ ಬಳಕೆಯಲ್ಲಿವೆ. ಇದು ಮಸ್ಕಿ ಕನ್ನಡ ವೈಶಿಷ್ಟ್ಯ.

ನಾಲ್ಕಕ್ಷರದ ಕ್ರಿಯಾಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಆಗುತ್ತದೆ	ಆಗ್‌ತೈತಿ	ಆಗ್‌ತೈತಿ	ಆಗ್‌ತೈತಿ	ಎ>ಇ>ಇ>ಇ
ಇರುತ್ತದೆ	ಇರ್‌ತೈತಿ	ಇರ್‌ತೈತಿ	ಇರ್‌ತೈತಿ	ಎ>ಇ>ಇ>ಇ

ಓಡುತ್ತದೆ	ವೋಡ್ತೈತಿ	ವೋಡ್ತೈತಿ	ವೋಡ್ತೈತಿ	ಎ>ಇ>ಇ>ಇ
ಮನಸೆಳೆ	ಮನಸ್ಯಳಿ	ಮನಸ್ಯಳಿ	ಮನಸ್ಯಳಿ	ಎ>ಇ>ಇ>ಇ
ಮಲಗಿದೆ	ಮಲಗೈತಿ	ಮಲಗೈತಿ	ಮಲಗೈತಿ	ಎ>ಇ>ಇ>ಇ

ಬರಹಕನ್ನಡದ ನಾಲ್ಕು ಅಕ್ಷರದ ಕ್ರಿಯಾಪದಗಳು ಮಸ್ಕಿಕನ್ನಡದಲ್ಲಿ ಪದಾಂತ್ಯದ 'ಎ' ಕಾರ 'ಇ' ಕಾರವಾಗಿ ಬಳಕೆಗೊಳ್ಳುವವು. ಸಜಾತೀಯ ಪದಮಧ್ಯ ದ್ವಿತ್ವಕ್ಷರ 'ತ' ಅಕ್ಷರ ನಂತರ ಸ್ವರವು 'ಅ' ಕಾರವು 'ಅಯ್' ಕಾರವಾಗಿ ಬದಲುಗೊಂಡು ಇರುವುದನ್ನು ನೋಡಬಹುದು. ಮನಸೆಳೆ ಎಂಬ ಪದದಲ್ಲಿ ಪದಮಧ್ಯ 'ಎ' ಕಾರ ಸ್ವರವು ಲೋಪಗೊಂಡು 'ಅ್ಯ' ಉಪಧ್ವನಿ ಸ್ವರಬಂದು ಮನಸ್ಯಳಿ ಎಂದು ಉಚ್ಚಾರಣೆಯಲ್ಲಿರುವುದು. 'ಮಲಗಿದೆ' ಎಂಬ ಪದದಲ್ಲಿ ಪದಮಧ್ಯ ಸ್ವರ 'ಇ' ಕಾರ ಲೋಪಗೊಂಡು 'ಅಯ್' ಕಾರ ಸೇರಿ ಮಲಗೈತಿ ಎಂದು ಪದಾಂತ್ಯದ ಧ್ವನಿಯಾದ ದಂತ್ಯ ಘೋಷ 'ದ್' ಅಲ್ಪಪ್ರಾಣವು ದಂತ್ಯ ಅಘೋಷ ಅಲ್ಪಪ್ರಾಣ 'ತ್' ಕಾರವಾಗಿ (ದೆ>ತಿ) ಬಳಕೆಯಲ್ಲಿದೆ.

ಗುಣವಾಚಕ ಪದಗಳಲ್ಲಿ ಪದಾಂತ್ಯ 'ಎ' ಕಾರ 'ಇ' ಕಾರವಾಗುವುದು.

ಎರಡಕ್ಷರದ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಕಡೆ	ಕಡಿ	ಕಡಿ	ಕಡಿ	ಎ>ಇ>ಇ>ಇ
ಕೊನೆ	ಕ್ವೊನಿ	ಕ್ವನಿ	ಕ್ವನಿ	ಎ>ಇ>ಇ>ಇ
ಜಾಣೆ	ಜಾಣಿ	ಜಾಣಿ/ಶ್ಯಾಣಿ	ಜಾಣಿ/ಶ್ಯಾಣಿ	ಎ>ಇ>ಇ>ಇ

ಮೂರಕ್ಷರದ ಪದಗಳಲ್ಲಿ

ಬರಹಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಎಡಕ್ಕೆ	ಯಡ್ಗ	ಯಡ್ಗ	ಯಡ್ಗಡಿ	ಎ>ಇ>ಇ>ಇ
ಕಡಿಮೆ	ಕಮ್ಮಿ	ಕಮ್ಮಿ	ಕಮ್ಮಿ	ಎ>ಇ>ಇ>ಇ
ನೇರಳೆ	ನೇರಳಿ	ನೇರಳಿ/ನೀಲಿ	ನೇರಳಿ/ನೀಲಿ	ಎ>ಇ>ಇ>ಇ
ಬಲಕ್ಕೆ	ಬಲ್ಗಡಿ	ಬಲ್ಗಡಿ	ಬಲ್ಗಡಿ	ಎ>ಇ>ಇ>ಇ

ಮಸ್ಕಿ ಕನ್ನಡದಲ್ಲಿ ಗುಣವಾಚಕಗಳಲ್ಲಿ ಪದಾಂತ್ಯದ 'ಎ' ಕಾರ 'ಇ' ಕಾರವಾಗಿ ಕಾಣಿಸಿಗೊಳ್ಳುತ್ತಿವೆ. ಬರಹ ಕನ್ನಡ ಸಜಾತೀಯ ಸಂಯುಕ್ತಾಕ್ಷರವು ವಿಜಾತೀಯ ಸಂಯುಕ್ತಾಕ್ಷರಗಳಾಗಿ ಬದಲಾವಣೆಗೊಂಡು ಪದಾಂತ್ಯದ 'ಎ' 'ಇ' ಕಾರ ಕಾರವಾಗಿವೆ. (ಎಡಕ್ಕೆ>ಯಡ್ಗಡಿ) (ಬಲಕ್ಕೆ>ಬಲ್ಗಡಿ) ಮೂರಕ್ಷರ ಪದ 'ಕಡಿಮೆ' ದ್ವಿತ್ವಕ್ಷರ ಪದವಾಗಿ (ಕಮ್ಮಿ) ಉಚ್ಚಾರಣೆಯಲ್ಲಿದೆ.

ಪದಾತ್ಯಂತ 'ಎ' ಕಾರವು ಮಸ್ಕಿ ಕನ್ನಡದಲ್ಲಿ 'ಇ' ಕಾರವಾಗಿ ಬಳಕೆಗೊಳ್ಳುವುದನ್ನು ನಾಮಪದ ಕ್ರಿಯಾಪದ, ಗುಣವಾಚಕಗಳಲ್ಲಿ ಹಾಗೂ ಲಿಂಗಾಯತ, ನಾಯಕ, ಹರಿಜನ ಮೂರು ಸಾಮಾಜಿಕ ವರ್ಗಗಳಲ್ಲಿ ಬದಲಾವಣೆಗೊಂಡಿರುವುದು ಮಸ್ಕಿ ಕನ್ನಡದ ವೈಶಿಷ್ಟ್ಯ.

೩.೧೨. ಪದಾದಿಯ 'ಎ' ಕಾರ 'ಯ' ಕಾರವಾಗುವುದು.

ಬರಹ ಕನ್ನಡದ ಪದಾದಿಯ 'ಎ' ಕಾರವು 'ಯ' ಕಾರವಾಗಿ ಮಸ್ಕಿಕನ್ನಡದಲ್ಲಿ ಬದಲಾಗಿರುವುದು ಕಂಡುಬರುತ್ತದೆ. ಮಸ್ಕಿಕನ್ನಡದಲ್ಲಿ ನಾಮಪದ ಕ್ರಿಯಾಪದ, ಗುಣವಾಚಕ ಹಾಗೂ ಸಂಖ್ಯಾವಾಚಕಗಳಲ್ಲಿ ಈ ಬದಲಾಗುವ ಪ್ರಕ್ರಿಯೆಯನ್ನು ಗಮನಿಸಬಹುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಎಂಟು	ಯಂಟ	ಯಂಟ	ಯಂಟ	ಎ>ಯ>ಯ>ಯ
ಎಡ	ಯಡ	ಯಡ	ಯಡ	ಎ>ಯ>ಯ>ಯ
ಎಣ್ಣೆ	ಯಣ್ಣಿ	ಯಣ್ಣಿ	ಯಣ್ಣಿ	ಎ>ಯ>ಯ>ಯ
ಎತ್ತು	ಯತ್ಥ	ಯತ್ಥ	ಯತ್ಥ	ಎ>ಯ>ಯ>ಯ
ಎಂದು	ಯಂದ	ಯಂದ	ಯಂದ	ಎ>ಯ>ಯ>ಯ
ಎದೆ	ಯದಿ	ಯದಿ	ಯದಿ	ಎ>ಯ>ಯ>ಯ
ಎಮ್ಮೆ	ಯಮ್ಮಿ	ಯಮ್ಮಿ	ಯಮ್ಮಿ	ಎ>ಯ>ಯ>ಯ
ಎಲೆ	ಯಲಿ	ಯಲಿ	ಯಲಿ	ಎ>ಯ>ಯ>ಯ
ಎಲ್ಲಿ	ಯಲ್ಲಿ	ಯಲ್ಲಿ	ಯಲ್ಲಿ	ಎ>ಯ>ಯ>ಯ
ಎಳೆ	ಯಳಿ	ಯಳಿ	ಯಳಿ	ಎ>ಯ>ಯ>ಯ
ಎಸೆ	ಯಸಿ	ಯಸಿ	ಯಸಿ	ಎ>ಯ>ಯ>ಯ
ಎಳ್ಳು	ಯಳ್ಳು	ಯಳ್ಳು	ಯಳ್ಳು	ಎ>ಯ>ಯ>ಯ

ಮಸ್ಕಿಪರಿಸರದಲ್ಲಿ ಮೂರು ಸಾಮಾಜಿಕ ವರ್ಗಗಳಾದ ಲಿಂಗಾಯತ, ನಾಯಕ, ಹರಿಜನರ ಉಚ್ಚಾರಣೆಗಳಲ್ಲಿ ಪದಾದಿಯ 'ಎ' ಕಾರವು 'ಯ' ಕಾರವಾಗಿರುವುದು ಮೇಲಿನ ಎರಡಕ್ಷರದ ಪದಗಳ ಮಾದರಿಯಲ್ಲಿ ನೋಡಬಹುದು. ಪದಾದಿಯ 'ಎ' ಕಾರ 'ಯ' ಕಾರವಾಗುವಿಕೆಯೊಂದಿಗೆ ಪದಾಂತ್ಯದ 'ಎ' ಕಾರವು 'ಇ' ಕಾರವಾಗಿ ಪ್ರಯೋಗಿಸಲ್ಪಡುತ್ತದೆ.

ಮೂರಕ್ಷರ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಎಗರು	ಯಗ್‌ರು	ಯಗ್ರ	ಯಗ್ರ	ಎ>ಯ>ಯ>ಯ

ಎಚ್ಚರ	ಯಚ್ಚರ	ಯಚ್ರ	ಯಚ್ರ	ಎ>ಯ>ಯ>ಯ
ಎತ್ತರ	ಯತ್ರ	ಯತ್ರ	ಯತ್ರ	ಎ>ಯ>ಯ>ಯ
ಎರಡು	ಯರಡು	ಯಲ್ಡ	ಯಲ್ಡ	ಎ>ಯ>ಯ>ಯ
ಎಲುಬು	ಯಲಬು	ಯಲ್ಬು	ಯಲ್ಬು	ಎ>ಯ>ಯ>ಯ

ಎರಡಕ್ಷರ ಪದಗಳಲ್ಲಿ ಸಂಭವಿಸಿದ ಪದಾದಿಯ 'ಎ' ಕಾರ 'ಯ' ಕಾರವಾಗುವ ಬದಲಾವಣೆಯು ಮೇಲಿನ ಮೂರಕ್ಷರದ ನಾಮಪದ ಕ್ರಿಯಾಪದ ಗುಣವಾಚಕ ಹಾಗೂ ಸಂಖ್ಯಾವಾಚಕಗಳಲ್ಲಿ ಮಸ್ಕಿ ಕನ್ನಡದಲ್ಲಿ ಕಾಣುತ್ತೇವೆ. ಮೂರಕ್ಷರದ ಪದಗಳ ಈ ಬದಲಾವಣೆಯು ಸಂಭವಿಸುವ ಸಂದರ್ಭದಲ್ಲಿ ಎರಡಕ್ಷರ ವಿಜಾತೀಯ ಸಂಯುಕ್ತಾಕ್ಷರ ಪದಗಳಾಗಿ ನಾಯಕ, ಹರಿಜನರಲ್ಲಿ ಉಚ್ಚಾರಣೆಗೊಳ್ಳುತ್ತದೆ.

ನಾಲ್ಕಕ್ಷರ ಪದಗಳಲ್ಲಿ

ಬರಹ ಕನ್ನಡ	**ಲಿಂಗಾಯತ**	**ನಾಯಕ**	**ಹರಿಜನ**	**ವ್ಯತ್ಯಾಸ**
ಎಡಗಡೆ	ಯಡಗಡೆ	ಯಡ್ಗಡಿ	ಯಡ್ಗಡಿ	ಎ>ಯ>ಯ>ಯ
ಎಡವಟ್ಟು	ಯಡವಟ್ಟು	ಯಡವಟ್ಟ	ಯಡ್ವಟ್ಟ	ಎ>ಯ>ಯ>ಯ

ನಾಲ್ಕು ಅಕ್ಷರದ ಪದಾದಿಯ 'ಎ' ಕಾರ 'ಯ' ಕಾರವಾಗುವ ಪ್ರಕ್ರಿಯೆ ನಡೆದಿದ್ದು ನಾಲ್ಕು ಅಕ್ಷರದ ಪದಗಳು ವಿಜಾತೀಯ ಸಂಯುಕ್ತಾಕ್ಷರ ಮೂರಕ್ಷರ ಪದಗಳಾಗಿ ಬದಲಾವಣೆ ಆಗುತ್ತವೆ. ಇದು ಮಸ್ಕಿ ಕನ್ನಡದ ವೈಶಿಷ್ಟ್ಯ.

೩.೧೩. ಪದಾದಿಯ 'ಏ' ಕಾರವು 'ಯಾ' ಕಾರವಾಗುವುದು

ಬರಹ ಕನ್ನಡ	**ಲಿಂಗಾಯತ**	**ನಾಯಕ**	**ಹರಿಜನ**	**ವ್ಯತ್ಯಾಸ**
ಏಕೆ	ಯಾಕ	ಯಾಕ	ಯಾಕ	ಏ>ಯಾ>ಯಾ>ಯಾ
ಏಲಕ್ಕಿ	ಯಾಲಕ್ಕೆ	ಯಾಲಕ್ಕಿ	ಯಾಲಕ್ಕಿ	ಏ>ಯಾ>ಯಾ>ಯಾ

ಬರಹ ಕನ್ನಡದ ಪದಾದಿಯ ವಿಸ್ತೃತೌಷ್ಠ ಪೂರ್ವ ಅರ್ಧ ಸಂವೃತ್ತ ಸ್ವರ 'ಎ' ಕಾರ ಮಸ್ಕಿ ಕನ್ನಡದಲ್ಲಿ ತಾಲವ್ಯ ಘೋಷ 'ಯ' ಕಾರವಾಗಿ ಬದಲಾಗಿದೆ. ಈ ಧ್ವನಿ ಪ್ರಕ್ರಿಯೆಯನ್ನು ಭಾಷಾ ವಿಜ್ಞಾನದಲ್ಲಿ 'ಧ್ವನಿಜಾರು' ಎಂದು ಕರೆಯುತ್ತಾರೆ. ಇದು ಉಚ್ಚಾರಣೆಯಿಂದ ಆಗುವ ವ್ಯತ್ಯಾಸ ಇದಕ್ಕೆ ಕಾರಣ.

೩.೧೪. ಪದಾದಿಯ 'ಏ' ಕಾರ 'ಆ್ಯ' ಕಾರವಾಗುವುದು.

ಬರಹ ಕನ್ನಡ ಪದಾದಿಯ 'ಏ' ಕಾರವು ಮಸ್ಕಿ ಕನ್ನಡದಲ್ಲಿ ಪದಾದಿ 'ಆ್ಯ' ಕಾರವಾಗಿ ನಾಮಪದಗಳಲ್ಲಿ ಬಳಕೆಗೊಂಡಿರುವುದನ್ನು ನೋಡಬಹುದು.

ಎರಡಕ್ಷರದ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ತೇಗ	ತ್ಯಾಗ	ತ್ಯಾಗ	ತ್ಯಾಗ	ಏ>ಆ್ಯ>ಆ್ಯ>ಆ್ಯ
ಪೇಟೆ	ಪ್ಯಾಟಿ	ಪ್ಯಾಟಿ	ಪ್ಯಾಟಿ	ಏ>ಆ್ಯ>ಆ್ಯ>ಆ್ಯ
ಬೇಟೆ	ಬ್ಯಾಟಿ	ಬ್ಯಾಟಿ	ಬ್ಯಾಟಿ	ಏ>ಆ್ಯ>ಆ್ಯ>ಆ್ಯ
ಬೇಡ	ಬ್ಯಾಡ	ಬ್ಯಾಡ	ಬ್ಯಾಡ	ಏ>ಆ್ಯ>ಆ್ಯ>ಆ್ಯ
ಬೇರೆ	ಬ್ಯಾರೆ	ಬ್ಯಾರೆ	ಬ್ಯಾರೆ	ಏ>ಆ್ಯ>ಆ್ಯ>ಆ್ಯ
ಬೇಳೆ	ಬ್ಯಾಳಿ	ಬ್ಯಾಳಿ	ಬ್ಯಾಳಿ	ಏ>ಆ್ಯ>ಆ್ಯ>ಆ್ಯ
ಮೇಕೆ	ಮ್ಯಾಕಿ	ಮ್ಯಾಕಿ	ಮ್ಯಾಕಿ	ಏ>ಆ್ಯ>ಆ್ಯ>ಆ್ಯ
ಮೇರೆ	ಮ್ಯಾರಿ	ಮ್ಯಾರಿ	ಮ್ಯಾರಿ	ಏ>ಆ್ಯ>ಆ್ಯ>ಆ್ಯ
ಮೇಳ	ಮ್ಯಾಳ	ಮ್ಯಾಳ	ಮ್ಯಾಳ	ಏ>ಆ್ಯ>ಆ್ಯ>ಆ್ಯ

ಬರಹ ಕನ್ನಡದ ಎರಡಕ್ಷರದ ನಾಮಪದಗಳಲ್ಲಿಯ ಪದಾದಿಯ ಪೂರ್ವ ಮಧ್ಯ 'ಏ' ಸ್ವರವು ನಿಮ್ನ ಮಧ್ಯ 'ಆ್ಯ' ಸ್ವರವಾಗಿ ಮಸ್ಕಿ ಕನ್ನಡದಲ್ಲಿ ಬಳಕೆಗೊಳ್ಳುತ್ತಿದೆ. ಮೂರು ಸಾಮಾಜಿಕ ವರ್ಗಗಳು ಈ ಪ್ರಕ್ರಿಯೆಗೆ ಒಳಪಟ್ಟಿರುತ್ತವೆ. ಪದಾಂತ್ಯದಲ್ಲಿ ಪೂರ್ವಮಧ್ಯ 'ಎ' ಸ್ವರವು ಪೂರ್ವೋಚ್ಚ 'ಇ' ಸ್ವರವಾಗಿ ಬಳಕೆಗೊಳ್ಳುತ್ತಿದೆ. ಈ ಬದಲಾವಣೆ ಕ್ರಿಯಾಪದಗಳಲ್ಲಿ ಕಾಣಿಸದೆ ಇರುವುದು ಮಸ್ಕಿ ಕನ್ನಡದ ವೈಶಿಷ್ಟ್ಯ.

ಮೂರಕ್ಷರದ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಬೇಸರ	ಬ್ಯಾಸ್ರ	ಬ್ಯಾಸ್ರ	ಬ್ಯಾಸ್ರ	ಏ>ಆ್ಯ>ಆ್ಯ>ಆ್ಯ
ಬೇಸಾಯ	ಬ್ಯಾಸಾಯ	ಬ್ಯಾಸಾಯ	ಬ್ಯಾಸಾಯ	ಏ>ಆ್ಯ>ಆ್ಯ>ಆ್ಯ
ಬೇಸಿಗೆ	ಬ್ಯಾಸಿಗೆ	ಬ್ಯಾಸ್ಗಿ	ಬ್ಯಾಸ್ಗಿ	ಏ>ಆ್ಯ>ಆ್ಯ>ಆ್ಯ
ಮೇದಾರ	ಮ್ಯಾದಾರ	ಮ್ಯಾದರ	ಮ್ಯಾದಾರ	ಏ>ಆ್ಯ>ಆ್ಯ>ಆ್ಯ

ಬರಹ ಕನ್ನಡದ ಮೂರಕ್ಷರದ ನಾಮಪದಗಳ ಪದಾದಿಯ 'ಏ' ಕಾರವು ಮಸ್ಕಿಕನ್ನಡದಲ್ಲಿ 'ಆ್ಯ' ಕಾರವಾಗುವ ಬದಲಾವಣೆಯನ್ನು ಈ ಮೇಲಿನ ಉದಾಹರಣೆಗಳಿಂದ ತಿಳಿಯಬಹುದಾಗಿದೆ. ಮೂರಕ್ಷರ ಪದಗಳು ವಿಜಾತೀಯ ಸಂಯುಕ್ತಾಕ್ಷರ ಪದಗಳಾಗಿ ಪದಾಂತ್ಯದ 'ಎ' ಕಾರ 'ಇ' ಕಾರವಾಗುವುದರ ಮೂಲಕ ಪದಾದಿಯ 'ಏ' ಕಾರ 'ಆ್ಯ' ಕಾರವಾಗಿ (ಬೇಸಿಗೆ>ಬ್ಯಾಸ್ಗಿ) ಬಳಕೆಗೊಳ್ಳಲ್ಪಟ್ಟಿದೆ.

೩.೧೫. 'ಮ' ಕಾರದ ಪದದಲ್ಲಿರುವ 'ಒ' ಕಾರ 'ಅ' ಕಾರವಾಗುವುದು

ಮಸ್ಕಿ ಕನ್ನಡದ ಪ್ರಭೇದದಲ್ಲಿ 'ಮ' ಕಾರದ ಅನಂತರ ಬರುವ 'ಒ' ಮತ್ತು 'ಓ' ಕಾರಗಳು ಅನುಕ್ರಮವಾಗಿ 'ಅ' ಮತ್ತು 'ಆ' ಗಳಾಗಿರುವುದು ಕಂಡುಬರುತ್ತದೆ.

ಎರಡಕ್ಷರ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಮೊಟ್ಟೆ	ಮಟ್ಟಿ	ಮಟ್ಟಿ	ಮಟ್ಟಿ	ಒ>ಅ>ಅ>ಅ
ಮೊನ್ನೆ	ಮನ್ನೆ	ಮನ್ನೆ	ಮನ್ನೆ	ಒ>ಅ>ಅ>ಅ
ಮೊರ	ಮರ	ಮರ	ಮರ	ಒ>ಅ>ಅ>ಅ
ಮೊಲ	ಮಲ	ಮಲ	ಮಲ	ಒ>ಅ>ಅ>ಅ
ಮೊಳ	ಮಳ	ಮಳ	ಮಳ	ಒ>ಅ>ಅ>ಅ
ಮೊಳೆ	ಮಳಿ	ಮಳಿ	ಮಳಿ	ಒ>ಅ>ಅ>ಅ
ಮೋಡ	ಮಾಡ	ಮಾಡ	ಮಾಡ	ಒ>ಅ>ಅ>ಅ

ಬರಹ ಕನ್ನಡದ ಪದಾದಿಯ 'ಮ' ಕಾರದ ಮೊದಲ ಸ್ವರ 'ಒ' ಮತ್ತು 'ಓ' ಕಾರಗಳು ಕ್ರಮವಾಗಿ ಅ ಮತ್ತು 'ಆ' ಗಳಾಗಿ ಮಸ್ಕಿಕನ್ನಡದಲ್ಲಿ ಬದಲಾಗಿರುತ್ತವೆ. ಪದಾದಿಯ 'ಓ' ಕಾರದ 'ಆ' ಕಾರವಾಗುವುದನ್ನು ಕಾಣುತ್ತೇವೆ. ಇದಕ್ಕೆ ಅಪವಾದವೆಂಬಂತೆ 'ಮೋಡಿ' 'ಮೋಜು' ಇವುಗಳಲ್ಲಿ ಬದಲಾವಣೆ ಕಾಣುವುದಿಲ್ಲ.

ಮೂರಕ್ಷರದ ಪದಗಳು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಮೊಣಕೈ	ಮಣಕೈ	ಮಣಕ್ಕೈ	ಮಳಕೈ	ಒ>ಅ>ಅ>ಅ
ಮೊದಲು	ಮದಲ	ಮದ್ಲ	ಮದ್ಲ	ಒ>ಅ>ಅ>ಅ
ಮೊಮ್ಮಗ	ಮಮ್ಮಗ	ಮಮ್ಮಗ	ಮಮ್ಮಗ	ಒ>ಅ>ಅ>ಅ
ಮೊಸರು	ಮಸರು	ಮಸ್ರು	ಮಸ್ರು	ಒ>ಅ>ಅ>ಅ
ಮೊಸಳೆ	ಮಸಳಿ	ಮಸ್ಳಿ	ಮಸ್ಳಿ	ಒ>ಅ>ಅ>ಅ
ಮೋಟರ್	ಮಾಟರ್	ಮಾಟರ್	ಮಾಟರ್	ಒ>ಅ>ಅ>ಅ

ಮೂರಕ್ಷರದ ಪದಗಳಲ್ಲಿ 'ಮ' ಕಾರದ ಆದಿಸ್ವರ 'ಒ' ಕಾರವು 'ಅ' ಕಾರವಾಗಿ ಮಸ್ಕಿ ಕನ್ನಡದಲ್ಲಿ ಬಳಕೆಯಲ್ಲಿದೆ. ಮೂರಕ್ಷರದ ಪದಗಳು ವಿಜಾತೀಯ ಸಂಯುಕ್ತಾಕ್ಷರ ಎರಡಕ್ಷರ (ಮದ್ಲ, ಮಸ್ರು) ಪದಗಳಾಗಿ

ಬಳಕೆಯಲ್ಲಿದ್ದು, ಮೂರಕ್ಷರದ ಸಂಯುಕ್ತಾಕ್ಷರಗಳು ಮೂರಕ್ಷರಗಳಾಗಿಯೇ (ಮಣಕ್ಯ, ಮಮ್ಮಗ) ಉಳಿದುಕೊಂಡಿದೆ.

೩.೧೬. ಪದಾದಿಯ 'ಒ' ಕಾರ 'ವ' ಕಾರವಾಗುವುದು

ಬರಹ ಕನ್ನಡದ ಪದಾದಿಯ ಪಶ್ಚಗೋಳ 'ಒ' ಉನ್ನತಮಧ್ಯ ಹ್ರಸ್ವಸ್ವರವು ಉಭಯೋಷ್ಠ ಘೋಷ 'ವ್' ಅರ್ಧಸ್ವರ ಧ್ವನಿಯಾಗಿ ಬದಲಾಗಿರುವುದು ಮಸ್ಕಿ ಕನ್ನಡದಲ್ಲಿ ಕಂಡುಬರುತ್ತದೆ.

ಎರಡಕ್ಷರ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಒಂದು	ವಂದ	ವಂದ	ವಂದ	ಒ>ವ>ವ>ವ
ಒಗೆ	ವಗಿ	ವಗಿ	ವಗಿ	ಒ>ವ>ವ>ವ
ಒತ್ತು	ವತ್ಥ	ವತ್ಥ	ವತ್ಥ	ಒ>ವ>ವ>ವ
ಒದೆ	ವದಿ	ವದಿ	ವದಿ	ಒ>ವ>ವ>ವ
ಒಪ್ಪು	ವಪ್ಪು	ವಪ್ಪು	ವಪ್ಪು	ಒ>ವ>ವ>ವ
ಒಲೆ	ವಲಿ	ವಲಿ	ವಲಿ	ಒ>ವ>ವ>ವ
ಒಲ್ಲೆ	ವಲ್ಲೆ	ವಲ್ಲೆ	ವಲ್ಲೆ	ಒ>ವ>ವ>ವ
ಓಲೆ	ವಾಲಿ	ವಾಲಿ	ವಾಲಿ	ಒ>ವ>ವ>ವ

ಮೇಲಿನ ಎರಡಕ್ಷರ ಪದಗಳ ಉದಾಹರಣೆಯಿಂದ ಪದಾದಿಯ 'ಒ' ಕಾರ 'ವ' ಕಾರವಾಗಿ ನಾಮಪದ, ಕ್ರಿಯಾಪದ ಸಂಖ್ಯಾವಾಚಕಗಳಲ್ಲಿ ಮಸ್ಕಿ ಕನ್ನಡದಲ್ಲಿ ಬಳಕೆಗೊಂಡಿರುತ್ತವೆ. ಈ ಪರಿವರ್ತನೆ ಯಾಗುವುದರೊಂದಿ ಪದಾಂತ್ಯದಲ್ಲಿ 'ಎ' ಕಾರ ಇದ್ದಂತಹ ಪದಗಳು 'ಇ' ಕಾರಾಂತವಾಗಿ ಪರಿವರ್ತನೆಗೊಳ್ಳಪ್ಪಡುತ್ತವೆ. ಪದಾದಿಯ 'ಒ' ಕಾರ 'ವಾ' ಕಾರವಾಗಿ (ಓಲೆ>ವಾಲಿ) ಬದಲಾಗಿರುವುದು.

ಮೂರಕ್ಷರ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಒಗಟು	ವಗಟ	ವಗಟ	ವಗಟ	ಒ>ವ>ವ>ವ
ಒದರು	ವದರ	ವದ್ರು	ವದ್ರು	ಒ>ವ>ವ>ವ
ಒನಕೆ	ವನಕಿ	ವಣ್ಕಿ	ವಣ್ಕಿ	ಒ>ವ>ವ>ವ
ಒಂಭತ್ತು	ವಂಬತ್ಥ	ವಂಬತ್ಥ	ವಂಬತ್ಥ	ಒ>ವ>ವ>ವ
ಒರಟು	ವರಟ	ವರ್ಟು	ವರ್ಟು	ಒ>ವ>ವ>ವ

ಒಳಗೆ	ವಳಗ	ವಳ್ಗ	ವಳ್ಗ	ಒ>ವ>ವ>ವ
ಒಳ್ಳೆಯ	ವಳ್ಳೆಯ	ವಳ್ಳೆಯ	ವಳ್ಳೆಯ	ಒ>ವ>ವ>ವ

ಪದಾದಿಯ 'ಒ' ಕಾರ 'ವ' ಕಾರವಾಗುವ ಪ್ರಕ್ರಿಯೆಯು ಮಸ್ಕಿ ಕನ್ನಡದಲ್ಲಿ ಮೂರಕ್ಷರದ ನಾಮಪದ, ಕ್ರಿಯಾಪದ ಸಂಖ್ಯಾವಾಚಕಗಳಲ್ಲಿ ನೋಡಬಹುದು. ಕೆಲವೊಂದು ಪದಗಳು ನಾಯಕ, ಹರಿಜನರ ಉಚ್ಚಾರಣೆಯಲ್ಲಿ ಎರಡಕ್ಷರ ವಿಜಾತಿಯ ಸಂಯುಕ್ತಾಕ್ಷರ ಪದಗಳಾಗಿ ಬಳಸಲ್ಪಡುತ್ತವೆ.

೩.೧೩. ಪದಾದಿಯ 'ಒ' 'ಓ' ಕಾರಗಳು 'ಅ್ವ' ಮತ್ತು 'ಆ್ವ' ಕಾರವಾಗುವುದು

ಎರಡಕ್ಷರ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಗೊನೆ	ಗ್ವನಿ	ಗ್ವನಿ	ಗ್ವನಿ	ಒ>ಅ್ವ>ಅ್ವ>ಅ್ವ
ತೊಡೆ	ತ್ವಡಿ	ತ್ವಡಿ	ತ್ವಡಿ	ಒ>ಅ್ವ>ಅ್ವ>ಅ್ವ
ತೊಳೆ	ತ್ವಳಿ	ತ್ವಳಿ	ತ್ವಳಿ	ಒ>ಅ್ವ>ಅ್ವ>ಅ್ವ
ನೊರೆ	ನ್ವರಿ	ನ್ವರಿ	ನ್ವರಿ	ಒ>ಅ್ವ>ಅ್ವ>ಅ್ವ

ಬರಹ ಕನ್ನಡದ ಮೊದಲಕ್ಷರದ ಪದದಲ್ಲಿರುವ 'ಒ' 'ಓ' ಕಾರಗಳು ಮಸ್ಕಿ ಕನ್ನಡದಲ್ಲಿ 'ವ' ಕಾರವಾಗಿ ಬಳಕೆಗೊಳ್ಳುತ್ತಿವೆ. ಮಸ್ಕಿ ಕನ್ನಡದ ಮೇಲಿನ ಮೂರು ಸಾಮಾಜಿಕ ವರ್ಗಗಳಲ್ಲಿ ಈ ಪರಿವರ್ತನೆಯನ್ನು ಕಾಣಬಹುದು. ಪದದ ಎರಡನೆಯ ಅಕ್ಷರ ಎರಡನೆಯ ಸ್ವರದಲ್ಲಿ ಕಾಣಿಸಿಕೊಂಡಿರುವ 'ಎ' ಕಾರವು 'ಇ' ಕಾರವಾಗಿ ಬಳಕೆಯಲ್ಲಿರುವುದು. ಪದಾದಿಯ 'ಒ' 'ಓ' ಕಾರ 'ಅ್ವ' ಕಾರವಾಗುವ ಪ್ರಕ್ರಿಯೆ ಎಲ್ಲಾ ಸಂದರ್ಭಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ. ಉದಾ: ದೋಣಿ, ಜೋರು, ಮೋಡ, ನೋವು, ನೋಡು, ಇತ್ಯಾದಿ ಪದಗಳಲ್ಲಿ 'ಅ್ವ' ಕಾರ ಪರಿವರ್ತನೆಗೆ ಒಳಪಡದೆ ಯಥಾವತ್ತಾಗಿ ಬಳಕೆಗೊಳ್ಳುತ್ತಿರುವುದು ಮಸ್ಕಿ ಕನ್ನಡದ ವೈಶಿಷ್ಟ್ಯ.

ಮೂರಕ್ಷರ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಕೊನೆಗೆ	ಕ್ವನಿಗೆ	ಕ್ವನ್ಗಿ	ಕ್ವನ್ಗಿ	ಒ>ಅ್ವ>ಅ್ವ>ಅ್ವ
ಗೊಬ್ಬರ	ಗ್ವಬ್ಬರ	ಗ್ವಬ್ರ	ಗ್ವಬ್ರ	ಒ>ಅ್ವ>ಅ್ವ>ಅ್ವ
ತೊಗಲು	ತ್ವಗಲು	ತ್ವಗ್ಲು	ತ್ವಗ್ಲು	ಒ>ಅ್ವ>ಅ್ವ>ಅ್ವ
ತೊದಲು	ತ್ವದಲು	ತ್ವದ್ಲು	ತ್ವದ್ಲು	ಒ>ಅ್ವ>ಅ್ವ>ಅ್ವ
ದೊಡ್ಡದು	ದ್ವಡ್ದ	ದ್ವಡ್ಡು	ದ್ವಡ್ಡು	ಒ>ಅ್ವ>ಅ್ವ>ಅ್ವ

ಮೂರಕ್ಷರದ ಪದಗಳಲ್ಲಿ ಪದಾದಿಯ ‘ಒ’ ‘ಓ’ ಕಾರಗಳು ‘ಅ್ವ’ ಕಾರವಾಗಿ ಬದಲಾಗಿರುವುದನ್ನು ಮಸ್ಕಿ ಪರಿಸರದಲ್ಲಿ ಕಾಣಬಹುದು. ಈ ಪ್ರಕ್ರಿಯೆಯು ಮೇಲಿನ ಮೂರು ಸಾಮಾಜಿಕ ವರ್ಗಗಳಲ್ಲಿಯೂ ಬದಲಾಗುವುದನ್ನು ಗಮನಿಸಬಹುದಾಗಿದೆ.

ಈ ಮೇಲಿನ ಉದಾಹರಣೆಗಳಲ್ಲಿ ಮೂರಕ್ಷರದ ಪದಗಳು ಲಿಂಗಾಯತರ ಉಚ್ಚಾರಣೆಯಲ್ಲಿ ಮೂರಕ್ಷರದ ಪದಗಳಾಗಿಯೇ ಉಳಿದುಕೊಂಡರೆ ನಾಯಕ, ಹರಿಜನರ ಉಚ್ಚಾರಣೆಯಲ್ಲಿ ವಿಜಾತೀಯ ಸಂಯುಕ್ತಾಕ್ಷರ ಎರಡಕ್ಷರದವುಗಳಾಗಿ ಬಳಕೆಗೊಳ್ಳುವುದನ್ನು ಗಮನಿಸಬಹುದು.

ಪದದ ಪದದಲ್ಲಿರುವ ‘ಒ’ ‘ಓ’ ಸ್ವರಗಳಲ್ಲಿ ‘ಅ್ವ’ ಮತ್ತು ‘ಆ್ವ’ ಸ್ವರಗಳು ಬಂದು ಸೇರುವುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ತೋಟ	ತ್ವಾಟ	ತ್ವಾಟ	ತ್ವಾಟ	ಓ>ಆ್ವ>ಆ್ವ>ಆ್ವ
ಕೋಟೆ	ಕ್ವಾಟಿ	ಕ್ವಾಟಿ	ಕ್ವಾಟಿ	ಓ>ಆ್ವ>ಆ್ವ>ಆ್ವ
ಜೋಕೆ	ಜ್ವಾಕಿ	ಜ್ವಾಕಿ	ಜ್ವಾಕಿ	ಓ>ಆ್ವ>ಆ್ವ>ಆ್ವ
ತೋಳ	ತ್ವಾಳ	ತ್ವಾಳ	ತ್ವಾಳ	ಓ>ಆ್ವ>ಆ್ವ>ಆ್ವ

೩.೧೮. ಎರಡನೆಯ ಸ್ವರ ಬಿದ್ದುಹೋಗುವುದು.

ಬರಹ ಕನ್ನಡದ ಮೂರಕ್ಷರದ ಪದಗಳು ಮಸ್ಕಿಕನ್ನಡದಲ್ಲಿ ಎರಡಕ್ಷರ ಪದಗಳಾಗಿ ಬದಲಾಗುವುದು. ಅಂದರೆ ಪದ ಮಧ್ಯಸ್ವರವು ಬಿದ್ದುಹೋಗಿ ವಿಜಾತೀಯ ಸಂಯುಕ್ತಾಕ್ಷರವಾಗಿ ಬಳಕೆಗೊಳ್ಳುವುದು.

ನಾಮಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಅಂಗಡಿ	ಅಂಗ್ಡಿ	ಅಂಗ್ಡಿ	ಅಂಗ್ಡಿ	ಅ>ಇ>ಇ>ಇ
ಅಂಗಳ	ಅಂಗ್ಳ	ಅಂಗ್ಳ	ಅಂಗ್ಳ	ಅ>ಅ>ಅ>ಅ
ಅತ್ತಿಗೆ	ಅತ್ಗಿ	ಅತ್ಗಿ	ಅತ್ಗಿ	ಇ>ಇ>ಇ>ಇ
ಒನಕೆ	ವನ್ಕಿ	ವಣ್ಕಿ	ವಣ್ಕಿ	ಅ>ಇ>ಇ>ಇ
ಒರಳು	ವಳ್ಳು	ವಳ್ಳು	ವಳ್ಳು	ಅ>ಉ>ಉ>ಉ
ಕಟ್ಟಿಗೆ	ಕಟ್ಗಿ	ಕಟ್ಗಿ	ಕಟ್ಗಿ	ಅ>ಇ>ಇ>ಇ
ಕಡಲೆ	ಕಡ್ಲಿ	ಕಡ್ಲಿ	ಕಡ್ಲಿ	ಅ>ಇ>ಇ>ಇ

ಕುದುರೆ	ಕುದ್ರಿ	ಕುದ್ರಿ	ಕುದ್ರಿ	ಉ>ಇ>ಇ>ಇ
ಗಡಿಗೆ	ಗ್ಹಡ್ಗಿ	ಗ್ಹಡ್ಗಿ	ಗ್ಹಡ್ಗಿ	ಇ>ಇ>ಇ>ಇ
ಚಿಲಕ	ಚಿಲ್ಕ	ಚಿಲ್ಕ	ಚಿಲ್ಕ	ಅ>ಅ>ಅ>ಅ
ಜಗಲಿ	ಜಗ್ಲಿ	ಜಗ್ಲಿ	ಜಗ್ಲಿ	ಅ>ಇ>ಇ>ಇ
ಮಡಕೆ	ಮಡ್ಕಿ	ಮಡ್ಕಿ	ಮಡ್ಕಿ	ಅ>ಇ>ಇ>ಇ
ಮುಂಗುಸಿ	ಮುಂಗ್ಲಿ	ಮುಂಗ್ಲಿ	ಮುಂಗ್ಲಿ	ಉ>ಇ>ಇ>ಇ
ಹಿತ್ತಿಲು	ಇತ್ಲ	ಇತ್ಲ	ಇತ್ಲ	ಇ>ಅ>ಅ>ಅ
ಹುರುಳಿ	ಉಳ್ಳಿ	ಉಳ್ಳಿ	ಉಳ್ಳಿ	ಉ>ಇ>ಇ>ಇ

ಬರಹ ಕನ್ನಡದಲ್ಲಿ ಬಳಕೆಗೊಳ್ಳುತ್ತಿರುವ 'ಅ', 'ಇ', 'ಉ' ಸ್ವರಗಳು ಪದಮಧ್ಯದಲ್ಲಿ ಮೇಲಿನ ಉದಾಹರಣೆಗಳ ಮಸ್ಕಿಕನ್ನಡದಲ್ಲಿ ಬಿದ್ದು ಹೋಗಿರುತ್ತವೆ. ಪದಾಂತ್ಯದಲ್ಲಿ 'ಎ' ಸ್ವರವಿದ್ದರೆ 'ಇ' ಸ್ವರವಾಗಿ ಬಳಕೆಯಾಗುತ್ತದೆ. (ಅತ್ತಿಗೆ>ಅತ್ಗಿ, ಕಟ್ಟಿಗೆ>ಕಟ್ಗಿ)

ಬರಹ ಕನ್ನಡದ ಮೂರಕ್ಷರದ ಪದಗಳಲ್ಲಿರುವ ಎರಡನೇ ಸ್ವರವು ಮಸ್ಕಿ ಕನ್ನಡದಲ್ಲಿ ಲೋಪಗೊಳ್ಳುವುದನ್ನು ನಾಮಪದ, ಕ್ರಿಯಾಪದ ಹಾಗೂ ಗುಣವಾಚಕಗಳಲ್ಲಿ ನೋಡಬಹುದು.ಮೂರಕ್ಷರ ಪದಗಳು ಎರಡಕ್ಷರ ಪದಗಳಾಗಿ ಸಂಯುಕ್ತಾಕ್ಷರ ಪದಗಳಾಗಿ ಬದಲಾಗುವುದು ಮಸ್ಕಿಕನ್ನಡದ ವೈಶಿಷ್ಟ್ಯ. ಬರಹ ಕನ್ನಡದ (ಒನಕೆ>ಬಣ್ಕಿ) ಪದ ಪ್ರಯೋಗವು ಮಸ್ಕಿ ಕನ್ನಡದಲ್ಲಿ ಪದಮಧ್ಯದಲ್ಲಿರುವ ದಂತ್ಯ ಘೋಷ ಧ್ವನಿ 'ನ' ಅನುನಾಸಿಕವು ಮೂರ್ಧನ್ಯ ಘೋಷ 'ಣ್' ಅನುನಾಸಿಕವಾಗಿ ಬದಲುಗೊಂಡು ಎರಡನೇ ಸ್ವರದಲ್ಲಿರುವ 'ಅ' ಕಾರವು 'ಇ' ಕಾರವಾಗಿ ದ್ವಿತ್ವಕ್ಷರಗೊಂಡು ಒನಕೆ>ವಣ್ಕಿ ಪದ ಬಳಕೆಯಲ್ಲಿದೆ. ಒರಳು ಪದವು ಎರಡನೇ ಸ್ವರ ದಂತ್ಯ ಘೋಷ 'ರ' ಕಂಪಿತ ಧ್ವನಿಯು ಸಂಪೂರ್ಣಲೋಪಗೊಂಡು ಒಳ್ಳು ಎಂದು ಮಸ್ಕಿಕನ್ನಡದಲ್ಲಿ ಬಳಕೆಯಲ್ಲಿದೆ. ಮುಂಗಸಿ ಪದ ರೂಪವು ಮಸ್ಕಿಕನ್ನಡದಲ್ಲಿ ಮೂರನೇ ಧ್ವನಿಯಾದ ಅಘೋಷ 'ಸ' ಸಂಘರ್ಷ ಧ್ವನಿ ಲೋಪಗೊಂಡು ಆ ಸ್ಥಳದಲ್ಲಿ ದಂತ್ಯ ಘೋಷ 'ಲ' ಪಾರ್ಶ್ವಿಕ ಧ್ವನಿ ಬಂದು ದ್ವಿತ್ವಗೊಂಡು 'ಮುಂಗ್ಲಿ' ಎಂದು ಬಳಸಲ್ಪಡುತ್ತದೆ.

ಕ್ರಿಯಾಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಉಗುಳು	ಉಗ್ಳ	ಉಗ್ಳ	ಉಗ್ಳ	ಉ>ಅ>ಅ>ಅ
ಉರುಳು	ಉಳ್ಳು	ಉಳ್ಳು	ಉಳ್ಳು	ಉ>ಉ>ಉ>ಉ
ಕೆದರು	ಗೆಬ್ರು	ಗೆಬ್ರು	ಗೆಬ್ರು	ಅ>ಉ>ಉ>ಉ

ಬಳಸು	ಬಳ್ಸ	ಬಳ್ಸ	ಬಳ್ಸ	ಅ>ಉ>ಉ>ಉ
ಮುಳುಗು	ಮುಣ್ಗು	ಮುಣ್ಗು	ಮುಣ್ಗು	ಉ>ಉ>ಉ>ಉ

ಎರಡನೇ ಸ್ವರದ ಲೋಪ ನಾಮಪದಗಳಲ್ಲಿ ಆದಂತಹ ಬೆಳವಣಿಗೆ ಕ್ರಿಯಾಪದಗಳಲ್ಲಿ ನಡೆದಿದೆ ಎಂಬುದನ್ನು ಈ ಮೇಲಿನ ಪದಗಳ ಉದಾಹರಣೆಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ. ಮೂರಕ್ಷರದ ಪದಗಳು ಮಸ್ಕಿಕನ್ನಡದಲ್ಲಿ ಪದದ ಎರಡನೇ ಸ್ವರ ಲೋಪಗೊಂಡು ಸಂಯುಕ್ತಾಕ್ಷರ ಪದಗಳಾಗಿ ಉಚ್ಚಾರಣೆಯಲ್ಲಿವೆ. 'ಉರುಳು' ಪದವು ಮಸ್ಕಿ ಕನ್ನಡದಲ್ಲಿ ದಂತ್ಯ ಘೋಷ 'ರ' ಕಂಪಿತ ಧ್ವನಿ ಸಂಪೂರ್ಣ ಲೋಪಗೊಂಡು 'ಉಳ್ಳ' ಎಂದು ಬಳಕೆಗೊಂಡರೆ 'ಕೆದರು' ಪದರೂಪವು 'ದ' ಕಾರ ಲೋಪಗೊಂಡು 'ಗೆಬ್ರು' ಎಂದು ಉಚ್ಚಾರಣೆಯಲ್ಲಿದೆ. 'ಮುಳುಗು' ಪದರೂಪದಲ್ಲಿ ಮೂರ್ಧನ್ಯ ಘೋಷ 'ಳ್' ಪಾರ್ಶ್ವಿಕವು ಲೋಪಗೊಂಡು ಮೂರ್ಧನ್ಯ ಘೋಷ 'ಣ್' ಅನುನಾಸಿಕ ಧ್ವನಿ ಬಂದು ಎರಡಕ್ಷರವು ಸಂಯುಕ್ತಾಕ್ಷರವಾಗಿ 'ಮುಣ್ಗು' ಎಂದು ಬಳಕೆಗೊಳ್ಳುವುದು. ಈ ರೀತಿಯ ಬದಲಾಗುವ ಪ್ರಕ್ರಿಯೆಯನ್ನು ಮಸ್ಕಿಕನ್ನಡದ ಕ್ರಿಯಾಪದಗಳಲ್ಲಿ ಕಾಣುತ್ತೇವೆ. ಎರಡನೇ ಸ್ವರ ಬಿದ್ದುಹೋಗುವಾಗ ಪದಾಂತ್ಯದ ಸ್ವರ ಇಲ್ಲವೇ ಬೇರೊಂದು ಸ್ವರ ಬಂದು ಸೇರಿ ಸಂಯುಕ್ತಾರ ಪದವಾಗಿ ಬಳಕೆಯಾಗುತ್ತದೆ. (ಉರುಳು>ಉಳ್ಳ, ಉಗುಳು>ಉಗ್ಳ)

ಗುಣವಾಚಕಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಅಗಲ	ಅಗ್ಲ	ಅಗ್ಲ	ಅಗ್ಲ	ಅ>ಅ>ಅ>ಅ
ಎತ್ತರ	ಯತ್ರ	ಯತ್ರ	ಯತ್ರ	ಅ>ಅ>ಅ>ಅ
ಒಳಗೆ	ವಳ್ಗ	ವಳ್ಗ	ವಳ್ಗ	ಅ>ಅ>ಅ>ಅ
ಕಡಿಮೆ	ಕಮ್ಮಿ	ಕಮ್ಮಿ	ಕಮ್ಮಿ	ಇ>ಇ>ಇ>ಇ
ಕತ್ತಲೆ	ಕತ್ಲ	ಕತ್ಲ	ಕತ್ಲ	ಅ>ಅ>ಅ>ಅ
ಬಹಳ	ಬಾಳ	ಬಾಳ	ಬಾಳ	ಅ>ಅ>ಅ>ಅ

ಬರಹ ಕನ್ನಡದ ಗುಣವಾಚಕ ಪದಗಳು ಮಸ್ಕಿ ಕನ್ನಡದಲ್ಲಿ ಪದ ಎರಡನೆಯ ಸ್ವರ ಲೋಪಗೊಂಡು, ಸಂಯುಕ್ತಾಕ್ಷರಗಳಾಗಿ ಬಳಕೆಯಲ್ಲಿದೆ. ಮೇಲಿನ ಉದಾಹರಣೆಯಲ್ಲಿ ಮೂರಕ್ಷರದ ಪದಮಧ್ಯದಲ್ಲಿರುವ ಸ್ವರ ಲೋಪಗೊಂಡು ಮೂರನೇ ಸ್ವರವು ಬಳಕೆಯಲ್ಲಿರುವುದನ್ನು ನೋಡಬಹುದು. ಪದಾಂತ್ಯದಲ್ಲಿ 'ಎ' ಸ್ವರವಿದ್ದಲ್ಲಿ 'ಇ', 'ಅ' ಸ್ವರಗಳಾಗಿ ಬಳಕೆಯಲ್ಲಿದೆ. ಇಂತಹ ಅಂಶಗಳನ್ನು ಗಮನಿಸಿದಾಗ ಮಸ್ಕಿ ಕನ್ನಡವು ವೈಶಿಷ್ಟ್ಯತೆಯಿಂದ ಕೂಡಿರುವುದು ಗೊತ್ತಾಗುತ್ತದೆ.

೩.೧೯. 'ಕ' ಕಾರ 'ಗ' ಕಾರವಾಗುವುದು

ಪದದಲ್ಲಿ ಬರುವಂತಹ 'ಕ' ಕಾರವು ಮಸ್ಕಿ ಕನ್ನಡದಲ್ಲಿ 'ಗ' ಕಾರವಾಗಿ ಬಳಕೆಗೊಳ್ಳುತ್ತಿದೆ.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಕಜ್ಜುರಿ	ಗಜ್ಜುರಿ	ಗಜ್ಜುರಿ	ಗಜ್ಜುರಿ	ಕ>ಗ>ಗ>ಗ

ಕೌಜ್‌ಗ	ಗೌಜ್‌ಗ	ಗೌಜ್‌ಗ	ಗೌಜ್‌ಗ	ಕ>ಗ>ಗ>ಗ
ನಾಟಕ	ನಾಟ್‌ಗ	ನಾಟ್‌ಗ	ನಾಟ್‌ಗ	ಕ>ಗ>ಗ>ಗ
ಪುಸ್ತಕ	ಪುಸ್‌್ತಗ	ಪುಸ್‌್ತಗ	ಪುಸ್‌್ತಗ	ಕ>ಗ>ಗ>ಗ

ಬರಹ ಕನ್ನಡದ ಕಂಠ್ಯ ಅಘೋಷ ಧ್ವನಿಯಾದ 'ಕ' ಕಾರವು ಕಂಠ್ಯ ಘೋಷ 'ಗ' ಕಾರವಾಗಿ ಬದಲಾವಣೆಗೊಂಡಿದೆ. ಮೂರು ಸಾಮಾಜಿಕ ವರ್ಗಗಳಲ್ಲಿ ಈ ರೀತಿಯ ಬದಲಾವಣೆಗೆ ಪ್ರಕ್ರಿಯೆ ನಡೆದಿದೆ.

೩.೨೦. 'ಚ' ಕಾರ 'ಜ'ಕಾರಗಳ ವಿಭಜನೆ

ಬರಹ ಕನ್ನಡದ 'ಚ' ಮತ್ತು 'ಜ' ಕಾರಗಳಿಗೆ ಮಸ್ಕಿಕನ್ನಡದಲ್ಲಿ 'ಚ' ಮತ್ತು 'ಜ' ಪದದಲ್ಲಿ ಬರುವ ಸ್ವರಗಳನ್ನಾಧರಿಸಿ ಎರಡು ಬೇರೆ ಬೇರೆ ಉಚ್ಚಾರಣೆಗಳಿವೆ. ಪಶ್ಚೋಚ್ಚ ಮತ್ತು ಪಶ್ಚಮಧ್ಯ ಸ್ವರಗಳು (ಉ, ಊ ಮತ್ತು ಒ, ಓ ಗಳು) ಪದದಲ್ಲಿರುವಾಗ ಇವಕ್ಕೆ ದಂತ್ಯೋಚ್ಚಾರಣೆಯಿದೆ ಮತ್ತು ಸ್ವರಗಳು ಪದದಲ್ಲಿರುವಾಗ ತಾಲವ್ಯೋಚ್ಚಾರಣೆಯಿದೆ.

ದಂತ್ಯೋಚ್ಚಾರಣೆ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಚೂರು	ತ್ಸೂರು	ತ್ಸೂರು	ತ್ಸೂರು	ಚ>ತ್ಸ>ತ್ಸ>ತ್ಸ
ಚುಂಗು	ತ್ಸುಂಗು	ತ್ಸುಂಗು	ತ್ಸುಂಗು	ಚ>ತ್ಸ>ತ್ಸ>ತ್ಸ
ಜೂಜು	ದ್ಸೂಜ	ದ್ಸೂಜು	ಜ್ಸೂಜು	ಜ>ದ್ಸ>ದ್ಸ>ದ್ಸ
ಚುಟ್ಟಿ	ತ್ಸುಟ್ಟಿ	ತ್ಸುಟ್ಟಿ	ತ್ಸುಟ್ಟಿ	ಚ>ತ್ಸ>ತ್ಸ>ತ್ಸ
ಜುಗ್ಗ	ದ್ಸುಗ್ಗ	ದ್ಸುಗ್ಗ	ದ್ಸುಗ್ಗ	ಜ>ದ್ಸ>ದ್ಸ>ದ್ಸ
ಜೋರು	ದ್ಸೋರು	ದ್ಸೋರು	ದ್ಸೋರು	ಜ>ದ್ಸ>ದ್ಸ>ದ್ಸ
ಜುಬ್ಬ	ದ್ಸುಬ್ಬ	ದ್ಸುಬ್ಬ	ದ್ಸುಬ್ಬ	ಜ>ದ್ಸ>ದ್ಸ>ದ್ಸ
ಚುಚ್ಚು	ತ್ಸುಚು	ತ್ಸುಚ	ತ್ಸುಚ್	ಚ>ತ್ಸ>ತ್ಸ>ತ್ಸ

ಮೇಲಿನ ಉದಾಹರಣೆಗಳಿಂದ ಮಸ್ಕಿಕನ್ನಡದಲ್ಲಿ ದಂತ್ಯೋಚ್ಚಾರಣೆ ನಡೆದಿರುವುದು ಸ್ಪಷ್ಟವಾಗುತ್ತದೆ. ಈ ಪ್ರಕ್ರಿಯೆ ನಾಮಪದ, ಗುಣವಾಚಕಗಳಲ್ಲಿ ನಡೆದಿದೆ. ಬರಹ ಕನ್ನಡದ 'ಚ' 'ಜ' ತಾಲವ್ಯ ಘೋಷ ಹಾಗೂ ಅಘೋಷ ಅಲ್ಪ ಪ್ರಾಣಧ್ವನಿಯು, ದಂತ್ಯ ಘೋಷ ಹಾಗೂ ಅಘೋಷ 'ತ,' 'ದ' ಅಲ್ಪಪ್ರಾಣವಾಗಿ ದಂತ್ಯೋಚ್ಚಾರಣೆಗಳ್ಳುತ್ತಿದೆ. ಈ ಬದಲಾಗುವ ಪ್ರಕ್ರಿಯೆ ಮೂರು ಸಾಮಾಜಿಕ ವರ್ಗಗಳಲ್ಲಿ ಕಾಣಿಸಿಕೊಳ್ಳುತ್ತದೆ.

ತಾಲವ್ಯೋಚ್ಚಾರಣೆ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಚೆಲ್ಲು	ಚಲ್ಲು	ಚಲ್ಲು	ಚಲ್ಲು	ಚ>ಚ>ಚ>ಚ
ಚಿರತೆ	ಚಿರತ	ಚಿರ್ತ	ಚಿರ್ತ	ಚ>ಚ>ಚ>ಚ

ಚೌಕ	ಚೌಕ	ಚೌಕ	ಚೌಕ	ಚ>ಚ>ಚ>ಚ
ಜಡಿ	ಜೆಡಿ	ಜೆಡಿ	ಜೆಡಿ	ಜ>ಜ>ಜ>ಜ
ಜಿಂಕೆ	ಜಿಂಕ	ಜಿಂಕ	ಜಿಂಕ	ಜ>ಜ>ಜ>ಜ

ಮೇಲಿನ ಉದಾಹರಣೆಗಳಲ್ಲಿ 'ಚ' ಮತ್ತು 'ಜ' ಕಾರಗಳು ದಂತ್ಯೋಚ್ಚಾರಣೆಗೆ ಒಳಗಾಗದೆ ತಾಲವ್ಯೋಚ್ಚಾರಣೆ ಆಗಿಯೇ ಬಳಕೆಗೊಳ್ಳುವುದನ್ನು ಮಸ್ಕಿಕನ್ನಡದಲ್ಲಿ ನೋಡಬಹುದು. ಈ ಮೇಲಿನ ಉದಾಹರಣೆಗಳಲ್ಲಿ 'ಚ' ಮತ್ತು 'ಜ' ಕಾರಗಳ ಪರದಲ್ಲಿ 'ಉ', 'ಊ' ಮತ್ತು 'ಒ', 'ಓ' ಕಾರಗಳು ಬರದೇ ಇರುವುದೇ ಇದಕ್ಕೆ ಕಾರಣ. ಈ ಬದಲಾಗದೇ ಇರುವ ಪ್ರಕ್ರಿಯೆಯನ್ನು ನಾಮಪದ, ಕ್ರಿಯಾಪದ ಮತ್ತು ಗುಣವಾಚಕಗಳಲ್ಲಿ ನೋಡಬಹುದು.

೩.೨೧. 'ಚ' ಮತ್ತು 'ಜ' ಧ್ವನಿಗಳು ಪದಾದಿ ನಂತರ ಪದಮಧ್ಯದಲ್ಲಿ 'ಚ್ಚ' ಮತ್ತು 'ಜ್ಜ'ಗಳಾಗಿ ಬದಲಾಗಿರುವುದು

ಮಸ್ಕಿ ಕನ್ನಡದಲ್ಲಿ ಪದಮೊದಲಿಗೆ 'ಚ್' ಮತ್ತು 'ಜ್' ಧ್ವನಿಗಳು ಬರುತ್ತವೆ. ಪದಮಧ್ಯದಲ್ಲಿ 'ಚ್ಚ' ಮತ್ತು 'ಜ್ಜ' ಹೊಸಧ್ವನಿಗಳು ಬಳಕೆಗೊಳ್ಳುವುದನ್ನು ಗಮನಿಸಬಹುದು. ಇದು ಮಸ್ಕಿ ಕನ್ನಡದ ವೈಶಿಷ್ಟಗಳಲ್ಲೊಂದು ಈ ಅಂಶ.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಕಾಚು	ಕಾಚ್ಚು	ಕಾಚ್ಚು	ಕಾಚ್ಚು	ಚ>ಚ್ಚ>ಚ್ಚ>ಚ್ಚ
ಗಾಜು	ಗಾಜ್ಜು	ಗಾಜ್ಜು	ಗಾಜ್ಜು	ಜ>ಜ್ಜ>ಜ್ಜ>ಜ್ಜ
ರಾಜು	ರಾಜ್ಜು	ರಾಜ್ಜ	ರಾಜ್ಜ	ಜ>ಜ್ಜ>ಜ್ಜ>ಜ್ಜ
ಡಜನ್	ಡಜ್ಜನ್	ಡಜ್ಜನ್	ಡಜ್ಜನ್	ಜ>ಜ್ಜ>ಜ್ಜ>ಜ್ಜ
ಬಜಾರ	ಬಜ್ಜರ್	ಬಜ್ಜರ್	ಬಜ್ಜರ್	ಜ>ಜ್ಜ>ಜ್ಜ>ಜ್ಜ
ಮಜಾ	ಮಜ್ಜ	ಮಜ್ಜ	ಮಜ್ಜ	ಜ>ಜ್ಜ>ಜ್ಜ>ಜ್ಜ

ಅನ್ಯದೇಶಿ ಪದಗಳಲ್ಲಿ ಈ ಬದಲಾಗುವ ಪ್ರಕ್ರಿಯೆ ಹೆಚ್ಚು ಕಂಡುಬರುತ್ತದೆ.

೩.೨೨.'ಚ' ಕಾರ 'ಜ' ಕಾರವಾಗುವುದು

ಬರಹ ಕನ್ನಡದ ತಾಲವ್ಯ ಅಘೋಷ 'ಚ' ಅಲ್ಪಪ್ರಾಣ ಧ್ವನಿಯು ತಾಲವ್ಯ ಘೋಷ 'ಜ್' ಅಲ್ಪ ಪ್ರಾಣ ಧ್ವನಿಯಾಗಿ ಮಸ್ಕಿಕನ್ನಡದಲ್ಲಿ ಬಳಕೆಯಲ್ಲಿದೆ.

ಬರಹಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಚಚ್ಚು	ಜಜ್ಜು	ಜಜ್ಜು	ಜಜ್ಜು	ಚ>ಜ>ಜ>ಜ
ಚೀಪು	ಜಿಬಕ	ಜಿಬಕ	ಜಿಬಕ	ಚ>ಜ>ಜ>ಜ
ಚವಳಿಕಾಯಿ	ಜವಳಿಕಾಯಿ	ಜವ್ಳಿಕಾಯಿ	ಜವ್ಳಿಕಾಯಿ	ಚ>ಜ>ಜ>ಜ

ಮೇಲಿನ ಉದಾಹರಣೆಯಲ್ಲಿ 'ಚಚ್ಚು' ಪದವು ಮಸ್ಕಿಕನ್ನಡದಲ್ಲಿ 'ಜಜ್ಜು' ಎಂದು ಬಳಕೆಗೊಂಡಿದೆ ಬರಹಕನ್ನಡದ 'ಚಚ್ಚು' ಪದವು ಮಸ್ಕಿ ಕನ್ನಡದಲ್ಲಿ ಪದಾದಿ ಹಾಗೂ ಪದಾಂತ್ಯದಲ್ಲಿ 'ಜ' ಕಾರಹೊಂದಿ, ಮೂರು ಸಾಮಾಜಿಕ ವರ್ಗಗಳಲ್ಲಿ 'ಜಜ್ಜು' ಎಂದು ಬಳಕೆಗೊಳ್ಳುತ್ತಿದೆ. 'ಚೀಪು' ಪದವು ಮೂರಕ್ಷರದ ಪದ 'ಜಿಬಕ' ಎಂದು ಬಳಕೆಗೊಂಡರೆ, 'ಚವಳಿಕಾಯಿ' ಪದಾರ್ಥ ಸೂಚಕಪದವು ಪದಾದಿಯ 'ಚ' ಕಾರ ಲೋಪಗೊಂಡು ಆ ಜಾಗದಲ್ಲಿ 'ಜ' ಬಂದು 'ಜವಳಿಕಾಯಿ' ಎಂದು ಪ್ರಯೋಗಿಲ್ಪಡುತ್ತಿದೆ.

೩.೨೩. 'ನ' ಕಾರದ ಬದಲಿಗೆ 'ಲ' ಕಾರದ ಬಳಕೆ

ಮಸ್ಕಿಕನ್ನಡದಲ್ಲಿ 'ನ' ವ್ಯಂಜನದ ಬದಲಾಗಿ 'ಲ' ವ್ಯಂಜನದ ಬಳಕೆಯನ್ನು ಗಮನಿಸಬಹುದು ಈ ಪ್ರಕ್ರಿಯೆಯನ್ನೆ ಮೂರು ಸಾಮಾಜಿಕ ವರ್ಗಗಳಲ್ಲಿ ಗಮನಿಸಬಹುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ನಿಂಬೆಹಣ್ಣು	ಲಿಂಬೆಣ್ಣು	ಲಿಂಬೆಣ್ಣು	ಲಿಂಬೆಣ್ಣು	ನ>ಲ>ಲ>ಲ
ಜನ್ಮ	ಜಲ್ಮ	ಜಲ್ಮ	ಜಲ್ಮ	ನ>ಲ>ಲ>ಲ

'ನಿಂಬೆಹಣ್ಣು' ಆಹಾರ ಸೂಚಕಪದ ಮಸ್ಕಿಕನ್ನಡದ ಮೂರು ಸಾಮಾಜಿಕ ವರ್ಗಗಳಲ್ಲಿ 'ಲಿಂಬೆಣ್ಣು' ಎಂಬುದಾಗಿ ಬಳಕೆಯಲ್ಲಿದೆ. 'ಜನ್ಮ' ಪದರೂಪ ಮಸ್ಕಿಕನ್ನಡದ ಮೂರು ಸಾಮಾಜಿಕ ವರ್ಗಗಳಲ್ಲಿ 'ಜಲ್ಮ' ಎಂಬ ಬಳಕೆ ಕಾಣಬಹುದು.

೩.೨೪. 'ರ' ಅಕ್ಷರ ಲೋಪ

ಮೂರಕ್ಷರವಿರುವ ಶಬ್ದಗಳಲ್ಲಿ ಎರಡನೆಯ ಅಕ್ಷರ 'ರ' ಲೋಪಗೊಂಡು ಅಂತಹ ಶಬ್ದಗಳು ಎರಡಕ್ಷರದವುಗಳಾಗಿ ಬದಲಾಗುವುದು ಮಸ್ಕಿಕನ್ನಡ ಪ್ರಭೇದದಲ್ಲಿ ಕಾಣಿಸುವ ಮತ್ತೊಂದು ಪರಿವರ್ತನೆ ಮೂರನೆಯ ಅಕ್ಷರದ ಸ್ವರಕ್ಕನುಗುಣವಾಗಿ ಎರಡನೆಯ ಅಕ್ಷರ 'ರ' ವಿಕಲ್ಪವಾಗಿ ಬದಲಾಗಿರುವುದನ್ನು ಈ ಕೆಳಗಿನ ಪದಗಳಲ್ಲಿ ನೋಡಬಹುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಎರಡು	ಯಲ್ಡು	ಯಲ್ಡು	ಯಲ್ಡು	'ರ'ಲೋಪ
ಕರಡಿ	ಕಲ್ಡಿ	ಕಲ್ಡಿ	ಕಲ್ಡಿ	'ರ'ಲೋಪ

ಕುರುಡ	ಕಲ್ಡ	ಕುಲ್ಡ	ಕಲ್ಡ	'ರ'ಲೋಪ
ಬುರುಡೆ	ಬುಲ್ಡಿ	ಬುಲ್ಡಿ	ಬುಲ್ಡಿ	'ರ'ಲೋಪ
ಹರಡು	ಅಲ್ಡು	ಅಲ್ಡು	ಅಲ್ಡು	'ರ'ಲೋಪ

ಬರಹ ಕನ್ನಡದ ಮೂರಕ್ಷರದ ವಿಜಾತೀಯ ವ್ಯಂಜನಗಳಲ್ಲಿ ಎರಡನೆಯ ಅಕ್ಷರ ದಂತ್ಯ ಘೋಷ 'ರ' ಕಂಪಿತ ಧ್ವನಿಯ ಮಸ್ಕಿ ಕನ್ನಡದಲ್ಲಿ ಲೋಪಗೊಂಡು, ದಂತ್ಯ ಘೋಷ 'ಲ' ಪಾರ್ಶ್ವಿಕ ಧ್ವನಿಯಾಗಿ ಬದಲಾಗಿದೆ. ಮೂರಕ್ಷರದ ಪದಗಳಲ್ಲಿ 'ರ' ವ್ಯಂಜನ ಲೋಪಗೊಂಡಿರುವುದರಿಂದ ವಿಜಾತೀಯ ವ್ಯಂಜನಗಳು ವಿಜಾತೀಯ ಸಂಯುಕ್ತಾಕ್ಷರಗಳಾಗಿ ಬಳಕೆಯಲ್ಲಿವೆ. ಬರಹ ಕನ್ನಡದ ಪದಾಂತ್ಯದ ಮೂರ್ಧನ್ಯ ಘೋಷ 'ಡ' ಅಲ್ಪ ಪ್ರಾಣಾಕ್ಷರವು ಮೂರನೇ ಅಕ್ಷರವಾಗಿ ಬಂದಾಗ ದಂತ್ಯ ಘೋಷ 'ರ' ಕಂಪಿತ ಧ್ವನಿಯು ಲೋಪಗೊಂಡು ದಂತ್ಯ ಘೋಷ 'ಲ' ಪಾರ್ಶ್ವಿಕ ಧ್ವನಿ ಹಾಗೂ ಮೂರ್ಧನ್ಯ ಘೋಷ 'ಡ' ಧ್ವನಿಯು 'ಲ್ಡ' ಎಂದಾಗಿ ಸಂಯುಕ್ತಾಕ್ಷರವಾಗಿ ಉಚ್ಚಾರಣೆಗೊಳ್ಳುತ್ತಿದೆ. ಪದಾದಿ ಅಕ್ಷರದ ಪದದಲ್ಲಿರುವ ಸ್ವರವು ಹ್ರಸ್ವಸ್ವರವಾಗಿರುವಾಗ 'ರ' ಕಾರ 'ಲ' ಕಾರವಾಗಿ ಮೂರಕ್ಷರದ ವಿಜಾತೀಯ ವ್ಯಂಜನ ಪದವು ಎರಡಕ್ಷರದ ವಿಜಾತೀಯ ಸಂಯುಕ್ತಾಕ್ಷರ ಪದವಾಗಿ ಉಚ್ಚಾರಣೆಗೊಳ್ಳಲು ಕಾರಣವಾಗಿದೆ. ಬರಹ ಕನ್ನಡದ ಸಂಖ್ಯಾವಾಚಕ ಪದ ಎರಡು ಮಸ್ಕಿಕನ್ನಡದಲ್ಲಿ ಪದಾದಿಯ 'ಎ' ಕಾರವು 'ಯ' ಕಾರಗೊಂಡು 'ರ' ಕಾರ ಲೋಪವಾಗಿ 'ಯಲ್ಡು' ಎಂದು ಬಳಕೆಗೊಳ್ಳುತ್ತಿದೆ. ಕರಡಿ> ಕಲ್ಡಿ, ಬುರುಡೆ>ಬುಲ್ಡಿ, ಕುರುಡ>ಕುಲ್ಡ ಆಗಿ ಹರಡು ಪದವು ಮಸ್ಕಿಕನ್ನಡದಲ್ಲಿ ಪದಾದಿ 'ಹ' ಕಾರವು 'ಅ' ಕಾರಹೊಂದಿ ಅಲ್ಡು ಎಂದು ಬಳಕೆಗೊಂಡಿರುತ್ತದೆ. ಪದಾಂತ್ಯದಲ್ಲಿ 'ಎ' ಕಾರ ಬಂದಂತಹ ಪದಗಳು ಇ'' ಕಾರಂತವಾಗಿ ಕೊನೆಗೊಂಡಿರುವುದನ್ನೂ ಸಹ ಗಮನಿಸಬಹುದು.

೩.೨೫. 'ಸ' ಕಾರ 'ಚ' ಕಾರವಾಗುವುದು

ಮಸ್ಕಿ ಕನ್ನಡದ ಸಾಮಾಜಿಕ ವರ್ಗಗಳಲ್ಲಿ ಗುರುತಿಸಬಹುದಾದ ಮುಖ್ಯವಾದ ಅಂಶವೆಂದರೆ ದಂತ್ಯ ಘೋಷ 'ಸ' ಧ್ವನಿಯು ತಾಲವ್ಯ ಅಘೋಷ 'ಚ' ಕಾರವಾಗಿ ಬದಲಾಗಿರುವುದು

ಎರಡಕ್ಷರ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಸಂಜೆ	ಸಂಜಿ	ಚಂಜ್ಕಿ	ಚಂಜ್ಕಿ	ಸ>ಸ>ಚ>ಚ
ಸೌಟು	ಸೌಟು	ಚೌಟು	ಚೌಟು	ಸ>ಸ>ಚ>ಚ

ಬರಹ ಕನ್ನಡ ಪದಾದಿಯಲ್ಲಿ ಬರುವ 'ಸ' ಕಾರವು ಮಸ್ಕಿಕನ್ನಡದಲ್ಲಿ 'ಚ' ಕಾರವಾಗಿ ಮೇಲಿನ ಪದಗಳಲ್ಲಿ ಬದಲಾಗಿದೆ. ಸಂಜೆ ಪದ ಪ್ರಯೋಗವು ಮಸ್ಕಿ ಕನ್ನಡದಲ್ಲಿ 'ಸ' ಕಾರ 'ಚ' ಕಾರವಾಗಿ ಸಾಮಾಜಿಕ ವರ್ಗಗಳಾದ ನಾಯಕ, ಹರಿಜನರಲ್ಲಿ ಬಳಕೆಗೊಂಡರೆ ಲಿಂಗಾಯತರಲ್ಲಿ ಬದಲಾವಣೆಗೊಳ್ಳದೆ 'ಸ' ಕಾರವಾಗಿ ಉಳಿದುಕೊಂಡಿದೆ. ಸಂಜೆ ಪದ ಪ್ರಯೋಗವು ಮಸ್ಕಿಕನ್ನಡದಲ್ಲಿ ಬೇಗಸೆರೆ ಎಂದೂ ಉಚ್ಚಾರಗೊಳ್ಳುತ್ತದೆ.

'ಸೌಟು' ಪದವು ಮೂರೂ ಸಾಮಾಜಿಕ ವರ್ಗಗಳಲ್ಲಿ 'ಚ' ಕಾರಹೊಂದಿ 'ಚೌಟು' ಎಂದು ಬಳಕೆಯಲ್ಲಿರುವುದನ್ನು ಗಮನಿಸಬಹುದು.

ಮೂರಕ್ಷರ ಪದಗಳ ಮಾದರಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಗೊರಸು	ಗ್ವರಚು	ಗ್ವರ್ಚು	ಗ್ವರ್ಚು	ಸ>ಚ>ಚ>ಚ
ಮಡಸು	ಮಡಸು	ಮಡ್ಚು	ಮಡ್ಚು	ಸ>ಚ>ಚ>ಚ
ಸಜಕ	ಚಜಕ	ಚಜಕ	ಚಜಕ	ಸ>ಚ>ಚ>ಚ

ಮೂರಕ್ಷರದ ಪದಗಳಲ್ಲಿಯೂ ಸಹ 'ಸ' ಕಾರ 'ಚ' ಕಾರ ಹೊಂದಿರುವುದನ್ನು ಮಸ್ಕಿ ಕನ್ನಡದಲ್ಲಿ ನೋಡಬಹುದು. ಬರಹ ಕನ್ನಡದ ಗೊರಸು ನಾಮಪದ ಮಸ್ಕಿ ಕನ್ನಡದಲ್ಲಿ ಪದಾಂತ್ಯ 'ಸ' ಕಾರವು 'ಚ' ಕಾರವಾಗಿ 'ಗೊರಸು', ಪದ 'ಗೊರ್ಚು' ಎಂದು ಬಳಕೆಗೊಳ್ಳುತ್ತದೆ. 'ಮಡಸು' ಪದವು ಪದಾಂತ್ಯದಲ್ಲಿ 'ಸ' ಕಾರವು ಲಿಂಗಾಯತರ ಉಚ್ಚಾರಣೆಯಲ್ಲಿ ಹಾಗೆ ಉಳಿದಿದ್ದು ನಾಯಕ, ಹರಿಜನರಲ್ಲಿ 'ಚ' ಕಾರವಾಗಿ ಬದಲುಗೊಂಡು 'ಮಡ್ಚು' ಎಂದಾಗಿದೆ. 'ಸಜಕ' ಪದವು ಮೂರು ಸಾಮಾಜಿಕ ವರ್ಗಗಳಲ್ಲಿ 'ಚಜಕ' ಎಂದು ಬಳಕೆಗೊಂಡಿದೆ.

೩.೨೬. 'ಷ', 'ಶ' ಕಾರವು 'ಸ' ಕಾರವಾಗುವುದು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಆಶ್ಚರ್ಯ	ಆಸ್ಚರ್ಯ	ಆಸ್ಚರ್ಯ	ಆಸ್ಚರ್ಯ	ಶ>ಸ>ಸ>ಸ
ಕೃಷ್ಣ	ಕೃಸ್ಣ	ಕ್ರಿಸ್ಣ	ಕ್ರಿಸ್ಣ	ಷ>ಸ>ಸ>ಸ
ವಿಷ	ಇಸ	ಇಸ	ಇಸ	ಷ>ಸ>ಸ>ಸ
ವಿಷಯ	ವಿಸಯ	ವಿಸಯ	ವಿಸಯ	ಶ>ಸ>ಸ>ಸ
ವಿಶೇಷ	ವಿಸೇಸ	ವಿಸೇಸ	ವಿಸೇಸ	ಶ>ಸ>ಸ>ಸ
ಶುಕ್ರ	ಸುಕ್ರ	ಸುಕ್ರ	ಸುಕ್ರ	ಶ>ಸ>ಸ>ಸ
ಶುರು	ಸುರು	ಸುರು	ಸುರು	ಶ>ಸ>ಸ>ಸ
ಶಿವರಾತ್ರಿ	ಸಿವರಾತ್ರಿ	ಸಿವರಾತ್ರಿ	ಸಿವರಾತ್ರಿ	ಶ>ಸ>ಸ>ಸ

'ಸ' ಸಂಘರ್ಷ ದಂತ್ಯ ಧ್ವನಿಮಾವು 'ಶ್' 'ಷ್' ಧ್ವನಿಮಾಗಳ ಬಳಕೆಯ ಕಾರ್ಯವನ್ನು ನಿರ್ವಹಿಸುವುದನ್ನು ಈ ಮೇಲಿನ ಉದಾಹರಣೆಗಳಿಂದ ಸ್ಪಷ್ಟ ಪಡಿಸಿಕೊಳ್ಳಬಹುದು. ಮೂರು ಸಾಮಾಜಿಕ ವರ್ಗಗಳಲ್ಲಿಯೂ ಈ ಬದಲಾವಣೆಯನ್ನು ಗಮನಿಸಬಹುದಾಗಿದೆ.

೩.೨೭. 'ವ' ಕಾರ ಲೋಪ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಜ್ವರ	ಜರ	ಜರ	ಜರ	ವ>Ø>Ø>Ø
ವ್ಯವಹಾರ	ಯವಾರ	ಯವಾರ	ಯವಾರ	ವ>Ø>Ø>Ø
ವ್ಯಸನ	ಯಸನ	ಯಸನ	ಯಸನ	ವ>Ø>Ø>Ø
ಸ್ವಾಮಿ	ಸಾಮಿ	ಸಾಮಿ	ಸಾಮಿ	ವ>Ø>Ø>Ø

ಪದಾದಿಯ ಉಭಯೋಷ್ಠ ಘೋಷ 'ವ' ಅರ್ಧಸ್ವರ ಮಸ್ಕಿ ಕನ್ನಡದಲ್ಲಿ ಲೋಪಗೊಂಡಿದೆ. ಪದಾದಿಯ ಅಕ್ಷರದಲ್ಲಿ ದ್ವಿತ್ವಗಳು ಆಗಿದ್ದಲ್ಲಿ ಈ ಲೋಪವನ್ನು ಕಾಣಬಹುದು. ಭಾಷೆಯು ಸಂಕೀರ್ಣತೆಯಿಂದ ಸರಳತೆಗೆ ಹರಿಯುವುದನ್ನು ಮೇಲಿನ ಉದಾಹರಣೆಗಳಲ್ಲಿ ಉಚ್ಚಾರಣೆಗೊಂಡಿರುವುದರಲ್ಲಿ ಕಾಣಬಹುದು.

೩.೨೮. 'ಹ' ಕಾರ 'ಅ' ಕಾರವಾಗುವುದು

'ಪ' ಕಾರ 'ಹ' ಕಾರವಾಗುವ ಬದಲಾವಣೆ ಸುಮಾರು ಹತ್ತನೇ ಶತಮಾನದಲ್ಲಿ ಶುರುವಾಗಿತ್ತು ಎಂಬುದಾಗಿ ಕನ್ನಡ ಶಾಸನಗಳನ್ನು ಪರಿಶೀಲಿಸಿದಾಗ ತಿಳಿಯುತ್ತದೆ. ಒಂಭತ್ತನೆಯ ಶತಮಾನದ ಶಾಸನಗಳಲ್ಲಿ 'ಪ'ಕಾರ ಮಾತ್ರವೇ ಕಾಣಿಸುತ್ತದೆ. ಆದರೆ ಹತ್ತನೇ ಶತಮಾನದ ಶಾಸನಗಳಲ್ಲಿ 'ಪ' ಕಾರದ ಬದಲು 'ಹ' ಕಾರವನ್ನು ತೋರಿಸುವ ಕೆಲವು ಪದಗಳು ಕಾಣಸಿಗುತ್ತವೆ. ಅನಂತರದ ಶಾಸನಗಳಲ್ಲಿ ಇಂತಹ ಪದಗಳ ಎಣಿಕೆ ಜಾಸ್ತಿಯಾಗುತ್ತಾ ಹೋಗುತ್ತದೆ. ಮತ್ತು ಹದಿನಾಲ್ಕು ಹದಿನೈದನೆಯ ಶತಮಾನಕ್ಕಾನುಗುಣವಾಗಿ ಮೊದಲಿಗೆ 'ಪ' ಕಾರ ಬಂದಿರುವ ಪದಗಳು ಕಡಿಮೆಯಾಗುತ್ತಾ ಹೋಗಿ ಅನಂತರ ಅವು ಪೂರ್ಣ ಇಲ್ಲವಾಗಿ ಬಿಡುತ್ತವೆ.[೧] ಮಸ್ಕಿಕನ್ನಡದಲ್ಲಿ ಕಾಣಿಸುವ ಇನ್ನೊಂದು ಪ್ರಾಮುಖ್ಯವಾದ ಬದಲಾವಣೆ ಎಂದರೆ ಬರಹ ಕನ್ನಡದ 'ಹ' ಕಾರ ಸಂಪೂರ್ಣ ಲೋಪವಾಗುವುದು. ಬರಹಕನ್ನಡದ ಗಲೀಯ ಘರ್ಷ 'ಹ' ಕಾರವು ಮಸ್ಕಿ ಕನ್ನಡದಲ್ಲಿ ನಿಮ್ನ ಪಶ್ಚ 'ಅ' ಸ್ವರವಾಗಿ ಬಳಕೆಯಲ್ಲಿದೆ.

ಎರಡಕ್ಷರ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಹಂಚು	ಅಂಚು	ಅಂಚು	ಅಂಚು	ಹ>ಅ>ಅ>ಅ
ಹಂಡೆ	ಅಂಡೆ	ಅಂಡೆ	ಅಂಡೆ	ಹ>ಅ>ಅ>ಅ
ಹಂದಿ	ಅಂದಿ	ಅಂದಿ	ಅಂದಿ	ಹ>ಅ>ಅ>ಅ

ಬರಹ ಕನ್ನಡದ ಪದಾದಿಯ ಗಲೀಯ ಘರ್ಷ 'ಹ' ಕಾರವು ಮಸ್ಕಿ ಕನ್ನಡದಲ್ಲಿ ನಿಮ್ನ ಪಶ್ಚ 'ಅ' ಸ್ವರವಾಗಿರುವುದನ್ನು ಎರಡಕ್ಷರದ ಅನುಸ್ವರ ಹೊಂದಿರುವ ಪದಗಳಲ್ಲಿ ನೋಡಬಹುದು. ಈ ಮೇಲಿನ ಪದಗಳ 'ಹ' ಕಾರ 'ಅ' ಕಾರವಾಗುವ ಬದಲಾವಣೆಯನ್ನು ಮೂರು ಸಾಮಾಜಿಕ ವರ್ಗಗಳಲ್ಲಿ ನೋಡಬಹುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಹಕ್ಕಿ	ಅಕ್ಕಿ	ಅಕ್ಕಿ	ಅಕ್ಕಿ	ಹ>ಅ>ಅ>ಅ
ಹಗ್ಗ	ಅಗ್ಗ	ಅಗ್ಗ	ಅಗ್ಗ	ಹ>ಅ>ಅ>ಅ
ಹಚ್ಚೆ	ಅಚ್ಚೆ	ಅಚ್ಚೆ	ಅಚ್ಚೆ	ಹ>ಅ>ಅ>ಅ
ಹಣ್ಣು	ಅಣ್ಣು	ಅಣ್ಣು	ಅಣ್ಣು	ಹ>ಅ>ಅ>ಅ
ಹತ್ತು	ಅತ್ಥು	ಅತ್ಥು	ಅತ್ಥು	ಹ>ಅ>ಅ>ಅ
ಹಲ್ಲಿ	ಅಲ್ಲಿ	ಅಲ್ಲಿ	ಅಲ್ಲಿ	ಹ>ಅ>ಅ>ಅ
ಹಸ್ತ	ಅಸ್ತ	ಅಸ್ತ	ಅಸ್ತ	ಹ>ಅ>ಅ>ಅ
ಹಳ್ಳ	ಅಳ್ಳ	ಅಳ್ಳ	ಅಳ್ಳ	ಹ>ಅ>ಅ>ಅ
ಹಟ	ಅಟ	ಅಟ	ಅಟ	ಹ>ಅ>ಅ>ಅ
ಹಣೆ	ಅಣೆ	ಅಣೆ	ಅಣೆ	ಹ>ಅ>ಅ>ಅ
ಹನಿ	ಅನಿ	ಅನಿ	ಅನಿ	ಹ>ಅ>ಅ>ಅ
ಹಸಿ	ಅಸಿ	ಅಸಿ	ಅಸಿ	ಹ>ಅ>ಅ>ಅ
ಹಸು	ಅಸು	ಅಸು	ಅಸು	ಹ>ಅ>ಅ>ಅ

ಬರಹ ಕನ್ನಡದ ಎರಡಕ್ಷರದ ಸಜಾತೀಯ ಸಂಯುಕ್ತಾಕ್ಷರ ಪದಗಳ ಪದಾದಿಯ ಗಲೀಯ ಘರ್ಷ 'ಹ' ಕಾರವು ಮಸ್ಕಿ ಕನ್ನಡದಲ್ಲಿ ಲೋಪಗೊಂಡು ನಿಮ್ನ ಪಶ್ಚ 'ಅ' ಸ್ವರವಾಗಿ ಬಳಕೆಯಲ್ಲಿದೆ. ಮೇಲಿನ ಉದಾಹರಣೆಯಿಂದ 'ಹ' ಕಾರ ಲೋಪವನ್ನು ಕಂಡುಕೊಳ್ಳಬಹುದು. ಈ ರೀತಿಯ ಪದಾದಿಯ ಅಕ್ಷರ 'ಹ' ಕಾರ ಲೋಪಗೊಂಡು 'ಅ' ಸ್ವರ ಬಳಕೆಗೊಳ್ಳುವುದರಿಂದ ಕೆಲವು ಪದಗಳ ಅರ್ಥವು ಒಂದಕ್ಕಿಂತ ಹೆಚ್ಚು ಅರ್ಥಕೊಡುವ ಶಬ್ದಗಳು ನಿರ್ಮಾಣವಾಗುವುದನ್ನು ಗಮನಿಸಬಹುದಾಗಿದೆ. 'ಅಕ್ಕಿ', 'ಅತ್ಥು', 'ಅಲ್ಲಿ' ಇತ್ಯಾದಿ ಪದಗಳಲ್ಲಿ ನೋಡಬಹುದು. ಈ ಬದಲಾಗುವ ಪ್ರಕ್ರಿಯೆಯನ್ನು ನಾಮಪದ, ಕ್ರಿಯಾಪದ ಹಾಗೂ ಸಂಖ್ಯಾವಾಚಕಗಳಲ್ಲಿ ನೋಡುತ್ತೇವೆ.

ಮೂರಕ್ಷರ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಹಂದರ	ಅಂದರ	ಅಂದ್ರ	ಅಂದ್ರ	ಹ>ಅ>ಅ>ಅ
ಹಂಬಲ	ಅಂಬಲ	ಅಂಬಲ	ಅಂಬಲ	ಹ>ಅ>ಅ>ಅ
ಹಗಲು	ಅಗಲು	ಅಗಲು	ಅಗಲು	ಹ>ಅ>ಅ>ಅ

ಹಗುರ	ಅಗುರ	ಅಗುರ	ಅಗುರ	ಹ>ಅ>ಅ>ಅ
ಹತ್ತಿರ	ಅತ್ತಿರ	ಅತ್ರ	ಅತ್ರ	ಹ>ಅ>ಅ>ಅ
ಹರಾಜು	ಅರಾಜು	ಅರಾಜು	ಅರಾಜು	ಹ>ಅ>ಅ>ಅ
ಹವಳ	ಅವಳ	ಅವಳ	ಅವಳ	ಹ>ಅ>ಅ>ಅ
ಹಳದಿ	ಅಳದಿ	ಅಳ್ದಿ	ಅಳ್ದಿ	ಹ>ಅ>ಅ>ಅ

ಮೇಲಿನ ಮೂರಕ್ಷರದ ಪದಗಳಲ್ಲಿ ಪದಾದಿಯ ಗಲೀಯ ಘರ್ಷ 'ಹ' ಕಾರವು ನಿಮ್ನ ಪಶ್ಚ 'ಅ' ಕಾರವಾಗಿ ಮಸ್ಕಿ ಕನ್ನಡದಲ್ಲಿ ಪರಿವರ್ತನೆಗೊಂಡಿದೆ. ಈ ಪರಿವರ್ತನೆಯು ಅನುಸ್ವರವಿರುವ ಪದಗಳಲ್ಲಿಯೂ (ಅಂದ್ರ, ಅಂಬಲ) ನಡೆದಿರುವುದನ್ನು ಗಮನಿಸಬಹುದು. ಈ ರೀತಿ ಬದಲಾಗುವ ಪ್ರಕ್ರಿಯೆ ನಾಮಪದ ಕ್ರಿಯಾಪದ ಹಾಗೂ ಗುಣವಾಚಕಗಳಲ್ಲಿ ನಡೆದಿದೆ.

ನಾಲ್ಕಕ್ಷರ ಪದಗಳಲ್ಲಿ

ಬರಹ ಕನ್ನಡ	**ಲಿಂಗಾಯತ**	**ನಾಯಕ**	**ಹರಿಜನ**	**ವ್ಯತ್ಯಾಸ**
ಹಠಮಾರಿ	ಅಟಮಾರಿ	ಅಟಮಾರಿ	ಅಟಮಾರಿ	ಹ>ಅ>ಅ>ಅ
ಹಠವಾದಿ	ಅಟವಾದಿ	ಅಟವಾದಿ	ಅಟವಾದಿ	ಹ>ಅ>ಅ>ಅ
ಹರಳೆಣ್ಣೆ	ಅರಳಣ್ಣಿ	ಅರಳಣ್ಣಿ	ಅರಳಣ್ಣಿ	ಹ>ಅ>ಅ>ಅ
ಹರಿಕಥೆ	ಅರಿಕತೆ	ಅರಿಕತಿ	ಅರಿಕತಿ	ಹ>ಅ>ಅ>ಅ

ಬರಹ ಕನ್ನಡದ ನಾಲ್ಕಕ್ಷರದ ನಾಮಪದ ಪದಾದಿಯ 'ಹ' ಕಾರವು ಮಸ್ಕಿ ಕನ್ನಡದಲ್ಲಿ ಪದಾದಿ 'ಹ' ಕಾರ ಲೋಪಗೊಂಡು 'ಅ' ಕಾರವಾಗಿ ಬಳಕೆಯಲ್ಲಿರುವುದು. ಭಾಷೆಯು ಸಂಕೀರ್ಣತೆಯಿಂದ ಸರಳತೆ ಕಡೆಗೆ ಹರಿಯುವುದರಿಂದ ಇಲ್ಲಿ 'ಹ' ಕಾರವು 'ಅ' ಕಾರವಾಗಿ ಬಳಕೆಗೊಂಡಿದೆ.

೩.೨೯. ಗಲೀಯ ಘರ್ಷ 'ಹ' ಕಾರವು ನಿಮ್ನ ಪಶ್ಚ 'ಆ' ಸ್ವರವಾಗುವುದು

ಬರಹ ಕನ್ನಡ	**ಲಿಂಗಾಯತ**	**ನಾಯಕ**	**ಹರಿಜನ**	**ವ್ಯತ್ಯಾಸ**
ಹಾಕು	ಆಕು	ಆಕು	ಆಕು	ಹ>ಆ>ಆ>ಆ
ಹಾಡು	ಆಡು	ಆಡು	ಆಡು	ಹ>ಆ>ಆ>ಆ
ಹಾದಿ	ಆದಿ	ಆದಿ	ಆದಿ	ಹ>ಆ>ಆ>ಆ
ಹಾನಿ	ಆನಿ	ಆನಿ	ಆನಿ	ಹ>ಆ>ಆ>ಆ
ಹಾರು	ಆರು	ಆರು	ಆರು	ಹ>ಆ>ಆ>ಆ
ಹಾಲು	ಆಲು	ಆಲು	ಆಲು	ಹ>ಆ>ಆ>ಆ

ಹಾವು	ಆವು	ಆವು	ಆವು	ಹ>ಆ>ಆ>ಆ
ಹಾಳೆ	ಆಳಿ	ಆಳಿ	ಆಳಿ	ಹ>ಆ>ಆ>ಆ
ಹಾಳು	ಆಳು	ಆಳು	ಆಳು	ಹ>ಆ>ಆ>ಆ
ಹಾಸು	ಆಸು	ಆಸು	ಆಸು	ಹ>ಆ>ಆ>ಆ

ಬರಹ ಕನ್ನಡದ ಪದಾದಿಯಲ್ಲಿ ಬರುವ ಗಲೀಯ ಘರ್ಷ 'ಹ' ಕಾರವು ಮಸ್ಕಿಕನ್ನಡದಲ್ಲಿ ನಿಮ್ನ ಪಶ್ಚ 'ಆ' ದೀರ್ಘ ಸ್ವರವಾಗಿ ಬಳಕೆಯಲ್ಲಿದೆ. ಈ ಬದಲಾಗುವ ಪ್ರಕ್ರಿಯೆಯೂ ಮೂರು ಸಾಮಾಜಿಕ ವರ್ಗಗಳಲ್ಲಿ ಕಂಡುಬರುವುದಲ್ಲದೆ ಈ ಬದಲಾಗುವಿಕೆಯು ನಾಮಪದ, ಕ್ರಿಯಾಪದ, ಗುಣವಾಚಕಗಳಲ್ಲಿ ಕಾಣಿಸಿಕೊಳ್ಳುತ್ತದೆ. ಪದಾದಿಯ 'ಹ' ಕಾರ ಲೋಪಗೊಂಡಿರುವುದರಿಂದ ಪದಗಳ ಮೂಲ ಅರ್ಥಗಳಲ್ಲಿ ಬದಲಾವಣೆಯಾಗುವುದನ್ನು ಗಮನಿಸಬಹುದು. 'ಹಾಡು' ಪದವು 'ಆಡು' ಪ್ರಾಣಿಸೂಚಕವಾಗಿ, 'ಹಾದಿ' ಪದ 'ಆದಿ' 'ಮೊದಲು' ಆಗಿ, 'ಹಾರು' ಪದ 'ಆರು' ಸಂಖ್ಯಾವಾಚಗಳಾಗಿ ಉಚ್ಚಾರಣೆಗೊಳ್ಳುವುದನ್ನು ಮಸ್ಕಿ ಕನ್ನಡದಲ್ಲಿ ನೋಡಬಹುದು.

ಮೂರಕ್ಷರ ಪದಗಳಲ್ಲಿ

ಬರಹ ಕನ್ನಡ	**ಲಿಂಗಾಯತ**	**ನಾಯಕ**	**ಹರಿಜನ**	**ವ್ಯತ್ಯಾಸ**
ಹಾರಾಡು	ಆರಾಡು	ಆರಾಡು	ಆರಾಡು	ಹ>ಆ>ಆ>ಆ
ಹಾರಿಸು	ಆರಿಸು	ಆರ್ಸು	ಆರ್ಸು	ಹ>ಆ>ಆ>ಆ
ಹಾಸಿಗೆ	ಆಸಿಗೆ	ಆಸ್ಗಿ	ಆಸ್ಗಿ	ಹ>ಆ>ಆ>ಆ
ಹಾಳಾಗು	ಆಳಾಗು	ಆಳಾಗು	ಆಳಾಗು	ಹ>ಆ>ಆ>ಆ

ಪದಾದಿಯ 'ಹ' ಕಾರವು ಮೂರಕ್ಷರದ ಪದಗಳಲ್ಲಿಯೂ ಸಹ 'ಆ' ಕಾರವಾಗಿ ಬಳಕೆಗೊಳ್ಳುವುದನ್ನು ಮಸ್ಕಿ ಕನ್ನಡದಲ್ಲಿ ನೋಡಬಹುದು. ಬರಹ ಕನ್ನಡ ಪದದ ಎರಡನೆಯ ಅಕ್ಷರ ಪದದಲ್ಲಿ ದೀರ್ಘಸ್ವರಬಂದಾಗ ಮೂರಕ್ಷರದ ಪದಗಳಾಗಿ ಮೂರು ಸಾಮಾಜಿಕ ವರ್ಗಗಳಲ್ಲಿ 'ಹ' ಕಾರ 'ಆ' ಕಾರವಾಗಿ ಬಳಕೆಗೊಂಡರೆ ಉಳಿದ ಪದಗಳು ಎರಡಕ್ಷರದ ವಿಜಾತೀಯ ಸಂಯುಕ್ತಾಕ್ಷರ ಪದಗಳಾಗಿ ಬಳಕೆಗೊಳ್ಳುತ್ತಿವೆ.

೩.೩೦. ಪದಾದಿಯ ಗಲೀಯ ಘರ್ಷ 'ಹ' ಕಾರವು ಉಚ್ಚ ಪಶ್ಚ 'ಉ', 'ಊ' ಸ್ವರವಾಗುವುದು.

ಎರಡಕ್ಷರ ಪದಗಳಲ್ಲಿ

ಬರಹಕನ್ನಡ	**ಲಿಂಗಾಯತ**	**ನಾಯಕ**	**ಹರಿಜನ**	**ವ್ಯತ್ಯಾಸ**
ಹುಂಜ	ಉಂಜ	ಉಂಜ	ಉಂಜ	ಹ>ಉ>ಉ>ಉ
ಹುಂಡಿ	ಉಂಡಿ	ಉಂಡಿ	ಉಂಡಿ	ಹ>ಉ>ಉ>ಉ
ಹುಂಬ	ಉಂಬ	ಉಂಬ	ಉಂಬ	ಹ>ಉ>ಉ>ಉ
ಹುಗ್ಗಿ	ಉಗ್ಗಿ	ಉಗ್ಗಿ	ಉಗ್ಗಿ	ಹ>ಉ>ಉ>ಉ

ಹುತ್ತ	ಉತ್ತ	ಉತ್ತ	ಉತ್ತ	ಹ>ಉ>ಉ>ಉ
ಹೂವ	ಊವ್ವ	ಊವ್ವ	ಊವ್ವ	ಹ>ಉ>ಉ>ಉ
ಹುಸಿ	ಉಸಿ	ಉಸಿ	ಉಸಿ	ಹ>ಉ>ಉ>ಉ

ಪದಾದಿಯಲ್ಲಿ ಬರುವ ಗಲೀಯ ಘರ್ಷ 'ಹ' ಕಾರವು ಮಸ್ಕಿ ಕನ್ನಡದಲ್ಲಿ ಉಚ್ಚ ಪಶ್ಚ ಸ್ವರಗಳು 'ಉ', 'ಊ' ಗಳಾಗಿ ಬದಲುಗೊಂಡಿದೆ. ಈ ಬದಲಾಗುವಿಕೆಯು ನಾಮಪದ ಹಾಗೂ ಕ್ರಿಯಾಪದ ಗಳೆರಡರಲ್ಲಿಯೂ ನಡೆದಿದೆ.

ಮೂರಕ್ಷರ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಹುಟ್ಟಿಸು	ಉಟ್ಟಿಸು	ಉಟ್ಸು	ಉಟ್ಸ	ಹ>ಉ>ಉ>ಉ
ಹುಡುಕು	ಉಡುಕು	ಉಡುಕು	ಉಡ್ಕು	ಹ>ಉ>ಉ>ಉ
ಹುಡುಗ	ಉಡ್ಗ	ಉಡ್ಗ	ಉಡ್ಗ	ಹ>ಉ>ಉ>ಉ
ಹುಣ್ಣಿಮೆ	ಉಣಿಮಿ	ಉಣ್ವಿ	ಉಣ್ವಿ	ಹ>ಉ>ಉ>ಉ
ಹುಮ್ಮಸ್ಸು	ಉಮಸು	ಉಮಸು	ಉಮಸು	ಹ>ಉ>ಉ>ಉ

೩.೩೧. ಪದಾದಿಯ 'ಹ' ಕಾರ 'ವ' ಕಾರವಾಗುವುದು

ಬರಹ ಕನ್ನಡದ ಪದಾದಿಯ ಗಲೀಯ ಘರ್ಷ 'ಹ' ಕಾರವು ಮಸ್ಕಿ ಕನ್ನಡದಲ್ಲಿ ಘೋಷ 'ವ' ಅರ್ಧಸ್ವರವಾಗಿ ಬಳಕೆಯಲ್ಲಿದೆ. ಈ ಬದಲಾಗುವ ಪ್ರಕ್ರಿಯೆಯು ಎರಡಕ್ಷರ, ಮೂರಕ್ಷರದ ನಾಮಪದ ಹಾಗೂ ಕ್ರಿಯಾಪದಗಳಲ್ಲಿ ಕಾಣಬಹುದು.

ಎರಡಕ್ಷರದ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಹೊಗೆ	ವಗಿ	ವಗಿ	ವಗಿ	ಹ>ವ>ವ>ವ
ಹೊಟ್ಟೆ	ವಟ್ಟಿ	ವಟ್ಟಿ	ವಟ್ಟಿ	ಹ>ವ>ವ>ವ
ಹೊಡೆ	ವಡಿ	ವಡಿ	ವಡಿ	ಹ>ವ>ವ>ವ
ಹೋದ	ವೋದ	ವೋದ	ವೋದ	ಹ>ವ>ವ>ವ
ಹೊಲ	ವಲ	ವಲ	ವಲ	ಹ>ವ>ವ>ವ
ಹೊಲಿ	ವಲಿ	ವಲಿ	ವಲಿ	ಹ>ವ>ವ>ವ
ಹೊಳೆ	ವಳಿ	ವಳಿ	ವಳಿ	ಹ>ವ>ವ>ವ

ಪದಾದಿಯ 'ಹ' ಕಾರ 'ವ' ಕಾರವಾಗುವಾಗ ಬರಹ ಕನ್ನಡ ಪದಾಂತ್ಯದಲ್ಲಿ ಇದ್ದಂತಹ 'ಎ' ಕಾರವು ಮಸ್ಕಿ ಕನ್ನಡದಲ್ಲಿ 'ಇ' ಕಾರಾಂತವಾಗಿ ಕೊನೆಗೊಳ್ಳುತ್ತವೆ. ಈ ಮೇಲಿನ ಉದಾಹರಣೆಯಿಂದ ಪದಾದಿಯ

'ಹ' ಕಾರ 'ವ' ಕಾರವಾಗುವುದು ಹಾಗೂ ಅವೇ ಪದಗಳ ಪದಾಂತ್ಯದಲ್ಲಿಯ 'ಎ' ಕಾರ 'ಇ' ಕಾರವಾಗುವುದನ್ನು ತಿಳಿಯಬಹುದು.

ಮೂರಕ್ಷರದ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಹೊಕ್ಕಳು	ವಕ್ಕಳ	ವಕ್ಳ	ವಕ್ಳ	ಹ>ವ>ವ>ವ
ಹೊರಗೆ	ವರಗ	ವರಗ	ವರ್ಗ	ಹ>ವ>ವ>ವ
ಹೊರಸು	ವರಸು	ವರ್ಸು	ವರ್ಸು	ಹ>ವ>ವ>ವ
ಹೊಲಸು	ವಲಸು	ವಲ್ಸು	ವಲ್ಸು	ಹ>ವ>ವ>ವ
ಹೊಸದು	ವಸದು	ವಸದು	ವಸದು	ಹ>ವ>ವ>ವ
ಹೊಸ್ತಿಲು	ವಸ್ತಿಲಿ/ವಸ್ಲಿ	ವಸ್ಲಿ	ವಸ್ಲಿ	ಹ>ವ>ವ>ವ
ಹೋಳಿಗೆ	ವೋಳ್ಗಿ	ವೋಳ್ಗಿ	ವೋಳ್ಗಿ	ಹ>ವ>ವ>ವ

೩.೩.೨. ಪದಾದಿಯ 'ಹ' ಕಾರ 'ಯ' ಕಾರವಾಗುವುದು

ಎರಡಕ್ಷರದ ಪದಗಳ ಮಾದರಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಹೆಚ್ಚು	ಯಚ್ಚು	ಯಚ್ಚು	ಯಚ್ಚು	ಹ>ಯ>ಯ>ಯ
ಹೆಜ್ಜೆ	ಯಜ್ಜಿ	ಯಜ್ಜಿ	ಯಜ್ಜಿ	ಹ>ಯ>ಯ>ಯ
ಹೆಂಡ	ಯಂಡ	ಯಂಡ	ಯಂಡ	ಹ>ಯ>ಯ>ಯ
ಹೆಣ್ಣು	ಯಣ್ಣು	ಯಣ್ಣು	ಯಣ್ಣು	ಹ>ಯ>ಯ>ಯ

ಬರಹ ಕನ್ನಡದ ಪದಾದಿಯ ಗಲೀಯ ಘರ್ಷ 'ಹ' ಕಾರವು ಮಸ್ಕಿ ಕನ್ನಡದಲ್ಲಿ ತಾಲವ್ಯ ಘೋಷ 'ಯ್' ಅರ್ಧಸ್ವರವಾಗಿ ಬಳಕೆಯಲ್ಲಿದೆ. ಈ ಬಳಕೆಯು ನಾಮಪದ, ಕ್ರಿಯಾಪದಗಳಲ್ಲಿ ಇದೆ. ಮಸ್ಕಿ ಕನ್ನಡದ ಲಿಂಗಾಯತ ನಾಯಕ, ಹರಿಜನರ ಮಾತಿನಲ್ಲಿ ಪದಾದಿಯ 'ಹ' ಕಾರವು 'ಯ' ಕಾರವಾಗಿ ಬಳಕೆಯಲ್ಲಿದೆ.

ಮೂರಕ್ಷರದ ಪದಗಳ ಮಾದರಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಹೆಗ್ಗಣ	ಯಗ್ಗಣ	ಯಗ್ಗಣ	ಯಗ್ಗಣ	ಹ>ಯ>ಯ>ಯ
ಹೆಬ್ಬಾವು	ಯಬ್ಬಾವು	ಯಬ್ಬಾವು	ಯಬ್ಬಾವು	ಹ>ಯ>ಯ>ಯ

ಮೂರಕ್ಷರದ ನಾಮ ಪದಗಳಲ್ಲಿ ಪದಾದಿಯ 'ಹ' ಕಾರವು ಮಸ್ಕಿ ಕನ್ನಡದಲ್ಲಿ 'ಯ' ಕಾರವಾಗಿ ಬಳಕೆಗೊಳ್ಳುತ್ತಿದೆ.

೩.೩೩. ಪದಮಧ್ಯ 'ಹ' ಕಾರ ಲೋಪ

ಮೂರಕ್ಷರ ಪಬದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಪಹಣಿ	ಪಾಣಿ	ಪಾಣಿ	ಪಾಣಿ	ಹ>Ø>Ø>Ø
ಬಹಳ	ಬಾಳ	ಬಾಳ	ಬಾಳ	ಹ>Ø>Ø>Ø
ಸಹಾಯ	ಸಾಯ	ಸಾಯ	ಸಾಯ	ಹ>Ø>Ø>Ø

ಬರಹ ಕನ್ನಡದ ಮೂರಕ್ಷರದ ಪದಗಳಲ್ಲಿರುವ ಪದಮಧ್ಯದ ಗಲೀಯ ಘರ್ಷ 'ಹ' ಕಾರವು ಲೋಪಗೊಂಡು ಪದಾದಿಯ ಅಕ್ಷರದ ಪದದಲ್ಲಿರುವ 'ಅ' ಕಾರವು 'ಆ' ಕಾರವಾಗಿ ದೀರ್ಘ ಸ್ವರಗೊಂಡು ಎರಡಕ್ಷರ ಪದಗಳಾಗಿ ಬಳಕೆಯಲ್ಲಿದೆ.

ನಾಲ್ಕಕ್ಷರ ಪದಗಳಲ್ಲಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಮಹಾರಾಣಿ	ಮಾರಾಣಿ	ಮಾರಾಣಿ	ಮಾರಾಣಿ	ಹ>Ø>Ø>Ø
ವ್ಯವಹಾರ	ವ್ಯವಾರ	ಯ್ಯವಾರ	ಯ್ಯವಾರ	ಹ>Ø>Ø>Ø
ಸಹಕಾರ	ಸಾಕಾರ	ಸಾಕಾರ	ಸಾಕಾರ	ಹ>Ø>Ø>Ø
ಸಹವಾಸ	ಸಾವಾಸ	ಸಾವಾಸ	ಸಾವಾಸ	ಹ>Ø>Ø>Ø
ತಹಶೀಲ್ದಾರ	ತಾಸೀಲ್ದಾರ	ತಾಸೀಲ್ದಾರ	ತಾಸೀಲ್ದಾರ	ಹ>Ø>Ø>Ø

ಬರಹ ಕನ್ನಡದ ನಾಲ್ಕಕ್ಷರದ ಪದಗಳಲ್ಲಿಯ 'ಹ' ಕಾರ ಲೋಪಗೊಂಡಿರುವುದನ್ನು ಮಸ್ಕಿ ಕನ್ನಡದಲ್ಲಿ ಕಾಣಬಹುದು. 'ಹ' ಕಾರವು ಲೋಪಗೊಳ್ಳುವಾಗ ಆದಿ ಅಕ್ಷರವು ದೀರ್ಘ ಅಕ್ಷರಗೊಳ್ಳುವುದು ಮಸ್ಕಿ ಕನ್ನಡದ ವೈಶಿಷ್ಟ್ಯ.

೩.೩೪. ವಿಜಾತೀಯ ವ್ಯಂಜನಗಳು ಸಜಾತಿಯ ವ್ಯಂಜನಗಳಾಗುವುದು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಅರಳು	ಅಳ್ಳು	ಅಳ್ಳು	ಅಳ್ಳು	'ರ' ಲೋಪ
ಉರುಳು	ಉಳ್ಳು	ಉಳ್ಳು	ಉಳ್ಳು	'ರ' ಲೋಪ
ಒರಳು	ವಳ್ಳು	ವಳ್ಳು	ವಳ್ಳು	'ರ' ಲೋಪ
ಕರಳು	ಕಳ್ಳು	ಕಳ್ಳು	ಕಳ್ಳು	'ರ' ಲೋಪ
ನೆರಳು	ನರಳು	ನ್ಯಳ್ಳು	ನ್ಯಳ್ಳು	'ರ' ಲೋಪ
ಬೆರಳು	ಬರಳು	ಬ್ಯಳ್ಳು	ಬ್ಯಳ್ಳು	'ರ' ಲೋಪ

ಮೂರಕ್ಷರದ ವಿಜಾತೀಯ ವ್ಯಂಜನಗಳು ಎರಡಕ್ಷರದ ಸಜಾತೀಯ ವ್ಯಂಜನಗಳಾಗಿ ಬದಲಾಗುವುದನ್ನು ಮಸ್ಕಿ ಕನ್ನಡದಲ್ಲಿ ಕಾಣಬಹುದು. ಪದ ಮಧ್ಯ ಸ್ವರವಾದ ದಂತ್ಯ ಘೋಷ 'ರ' ಕಂಪಿತ ಧ್ವನಿಯು ಲೋಪಗೊಳ್ಳುವುದರ ಮೂಲಕ ಈ ಮೂರಕ್ಷರದ ಪದವು ಎರಡಕ್ಷರವಾಗಿ ಬದಲಾಗುತ್ತದೆ. ಈ ಬದಲಾಗುವ ಪ್ರಕ್ರಿಯೆ ಪದಾಂತ್ಯದ ಅಕ್ಷರವು ಮೂರ್ಧನ್ಯ ಘೋಷ 'ಳ' ಪಾರ್ಶ್ವಿಕ ಧ್ವನಿ ಇದ್ದು, ಆ ಧ್ವನಿಯ ಪದದಲ್ಲಿ 'ಉ' ಪಶ್ಚೋಚ್ಚ ಸ್ವರ ಬಂದಾಗ ಮಾತ್ರ ಈ ಪ್ರಕ್ರಿಯೆ ನಡೆದಿರುವುದು ಸ್ಪಷ್ಟವಾಗುತ್ತದೆ. ಮಸ್ಕಿ ಕನ್ನಡದ ಮೂರು ಸಾಮಾಜಿಕ ವರ್ಗಗಳಲ್ಲಿ ಈ ಪ್ರಕ್ರಿಯೆ ನಡೆದಿರುವುದನ್ನು ಗಮನಿಸಬಹುದು.

೩.೩೫. ಅನುನಾಸಿಕ ಲೋಪ

ಬರಹ ಕನ್ನಡದ ಅನುನಾಸಿಕ ಹೊಂದಿದ ಪದಗಳು ಮಸ್ಕಿಕನ್ನಡದಲ್ಲಿ ಅನುನಾಸಿಕ ಲೋಪಗೊಂಡು ಬಳಕೆಗೊಳ್ಳುತ್ತಿವೆ.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಕಂಡಿತು	ಕಾಣ್ತು	ಕಾಣ್ತು	ಕಾಣ್ತು	ಅನುನಾಸಿಕ ಲೋಪ
ಕೊಂಬು	ಕೋಡು	ಕೋಡು	ಕೋಡು	ಅನುನಾಸಿಕ ಲೋಪ
ತಂಪು	ತಣ್ಣ	ತಣ್ಣ	ತಣ್ಣ	ಅನುನಾಸಿಕ ಲೋಪ
ಮಂದ	ಮಬ್ಬು	ಮಬ್ಬು	ಮಬ್ಬು	ಅನುನಾಸಿಕ ಲೋಪ
ವಾಂತಿ	ವಾತಿ	ವಾತಿ	ವಾತಿ	ಅನುನಾಸಿಕ ಲೋಪ
ಸಿಂಹ	ಸಿಮ್ಮ	ಸಿಮ್ಮ	ಸಿಮ್ಮ	ಅನುನಾಸಿಕ ಲೋಪ
ಹೆಂಡತಿ	ಎಣ್ತಿ	ಎಣ್ತಿ	ಎಣ್ತಿ	ಅನುನಾಸಿಕ ಲೋಪ

ಅನುನಾಸಿಕ ಲೋಪಗೊಂಡಿರುವುದನ್ನು ಈ ಮೇಲಿನ ಉದಾಹರಣೆಗಳಿಂದ ಮಸ್ಕಿಕನ್ನಡದಲ್ಲಿ ಆದಂತಹ ಬದಲಾವಣೆಯನ್ನು ತಿಳಿಯಬಹುದು. 'ಕಂಡಿತು' ಪದವು ಮಸ್ಕಿಕನ್ನಡದಲ್ಲಿ ಅನುನಾಸಿಕ ಲೋಪಗೊಂಡು ಮೂರಕ್ಷರದ ವಿಜಾತೀಯ ವ್ಯಂಜನ ಪದವು ಎರಡಕ್ಷರ ವಿಜಾತೀಯ ಸಂಯುಕ್ತಾಕ್ಷರ ಪದವಾಗಿ, ಪದಾದಿ ಅಕ್ಷರ ಸ್ವರ 'ಅ' ಹ್ರಸ್ವಸ್ವರವು, 'ಆ' ಧೀರ್ಘ ಸ್ವರ ಹಂದಿ 'ಕಾಣ್ತು' ಎಂದು ಬಳಕೆಗೊಂಡಿದೆ. ಅದೇ ರೀತಿ 'ಕೊಂಬು' ಪದವು 'ಕೋಡು' ಎಂದು, 'ಹೆಂಡತಿ' ಪದವು 'ಎಣ್ತಿ' ಎಂದು ಬಳಕೆಯಲ್ಲಿದೆ. ಮೂರು ಸಾಮಾಜಿಕ ವರ್ಗಗಳಲ್ಲಿ ಈ ರೀತಿಯ ಪರಿವರ್ತನೆಯ ಪ್ರಕ್ರಿಯೆಯನ್ನು ಕಾಣುತ್ತೇವೆ.

೩.೩೬. ಅನುನಾಸಿಕ ಆಗಮನ

ಬರಹ ಕನ್ನಡ ಅನುನಾಸಿಕ ಲೋಪ ಪದವು ಮಸ್ಕಿಕನ್ನಡದಲ್ಲಿ ಅನುನಾಸಿಕಗೊಂಡು ಬಳಕೆಗೊಳ್ಳುವುದನ್ನು ಕೆಲವೊಂದು ಪದಗಳಲ್ಲಿ ಗಮನಿಸಬಹುದು. ಈ ಪರಿವರ್ತನೆಯು ಮೂರು ಸಾಮಾಜಿಕ ವರ್ಗಗಳಲ್ಲಿ, ನಾಮಪದ, ಕ್ರಿಯಾಪದಗಳಲ್ಲಿ ಗಮನಿಸಬಹುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಅವರೆಕಾಳು	ಅಂಬ್ರಿಕಾಳು	ಅಂಬ್ರಿಕಾಳ್	ಅಂಬ್ರಿಕಾಳ್	ಅನುನಾಸಿಕ ಆಗಮನ
ಕಮ್ಮಾರ	ಕಂಬಾರ	ಕಂಬಾರ	ಕಂಬಾರ	ಅನುನಾಸಿಕ ಆಗಮನ
ಕೂಡು	ಕುಂದ್ರು	ಕುಂದ್ರು	ಕುಂದ್ರು	ಅನುನಾಸಿಕ ಆಗಮನ
ನಿಲ್ಲು	ನಿಂದ್ರು	ನಿಂದ್ರು	ನಿಂದ್ರು	ಅನುನಾಸಿಕ ಆಗಮನ
ಹೇಗೆ	ಯಂಗ	ಯಂಗ	ಯಂಗ	ಅನುನಾಸಿಕ ಆಗಮನ
ಸಿರುಗುಪ್ಪ	ಸಿರುಗುಂಪ	ಸಿರುಗುಂಪ	ಸಿರುಗುಂಪ	ಅನುನಾಸಿಕ ಆಗಮನ

ಮೇಲಿನ ಕೆಲವೊಂದು ಪದಗಳು ಶಬ್ದರೂಪ ಬೇರೆ ಹೊಂದಿದ್ದರೂ ಶಬ್ದಾರ್ಥವು ಒಂದೇಯಾಗಿರುತ್ತವೆ.

ಅಡಿಟಿಪ್ಪಣಿ

೧. ಡಾ.ಕೆ.ಕೆಂಪೇಗೌಡ, ಕನ್ನಡ ಉಪಭಾಷೆಗಳ ಅಧ್ಯಯನ, ಭಾರತೀ ಪ್ರಕಾಶನ, ಮೈಸೂರು

೨. ಅಂಗಡಿ.ಎಸ್.ಎಸ್. 'ಶೋಧನ', ಪು. ೭೩, ೧೯೯೮, ಪಾರ್ವತಮ್ಮ ಪ್ರಕಾಶನ

೩. ಡಾ.ಕೆ.ಕೆಂಪೇಗೌಡ, ಸಾಮಾನ್ಯಭಾಷಾ ವಿಜ್ಞಾನ, ಭಾರತೀ ಪ್ರಕಾಶನ, ಮೈಸೂರು, ೧೯೯೩, ಪು.೨

೪. ಡಿ.ಎನ್.ಶಂಕರಭಟ್ಟ, ಕನ್ನಡಭಾಷೆಯ ಕಲ್ಪಿತ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ. ೭೮

ಅಧ್ಯಾಯ ೪

ಮಸ್ಕಿಕನ್ನಡದ ಪದರಚನೆ

೪.೧. ನಾಮಪದ

೪.೧.೧. ಸಹಜನಾಮ ಪ್ರಕೃತಿ

೪.೧.೨. ಸಾಧಿತನಾಮ ಪ್ರಕೃತಿ

೪.೨. ನಾಮಪ್ರಕೃತಿ

೪.೨.೧. ವಸ್ತುವಾಚಕಗಳು

೪.೨.೨. ಗುಣವಾಚಕಗಳು

೪.೨.೩. ಪರಿಮಾಣ ವಾಚಕಗಳು

೪.೨.೪. ಪ್ರಕಾರವಾಚಕಗಳು

೪.೨.೫. ದಿಗ್ವಾಚಕಗಳು

೪.೨.೬. ಸಂಖ್ಯಾವಾಚಕಗಳು

೪.೩. ಸರ್ವನಾಮ

೪.೩.೧. ನಿರ್ದೇಶಕ ಸರ್ವನಾಮ

೪.೩.೨. ದರದರ್ಶಕ ಸರ್ವನಾಮ

೪.೩.೩. ಪ್ರಶ್ನಾರ್ಥಕ ಸರ್ವನಾಮ

೪.೪. ಲಿಂಗವ್ಯವಸ್ಥೆ

೪.೫. ವಚನ ವ್ಯವಸ್ಥೆ

೪.೬. ವಿಭಕ್ತಿ ಪ್ರತ್ಯಯಗಳು

೪.೭. ವಿಭಕ್ತಿ ಪಲ್ಲಟ

೪.೮. ಕ್ರಿಯಾಪದ

೪.೮.೧. ಕ್ರಿಯಾಪ್ರಕೃತಿಗಳು

೪.೮.೨. ಅಕರ್ಮಕ ಕ್ರಿಯಾಪದ

೪.೮.೩. ಸಕರ್ಮಕ ಕ್ರಿಯಾಪದ

೪.೯. ಕಾಲಸೂಚಕ ಪ್ರತ್ಯಯಗಳು

೪.೯.೧. ವರ್ತಮಾನ ಸೂಚಕ ಪ್ರತ್ಯಯ

೪.೯.೨. ಭವಿಷ್ಯತ್ಕಾಲ ಸೂಚಕ ಪ್ರತ್ಯಯ

೪.೯.೩. ಭೂತಕಾಲ ಸೂಚಕ ಪ್ರತ್ಯಯ

೪.೧೦. ಆಖ್ಯಾತ ಪ್ರತ್ಯಯಗಳು

೪.೧೦.೧. ವರ್ತಮಾನ ಕಾಲದ ಆಖ್ಯಾತ ಪ್ರತ್ಯಯ

೪.೧೦.೨. ಭವಿಷತ್ಕಾಲದ ಆಖ್ಯಾತ ಪ್ರತ್ಯಯ

೪.೧೦.೩. ಭೂತಕಾಲದ ಆಖ್ಯಾತ ಪ್ರತ್ಯಯ

೪.೧೧. ವಿಧ್ಯರ್ಥಕ ಕ್ರಿಯಾಪದ

೪.೧೨. ನಿಷೇದಾರ್ಥಕ ಕ್ರಿಯಾಪದ

ಅಧ್ಯಾಯ ೪

ಮಸ್ಕಿಕನ್ನಡದ ಪದರಚನೆ

ಸಂಸ್ಕೃತ ವ್ಯಾಕರಣದಲ್ಲಿ ಪದ ಮತ್ತು ಶಬ್ದ ಎಂಬ ಎರಡು ಬೇರೆ ಬೇರೆ ಪದಗಳನ್ನು ಹೆಚ್ಚು ಕಡಿಮೆ ಒಂದೇ ಅರ್ಥದಲ್ಲಿ ಬಳಸುವ ಕ್ರಮಕಂಡುಬರುತ್ತದೆ. ಈ ಬಳಕೆಯನ್ನು ಅನುಸರಿಸಿ ಕನ್ನಡ ವ್ಯಾಕರಣದಲ್ಲಿ ಪದ ಮತ್ತು ಶಬ್ದ ಎಂಬ ಎರಡು ಪದಗಳು ಬಳಕೆಗೆ ಬಂದಿವೆ. ಸಂಸ್ಕೃತದಲ್ಲಿ ಪದ ಎಂಬುದಕ್ಕೆ ಹೆಚ್ಚಿನ ಸಂದರ್ಭಗಳಲ್ಲಿ ಶಬ್ದ ಎಂಬರ್ಥ ಇರುವುದನ್ನು ನೋಡಬಹುದು. ಆದರೆ ಕೆಲವು ಸಂದರ್ಭಗಳಲ್ಲಿ ಮಾತ್ರ ವಿಶಿಷ್ಟವಾದ ಪ್ರತ್ಯಯಗಳೊಂದಿಗೆ ಬರುವ ಶಬ್ದ ಎಂಬ ಅರ್ಥವೂ ಇದೆ. ವಿಭಕ್ತಿಪ್ರತ್ಯಯ ಇಲ್ಲವೇ ಆಖ್ಯಾತ ಪ್ರತ್ಯಯಗಳನ್ನೊಳಗೊಂಡ ರಚನೆಗಳಿಗೆ ಮಾತ್ರ ಸಂಸ್ಕೃತದಲ್ಲಿ ಪದಗಳೆಂದು ಕರೆಯಲಾಗುವುದು. ಬೇರೆ ಬೇರೆ ಪ್ರತ್ಯಯಗಳೊಂದಿಗೆ ಬಂದಿರುವ ಪದಗಳನ್ನು 'ಪದರೂಪ'ಗಳೆಂದು ಕರೆಯಬಹುದಾಗಿದೆ. ಈ ಹಿನ್ನೆಲೆಯಲ್ಲಿ 'ಮಸ್ಕಿಕನ್ನಡ' ಭಾಷಾ ಪದರಚನೆಯಲ್ಲಿ ನಾಮಪದ, ಕ್ರಿಯಾಪದಗಳ ಸ್ವರೂಪವನ್ನು ಗಮನಿಸಿ ಈ ರೀತಿ ವಿಶ್ಲೇಷಣೆ ಮಾಡಲು ಪ್ರಯತ್ನಿಸಲಾಗಿದೆ.

ಬರಹ ಕನ್ನಡದ ನಾಮಪ್ರಕೃತಿಗಳು ಬೇರೆ ಬೇರೆ ರೀತಿಯ ಬದಲಾವಣೆಗಳ ಮೂಲಕ ಮಸ್ಕಿ ಕನ್ನಡದಲ್ಲಿ ತಮ್ಮ ರೂಪಭೇದಗಳನ್ನು ಕಳೆದುಕೊಂಡಿವೆ. (ಹೂವು>ಊವ್ವ, ಕಲ್ಲು>ಕಲ್) ಮಸ್ಕಿಕನ್ನಡದಲ್ಲಿ ಕಾಣಿಸಿಕೊಳ್ಳುವ ಪದಗಳು ಅವುಗಳ ಅರ್ಥ ಮತ್ತು ರಚನೆಗಳನ್ನು ಆಧರಿಸಿ ನಾಮಪದಗಳು, ಕ್ರಿಯಾಪದಗಳು, ಗುಣವಾಚಕಗಳು, ಕ್ರಿಯಾವಿಶೇಷಣಗಳು ಎಂದು ವರ್ಗಮಾಡಬಹುದು. ನಾಮಪದಗಳು ಮತ್ತು ಸರ್ವನಾಮಗಳು ಲಿಂಗ, ವಚನ, ವಿಭಕ್ತಿ ಪ್ರತ್ಯಯಗಳನ್ನು ಪಡೆಯುತ್ತವೆ. ಮಸ್ಕಿಕನ್ನಡದಲ್ಲಿ ಪದಗಳು ಸ್ವರಾಂತ್ಯಗಳಾಗಿ ಇರುವುದಲ್ಲದೆ ವ್ಯಂಜನಾಂತಗಳಾಗಿರುವುದನ್ನು ಗಮನಿಸಬಹುದಾಗಿದೆ. ನಾಮಪದಗಳಲ್ಲಿ ಏಕಕ್ಷರ ಪದವನ್ನು ನೋಡಬಹುದು. ಎರಡಕ್ಷರ, ಮೂರಕ್ಷರ, ನಾಲ್ಕಕ್ಷರ ಪದಗಳು ಹೆಚ್ಚಾಗಿ ಬಳಕೆಯಲ್ಲಿ ಇವೆ. ಬರಹ ಕನ್ನಡದ ಸ್ವರಾಂತ್ಯದಲ್ಲಿರುವ ಪದಗಳು ವ್ಯಂಜನಾಂತಗಳಾಗಿ ಬಳಕೆಗೊಳ್ಳುವುದನ್ನು ಮಸ್ಕಿಕನ್ನಡದಲ್ಲಿ ನೋಡಬಹುದು. ಮೂರಕ್ಷರ,

ನಾಲ್ಕಕ್ಷರ ಪದಗಳು ಎರಡಕ್ಷರ ಹಾಗೂ ಮೂರಕ್ಷರ ಪದಗಳಾಗಿ ಬಳಕೆಗೊಂಡು ಕೆಲವೊಂದು ವಿಜಾತೀಯ ದ್ವಿತ್ವಕ್ಷರಗಳಾಗಿಯು ಪ್ರಯೋಗಗೊಳ್ಳುವವು. ಗುಣವಾಚಕಗಳು. ನಾಮಪದಗಳನ್ನು ಅನುಸರಿಸಿ ಬರುತ್ತವೆ.

೪.೧. ನಾಮಪದ

ನಾಮಪದಗಳನ್ನುಂಟುಮಾಡುವ ಮೂಲರೂಪವೇ 'ನಾಮಪ್ರಕೃತಿ' ಎನಿಸುವುದು. ಇಂತಹ ನಾಮಪ್ರಕೃತಿ ಮುಂದೆ ನಾಮ ವಿಭಕ್ತಿ ಪ್ರತ್ಯಯಗಳು ಸೇರಿದಾಗ ನಾಮಪದಗಳು ಆಗುತ್ತವೆ. ಪದದಲ್ಲಿರುವ ಪ್ರತ್ಯಯಗಳನ್ನು ಬೇರ್ಪಡಿಸಿದರೆ ಉಳಿಯುವಂತಹವು ಪ್ರಾತಿಪದಿಕ ಅಥವಾ ನಾಮಪ್ರಕೃತಿ.

೧. ಸಹಜ (ಸರಳ) ನಾಮಪ್ರಕೃತಿ

೨. ಸಾಧಿತ (ನಿಷ್ಪನ್ನ) ನಾಮ ಪ್ರಕೃತಿಗಳು.

೪.೧.೧. ಸಹಜ (ಸರಳ) ನಾಮಪ್ರಕೃತಿಗಳು

ಸಹಜನಾಮ ಪ್ರಕೃತಿಗಳನ್ನು ಮೂಲ ಸಂಪತ್ತೆನ್ನಬಹುದು. ಸಹಜ ನಾಮಪ್ರಕೃತಿಗಳನ್ನು ವಿಭಜಿಸಲು ಸಾಧ್ಯವಿಲ್ಲದ ಮೂಲರೂಪಗಳು ಮಸ್ಕಿ ಕನ್ನಡದ ನಾಮಪ್ರಕೃತಿಗಳು ಬರಹ ಕನ್ನಡಕ್ಕಿಂತ ಭಿನ್ನವಾಗಿರುವುದನ್ನು ಈ ಕೆಳಗಿನ ಉದಾಹರಣೆಗಳಿಂದ ತಿಳಿಯಬಹುದಾಗಿದೆ.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಅಕ್ಕರೆ	ಅಕ್ಕರಿ	ಅಕ್ರಿ	ಅಕ್ರಿ
ಎಮ್ಮೆ	ಯಮ್ಮಿ	ಯಮ್ಮಿ	ಯಮ್ಮಿ
ಉಗುರು	ಉಗ್ರು	ಉಗ್ರು	ಉಗ್ರು
ಕಲ್ಲು	ಕಲ್ಹ್	ಕಲ್ಹ್	ಕಲ್ಹ್
ಚಹ	ಚಾ	ಚಾ	ಚಾ
ತಲೆ	ತಲಿ	ತಲಿ	ತಲಿ
ನಾನು	ನಾನ್	ನಾನ್	ನಾನ್
ಬೇಟೆ	ಬ್ಯಾಟಿ	ಬ್ಯಾಟಿ	ಬ್ಯಾಟಿ
ಮಣ್ಣು	ಮಣ್	ಮಣ್	ಮಣ್
ಮರ	ಮರ	ಮರ	ಮರ
ಹಾಳು	ಆಳು	ಆಳು	ಆಳು
ಹೂವು	ಊವ್ವ	ಊವ್ವ	ಊವ್ವ

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಬರಹ ಕನ್ನಡದ ಪದಗಳು ಮಸ್ಕಿಕನ್ನಡದಲ್ಲಿ ವಿಭಿನ್ನ ರೀತಿಯಿಂದ ಬಳಸ್ಪಡುತ್ತಿವೆ. ಕೆಲವೊಂದು ಪದಗಳ ಅರ್ಥದಲ್ಲಿ ವ್ಯತ್ಯಾಸಗೊಂಡರೆ ಹಾಳು>ಆಳು ಇನ್ನೂ ಕೆಲ ಪದಗಳಲ್ಲಿ ಪದಾಂತ್ಯದ ಸ್ವರವು ಲೋಪಗೊಂಡಿರುವುದನ್ನು ಕಾಣಬಹುದು. 'ನಾನು' ಪದ 'ನಾನ್', ಎರಡಕ್ಷರ ಪದಗಳು ಎರಡಕ್ಷರ ಪದಗಳಾಗಿರುವುದನ್ನು ನೋಡಬಹುದು. ಚಹಾ>ಚಾ, ಕಲ್ಲು>ಕಲ್, ಮಣ್ಣು>ಮಣ್ ಮೂರಕ್ಷರದ ಪದಗಳು ಎರಡಕ್ಷರವಾಗಿರುವದನ್ನು ಗನುನಿಸಬಹುದಾಗಿದೆ. ಅಕ್ಕರೆ>ಅಕ್ರಿ, ಉಗುರು>ಉಗ್ರು.

೪.೧.೨. ಸಾಧಿತ ನಿಷ್ಪನ್ನ ನಾಮಪ್ರಕೃತಿಗಳು

ನಾಮಪದ, ಕ್ರಿಯಾಪದ, ವಿಶೇಷಣೆಗಳಿಗೆ ಕೆಲವು ಪ್ರತ್ಯಯಗಳು ಸೇರಿಸಿದರೆ ಸಾಧಿತ ನಾಮ ಪ್ರಕೃತಿಗಳಾಗುವವು. ಪ್ರತ್ಯಯಗಳಲ್ಲಿ ಬಳಕೆಯಾಗಿರುವ (ಪು.ವಾ), (ಸ್ತ್ರೀ.ವಾ), (ನ.ವಾ) ಇವು ಪುಲ್ಲಿಂಗವಾಚಕ, ಸ್ತ್ರಿಲಿಂಗವಾಚಕ, ನಪುಂಸಕಲಿಂಗವಾಚಕಗಳನ್ನು ಸೂಚಿಸುತ್ತವೆ.

ಪ್ರತ್ಯಯ		ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಅ	(ಪು.ವಾ)	ಹುಡುಗ	ಉಡ್ಗ	ಉಡ್ಗ	ಉಡ್ಗ
	(ಪು.ವಾ)	ಕುರುಡ	ಕುಲ್ಡ	ಕುಲ್ಡ	ಕುಲ್ಡ
ಇ	(ಸ್ತ್ರೀ.ವಾ)	ಕುರುಡಿ	ಕುಲ್ಡಿ	ಕುಲ್ಡಿ	ಕುಲ್ಡಿ
ಇತ್ತಿ	(ಸ್ತ್ರೀ.ವಾ)	ಸೂಲುಗಿತ್ತಿ	ಸೂಲ್‌ಗಿತ್ತಿ	ಸೂಲ್ಗಿತ್ತಿ	ಸೂಲ್ಗಿತ್ತಿ
ತಿ	(ಸ್ತ್ರೀ.ವಾ)	ಬೀಗತಿ	ಬೀಗ್ತಿ	ಬೀಗ್ತಿ	ಬೀಗ್ತಿ
ತನ	(ನ.ವಾ)	ಮನೆತನ	ಮನ್ತೆನ	ಮನ್ತೆನ	ಮನ್ತೆನ
ತ	(ನ.ವಾ)	ಕುಣಿತ	ಕುಣ್ತ	ಕುಣ್ತ	ಕುಣ್ತ

ಮಸ್ಕಿ ಕನ್ನಡದಲ್ಲಿ ಬಳಕೆಯಾಗುವ ಸಾಧಿತ ನಾಮಪ್ರಕೃತಿಗಳು ಬರಹ ಕನ್ನಡಕ್ಕಿಂತ ಭಿನ್ನವಾಗಿ ಮೂರು ಸಾಮಾಜಿಕ ವರ್ಗಗಳಲ್ಲಿ ಕಂಡುಬರುತ್ತದೆ.

೪.೨. ನಾಮಪ್ರಕೃತಿಗಳು

೪.೨.೧. ವಸ್ತು ವಾಚಕಗಳು

ಚೇತನ ರೂಪಗಳಾದ ಪ್ರಾಣಿಗಳು ಅಚೇತನ ರೂಪಗಳಾದ ಸ್ಥಳ, ವಸ್ತುಗಳ ಹೆಸರುಗಳನ್ನು ತಿಳಿಸುವ ಶಬ್ದಗಳು ಸಾಮಾನ್ಯವಾಗಿ 'ವಸ್ತುವಾಚಕ'ಗಳೆನಿಸುತ್ತವೆ.

ರೂಢನಾಮ : ರೂಢಿಯಿಂದ ಬಂದ ನಾಮವಾಚಕಗಳು ರೂಢನಾಮಗಳೆನಿಸುತ್ತವೆ.

ಬರಹಕನ್ನಡ	ಲಿಂಗಾಯತ	ನಾಯಕ	ಹರಿಜನ
ಕೋಪ	ಸಿಟ್ಟು	ಸಿಟ್ಟು	ಸಿಟ್ಟು
ನೆಲ	ನ್ಯಲ	ನ್ಯಲ	ನ್ಯಲ

ಮನೆ	ಮನಿ	ಮನಿ	ಮನಿ
ಹಸಿವು	ಅಸ್ವು	ಅಸ್ವು	ಅಸ್ವು

ಅಂಕಿತನಾಮ ಒಂದೇ ಜಾತಿಯ (ವರ್ಗದ) ಹಲವು ವಸ್ತುಗಳಲ್ಲಿ, ಪ್ರಾಣಿಗಳಲ್ಲಿ ವ್ಯಕ್ತಿಗಳಲ್ಲಿ ಒಂದನ್ನೇ ಬೇರೆ ಮಾಡಿ ತೋರಿಸಲು ಇಟ್ಟ ಹೆಸರುಗಳು 'ಅಂಕಿತನಾಮ' ಎನಿಸಿಕೊಳ್ಳುತ್ತವೆ.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಅಮರೇಶ	ಅಮರೇಸಪ್ಪ	ಅಮರೇಸಪ್ಪ	ಅಮರೇಸಪ್ಪ
ನಾಗರಾಜ	ನಾಗರಾಜಪ್ಪ	ನಾಗರಾಜಪ್ಪ	ನಾಗರಾಜಪ್ಪ
ರಾಜಪ್ಪ	ರಾಜಪ್ಪ	ರಾಜಪ್ಪ	ರಾಜಪ್ಪ
ಲಕ್ಷ್ಮಣ	ಲಕ್ಷ್ಮಣ	ಲಕ್ಸ್ಮ	ಲಕ್ಸ್ಮ

ಅನ್ವರ್ಥನಾಮ : ಅರ್ಥಕ್ಕೆ ಅನುಗುಣವಾಗಿ ಉದ್ಯೋಗ ಗುಣ ಮೊದಲಾದವುಗಳಿಂದ ವಸ್ತುವಿಗೆ ಇಲ್ಲವೆ ವ್ಯಕ್ತಿಗಳಿಗೆ ಬಂದ ಹೆಸರುಗಳು 'ಅನ್ವರ್ಥಕ ನಾಮ'ಗಳೆನಿಸುವವು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಕಿವುಡ	ಕಿವ್ಡ	ಕಿವ್ಡ	ಕಿವ್ಡ
ಕುರುಡಿ	ಕುಲ್ಡಿ	ಕುಲ್ಡಿ	ಕುಲ್ಡಿ
ಮುದುಕ	ಮುದ್ಕ	ಮುದ್ಕ	ಮುದ್ಕ

೪.೨.೨. ಗುಣವಾಚಕಗಳು

ವಸ್ತುವಿನ ಪ್ರಾಣಿಗಳ ಗುಣ ಸ್ವಭಾವಾದಿಗಳನ್ನು ತಿಳಿಸುವ ಶಬ್ದಗಳು 'ಗುಣವಾಚಕ'ಗಳೆನಿಸುತ್ತವೆ.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಕಡಿಮೆ	ಕಮ್ಮಿ	ಕಮ್ಮಿ	ಕಮ್ಮಿ
ಕುಳ್ಳು	ಗಿಡ್ಡ	ಗಿಡ್ಡ	ಗಿಡ್ಡ
ಚಿಕ್ಕ	ಸಣ್ಣ	ಸಣ್ಣ	ಸಣ್ಣ
ಡೊಂಕು	ಸ್ವಟ್ಟಿ	ಸ್ವಟ್ಟಿ	ಸ್ವಟ್ಟಿ
ತುಂಡು	ತುಕಡಿ	ತುಕಡಿ	ತುಕಡಿ

೪.೨.೩. ಪರಿಮಾಣವಾಚಕಗಳು

ಮಸ್ಕಿಕನ್ನಡ ಮತ್ತು ಬರಹ ಕನ್ನಡದಲ್ಲಿ ವಸ್ತುಗಳ ಸಾಮಾನ್ಯ ಅಳತೆ, ಪ್ರಮಾಣ, ಗಾತ್ರ ಇತ್ಯಾದಿಗಳನ್ನು ಹೇಳುವ ಪದಗಳು ಪರಿಮಾಣವಾಚಕಗಳೆನಿಸುವವು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಅಷ್ಟು	ಆಟು	ಆಟು	ಆಟು

ಇಷ್ಟು	ಈಟು	ಇಟ/ಈಟು	ಇಟ/ಈಟು
ಎಷ್ಟು	ಏಟು/ಏಸು	ಏಟು/ಏಸು	ಏಟು/ಏಸು

೪.೨.೪. ಪ್ರಕಾರ ವಾಚಕಗಳು

ವಸ್ತುಗಳ ಸ್ಥಿತಿ, ರೀತಿಗಳನ್ನು ತಿಳಿಸುವ ಶಬ್ದಗಳು 'ಪ್ರಕಾರವಾಚಕ'ಗಳೆನಿಸುತ್ತವೆ.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಅಂಥಹ	ಅಂತಹ	ಅಂತಹ/ಅಂತ	ಅಂತ
ಎಂಥಹ	ಎಂತಹ	ಎಂತಹ/ಎಂತ	ಅಂತ
ಇಂಥಹ	ಇಂತಹ	ಇಂತಹ/ಇಂತ	ಇಂತ
ಹಾಗೆ	ಆಗೆ	ಆಗೆ	ಆಗೆ
ಹೀಗೆ	ಈಗೆ	ಈಗೆ	ಈಗೆ

ಮಸ್ಕಿ ಕನ್ನಡದಲ್ಲಿರುವ ಮೂರು ಸಾಮಾಜಿಕ ವರ್ಗಗಳಲ್ಲಿ 'ಪ್ರಕಾರ ವಾಚಕ'ಗಳು ಭಿನ್ನವಾಗಿರುವುದನ್ನು ನೋಡಬಹುದು.

೪.೨.೫. ದಿಗ್ವಾಚಕಗಳು

ಮಸ್ಕಿ ಕನ್ನಡ ಮತ್ತು ಬರಹ ಕನ್ನಡದಲ್ಲಿ ದಿಕ್ಕುಗಳ ಹೆಸರನ್ನು ಸೂಚಿಸುವ ಪದಗಳಿಗೆ ದಿಗ್ವಾಚಕಗಳು ಎನಿಸುವವು. ಭಿನ್ನರೀತಿಯಲ್ಲಿ ಮಸ್ಕಿಕನ್ನಡದಲ್ಲಿ ದಿಗ್ವಾಚಕಗಳು ಬಳಕೆಯಲ್ಲಿವೆ.

ಬರಹಕನ್ನಡ	ಲಿಂಗಾಯತ	ನಾಯಕ	ಹರಿಜನ
ಉತ್ತರ	ಉತ್ರ	ಉತ್ರ/ಅನುಮನದಿಕ್ಕು	ಉತ್ರ/ಅನುಮನದಿಕ್ಕು
ದಕ್ಷಿಣ	ದಕ್ಸಿನ	ದಕ್ಸಿನ	ದಕ್ಸಿನ
ಪಶ್ಚಿಮ	ಪಚ್ಚಿಮ	ಪಚ್ಚಿಮ/ಮ್ಯಾಕ	ಪಚ್ಚಿಮ/ಮ್ಯಾಕ
ಪೂರ್ವ	ಪೂರ್ವ	ಪೂರ್ವ/ತೆಳಕ	ಪೂರ್ವ/ತಳಕ

೪.೨.೬. ಸಂಖ್ಯಾವಾಚಕಗಳು

ಸಂಖ್ಯೆಯನ್ನು ಹೇಳುವ ಶಬ್ದಗಳು ಸಂಖ್ಯಾವಾಚಕಗಳು ಆಗಿದ್ದು ಮಸ್ಕಿಕನ್ನಡದಲ್ಲಿ ಬರಹ ಕನ್ನಡಕ್ಕಿಂತ ಭಿನ್ನವಾಗಿ ಉಚ್ಚಾರಗೊಳ್ಳುವುದನ್ನು ನೋಡಬಹುದು. ಮೂರು ಸಾಮಾಜಿಕ ವರ್ಗಗಳಲ್ಲಿ ಭಿನ್ನತೆಯನ್ನು ಗಮನಿಸುವುದರ ಜೊತೆಗೆ ಮರಾಠಿ ಪ್ರಭಾವವನ್ನು ಗುರುತಿಸಬಹುದು.

ಬರಹ ಕನ್ನಡ	ಮಸ್ಕಿ ಕನ್ನಡ
ಒಂದು	ವಂದ
ಎರಡು	ಯಲ್ಡು

ಮೂರು	ಮೂರ್
ನಾಲ್ಕು	ನಾಕು
ಐದು	ಆಯ್ದು
ಏಳು	ಯೇಳು
ಎಂಟು	ಯಂಟ
ಒಂಭತ್ತು	ವಂಬತು
ಹತ್ತು	ಅತ್ತ
ಹನ್ನೆರಡು	ಅನ್ನೆಲ್ಡು
ಹದಿಮೂರು	ಅದ್ಮೂರು
ಹತ್ತೊಂಭತ್ತು	ಅತಂಬತು
ಇಪ್ಪತ್ತೊಂಬತ್ತು	ಇಪತ್ರಂಬತ್ತು
ಒಂದು ನೂರೈವತ್ತು	ದೀಡ್‌ನೂರು
ಎರಡು ನೂರು	ಇನ್ನೂರು/ಯಲ್ಡುನೂರು
ನಾಲ್ಕು ನೂರು	ನಾನೂರು
ಸಾವಿರ	ಸಾವ್ರ
ಲಕ್ಷ	ಲಕ್ಸ

ಮಸ್ಕಿ ಕನ್ನಡದಲ್ಲಿ ಸಂಖ್ಯಾವಾಚಕಗಳು ಮೂಲರೂಪದಲ್ಲಿ ವ್ಯತ್ಯಾಸಗೊಂಡು ಬಳಕೆಯಲ್ಲಿವೆ. 'ಒಂದು ನೂರ ಐವತ್ತು' ಬರಹ ಕನ್ನಡದ ಸಂಖ್ಯಾವಾಚಕವು ಮರಾಠಿ ಪ್ರಭಾವದಿಂದ ಮಸ್ಕಿ ಕನ್ನಡದಲ್ಲಿ 'ದೀಡ್‌ನೂರು' ಎಂದು ಬಳಕೆಗೊಳ್ಳುತ್ತಿದೆ. 'ದೀಡ್' ಮರಾಠಿ ಶಬ್ದವಾಗಿದ್ದು ಮಸ್ಕಿ ಕನ್ನಡ ಮೇಲೆ ಮರಾಠಿ ಪ್ರಭಾವವನ್ನು ಇಂತಹ ಸಂಖ್ಯಾವಾಚಕಗಳಿಂದ ಗುರುತಿಸಬಹುದು. ಅದೇ ರೀತಿ 'ಒಂದು ಸಾವಿರ ಐದುನೂರು' ಸಂಖ್ಯೆಯನ್ನು 'ದೀಡ್ ಸಾವಿರ' ಎಂದು ಬಳಸುತ್ತಾರೆ. 'ಎರಡು ನೂರು'ನ್ನು 'ಇನ್ನೂರು', 'ಯಲ್ಡುನೂರು' ಎಂದು ಬಳಸುವುದನ್ನು ಮಸ್ಕಿ ಕನ್ನಡದಲ್ಲಿ ನೋಡಬಹುದಾಗಿದೆ. ನಾಲ್ಕುನೂರು>ನಾನೂರು, ಸಾವಿರ>ಸಾವ್ರ ಇತ್ಯಾದಿಯಾಗಿ ಸಂಖ್ಯಾವಾಚಕಗಳು ಬಳಕೆಗೊಳ್ಳುತ್ತಿವೆ.

ಭಿನ್ನರೂಪವಾದ ಸಂಖ್ಯಾವಾಚಕಗಳು

ಒಂದನೆ	ವಂದ್ನೆದು
ಎರಡನೆ	ಯಾಡ್ನೆದು
ಮೂರನೆ	ಮೂರ್ನೆದು

ನಾಲ್ಕನೆ	ನಾಕ್ನೆದು
ನಾಲ್ಕು ಮಂದಿ	ನಾಕ್ ಮಂದಿ, ನಾಲ್ವರು
ಮೂರು ಮಂದಿ	ಮೂರ್ ಮಂದಿ, ಮೂವರು
ಒಂದು	ಲಾಭ (ಶುಭವಾಗಲಿ ದ್ಯೋತಕವಾಗಿ)
ಏಳು	ಯೆಚ್ಚಲಿ, ಹುಲಿಗ್ಯ
ಕಾಲು	ಪಾವು (ಮರಾಠಿ)
ಮುಕ್ಕಾಲು	ಮೂರುಪಾವು (ಕನ್ನಡ+ಮರಾಠಿ)
ಒಂದು ಕಾಲು ಸೇರು	ಸೇರು ಪಾವು (ಕನ್ನಡ+ಮರಾಠಿ)
ಒಂದು ಸೇರು ಅರ್ಧ	ದೀಡ್‌ಸೇರು (ಕನ್ನಡ+ಮರಾಠಿ)

ಭಿನ್ನರೂಪವಾದ ಸಂಖ್ಯಾವಾಚಕಗಳು ಮಸ್ಕಿಕನ್ನಡದಲ್ಲಿ ಇರುವುದನ್ನು ಗಮನಿಸಬಹುದು. ಬರಹ ಕನ್ನಡದಲ್ಲಿ ಒಂದರಿಂದ ಒಂಭತ್ತರವರೆಗಿನ ಮೂಲಾಂಶಗಳು ವಿಶೇಷಣದಲ್ಲಿ ಕಾಣಿಸಿಕೊಂಡಾಗ ಅನುಕ್ರಮವಾಗಿ ಸೂಚಿಸುವಾಗ ಬರಹ ಕನ್ನಡದಲ್ಲಿ 'ಅನೆ' ಪ್ರತ್ಯಯ ಹಚ್ಚಿ ಪ್ರಾರಂಭವಾಗುವ ಸಂಖ್ಯಾವಾಚಕಗಳು ಮಸ್ಕಿಕನ್ನಡದಲ್ಲಿ 'ಎದು' ಎಂಬ ಪ್ರತ್ಯಯ ಹಚ್ಚಿಕೊಂಡು ಪ್ರಾರಂಭವಾಗುವುದನ್ನು ಕಾಣುತ್ತೇವೆ. ಅದೇ ರೀತಿ 'ನಾಲ್ಕುಮಂದಿ', 'ಮೂರುಮಂದಿ', ಈ ರೀತಿಯ ಸಂಖ್ಯಾವಾಚಕಗಳು 'ನಾಕಮಂದಿ', 'ನಾಲ್ವರು', 'ಮೂರು ಮಂದಿ', 'ಮೂವರು' ಎಂದು ಬಳಸುವುದನ್ನು ನೋಡಬಹುದು. ಹಣ, ಧಾನ್ಯ ಇತ್ಯಾದಿಗಳನ್ನು ಎಣಿಸುವಾಗ ಅಥವಾ ಅಳತೆ ಮಾಡುವಾಗ ಮಸ್ಕಿಕನ್ನಡದಲ್ಲಿ 'ಒಂದು' ಸಂಖ್ಯೆಯನ್ನು 'ಲಾಭ' ಎಂದು ಉಚ್ಚರಿಸುವ ಮೂಲಕ ಮುಂದಿನ ಸಂಖ್ಯೆಯನ್ನು ಎಣಿಸುವುದು ರೂಢಿಯಲ್ಲಿದೆ. (ಒಂದು>ಲಾಭ) ಏಳು ಎನ್ನುವ ಸಂಖ್ಯೆಯನ್ನು 'ಯೆಚ್ಚಲಿ' 'ಉಲಿಗ್ಯ' ಎಂದು ಎಣಿಸಿ ಮುಂದಿನ ಸಂಖ್ಯೆಯನ್ನು ಎಣಿಸುವುದು ರೂಢಿ ಇರುವುದು ಗಮನಾರ್ಹವಾದುದು. 'ಕಾಲು' ಎನ್ನುವ ಭಿನ್ನರೂಪವಾದ ಸಂಖ್ಯೆ ಮಸ್ಕಿಕನ್ನಡದಲ್ಲಿ 'ಪಾವು' ಎಂದು 'ಮುಕ್ಕಾಲು', 'ಮೂರ್ ಪಾವು' ಎಂದು 'ಒಂದು ಕಾಲು' 'ಸೇರುಪಾವು' ಎಂದು 'ಒಂದು ಅರ್ಧ ಸೇರು' ಎಂಬುದು 'ದೀಡ್‌ಸೇರು' ಎಂದು ಎಣಿಸುವುದನ್ನು ಮೂರು ಸಾಮಾಜಿಕ ವರ್ಗಗಳಲ್ಲಿ ಬಳಕೆಯಲ್ಲಿರುವುದು ಗಮನಿಸುವಂತಹ ಅಂಶ ಆಗಿದೆ. 'ಪಾವು' ಇದು ಮರಾಠಿ ಶಬ್ದ ಅಂದರೆ ಮಸ್ಕಿಕನ್ನಡದಲ್ಲಿ ಮರಾಠಿ ಪ್ರಭಾವವನ್ನು ಗುರುತಿಸಬಹುದು. ಮರಾಠಿ ಹಾಗೂ ಕನ್ನಡ ಶಬ್ದಗಳು ಸೋದರ ಭಾಷೆಗಳಂತೆ ಇಲ್ಲಿ ಬಳಕೆಗೊಳ್ಳುವುದನ್ನು ''ದೀಡ್‌ಸೇರು'' (ದೀಡ್= ಮರಾಠಿ, ಸೇರು=ಕನ್ನಡ) ಎಂಬ ಸಂಖ್ಯಾವಾಚಕ ಬರಹ ಕನ್ನಡ ಒಂದು ಅರ್ಧಸೇರು ಬಳಕೆಗೊಳ್ಳುವುದನ್ನು ಗಮನಿಸುವತಹದ್ದು 'ಮೂರು ಪಾವು', 'ಸೇರುಪಾವು', 'ದೀಡ್‌ಸೇರು' ಇತ್ಯಾದಿ ಇವುಗಳು ಕನ್ನಡ ಮತ್ತು ಮರಾಠಿ ಶಬ್ದಗಳು ಜೋಡಿಯಾಗಿ ಬಳಕೆಗೊಳ್ಳುವುದು

ಗಮನಿಸುವ ಅಂಶ ಇದು ಮಸ್ಕಿಕನ್ನಡದ ವೈಶಿಷ್ಟ್ಯವು ಆಗಿದೆ. ಮರಾಠಿ ಪ್ರಭಾವಕ್ಕೆ ಕಾರಣ ಮರಾಠ ಪೇಶ್ವೆಗಳು ಈ ಭಾಗದಲ್ಲಿ ಬಹುಶಃ ಆಳ್ವಿಕೆ ನಡೆಸಿದ್ದು ಎನ್ನಬಹುದು.

೪.೩. ಸರ್ವನಾಮ

ನಾಮಪದಗಳ ಸ್ಥಾನದಲ್ಲಿ ಅವುಗಳ ಬದಲಾಗಿ ಬಳಸುವ ಶಬ್ದಗಳು 'ಸರ್ವನಾಮ'ಗಳೆನಿಸುತ್ತವೆ.

೧. ಪುರುಷವಾಚಕ ಸರ್ವನಾಮ

ಬರಹ ಕನ್ನಡ ಮತ್ತು ಮಸ್ಕಿಕನ್ನಡಗಳಲ್ಲಿ ಉತ್ತಮ, ಮಧ್ಯಮ, ಪ್ರಥಮ ಎಂಬ ಮೂರು ವಿಧವಾದ ಪುರುಷ ಭೇದವನ್ನು, ಏಕವಚನ, ಬಹುವಚನ ಎಂಬ ವಚನ ಭೇದವನ್ನು ಗುರುತಿಸಬಹುದಾಗಿದೆ. ಏಕವಚನದ ಪ್ರಥಮ ಪುರುಷದಲ್ಲಿ ಮಾತ್ರ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಎಂಬ ಲಿಂಗಭೇದವನ್ನು ಕಾಣಬಹುದಾಗಿದೆ. ಬರಹ ಕನ್ನಡದ ಸರ್ವನಾಮಗಳಲ್ಲಿ ಪದಾಂತ್ಯದಲ್ಲಿರುವ ಸ್ವರವು ಮಸ್ಕಿಕನ್ನಡದಲ್ಲಿ ವ್ಯಂಜನಾಂತಗಳಾಗಿ ಹಾಗೂ ಏಕಾಕ್ಷರಗಳಾಗಿಯು ಬಳಕೆಗೊಳ್ಳುವುದನ್ನು ಗುರುತಿಸಬಹುದು.

ಬರಹ ಕನ್ನಡ

	ಏಕವಚನ	**ಬಹುವಚನ**
ಉತ್ತಮ ಪುರುಷ	ನಾನು	ನಾವು
ಮಧ್ಯಮ ಪುರುಷ	ನೀನು	ನೀವು
ಪ್ರಥಮ ಪುರುಷ (ಪುಲ್ಲಿಂಗ)	ಅವನು	ಅವರು
(ಸ್ತ್ರೀಲಿಂಗ)	ಅವಳು	ಅವರು
(ನಪುಂಸಕ ಲಿಂಗ)	ಅದು	ಅವು

ಮಸ್ಕಿ ಕನ್ನಡ

	ಏಕವಚನ	**ಬಹುವಚನ**
ಉತ್ತಮ ಪುರುಷ	ನಾನ್/ನಾ	ನಾವ್
ಮಧ್ಯಮ ಪುರುಷ	ನೀನ್/ನೀ	ನೀವ್
ಪ್ರಥಮ ಪುರುಷ (ಪುಲ್ಲಿಂಗ)	ಅವನ್/ಅತ	ಅವರ್
(ಸ್ತ್ರೀಲಿಂಗ)	ಅವಳ/ಅಕಿ	ಅವರ್
(ನಪುಂಸಕ ಲಿಂಗ)	ಅದ್/ಅದ್ನ	ಅವು/ಅವ್ನ

ಬರಹ ಕನ್ನಡದ ಸರ್ವನಾಮಗಳಲ್ಲಿ ಪದಾಂತ್ಯದಲ್ಲಿ ಬರುವ 'ಉ' ಕಾರವು ಮಸ್ಕಿಕನ್ನಡದಲ್ಲಿ ಲೋಪಗೊಂಡು ವ್ಯಂಜನಾಂತವಾಗಿ ಬಳಕೆಗೊಳ್ಳುತ್ತಿದೆ. ಇದನ್ನು ಮೂರು ಸಾಮಾಜಿಕ ವರ್ಗಗಳಲ್ಲಿ

ಗುರುತಿಸಬಹುದು. ಉತ್ತಮ ಪುರುಷ ಏಕವಚನವು ಮಸ್ಕಿಕನ್ನಡದಲ್ಲಿ ವ್ಯಂಜನಾಂತವಾಗಿ ಹಾಗೂ ಏಕಾಕ್ಷರವಾಗಿ 'ನಾನ್' ಮತ್ತು 'ನಾ' ಎಂದು ಬಳಕೆಯಲ್ಲಿದೆ. ಬಹುವಚನದಲ್ಲಿ 'ನಾವ್' ಎಂದು ವ್ಯಂಜನಾಂತವಾಗಿ ಬಳಕೆಯಲ್ಲಿದೆ. ಮಧ್ಯಮ ಪುರುಷ ಏಕವಚನವು 'ನೀನ್' ಎಂದು ವ್ಯಂಜನಾಂತವಾಗಿ 'ನೀ' ಎಂದು ಏಕಾಕ್ಷರ ದೀರ್ಘ ಸ್ವರ ಹೊಂದಿ ಹಾಗೂ ಬಹುವಚನದಲ್ಲಿ 'ನೀವ್' ಎಂದು ಬಳಸುವುದನ್ನು ಕಾಣುತ್ತೇವೆ. ಪ್ರಥಮ ಪುರುಷ ಪುಲ್ಲಿಂಗವು 'ಅವನ್' ಮತ್ತು 'ಅತ' ಎಂದು ಏಕವಚನದಲ್ಲಿ ಸ್ತ್ರೀಲಿಂಗವು 'ಅವಳ್' ಮತ್ತು 'ಅಕಿ' ಎಂದು ಏಕವಚನದಲ್ಲಿ ಬಳಕೆಗೊಂಡು ಪುಲ್ಲಿಂಗ ಮತ್ತು ಸ್ತ್ರೀಲಿಂಗವು ಬಹುವಚನದಲ್ಲಿ 'ಅವರ್' ಎಂದು ಬಳಸುವುದನ್ನು ನೋಡುತ್ತೇವೆ. ಪ್ರಥಮ ಪುರುಷ ನಪುಂಸಕಲಿಂಗ ಏಕವಚನದ ಬಳಕೆ 'ಅದ್' ಮತ್ತು 'ಅದ್ನ' ಎಂದು 'ಅನ' ಎಂಬ ಪ್ರತ್ಯಯ ಸೇರಿ ಬಳಸುತ್ತಾರೆ. ಬಹುವಚನದಲ್ಲಿ 'ಅವು' ಮತ್ತು 'ಅವ್ನ' ಎಂದು 'ಅನ' ಎಂಬ ಪ್ರತ್ಯಯ ಹಚ್ಚಿ ಬಳಸುವುದನ್ನು ಮೂರು ಸಾಮಾಜಿಕ ವರ್ಗಗಳಲ್ಲಿ ಗಮನಿಸಬಹುದಾಗಿದೆ.

೪.೩.೧. ನಿರ್ದೇಶಕ ಸರ್ವನಾಮ

ನಿರ್ದೇಶಕ ಮೂಲರೂಪಗಳಾದ ಇ/ಇ, ಅ/ಅ ಕ್ರಮವಾಗಿ ಸಮೀಪವಾಚಿ ಹಾಗೂ ದೂರವಾಚಿಗಳಾಗಿದ್ದು ಮಸ್ಕಿಕನ್ನಡದಲ್ಲಿ ಅವುಗಳಿಗೆ ಪುರುಷವಾಚಕ ಪ್ರತ್ಯಯಗಳನ್ನು ಅಂಟಿಸುವುದರ ಮೂಲಕ ಸರ್ವನಾಮ ರೂಪಗಳನ್ನು ಪಡೆದು ಈ ರೂಪಗಳನ್ನೇ ಪ್ರಥಮ ಪುರುಷ ಸರ್ವನಾಮಗಳನ್ನಾಗಿ ಬಳಸಲಾಗುತ್ತದೆ.

ಬರಹ ಕನ್ನಡ

	ಏಕವಚನ	ಬಹುವಚನ
(ಪು)	ಇವನು	ಇವರು
(ಸ್ತ್ರೀ)	ಇವಳು	ಇವಳು
(ನಪುಂ)	ಇದು	ಇವು

ಮಸ್ಕಿಕನ್ನಡ

ಏಕವಚನ	ಬಹುವಚನ
ಇವನ್/ಇತ	ಇವರ್
ಇವಳ್/ಇಕಿ	ಇವರ್
ಇದ್/ಇದ್ನ	ಇವ್ನ

ಮಸ್ಕಿಕನ್ನಡದಲ್ಲಿ ಪ್ರಥಮ ಪುರುಷ ನಿರ್ದೇಶಕ ಸರ್ವನಾಮ ಪುಲ್ಲಿಂಗವು 'ಇವನ್' ಮತ್ತು 'ಇತ' ಎಂದು ಏಕವಚನದಲ್ಲಿ ಬಳಸುತ್ತಾರೆ. ಇಲ್ಲಿ ವ್ಯಂಜನಾಂತವಾಗಿ ಬಳಕೆಗೊಂಡಿರುತ್ತದೆ. ಸ್ತ್ರೀಲಿಂಗದಲ್ಲಿ 'ಇವಳ್' ಮತ್ತು 'ಇಕಿ' ಎಂದು ವ್ಯಂಜನಾಂತವಾಗಿ 'ಇವಳ್' ಎಂದು ಬಳಕೆಗೊಂಡು ಪುಲ್ಲಿಂಗ ಹಾಗೂ ಸ್ತ್ರೀಲಿಂಗ

ಬಹುವಚನದಲ್ಲಿ ಇವರ್ ಎಂದು ಬಳಸುವುದನ್ನು ಕಾಣುತ್ತೇವೆ. ನಪುಂಸಕ ಲಿಂಗ ಏಕವಚನವು 'ಇದ್' ಎಂದು ವ್ಯಂಜನಾಂತವಾಗಿ 'ಇದ್ನ' ಎಂದು 'ಅನ' ಪ್ರತ್ಯಯ ಹಚ್ಚಿಕೊಂಡು ಬಳಕೆಯಲ್ಲಿದೆ. ಬಹುವಚನದಲ್ಲಿ 'ಇವ್ನ' ಎಂದು 'ಅನ' ಪ್ರತ್ಯಯ ಜೊತೆಗೂಡಿ ಬಳಕೆಗೊಳ್ಳುವುದನ್ನು ನೋಡಬಹುದಾಗಿದೆ.

೪.೩.೨. ದೂರದರ್ಶಕ ಸರ್ವನಾಮ

ಬರಹ ಕನ್ನಡ

	ಏಕವಚನ	ಬಹುವಚನ
(ಪು)	ಅವನು	ಅವರ
	ಅವನು	ಅವರು
(ಸ್ತ್ರೀ)	ಅವಳು	ಅವಳು
(ನಪುಂ)	ಅದು	ಅವು

ಮಸ್ಕಿಕನ್ನಡ

ಏಕವಚನ	ಬಹುವಚನ
ಅವನ್/ಅತ	ಅವರ್
ಅವಳ್/ಅಕಿ	ಅವರ್
ಅದ್/ಅದ್ನ	ಅವ್ನ

ಸಮೀಪದರ್ಶಕ ಸರ್ವನಾಮಗಳಲ್ಲಿ ಬಳಕೆಗೊಂಡು ಹಾಗೇನೇ ಇಲ್ಲಿಯೂ ಸಹ ವ್ಯಂಜನಾಂತಗಳಾಗಿ ಏಕವಚನದಲ್ಲಿ ಬಳಕೆಗೊಂಡಿರುತ್ತವೆ. ಪುಲ್ಲಿಂಗದಲ್ಲಿ 'ಅತ' ಎಂದು ಸ್ತ್ರೀಲಿಂಗದಲ್ಲಿ 'ಅಕಿ' ಎಂದು ಬಹುವಚನದಲ್ಲಿ ಪುಲ್ಲಿಂಗ ಮತ್ತು ಸ್ತ್ರೀಲಿಂಗ 'ಅವರ್' ಆಗಿ ಬಳಕೆಯಲ್ಲಿದ್ದರೆ ನಪುಂಸಕಲಿಂಗ ಏಕವಚನದಲ್ಲಿ 'ಅದ್ನ' ಮತ್ತು ಅದಕ್ಕೆ 'ಅನ' ಪ್ರತ್ಯಯ ಗೂಡಿ ಬಳಕೆಯಲ್ಲಿದೆ. ಬಹುವಚನದಲ್ಲಿ ಅವ್ನ ಎಂದು ಅನು ಪ್ರತ್ಯಯಗೂಡಿ ಬಳಕೆಗೊಳ್ಳುವುದನ್ನು ಕಾಣುತ್ತೇವೆ.

೪.೩.೩. ಪ್ರಶ್ನಾರ್ಥಕ ಸರ್ವನಾಮ

ಬರಹ ಕನ್ನಡ

	ಏಕವಚನ	ಬಹುವಚನ
(ಪು)	ಯಾವನು	ಯಾರು
(ಸ್ತ್ರೀ)	ಯಾವಳು	ಯಾರು
(ನಪುಂ)	ಯಾವುದು	ಯಾವುವು

ಮಸ್ಕಿಕನ್ನಡ

ಏಕವಚನ	ಬಹುವಚನ
ಯಾವ್ನು/ಯಾರು	ಯಾರು
ಯಾವಾಕಿ/ಯಾರು	ಯಾರು
ಯಾವ್ದು/ಯಾದು	ಯಾವಾವು.

ಪ್ರಥಮ ಪುರುಷವಾಚಕ ಪ್ರಶ್ನಾರ್ಥಕ ಸರ್ವನಾಮ ಮಸ್ಕಿಕನ್ನಡದಲ್ಲಿ ಬರಹ ಕನ್ನಡಕ್ಕಿಂತ ಭಿನ್ನವಾಗಿ ಬಳಕೆಯಲ್ಲಿದೆ. ಪ್ರಥಮ ಪುರುಷ ಪುಲ್ಲಿಂಗ ಏಕವಚನ ಮಸ್ಕಿಕನ್ನಡದಲ್ಲಿ 'ಯಾವ್ನು' ಮತ್ತು 'ಯಾರು' ಎಂದು ಬಳಸುವುದನ್ನು ನೋಡಬಹುದು. 'ಯಾರು' ಎಂಬುವುದನ್ನು ಗೌರವ ಸೂಚಕವಾಗಿ ಬಳಸುತ್ತಾರೆ. ಸ್ತ್ರೀಲಿಂಗದಲ್ಲಿ 'ಯಾವಳು' ಎನ್ನುವ ಬರಹ ಕನ್ನಡದ ರೂಪವು ಮಸ್ಕಿಕನ್ನಡದಲ್ಲಿ 'ಯಾವಾಕಿ' ಮತ್ತು 'ಯಾರು' ಎಂದೂ ಬಳಸುತ್ತಾರೆ. ಇಲ್ಲಿಯೂ ಸಹ 'ಯಾರು' ಎಂಬುದನ್ನು ಗೌರವಸೂಚಕವಾಗಿ ಬಳಸುತ್ತಾರೆ. ಬಹುವಚನದಲ್ಲಿ ಸ್ತ್ರೀಲಿಂಗ, ಪುಲ್ಲಿಂಗಗಳಲ್ಲಿ 'ಯಾರು' ಬರಹ ಕನ್ನಡದಲ್ಲಿ ಇರುವ ಹಾಗೆನೇ ಬಳಸುತ್ತಾರೆ. ಕೆಲವೊಮ್ಮೆ ಏಕವಚನದಲ್ಲಿ ಐಕ್ಯವಾಗುವುದು. ನಪುಂಸಕಲಿಂಗ ಏಕವಚನದಲ್ಲಿ 'ಯಾವುದು' ಎಂಬುವುದು 'ಯಾವ್ದು' ಎರಡಕ್ಷರ ವಿಜಾತೀಯ ದ್ವಿತ್ವವಾಗಿ ಮತ್ತು 'ಯಾದು' ಎಂದು ಬರಹ ಕನ್ನಡದ 'ಯಾವುದು' ಎಂಬಲ್ಲಿಯ 'ವು' ಕಾರ ಲೋಪಗೊಂಡು 'ಯಾದು' ಎಂದು ಬಳಸುವುದು ರೂಢಿ ಬಹುವಚನದಲ್ಲಿ 'ಯಾವುವು' ಎಂಬುವುದನ್ನು 'ಯಾವಾವು' ಎಂಬುದಾಗಿ ಬಳಕೆಮಾಡುತ್ತಾರೆ. ಮಸ್ಕಿಕನ್ನಡದ ಮೂರು ಸಾಮಾಜಿಕ ವರ್ಗಗಳಲ್ಲಿ ಇದೇ ರೀತಿ ಬಳಸುತ್ತಾರೆ.

೪.೪. ಲಿಂಗವ್ಯವಸ್ಥೆ

ಬರಹ ಕನ್ನಡ ಹಾಗೂ ಮಸ್ಕಿಕನ್ನಡದಲ್ಲಿ ವಾಕ್ಯರಚನೆಯ ದೃಷ್ಟಿಯಿಂದ ನಾಮಪ್ರಕೃತಿಗಳನ್ನೆಲ್ಲಾ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕಲಿಂಗಗಳೆಂದು ವಿಂಗಡಿಸಬಹುದಾಗಿದೆ. ಬರಹ ಕನ್ನಡಕ್ಕಿಂತ ಮಸ್ಕಿಕನ್ನಡವು ಲಿಂಗ ವ್ಯವಸ್ಥೆಯಲ್ಲಿ ಭಿನ್ನವಾಗಿರುವುದನ್ನು ಈಕೆಳಗಿನ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ.

ಪುಲ್ಲಿಂಗ

ಬರಹ ಕನ್ನಡ	ಮಸ್ಕಿಕನ್ನಡ	ವ್ಯತ್ಯಾಸ
ಕೇಳುತ್ತಾನೆ	ಕೇಳ್ತಾನ	ಆನೆ>ಆನ
ನೋಡುತ್ತಾನೆ	ನೋಡ್ತಾನ	ಆನೆ>ಆನ
ಬರೆಯುತ್ತಾನೆ	ಬರ್ತ್ಯಾನ	ಆನೆ>ಆನ
ಹೋಗುತ್ತಾನೆ	ಒತಾನ	ಆನೆ>ಆನ
ಕೇಳುತ್ತೇನೆ	ಕೇಳ್ತ್ತಿನಿ	ಏನೆ>ಇನಿ

ನೋಡುತ್ತೇನೆ	ನೋಡ್‌ತತ್ನಿ	ಏನೆ>ಇನಿ
ಬರೆಯುತ್ತೇನೆ	ಬರಿತ್ನಿ	ಏನೆ>ಇನಿ
ಹೋಗುತ್ತೇನೆ	ಒತೀನಿ	ಏನೆ>ಈನಿ
ಕೇಳುತ್ತಿದ್ದಾನೆ	ಕೇಳಕತ್ತ್ಯಾನ	ಆನೆ>ಆ್ಯನ
ನೋಡುತ್ತಿದ್ದಾನೆ	ನೋಡಕತ್ತ್ಯಾನ	ಆನೆ>ಆ್ಯನ
ಬರೆಯುತ್ತಿದ್ದಾನೆ	ಬರಿಯಕತ್ತ್ಯಾನ	ಆನೆ>ಆ್ಯನ
ಹೋಗುತ್ತಿದ್ದಾನೆ	ವೋಗಕತ್ತ್ಯಾನ	ಆನೆ>ಆ್ಯನ

ಬರಹ ಕನ್ನಡ ಲಿಂಗವ್ಯವಸ್ಥೆಯ ಪುಲ್ಲಿಂಗ 'ಕೇಳುತ್ತಾನೆ' ಎಂಬ ಬಳಕೆ ಮಸ್ಕಿಕನ್ನಡದಲ್ಲಿ 'ಕೇಳ್ತಾನ' ಎಂದು, 'ಹೋಗುತ್ತಾನೆ' ಎಂಬುವುದು 'ಒತಾನ' ಎಂದು ವಿಶಿಷ್ಟ ರೀತಿಯಲ್ಲಿ ಬಳಕೆಗೊಳ್ಳುತ್ತಿದೆ. ಬರಹಕನ್ನಡದ 'ಕೇಳುತ್ತಾನೆ' 'ನೋಡುತ್ತಾನೆ' 'ಬರೆಯುತ್ತಾನೆ,' 'ಹೋಗುತ್ತಾನೆ' ಎಂಬುವುದರಲ್ಲಿರುವ 'ಆನೆ' ಪ್ರತ್ಯಯವು ಮಸ್ಕಿಕನ್ನಡದಲ್ಲಿ 'ಆನ' ಎಂದು ಹಾಗೂ ಪದ ವಿಜಾತೀಯ ದ್ವಿತ್ವಕ್ಷರವಾಗಿಯೂ ಬಳಕೆಗೊಳ್ಳುತ್ತಿದೆ. ಅದೇ ರೀತಿ ಕೇಳುತ್ತೇನೆ ಇತ್ಯಾದಿ ಬರಹ ಕನ್ನಡದಲ್ಲಿರುವ 'ಏನೆ' ಪ್ರತ್ಯಯವು ಲೋಪಗೊಂಡು 'ಇನಿ' 'ಈನಿ' ಎಂದು ಬಳಕೆಗೊಳ್ಳುತ್ತಿದೆ 'ಕೇಳುತ್ತಿದ್ದಾನೆ'. ಎಂಬುದರಲ್ಲಿಯು 'ಆನೆ' ಪ್ರತ್ಯಯವು ಲುಪ್ತಗೊಂಡು 'ಆ್ಯನ' ಎಂದು ಬಳಕೆಗೊಳ್ಳುವುದು ವಿಶೇಷವಾಗಿದೆ. 'ಕೇಳುತ್ತಿದ್ದಾನೆ' ಎಂಬ ಪದರೂಪದಲ್ಲಿ 'ದ' ಕಾರ ಲೋಪಗೊಂಡು 'ಕ' ಕಾರವು ಪದಮಧ್ಯದಲ್ಲಿ ಬಂದು ಸೇರಿ ಕೇಳಕತ್ತ್ಯಾನ ಎಂದು ಉಚ್ಚಾರಣೆಗೊಳ್ಳುತ್ತಿದೆ. ಮಸ್ಕಿಕನ್ನಡದಲ್ಲಿರುವ ಮೂರು ಸಾಮಾಜಿಕ ವರ್ಗಗಳಲ್ಲಿ ಇದನ್ನು ಗಮನಿಸಬಹುದಾಗಿದೆ.

ಸ್ತ್ರೀಲಿಂಗ

ಬರಹ ಕನ್ನಡ	ಮಸ್ಕಿಕನ್ನಡ	ವ್ಯತ್ಯಾಸ
ಕೇಳುತ್ತಾಳೆ	ಕೇಳ್ತಾಳ	ಆಳೆ>ಆಳ
ನೋಡುತ್ತಾಳೆ	ನೋಡ್ತಾಳ	ಆಳೆ>ಆಳ
ಬರೆಯುತ್ತಾಳೆ	ಬರ್‍ತ್ಯಾಳ	ಆಳೆ>ಆ್ಯಳ
ಹೋಗುತ್ತಾಳೆ	ಒತಾಳ	ಆಳೆ>ಆಳ

ಬರಹ ಕನ್ನಡ ಸ್ತ್ರೀಲಿಂಗವಾಚಕ 'ಕೇಳುತ್ತಿದ್ದಾಳೆ' ಎಂಬುದರಲ್ಲಿರುವ 'ಆಳೆ' ಪ್ರತ್ಯಯವು ಮಸ್ಕಿಕನ್ನಡದಲ್ಲಿ 'ಆಳ' ಎಂದು ಬಳಕೆಗೊಂಡಿದೆ. 'ಕೇಳುತ್ತಾಳೆ' ಎಂಬುವುದು 'ಕೇಳ್ತಾಳ' ಎಂದು ವಿಜಾತೀಯ ಸಂಯುಕ್ತಾಕ್ಷರವಾಗಿ ಬಳಕೆಯಲ್ಲಿರುವುದು. 'ಕೇಳ್ತಾಳ' ಅದೇ ರೀತಿಯಾಗಿ 'ನೋಡ್ತಾಳ', 'ಬರ್‍ತ್ಯಾಳ', 'ಒತಾಳ' ಎಂದು ಉಚ್ಚಾರಣೆಯನ್ನು ನೋಡುತ್ತೇವೆ. 'ಆ್ಯಳ' ಎಂಬ ಪ್ರತ್ಯಯವು 'ಆಳೆ' ಎಂಬುದಕ್ಕೆ ಸಮನಾಗಿ ಬಳಕೆಗೊಂಡಿರುತ್ತದೆ. 'ಕೇಳುತ್ತಿದ್ದಾಳೆ,' 'ಹೋಗುತ್ತಿದ್ದಾಳೆ' ಎಂಬುವುದು ಮಸ್ಕಿಕನ್ನಡದಲ್ಲಿ 'ಕೇಳಕತ್ತ್ಯಾಳ,' 'ವೋಗಕತ್ತ್ಯಾಳ' ಎಂದು 'ಆ್ಯಳ' ಪ್ರತ್ಯಯವನ್ನು ಒಳಗೊಂಡು ಉಚ್ಚಾರಣೆಗೊಳ್ಳುತ್ತದೆ.

ಕೇಳುತ್ತೇನೆ	ಕೆಳ್ತ್ನಿ	ಏನೆ>ಇನಿ
ನೋಡುತ್ತೇನೆ	ನೋಡ್ತ್ನಿ	ಏನೆ>ಇನಿ
ಬರೆಯುತ್ತೇನೆ	ಬರಿತ್ನಿ	ಏನೆ>ಇನಿ
ಹೋಗುತ್ತೇನೆ	ಒತೀನಿ	ಏನೆ>ಈನಿ

ಪುಲ್ಲಿಂಗದಲ್ಲಿ ಆದ ಬದಲಾವಣೆಯು ಸ್ತ್ರೀಲಿಂಗದಲ್ಲಿ ನಡೆದಿದ್ದು ಮಸ್ಕಿಕನ್ನಡದಲ್ಲಿ ''ಇನಿ/ಈನಿ'' ಪ್ರತ್ಯಯವು ಪುಲ್ಲಿಂಗದಲ್ಲಿ ಐಕ್ಯವಾಗಿರುವುದನ್ನು ಗಮನಿಸಬಹುದು.

ಕೇಳುತ್ತಿದ್ದಾಳೆ	ಕೇಳಕತ್ತ್ಯಾಳ	ಆಳೆ>ಆ್ಯಳ
ನೋಡುತ್ತಿದ್ದಾಳೆ	ನೋಡಕತ್ತ್ಯಾಳ	ಆಳೆ>ಆ್ಯಳ
ಬರೆಯುತ್ತಿದ್ದಾಳೆ	ಬರಿಯಕತ್ತ್ಯಾಳ	ಆಳೆ>ಆ್ಯಳ
ಹೋಗುತ್ತಿದ್ದಾಳೆ	ವೋಗಕತ್ತ್ಯಾಳ	ಆಳೆ>ಆ್ಯಳ

ನಪುಂಸಕಲಿಂಗ

ಮಸ್ಕಿಕನ್ನಡದಲ್ಲಿ ನಪುಂಸಕಲಿಂಗವು ಬರಹ ಕನ್ನಡಕ್ಕಿಂತ ಭಿನ್ನವಾಗಿ ಬಳಸುವುದನ್ನು ನೋಡುತ್ತೇವೆ.

ಬರಹ ಕನ್ನಡ	**ಮಸ್ಕಿಕನ್ನಡ**	**ವ್ಯತ್ಯಾಸ**
ಬರುತ್ತದೆ	ಬರ್ತಾದ	ಅದೆ>ಆದ
ನಿಲ್ಲುತ್ತದೆ	ನಿಲ್ತಾದ	ಅದೆ>ಆದ
ನೋಡುತ್ತದೆ	ನೋಡ್ತಾದ	ಅದೆ>ಆದ
ಹೋಗುತ್ತದೆ	ಒತಾದ	ಅದೆ>ಆದ

ಬರಹ ಕನ್ನಡದ ನಪುಂಸಕಲಿಂಗದಲ್ಲಿ 'ಆದೆ' ಪ್ರತ್ಯಯವು ಮಸ್ಕಿಕನ್ನಡದಲ್ಲಿ 'ಆದ' ಎಂದು ಬಳಕೆಗೊಳ್ಳುತ್ತದೆ. ಬರಹ ಕನ್ನಡದ 'ಕೇಳುತ್ತೇನೆ', 'ನೋಡುತ್ತೇನೆ', 'ಬರೆಯುತ್ತೇನೆ', 'ಹೋಗುತ್ತೇನೆ' ಇವುಗಳು ಮಸ್ಕಿಕನ್ನಡದಲ್ಲಿ 'ಕೇಳ್ತೀನಿ', 'ನೋಡ್ತೀನಿ', 'ಬರ್ತೀನಿ', 'ಒತೀನಿ' ಎಂದು 'ಏನೆ' ಪ್ರತ್ಯಯವು 'ಈನಿ' ಎಂದು ಬಳಕೆಗೊಂಡು 'ಪುಲ್ಲಿಂಗ', 'ಸ್ತ್ರೀಲಿಂಗ'ಗಳು ಲಿಂಗಭೇದಗಳಿಲ್ಲದೆ ಬಳಕೆಗೊಳ್ಳುವುದನ್ನು ಗಮನಿಸಬಹುದು. ಮಸ್ಕಿಕನ್ನಡದ ಮೂರು ಸಾಮಾಜಿಕ ವರ್ಗಗಳಲ್ಲಿ ಈ ಪ್ರಕ್ರಿಯೆಯನ್ನು ಕಾಣುತ್ತೇವೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಮಸ್ಕಿಕನ್ನಡದ ಲಿಂಗವ್ಯವಸ್ಥೆಯು ಬರಹ ಕನ್ನಡಕ್ಕಿಂತ ಬೇರೆಗೊಂಡು ಬಳಕೆಯಲ್ಲಿದೆ.

೪.೫. ವಚನ ವ್ಯವಸ್ಥೆ

ಏಕವಚನ

ಮಸ್ಕಿಕನ್ನಡದಲ್ಲಿ 'ಏಕವಚನ' ವ್ಯವಸ್ಥೆಯನ್ನು ಗಮನಿಸುವುದಾದರೆ ಏಕವಚನವನ್ನು ಸೂಚಿಸಲು ಪ್ರತ್ಯೇಕವಾದ ಪ್ರತ್ಯಯಗಳಿಲ್ಲ. ನಾಮ ಪ್ರಕೃತಿಗಳೇ ಆ ಕೆಲಸವನ್ನು ನಿರ್ವಹಿಸುತ್ತವೆ.

ಬರಹ ಕನ್ನಡ	ಮಸ್ಕಿಕನ್ನಡ
ಅಕ್ಕನ	ಅಕ್ನ
ಅಣ್ಣನ	ಅಣ್ನ
ಮಾವನ	ಮಾವ್ನ
ಹುಡುಗನ	ಉಡಗ್ನ

ಬರಹ ಕನ್ನಡ 'ಅ' ಕಾರಾಂತ ಪ್ರಕೃತಿಗಳು ಮಸ್ಕಿಕನ್ನಡದಲ್ಲಿ 'ನ' ಕಾರಾಂತವಾಗಿ ಬಳಕೆಯಾಗುತ್ತವೆ. ಇತರೆ ರೂಪಗಳು, ಪ್ರಕೃತಿರೂಪದಲ್ಲಿಯೇ ಬಳಕೆಗೊಳ್ಳುತ್ತವೆ. ಬರಹ ಕನ್ನಡದ 'ಅಕ್ಕನ', 'ಅಣ್ಣನ' ಪದದಲ್ಲಿರುವ 'ನ' ಕಾರವು ಮಸ್ಕಿಕನ್ನಡದಲ್ಲಿ ಅದರ ಹಿಂದಿನ ಅಕ್ಷರದ ಸಂಯುಕ್ತಾಕ್ಷರ 'ಅಕ್ನ', 'ಅಣ್ನ'ವಾಗಿ ಬಳಕೆಯಾಗುತ್ತಿದೆ.

ಬಹುವಚನ

ಬಹುವಚನ ಸೂಚಿಸಲು ಭಿನ್ನರೀತಿಯ ಪ್ರತ್ಯಯಗಳು ಮಸ್ಕಿಕನ್ನಡದಲ್ಲಿ ಬಳಕೆಯಲ್ಲಿವೆ.

ಬರಹ ಕನ್ನಡ	ಮಸ್ಕಿಕನ್ನಡ	ವ್ಯತ್ಯಾಸ
ಅಕ್ಕನವರು	ಅಕ್ಕನಾರು/ಅಕ್ನೋರು	ಅರು>ಆರು>ಓರು
ಅಣ್ಣನವರು	ಅಣ್ಣನಾರು/ಅಣ್ನೋರು	ಅರು>ಆರು>ಓರು
ಚಿಕ್ಕಪ್ಪನವರು	ಚಿಗಪ್ಪನಾರು/ಚಿಗಪ್ನೋರು	ಅರು>ಆರು>ಓರು
ತಮ್ಮನವರು	ತಮ್ನಾರು/ತಮ್ನೋರು	ಅರು>ಆರು>ಓರು
ದೊಡಪ್ಪನವರು	ದ್ವಡಪನಾರು/ದ್ವಡಪನೋರು	ಅರು>ಆರು>ಓರು
ತಾತನವರು	ತಾತ್ನಾರು/ತಾತ್ನೋರು	ಅರು>ಆರು>ಓರು
ಸ್ವಾಮಿಯವರು	ಸ್ವಾಮ್ನಾರು/ಸ್ವಾಮ್ನೋರು	ಅರು>ಆರು>ಓರು
ಕರುಗಳು	ಕರುಗುಳು/ಕರುಗೊಳ್	ಗಳು>ಗುಳು>ಗೊಳ್
ನಾಯಿಗಳು	ನಾಯಿಗುಳು/ನಾಯಿಗೊಳ್	ಗಳು>ಗುಳು>ಗೊಳ್
ಮರಗಳು	ಮರಗುಳು/ಮರಗೊಳ್	ಗಳು>ಗುಳು>ಗೊಳ್
ಹುಡುಗರು	ಉಡುಗ್ರು	ಅರು>ರು
ನಂಟರು	ನಂಟ್ರು	ಅರು>ರು
ಬೀಗರು	ಬೀಗ್ರು	ಅರು>ರು
ಮನುಷ್ಯರು	ಮನಿಸ್ರು	ಅರು>ರು

ಬಹುವಚನ ವ್ಯವಸ್ಥೆಯಲ್ಲಿ ಬರಹ ಕನ್ನಡಕ್ಕಿಂತಲೂ ಮಸ್ಕಿಕನ್ನಡದಲ್ಲಿ ಸಾಕಷ್ಟು ಭಿನ್ನತೆ ಇರುವುದನ್ನು ಕಾಣುತ್ತೇವೆ. ಬರಹ ಕನ್ನಡದಲ್ಲಿ ಪ್ರಯೋಗಗೊಳ್ಳುವ 'ಅವರು' ಬಹುವಚನ ಪ್ರತ್ಯಯ ಸಂಬಂಧವಾಚಕಗಳಲ್ಲಿ 'ಆರು' ಮತ್ತು 'ಓರು' ಎಂದು ಬಳಕೆಗೊಳ್ಳುತ್ತಿದೆ. ಸಾಮಾಜಿಕ ವರ್ಗವಾದ ಲಿಂಗಾಯತರಲ್ಲಿ 'ಆರು' ಎಂಬುದಾಗಿ ಬಳಕೆಗೊಂಡರೆ ನಾಯಕ, ಹರಿಜನರಲ್ಲಿ 'ಓರು' ಎಂದು ಬಳಕೆಗೊಳ್ಳುತ್ತಿದ್ದು ಅಲ್ಲಲ್ಲಿ ಕ್ವಚಿತ್ತಾಗಿ 'ಆರು' ಎಂದೂ ಬಳಕೆಗೊಳ್ಳುತ್ತದೆ. 'ಆರು ಮತ್ತು ಓರು' ಎಂಬೆರಡು ಬಹುವಚನ ವ್ಯವಸ್ಥೆಯನ್ನು ಮಸ್ಕಿಕನ್ನಡದಲ್ಲಿ ಪ್ರಯೋಗಗೊಳ್ಳುವುದನ್ನು ಕಾಣಬಹುದಾಗಿದೆ. ಪ್ರಾಣಿ, ಪಕ್ಷಿ, ಗಿಡ ಇತ್ಯಾದಿ ಪ್ರಕೃತಿ ಸೂಚಕಗಳು ಬರಹ ಕನ್ನಡದಲ್ಲಿ 'ಅಳು' ಪ್ರತ್ಯಯವನ್ನು ಒಳಗೊಂಡು ಉಚ್ಚಾರದಲ್ಲಿ ಇದ್ದರೆ ಮಸ್ಕಿಕನ್ನಡದಲ್ಲಿ 'ಗುಳು', 'ಗೊಳ್' ಪ್ರತ್ಯಯ ಉಚ್ಚಾರವನ್ನು ನೋಡಬಹುದು. ಮಸ್ಕಿಕನ್ನಡದ ಲಿಂಗಾಯತ ಸಾಮಾಜಿಕ ವರ್ಗದಲ್ಲಿ 'ಗುಳು' ಪ್ರತ್ಯಯ, ನಾಯಕ, ಹರಿಜನರಲ್ಲಿ 'ಗೊಳ್' ಪ್ರತ್ಯಯ, ಒಮ್ಮೊಮ್ಮೆ 'ಗುಳು' ಪ್ರತ್ಯಯವು ಮೂರು ಸಾಮಾಜಿಕ ವರ್ಗಗಳಲ್ಲಿಯೂ ಕಾಣಿಸುತ್ತದೆ. ಬರಹ ಕನ್ನಡದಲ್ಲಿ 'ಹುಡುಗರು', 'ನಂಟರು', 'ಬೀಗರು', 'ಮನುಷ್ಯರು' ಎನ್ನುವಲ್ಲಿಯ 'ಅರು' ಬಹುವಚನ ಪ್ರತ್ಯಯವು ಮಸ್ಕಿಕನ್ನಡದಲ್ಲಿ ಬಹುವಚನ ಪ್ರತ್ಯಯ 'ರು' ಎಂಬುದಾಗಿ 'ಉಡುಗ್ರು', 'ನಂಟ್ರು', 'ಬೀಗ್ರು', 'ಮನಿಸ್ರು' ಎಂದು ಬಳಕೆಗೊಳ್ಳುತ್ತದೆ. ಮಸ್ಕಿಕನ್ನಡದಲ್ಲಿ 'ಆರು', 'ಓರು', 'ಗುಳು', 'ಗೊಳ್', 'ರು' ಬಹುವಚನ ಪ್ರತ್ಯಯಗಳನ್ನು ನೋಡಬಹುದು.

೪.೬. ವಿಭಕ್ತಿ ಪ್ರತ್ಯಯಗಳು

ವಾಕ್ಯದ ನಾಮಪ್ರಕೃತಿಗಳಿಗೆ ಮತ್ತು ಇತರ ಪದಗಳಿಗೆ ಇರುವ ಸಂಬಂಧವನ್ನು ತಿಳಿಸಲು ಸೇರುವ ಪ್ರತ್ಯಯಕ್ಕೆ ''ವಿಭಕ್ತಿ ಪ್ರತ್ಯಯ''ವೆಂದು ಹೆಸರು. ಅಂದರೆ ನಾಮಪ್ರಕೃತಿಯನ್ನು ಬಳಕೆಮಾಡುವಾಗ ಅದಕ್ಕೂ ವಾಕ್ಯದ ಇತರ ಪದಗಳಿಗೂ ಇರುವ ಸಂಬಂಧವನ್ನು ತೋರಿಸಲು ಕೆಲವು ಪ್ರತ್ಯಯಗಳನ್ನು ನಾಮಪ್ರಕೃತಿಗೆ ಸೇರಿಸಲಾಗುತ್ತದೆ. ಅವುಗಳೇ ವಿಭಕ್ತಿ ಪ್ರತ್ಯಯಗಳು. ಮಸ್ಕಿಕನ್ನಡದಲ್ಲಿ 'ವಿಭಕ್ತಿ' ಬಹುಮುಖ್ಯ ವ್ಯಾಕರಣ ಭಾಗವಾಗಿದೆ. ಅಖ್ಯಾತ ವರ್ಗದಲ್ಲಿ ಇವು ಪ್ರಮುಖ ಸ್ಥಾನ ಪಡೆದಿದೆ. ಸಾಮಾನ್ಯವಾಗಿ ವಿಭಕ್ತಿ ಪ್ರತ್ಯಯಗಳು ಏಕವಚನದಲ್ಲಿ ನಾಮಪ್ರಕೃತಿ ಅಥವಾ ಪ್ರಾತಿಪದಿಕದೊಡನೆಯೂ ಬಹುವಚನದಲ್ಲಿ ಬಹುವಚನ ಪ್ರತ್ಯಯದ ನಂತರ ನೇರವಾಗಿಯೂ ಸೇರುವವು. ವಿಭಕ್ತಿ ಪ್ರತ್ಯಯಗಳು ನಾಮಪ್ರಕೃತಿ ಹಾಗೂ ಸರ್ವನಾಮ ಪ್ರಕೃತಿಗಳೊಂದಿಗೆ ಸೇರುತ್ತವೆ.

ಮಸ್ಕಿಕನ್ನಡದಲ್ಲಿ ಆರು ವಿಭಕ್ತಿಗಳಿದ್ದು ನಾಮಪ್ರಕೃತಿಯೊಡನೆ (ಏಕವಚನ ಮತ್ತು ಬಹುವಚನ) ಬರುವಂತಹ ವಿಭಕ್ತಿ ಪ್ರತ್ಯಯಗಳ ವಿಶ್ಲೇಷಣಾ ವಿವರವನ್ನು ಎರಡು ಬಗೆಯಲ್ಲಿ ವಿಭಾಗಿಸಿ ವಿವರಿಸಬಹುದಾಗಿದ್ದು ಅವುಗಳನ್ನು ಈ ರೀತಿಯಾಗಿ ನೋಡಬಹುದು.

೧. ವಿಭಕ್ತಿ ಪ್ರತ್ಯಯಗಳ ವರ್ಗೀಕರಣ

೨. ವಿಭಕ್ತಿ ಪ್ರತ್ಯಯಗಳ ವಿವರಣೆ

ವಿಭಕ್ತಿ ಪ್ರತ್ಯಯಗಳ ವರ್ಗೀಕರಣ

ವಿಭಕ್ತಿ ಪ್ರತ್ಯಯಗಳ ಅರ್ಥ ಮತ್ತು ನಾಮಪದ ಹಾಗೂ ಕ್ರಿಯಾಪದಗಳ ನಡುವಿನ ವ್ಯಾಕರಣ ಸಂಬಂಧಗಳನ್ನಾಧರಿಸಿ ಮಸ್ಕಿಕನ್ನಡದ ವಿಭಕ್ತಿ ಪ್ರತ್ಯಯಗಳನ್ನು ಅವುಗಳ ಉಪ ಆಕೃತಿಮಾಗಳ ವಿವರಣೆಯನ್ನು ಈ ಕೆಳಗಿನಂತೆ ವರ್ಗಿಕರಣ ಮಾಡಿದೆ.

ವಿಭಕ್ತಿ ಪ್ರತ್ಯಯಗಳು ಮತ್ತು ಅವುಗಳ ಉಪ ಆಕೃತಿಮಾಗಳ ಪಟ್ಟಿ

ಪ್ರಥಮಾ	-Ø-
ದ್ವಿತೀಯಾ	-ಅಗ, -ಅನ್ನ, -ಗ್, -ನ್ನ, -ನ, -ಇಗ
ತೃತೀಯಾ	-ಲೆ, -ಆಲಿನ್ದ, -ಲಾಸಿ, -ಲಾಸಿನ್ದ, -ಲಿನ್ದಾಸಿ, -ಆಗ್ದಾಸಿನ್ದ, -ಆಲಾಸಿ, -ಆಗ್ದಾಸಿ, -ಆಲಾಸಿನ್ದ, -ಆಗ್ಲಿನ್ದ -ಇಂದ, -ಲಿನ್ದ, -ರಿಂದ
ಚತುರ್ಥಿ	-ಅಗ, -ಗೆ, -ಇಗೆ, -ಅಕ್ಕೆ
ಷಷ್ಠಿ	-ಅ, -ಇನ್, -ಆಕ, -ಅದ್, -ಅನ್
ಸಪ್ತಮಿ	-ಅಲ್ಲಿ, -ಎ, -ಆಳ, -ಅಕ್ಕ, -ಆಗ, -ಒಳು, -ಆನ್, -ಆನ, -ಆಳ್

ವಿಭಕ್ತಿ ಪ್ರತ್ಯಯಗಳ ವಿವರಣೆ.

ಪ್ರಥಮಾ ವಿಭಕ್ತಿ ಪ್ರತ್ಯಯ

ಮಸ್ಕಿಕನ್ನಡದಲ್ಲಿ ಪ್ರಥಮ ವಿಭಕ್ತಿಗೆ ಪ್ರತ್ಯೇಕವಾದ ಪ್ರತ್ಯಯ ಬಳಕೆಯಲ್ಲಿಲ್ಲ. ಪ್ರಥಮ ವಿಭಕ್ತಿ ಕೆಲಸವನ್ನು ನಾಮ ಪ್ರಕೃತಿಗಳೇ ನಿರ್ವಹಿಸುತ್ತವೆ.

-Ø-

-Ø- ಪ್ರಥಮ ವಿಭಕ್ತಿ ಪ್ರತ್ಯಯ ಏಕವಚನ ನಾಮಪ್ರಕೃತಿ ಹಾಗೂ ಬಹುವಚನ ಪ್ರತ್ಯಯಗಳ ನಂತರ ಸೇರುತ್ತದೆ.

ಏಕವಚನ ನಾಮಪ್ರಕೃತಿಯ ನಂತರ

೧. ಬರಹ ಕನ್ನಡ : ಅಪ್ಪ ಮನೆಯಲ್ಲಿ ಇದ್ದಾನೆ.
ಲಿಂಗಾಯತ : ಅಪ್ಪ ಮನ್ಯಾಗ ಅದಾನ
ನಾಯಕ : ಅಪ್ಪ ಮನ್ಯಾಗ ಅದಾನ
ಹರಿಜನ : ಅಪ್ಪ ಮನ್ಯಾಗ ಅದಾನ

೨. ಬರಹ ಕನ್ನಡ : ಹುಡುಗಿ ಕುಣಿಯುತ್ತಿದ್ದಾಳೆ.
ಲಿಂಗಾಯತ : ಉಡುಗಿ ಕುಣಿಯಕತ್ತ್ಯಾಳ
ನಾಯಕ : ಉಡ್ಗಿ ಕುಣಿಯಕತ್ತ್ಯಾಳ
ಹರಿಜನ : ಉಡ್ಗಿ ಕುಣಿಯಕತ್ತ್ಯಾಳ.

೩. ಬರಹ ಕನ್ನಡ : ದೀಪ ಇಲ್ಲಿಗೆ ಕಾಣುತ್ತಿದೆ.
ಲಿಂಗಾಯತ : ದೀಪ ಇಲ್ಲಿಗೆ ಕಾಣತ್ತೈತಿ
ನಾಯಕ : ದೀಪ ಇಲ್ಗೆ ಕಾಣತ್ತೈತಿ
ಹರಿಜನ : ದೀಪ ಇಲ್ಗೆ ಕಾಣತ್ತೈತಿ

೪. ಬರಹ ಕನ್ನಡ : ಹುಡುಗಿ ಕುಣಿಯುತ್ತಿದ್ದಾಳೆ.
ಲಿಂಗಾಯತ : ಉಡುಗಿ ಕುಣಿಯಕತ್ತ್ಯಾಳ
ನಾಯಕ : ಉಡ್ಗಿ ಕುಣಿಯಕತ್ತ್ಯಾಳ
ಹರಿಜನ : ಉಡ್ಗಿ ಕುಣಿಯಕತ್ತ್ಯಾಳ.

೪. ಬರಹ ಕನ್ನಡ : ಆತ ಈಗ ಬದಲಾಗಿದ್ದಾನೆ.
ಲಿಂಗಾಯತ : ಅತ ಈಗ ಬದಲಾಗ್ಯಾನ
ನಾಯಕ : ಅತ ಈಗ ಬದಲಾಗ್ಯಾನ
ಹರಿಜನ : ಅತ ಈಗ ಬದಲಾಗ್ಯಾನ

೫. ಬರಹ ಕನ್ನಡ : ಬೆಂಗಳೂರು ಇಲ್ಲಿಂದ ಬಹಳ ದೂರ ಇದೆ.
ಲಿಂಗಾಯತ : ಬೆಂಗಳೂರು ಇಲ್ಲಿಂದ ಬಾಳ ದೂರೈಯ್ತಿ
ನಾಯಕ : ಬೆಂಗ್ಳೂರು ಇಲ್ಲೆಸಿಂದ ಬಾಳಾ ದೂರ್ಯಯ್ತಿ
ಹರಿಜನ : ಬೆಂಗ್ಳೂರು ಇಲ್ಲೆಸಿಂದ ಬಾಳಾ ದೂರ್ಯಯ್ತಿ

೬. ಬರಹ ಕನ್ನಡ : ಹೊಲ ಇಲ್ಲಿಯೆ ಹತ್ತಿರ ಇದೆ.
ಲಿಂಗಾಯತ : ವಲ ಇಲ್ಲೆ ಅತ್ರ ಅಯ್ತಿ.
ನಾಯಕ : ವಲ ಇಲ್ಲೆ ಅತ್ರ ಅಯ್ತಿ.
ಹರಿಜನ : ವಲ ಇಲ್ಲೆ ಅತ್ರ ಅಯ್ತಿ.

ಬಹುವಚನ ಪ್ರತ್ಯಯಗಳ ನಂತರ

೧. ಬರಹ ಕನ್ನಡ : ಹುಡುಗರು ಶಾಲೆಯಿಂದ ಬಂದರು.
ಲಿಂಗಾಯತ : ಉಡುಗ್ರು ಸ್ಯಾಲಿಂದ ಬಂದ್ರು.
ನಾಯಕ : ಉಡ್ರು ಸ್ಯಾಲಿಂದ ಬಂದ್ರು.
ಹರಿಜನ : ಉಡ್ರು ಸ್ಯಾಲಿಂದ ಬಂದ್ರು.

೨. ಬರಹ ಕನ್ನಡ : ಬೀಗರು ಊರಿಗೆ ಹೋಗುತ್ತಾರೆ.
ಲಿಂಗಾಯತ : ಬೀಗ್ರು ಊರಿಗೆ ವೋಗ್ತಾರ.

ನಾಯಕ : ಬೀಗ್ರು ಊರ್ಗೆ ವಂಟಾರ.

ಹರಿಜನ : ಬೀಗ್ರು ಊರ್ಗೆ ವಂಟಾರ.

೩. ಬರಹ ಕನ್ನಡ : ತಂಗಿಯರು ಹಬ್ಬಕ್ಕೆ ಮನೆಗೆ ಬರುತ್ತಾರೆ.

ಲಿಂಗಾಯತ : ತಂಗೀರು ಅಬ್ಬಕ್ಕ ಮನಿಗೆ ಬರ್ತ್ತಾರ

ನಾಯಕ : ತಂಗೇರು ಅಬ್ಕ ಮನ್ಗಿ ಬರ್ತ್ತಾರ.

ಹರಿಜನ : ತಂಗೇರು ಅಬ್ಕ ಮನ್ಗಿ ಬರ್ತ್ತಾರ.

೪. ಬರಹ ಕನ್ನಡ : ಅಕ್ಕಂದಿರು ಎಲ್ಲರೂ ಸೇರಿ ಮಾತನಾಡುತ್ತಿದ್ದಾರೆ.

ಲಿಂಗಾಯತ : ಅಕ್ನಾರು ಎಲ್ರೂ ಸೇರಿ ಮಾತ್ನಾಡಕತ್ತ್ಯಾರ.

ನಾಯಕ : ಅಕ್ನೋರು ಎಲ್ಲೂ ಸೇರಿ ಮಾತ್ನಾಡಕತ್ತ್ಯಾರ.

ಹರಿಜನ : ಅಕ್ನಾರು ಎಲ್ರೂ ಸೇರಿ ಮಾತ್ನಾಡಕತ್ತ್ಯಾರ.

೫. ಬರಹ ಕನ್ನಡ : ಇಬ್ಬರು ಹೊಸಬರು.

ಲಿಂಗಾಯತ : ಇಬ್ರು ವಸಬ್ರು.

ನಾಯಕ : ಇಬ್ರು ವಸುಬ್ರು.

ಹರಿಜನ : ಇಬ್ರು ವಸುಬ್ರು.

೬. ಬರಹ ಕನ್ನಡ : ಮರಗಳು ಕಡಿಯುತ್ತಾರೆ.

ಲಿಂಗಾಯತ : ಕರಗುಳು ಕಡಿತಾರ.

ನಾಯಕ : ಮರಗ್ಳು ಕಡಿತಾರ.

ಹರಿಜನ : ಮರಗ್ಳು ಕಡಿತಾರ.

೭. ಬರಹ ಕನ್ನಡ : ದನಗಳು ಬಂದವು.

ಲಿಂಗಾಯತ : ದನಗುಳು ಬಂದ್ವು.

ನಾಯಕ : ದನಗ್ಳು ಬಂದ್ವು.

ಹರಿಜನ : ದನಗ್ಳು ಬಂದ್ವು.

ದ್ವಿತೀಯ ವಿಭಕ್ತಿ ಪ್ರತ್ಯಯ

ಬರಹ ಕನ್ನಡ -ಅನ್ನು

ಮಸ್ಕಿಕನ್ನಡ -ಅಗ, -ಅನ್ನ, -ಇಗ, -ನ್ನ, -ನ, -ಗ್

ದ್ವಿತೀಯ ವಿಭಕ್ತಿ ಪ್ರತ್ಯಯ ಮಾನವ ಏಕವಚನ ನಾಮಪ್ರಕೃತಿ, ಮಾನವೇತರ ಏಕವಚನ ನಾಮಪ್ರಕೃತಿ ಹಾಗೂ ಪ್ರಥಮ ಪುರುಷ ಏಕವಚನ ಸರ್ವನಾಮ ವ್ಯಂಜನಾಂತ ಪ್ರಕೃತಿ ನಂತರ ಸೇರುತ್ತವೆ.

ಅಗ : ಮಾನವ ಏಕವಚನ ನಾಮಪ್ರಕೃತಿ ನಂತರ

೧. ಬರಹ ಕನ್ನಡ : ಅಪ್ಪನನ್ನು ಊಟಕ್ಕೆ ಕರೆ.
ಲಿಂಗಾಯತ : ಅಪ್ಪುಗ ಉಣ್ಣಾಕ ಕರಿ.
ನಾಯಕ : ಅಪ್ಪುಗ ಉಣ್ಣಾಕ ಕರಿ.
ಹರಿಜನ : ಅಪ್ಪುಗ ಉಣ್ಣಾಕ ಕರಿ.

೨. ಬರಹ ಕನ್ನಡ : ಅಕ್ಕನನ್ನು ಕೇಳಿಕೊಡು.
ಲಿಂಗಾಯತ : ಅಕ್ಕುಗ ಕೇಳಿ ಕೊಡು.
ನಾಯಕ : ಅಕ್ಕುಗ ಕೇಳಿ ಕ್ವಡು.
ಹರಿಜನ : ಅಕ್ಕುಗ ಕೇಳಿ ಕ್ವಡು.

೩. ಬರಹ ಕನ್ನಡ : ತಮ್ಮನನ್ನು ಬರುವುದಕ್ಕೆ ಹೇಳು.
ಲಿಂಗಾಯತ : ತಮ್ಮುಗ ಬರಾಕ ಯೇಳು.
ನಾಯಕ : ತಮ್ಮುಗ ಬರಾಕ ಯೇಳು.
ಹರಿಜನ : ತಮ್ಮುಗ ಬರಾಕ ಯೇಳು.

-ಅನ್ನ, -ಇಗ, -ನ್ನ, -ನ, ದ್ವಿತೀಯ ವಿಭಕ್ತಿ ಪ್ರತ್ಯಯ ಮಾನವೇತರ ಏಕವಚನ ನಾಮಪ್ರಕೃತಿಗಳ ನಂತರ

ಅನ್ನ :

ಬರಹ ಕನ್ನಡ : ಕರುವನ್ನು ಕಟ್ಟಿರಿ
ಲಿಂಗಾಯತ : ಕರನ್ನ ಕಟ್ರಿ
ನಾಯಕ : ಕರನ್ನ ಕಟ್ರಿ
ಹರಿಜನ : ಕರನ್ನ ಕಟ್ರಿ

ಇಗ :

ಬರಹ ಕನ್ನಡ : ನಾಯಿಯನ್ನು ಹೊಡೆಯಿರಿ.
ಲಿಂಗಾಯತ : ನಾಯಿಗ ವಡ್ರಿ.
ನಾಯಕ : ನಾಯಿಗ ವಡ್ರಿ.
ಹರಿಜನ : ನಾಯಿಗ ವಡ್ರಿ.

ನ್ನ :

ಬರಹ ಕನ್ನಡ : ಟೇಬಲನ್ನು ಆ ಕಡೆ ಇಡು.
ಲಿಂಗಾಯತ : ಟೇಬಲನ್ನ ಅತ್ತಾಗ ಇಡು.

ನಾಯಕ : ಟೇಬಲ್ನ ಅತ್ಲಾಗ ಇಡು.

ಹರಿಜನ : ಟೇಬಲ್ನ ಅತ್ಲಾಗ ಇಡು.

ನ :

ಬರಹ ಕನ್ನಡ : ಶಾಲೆಯನ್ನು ನೋಡುತ್ತಿದ್ದಾರೆ.

ಲಿಂಗಾಯತ : ಸ್ಯಾಲಿನ ನೋಡಕತ್ತ್ಯಾರ

ನಾಯಕ : ಸ್ಯಾಲಿನ ನೋಡಕತ್ತ್ಯಾರ.

ಹರಿಜನ : ಸ್ಯಾಲಿನ ನೋಡಕತ್ತ್ಯಾರ.

ಗ್ : ಪ್ರಥಮ ಪುರುಷ ಏಕವಚನ ಸರ್ವನಾಮ ವ್ಯಂಜನಾಂತ ಪ್ರಕೃತಿ ನಂತರ.

೧. ಬರಹ ಕನ್ನಡ : ಇವನನ್ನು ಮೊದಲು ಹೋಗುವುದಕ್ಕೆ ಹೇಳು.

ಲಿಂಗಾಯತ : ಇವನ್ಗ್ ಮದ್ಲು ವೋಗಾಕ ಯೇಳು.

ನಾಯಕ : ಇವನ್ಗ್ ಮದ್ಲು ವೋಗಾಕ ಯೇಳು.

ಹರಿಜನ : ಇವನ್ಗ್ ಮದ್ಲು ವೋಗಾಕ ಯೇಳು.

೨. ಬರಹ ಕನ್ನಡ : ಅವನನ್ನು ಇಂದು ಬರುವುದಕ್ಕೆ ಹೇಳಿದ್ದೆ.

ಲಿಂಗಾಯತ : ಅವನ್ಗ್ ಇವತ್ತು ಬರಾಕ ಯೇಳಿದ್ದೆ.

ನಾಯಕ : ಅವನ್ಗ್ ಇವತ್ ಬರಾಕ ಯೇಳಿದ್ದೆ.

ಹರಿಜನ : ಅವನ್ಗ್ ಇವತ್ ಬರಾಕ ಯೇಳಿದ್ದೆ.

ತೃತೀಯ ವಿಭಕ್ತಿ ಪ್ರತ್ಯಯ

ಬರಹ ಕನ್ನಡ : ಇಂದ

ಮಸ್ಕಿಕನ್ನಡದ : -ಲೆ, -ಲಿನ್ದಾಸಿ, -ಅಗ್ಲಾಸಿನ್ದ, -ಇಂದ, -ಅಲಿನ್ದ, -ನಿಂದ, -ಲಾಸಿ, -ಅಲಾಸಿ, ಆಗ್ಲಾಸಿ, -ಲಾಸಿನ್ದ, -ಲಿಂದ, -ಅಗ್ಲಿನ್ದ, -ರಿಂದ.

'ಇಂದ' ತೃತೀಯ ಅಥವಾ ಪಂಚಮಿ ವಿಭಕ್ತಿ ಪ್ರತ್ಯಯ 'ಇ' ಕಾರಂತ್ಯ, 'ಉ' ಕಾರಂತ್ಯ 'ಎ' ಕಾರಂತ್ಯ, 'ಅ' ಕಾರಂತ್ಯ, ವ್ಯಂಜನಾಂತ ಮತ್ತು ಸರ್ವನಾಮ ನಾಮಪ್ರಕೃತಿ ನಂತರ ಸೇರುತ್ತದೆ.

'ಇ' ಕಾರಂತ್ಯ ನಾಮಪ್ರಕೃತಿ ನಂತರ

ಲೆ :

ಬರಹ ಕನ್ನಡ : ಕೈಯಿಂದ ಎತ್ತು

ಲಿಂಗಾಯತ : ಕೈಯಿಲೆ ಎತ್ತು

ನಾಯಕ	:	ಕೈಯಿಲೆ ಯತ್ತು
ಹರಿಜನ	:	ಕೈಯಿಲೆ ಯತ್ತು

ಲಿನ್ದಾಸಿ :

ಬರಹ ಕನ್ನಡ	:	ಅಂಗಡಿಯಿಂದ ಹೋಗುತಾನೆ.
ಲಿಂಗಾಯತ	:	ಅಂಗ್ಡಿಲಿನ್ದಾಸಿ ಓತಾನ.
ನಾಯಕ	:	ಅಂಗ್ಡಿಲಿನ್ದಾಸಿ ಓತಾನ.
ಹರಿಜನ	:	ಅಂಗ್ಡಿಲಿನ್ದಾಸಿ ಓತಾನ.

ಆಗ್ಲಾಸಿನ್ದ :

ಬರಹ ಕನ್ನಡ	:	ಡಬ್ಬಿಯಿಂದ ಕತಡೆಗೆ ತೆಗೆದರು.
ಲಿಂಗಾಯತ	:	ಡಬ್ಬಿನ್ಯಾಗ್ಲಾಸಿನ್ದ ಕಡುಗ ತಗುದ್ರು.
ನಾಯಕ	:	ಡಬ್ಬಿನ್ಯಾಗ್ಲಾಸಿನ್ದ ಕಡುಗೆ ತಗುದ್ರು.
ಹರಿಜನ	:	ಡಬ್ಬಿನ್ಯಾಗ್ಲಾಸಿನ್ದ ಕಡುಗೆ ತಗುದ್ರು.

ಇಂದ :

ಬರಹ ಕನ್ನಡ	:	ಕತ್ತರಿಯಿಂದ ಕತ್ತರಿಸು.
ಲಿಂಗಾಯತ	:	ಕತ್ತುರಿಂದ ಕತ್ರಸು.
ನಾಯಕ	:	ಕತ್ರಿಂದ ಕತ್ರುಸು.
ಹರಿಜನ	:	ಕತ್ರಿಂದ ಕತ್ರುಸು.

೩.೨. 'ಉ' ಕಾರಂತ್ಯ ನಾಮ ಪ್ರಕೃತಿ ನಂತರ.

ಇಂದ :

ಬರಹ ಕನ್ನಡ	:	ಕಲ್ಲುನಿಂದ ಹೊಡೆದನು.
ಲಿಂಗಾಯತ	:	ಕಲ್ಲಿಂದ ವಡುದ.
ನಾಯಕ	:	ಕಲ್ಲಿಂದ ವಡ್ದ.
ಹರಿಜನ	:	ಕಲ್ಲಿಂದ ವಡ್ದ.

ಆಲಿನ್ದ :

ಬರಹ ಕನ್ನಡ	:	ಕಾಲುನಿಂದ ಒದ್ದರು.
ಲಿಂಗಾಯತ	:	ಕಾಲಾಗಾಲಿನ್ದ ವದ್ರು.
ನಾಯಕ	:	ಕಾಲಾಗಾಲಿನ್ದ ವದ್ರು.
ಹರಿಜನ	:	ಕಾಲಾಗಾಲಿನ್ದ ವದ್ರು.

ನಿಂದ :

ಬರಹ ಕನ್ನಡ : ಚಾಕುವಿನಿಂದ ಚುಚ್ಚಿದ
ಲಿಂಗಾಯತ : ಚಾಕ್‌ನಿಂದ ಚುಚ್ಚಿದ.
ನಾಯಕ : ಚಾಕ್‌ನಿಂದ ತಿವಿದ.
ಹರಿಜನ : ಚಾಕ್‌ನಿಂಬ ತಿವಿದ.

'ಎ' ಕಾರಂತ್ಯ ನಾಮಪ್ರಕೃತಿ ನಂತರ

ಆಲಿನ್ದ :

ಬರಹ ಕನ್ನಡ : ಪೆಟ್ಟಿಗೆಯಿಂದ ತೆಗೆದು ಕೊಡು.
ಲಿಂಗಾಯತ : ಪ್ಯಟಿಗ್ಯಾಲಿನ್ದ ತಗುದು ಕೊಡು.
ನಾಯಕ : ಪ್ಯಟಿಗ್ಯಾಲಿನ್ದ ತಗ್ದು ಕ್ವಡು.
ಹರಿಜನ : ಪ್ಯಟಿಗ್ಯಾಲಿನ್ದ ತಗ್ದು ಕ್ವಡು.

ಲಾಸಿ :

ಬರಹ ಕನ್ನಡ : ಸಂತೆಯಿಂದ ಬರುತ್ತಿದ್ದಾನೆ.
ಲಿಂಗಾಯತ : ಸಂತಿಲಾಸಿ ಬರಕತ್ತ್ಯಾನ.
ನಾಯಕ : ಸ್ಯಂತಿಲಾಸಿ ಬರಕತ್ತ್ಯಾನ.
ಹರಿಜನ : ಸ್ಯಂತಿಲಾಸಿ ಬರಕತ್ತ್ಯಾನ.

ಆಲಾಸಿ :

ಬರಹ ಕನ್ನಡ : ಮನೆಯಿಂದ ಓಡಿದ.
ಲಿಂಗಾಯತ : ಮನ್ಯಾಲಾಸಿ ಓಡಿದ.
ನಾಯಕ : ಮನ್ಯಾಲಾಸಿ ಓಡ್ದ.
ಹರಿಜನ : ಮನ್ಯಾಲಾಸಿ ಓಡ್ದ.

ಆಗ್ಲಾಸಿ :

ಬರಹ ಕನ್ನಡ : ಕೋಣೆಯಿಂದ ಕಡಿಗೆ ಬಾ.
ಲಿಂಗಾಯತ : ಕೋಣ್ಯಾಗ್ಲಾಸಿ ಕಡಿಗೆ ಬಾ.
ನಾಯಕ : ಕೋಣ್ಯಾಗ್ಲಾಸಿ ಕಡ್ಗಿ ಬಾ.
ಹರಿಜನ : ಕೋಣ್ಯಾಗ್ಲಾಸಿ ಕಡ್ಗಿ ಬಾ.

'ಅ' ಕಾರಂತ್ಯ ನಾಮಪ್ರಕೃತಿ ನಂತರ

ಲಾಸಿನ್ದ :

ಬರಹ ಕನ್ನಡ	:	ಗಿಡದಿಂದ ಹೂವನ್ನು ಕಿತ್ತರು.
ಲಿಂಗಾಯತ	:	ಗಿಡದಾಲಾಸಿನ್ದ ಊವನ್ನಕಿತ್ರು.
ನಾಯಕ	:	ಗಿಡದಾಲಾಸಿನ್ದ ಊವ್ನ ಕಿತ್ರ.
ಹರಿಜನ	:	ಗಿಡದಾಲಾಸಿನ್ದ ಊವ್ನ ಕಿತ್ರ.

ಲಿಂದ :

ಬರಹ ಕನ್ನಡ	:	ಮೋಡದಿಂದ ಮಳೆ ಸುರಿಯುತ್ತಿದೆ.
ಲಿಂಗಾಯತ	:	ಮಾಡಲಿಂದ ಮಳಿ ಸುರಿತ್ತೈತಿ.
ನಾಯಕ	:	ಮಾಡ್ಲಿಂದ ಮಳಿ ಸುರಿತ್ತೈತಿ.
ಹರಿಜನ	:	ಮಾಡ್ಲಿಂದ ಮಳಿ ಸುರಿತ್ತೈತಿ.

ವ್ಯಂಜನಾಂತ ನಾಮಪ್ರಕೃತಿ ನಂತರ

ಆಗ್ಲಿನ್ದ :

ಬರಹ ಕನ್ನಡ	:	ಬಸ್‌ನಿಂದ ಇಳಿದು ಬಂದ.
ಲಿಂಗಾಯತ	:	ಬಸ್‌ನಾಗ್ಲಿನ್ದ ಇಳುದು ಬಂದ.
ನಾಯಕ	:	ಬಸ್‌ನಾಗ್ಲಿನ್ದ ಇಳ್ದು ಬಂದ.
ಹರಿಜನ	:	ಬಸ್‌ನಾಗ್ಲಿನ್ದ ಇಳ್ದು ಬಂದ.

ಯಿಂದ :

ಬರಹ ಕನ್ನಡ	:	ಪೆನ್‌ಯಿಂದ ಬರೆಯುತ್ತಾನೆ.
ಲಿಂಗಾಯತ	:	ಪೆನ್‌ಯಿಂದ ಬರಿತಾನ.
ನಾಯಕ	:	ಪೆನ್‌ಯಿಂದ ಬರಿತಾನ.
ಹರಿಜನ	:	ಪೆನ್‌ಯಿಂದ ಬರಿತಾನ.

ಸರ್ವನಾಮ ಪ್ರಕೃತಿ ನಂತರ

ನಿಂದ :

ಬರಹ ಕನ್ನಡ	:	ಅವನಿಂದ ನನಗೆ ಗೊತ್ತಾಯಿತು.
ಲಿಂಗಾಯತ	:	ಅವ್‌ನಿಂದ ನಂಗ ಗೊತ್ತಾಯ್ತು.

ನಾಯಕ	:	ಅವ್ನಿಂದ ನಂಗ ಗೊತ್ತಾಯ್ತು.
ಹರಿಜನ	:	ಅವ್ನಿಂದ ನಂಗ ಗೊತ್ತಾಯ್ತು.
ಬರಹ ಕನ್ನಡ	:	ನನ್ನಯಿಂದ ಮೊದಲು ಮಾಡು.
ಲಿಂಗಾಯತ	:	ನನ್‌ಯಿಂದ ಮದ್ಲು ಮಾಡು.
ನಾಯಕ	:	ನನ್ನಿಂದ ಮದ್ಲ ಮಾಡು.
ಹರಿಜನ	:	ನನ್ನಿಂದ ಮದ್ಲ ಮಾಡು.

ಬಹುವಚನ ಪ್ರತ್ಯಯನಗಳ ನಂತರ

ರಿಂದ :

ಬರಹ ಕನ್ನಡ	:	ತಮ್ಮನವರಿಂದ ಅವರಿಗೆ ಒಳ್ಳೆಯದಾಗಿದೆ.
ಲಿಂಗಾಯತ	:	ತಮ್ಮೋರಿಂದ ಅವ್‌ರಿಗೆ ವಳ್ಳೆಯದಾಗೈತಿ.
ನಾಯಕ	:	ತಮ್ನಾರಿಂದ ಅವ್ರಿಗೆ ವಳ್ಳೆದಾಗೈತಿ.
ಹರಿಜನ	:	ತಮ್ನಾರಿಂದ ಅವ್ರಿಗೆ ವಳ್ಳೆದಾಗೈತಿ.
ಬರಹ ಕನ್ನಡ	:	ಇಬ್ಬರಿಂದ ಆಗುವ ಕೆಲಸ ಅದು.
ಲಿಂಗಾಯತ	:	ಇಬ್ರಿಂದ ಆಗಾಕೆಲ್ಸ ಅದು.
ನಾಯಕ	:	ಇಬ್ರಿಂದ ಆಗಾಕೆಲ್ಸ ಅದು.
ಹರಿಜನ	:	ಇಬ್ರಿಂದ ಆಗಾಕೆಲ್ಸ ಅದು.

"ಚತುರ್ಥಿ ವಿಭಕ್ತಿ ಪ್ರತ್ಯಯ"

ಬರಹ ಕನ್ನಡ : ಗೆ

ಮಸ್ಕಿಕನ್ನಡ : ಅಗ, -ಗೆ, -ಇಗೆ, -ಕೆ

'ಗೆ' ಚತುರ್ಥಿ ವಿಭಕ್ತಿ ಪ್ರತ್ಯಯ ಮಾನವ ಏಕವಚನ ನಾಮಪ್ರಕೃತಿ, ಮಾನವೇತರ ನಾಮಪ್ರಕೃತಿ, ಪ್ರಥಮ ಪುರುಷ ಏಕವಚನ, ನಾಮ ಪ್ರಕೃತಿ, ಸಂಖ್ಯಾವಾಚಕ, ದಿಕ್ಕುಸೂಚಕಗಳ ನಂತರ ಸೇರುತ್ತದೆ.

ಮಾನವ ಏಕವಚನ ಪ್ರಕೃತಿನಂತರ

ಅಗ :

ಬರಹ ಕನ್ನಡ	:	ತಾಯಿಗೆ ಊಟಕ್ಕೆ ಕೊಡು.
ಲಿಂಗಾಯತ	:	ಅವ್ವಗ ಉಣ್ಣಾಕ ಕೊಡು.

ನಾಯಕ	:	ಅಪ್ಪುಗ ಉಣ್ಣಾಕ ಕ್ವಡು.
ಹರಿಜನ	:	ಅಪ್ಪುಗ ಉಣ್ಣಾಕ ಕ್ವಡು.

ಬರಹ ಕನ್ನಡ	:	ಅಣ್ಣನಿಗೆ ಕೊಟ್ಟಿದ್ದಾನೆ.
ಲಿಂಗಾಯತ	:	ಅಣ್ಣುಗ ಕೊಟ್ಟಾನ.
ನಾಯಕ	:	ಅಣ್ಣುಗ ಕ್ವಟ್ಟಾನ.
ಹರಿಜನ	:	ಅಣ್ಣುಗ ಕ್ವಟ್ಟಾನ.

ಬರಹ ಕನ್ನಡ	:	ಅಪ್ಪನಿಗೆ ನಿದ್ದೆ ಬರಲೇ ಇಲ್ಲ.
ಲಿಂಗಾಯತ	:	ಅಪ್ಪುಗ ನಿದ್ರಿ ಬರಲೇ ಇಲ್ಲ.
ನಾಯಕ	:	ಅಪ್ಪುಗ ನಿದ್ರಿ ಬರ್ಲೇ ಇಲ್ಲ.
ಹರಿಜನ	:	ಅಪ್ಪುಗ ನಿದ್ರಿ ಬರ್ಲೇ ಇಲ್ಲ.

ಇಗೆ : ಮಾನವೇತರ ನಾಮಪ್ರಕೃತಿ ನಂತರ

ಬರಹ ಕನ್ನಡ	:	ಬಸ್‌ಗೆ ಹೋಗುತ್ತೇನೆ.
ಲಿಂಗಾಯತ	:	ಬಸ್ಸಿಗೆ ಓತಿನಿ.
ನಾಯಕ	:	ಬಸ್ಸಿಗೆ ಓತಿನಿ.
ಹರಿಜನ	:	ಬಸ್ಸಿಗೆ ಓತಿನಿ.

ಬರಹ ಕನ್ನಡ	:	ಊರಿಗೆ ಹೋಗೋಣ.
ಲಿಂಗಾಯತ	:	ಊರಿಗೆ ವೋಗಾಮ.
ನಾಯಕ	:	ಊರ್ಗಿ ವೋಗಾಮ.
ಹರಿಜನ	:	ಊರ್ಗಿ ವೋಗಾಮ.

ಬರಹ ಕನ್ನಡ	:	ಅಡವಿಗೆ ಹೋಗಿ ಕಟ್ಟಿಗೆ ತಂದಿದ್ದಾರೆ.
ಲಿಂಗಾಯತ	:	ಅಡಿವಿಗೆ ವೋಗಿ ಕಟ್ಗಿ ತಂದಾರ.
ನಾಯಕ	:	ಅಡ್ವಿಗೆ ವೋಗಿ ಕಟ್ಗಿ ತಂದಾರ.
ಹರಿಜನ	:	ಅಡ್ವಿಗೆ ವೋಗಿ ಕಟ್ಗಿ ತಂದಾರ.

ಕ್ಕೆ : ಪ್ರಥಮ ಪುರುಷ ಏಕವಚನ ನಾಮಪ್ರಕೃತಿ ನಂತರ

ಬರಹ ಕನ್ನಡ : ಅದಕ್ಕೆ ನಾನು ಮನೆಕಡೆ ಬರುವುದಿಲ್ಲ ಅಂದೆ.
ಲಿಂಗಾಯತ : ಅದಕ್ಕೆ ನಾನ್ ಮನಿಕಡೆ ಬರಂಗಿಲ್ಲ ಅಂದದ್ದು.
ನಾಯಕ : ಅದಕ್ಕೆ ನಾನ್ ಮನಿಮಡಿ ಬರಂಗಿಲ್ಲ ಅಂದದ್ದು.
ಹರಿಜನ : ಅದಕ್ಕೆ ನಾನ್ ಮನಿಕಡಿ ಬರಂಗಿಲ್ಲ ಅಂದದ್ದು.

ಬರಹ ಕನ್ನಡ : ಇದಕ್ಕೆ ಏನಾದರೂ ತಿನ್ನುವುದಕ್ಕೆ ಹಾಕು.
ಲಿಂಗಾಯತ : ಇದಕ್ಕೆ ಏನಾರ ತಿನ್ನಾಕ ಆಕು.
ನಾಯಕ : ಇದಕ್ಕೆ ಏನಾರ ತಿಂಬಾಕ ಆಕು.
ಹರಿಜನ : ಇದಕ್ಕೆ ಏನಾರ ತಿಂಬಾಕ ಆಕು.

ಕ್ಕೆ : ಸಂಖ್ಯಾವಾಚಕಗಳ ನಂತರ

ಬರಹ ಕನ್ನಡ : ನೂರಕ್ಕೆ ನೂರುಕೊಡುತ್ತೇನೆ ಎಂದು ಹೇಳಿದ್ದ.
ಲಿಂಗಾಯತ : ನೂರಕ್ಕೆ ನೂರು ಕೊಡ್ತೀನಿ ಅಂತ ಅಂದಿದ್ದ.
ನಾಯಕ : ನೂರಕ್ಕೆ ನೂರು ಕೊಡ್ತಿನ್ನ ಅಂತ ಅಂದಿದ್ದ.
ಹರಿಜನ : ನೂರಕ್ಕೆ ನೂರು ಕೊಡ್ತಿನ್ನ ಅಂತ ಅಂದಿದ್ದ.

ಬರಹ ಕನ್ನಡ : ಒಂದಕ್ಕೆ ಐದು ರೂಪಾಯಿ ಅಂತೆ.
ಲಿಂಗಾಯತ : ವಂದಕ್ಕೆ ಅಯ್ದು ರೂಪಾಯಿ ಅಂಗ.
ನಾಯಕ : ವಂದಕ್ಕೆ ಅಯ್ದು ರುಪಾಯಿ ಅಂಗ.
ಹರಿಜನ : ವಂದಕ್ಕೆ ಅಯ್ದು ರುಪಾಯಿ ಅಂಗ.

ಕ್ಕೆ : ದಿಕ್ಕುಸೂಚಕಗಳ ನಂತರ

ಬರಹ ಕನ್ನಡ : ಕೆಳಕ್ಕೆ ಇಳಿದು ಹೋದ.
ಲಿಂಗಾಯತ : ಕೆಳಕ್ಕೆ ಇಳುದು ವೋದ.
ನಾಯಕ : ಕೆಳ್ಕೆ ಇಳುದು ವೋದ.
ಹರಿಜನ : ಕೆಳ್ಕೆ ಇಳುದು ವೋದ.

ಬರಹ ಕನ್ನಡ : ಬಲಕ್ಕೆ ತಿರುಗು.
ಲಿಂಗಾಯತ : ಬಲಕ್ಕೆ ತಿರುಗು.

ನಾಯಕ : ಬಲ್ಕೆ ತಿರ್ಗು.

ಹರಿಜನ : ಬಲ್ಕೆ ತಿರ್ಗು.

ಸ್ಥಳವಾಚಕ ನಾಮಪದಗಳಿಗೆ ಮಾತ್ರ 'ಗೆ' ಚತುರ್ಥಿ ವಿಭಕ್ತಿ ಪ್ರತ್ಯಯ ಪ್ರತ್ಯಯದೊಡನೆ ಸ್ವಚ್ಛಂದ ಪರಿಸರದಲ್ಲಿ ಬರುತ್ತದೆ.

ಬರಹ ಕನ್ನಡ : ಸಿಂಧನೂರಿಗೆ ಹೋಗುತ್ತೀಯಾ.

ಲಿಂಗಾಯತ : ಸಿಂಧನೂರು ಓತಿ.

ನಾಯಕ : ಸಿಂಧನೂರು ಓತಿ.

ಹರಿಜನ : ಸಿಂಧನೂರು ಓತಿ.

ಬರಹ ಕನ್ನಡ : ಬೆಂಗಳೂರಿಗೆ ಹೋಗುತ್ತೀಯಾ.

ಲಿಂಗಾಯತ : ಬೆಂಗಳೂರು ಓತಿ.

ನಾಯಕ : ಬೆಂಗ್ಳೂರು ಓತಿ.

ಹರಿಜನ : ಬೆಂಗ್ಳೂರು ಓತಿ.

"ಷಷ್ಠಿ ವಿಭಕ್ತಿ ಪ್ರತ್ಯಯ"

ಬರಹ ಕನ್ನಡ : 'ಅ'

ಮಸ್ಕಿಕನ್ನಡ : -ಅ, -ಇನ್, -ಆಕ, -ಅದ್, -ಅನ್

'ಅ' ಷಷ್ಠಿ ವಿಭಕ್ತಿ ಪ್ರತ್ಯಯ ಪ್ರಥಮ, ಉತ್ತಮ ಪುರುಷ ಏಕವಚನ, ಮಾನವೇತರ ನಾಮ ಪ್ರಕೃತಿ ಮತ್ತು ಸಂಬಂಧಸೂಚಕ ನಾಮಪ್ರಕೃತಿ ನಂತರ ಸೇರುತ್ತದೆ.

ಅ : ಉತ್ತಮ ಪುರುಷ ಏಕವಚನ ನಂತರ

ಬರಹ ಕನ್ನಡ : ನನ್ನ ಪೆನ್ನು.

ಲಿಂಗಾಯತ : ನನ್ ಪೆನ್ನು.

ನಾಯಕ : ನನ್ ಪೆನ್ನು.

ಹರಿಜನ : ನನ್ ಪೆನ್ನು.

ಬರಹ ಕನ್ನಡ : ನನ್ನ ಮನೆ.

ಲಿಂಗಾಯತ : ನನ್ ಮನಿ.

ನಾಯಕ : ನನ್ ಮನಿ.

ಹರಿಜನ : ನನ್ ಮನಿ.

ಮಧ್ಯಮ ಪುರುಷ ಏಕವಚನ ನಂತರ

ಬರಹ ಕನ್ನಡ : ನಿನ್ನ ಮಾತು ಸಾಕು.
ಲಿಂಗಾಯತ : ನಿನ್ ಮಾತ ಸಾಕು.
ನಾಯಕ : ನಿನ್ ಮಾತ ಸಾಕು.
ಹರಿಜನ : ನಿನ್ ಮಾತ ಸಾಕು.

ಬರಹ ಕನ್ನಡ : ನಿನ್ನ ಪಾಲಿಗೆ ಬಂದಿದ್ದನ್ನು ತೆಗೆದಿಕೋ.
ಲಿಂಗಾಯತ : ನಿನ್ ಪಾಲಿಗೆ ಬಂದದ್ದು ತಗಾ.
ನಾಯಕ : ನಿನ್ ಪಾಲ್ಗೆ ಬಂದದ್ದು ತಗಾ.
ಹರಿಜನ : ನಿನ್ ಪಾಲ್ಗೆ ಬಂದದ್ದು ತಗಾ.

ಪ್ರಥಮ ಪುರುಷ ಏಕವಚನ ನಂತರ

ಬರಹ ಕನ್ನಡ : ಅವನ ಮಾತನ್ನು ಕೇಳಿ ಕೆಟ್ಟೆನು.
ಲಿಂಗಾಯತ : ಅವನ್ ಮಾತ ಕೇಳಿ ಕೆಟ್ಟೆ.
ನಾಯಕ : ಅವ್ನ ಮಾತ ಕೇಳಿ ಕೆಟ್ಟೆ.
ಹರಿಜನ : ಅವ್ನ ಮಾತ ಕೇಳಿ ಕೆಟ್ಟೆ.

ಬರಹ ಕನ್ನಡ : ಅವನ ಜೊತೆ ಸೇರಿದ್ದಾನೆ.
ಲಿಂಗಾಯತ : ಅವನ್ ಜತಿ ಕೂಡ್ಯಾನ.
ನಾಯಕ : ಅವ್ನ ಜತಿ ಕೂಡ್ಯಾನ.
ಹರಿಜನ : ಅವ್ನ ಜತಿ ಕೂಡ್ಯಾನ.

ಇನ್ : ಮಾನವೇತರ ನಾಮ ಪ್ರಕೃತಿ ನಂತರ

ಬರಹ ಕನ್ನಡ : ಬಸ್ಸಿನ ಬಾಗಿಲು ಮುಚ್ಚು.
ಲಿಂಗಾಯತ : ಬಸ್ಸಿನ್ ಬಾಗ್ಲಿ ಮುಚ್ಚು.
ನಾಯಕ : ಬಸ್ಸಿನ್ ಬಾಗ್ಲಿ ಮುಚ್ಚು.
ಹರಿಜನ : ಬಸ್ಸಿನ್ ಬಾಗ್ಲಿ ಮುಚ್ಚು.

ಬರಹ ಕನ್ನಡ : ಕಾರಿನ ಒಳಗಡೆ ಕುಂತಿರು.
ಲಿಂಗಾಯತ : ಕಾರಿನ್ ವಳಗ ಕುಂದ್ರು.

ನಾಯಕ : ಕಾರಿನ್ ವಳ್ಗ ಕುಂದ್ರು.

ಹರಿಜನ : ಕಾರಿನ್ ವಳ್ಗ ಕುಂದ್ರು.

ಅಕ : ಉತ್ತಮ, ಮಧ್ಯಮ, ಪ್ರಥಮ ಪುರುಷ ಏಕವಚನ ನಾಮ ಪ್ರಕೃತಿ ನಂತರ

ಬರಹ ಕನ್ನಡ : ನನ್ನ ಹತ್ತಿರ ಪುಸ್ತಕ ಇದೆ.

ಲಿಂಗಾಯತ : ನನ್ನಾಕ ಪುಸ್ತ್ಗ ಅಯ್ತಿ.

ನಾಯಕ : ನನ್ನಾಕ ಪುಸ್ತ್ಗ ಅಯ್ತಿ.

ಹರಿಜನ : ನನ್ನಾಕ ಪುಸ್ತ್ಗ ಅಯ್ತಿ.

ಬರಹ ಕನ್ನಡ : ಅವನ ಹತ್ತಿರ ನೂರ ರೂಪಾಯಿ ಇದೆ.

ಲಿಂಗಾಯತ : ಅವನ್ನಾಕ ನೂರ್ ರುಪಾಯಿ ಅಯ್ತಿ.

ನಾಯಕ : ಅವನ್ನಾಕ ನೂರೂಪಾಯಿ ಅಯ್ತಿ.

ಹರಿಜನ : ಅವನ್ನಾಕ ನೂರೂಪಾಯಿ ಅಯ್ತಿ.

ಬರಹ ಕನ್ನಡ : ನಿನ್ನ ಹತ್ತಿರ ಏನು ಇದೆ.

ಲಿಂಗಾಯತ : ನಿನ್ನಾಕ ಏನು ಅಯ್ತಿ.

ನಾಯಕ : ನಿನ್ನಾಕ ಏನ್ನೈಯ್ತಿ.

ಹರಿಜನ : ನಿನ್ನಾಕ ಏನ್ನೈಯ್ತಿ.

'ಅನ್' ಸಂಬಂಧ ಸೂಚಕ ನಾಮಪ್ರಕೃತಿ ನಂತರ

ಬರಹ ಕನ್ನಡ : ತಮ್ಮನ ಕೈಯಲ್ಲಿ ಇದೆ.

ಲಿಂಗಾಯತ : ತಮ್ಮನ್ ಕೈಯಾಗ ಅಯ್ತಿ.

ನಾಯಕ : ತಮ್ಮನ್ ಕೈಯಾಗೈಯ್ತಿ.

ಹರಿಜನ : ತಮ್ಮನ್ ಕೈಯಾಗೈಯ್ತಿ.

ಬರಹ ಕನ್ನಡ : ಅಣ್ಣನ ಮಾತು ಕೇಳು.

ಲಿಂಗಾಯತ : ಅಣ್ಣನ್ ಮಾತ ಕೇಳು.

ನಾಯಕ : ಅಣ್ಣನ್ ಮಾತ ಕೇಳು.

ಹರಿಜನ : ಅಣ್ಣನ್ ಮಾತ ಕೇಳು.

''ಸಪ್ತಮಿ ವಿಭಕ್ತಿ ಪ್ರತ್ಯಯ''

ಬರಹ ಕನ್ನಡ : ಅಲ್ಲಿ

ಮಸ್ಕಿಕನ್ನಡ : -ಅಲ್ಲಿ, -ಆಳ, -ಅಕ್ಕ, -ಆಗ, -ಒಳು, -ಅನ್, -ಅನ, ಆಳ್, -ಎ

ಅಲ್ಲಿ, ಒಳಗೆ ಸಪ್ತಮಿ ವಿಭಕ್ತಿ ಪ್ರತ್ಯಯ ಮಾನವ ಮತ್ತು ಮಾನವೇತರ ಏಕವಚನ, ನಾಮಪ್ರಕೃತಿ, ದಿಕ್ಸೂಚಕ ನಾಮಪ್ರಕೃತಿ ನಂತರ ಸೇರುತ್ತವೆ.

ಅಲ್ಲಿ : ಮಾನವ ಮತ್ತು ಮಾನವೇತರ ನಾಮಪ್ರಕೃತಿ ನಂತರ

ಆಗ :

ಬರಹ ಕನ್ನಡ	:	ಅಕ್ಕನಲ್ಲಿ ಕೊಡು.
ಲಿಂಗಾಯತ	:	ಅಕ್ಕುತಾಗ ಕೊಡು.
ನಾಯಕ	:	ಅಕ್ಕುತಾಗ ಕ್ವಡು.
ಹರಿಜನ	:	ಅಕ್ಕುತಾಗ ಕ್ವಡು.

ಬರಹ ಕನ್ನಡ	:	ಮನೆಯಲ್ಲಿ ಬಹಳ ಜನ ಸೇರಿದ್ದಾರೆ.
ಲಿಂಗಾಯತ	:	ಮನ್ಯಾಗ ಬಾಳ ಮಂದಿ ಕಲ್ತಾರ.
ನಾಯಕ	:	ಮನ್ಯಾಗ ಬಾಳಾ ಮಂದಿ ಕಲ್ತಾರ.
ಹರಿಜನ	:	ಮನ್ಯಾಗ ಬಾಳಾ ಮಂದಿ ಕಲ್ತಾರ.

ಅಕ್ಕ :

ಬರಹ ಕನ್ನಡ	:	ನೆಲದಲ್ಲಿ ನೀರು ಚೆಲ್ಲಿದ್ದಾರೆ.
ಲಿಂಗಾಯತ	:	ನೆಲುಕ್ಕ ನೀರ್ ಚೆಲ್ಯಾರ.
ನಾಯಕ	:	ನ್ಯಲುಕ್ಕ ನೀರ್ ಚೆಲ್ಯಾರ.
ಹರಿಜನ	:	ನ್ಯಲುಕ್ಕ ನೀರ್ ಚೆಲ್ಯಾರ.

ಅಲ್ಲಿ :

ಬರಹ ಕನ್ನಡ	:	ಮಾತಿನಲ್ಲಿ ಎಲ್ಲವನ್ನು ಮುಗಿಸಿದ
ಲಿಂಗಾಯತ	:	ಮಾತನಲ್ಲಿ ಯಲ್ಲನ್ನ ಮುಗಿಸ್ದ
ನಾಯಕ	:	ಮಾತ್ನಲ್ಲಿ ಯಲ್ಲನ್ನು ಮುಗಿಸ್ದ
ಹರಿಜನ	:	ಮಾತ್ನಲ್ಲಿ ಯಲ್ಲನ್ನು ಮುಗಿಸ್ದ

ಒಳ : ಮಾನವೇತರ ಏಕವಚನ ನಾಮಪ್ರಕೃತಿ ನಂತರ

ಬರಹ ಕನ್ನಡ	:	ಮನೆಯೊಳಗಿನ ಜನರು ಎದ್ದು ಬಂದರು.
ಲಿಂಗಾಯತ	:	ಮನ್ಯಾಳ ಮಂದಿ ಯದ್ದು ಬಂದ್ರು.
ನಾಯಕ	:	ಮನ್ಯಾಳ ಮಂದಿ ಯದ್ದು ಬಂದ್ರು.
ಹರಿಜನ	:	ಮನ್ಯಾಳ ಮಂದಿ ಯದ್ದು ಬಂದ್ರು.

ಒಳ :

ಬರಹ ಕನ್ನಡ	:	ಊರೊಳೊಗಿನ ಜನರು ಸೇರಿದ್ದಾರೆ.
ಲಿಂಗಾಯತ	:	ಊರೊಳ ಮಂದಿ ಕಲ್ತಾರ.
ನಾಯಕ	:	ಊರೊಳ ಮಂದಿ ಕಲ್ತಾರ.
ಹರಿಜನ	:	ಊರೊಳ ಮಂದಿ ಕಲ್ತಾರ

ಆನ್ :

ಬರಹ ಕನ್ನಡ	:	ಮನೆಯೊಳಗಿನ ಕಸ ಹಾಗೇ ಇದೆ.
ಲಿಂಗಾಯತ	:	ಮನ್ಯಾನ್ ಕಸ ಅಂಗ ಅಯ್ತಿ.
ನಾಯಕ	:	ಮನ್ಯಾನ ಕಸ ಅಂಗ ಅಯ್ತಿ.
ಹರಿಜನ	:	ಮನ್ಯಾನ ಕಸ ಅಂಗ ಅಯ್ತಿ.

ಆನ :

ಬರಹ ಕನ್ನಡ	:	ಮನೆಯೊಳಗಿನ ಮಂಚ ತೆಗೆದರು.
ಲಿಂಗಾಯತ	:	ಮನ್ಯಾನ ಮಂಚ ತಗದ್ರು.
ನಾಯಕ	:	ಮನ್ಯಾನ ಮಂಚ ತಗುದ್ರು.
ಹರಿಜನ	:	ಮನ್ಯಾನ ಮಂಚ ತಗುದ್ರು.

ಆಳ್ :

ಬರಹ ಕನ್ನಡ	:	ಶಾಲೆಯೊಳಗಿನ ಹುಡುಗರು.
ಲಿಂಗಾಯತ	:	ಸಾಲ್ಯಾಳ್ ಉಡುಗ್ರು.
ನಾಯಕ	:	ಸಾಲ್ಯಾಳ್ ಉಡ್ರು.
ಹರಿಜನ	:	ಸಾಲ್ಯಾಳ್ ಉಡ್ರು.

'ಎ' ದಿಕ್ಕುಸೂಚಕ ನಾಮಪ್ರಕೃತಿಗಳ ನಂತರ

ಅಗ :

ಬರಹ ಕನ್ನಡ	:	ಹೊರಗೆ ಏನು ಇಲ್ಲ.
ಲಿಂಗಾಯತ	:	ವರ್ಗ ಏನು ಇಲ್ಲ.
ನಾಯಕ	:	ವರ್ಗ ಏನಿಲ್ಲ.
ಹರಿಜನ	:	ವರ್ಗ ಏನಿಲ್ಲ.

ಬರಹ ಕನ್ನಡ	:	ಮೇಲೆ ಇದೆ.
ಲಿಂಗಾಯತ	:	ಮ್ಯಾಗೆ ಅಯ್ತಿ.
ನಾಯಕ	:	ಮ್ಯಾಗ ಅಯ್ತಿ.
ಹರಿಜನ	:	ಮ್ಯಾಗ ಅಯ್ತಿ.

೪.೭. ವಿಭಕ್ತಿ ಪಲ್ಲಟ

ಪ್ರಕೃತಿಗೆ ಪ್ರತ್ಯಯಗಳು ಸೇರಿದಾಗ ಅವುಗಳು ವಿಶಿಷ್ಟಾರ್ಥವನ್ನು ಪಡೆದುಕೊಳ್ಳುತ್ತವೆ. ಕನ್ನಡದಲ್ಲಿ ಒಂದು ವಿಭಕ್ತಿಯ ಅರ್ಥದಲ್ಲಿ ಮತ್ತೊಂದು ಬಳಕೆ ಮಾಡುವುದಕ್ಕೆ ''ವಿಭಕ್ತಿ ಪಲ್ಲಟ'' ಎನ್ನುವರು. ಒಂದು ವಿಭಕ್ತಿ ಬೇರೊಂದು ವಿಭಕ್ತಿ ಪ್ರತ್ಯಯದ ಮೂಲಕ ಸೂಚಿಸಲ್ಪಟ್ಟರೆ 'ವಿಭಕ್ತಿ ಪಲ್ಲಟ'ವಾಗುತ್ತದೆಂದು ಪ್ರಾಚೀನ ವೈಯಾಣಿಕ ಅಭಿಪ್ರಾಯ. ಮಾತನಾಡುವಾಗ ನಾಮಪ್ರಕೃತಿಗಳಿಗೆ ಹಚ್ಚುವ ವಿಭಕ್ತಿ ಪ್ರತ್ಯಯಗಳು ಒಮ್ಮೊಮ್ಮೆ ಪಲ್ಲಟಗೊಳ್ಳುತ್ತವೆ. ಅಂದರೆ ಒಂದು ವಿಭಕ್ತಿಯ ಸ್ಥಳದಲ್ಲಿ ಇನ್ನೊಂದು ವಿಭಕ್ತಿಯನ್ನು ಉಪಯೋಗಿಸಿ ಮಾತನಾಡುತ್ತಿರುತ್ತೇವೆ. ವಿಭಕ್ತಿ ಪಲ್ಲಟ ಕನ್ನಡದಲ್ಲಿ ವಿಶಿಷ್ಟವಾಗಿ ನಿಲ್ಲುವುದನ್ನು ಗುರುತಿಸಬಹುದು. 'ವಿಭಕ್ತಿಪಲ್ಲಟ'ಕ್ಕೆ ಅನ್ಯಭಾಷಾ ಪ್ರಭಾವ, ಕನ್ನಡ ರಚನೆಯಲ್ಲಿಯೇ ಒಂದು ರೂಪಿನ ಪ್ರಭಾವ ಮತ್ತೊಂದಕ್ಕೆ ಪ್ರಾದೇಶಿಕ ಭಿನ್ನತೆ ಇತ್ಯಾದಿ ಹಲವಾರು ಕಾರಣಗಳಿರಬಹುದು. ಮಸ್ಕಿಕನ್ನಡದಲ್ಲಿ ವಿಭಕ್ತಿಪಲ್ಲಟಗೊಂಡು ಬಳಕೆಗೊಳ್ಳುವುದನ್ನು ನೋಡಬಹುದು. ಮಸ್ಕಿಕನ್ನಡದಲ್ಲಿ 'ದ್ವಿತೀಯ ವಿಭಕ್ತಿಗೆ' ಬದಲಾಗಿ 'ಷಷ್ಠಿ' ವಿಭಕ್ತಿ ದ್ವಿತೀಯ ವಿಭಕ್ತಿಗೆ ಬದಲಾಗಿ 'ಚತುರ್ಥಿ' ವಿಭಕ್ತಿ, 'ತೃತೀಯ' ವಿಭಕ್ತಿಗೆ ಬದಲಾಗಿ 'ಸಪ್ತಮಿ' ವಿಭಕ್ತಿ, 'ಚತುರ್ಥಿಗೆ' ಬದಲಾಗಿ 'ಸಪ್ತಮಿ', 'ಷಷ್ಠಿ'ಗೆ ಬದಲಾಗಿ 'ಚತುರ್ಥಿ', 'ಷಷ್ಠಿ'ಗೆ ಬದಲಾಗಿ 'ಸಪ್ತಮಿ', ವಿಭಕ್ತಿ ಸೇರುವುದನ್ನು ಗಮನಿಸಬಹುದು. ಈ ಪ್ರಕ್ರಿಯೆ ಮೂರು ಸಾಮಾಜಿಕ ವರ್ಗಗಳಲ್ಲೂ ಬಳಕೆಯಲ್ಲಿರುವುದನ್ನು ಕಾಣಬಹುದು. ವಿಭಕ್ತಿ ಪಲ್ಲಟ ಮಸ್ಕಿಕನ್ನಡದ ವೈಶಿಷ್ಟ್ಯ ಎನ್ನುವುದಕ್ಕೆ ಕೆಳಗಿನ ವಿಭಕ್ತಿ ಪಲ್ಲಟ ಆಗಿರುವುದನ್ನು ಗಮನಿಸಿ ತೀರ್ಮಾನಿಸಬಹುದು.

''ದ್ವಿತೀಯ'' ವಿಭಕ್ತಿಗೆ ಬದಲಾಗಿ ''ಷಷ್ಠಿ'' ವಿಭಕ್ತಿ ಬರುತ್ತದೆ.

೧.	ಬರಹ ಕನ್ನಡ	:	ಮನೆಯನ್ನು ಮಾರಿದರು.
	ಲಿಂಗಾಯತ	:	ಮನಿನ ಮಾರಿದರು.
	ನಾಯಕ	:	ಮನಿನ ಮಾರಿದ್ರು.
	ಹರಿಜನ	:	ಮನಿನ ಮಾರಿದ್ರು.
೨.	ಬರಹ ಕನ್ನಡ	:	ಬಂಡಿಯನ್ನು ಹತ್ತಿದನು.
	ಲಿಂಗಾಯತ	:	ಬಂಡಿನ ಅತ್ತಿದನು.
	ನಾಯಕ	:	ಬಂಡಿನ ಅತ್ತಿದನು.
	ಹರಿಜನ	:	ಬಂಡಿನ ಅತ್ತಿದನು.

೩. ಬರಹ ಕನ್ನಡ : ಶಾಲೆಯನ್ನು ಸೇರಿದೆ.
ಲಿಂಗಾಯತ : ಸ್ಕಾಲಿನ ಸೇರಿದೆ.
ನಾಯಕ : ಸ್ಕಾಲಿನ ಸೇರ್ದೆ
ಹರಿಜನ : ಸ್ಕಾಲಿನ ಸೇರ್ದೆ.

''ದ್ವಿತೀಯ'' ವಿಭಕ್ತಿಗೆ ಬದಲಾಗಿ ''ಚತುರ್ಥಿ'' ವಿಭಕ್ತಿ ಬರುತ್ತದೆ.

೧. ಬರಹ ಕನ್ನಡ : ಚಿಕ್ಕಮ್ಮನನ್ನು ಮನೆಗೆ ಕರೆ.
ಲಿಂಗಾಯತ : ಚಿಗಮಗೆ ಮನಿಗೆ ಕರಿ.
ನಾಯಕ : ಸಣಮ್ಗೆ ಮನ್ಗಿ ಕರಿ.
ಹರಿಜನ : ಸಣಮ್ಗೆ ಮನ್ಗಿ ಕರಿ.

೨. ಬರಹ ಕನ್ನಡ : ಅವನನ್ನು ಬರುವುದಕ್ಕೆ ಹೇಳು
ಲಿಂಗಾಯತ : ಅವುನಗೆ ಬರಾಕ ಯೇಳು.
ನಾಯಕ : ಅವುನ್ಗೆ ಬರಾಕ ಯೇಳು.
ಹರಿಜನ : ಅವುನ್ಗೆ ಬರಾಕ ಯೇಳು.

೩. ಬರಹ ಕನ್ನಡ : ಮಾವನನ್ನು ಕಳುಹಿಸು.
ಲಿಂಗಾಯತ : ಮಾವಗೆ ಕಳುಸು.
ನಾಯಕ : ಮಾವ್ಗ ಕಳ್ಸು.
ಹರಿಜನ : ಮಾವ್ಗ ಕಳ್ಸು

''ತೃತೀಯ'' ವಿಭಕ್ತಿಗೆ ಬದಲಾಗಿ ''ಸಪ್ತಮಿ'' ವಿಭಕ್ತಿ ಬರುತ್ತದೆ.

೧. ಬರಹ ಕನ್ನಡ : ಕೊಡಲಿಯಿಂದ ಕಡಿದನು.
ಲಿಂಗಾಯತ : ಕೊಡ್ಲ್ಯಾಗ ಕಡುದ.
ನಾಯಕ : ಕ್ವಡ್ಲ್ಯಾಗ ಕಡುದ.
ಹರಿಜನ : ಕ್ವಡ್ಲ್ಯಾಗ ಕಡುದ.

೨. ಬರಹ ಕನ್ನಡ : ನಳದಿಂದ ನೀರು ಬಂತು.
ಲಿಂಗಾಯತ : ನಳದಾಗ ನೀರ್ ಬಂತು.
ನಾಯಕ : ನಳ್ದಾಗ ನೀರ್ ಬಂತು.
ಹರಿಜನ : ನಳ್ದಾಗ ನೀರ್ ಬಂತು.

೩. ಬರಹ ಕನ್ನಡ : ಕಲ್ಲಿನಿಂದ ಹೊಡೆದನು.
ಲಿಂಗಾಯತ : ಕಲ್ಲಿಲೆ ವಡುದ.

ನಾಯಕ	:	ಕಲ್ಲಿಲೆ ವಡುದ.
ಹರಿಜನ	:	ಕಲ್ಲಿಲೆ ವಡುದ

"ಷಷ್ಠಿ"ಗೆ ಬದಲಾಗಿ "ಚತುರ್ಥಿ" ಬರುತ್ತದೆ.

೧. ಬರಹ ಕನ್ನಡ	:	ಮನೆಯ ಯಜಮಾನ.
ಲಿಂಗಾಯತ	:	ಮನ್ಗಿ ಯಜಮಾನ.
ನಾಯಕ	:	ಮನ್ಗಿ ಯಜಮಾನ.
ಹರಿಜನ	:	ಮನ್ಗಿ ಯಜಮಾನ.
೨. ಬರಹ ಕನ್ನಡ	:	ನಮ್ಮ ಗುರುಗಳು.
ಲಿಂಗಾಯತ	:	ನಮ್ಗ ಗುರುಗುಳು.
ನಾಯಕ	:	ನಮ್ಗ ಗುರುಗುಳು.
ಹರಿಜನ	:	ನಮ್ಗ ಗುರುಗಳು.

"ಷಷ್ಠಿ"ಗೆ ಬದಲಾಗಿ "ಸಪ್ತಮಿ" ಬರುತ್ತದೆ.

೧. ಬರಹ ಕನ್ನಡ	:	ನೆಲದ ಮೇಲೆ ಇಡು.
ಲಿಂಗಾಯತ	:	ನಲ್ದಾಗ ಇಡು.
ನಾಯಕ	:	ನ್ಯಲ್ದಾಗ ಇಡು.
ಹರಿಜನ	:	ನ್ಯಲ್ದಾಗ ಇಡು.
೨. ಬರಹ ಕನ್ನಡ	:	ನನ್ನಹತ್ತಿರ ಇದೆ.
ಲಿಂಗಾಯತ	:	ನನ್ತಾಕ ಅಯ್ತಿ.
ನಾಯಕ	:	ನನ್ತಾಕ ಅಯ್ತಿ.
ಹರಿಜನ	:	ನನ್ತಾಕ ಅಯ್ತಿ.
೩. ಬರಹ ಕನ್ನಡ	:	ಗಿಡದ ಮೇಲೆ ಕುಳಿತ್ತಿದ್ದಾನೆ.
ಲಿಂಗಾಯತ	:	ಗಿಡದಾಗ ಕುಂತಾನ.
ನಾಯಕ	:	ಗಿಡ್ದಾಗ ಕುಂತಾನ.
ಹರಿಜನ	:	ಗಿಡ್ದಾಗ ಕುಂತಾನ.

"ಸಪ್ತಮಿ"ಗೆ ಬದಲಾಗಿ "ಚತುರ್ಥಿ" ವಿಭಕ್ತಿ ಬರುತ್ತದೆ.

೧. ಬರಹ ಕನ್ನಡ	:	ಕೆರೆಯಲ್ಲಿ ಬಿದ್ದರು.
ಲಿಂಗಾಯತ	:	ಕೆರ್ಯಾಗ ಬಿದ್ರು.
ನಾಯಕ	:	ಕ್ಯರ್ಯಾಗ ಬಿದ್ರು.
ಹರಿಜನ	:	ಕ್ಯರ್ಯಾಗ ಬಿದ್ರು.

೨. ಬರಹ ಕನ್ನಡ : ನೀರಿನಲ್ಲಿ ಹಾಕು.
ಲಿಂಗಾಯತ : ನೀರಾಗ ಆಕು.
ನಾಯಕ : ನೀರಾಗ ಆಕು.
ಹರಿಜನ : ನೀರಾಗ ಆಕು.

೩. ಬರಹ ಕನ್ನಡ : ಮನೆಯಲ್ಲಿ ಇರು.
ಲಿಂಗಾಯತ : ಮನ್ಯಾಗ ಇರು
ನಾಯಕ : ಮನ್ಯಾಗ ಇರು
ಹರಿಜನ : ಮನ್ಯಾಗ ಇರು.

ಮಸ್ಕಿಕನ್ನಡದ ವಾಕ್ಯದಲ್ಲಿ ಬರುವ ನಾಮಪದಗಳೊಂದಿಗೆ ಒಂದು ವಿಭಕ್ತಿಯ ಬದಲು ಇನ್ನೊಂದು ವಿಭಕ್ತಿಯನ್ನು ಬಳಸಿರುವುದನ್ನು ಮೇಲಿನ ಉದಾಹರಣೆಗಳಿಂದ ಗಮನಿಸಬಹುದಾಗಿದೆ. ಇದನ್ನೇ 'ವಿಭಕ್ತಿ ಪಲ್ಲಟ' ಎನ್ನಬಹುದು. ಮಸ್ಕಿಕನ್ನಡದಲ್ಲಿ ವಿಭಕ್ತಿ ಪಲ್ಲಟವನ್ನು ವಿಶಿಷ್ಟ ರೀತಿಯಲ್ಲಿ ಬಳಕೆಯಾಗುವುದನ್ನು ಗಮನಿಸಬಹುದು

೪.೮. ಕ್ರಿಯಾಪದ

ಒಂದು ಕ್ರಿಯೆಯನ್ನು, ಸ್ಥಿತಿಯನ್ನು, ಘಟನೆಯನ್ನು ಸೂಚಿಸುವ ಪದವನ್ನು ಕ್ರಿಯಾಪದವೆನ್ನುವರು. ಅದು ಸಾಮಾನ್ಯವಾಗಿ ಕರ್ತೃವಿನ ಕೆಲಸವನ್ನು ಹೇಳುತ್ತದೆ. ಕನ್ನಡದಲ್ಲಿ ಇದು ವಾಕ್ಯದ ಕೊನೆಯಲ್ಲಿ ಬರುತ್ತದೆ. ಇವು ವಾಕ್ಯದ ಬಹುಮುಖ್ಯ ಅಂಗಗಳಾಗಿ ಕೇಂದ್ರಾರ್ಥವನ್ನು ಸೂಚಿಸುತ್ತದೆ. ಕ್ರಿಯಾಪದಗಳು ಪ್ರತ್ಯಯಗಳಿಂದ ಕೂಡಿರುತ್ತವೆ ಇದರ ಮೂಲರೂಪವನ್ನು ಧಾತು ಎನ್ನುತ್ತಾರೆ. ಕ್ರಿಯೆಯನ್ನು ಸೂಚಿಸುವ ಆದರೆ ಪ್ರತ್ಯಯ ರಹಿತವಾದ ರೂಪವನ್ನು ಧಾತು ಅಥವಾ ಕ್ರಿಯಾ ಪ್ರಕೃತಿ ಎಂದೂ ಕರೆಯಲಾಗುತ್ತದೆ. ಧಾತು ಹಾಗೂ ಇತರೆ (ಕಾಲ, ಆಖ್ಯಾತ) ಪ್ರತ್ಯಯಗಳು ಸೇರಿ ಕ್ರಿಯಾಪದಗಳೆನಿಸಿಕೊಳ್ಳುತ್ತವೆ.

ಮಸ್ಕಿಕನ್ನಡದಲ್ಲಿ ಕ್ರಿಯಾಪದಗಳು 'ಉ' ಕಾರಾಂತವಾಗಿರುತ್ತವೆ. ಕ್ರಿಯಾಪದಗಳು ಕಾಲವಾಚಕ ಮತ್ತು ಪುರುಷವಾಚಕ ಪ್ರತ್ಯಯಗಳನ್ನು ತೆಗೆದುಕೊಂಡಾಗ ಅವು ಪೂರ್ಣಕ್ರಿಯಾಪದಗಳು ಎನಿಸಿಕೊಳ್ಳುತ್ತವೆ. ಕಾಲವಾಚಕ ಪ್ರತ್ಯಯಗಳು ತಮ್ಮದೇ ಆದ ಪ್ರತ್ಯಯಗಳನ್ನು ಪಡೆದುಕೊಂಡಿವೆ.

೪.೮.೧. ಕ್ರಿಯಾಪ್ರಕೃತಿಗಳು

ಮೂಲದ್ರಾವಿಡದ ಕ್ರಿಯಾಧಾತುಗಳೆಲ್ಲ ಏಕಾಕ್ಷರಿಗಳಾಗಿಯೇ ಇದ್ದಿರಬೇಕೆಂದು ಕಲ್ಪನೆಯನ್ನು ಹೆಚ್ಚಿನ ವಿದ್ವಾಂಸರು ಹೇಳಿದ್ದಾರೆ. ಇವುಗಳಲ್ಲಿ ಕೆಲವು ಮಸ್ಕಿಕನ್ನಡದಲ್ಲಿ ಅಕ್ಷರರೂಪದ ಮಟ್ಟಿಗೆ ಯಾವ ಬದಲಾವಣೆಗಳಿಗೂ ಒಳಗಾಗದೆ ಏಕಾಕ್ಷರಿಗಳಾಗಿಯೇ ಉಳಿದಿರುವುದು ಕಾಣಿಸುತ್ತದೆ.

ಬರಹ ಕನ್ನಡ	ಮಸ್ಕಿಕನ್ನಡ
ಉಣ್ಣು	ಉಣ್
ಕೊಲ್ಲು	ಕೊಲ್/ಕ್ವಲ್
ಕುಯ್ಯಿ	ಕೊಯ್/ಕ್ವಯ್
ಕೇಳು	ಕೇಳ್
ಓಡು	ಓಡ್
ತಾಳು	ತಾಳ್
ತೂಗು	ತೂಗ್
ಬಯ್ಯು	ಬಯ್

ಬರಹ ಕನ್ನಡದ ಸ್ವರಾಂತ್ಯ ಪದಗಳು ವ್ಯಂಜನಾಂತಗಳಾಗಿ ಮಸ್ಕಿಕನ್ನಡದಲ್ಲಿ ಬಳಕೆಯಲ್ಲಿವೆ. ಬರಹ ಕನ್ನಡದ ನಾಮಪ್ರಕೃತಿಗಳು ಮಸ್ಕಿಕನ್ನಡದಲ್ಲಿ ಸಾಕಷ್ಟು ಬಳಕೆಯಲ್ಲಿವೆ. ಹೆಚ್ಚು ಪದಗಳು ಧ್ವನಿಹಂತದಲ್ಲಿ ಪರಿವರ್ತನೆಯಾಗಿ ಬಳಕೆಯಲ್ಲಿವೆ. ಮಸ್ಕಿಕನ್ನಡದಲ್ಲಿ ವಿವಿಧ ಪ್ರತ್ಯಯಗಳನ್ನು ಹೊಂದಿ ಪ್ರತಿನಿತ್ಯ ಕ್ರಿಯಾಪದಗಳನ್ನು ಬಳಸುತ್ತಾರೆ.

ಇಂತಹ ಪರಿವರ್ತನೆಯನ್ನು ಮೂರು ಸಾಮಾಜಿಕ ವರ್ಗದಲ್ಲಿ ಕಾಣುತ್ತೇವೆ. ಮಸ್ಕಿಕನ್ನಡದಲ್ಲಿ ಕ್ರಿಯಾಪದಗಳು ಬರಹಕನ್ನಡಕ್ಕಿಂತ ಬೇರೆಯಾಗಿ ಕಾಣಿಸುತ್ತವೆ. ಕ್ರಿಯೆಯು ಪೂರ್ಣವಾಗಿರುವಂತಹ ಕ್ರಿಯಾಪದಗಳನ್ನು ನಾವು ನೋಡುವುದಾದರೆ ಅವುಗಳು ಭಿನ್ನರೀತಿಯಲ್ಲಿವೆ.

ಬರಹ ಕನ್ನಡ	ಮಸ್ಕಿಕನ್ನಡ	ವ್ಯತ್ಯಾಸ
ಆಗುತ್ತದೆ	ಆಗತ್ತಾದ	ಅದೆ>ಆದ
ಆಡುತ್ತವೆ	ಆಡ್ತಾದ	ಅದೆ>ಆದ
ಕೇಳುತ್ತದೆ	ಕೇಳ್ತಾದ	ಅದೆ>ಆದ
ಕುಡಿಯುತ್ತದೆ	ಕುಡಿತಾದ	ಅದೆ>ಆದ
ಹೋಗುತ್ತದೆ	ಓತಾದ	ಅದೆ>ಆದ

ಕ್ರಿಯೆಯು ಪೂರ್ಣಗೊಂಡಿರುವ ಕ್ರಿಯಾಪದಗಳು ಮಸ್ಕಿಕನ್ನಡದಲ್ಲಿ 'ಆದ' ಪ್ರತ್ಯಯವನ್ನು ಹೊಂದಿರುತ್ತದೆ. ಇದು ಬರಹ ಕನ್ನಡದ 'ಅದೆ' ಪ್ರತ್ಯಯಕ್ಕೆ ಸಮನಾಗಿ ಬಳಕೆಯಲ್ಲಿದೆ. ಈ ಪರಿವರ್ತನೆಯು ಮೂರು ಸಾಮಾಜಿಕ ವರ್ಗಗಳಲ್ಲಿ ಗಮನಿಸಬಹುದು. ಕೆಲ ಪದಗಳು ವಿಜಾತೀಯ ಸಂಯುಕ್ತಾಕ್ಷರ ಪದವಾಗಿಯೂ ಬಳಕೆಯಲ್ಲಿವೆ. ಬರಹ ಕನ್ನಡದಲ್ಲಿ ಪದದ ಪದದಲ್ಲಿರುವ ಎರಡನೇ 'ಉ' ಸ್ವರವು ಲೋಪಗೊಂಡು 'ತ' ಕಾರ ಪದದಲ್ಲಿರುವ 'ಅ' ಸ್ವರವು ದೀರ್ಘ ಸ್ವರ 'ಆ'ವಾಗಿ 'ಆಗ್ತಾದ', 'ಆಡ್ತಾದ' ಎಂದು ಬಳಕೆಗೊಳ್ಳುವುದು.

೪.೮.೨. ಅಕರ್ಮಕ ಕ್ರಿಯಾಪದ

ಕರ್ಮಪದ ಅಪೇಕ್ಷೆಯಿಲ್ಲದೆ ಬಳಕೆಯಾಗುವ ಧಾತುಗಳು 'ಅಕರ್ಮಕ' ಧಾತುಗಳು ಆಗಿದ್ದು ಇವು ಮಸ್ಕಿಕನ್ನಡದಲ್ಲಿ ಉಚ್ಚಾರಗೊಳ್ಳುವ ಬಗೆಯನ್ನು ಬರಹ ಕನ್ನಡ ಹೋಲಿಕೆ ಮಾಡುವುದರೊಂದಿಗೆ ಬದಲಾದ ಪ್ರಕ್ರಿಯೆಯನ್ನು ತಿಳಿಯಬಹುದಾಗಿದೆ.

ಬರಹ ಕನ್ನಡ	ಮಸ್ಕಿಕನ್ನಡ
ಇಳಿ	ಇಳಿ
ಉಣ್ಣು	ಉಣ್
ಓಡು	ವೋಡ್
ಕೂಡು	ಕುಂದ್ರು
ತೀಡು	ತಿಕ್ಕು
ತೊಡು	ತ್ವಟ್ಗ
ದಬ್ಬು	ಅದುಮು
ನಡೆ	ನಡಿ
ನಿಲ್ಲು	ನಿಂದ್ರು
ಬದುಕು	ಬದ್ಕು
ಮಲಗು	ಮಲ್ಕ

ಮಸ್ಕಿಕನ್ನಡದಲ್ಲಿ 'ಉ' ಕಾರ ಅಂತ್ಯಗೊಂಡ ಅಕರ್ಮಕ ಕ್ರಿಯಾಪದಗಳನ್ನು ಹೆಚ್ಚಾಗಿ ಕಾಣುತ್ತೇವೆ. ಬರಹ ಕನ್ನಡದಲ್ಲಿ ಮೂರಕ್ಷರದ ಪದಗಳು ಎರಡಕ್ಷರದವುಗಳಾಗಿ ಹಾಗೂ ಕೆಲವೊಂದು ಪದಗಳು ವಿಜಾತೀಯ ಸಂಯುಕ್ತಾಕ್ಷರವಾಗಿಯೂ ಬಳಕೆಯಲ್ಲಿವೆ. ನಾಮಪದಗಳಲ್ಲಿ ಇರುವ ಹಾಗೆನೇ ಪದಾಂತ್ಯದಲ್ಲಿ ಬರುವ ಬರಹ ಕನ್ನಡದ 'ಎ' ಕಾರವು ಮಸ್ಕಿಕನ್ನಡದಲ್ಲಿ 'ಇ' ಕಾರಾಂತವಾಗಿಯು 'ಅಕರ್ಮಕ ಕ್ರಿಯಾಪದ'ಗಳು ಬಳಕೆಗೊಳ್ಳುತ್ತವೆ.

೪.೮.೩. ಸಮಕರ್ಮಕ ಕ್ರಿಯಾಪದ

ಕರ್ಮವನ್ನು ಅಪೇಕ್ಷಿಸುವ ಧಾತುಗಳು 'ಸಕರ್ಮಕ ಧಾತು'ಗಳಾಗಿದ್ದು ಇವು ಮಸ್ಕಿಕನ್ನಡದಲ್ಲಿ ಬರಹ ಕನ್ನಡಕ್ಕಿಂತ ಭಿನ್ನವಾಗಿ ಬಳಕೆಗೊಳ್ಳುವುದನ್ನು ನೋಡುತ್ತೇವೆ.

ಬರಹ ಕನ್ನಡ	ಮಸ್ಕಿಕನ್ನಡ
ಅಬ್ಬರಿಸು	ಅಬ್ಬರ್ಸು
ಅಳಿಸು	ಅಳ್ಸು
ಗಮನಿಸು	ಗಮನ್ಸು

ಬದುಕಿಸು	ಬದುಕ್ಸು
ಬೆಳೆಯಿಸು	ಬೆಳ್ಸು
ಸೂಚಿಸು	ಸೂಚ್ಸು
ಹಾರಿಸು	ಆರ್ಸು

ಮಸ್ಕಿಕನ್ನಡದಲ್ಲಿ ಸಕರ್ಮಕ ಕ್ರಿಯಾಪದಗಳು ಹೆಚ್ಚಾಗಿ ವಿಜಾತೀಯ ಸಂಯುಕ್ತಾಕ್ಷರಗಳಾಗಿ ಬಳಕೆಗೊಳ್ಳುತ್ತವೆ. ಮೂರಕ್ಷರದ ಪದಗಳು ದ್ವಿತ್ವಕ್ಷರವಾಗಿ ನಾಲ್ಕಕ್ಷರದ ಪದಗಳು ಮೂರಕ್ಷರದವುಗಳಾಗಿ ಮಾರ್ಪಡುತ್ತವೆ.

ಮೂಲದ್ರಾವಿಡದಲ್ಲಿ ಬರುವ ನಾಮಪ್ರಕೃತಿ ಇಲ್ಲವೇ ಕ್ರಿಯಾಪ್ರಕೃತಿಗಳಲ್ಲಿ ಬೇರೆ ಬೇರೆ ರೀತಿಯ ರೂಪಭೇದ ಕಾಣಿಸಿಕೊಳ್ಳಲು ಸಾಧ್ಯವಿದೆಯೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಪ್ರಕೃತಿಗಳ ಎದುರು ಸ್ವರಾದಿಯಾದ ಪ್ರತ್ಯಯಗಳು ಬಂದಾಗ ಅವಕ್ಕೆ ಪೂರ್ವದಲ್ಲಿರುವ ದೀರ್ಘಸ್ವರವು ಹ್ರಸ್ವಸ್ವರವಾಗುವುದರ ಮೂಲಕ ಸಿದ್ಧವಾಗುವ ರೂಪಭೇದ.[7] ಈ ರೀತಿಯಾದ ರೂಪಭೇದ ಮಸ್ಕಿಕನ್ನಡದಲ್ಲೂ ಕಾಣಿಸುತ್ತಿದ್ದು ಅವಕ್ಕೆ ಈ ಕೆಳಗಿನ ಪ್ರಕೃತಿಗಳನ್ನು ಉದಾಹರಣೆಯನ್ನಾಗಿ ಕೊಡಬಹುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ	ವ್ಯತ್ಯಾಸ
ಕೀರು	ಕಿರುಚು	ಕಿರ್ಚು	ಕಿರ್ಚು	ಈ>ಇ>ಇ>ಇ
ಕೀಳು	ಕಿತ್ತು	ಕಿತ್ಗ	ಕಿತ್ಗ	ಈ>ಇ>ಇ>ಇ
ತೀಡು	ತಿಕ್ಕು	ತಿಕ್ಕು	ತಿಕ್ಕು	ಈ>ಇ>ಇ>ಇ
ಬೀಸು	ಬಿಸಾಕು	ಬಿಸಾಕು	ಬಿಸಾಕು	ಈ>ಇ>ಇ>ಇ
ತಾಗು	ತಗಲು	ತಗ್ಲು	ತಗ್ಲು	ಈ>ಇ>ಇ>ಇ
ಚೀಪು	ಜಿಬಕ	ಜಿಬಕ	ಜಿಬಕ	ಈ>ಇ>ಇ>ಇ

ಬರಹ ಕನ್ನಡದ ಪದದ ಪದಾಂತ್ಯ ಸ್ವರವು 'ಉ' ಕಾರವಿದ್ದಾಗ ಈ ಪರಿವರ್ತನೆ ಸಂಭವಿಸಿರುವುದನ್ನು ನೋಡುತ್ತೇವೆ. ಈ ಮೇಲಿನ ಉದಾಹರಣೆಯಿಂದ ಮಸ್ಕಿ ಕನ್ನಡವು ಮೂಲ ದ್ರಾವಿಡದ ಅಂಶವನ್ನು ಉಳಿಸಿಕೊಂಡಿದೆ ಎಂತಲೂ ಹೇಳಬಹುದು. ಮೂರು ಸಾಮಾಜಿಕ ವರ್ಗಗಳಲ್ಲಿ ಈ ಮೇಲಿನ ಅಂಶವನ್ನು ಕಾಣಬಹುದು.

೪.೯. ಕಾಲಸೂಚಕ ಪ್ರತ್ಯಯಗಳು

ಮಸ್ಕಿಕನ್ನಡದಲ್ಲಿ ವರ್ತಮಾನ, ಭೂತ, ಭವಿಷತ್ ಕಾಲಕ್ಕೆ ಬೇರೆ ಬೇರೆ ಕಾಲಸೂಚಕ ಪ್ರತ್ಯಯಗಳಿರುವುದು ಕಂಡುಬರುತ್ತದೆ. ಮೂರು ಸಾಮಾಜಿಕ ವರ್ಗಗಳಾದ ಲಿಂಗಾಯತ, ನಾಯಕ ಮತ್ತು ಹರಿಜನರಲ್ಲಿ ಒಂದೇ ರೀತಿಯ ಕಾಲಸೂಚಕ ಪ್ರತ್ಯಯಗಳು ಬಳಕೆ ಇದ್ದು ಬರಹ ಕನ್ನಡಕ್ಕಿಂತ ಭಿನ್ನವಾಗಿರುವುದನ್ನು ನೋಡಬಹುದಾಗಿದೆ.

೪.೯.೧. ವರ್ತಮಾನ ಸೂಚಕ ಪ್ರತ್ಯಯ ಧಾತು ಆಡು

ಬರಹ ಕನ್ನಡ	ಏಕವಚನ	ಬಹುವಚನ
ಉತ್ತಮ ಪುರುಷ	ಆಡುತ್ತೇನೆ	ಆಡುತ್ತೇವೆ
ಮಧ್ಯಮ ಪುರುಷ	ಆಡುತೀಯೆ	ಆಡುತೀ
ಪ್ರಥಮ ಪುರುಷ (ಪುಲ್ಲಿಂಗ)	ಆಡುತ್ತಾನೆ	ಆಡುತ್ತಾರೆ
(ಸ್ತ್ರೀಲಿಂಗ)	ಆಡುತ್ತಾಳೆ	ಆಡುತ್ತಾರೆ
(ನಪುಂಸಕ ಲಿಂಗ)	ಆಡುತ್ತದೆ	ಆಡುತ್ತವೆ

ಮಸ್ಕಿಕನ್ನಡ	ಏಕವಚನ	ಬಹುವಚನ
ಉತ್ತಮ ಪುರುಷ	ಆಡತೀನಿ	ಆಡತೀರಾ
ಮಧ್ಯಮ ಪುರುಷ	ಅಡತೀಯಾ	ಆಡತೀರಾ
ಪ್ರಥಮ ಪುರುಷ (ಪುಲ್ಲಿಂಗ)	ಆಡ್ತಾನ	ಆಡ್ತಾರ
(ಸ್ತ್ರೀಲಿಂಗ)	ಆಡ್ತಾಳ	ಆಡ್ತಾರ
(ನಪುಂಸಕ ಲಿಂಗ)	ಆಡ್ತಾದ	ಆಡ್ತಾವು

ಬರಹ ಕನ್ನಡದ ವರ್ತಮಾನ ಕಾಲಸೂಚಕ ಪ್ರತ್ಯಯ 'ಆಡುತ್ತೇನೆ' ಎಂಬುವುದು ಮಸ್ಕಿಕನ್ನದಲ್ಲಿ ಮೂರು ಸಾಮಾಜಿಕ ವರ್ಗಗಳಲ್ಲಿ ಒಂದೇ ರೀತಿಯಲ್ಲಿ ಪ್ರಯೋಗಗೊಳ್ಳುತ್ತಿದ್ದು ಬರಹ ಕನ್ನಡಕ್ಕಿಂತ ಬೇರೆಯಾಗಿ ಬಳಕೆಗೊಳ್ಳುತ್ತಿದೆ.

ಉತ್ತಮ ಪುರುಷ ಏಕವಚನ 'ಆಡುತ್ತೇನೆ' ಕಾಲಸೂಚಕ ಪ್ರತ್ಯಯ ಎಂಬಲ್ಲಿಯ 'ಉತ್ತ' ಇದು ಮಸ್ಕಿಕನ್ನಡದಲ್ಲಿ 'ಅತ್' ಎಂದು ಪ್ರಯೋಗಗೊಂಡು 'ಆಡತೀನಿ' ಎಂದು ಬಳಕೆಯಲ್ಲಿರುತ್ತದೆ. ಬಹುವಚನದಲ್ಲಿಯೂ 'ಅತ್' ಎನ್ನುವ ರೂಪದೊಂದಿಗೆ 'ಆಡತೀರಾ' ಬಳಕೆಯಲ್ಲಿದೆ. ಮಧ್ಯಮ ಪುರುಷದಲ್ಲಿ 'ಆಡತೀಯ' ಎಂದು ಏಕವಚನದಲ್ಲಿ 'ಆಡತೀರಾ' ಎಂದು ಬಹುವಚನದಲ್ಲಿ ಪ್ರಥಮ ಪುರುಷ ಪುಲ್ಲಿಂಗ 'ಆಡ್ತಾನ', ಏಕವಚನದಲ್ಲಿ, ಸ್ತ್ರೀಲಿಂಗದಲ್ಲಿ 'ಆಡ್ತಾಳ' ಏಕವಚನದಲ್ಲಿ 'ಆಡ್ತಾರ' ಎಂದು ಬಹುವಚನ ಪುಲ್ಲಿಂಗ ಸ್ತ್ರೀಲಿಂಗಗಳಲ್ಲಿ ವ್ಯತ್ಯಾಸಗೊಳ್ಳದೆ ಬಳಕೆಯಲ್ಲಿದೆ. ನಪುಂಸಕಲಿಂಗದಲ್ಲಿ 'ಅತ್' ಕಾಲಸೂಚಕ ಪ್ರತ್ಯಯ ಏಕವಚನದಲ್ಲಿ 'ಆಡ್ತಾದ' ಬಹುವಚನದಲ್ಲಿ 'ಆಡ್ತಾವು' ಎಂಬುದಾಗಿ ಪ್ರಯೋಗದಲ್ಲಿದೆ.

೪.೯.೨. ಭವಿಷ್ಯತ್ಕಾಲ ಸೂಚಕ ಪ್ರತ್ಯಯ

ಬರಹ ಕನ್ನಡದಲ್ಲಿ ಭವಿಷ್ಯತ್ಕಾಲ ಸೂಚಕ ಪ್ರತ್ಯಯ ಇರುವ ಹಾಗೆನೇ ಮಸ್ಕಿಕನ್ನಡದ ರೂಪದಲ್ಲಿ ವ್ಯತ್ಯಾಸಗೊಳ್ಳದೆ ಉಪಯೋಗದಲ್ಲಿದೆ. ಮಸ್ಕಿಕನ್ನಡದಲ್ಲಿ ವರ್ತಮಾನ ರೂಪವನ್ನೇ ಭವಿಷ್ಯತ್ಕಾಲ ಸೂಚಕ ಪ್ರತ್ಯಯದ ಅರ್ಥದಲ್ಲಿ ಪ್ರಯೋಗಿಸುವುದು ಕಂಡುಬರುತ್ತದೆ.

೪.೯.೩. ಭೂತಕಾಲ ಸೂಚಕ ಪ್ರತ್ಯಯ

ಬರಹ ಕನ್ನಡ	ಏಕವಚನ	ಬಹುವಚನ
ಉತ್ತಮ ಪುರುಷ	ಮಾಡಿದೆನು	ಮಾಡಿದವು
ಮಧ್ಯಮ ಪುರುಷ	ಮಾಡಿದ	ಮಾಡಿದಿರಿ
ಪ್ರಥಮ ಪುರುಷ (ಪುಲ್ಲಿಂಗ)	ಮಾಡಿದನು	ಮಾಡಿದರು
(ಸ್ತ್ರೀಲಿಂಗ)	ಮಾಡಿದಳು	ಮಾಡಿದರು
(ನಪುಂಸಕ ಲಿಂಗ)	ಮಾಡಿತು	ಮಾಡಿದವು

ಮಸ್ಕಿಕನ್ನಡ	ಏಕವಚನ	ಬಹುವಚನ
ಉತ್ತಮ ಪುರುಷ	ಮಾಡೀನಿ	ಮಾಡೀವಿ
ಮಧ್ಯಮ ಪುರುಷ	ಮಾಡ್ದೆ	ಮಾಡಿದ್ರಿ
ಪ್ರಥಮ ಪುರುಷ (ಪುಲ್ಲಿಂಗ)	ಮಾಡ್ಯಾನ	ಮಾಡ್ಯಾರ
(ಸ್ತ್ರೀಲಿಂಗ)	ಮಾಡ್ಯಾಳ	ಮಾಡ್ಯಾರ
(ನಪುಂಸಕ ಲಿಂಗ)	ಮಾಡ್ತು	ಮಾಡ್ಯಾವು

ಬರಹ ಕನ್ನಡದ ಭೂತಕಾಲ ಸೂಚಕ ಪ್ರತ್ಯಯ 'ಇದ' ಮಸ್ಕಿಕನ್ನಡದಲ್ಲಿ 'ಡ' ಎಂದು ಪ್ರಯೋಗಿಸಲ್ಪಡುತ್ತದೆ. ಬರಹಕನ್ನಡದಲ್ಲಿ ಮಾಡಿದೆನು ಎನ್ನುವ ಏಕವಚನ ಉತ್ತಮ ಪುರುಷವು ಮಸ್ಕಿಕನ್ನಡದಲ್ಲಿ 'ಮಾಡೀನಿ' ಎನ್ನುವ ಬಳಕೆ ಇದೆ. ಬಹುವಚನದಲ್ಲಿ 'ಮಾಡೀವಿ' ಎನ್ನುವುದು ಇದೆ. ಮಧ್ಯಮ ಪುರಷ ಏಕವಚನ ಬರಹ ಕನ್ನಡದಲ್ಲಿ 'ಮಾಡಿದ' ಎಂದಿದ್ದರೆ ಮಸ್ಕಿಕನ್ನಡದಲ್ಲಿ 'ಮಾಡ್ದೆ' ಎಂದು, ಬಹುವಚನದಲ್ಲಿ 'ಮಾಡಿದಿರಿ' ಎನ್ನುವುದು 'ಮಾಡಿದ್ರಿ' ಎಂದು ವಿಜಾತೀಯ ಸಂಯುಕ್ತಾಕ್ಷರಗೊಂಡು ಬಳಕೆಗೊಳ್ಳುತ್ತದೆ. ಪ್ರಥಮ ಪುರುಷ ಏಕವಚನ ಬರಹಕನ್ನಡದಲ್ಲಿ 'ಮಾಡಿದನು' ಎಂದಿದ್ದರೆ ಮಸ್ಕಿಕನ್ನಡದಲ್ಲಿ 'ಮಾಡ್ಯಾನ' ಆಗಿದೆ. ಬಹುವಚನದಲ್ಲಿ 'ಮಾಡ್ಯಾರ' ಸ್ತ್ರೀಲಿಂಗದಲ್ಲಿ 'ಮಾಡಿದಳು' ಎನ್ನುವುದು 'ಮಾಡ್ಯಾಳ' ಎಂದು ಬಹುವಚನದಲ್ಲಿ 'ಮಾಡ್ಯಾರ' ಎಂಬುದಾಗಿ ಪ್ರಯೋಗಿಸಲ್ಪಡುತ್ತದೆ. ನಪುಂಸಕಲಿಂಗ ಏಕವಚನದಲ್ಲಿ ಮಾಡಿತು ಎಂದು ಬರಹ ಕನ್ನಡದಲ್ಲಿದ್ದರೆ 'ಮಾಡ್ತು' ಎಂದು ಬಳಕೆಯಲ್ಲಿದೆ. ವಿಜಾತೀಯ ಸಂಯುಕ್ತಾಕ್ಷರವಾಗಿ ಬಹುವಚನದಲ್ಲಿ ಮಾಡಿದವು ಎನ್ನುವ ಪ್ರಯೋಗವು ಮಾಡ್ಯಾವು ಪದಮಧ್ಯ 'ಯ'ಕಾರವೊಂದಿ ಬಳಕೆಗೊಳ್ಳುತ್ತವೆ.

ಬರಹ ಕನ್ನಡದಲ್ಲಿ 'ತಿಂದಿತು', 'ಕಟ್ಟಿದ', 'ಬಂದಿದೆ', 'ಹೊರಟಿದೆ', ಮಾಡಿದನು ಕ್ರಮವಾಗಿ 'ತಿಂದ', 'ಕಟ್ಟಿದ', 'ಬಂದಾದ', 'ಹೊಂಟಾದ', 'ಮಾಡ್ದ' ಎಂದು ದ್, ಟ್, ಡ್ ಮುಂತಾದ ಭೂತಕಾಲ ಸೂಚಕ ಪ್ರತ್ಯಯಗಳನ್ನು ಒಳಗೊಂಡಿದೆ. ಮಸ್ಕಿಕನ್ನಡದ ಮೂರು ಸಾಮಾಜಿಕ ವರ್ಗಗಳಲ್ಲಿ ಇದೇ ರೀತಿಯ ಬಳಕೆ ಇರುತ್ತದೆ. ಮಸ್ಕಿಕನ್ನಡದಲ್ಲಿ ಬರಹಕನ್ನಡಕ್ಕಿಂತ ಭಿನ್ನವಾದ ರೂಪಗಳು ಬಳಕೆಗೆ ಒಳಪಡುವುದನ್ನು ಕಾಲಸೂಚಕ ಪ್ರತ್ಯಯಗಳಾದ ವರ್ತಮಾನ, ಭವಿಷತ್, ಭೂತಕಾಲಗಳಲ್ಲಿ ಕಂಡುಕೊಳ್ಳಬಹುದಾಗಿದೆ.

೪.೧೦. ಆಖ್ಯಾತ ಪ್ರತ್ಯಯಗಳು

ಮಸ್ಕಿಕನ್ನಡದಲ್ಲಿ ಆಖ್ಯಾತ ಪ್ರತ್ಯಯಗಳು ತನ್ನದೇ ಆದ ಸ್ವರೂಪವನ್ನು ಒಳಗೊಂಡಿವೆ. ವರ್ತಮಾನ, ಭವಿಷ್ಯತ್, ಭೂತಕಾಲ ಆಖ್ಯಾತ ಪ್ರತ್ಯಯಗಳು (ಪುರುಷವಾಚಕ ಪ್ರತ್ಯಯಗಳು) ವಿಭಿನ್ನ ರೀತಿಯ ಬಳಕೆಗೊಳ್ಳುವುದನ್ನು ಗಮನಿಸಬಹುದು. ಮಸ್ಕಿಕನ್ನಡದ ಆಖ್ಯಾತ ಪ್ರತ್ಯಯವು ಕಾಲವನ್ನು ಸೂಚಿಸುವಂತಹ ಕಾಲಾರ್ಥಕಗಳು. ಅವು ವರ್ತಮಾನ, ಭೂತ, ಭವಿಷ್ಯತ್ ಕಾಲಗಳನ್ನು ಸೂಚಿಸುವುದರ ಜೊತೆಗೆ ಒಂದೊಂದು ಕಾಲವು ಒಂದೊಂದು ಆಗಮವನ್ನು ಹೊಂದಿರುತ್ತವೆ.

೪.೧೦.೧. ವರ್ತಮಾನ ಕಾಲದ ಆಖ್ಯಾತ ಪ್ರತ್ಯಯಗಳು

ಬರಹ ಕನ್ನಡ

	ಏಕವಚನ	ಬಹುವಚನ
ಉತ್ತಮ ಪುರುಷ	ಹೋಗುತ್ತೇನೆ	ಹೋಗುತ್ತೇವೆ
ಮಧ್ಯಮ ಪುರುಷ	ಹೋಗುತ್ತೀಯ	ಹೋಗುತ್ತೀರಾ
ಪ್ರಥಮ ಪುರುಷ (ಪುಲ್ಲಿಂಗ)	ಹೋಗುತ್ತಾನೆ	ಹೋಗುತ್ತಾರೆ
(ಸ್ತ್ರೀಲಿಂಗ)	ಹೋಗುತ್ತಾಳೆ	ಹೋಗುತ್ತಾರೆ
(ನಪುಂಸಕ ಲಿಂಗ)	ಹೋಗುತ್ತದೆ	ಹೋಗುತ್ತವೆ.

ಮಸ್ಕಿಕನ್ನಡ

	ಏಕವಚನ	ಬಹುವಚನ
ಉತ್ತಮ ಪುರುಷ	ಓತಿನಿ	ಓತಿವಿ
ಮಧ್ಯಮ ಪುರುಷ	ಓತಿಯಾ	ಓತಿರಾ
ಪ್ರಥಮ ಪುರುಷ (ಪುಲ್ಲಿಂಗ)	ಓತಾನ	ಓತಾರ
(ಸ್ತ್ರೀಲಿಂಗ)	ಓತಾಳ	ಓತಾರ
(ನಪುಂಸಕ ಲಿಂಗ)	ಓತಾದ	ಓತಾವು

ಮಸ್ಕಿಕನ್ನಡದ ಆಖ್ಯಾತ ಪ್ರತ್ಯಯಗಳು

	ಏಕವಚನ	ಬಹುವಚನ
ಉತ್ತಮ ಪುರುಷ	ಇನಿ	ಇವಿ
ಮಧ್ಯಮ ಪುರುಷ	ಇ	ಇರಾ
ಪ್ರಥಮ ಪುರುಷ (ಪುಲ್ಲಿಂಗ)	ಆನ	ಆರ
(ಸ್ತ್ರೀಲಿಂಗ)	ಆಳ	ಆರ
(ನಪುಂಸಕ ಲಿಂಗ)	ಆದ	ಆವು

ವರ್ತಮಾನ ಕಾಲದ ಆಖ್ಯಾತ ಪ್ರತ್ಯಯ ಬರಹ ಕನ್ನಡದ ಉತ್ತಮ ಪುರುಷ ಏಕವಚನದಲ್ಲಿ 'ಏನೆ' ಎಂಬುದಾಗಿ ಬಳಕೆಗೊಳ್ಳುತ್ತಿದ್ದರೆ ಮಸ್ಕಿಕನ್ನಡದಲ್ಲಿ 'ಇನಿ' ಎಂದು ಬಳಕೆಗೊಳ್ಳುತ್ತದೆ. ಬಹುವಚನದಲ್ಲಿ 'ಏವೆ' ಬರಹ ಕನ್ನಡದಲ್ಲಿ ಇದ್ದರೆ ಮಸ್ಕಿಕನ್ನಡದಲ್ಲಿ 'ಇವಿ' ಎಂದು ಉಚ್ಚರಿಸಲ್ಪಡುತ್ತದೆ. ಮಧ್ಯಮ ಪುರುಷದಲ್ಲಿ 'ಈಯಾ' ಆಖ್ಯಾತ ಪ್ರತ್ಯಯ ಏಕವಚನವು 'ಇ' ಎಂದು, ಬಹುವಚನದಲ್ಲಿ 'ಈರಾ' ಎನ್ನುವ ಬದಲಾಗಿ 'ಇರಾ' ಎಂದು ಪ್ರಯೋಗಗೊಳ್ಳುತ್ತಿದೆ. ಪ್ರಥಮ ಪುರುಷ ಪುಲ್ಲಿಂಗ ಏಕವಚನವು ಬರಹ ಕನ್ನಡದಲ್ಲಿ 'ಆನೆ' ಎಂಬುದಾಗಿ ಮಸ್ಕಿಕನ್ನಡದಲ್ಲಿ 'ಆನ' ಎಂಬುದಾಗಿ ಬಹುವಚನ 'ಆರೆ' ಎನ್ನುವುದು 'ಆರ' ಎಂದು ಬಳಕೆಗೊಳ್ಳುವುದು ಸ್ತ್ರೀಲಿಂಗವು 'ಆಳ' ಏಕವಚನದಲ್ಲಿ, ಬಹುವಚನದಲ್ಲಿ 'ಆರ' ಇವು ಕ್ರಮವಾಗಿ ಬರಹ ಕನ್ನಡದ 'ಆಳೆ', 'ಆರೆ'ಕ್ಕೆ ಸಮನಾಗಿ ಪರಿವರ್ತನೆಗೊಂಡಿವೆ. ನಪುಂಸಕಲಿಂಗ ಏಕವಚನವು 'ಆದ' ಎಂದು ಬಹುವಚನ 'ಆವು' ಎಂದು ಬಳಕೆಗೊಳ್ಳುವುದನ್ನು ಗಮನಿಸಬಹುದಾಗಿದೆ. ಬರಹ ಕನ್ನಡದಲ್ಲಿರುವ 'ಹೋಗುತ್ತೇನೆ' ಎಂಬಲ್ಲಿಯ 'ಗ' ಕಾರವು ಸಂಪೂರ್ಣವಾಗಿ ಎಲ್ಲಾ ಆಖ್ಯಾತ ಪ್ರಕೃತಿಯಗಳಲ್ಲಿ ಲೋಪಗೊಂಡಿರುತ್ತದೆ. ಬರಹ ಕನ್ನಡದಲ್ಲಿ 'ಉತ್ತ' ಆಗಮ ವರ್ತಮಾನ ಕಾಲದ ಕ್ರಿಯಾಪದವಾದರೆ ಮಸ್ಕಿಕನ್ನಡದಲ್ಲಿ 'ಆತ' ಬಂದು ವರ್ತಮಾನ ಕಾಲದ ಕ್ರಿಯಾಪದವಾಗುವುದು. ಬರಹಕನ್ನಡದ 'ಉತ್ತ' ಆಗಮಹೊಂದದೆ 'ಆತ' ಆಗಮ ಹೊಂದಿ ವಿಕೃತರೂಪ ತಾಳಿದ ಆಖ್ಯಾತ ಪ್ರತ್ಯಯವಾಗುತ್ತದೆ.

೪.೧೦.೨. ಭವಿಷ್ಯತ್ಕಾಲದ ಆಖ್ಯಾತ ಪ್ರತ್ಯಯಗಳು

ಬರಹ ಕನ್ನಡ

	ಏಕವಚನ	ಬಹುವಚನ
ಉತ್ತಮ ಪುರುಷ	ಕಾಣುವೆನು	ಕಾಣುವೆವು
ಮಧ್ಯಮ ಪುರುಷ	ಕಾಣುವೆ	ಕಾಣುವಿರಿ
ಪ್ರಥಮ ಪುರುಷ (ಪುಲ್ಲಿಂಗ)	ಕಾಣುವನು	ಕಾಣುವರು
(ಸ್ತ್ರೀಲಿಂಗ)	ಕಾಣುವಳು	ಕಾಣುವರು
(ನಪುಂಸಕ ಲಿಂಗ)	ಕಾಣುವದು	ಕಾಣುವವು

ಮಸ್ಕಿಕನ್ನಡ

	ಏಕವಚನ	ಬಹುವಚನ
ಉತ್ತಮ ಪುರುಷ	ಕಾಣ್ತೇನೆ	ಕಾಣ್ತೇವೆ
ಮಧ್ಯಮ ಪುರುಷ	ಕಾಣ್ತಿ	ಕಾಣ್ರಿ
ಪ್ರಥಮ ಪುರುಷ (ಪುಲ್ಲಿಂಗ)	ಕಾಣ್ತಾನ	ಕಾಣ್ತಾರ
(ಸ್ತ್ರೀಲಿಂಗ)	ಕಾಣ್ತಾಳ	ಕಾಣ್ತಾರ
(ನಪುಂಸಕ ಲಿಂಗ)	ಕಾಣ್ತಾದ	ಕಾಣ್ತಾವು

ಮಸ್ಕಿಕನ್ನಡದಲ್ಲಿ ಭವಿಷ್ಯತ್ಕಾಲ ಆಖ್ಯಾತ ಪ್ರತ್ಯಯಗಳು

	ಏಕವಚನ	ಬಹುವಚನ
ಉತ್ತಮ ಪುರುಷ	ಏನೆ	ಏವೆ
ಮಧ್ಯಮ ಪುರುಷ	ಎ	ಇರಿ
ಪ್ರಥಮ ಪುರುಷ (ಪುಲ್ಲಿಂಗ)	ಆನ	ಆರ
(ಸ್ತ್ರೀಲಿಂಗ)	ಆಳ	ಆರ
(ನಪುಂಸಕ ಲಿಂಗ)	ಆದ	ಅವು

ಬರಹ ಕನ್ನಡ 'ಕಾಣುವೆನು' ಎನ್ನುವಲ್ಲಿಯ ಭವಿಷ್ಯತ್ಕಾಲದ ಆಖ್ಯಾತ ಪ್ರತ್ಯಯವು ಮಸ್ಕಿಕನ್ನಡದಲ್ಲಿ 'ಕಾಣ್ತೇನೆ' ಎಂದು ಬಳಕೆಗೊಳ್ಳುತ್ತದೆ. 'ಎನು' ಎನ್ನುವ ಆಖ್ಯಾತ ಪ್ರತ್ಯಯ ಮಸ್ಕಿಕನ್ನಡದಲ್ಲಿ 'ಏನೆ' ಎಂಬುದಾಗಿ ಉಚ್ಚಾರಣೆಗೆ ಒಳಪಡುತ್ತದೆ. ಬಹುವಚನದಲ್ಲಿ 'ಏವೆ' ಎಂಬುದಾಗಿವೆ. ಮಧ್ಯಮ ಪುರುಷ ಏಕವಚನ ಮತ್ತು ಬಹುವಚನವು ಬರಹ ಕನ್ನಡದಲ್ಲಿ ಇರುವ 'ಎ' ಏಕವಚನ ಆಖ್ಯಾತ ಪ್ರತ್ಯಯ 'ಇ' ಎಂದು ಮಸ್ಕಿಕನ್ನಡದಲ್ಲಿ ಬಳಕೆಯಲ್ಲಿದೆ. ಹಾಗೂ 'ಇರಿ' ಅಖ್ಯಾತ ಪ್ರತ್ಯಯವನ್ನು ಬಹುವಚನದಲ್ಲಿ ಉಳಿಸಿ ಕೊಂಡಿದೆ. ಪ್ರಥಮ ಪುರುಷದಲ್ಲಿ 'ಅನು', 'ಅಳು', 'ಅರು', 'ಅದು', 'ಅವು', ಎಂಬ ಆಖ್ಯಾತ ಪ್ರತ್ಯಯ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗವು ಮಸ್ಕಿಕನ್ನಡದಲ್ಲಿ ಕ್ರಮವಾಗಿ 'ಆನ', 'ಆಳ', 'ಆರು', 'ಆದ', 'ಅವು' ಎಂಬುದಾಗಿ ಇರುವುದನ್ನು ಗಮನಿಸಬಹುದು. ಬರಹಕನ್ನಡದಲ್ಲಿ 'ಉವ' ಆಗಮ ಬಂದು ಕ್ರಿಯಾಪದವಾದರೆ ಮಸ್ಕಿಕನ್ನಡದಲ್ಲಿ 'ಱ' ಆಗಮ ಕಾಲಸೂಚಕ ಪ್ರತ್ಯಯ ಬಂದು ಆಖ್ಯಾತಪ್ರತ್ಯಯ ಪದವಾಗುವುದು.

೪.೧೦.೩. ಭೂತಕಾಲದ ಆಖ್ಯಾತ ಪ್ರತ್ಯಯಗಳು

ಬರಹ ಕನ್ನಡ

	ಏಕವಚನ	ಬಹುವಚನ
ಉತ್ತಮ ಪುರುಷ	ಮಾಡಿದೆನು	ಮಾಡಿದೆವು
ಮಧ್ಯಮ ಪುರುಷ	ಮಾಡಿದೆ	ಮಾಡಿದಿರಿ
ಪ್ರಥಮ ಪುರುಷ (ಪುಲ್ಲಿಂಗ)	ಮಾಡಿದನು	ಮಾಡಿದರು
(ಸ್ತ್ರೀಲಿಂಗ)	ಮಾಡಿದಳು	ಮಾಡಿದರು
(ನಪುಂಸಕ ಲಿಂಗ)	ಮಾಡಿತು	ಮಾಡಿದವು.

ಮಸ್ಕಿಕನ್ನಡ

	ಏಕವಚನ	ಬಹುವಚನ
ಉತ್ತಮ ಪುರುಷ	ಮಾಡ್ದೆ	ಮಾಡಿದ್ವಿ
ಮಧ್ಯಮ ಪುರುಷ	ಮಾಡ್ದೆ	ಮಾಡಿದ್ರಿ

ಪ್ರಥಮ ಪುರುಷ (ಪುಲ್ಲಿಂಗ)	ಮಾಡ್ದ	ಮಾಡಿದ್ರು
(ಸ್ತ್ರೀಲಿಂಗ)	ಮಾಡಿದ್ಲು	ಮಾಡಿದ್ರು
(ನಪುಂಸಕ ಲಿಂಗ)	ಮಾಡ್ತು	ಮಾಡಿದ್ವು

ಮಸ್ಕಿಕನ್ನಡದಲ್ಲಿ ಪ್ರಯೋಗಗೊಳ್ಳುವ ಭೂತಕಾಲದ ಆಖ್ಯಾತ ಪ್ರತ್ಯಯಗಳು

	ಏಕವಚನ	ಬಹುವಚನ
ಉತ್ತಮ ಪುರುಷ	ಎದೆ	ಇವಿ
ಮಧ್ಯಮ ಪುರುಷ	ಎದೆ	ಇರಿ
ಪ್ರಥಮ ಪುರುಷ (ಪುಲ್ಲಿಂಗ)	ಅದ	ಅರು
(ಸ್ತ್ರೀಲಿಂಗ)	ಅಲು	ಅರು
(ನಪುಂಸಕ ಲಿಂಗ)	ಉತು	ಇವು

ಮಸ್ಕಿಕನ್ನಡದಲ್ಲಿ ಅಖ್ಯಾತ ಪ್ರತ್ಯಯಗಳು ಬರಹ ಕನ್ನಡಕ್ಕಿಂತ ಭಿನ್ನವಾಗಿರುವುದನ್ನು ಗುರುತಿಸ ಬಹುದಾಗಿದೆ. ಬರಹ ಕನ್ನಡದಲ್ಲಿ ಉತ್ತಮ ಪುರುಷ ಏಕವಚನ 'ಎನು' ಮಧ್ಯಮ ಪುರುಷ ಏಕವಚನ 'ಎ' ಎಂಬುವುಗಳು ಮಸ್ಕಿಕನ್ನಡದಲ್ಲಿ 'ಎದೆ' ಎಂದು ಏಕವಚನಗಳಲ್ಲಿ ಬಳಕೆಗೊಳ್ಳುತ್ತವೆ. ಬಹುವಚನದಲ್ಲಿ 'ಇವಿ' ಉತ್ತಮ ಪುರುಷದಲ್ಲಿ ಹಾಗೂ ಮಧ್ಯಮ ಪುರುಷದಲ್ಲಿ 'ಇರಿ' ಎಂದು ಬಳಕೆಯಲ್ಲಿದೆ. ಪ್ರಥಮ ಪುರುಷ ಪುಲ್ಲಿಂಗದಲ್ಲಿ 'ಅನು' ಪ್ರತ್ಯಯವು ಮಸ್ಕಿಕನ್ನಡದ ಏಕವಚನದಲ್ಲಿ 'ಅದ' ಎಂಬುದಾಗಿ ಸ್ತ್ರೀಲಿಂಗದಲ್ಲಿ 'ಅಳು' ಎನ್ನುವುದು 'ಅಲು' ಎನ್ನುವುದಾಗಿ ಬಹುವಚನದ 'ಅರು' ಪುಲ್ಲಿಂಗ ಮತ್ತು ಸ್ತ್ರೀಲಿಂಗದಲ್ಲಿ 'ಅರು' ಎಂದೇ ಉಳಿಸಿಕೊಂಡಿದೆ. ನಪುಂಸಕಲಿಂಗ 'ಇತು', ಅವು ಕ್ರಮವಾಗಿ ಏಕವಚನದಲ್ಲಿ 'ಉತು' ಹಾಗೂ ಬಹುವಚನದಲ್ಲಿ 'ಇವು' ಎಂದು ಉಚ್ಚಾರಣೆಗೆ ಒಳಪಟ್ಟಿದೆ. ಬರಹ ಕನ್ನಡದಲ್ಲಿ ಆಗಮವಾಗಿ 'ದ' ಬರುತ್ತಿದ್ದು ವಿಕಾರ ಹೊಂದದೇ ಮಸ್ಕಿಕನ್ನಡದಲ್ಲಿಯೂ ಸಹ 'ದ' ಕಾಲಸೂಚಕ ಪ್ರತ್ಯಯ ಆಗಮವಾಗಿ ಬಂದಿರುತ್ತದೆ. ಮಸ್ಕಿಕನ್ನಡದಲ್ಲಿ ಈರೀತಿಯ ವೈವಿಧ್ಯತೆಯನ್ನು ಗುರುತಿಸಬಹುದಾಗಿದೆ.

೪.೧೧. ವಿಧ್ಯರ್ಥಕ ಕ್ರಿಯಾಪದಗಳು

ವಿಧ್ಯರ್ಥಕ ಕ್ರಿಯಾಪದಗಳನ್ನು ಕೋರಿಕೆ, ಹಾರೈಕೆ, ಅನುಮತಿ, ಉದ್ದೇಶ ಹಾಗೂ ಅಪ್ಪಣೆ ಮಾಡುವುದಕ್ಕೆ ಮುಂತಾದ ಹಲವು ಅರ್ಥಗಳನ್ನು ತೋರಿಸುವುದಕ್ಕಾಗಿ ಬಳಸುತ್ತಾರೆ. ಮಸ್ಕಿಕನ್ನಡದಲ್ಲಿ ಸಾಮಾನ್ಯವಾಗಿ ಭವಿಷ್ಯತ್ಕಾಲದಲ್ಲಿಯೇ ಬಳಕೆಯಾಗುವುದರಿಂದ ಇವನ್ನು ಭವಿಷ್ಯತ್ಕಾಲದ ಕ್ರಿಯಾಪದಗಳು ಎನ್ನಬಹುದು. ವಿಧ್ಯರ್ಥಕ ಪ್ರತ್ಯಯಗಳು ಧಾತುವಿಗೆ ನೇರವಾಗಿ ಹತ್ತುತ್ತವೆ. ಬರಹ ಕನ್ನಡದಲ್ಲಿ ಪ್ರತ್ಯಯಗಳನ್ನು ಹಚ್ಚಿದಾಗ ವಿಧ್ಯರ್ಥಕಗಳನ್ನು ಪಡೆಯಬಹುದು. ಈ ವಿಧ್ಯರ್ಥಕ ಕ್ರಿಯಾಪದಗಳು ಮಸ್ಕಿಕನ್ನಡದಲ್ಲಿ ಬಳಕೆಗೆ ಒಳಪಡುವ ಬಗೆಯನ್ನು ಕೆಳಗಿನ ಉದಾಹರಣೆಯಿಂದ ತಿಳಿಯಬಹುದು.

ಬರಹ ಕನ್ನಡ	ಏಕವಚನ	ಬಹುವಚನ
ಉತ್ತಮ ಪುರುಷ	ಮಾಡುವೆ	ಮಾಡೋಣ
ಮಧ್ಯಮ ಪುರುಷ	ಮಾಡುವದು	ಮಾಡುವದು
ಪ್ರಥಮ ಪುರುಷ (ಪುಲ್ಲಿಂಗ)	ಮಾಡಲಿ	ಮಾಡಲಿ
(ಸ್ತ್ರೀಲಿಂಗ)	ಮಾಡಲಿ	ಮಾಡಲಿ
(ನಪುಂಸಕ ಲಿಂಗ)	ಮಾಡಲಿ	ಮಾಡಲಿ

ಮಸ್ಕಿಕನ್ನಡ

	ಏಕವಚನ	ಬಹುವಚನ
ಉತ್ತಮ ಪುರುಷ	ಮಾಡ್ನಿ/ಡ್ವೆ	ಮಾಡಾಮ
ಮಧ್ಯಮ ಪುರುಷ	ಮಾಡು	ಮಾಡಿರಿ
ಪ್ರಥಮ ಪುರುಷ (ಪುಲ್ಲಿಂಗ)	ಮಾಡ್ಲಿ	ಮಾಡ್ಲಿ
(ಸ್ತ್ರೀಲಿಂಗ)	ಮಾಡ್ಲಿ	ಮಾಡ್ಲಿ
(ನಪುಂಸಕ ಲಿಂಗ)	ಮಾಡ್ಲಿ	ಮಾಡ್ಲಿ

ವಿಧ್ಯರ್ಥಕ ಆಖ್ಯಾತ ಪ್ರತ್ಯಯಗಳು

	ಏಕವಚನ	ಬಹುವಚನ
ಉತ್ತಮ ಪುರುಷ	ಇನಿ/ಎವೆ	ಅಮ
ಮಧ್ಯಮ ಪುರುಷ	ಉ	ಇರಿ
ಪ್ರಥಮ ಪುರುಷ (ಪುಲ್ಲಿಂಗ)	ಇಲಿ	ಇಲಿ
(ಸ್ತ್ರೀಲಿಂಗ)	ಇಲಿ	ಇಲಿ
(ನಪುಂಸಕ ಲಿಂಗ)	ಇಲಿ	ಇಲಿ

ಬರಹ ಕನ್ನಡದಲ್ಲಿರುವ ಏಕವಚನ ಉತ್ತಮ ಪುರುಷದಲ್ಲಿ 'ಉವೆ' ಪ್ರತ್ಯಯವು 'ಇನಿ/ಎವೆ' ಎಂಬುದಾಗಿದೆ. ಬಹುವಚನದ 'ಒಣ' ಪ್ರತ್ಯಯವು 'ಅಮ' ಎಂಬುದಾಗಿ ಬಳಕೆಯಲ್ಲಿದೆ. ಮಧ್ಯಮ ಪುರುಷ 'ಉ' ವದು ಏಕವಚನ ಬಹುವಚನ ಬರಹ ಕನ್ನಡದಲ್ಲಿ ಪ್ರತ್ಯಯ ಇದ್ದರೆ ಮಸ್ಕಿಕನ್ನಡದಲ್ಲಿ ಏಕವಚನದಲ್ಲಿ 'ಉ' ಮತ್ತು ಬಹುವಚನದಲ್ಲಿ 'ಇರಿ' ಎಂದಾಗುತ್ತದೆ. ಪ್ರಥಮ ಪುರುಷ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗದಲ್ಲಿ ಏಕವಚನ ಹಾಗೂ ಬಹುವಚನದಲ್ಲಿ 'ಅರಿ' ಪ್ರತ್ಯಯ ಬರಹಕನ್ನಡದಲ್ಲಿ ಬಳಕೆಗೊಂಡರೆ ಮಸ್ಕಿ ಕನ್ನಡದಲ್ಲಿ 'ಇಲಿ' ಎಂದಾಗುವುದನ್ನು ಗುರುತಿಸಬಹುದು.

ಮಸ್ಕಿಕನ್ನಡದಲ್ಲಿ 'ಲಿ' ಮತ್ತು 'ಳಿ' ಎಂಬ ಪ್ರತ್ಯಯ ಸೇರುವುದರಿಂದ ವಿಧ್ಯರ್ಥಕ ಕ್ರಿಯಾರೂಪಗಳು ಲಭಿಸುತ್ತವೆ.

ಬರಹ ಕನ್ನಡ	ಮಸ್ಕಿಕನ್ನಡ	ವ್ಯತ್ಯಾಸ
ಕೇಳಲಿ	ಕೇಳ್ಳಿ	ಅಲಿ>ಳಿ
ತರಲಿ	ತರ್ಲಿ	ಅಲಿ>ಲಿ
ತಿನ್ನಲಿ	ತಿನ್ನಿ	ಅಲಿ>ಲಿ
ನೋಡಲಿ	ನೋಡ್ಲಿ	ಅಲಿ>ಲಿ
ಬರಲಿ	ಬರ್ಲಿ	ಅಲಿ>ಲಿ
ಹಾಡಲಿ	ಆಡ್ಲಿ	ಅಲಿ>ಲಿ

೪.೧೨. ನಿಷೇದಾರ್ಥಕ ಕ್ರಿಯಾಪದಗಳು

ನಿಷೇಧ ಎಂದರೆ ಕ್ರಿಯೆಯು ನಡೆದಿಲ್ಲ ಅಥವಾ ನಡೆಯುವುದಿಲ್ಲ ಎಂದರ್ಥ. ಈ ಅರ್ಥಕೊಡುವಂತಹವು ನಿಷೇದಾರ್ಥಕ ಕ್ರಿಯಾಪದಗಳು ಬರಹ ಕನ್ನಡದಲ್ಲಿ-'ಇಲ್ಲ',-'ಬೇಡ',-'ಬಾರದು',-'ಅಲ್ಲ' ಇತ್ಯಾದಿ ರೂಪಗಳು ನಿಷೇದಾರ್ಥಕವಾಗಿ ಬಳಕೆಯಲ್ಲಿವೆ. ಮಸ್ಕಿಕನ್ನಡದಲ್ಲಿ ಇವುಗಳಿಗಿಂತ ಭಿನ್ನವಾಗಿ ಇರುವ ನಿಷೇದಾರ್ಥಗಳು ಇರುವುದನ್ನು ಗಮನಿಸಬಹುದು.

ಬರಹ ಕನ್ನಡ	ಮಸ್ಕಿಕನ್ನಡ	ವ್ಯತ್ಯಾಸ
ಉಳಿಯುವುದಿಲ್ಲ	ಉಳಿಯಂಗಿಲ್ಲ/ಉಳುದುಲ್ಲ	ಇಲ್ಲ>ಇಲ್ಲ>ಉಲ್ಲ
ನಿಲ್ಲುವುದಿಲ್ಲ	ನಿಲ್ಲಂಗಿಲ್ಲ/ನಿಲ್ಲುವುದುಲ್ಲ	ಇಲ್ಲ>ಇಲ್ಲ>ಉಲ್ಲ
ನೋಡುವುದಿಲ್ಲ	ನೋಡಂಗಿಲ್ಲ/ನೋಡುದುಲ್ಲ	ಇಲ್ಲ>ಇಲ್ಲ>ಉಲ್ಲ
ಮಾಡುವುದಿಲ್ಲ	ಮಾಡಂಗಿಲ್ಲ/ಮಾಡುದುಲ್ಲ	ಇಲ್ಲ>ಇಲ್ಲ>ಉಲ್ಲ
ಮಾಡೆನು	ಮಾಡಂಗಿಲ್ಲ/ಮಾಡುದುಲ್ಲ	ಏನು>ಇಲ್ಲ>ಉಲ್ಲ
ಯಾಕೆ	ಯಾಕ	ಎ>ಅ
ಬರದೆ	ಬರ್ಲಿಕ್ರ	ಎ>ಅ
ತಿನ್ನದೆ	ತಿನ್ಲುಕ್ರ	ಎ>ಅ
ತರದೆ	ತರ್ಲಿಕ್ರ	ಎ>ಅ
ಮಾಡದೆ	ಮಾಡ್ಲಿಕ್ರ	ಎ>ಅ
ತರಬೇಡ	ತರಬ್ಯಾಡ	ಬೇಡ>ಬ್ಯಾಡ
ನಗುಬೇಡ	ನಗಬ್ಯಾಡ	ಬೇಡ>ಬ್ಯಾಡ
ತಿನ್ನಬೇಡ	ತಿನ್‌ಬ್ಯಾಡ	ಬೇಡ>ಬ್ಯಾಡ
ಬರಬೇಡ	ಬರಬ್ಯಾಡ	ಬೇಡ>ಬ್ಯಾಡ

ಮಸ್ಕಿಕನ್ನಡದಲ್ಲಿ ಕೆಲವು ಧಾತುಗಳಿಗೆ (ನಿಷೇದಾರ್ಥಕ ಆಖ್ಯಾತ ಪ್ರತ್ಯಯ ಬಿಟ್ಟು) ಇಲ್ಲ 'ಬೇಡ' 'ಅ' 'ಉಲ್ಲ' ಇತ್ಯಾದಿ ನಿಷೇದ ಕ್ರಿಯಾಸೂಚಕ ಪ್ರತ್ಯಯಾಂತಗಳು ಬಂದು "ನಿಷೇಧ ಕ್ರಿಯಾಪದರೂಪ"ಗಳಾಗಿವೆ. ಬರಹ ಕನ್ನಡದ 'ನೋಡುವುದಿಲ್ಲ' ಎಂಬಲ್ಲಿಯ 'ಉದ್' ಅಖ್ಯಾತ ಪ್ರತ್ಯಯ ಮಸ್ಕಿಕನ್ನಡದಲ್ಲಿ ಲೋಪವಾಗಿ 'ನೋಡಂಗಿಲ್ಲ' ಎಂದು ಬಳಕೆಗೊಂಡರೆ ಇನ್ನೂ ಕೆಲವು ನಿಷೇದಾರ್ಥ ಕ್ರಿಯಾಪದಗಳಲ್ಲಿ 'ನೋಡುದುಲ್ಲ' ಎಂದು ಉದ್ ಆಖ್ಯಾತ ಪ್ರತ್ಯಯ ಉಳಿಸಿಕೊಂಡಿರುತ್ತದೆ.

ಅಧ್ಯಾಯ ೫

ಸಂಬಂಧವಾಚಕಗಳು ಮತ್ತು ಸಂಬೋಧನ ರೂಪಗಳು

ಅಧ್ಯಾಯ ೫

ಸಂಬಂಧವಾಚಕಗಳು ಮತ್ತು ಸಂಬೋಧನ ರೂಪಗಳು

ಸಂಬಂಧವಾಚಕಗಳ ಅಧ್ಯಯನವು ಸಾಮಾಜಿಕ ಭಾಷಾಧ್ಯಯನದ ದೃಷ್ಟಿಯಿಂದ ತುಂಬ ಉಪಯುಕ್ತವಾದುದು. ಭಾಷಾ ಸಮುದಾಯದ ಸಾಂಸ್ಕೃತಿಕ ವಿನ್ಯಾಸಗಳನ್ನು ತಿಳಿದುಕೊಳ್ಳುವಲ್ಲಿ ಸಂಬಂಧವಾಚಗಳು ಮಹತ್ವದ ಪಾತ್ರವನ್ನು ನಿರ್ವಹಿಸುವವು. ಭಾಷಾ ಸಮುದಾಯದಲ್ಲಿ ಭಾಷಿಕರು ಹಲವು ಬಗೆಯ ಸಂಬಂಧಗಳಿಂದ ಹೆಣೆದುಕೊಂಡಿರುತ್ತಾರೆ. ಆಂಗ್ಲ ಭಾಷೆಯ 'Kinship' ಪದಕ್ಕೆ ಸಮವಾಗಿ ಕನ್ನಡದಲ್ಲಿ 'ಬಂಧುತ್ವ' ಪದ ಬಳಕೆಯಲ್ಲಿದೆ. ಇದರ ಅರ್ಥ ರಕ್ತಸಂಬಂಧಿ, ನೆಂಟರು ಇತ್ಯಾದಿ. 'ಬಂಧುತ್ವ' ಪದಗಳು ಪ್ರತಿಯೊಂದು ಸಮಾಜದಲ್ಲೂ ಬಳಕೆಯಲ್ಲಿರುವಂತಹದು. ಇದೊಂದು ಸಾಮಾಜಿಕ ಪ್ರಕ್ರಿಯೆ. ಬಂಧುತ್ವ ಪದಗಳು ಸಮಾಜದ ಗಾತ್ರ ರಚನೆಗನುಗುಣವಾಗಿ ಸಂಖ್ಯೆ ನಿರ್ಧಾರಿತವಾಗಿರುತ್ತದೆ. ಕೆಲವು ಸಮಾಜದಲ್ಲಿ ಹೆಚ್ಚಿರಬಹುದು ಅಥವಾ ಕೆಲವು ಸಮಾಜದಲ್ಲಿ ಕಡಿಮೆ ಪ್ರಮಾಣದಲ್ಲಿರಬಹುದು.[೧] 'ಬಂಧುತ್ವ' ಪದಗಳು ಆಯಾ ಸಂಸ್ಕೃತಿಗೆ ಅನುಗುಣವಾಗಿ ಭಿನ್ನ ಭಾಷಿಕ ರೂಪದಲ್ಲಿ ಬಳಕೆಯಲ್ಲಿವೆ. ಕನ್ನಡದಲ್ಲಿ ಬಂಧುತ್ವ ಪದಗಳು ನಾಮಪದ ಮತ್ತು ಗುಣವಾಚಕ ಆಗಿ ಬಳಕೆಯಲ್ಲಿವೆ.

ಮಸ್ಕಿ ಪರಿಸರದಲ್ಲಿನ ಸಂಬಂಧವಾಚಕಗಳನ್ನು ಈ ಕೆಳಗಿನ ರೀತಿಯಲ್ಲಿ ವಿಭಾಗಿಸಬಹುದಾಗಿದೆ.

೧. ರಕ್ತಸಂಬಂಧದ ಸಂಬಂಧವಾಚಕಗಳು

೨. ಇತರೆ ಸಂಬಂಧದ ಸಂಬಂಧವಾಚಕಗಳು

೧. ಬಂಧುತ್ವವನ್ನು ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ ಇವರ ಮೂಲಕ ವಂಶವನ್ನು ನಿರ್ಧರಿಸಿದರೆ ಅದು ರಕ್ತಸಂಬಂಧದ ಸಂಬಂಧವಾಚಕ.

ಉದಾ : ಚಿಕ್ಕಪ್ಪ - ತಂದೆಗಿಂತ ಚಿಕ್ಕವನು

ಚಿಕ್ಕಮ್ಮ - ತಾಯಿಗಿಂತ ಚಿಕ್ಕವಳು. ಮುಂತಾದವು ಇವುಗಳಿಗೆ ಕಳ್ಳುಬಳ್ಳಿ ಎಂದೂ ಕರೆಯುವರು. ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ ಇವು ನೇರವಾಗಿ ರಕ್ತ ಸಂಬಂಧಕ್ಕೆ ಸಂಬಂಧಿಸಿರುವುದರಿಂದ ಇವುಗಳಿಗೆ 'ಪ್ರಾಥಮಿಕ' ಸಂಬಂಧವಾಚಕಗಳೆಂದು ಕರೆಯುತ್ತಾರೆ. ಸಂಸ್ಕೃತ ಭಾಷೆ ಪ್ರಭಾವದಿಂದ ಕನ್ನಡದಲ್ಲಿ

ಸ್ತ್ರೀ, ಸಹೋದರ, ಸಹೋದರಿ, ಜೇಷ್ಠ, ಪಿತೃ, ಮಾತೃ ಇತ್ಯಾದಿ ಪದಗಳಿವೆ. ಇವುಗಳು ಮಸ್ಕಿಕನ್ನಡದ ಸುತ್ತಮುತ್ತ ವಾಸಿಸುವ ಸಾಂಪ್ರದಾಯಿಕ ಬ್ರಾಹ್ಮಣರಲ್ಲಿ ಇನ್ನೂ ಜೀವಂತವಾಗಿವೆ. ವಿರಳವಾಗಿ ಬ್ರಾಹ್ಮಣೇತರ ವಿದ್ಯಾವಂತರಲ್ಲಿ ಬಳಕೆಯಲ್ಲಿದೆ. ಮಸ್ಕಿಕನ್ನಡದ ಪರಿಸರದಲ್ಲಿ ವಿಶಿಷ್ಟವಾಗಿ ಬಳಕೆಗೊಳ್ಳುವ ಸಂಬಂಧ ವಾಚಕಗಳನ್ನು ಗುರುತಿಸಬಹುದು. ಮಸ್ಕಿಕನ್ನಡದ ಮೂರು ಸಾಮಾಜಿಕ ವರ್ಗಗಳಲ್ಲಿ ಈ ವಿಶಿಷ್ಟತೆಯನ್ನು ಗಮನಿಸಬಹುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ತಂದೆ	ಅಪ್ಪ	ಯಪ್ಪ	ಯಪ್ಪ
ತಾಯಿ	ಅಮ್ಮ/ಅವ್ವ	ಯವ್ವ	ಯವ್ವ
ಮಗ	ಮಗ	ಮಗಾ	ಮಗಾ
ಮಗಳು	ಮಗಳು	ಮಗ್ಳ	ಮಗ್ಳ
ಅಕ್ಕ	ಅಕ್ಕ	ಅಕ್ಕ/ಯಕ್ಕ	ಯಕ್ಕ
ತಂಗಿ	ತಂಗಿ	ತಂಗೀ	ತಂಗೀ
ತಮ್ಮ	ತಮ್ಮ	ತಮ್ಮಾ	ತಮ್ಮಾ
ಅಣ್ಣ	ಅಣ್ಣ	ಅಣ್ಣ	ಅಣ್ಣ
ದೊಡ್ಡಪ್ಪ	ದೊಡಪ	ದ್ವಡಪ	ದ್ವಡಪ
ದೊಡ್ಡಮ್ಮ	ದೊಡಮ	ದ್ವಡಮ/ದ್ವಡವ	ದ್ವಡಮ/ದ್ವಡವ
ಚಿಕ್ಕಪ್ಪ	ಚಿಗಪ/ಸಣಪ	ಕಕ್ಕಾ/ಸಣಪ	ಕಕ್ಕಾ/ಸಣಪ
ಚಿಕ್ಕಮ್ಮ	ಚಿಗಮ/ಚಿಕಮ	ಚಿಗವ/ಸಣವ	ಚಿಗವ/ಸಣವ
ತಾತ	ತಾತ	ತಾತ	ತಾತ
ಅಜ್ಜಿ	ಅಮ್ಮ	ಅಮ್ಮ/ಅಜ್ಜಿ	ಅಮ್ಮ/ಅಜ್ಜಿ
ಮೊಮ್ಮಗ	ಮಮ್ಮಗ	ಮಮ್ಮಗ	ಮಮ್ಮಗ
ಮೊಮ್ಮಗಳು	ಮಮ್ಮಗಳು	ಮಮ್ಮಗ್ಳ	ಮಮ್ಮಗ್ಳ

ಈ ಮೇಲಿನ ಸಂಬಂಧವಾಚಕಗಳು ಮಸ್ಕಿ ಪರಿಸರದ ಮೂರು ಸಾಮಾಜಿಕ ವರ್ಗಗಳಲ್ಲಿ ವಿಭಿನ್ನ ರೀತಿಯಾಗಿ ಬಳಕೆಗೊಳ್ಳುವುದನ್ನು ಕಾಣಬಹುದು. ಬರಹ ಕನ್ನಡದಲ್ಲಿ ಬಳಕೆಗೊಳ್ಳುವ 'ತಂದೆ' ಸಂಬಂಧವಾಚಕವು ಮಸ್ಕಿಕನ್ನಡದ ಲಿಂಗಾಯತರಲ್ಲಿ 'ಅಪ್ಪ' ಎಂದು ನಾಯಕ ಹರಿಜನರಲ್ಲಿ 'ಯಪ್ಪ' ಎಂದು ಉಚ್ಚಾರಣೆಗೊಳ್ಳುತ್ತದೆ. ತಾಯಿ ಸಂಬಂಧಸೂಚಕವು ಲಿಂಗಾಯತರಲ್ಲಿ 'ಅವ್ವ', 'ಅಮ್ಮ' ಎಂದು ಎರಡು ರೀತಿಯಲ್ಲಿ ಪ್ರಯೋಗಗೊಂಡರೆ ನಾಯಕ, ಹರಿಜನರಲ್ಲಿ 'ಯವ್ವ' ಎಂಬುದಾಗಿ ಬಳಕೆಗೊಳ್ಳುತ್ತದೆ. 'ಮಗ'

ಸಂಬಂಧಸೂಚಕವು ಲಿಂಗಾಯತರಲ್ಲಿ 'ಮಗ' ಎಂದು ನಾಯಕ, ಹರಿಜನರಲ್ಲಿ 'ಮಗಾ' ಎಂದು ಬಳಕೆಗೊಳ್ಳುವುದು. 'ಮಗಳು' ಲಿಂಗಾಯತರಲ್ಲಿ 'ಮಗಳು' ಮೂರಕ್ಷರದ ಪದವಾಗಿಯೇ ಉಚ್ಚಾರಣೆಗೊಂಡರೆ ನಾಯಕ, ಹರಿಜನರಲ್ಲಿ ಎರಡಕ್ಷರದ ವಿಜಾತೀಯ ಸಂಯುಕ್ತಾಕ್ಷರವಾಗಿ 'ಮಗ್ಳ' ಎಂದು ವಿಶಿಷ್ಟವಾಗಿ ಬಳಕೆಗೊಳ್ಳುತ್ತದೆ. 'ತಂಗಿ', 'ತಮ್ಮಾ' ಸಂಬಂಧಸೂಚಕ ಲಿಂಗಾಯತರಲ್ಲಿ ಬದಲಾವಣೆಗೊಳ್ಳಲ್ಪಡದೆ ನಾಯಕ ಹರಿಜನರಲ್ಲಿ ಮಾತ್ರ ದೀರ್ಘಾಕ್ಷರಗೊಂಡು 'ತಂಗೀ', 'ತಮ್ಮಾ' ಎಂದು ಬಳಕೆಯಲ್ಲಿದೆ. 'ಚಿಕ್ಕಪ್ಪ', 'ಚಿಕ್ಕಮ್ಮ' ಸಂಬಂಧ ಸೂಚಕವು ಲಿಂಗಾಯತರಲ್ಲಿ 'ಚಿಗಪ' 'ಚಿಗಮ', 'ಚಿಕಪ', 'ಚಿಕಮ' ಎಂದು, ನಾಯಕ, ಹರಿಜನರಲ್ಲಿ 'ಚಿಗಪ' 'ಕಕ್ಕಾ' ಎಂಬುದಾಗಿ 'ಚಿಕ್ಕಪ್ಪ'ನನ್ನು ಸಂಭೋದಿಸಿದರೆ 'ಸಣವ,' 'ಚಿಗವ' ಎಂಬುದಾಗಿ 'ಚಿಕ್ಕಮ್ಮ'ನನ್ನು ಬಳಕೆ ಮಾಡುವರು. ಮೂರು ಸಾಮಾಜಿಕ ವರ್ಗಗಳಲ್ಲಿ ವಿಭಿನ್ನ ರೀತಿಯಾಗಿ ಉಚ್ಚಾರಣೆ ಯಲ್ಲಿರುವುದನ್ನು ಗಮನಿಸಬಹುದು. 'ಅಜ್ಜಿ' ಸಂಬಂಧ ಸೂಚಕವು ಮೂರು ಸಾಮಾಜಿಕ ವರ್ಗಗಳಲ್ಲಿ 'ಅಮ್ಮ', 'ಅಜ್ಜಿ' ಎಂದು ಬಳಕೆಗೊಳ್ಳುತ್ತದೆ.

ಮಸ್ಕಿಕನ್ನಡದ ಸಂಬೋಧನೆಗಳು ವರ್ಗ, ಜಾತಿ, ಲಿಂಗ, ವಯಸ್ಸನ್ನು ಆಧರಿಸಿ ಬಳಕೆಯಲ್ಲಿರುವುದನ್ನು ನೋಡಬಹುದು. ಭಾಷಾ ಸಮುದಾಯದಲ್ಲಿ ಭಾಷಿಕರ ಜೀವನ ಸಂಸ್ಕೃತಿಯನ್ನು ತಿಳಿಯುವಲ್ಲಿ ಸಂಬೋಧನಾ ರೂಪಗಳು ಮಹತ್ವದ ಪಾತ್ರವಹಿಸುವುದನ್ನು ಕಾಣಬಹುದು. ಕೆಲವೊಮ್ಮೆ ಸನ್ನಿವೇಶಕ್ಕೆ ತಕ್ಕಂತೆ ಸಂಬೋಧನೆ ಬಳಕೆಗೊಳ್ಳುವುದನ್ನು ಗಮನಿಸಬಹುದಾಗಿದೆ.

ಮಸ್ಕಿಕನ್ನಡದಲ್ಲಿ ಈ ಮೇಲೆ ನೋಡಿದಂತಹ ಸಂಬಂಧವಾಚಕಗಳು ಕೆಲವೊಂದು ಸಂಬೋಧನ ರೂಪಗಳಾಗಿ ಮೂರು ಸಾಮಾಜಿಕ ವರ್ಗಗಳಲ್ಲಿ ಬಳಕೆಗೊಂಡಿರುತ್ತವೆ. ತಮ್ಮ, ತಂಗಿ, ಮೊಮ್ಮಗ, ಮೊಮ್ಮಗಳು ಈ ಸಂಬಂಧಸೂಚಕಗಳು ಮಸ್ಕಿಕನ್ನಡದ ಸಂಬೋಧನೆಯಲ್ಲಿ ಹೆಸರುಗೊಂಡು, ಹೆಸರನ್ನು ಬಳಸಿಕೊಂಡು (ರಾಜ ಸೌಮ್ಯ ಇತ್ಯಾದಿ) ಬಳಕೆಗೊಳ್ಳುತ್ತವೆ.

ಮಸ್ಕಿಕನ್ನಡದಲ್ಲಿ ಹಿಂದಿನ ಸಂತತಿಯ ಸಂಬಂಧಸೂಚಕ ಹಾಗೂ ಸಂಬೋಧನಾ ರೂಪಗಳಲ್ಲಿ ಮೂರು ಸಾಮಾಜಿಕ ವರ್ಗಗಳಲ್ಲಿ ಭಿನ್ನವಾಗಿರುವುದನ್ನು ಈ ಕೆಳಗಿನ ಉದಾಹರಣೆಗಳಿಂದ ತಿಳಿಯಬಹುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ತಂದೆಯ ತಂದೆ	ತಾತ	ಮುತ್ತ್ಯಾ/ಅಜ್ಜ	ಮುತ್ತ್ಯಾ/ಅಜ್ಜ
ತಂದೆಯ ತಂದೆಯ ತಂದೆ	ಮುತ್ತ್ಯಾ/ಅಜ್ಜ	ಮುತ್ತ್ಯಾ/ಅಜ್ಜ	ಮುತ್ತ್ಯಾ/ಅಜ್ಜ
ತಾಯಿಯ ತಂದೆ	ತಾತ	ಮುತ್ತ್ಯಾ/ಅಜ್ಜ	ಮುತ್ತ್ಯಾ/ಅಜ್ಜ
ತಾಯಿಯ ತಂದೆಯ ತಂದೆ	ಮುತ್ತ್ಯಾ/ಅಜ್ಜ	ಮುತ್ತ್ಯಾ/ಅಜ್ಜ	ಮುತ್ತ್ಯಾ/ಅಜ್ಜ
ತಂದೆಯ ತಾಯಿ	ಅಮ್ಮ	ಅಮ್ಮ/ಅಜ್ಜ	ಅಮ್ಮ/ಅಜ್ಜಿ
ತಂದೆಯ ತಾಯಿಯ ತಾಯಿ	ಅಮ್ಮ/ಅಜ್ಜಿ	ಅಮ್ಮ/ಅಜ್ಜಿ	ಅಮ್ಮ/ಅಜ್ಜಿ
ತಾಯಿಯ ತಾಯಿ	ಅಬ್ಬೆ/ಅಜ್ಜಿ	ಅಬ್ಬೆ/ಅಜ್ಜಿ	ಅಬ್ಬೆ/ಅಜ್ಜಿ

ಮಸ್ಕಿಕನ್ನಡದ ಲಿಂಗಾಯತರಲ್ಲಿ 'ತಂದೆಯ ತಂದೆ' ಸಂಬಂಧ ಸೂಚಕ 'ತಾತ' ಎಂದು ಬಳಕೆಗೊಂಡರೆ ನಾಯಕ ಹರಿಜನರಲ್ಲಿ 'ತಾತ' ಮತ್ತು 'ಮುತ್ತ್ಯಾ', 'ಅಜ್ಜ' ಎಂದು ಬಳಕೆಗೊಳ್ಳುತ್ತದೆ. ತಂದೆಯ ತಂದೆಯ ತಂದೆ ಹಾಗೂ 'ತಾಯಿಯ ತಂದೆಯ ತಂದೆ' ಸಂಬಂಧ ಸೂಚಕವು 'ಮುತ್ತ್ಯಾ', 'ಅಜ್ಜ' ಎಂದು ಮೂರು ಸಾಮಾಜಿಕ ವರ್ಗಗಳಲ್ಲಿ ಬಳಸುವುದನ್ನು ಗಮನಿಸಬಹುದು.

'ತಾಯಿಯ ತಾಯಿ'ಯನ್ನು 'ಅಬ್ಬೆ', 'ಅಜ್ಜಿ' ಎಂಬೆರಡೂ ಪದಗಳು ಬಳಕೆಯಲ್ಲಿವೆ. ತಂದೆಯ ತಾಯಿಗೆ 'ಅಮ್ಮ' ಎಂದು ಲಿಂಗಾಯತರಲ್ಲಿ ನಾಯಕ, ಹರಿಜನರಲ್ಲಿ 'ಅಜ್ಜಿ' ಈ ರೀತಿಯಾಗಿ ಬಳಸುತ್ತಾರೆ.

ಮೇಲೆ ನೋಡಿದ ಹಿಂದಿನ ಸಂತತಿಯ ಸಂಬಂಧ ಸೂಚಕಗಳು ಮಸ್ಕಿ ಪರಿಸರದಲ್ಲಿ ಹೆಚ್ಚು ಬದಲಾವಣೆಗೆ ಬಳಸಲ್ಪಡದೆ ಅದೇ ರೀತಿಯಾಗಿ ಸಂಬೋಧನೆಗೊಳ್ಳುವುದನ್ನು ಗಮನಿಸಬಹುದಾಗಿದೆ. 'ತಂದೆಯ ತಂದೆ' ಹಾಗೂ 'ತಾಯಿಯ ತಂದೆ'ಯನ್ನು 'ತಾತ' ಎಂದು ಲಿಂಗಾಯತರಲ್ಲಿ ಸಂಬೋಧನೆ ಇದ್ದರೆ 'ತಾತ' ಮತ್ತು 'ಮುತ್ತ್ಯಾ', 'ಅಜ್ಜ' ಎಂದು ನಾಯಕ, ಹರಿಜನರಲ್ಲಿ ಮೂರು ರೀತಿ ಸಂಬೋಧನೆಗೊಳ್ಳುತ್ತಿದೆ. 'ತಾಯಿಯ ತಾಯಿ'ಯನ್ನು ಲಿಂಗಾಯತರು 'ಅಜ್ಜಿ' ಎಂದು ಸಂಬೋಧಿಸಿದರೆ ನಾಯಕ, ಹರಿಜನರು 'ಅಜ್ಜಿ' 'ಅಬ್ಬೆ' ಎಂದು ಎರಡು ರೀತಿಯಲ್ಲಿ ಬಳಸುತ್ತಾರೆ. ಒಟ್ಟಾರೆ ತಂದೆಯ ತಂದೆ, ತಂದೆಯ ತಂದೆಯ ತಂದೆಗೆ 'ಅಜ್ಜ', 'ತಾತ', 'ಮುತ್ತ್ಯಾ' ಮೂರು ರೀತಿಯ ಬಳಕೆಯಲ್ಲಿರುವ ಕಂಡುಬರುತ್ತದೆ. ಅದೇ ರೀತಿ ತಂದೆಯ ತಾಯಿ, ತಂದೆಯ ತಾಯಿಯ ತಾಯಿಗೆ 'ಅಮ್ಮ', 'ಅಜ್ಜಿ', 'ಅಬ್ಬೆ' ಎಂದು ಮೂರು ರೀತಿಯ ಬಳಕೆಯನ್ನು ಗಮನಿಸಬಹುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಗಂಡುಮಗ	ಗ್ಯಂಡ್‌ಮಗ	ಗ್ಯಂಡಮಗ	ಗ್ಯಂಡಮಗ
ಹೆಣ್ಣುಮಗಳು	ಯಣ್‌ಮಗ	ಯಣ್‌ಮಗ	ಯಣ್‌ಮಗ
ಹಿರಿಯ ಗಂಡು ಮಗ	ಹಿರಿಮಗ	ಹಿರಿಮಗ	ಹಿರಿಮಗ
ಕಿರಿಯ ಗಂತಡು ಮಗ	ಸಣ್‌ಮಗ	ಸಣ್‌ಮಗ	ಸಣ್‌ಮಗ
ಹಿರಿಯ ಹೆಣ್ಣು ಮಗಳು	ಹಿರೆಮಗಳು	ಹಿರೆಮಗ್ಳ	ಹಿರೆಮಗ್ಳ
ಕಿರಿಯ ಹೆಣ್ಣು ಮಗಳು	ಸಣ್‌ಮಗಳು	ಸಣ್‌ಮಗ್ಳ	ಸಣ್‌ಮಗ್ಳ
ನಡುವೆ ಹುಟ್ಟಿದ ಗಂಡು ಮಗ	ನಡಲಾತ	ನಡಲಾತ	ನಡಲಾತ
ನಡುವೆ ಹುಟ್ಟಿದ ಹೆಣ್ಣು ಮಗಳು	ನಡಲಾಕಿ	ನಡಲಾಕಿ	ನಡಲಾಕಿ

ಮಸ್ಕಿಕನ್ನಡದಲ್ಲಿ ಮುಂದಿನ ಸಂತತಿಯ ಸಂಬಂಧಸೂಚಕಗಳು ಈ ಮೇಲಿನ ರೀತಿಯಲ್ಲಿ ಮೂರು ಸಾಮಾಜಿಕ ವರ್ಗಗಳಲ್ಲಿ ಬಳಕೆಗೊಳ್ಳುತ್ತಿವೆ. ಸಂಬೋಧನಾ ರೂಪದಲ್ಲಿಯೂ ಸದ ಇದೇ ರೀತಿಯಾಗಿ ಕರೆಯುವುದನ್ನು ನಾವು ಮಸ್ಕಿಕನ್ನಡದಲ್ಲಿ ಕಾಣಬಹುದು. ನಡುವೆ ಹುಟ್ಟಿದ ಗಂಡು ಮಗ ಹಾಗೂ ಹೆಣ್ಣು

ಮಗಳು ಇವುಗಳ ಸಂಬೋಧನಾ ರೂಪವು ಮಸ್ಕಿಕನ್ನಡದಲ್ಲಿ ನಡಲಾತ ಹಾಗೂ ನಡಲಾಕಿ ಎಂದು ಉಚ್ಚಾರಗೊಳ್ಳುವುದು ವಿಶಿಷ್ಟ ಎನ್ನಬಹುದು.

೨. ಇತರೆ ಸಂಬಂಧಸೂಚಕಗಳು

ಇತರೆ ಸಂಬಂಧಸೂಚಕಗಳಲ್ಲಿ ಮುಖ್ಯವಾಗಿ ವಿವಾಹ ಸಂಬಂಧದಿಂದ ಉಂಟಾಗುವ ಸಂಬಂಧ ವಾಚಕಗಳು ಸೇರುತ್ತವೆ. ಅತ್ತೆ, ಮಾವ, ಅಳಿಯ, ಭಾವ, ಮೈದುನ, ಚಿಕ್ಕಪ್ಪ, ಚಿಕ್ಕಮ್ಮ, ನಾದಿನಿ, ನೆಗೆಣ್ಣಿ ಇಂತಹ ಸಂಬಂಧ ಸೂಚಕಗಳು ವಿವಾಹದಿಂದ ಇಲ್ಲವೇ ಆಪ್ತತೆಯಿಂದ ಸೃಷ್ಟಿಯಾಗುವುದನ್ನು ಮಸ್ಕಿಕನ್ನಡದಲ್ಲಿ ಕಾಣಬಹುದು. ಮಸ್ಕಿ ಕನ್ನಡದಲ್ಲಿಯ ಇತರ ಸಂಬಂಧ ಸೂಚಕಗಳನ್ನು ಈ ಕೆಳಗಿನಂತೆ ನೋಡಬಹುದು.

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಅಳಿಯ	ಅಳಿಯ	ಅಳ್ಯಾ	ಅಳ್ಯಾ
ಮೈದುನ	ಮೈದುನ	ಮಯದುನ	ಮಯದುನ
ಭಾವ	ಭಾವ/ಮಾವ	ಮಾವ	ಮಾವ
ಹೆಂಡತಿ	ಎಣ್ತಿ	ಎಣ್ತಿ	ಎಣ್ತಿ
ಅತ್ತಿಗೆ	ಅತ್ತಿಗಿ/ಅಕ್ಕ/ವೈನಿ	ಅತ್ತಿಗಿ/ಅಕ್ಕ	ಅತ್ತಿಗಿ/ಅಕ್ಕ
ನೆಗಣ್ಣಿ	ನೆಗನ್ನಿ	ನೆಗನ್ನಿ	ನೆಗನ್ನಿ
ಸವತಿ	ಸವ್ತಿ	ಸವ್ತಿ	ಸವ್ತಿ
ಸೊಸೆ	ಸ್ವೊಸಿ	ಸ್ವಸಿ	ಸ್ವಸಿ

'ಅಳಿಯ' ಸಂಬಂಧಸೂಚಕ ಪದವು ಲಿಂಗಾಯತರಲ್ಲಿ 'ಅಳಿಯ' ಎಂದು ಬಳಕೆಗೊಂಡರೆ ನಾಯಕ ಹರಿಜನರಲ್ಲಿ 'ಅಳ್ಯಾ' ಎಂದು ಬಳಕೆಗೊಳ್ಳುವುದನ್ನು ನೋಡಬಹುದು. ಮಸ್ಕಿಕನ್ನಡದ ಲಿಂಗಾಯತರಲ್ಲಿ ಬರಹ ಕನ್ನಡದ ಮೈದುನ ಸಂಬಂಧ ಸೂಚಕವು ಬದಲಾಗದೆ ಹಾಗೇ ಉಚ್ಚಾರಗೊಂಡರೆ ನಾಯಕ, ಹರಿಜನರಲ್ಲಿ 'ಮಯದುನ' ಎಂದು ಉಚ್ಚಾರಗೊಳ್ಳುತ್ತದೆ. 'ಭಾವ' ಎಂಬ ಸಂಬಧಸೂಚಕವು ಲಿಂಗಾಯತರಲ್ಲಿ 'ಭಾವ' ಹಾಗೂ 'ಮಾವ' ಬಳಕೆಯಾಗುತ್ತದೆ. 'ಹೆಂಡತಿ' ಸಂಬಧ ಸೂಚಕವು 'ಎಣ್ತಿ' ಎಂದು ಬಳಕೆಗೊಂಡಿರುವುದನ್ನು ಗಮನಿಸ ಬಹುದಾಗಿದೆ. 'ಅತ್ತಿಗೆ' ಸಂಬಂಧಸೂಚಕವು ಮೂರು ಸಾಮಾಜಿಕ ವರ್ಗಗಳಲ್ಲಿ 'ಅತ್ತಿಗಿ' ಮತ್ತು 'ಅಕ್ಕ' ಎಂದು ಎರಡು ಶಬ್ದಗಳು ಬಳಕೆಯಲ್ಲಿದ್ದು, ಸಂಬೋಧನೆಗೊಳ್ಳುವಾಗ ಇದೇ ಶಬ್ದಗಳನ್ನು ಬಳಸುತ್ತಾರೆ. 'ನೆಗಣ್ಣಿ' ಸಂಬಂಧ ಸೂಚಕವು 'ನೆಗನ್ನಿ' ಎಂದು ಮೂರು ಸಾಮಾಜಿಕ ವರ್ಗಗಳಲ್ಲಿ ಬಳಕೆಯಲ್ಲಿದೆ. ಸವತಿ ಮತ್ತು 'ಸೊಸೆ' ಸಂಬಂಧ ಸೂಚಕ ಪದಗಳು ಲಿಂಗಾಯತರಲ್ಲಿ 'ಸವ್‌ತಿ' ಹಾಗೂ 'ಸ್ವಸಿ' ಎಂದು ಬಳಕೆಯಲ್ಲಿದ್ದರೆ ನಾಯಕ, ಹರಿಜನರಲ್ಲಿ 'ಸವ್ತಿ', 'ಸ್ವಸಿ' ಎಂದು ಬಳಸುವುದನ್ನು ನೋಡುತ್ತೇವೆ. ಮಸ್ಕಿಕನ್ನಡದಲ್ಲಿ 'ಭಾವ', 'ಮಾವ', 'ಅತ್ತಿಗಿ', 'ಅಕ್ಕ' ಮುಂತಾಗಿ ಸಂಬೋಧನೆಗೊಳ್ಳುತ್ತಿರುವುದನ್ನು ಗಮನಿಸಬಹುದಾಗಿದೆ.

ಮಸ್ಕಿ ಕನ್ನಡದಲ್ಲಿ ಅಪರಿಚಿತರ ನಡುವೆ ಸಂಬೋಧನ ರೂಪಗಳು ವಿಶಿಷ್ಟ ರೀತಿಯಲ್ಲಿ ಬಳಕೆಗೊಳ್ಳುವುದು. ಸ್ತ್ರೀಯರು ಅಪರಿಚಿತರಿಗೆ 'ರೀ', 'ಅಣ್ಣ', 'ಅಕ್ಕ', 'ತಮ್ಮಾ', 'ಏನಂಗೇ' ಮುಂತಾಗಿ ಸಂಬೋಧನೆಗೊಳ್ಳುತ್ತದೆ. ಪರಿಚತರಲ್ಲಿ ಹೆಚ್ಚಾಗಿ 'ಏನಂಗೇ', 'ಏನು', 'ಅಣ್ಣ', 'ಅಕ್ಕ' ಎಂಬುದಾಗಿ ಬಳಕೆಗೊಳ್ಳುತ್ತದೆ. ಅಪರಿಚಿತ ಪುರುಷರು 'ಏನ್ರ್ರಿ', 'ರ್‍ರೀ', 'ಏನಂಗೇ', 'ತಂಗೀ', 'ತಮ್ಮಾ' ಇತ್ಯಾದಿಯಾಗಿ ಬಳಸುತ್ತಾರೆ. ವ್ಯಾಪಾರ ಮಾಡುವ ಸಂದರ್ಭದಲ್ಲಿ ಪುರುಷನಿಗೆ ಹೆಂಗಸು ಪರಿಚಯವಿದ್ದ ಸನ್ನಿವೇಶದಲ್ಲಿ ತಗಳಂಗೇ, ಏನಂಗೇ ಎಂದು ಅಪರಿಚತರು ಪರಿಚಿಯವಿದ್ದ ಸನ್ನಿವೇಶದಲ್ಲಿ 'ತಗಳಂಗೇ', 'ಏನಂಗೇ' ಎಂದು ಅಪರಿಚಿತರುವಿದ್ದ ಸನ್ನಿವೇಶದಲ್ಲಿ ತಗೊಳ್ಳಿ, ತಗಳ್ರೀ ಎಂದು ಸಂಬೋಧನೆ ನಡೆಯುತ್ತದೆ. ಮಸ್ಕಿಕನ್ನಡದಲ್ಲಿ ಹೆಚ್ಚಾಗಿ ಗೌರವ ಸೂಚಕ ಬಹುವಚನ ಪದಗಳನ್ನು ಸಂಬೋಧಿಸುವುದು ಕಂಡುಬರುತ್ತದೆ.

ಅಧ್ಯಾಯ ೬

ಸ್ಥಳನಾಮಗಳು, ವ್ಯಕ್ತಿನಾಮಗಳು

ಅಧ್ಯಾಯ ೬

ಸ್ಥಳನಾಮಗಳು, ವ್ಯಕ್ತಿನಾಮಗಳು

ಸ್ಥಳನಾಮಗಳ ಅಧ್ಯಯನವನ್ನು ಬಹುಶಿಸ್ತೀಯ ಅಧ್ಯಯನದ ನೆಲೆಯಲ್ಲಿ ವಿಶ್ಲೇಷಿಸುತ್ತಾ ಹೋದಂತೆಲ್ಲಾ ಅವುಗಳ ಸಾಂಸ್ಕೃತಿಕ, ಜಾನಪದೀಯ ಹಾಗೂ ಭಾಷಿಕ ಮಹತ್ವಗಳು ತೆರೆದುಕೊಳ್ಳುತ್ತಾ ಹೋಗುತ್ತವೆ. ಸೂಕ್ಷ್ಮದೃಷ್ಟಿಯಿಂದ ನಡೆಸಬೇಕಾದ ಅಧ್ಯಯನ ವಿಷಯಗಳ ಪೈಕಿ ಸ್ಥಳನಾಮ ಅಧ್ಯಯನವೂ ಒಂದು. ಹೆಚ್ಚು ಜನರು ಕುತೂಹಲವನ್ನು ಕೆರಳಿಸಿ ತನ್ನ ಕಡೆಗೆ ಆಕರ್ಷಿಸಿರುವ ಸ್ಥಳನಾಮ ವಿಜ್ಞಾನ ಮಾನವನ ಬದುಕಿನಲ್ಲಿ ಒಂದು ಅನಿವಾರ್ಯ ಪ್ರಕ್ರಿಯೆಯಾಗಿ ಬೆಳೆದು ಬಂದಿದೆ. ಇಂಥ ಸ್ಥಳನಾಮ ಅಧ್ಯಯನವನ್ನು ವೈಜ್ಞಾನಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಪರಿಶೀಲಿಸುವುದಲ್ಲದೆ ಅದರ ಮಹತ್ವವನ್ನು ಗುರುತಿಸಿ ಅರ್ಥೈಸುವುದು ಸ್ಥಳನಾಮ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಶಿಲಾಯುಗದಷ್ಟು ಪೂರ್ವ ಇತಿಹಾಸವನ್ನು 'ಮಸ್ಕಿ' ಹೊಂದಿದೆ. ಲಿಂಗಸೂಗೂರು ತಾಲೂಕಿನ 'ಪಿಕಳಿಹಾಳು', ಮಾನ್ವಿ ತಾಲೂಕಿನ 'ವಟಗಲ್' ಉತ್ಖನನಗಳಿಂದ ಶಿಲೆ ಮತ್ತು ತಾಮ್ರ ಶಿಲಾಯುಗದ ಮಾನವನ ಆಯುಧಗಳಾಗಿದ್ದುದು ಸ್ಪಷ್ಟ. ಇದನ್ನು ಸಮರ್ಥಿಸುವಂತೆ ಮಸ್ಕಿಯಲ್ಲಿ ತಾಮ್ರ ಶಿಲಾಯುಗದ ಸಂಸ್ಕೃತಿ ಬೆಳಕಿಗೆ ಬಂದಿದೆ. ಮಾನ್ವಿ ತಾಲೂಕಿನ ಕಲ್ಲೂರಿನಲ್ಲಿ ತಾಮ್ರದ ಖಡ್ಗ ದೊರೆತಿದೆ. 'ಮಸ್ಕಿ', 'ವಟಗಲ್' ಪ್ರದೇಶಗಳಲ್ಲಿ ದೊರೆತ ಬೃಹತ್ ಶಿಲಾ ಸಂಸ್ಕೃತಿಯ ಸಮಾಧಿಗಳಿಗೆ ಬಳಸಲಾದ ಮಣ್ಣಿನ ವಿವಿಧ ಅಳತೆಯ ಪಾತ್ರೆಗಳು ದೊರೆತಿವೆ. 'ಮಸ್ಕಿ' ಅಶೋಕನ ಶಿಲಾ ಶಾಸನಕ್ಕೆ ಹೆಸರಾದದ್ದು ಮೌರ್ಯ ಚಕ್ರವರ್ತಿಯಾದ ಈ ಅಶೋಕನಿಗೆ 'ದೇವಾನಂಪ್ರಿಯ', 'ಪ್ರಿಯದರ್ಶಿ' ಎಂಬ ಪರ್ಯಾಯ ಹೆಸರಿತ್ತೆಂದು ಗೊತ್ತಾದದ್ದೇ ಮಸ್ಕಿ ಶಾಸನದಿಂದ ಗೌಡೂರು, ಮಸ್ಕಿಗಳಲ್ಲಿ ತಾಮ್ರ ಶಿಲಾಯುಗದ ಸಂಸ್ಕೃತಿ ಇತ್ತು. ಆಗ ಮಾನವ ಶಿಲಾಯುಗದಿಂದ ಲೋಹಯುಗಕ್ಕೆ ಬಂದಾಗ ಮೊದಲು ಬಳಸಿದ ಲೋಹವೇ ತಾಮ್ರ, ಆಯುಧಗಳಿಗಾಗಿ, ತಾಮ್ರ ಮತ್ತು ಶಿಲೆಗಳೆರಡನ್ನೂ ಬಳಸಿದ್ದುದಕ್ಕಾಗಿ ಈ ಯುಗವನ್ನು 'ತಾಮ್ರ ಶಿಲಾಯುಗ'ವೆಂದು ಕರೆಯುತ್ತಾರೆ. ಮಸ್ಕಿ ಸ್ಥಳನಾಮ ನಿಷ್ಪತ್ತಿ ಇಂದಿಗೂ ವಿದ್ವಾಂಸರಿಗೆ ಜಟಿಲವಾಗಿಯೆ

ಉಳಿದಿದೆ. ಶಾಸನಗಳಲ್ಲಿ ಮೊಸಂಗಿ>ಮೊಸಗಿ ಎಂದು ಕಾಣಿಸಿಕೊಂಡ ಈ ಗ್ರಾಮನಾಮವು ಮುಂದೆ ಮಸಗಿ>ಮಸ್ಕಿಯಾಗಿ ಬಳಕೆಗೊಂಡಿದೆ. ಎರಡು ರೀತಿಯಲ್ಲಿ ಇದನ್ನು ಅರ್ಥೈಸಬಹುದಾಗಿದೆ.

೧. ಮಸ್ಕಿಯಲ್ಲಿ ಅಶೋಕನ ಶಾಸನ ಲಭ್ಯವಾಗಿದೆ. ಅದರಲ್ಲಿ ಭೌದ್ಧಧರ್ಮದ ಸಂದೇಶವಿದೆ. ಆದ್ದರಿಂದ ಇಲ್ಲಿ ಬೌದ್ಧ ಭಿಕ್ಷುಗಳ ಮಹಾಸಂಘವಿರಬೇಕೆಂದು ತರ್ಕಿಸಲಾಗಿದೆ. ಈ ಮಹಾಸಂಘದ ರೂಪಾಂತರವೇ ಮಾಸಂಗಿಯಾಗಿರಬೇಕೆಂದು ಊಹಿಸಲಾಗಿದೆ.[೧]

೨. ಮಸ್ಕಿಯ ಪರಿಸರದಲ್ಲಿ ಬಿಡಿಬಿಡಿಯಾದ ಬೆಟ್ಟಗಳಿವೆ. ಅವುಗಳ ಗೋಪುರದಂಥ ಉನ್ನತ ಶಿಖರಗಳಿಂದಾಗಿ 'ಮಹಾಶೃಂಗಿ' ಎಂದು ಕರೆಸಿಕೊಂಡಿದೆ. ಈ 'ಮಹಾಶೃಂಗಿಯ' ತದ್ಭವವೇ ಮಾಸಂಗಿಯಾಗಿದ್ದು, ಮುಂದೆ ಅದು 'ಮೊಸಂಗಿ' ಆಗಿರಬೇಕು. 'ಸಿರಸಂಗಿಯ' ಪ್ರಾಚೀನ ಹೆಸರು 'ಯಕ್ಷ್ಯಶೃಂಗ'ವಾಗಿದೆ. 'ಶೃಂಗ,' 'ಸಂಗಿ'ಯಾಗಿ ಮಾರ್ಪಟ್ಟಿದೆಯೆಂದು ಡಾ.ಪಿ.ಬಿ.ದೇಸಾಯಿಯವರು ಹೇಳಿದ್ದಾರೆ.[೨]

ಮಸ್ಕಿಯನ್ನು ಕುರಿತ ಮೊದಲಿನ ನಿಷ್ಪತ್ತಿಯು ಪಂಡಿತ ಮೂಲದಿಂದ ಕೂಡಿದ್ದರೆ ಎರಡನೆಯದು ನಿಸರ್ಗದ ಕಡೆಗೆ ವಾಲುತ್ತಲೇ ಪಾಂಡಿತ್ಯದತ್ತ ಮುಖಮಾಡಿದೆ. ಡಾ.ಪಿ.ಬಿ.ದೇಸಾಯಿಯವರು ನಿಸರ್ಗ ಮೂಲದಿಂದ ಅರ್ಥೈಸುತ್ತಾರಾದರೂ ಮತ್ತೆ ಅದನ್ನು ಸಂಸ್ಕೃತ ಭಾಷೆಯ ನೆಲೆಯಲ್ಲಿ ನೋಡುವ ಮೂಲಕ ಮತ್ತೊಂದು ಪಂಡಿತ ನಿಷ್ಪತ್ತಿಗೆ ದಾರಿಮಾಡಿಕೊಟ್ಟಿದ್ದಾರೆ.[೩]

ಮಸ್ಕಿಯ ಸುತ್ತಮುತ್ತ ಬೆಟ್ಟಗುಡ್ಡಗಳಿರುವುದು ನಿಜವಾದರೂ ಅವು ಸ್ಥಳನಾಮಕ್ಕೆ ಕಾರಣವಲ್ಲ. ಇದನ್ನೇ ಹೋಲುವ ಎರಡು ಗ್ರಾಮನಾಮಗಳು ಕರ್ನಾಟಕದಲ್ಲಿವೆ. ಅವು

೧. ಅಸ್ಕಿ (ಬಿಜಾಪುರ ಜಿಲ್ಲೆ)

೨. ಹಾಳಅಸ್ಕಿ (ರಾಯಚೂರು ಜಿಲ್ಲೆ)

ಆದರೆ ಈ ಎರಡೂ ಊರುಗಳಲ್ಲಿ ಯಾವ ಬೆಟ್ಟಗುಡ್ಡಗಳೂ ಇಲ್ಲ. ಆದ್ದರಿಂದ ಈ ಸ್ಥಳನಾಮಗಳು ಜನಾಂಗವಾಚಿಯಿಂದ ಬಂದಿರಬೇಕು ಅದನ್ನು ಕೆಳಗಿನಂತೆ ಬಿಡಿಸಿ ತೋರಿಸಬಹುದು.

ಅಸಗ (ರ)+ಕೆಯ್>ಅಸಗೆಯ್>ಅಸಗಿ>ಅಸಕಿ>ಅಸ್ಕಿ

ಅಸಗ (ರ)+ಪಾಳ್ಯ>ಅಸಗಿ+ಪಾಳ>ಅಸಗಿ+ಹಾಳ>ಅಸಕಿ+ಹಾಳ>ಅಸ್ಕಿಹಾಳ

ಇದೇ ಮಾದರಿಯಲ್ಲಿ ಮಸ್ಕಿ ಸ್ಥಳನಾಮವನ್ನು ಬಿಡಿಸಬಹುದು. ಮೂಸೆ (ಯರ)+ಕೆಯ್> ಮೂಸಂಗೆಯ್>ಮೂಸಂಗಿ>ಮೊಸಗಿ>ಮಸಗಿ>ಮಸ್ಕಿ[೪]

'ಮಸ್ಕಿ'ಯ ಸುತ್ತಮುತ್ತ ಚಿನ್ನದ ನಿಕ್ಷೇಪವಿದ್ದುದು ಪುರಾತತ್ವ ಶೋಧಗಳಿಂದ ತಿಳಿದುಬಂದಿದೆ. ಇದನ್ನು ಭೂಮಿಯಿಂದ ಹೊರತೆಗೆಯಲು ನೂರಾರು ಗಣಿ ಕಾರ್ಮಿಕರು ಇಲ್ಲಿ ದುಡಿಯುತ್ತಿರಬೇಕು. ಹೀಗೆ

ತೆಗೆದ ಚಿನ್ನವನ್ನು ಅಕ್ಕಸಾಲಿಗರು (ಮೂಸೆ=ಚಿನ್ನ, ಬೆಳ್ಳಿ ಮೊದಲಾದ ಲೋಹಗಳನ್ನು ಕರಗಿಸಲು ಬಳಸುವ ಮಣ್ಣಿನ ಮಡಿಕೆ) ಒಡವೆ ಅಥವಾ ನಾಣ್ಯ ತಯಾರಿಕೆಗೆ (ಟಂಕಸಾಲೆ) ಬಳಸುತ್ತಿರಬೇಕು. ಇವರು ಕಲಾಕಾರರೂ ಆಗಿದ್ದರಿಂದ ಸಮಾಜದಲ್ಲಿ ವಿಶಿಷ್ಟ ಗೌರವವನ್ನು ಹೊಂದಿದ್ದರು. ಹೀಗಾಗಿ ರಾಜರು ಇವರಿಗೆ ಭೂಮಿಯನ್ನು ದಾನವಾಗಿ ನೀಡುತ್ತಿದ್ದರು. ಮಸ್ಕಿಯಲ್ಲಿ ಗಣಿಗಾರಿಕೆ ನಡೆಯುತ್ತಿದ್ದರಿಂದ ಅಕ್ಕಸಾಲಿಗರ ಸಂಖ್ಯೆ ಸಹಜವಾಗಿಯೇ ಹೆಚ್ಚಿಗಿರಬೇಕು. ಮೂಸೆಯರಿಗೆ (ಅಕ್ಕಸಾಲಿಗರು) ನೀಡಿದ ಭೂಮಿಯನ್ನು ಮತ್ತು ಅವರೇ ವಾಸಿಸುತ್ತಿದ್ದ ಪ್ರದೇಶವನ್ನು 'ಮೂಸಂಗೆಯ್' ಎಂದು ಕರೆಯಲಾಗಿದೆ. ಮುಂದೆ ಇದು ಊರಾಗಿ ಬೆಳೆದ ಮೇಲೆ ಮೂಸಂಗಿ ಮೊಸಂಗಿಯೆಂದು ಕರೆಯಿಸಿಕೊಂಡಿದೆ. ಈಗಲೂ ಮಸ್ಕಿಯಲ್ಲಿ ಅಕ್ಕಸಾಲಿಗರು ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಕಾಣಬಹುದು.[5] ಮಸ್ಕಿ ಸ್ಥಳನಾಮವು ನಿಸರ್ಗವಾಚಿಯಾಗಿರದೆ ಜನಾಂಗವಾಚಿಯಾಗಿದೆ.

ಪುರಾತನ ಮಾನವನ ನೆಲೆಗಳಾದ ಊರು, ಕೇರಿಗಳ ನಿರ್ಮಾಣದ ಚಿತ್ರ ನಮಗೆ ಶಾಸ್ತ್ರೀಯ ಸಂಶೋಧನೆಯಾದ ಸ್ಥಳನಾಮಗಳ ಅಧ್ಯಯನದಿಂದ ತಿಳಿದುಬರುತ್ತದೆ. ಪ್ರಾರಂಭಿಕ ಹಂತದಲ್ಲಿ ಆದಿಮಾನವ ಅಲೆಮಾರಿಯಾಗಿದ್ದ ಆಗ ಅವನಿಗೆ ಆಹಾರದ ಹುಡುಕಾಟ ಅನಿವಾರ್ಯವಾಗಿತ್ತು. ಗೆಡ್ಡೆ, ಗೆಣಸು-ನಾರು, ಬೇರು, ಸೊಪ್ಪು, ಹಣ್ಣು ಕಾಯಿ, ಪ್ರಾಣಿ, ಪಕ್ಷಿಗಳ ಬೇಟೆ ಆಹಾರಗಳಿಕೆಯ ಏಕೈಕ ಮಾರ್ಗವಾಗಿತ್ತು. ನಂತರದಲ್ಲಿ ಬೇಸಾಯವನ್ನು ತಿಳಿದ ಮೇಲೆ ಆಹಾರ ಸಂಗ್ರಹಣೆಯ ಕಾರ್ಯಬೇರೆಯಾಯಿತು. ಹೀಗೆ ದಿನಗಳ ಕಳೆದಂತೆ ಗುರುತಿನ ಮೂಲಕ ಬದುಕಿನ ಅಂಶಗಳು ದಾಖಲುಗೊಂಡವು. ಹೀಗೆ ಸಾಮೂಹಿಕವಾಗಿ ಜನ ಕಾಲೂರಿದ ಸ್ಥಳ ಊರಾಯಿತು.

ಪ್ರಕೃತಿ ನಿಷ್ಠ ಗ್ರಾಮಸಮಾಜಗಳ ಎರಡನೇ ಹಂತವು ಭೌಗೋಳಿಕ ಚಹರೆಯಿಂದ ಭಿನ್ನವಾಗಿ, ಸಮುದಾಯ ನಿಷ್ಠವಾಗಿರುವುದು ತಿಳಿದುಬರುತ್ತದೆ. ಅಂದರೆ ಗ್ರಾಮಗಳಿಗೆ, ಸ್ಥಳಗಳಿಗೆ ಹೆಸರಿಡುವಾಗ ತಮ್ಮ ಜನಾಂಗದ, ವ್ಯಕ್ತಿಗಳ, ಚಾರಿತ್ರಿಕ ವ್ಯಕ್ತಿಗಳ, ಧಾರ್ಮಿಕ ವ್ಯಕ್ತಿಗಳ ಹೆಸರುಗಳನ್ನು ಕೊಡಲು ಮುಂದಾದದ್ದು, ಗ್ರಾಮ ನಾಮಗಳ ಇತಿಹಾಸದಿಂದ ತಿಳಿಯುತ್ತದೆ. ನಂತರ ಅದು ಕಾಲಾಂತರದ ಬದಲಾವಣೆ ಆಯಾಕಾಲದ ಸಮಕಾಲೀನ ಸಾಮಾಜಿಕ ಜೀವನವನ್ನು ಅವಲಂಬಿಸಿ ಹೆಸರಿಡುವಿಕೆಯು ಬದಲಾವಣೆಗೆ ಒಳಗಾಯಿತು. ಗ್ರಾಮ ಸಮುದಾಯಗಳು ಆರಂಭದಲ್ಲಿ ನಿಸರ್ಗವಾಚಿಯೊಂದಿಗೆ ಹೆಸರುಗಳನ್ನು ಕರೆದುಕೊಂಡು ಕ್ರಮೇಣ ಜನಾಂಗವಾಚಿ ವ್ಯಕ್ತಿವಾಚಿಗೆ ಮುಂದಾದವು. ಈ ಕಾಲಘಟ್ಟಗಳಲ್ಲಿ ಒಂದು ಸ್ಥಳಕ್ಕೆ ಹೆಸರಿಡುವ ಕ್ರಮದಲ್ಲಿ ಅನೇಕ ಬಗೆಯ ಬದಲಾವಣೆಗಳಾದವು. ಈ ಬದಲಾವಣೆಯ ನಡುವಿನ ಅಂತರದಲ್ಲಿ ಸಂಸ್ಕೃತಿಗಳ, ಸಮುದಾಯಗಳ ವಿಕಾಸದ ಹಾದಿಯನ್ನು ನೋಡಬಹುದು. ಒಂದೊಂದು ಗ್ರಾಮ ಒಂದೊಂದು ಸಂಸ್ಕೃತಿಯನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡಿರುತ್ತದೆ. ಮಸ್ಕಿಪರಿಸರದ ಶಾಸನಗಳಲ್ಲಿ ಬಳಕೆಯಾದ ಸ್ಥಳನಾಮಗಳು ಇಂದಿಗೂ ಬಳಕೆಯಲ್ಲಿರುವುದನ್ನು ನೋಡಬಹುದು. ಪದರೂಪ ಬದಲಾವಣೆಯೊಂದಿಗೆ ಬಳಕೆಯಲ್ಲಿರುವುದನ್ನು ಗಮನಿಸಬಹುದು.

ಶಾಸನೋಕ್ತ ಸ್ಥಳನಾಮಗಳು

ಶಾಸನ ಸಂ	ದೊರಕಿದ ಸ್ಥಳ	ಶಾಸನದ ಕಾಲ	ಉಲ್ಲೇಖಿತ ಸ್ಥಳ
೧	ಲಿಂಗಸೂಗೂರು	೧೧೨೪	ನವಿಲೆ
			ಕೆಲೆಯೂರ
೨.	ಲಿಂಗಸೂಗೂರು	೧೦೭೭	ಕಲ್ಯಾಣಪುರ,
			ತಂಗೊಳ
೩.	ಯಲಗಲದಿನ್ನಿ	೧೧೨೨	ಯೊವಂತಿಗೆಯಪುರ
೫.	ಕರಡ್ಕಲ್	೧೧೯೧	ಕರಡಿಕಲ್ಲ,
			ಮುದಗಲ್ಲ,
			ಮೂಡಕೇರಿ
			ಲಿಂಗಸೂಗೂರು
೮.	ನವಿಲೆ	೧೧೩೫	ಜಾವೂರ
೧೩.	ಜಲದುರ್ಗ	೧೦೮೭	ಕಲ್ಯಾಣಪುರ,
			ಬೆಂಕೊಳ್ವ,
			ವಡ್ಡರಾವುಳ
೩೦.	ಮಸ್ಕಿ	೧೦೩೭	ಮೊಸಂಗೆ
೩೮.	ಬಳಗಾನೂರ	೧೧೮೨	ಜಲವಾಡಿಗೆ,
			ಬಳಗಾನೂರ
೯೫.	ಬಲ್ಲಟಗಿ	೧೦೫೮	ಮೊಸಳಿಕಲ್ಮೂನೂರ
೧೦೦	ನುಗಡೋಣಿ	೧೨ನೇ ಶತಮಾನ	ಪೊಟ್ಟಳಕೆರೆ
೧೦೩	ಮಲ್ಲಟ	೧೧೪೮	ಎರಡಹಳ್ಳಿ,
			ಕುರುಕುಂದೆ
೧೧೫	ಕವುತಾಳ	೧೨೧೭	ಮೊರಟ,
			ಸಿರಿವುರ,
			ಕವತಾಳ
೧೧೬	ಕವುತಾಳ	೧೨೧೭	ದೇವಗಿರಿ,
			ಕೋಗಿಲೆ

ಮಸ್ಕಿ ಪರಿಸರದಲ್ಲಿ ಸಾಕಷ್ಟು ಶಾಸನಗಳು ಲಭ್ಯವಿವೆ. ಈ ಶಾಸನಗಳು ಭಾಷಿಕ ಅಂಶಗಳನ್ನು ಒಳಗೊಂಡಿವೆ. ಮಸ್ಕಿ ಪರಿಸರದ ಶಾಸನಗಳಲ್ಲಿ ಸ್ಥಳನಾಮಗಳು ಉಲ್ಲೇಖಿತಗೊಂಡಿವೆ. ಶಾಸನದಲ್ಲಿ ಬಳಕೆಯಾಗಿರುವ ಸ್ಥಳನಾಮಗಳನ್ನು ಭಾಷಿಕವಾಗಿ ಅಧ್ಯಯನ ಮಾಡಬಹುದಾಗಿದೆ. ಮಸ್ಕಿ ಪರಿಸರದಲ್ಲಿ ದೊರೆತ ಶಾಸನಗಳಲ್ಲಿ ಉಲ್ಲೇಖವಾಗಿರುವ ಸ್ಥಳನಾಮಗಳು ಇಂದಿಗೂ ಕೆಲವು ಬಳಕೆಯಲ್ಲಿರುವುದನ್ನು ಗಮನಿಸಬಹುದು. ಮಸ್ಕಿಕನ್ನಡದ ಸೀಮಾರೇಖೆ ಗುರುತಿಸಲು ಸಹಾಯಕವಾಗುತ್ತವೆ.

ಮಸ್ಕಿ ಪರಿಸರದಲ್ಲಿ ಅನೇಕ ಶಾಸನಗಳು ಸಿಗುತ್ತವೆ. ಇವುಗಳಲ್ಲಿ ಸ್ಥಳನಾಮಗಳನ್ನು ಹೆಸರಿಸುವುದರಿಂದ ಸ್ಥಳನಾಮಗಳ ಅಧ್ಯಯನಕ್ಕೆ ಅನುಕೂಲಕರವಾಗಿದೆ. ಈ ಶಾಸನಗಳಲ್ಲಿ ಈಗಿನ ಸ್ಥಳಗಳ ಪೂರ್ವ ಹೆಸರು ಇರುವುದನ್ನು ಗಮನಿಸಬಹುದು. ಮುಖ್ಯವಾಗಿ ನಾವು 'ಜಲದುರ್ಗ'ವನ್ನು ಹೆಸರಿಸಬಹುದಾಗಿದೆ. ಈ 'ಜಲದುರ್ಗ'ದ ಹೆಸರು ಶಾಸನಗಳಲ್ಲಿ ಅಲ್ಲದೆ ಜಾನಪದ ಗೀತೆಗಳಲ್ಲಿಯೂ ಈ ಸ್ಥಳನಾಮ ಉಲ್ಲೇಖವನ್ನು ನೋಡುತ್ತೇವೆ. ಎತ್ತರವಾದ ನಿಸರ್ಗನಿರ್ಮಿತವಾದ, ಬೆಟ್ಟ, ಗುಡ್ಡ ಹಾಗೂ ಕೃಷ್ಣ ನದಿಯು ಟಿಸಿಲೊಡೆದು ಆವರಿಸಿರುವ ನಡುಗಡ್ಡೆಯ ಪ್ರದೇಶದಲ್ಲಿ ಕೋಟೆ ಇರುವುದರಿಂದ ಇದನ್ನು 'ಜಲದುರ್ಗ'ವೆಂದು ಕರೆಯುತ್ತಾರೆ.ಈ ಮುಂಚೆ ಸುರಪುರದ ಅರಸರ ಒಡೆತನದಲ್ಲಿ 'ಜಲದುರ್ಗ'ವಿತ್ತು ಇದಕ್ಕೂ ಮೊದಲು 'ಜಲದುರ್ಗ'ವನ್ನು 'ಕುಡುಗುಂದೆ' ಎಂದು ಕರೆಯುತ್ತಿದ್ದರು. ಭೌಗೋಳಿಕ ಹಿನ್ನೆಲೆಯಲ್ಲಿಯೂ ಇದು ಸರಿ ಎನಿಸುತ್ತದೆ. ಕುಡುಗುಂದೆ ಇದರರ್ಥ 'ಕುಡು' ಎಂದರೆ ಬಾಗಿರುವುದು, 'ಗುಂದೆ' ಎಂದರೆ ಬೆಟ್ಟ, ಗುಡ್ಡ ಎಂದರ್ಥ. ಕಂದಕ ಅಥವಾ ಕಣಿವೆಯನ್ನು ಹೊಂದಿರುವ ಬೆಟ್ಟ ಎಂತಲೂ ಅರ್ಥಕೊಡುತ್ತದೆ. ಬಾಗಿದ ಬೆಟ್ಟ, ಸ್ವಲ್ಪದೂರದಲ್ಲಿ ನಿಂತು ನೋಡಿದರೆ ಅದು ಬಾಗಿದ ಬೆಟ್ಟದಂತೆ ಕಾಣಿಸುವುದು.[೬] ಹಾಗಾಗಿ ಈ ಮುಂಚೆ 'ಜಲದುರ್ಗ' ಸ್ಥಳನಾಮ 'ಕುಡುಗುಂದೆ' ಎಂದಿತ್ತು. ಅಂದರೆ ನಿಸರ್ಗವಾಚಿಯಾಗಿ ಈ ಮೊದಲು ಬಳಕೆಯಲ್ಲಿತ್ತು. 'ಜಲದುರ್ಗ' ಸ್ಥಳನಾಮವನ್ನು 'ಅಮರಕಲ್ಯಾಣ'ವೆಂಬ ಹೆಸರಿನಿಂದಲೂ ಕರೆಯುವರು. ಇದಕ್ಕೆ ಕಾರಣ ಗುಲಬರ್ಗಾ ಜಿಲ್ಲೆಯ (ಈಗ ಯಾದಗಿರಿ ಜಿಲ್ಲೆಯ) ಸುರಪುರ ತಾಲೂಕಿನ ಕೊಡೆಕಲ್ಲು ಗ್ರಾಮದ ಬಸವಣ್ಣ ಎಂಬಾತ ಕ್ರಿ.ಶ. ೧೪೪೯ರಲ್ಲಿ ಶರಣಗಣಗಳೊಂದಿಗೆ 'ಜಲದುರ್ಗ'ಕ್ಕೆ ಬಂದು, ತನ್ನ ಸಂಘಟನೆಯನ್ನು ಅಮರ ಕಲ್ಯಾಣದಲ್ಲಿ ಮುಂದುವರಿಸಿದನಂತೆ. ಅದಂದಿನ ಎಚ್ಚರ ಹೇಳುವ ಕಾಲಜ್ಞಾನ ಸಾರುತ್ತಾ ಆತ್ಮಜ್ಞಾನದ ಸಾಹಿತ್ಯ ರಚಿಸುತ್ತಾ ಜಲದುರ್ಗವನ್ನು 'ಅಮರ ಕಲ್ಯಾಣ'ವಾಗಿಸುವ ಪ್ರಯತ್ನ ಮಾಡುತ್ತಾನೆ. ಜಾನಪದದ ಅಧ್ಯಯನದಲ್ಲಿಯೂ 'ಜಲದುರ್ಗದ' ಸ್ಥಳನಾಮವು ಕಂಡುಬರುತ್ತದೆ. ಇದರಿಂದ ಜಾನಪದದ ಅಧ್ಯಯನಕ್ಕೆ ಸ್ಥಳನಾಮವು ಅತ್ಯುಪಯುಕ್ತವಾಗುತ್ತವೆ. ಈ ಕೆಳಗಿನ ಗೀತೆಯಲ್ಲಿ 'ಜಲದುರ್ಗ'ದ ಸ್ಥಳನಾಮವನ್ನು ಗಮನಿಸಬಹುದು. ಗುಂತಗೋಳದ ಸಂಸ್ಥಾನದ ರಾಜಾ ರಾಯಪ್ಪ ನಾಯಕನ ಬಗ್ಗೆ ಹೇಳುತ್ತಾ ಅದರಲ್ಲಿ 'ಜಲದುರ್ಗ'ದ ಉಲ್ಲೇಖವನ್ನು ಗಮನಿಸಬಹುದು.

''ರನ್ನದಾರುತಿ ಬೆಳಗಿರೇ, ರಾಜಾರಾಯಣ್ಣ
ನಾಯಕರಿಗೆ ಚಿನ್ನದಾರುತಿ ಬೆಳಗಿರೇ,
''ಜಲದುರ್ಗ'' ಅಧ್ಯಾತ್ಮ ಭವದೊಳಗೆ
ಪವಡಿಸಿ ಮೌನಾಚರಣೆಗೈದ ರಾಯನಿಗೆ
ರನ್ನದಾರುತಿ ಬೆಳಗಿರೇ, ರಾಜಾ ರಾಯಣ್ಣ........[೭]

ಗುಂತಗೋಳದ ಸಂಸ್ಥಾನಿಕರ ಗಡಿಯನ್ನು ಸೂಚಿಸುವ ಜನಪದ ಗೀತೆಯೊಂದರಲ್ಲಿ ''ಜಲದುರ್ಗ'' ಸ್ಥಳನಾಮವನ್ನು ಗಮನಿಸಬಹುದು.

''ಮಾಮಲೆ ಮುದಗಲ್, ಕಿಲ್ಲೆ ಜಲದುರ್ಗ
ಸಮತ್ ಗೋನವಾಟ್ನ| ಸಂಸ್ಥಾನ
ನಮ್ಮ ರಾಜರದು||''[೮]

ಜಾನಪದದ ಗೀತೆಗಳಲ್ಲಿ ಬರುವ ''ಸ್ಥಳನಾಮಗಳು'' ಮತ್ತು ಅವುಗಳ ಅಧ್ಯಯನದಿಂದ ರಾಜರ ಸಂಸ್ಥಾನಿಕರ ಗಡಿಯನ್ನು ಸೂಚಿಸಲು ಅನುಕೂಲವಾಗುತ್ತವೆ. ಹೀಗೆ ''ಜಲದುರ್ಗ'' ಸ್ಥಳನಾಮವು ತನ್ನದೇ ಚಾರಿತ್ರಿಕ ಅಂಶಗಳನ್ನು ಹೊಂದಿದ್ದು ಈ ಮೊದಲು 'ಕುಡುಗುಂದೆ' ಎಂದು ನಂತರದಲ್ಲಿ 'ಅಮರಕಲ್ಯಾಣ' ಆಗಲು ಪ್ರಯತ್ನಿಸಿದ್ದು ನೆನೆಯಬಹುದಾಗಿದೆ. 'ಜಲದುರ್ಗ' ಸ್ಥಳನಾಮವು ಜಾನಪದ ಗೀತೆಗಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿದ್ದು 'ಜಲದುರ್ಗ' ಪುರಾತನ ಸ್ಥಳನಾಮ ಎನ್ನಬಹುದು.

೬.೧. ಕನ್ನಡ ನಾಡಿನ ಸ್ಥಳನಾಮಗಳ ಪ್ರಾಚೀನತೆ

''ನೈಸರ್ಗಿಕ ಸೌಂದರ್ಯ ಸೊಬಗಿನ ಕರ್ನಾಟಕ ರಾಜ್ಯದಲ್ಲಿ ಒಂದೊಂದು ಊರಿನ ಹೆಸರುಗಳೂ, ಒಂದೊಂದು ಪ್ರಾಂತ್ಯದ ಸೀಮೆಯ ಹೆಸರುಗಳೂ ಕೂಡಾ ವೈವಿಧ್ಯಮಯ ವರ್ಣನೆಯಿಂದ ಉಲ್ಲೇಖಿತಗೊಂಡಿವೆ. ಈ ಹಿನ್ನೆಲೆಯಲ್ಲಿ ಸ್ಥಳನಾಮಗಳ ಅಧ್ಯಯನದ ವಿವರಣಾತ್ಮಕ ನೆಲೆಗಳನ್ನು ಗುರುತಿಸಬಹುದು. ಕರ್ನಾಟಕ ಪ್ರಾಂತ್ಯವನ್ನು ಕದಂಬರಿಂದ ಹಿಡಿದು ಮೈಸೂರು ಒಡೆಯರವರೆಗೂ ಆಳಿದ್ದಾರೆ. ಕವಿರಾಜಮಾರ್ಗದ ಉಲ್ಲೇಖದ ಪ್ರಕಾರ ಕನ್ನಡ ನಾಡು ಎಂಬುದು ದಕ್ಷಿಣದ ಕಾವೇರಿಯಿಂದ ಹಿಡಿದು ಗೋದಾವರಿಯವರೆಗಿದ್ದ ನಾಡು. ನಂಜುಂಡ ಕವಿಯ (ಸು. ೧೫೨೫) ರಾಮನಾಥ ಚರಿತದಲ್ಲಿಯ ಉಲ್ಲೇಖವೂ ಈ ವಿಷಯವನ್ನು ಘೋಷಿಸುತ್ತದೆ.''[೧೦] ಈ ಕವಿರಾಜಮಾರ್ಗದ ಕರ್ತೃ ಹೇಳುವ ಪ್ರಕಾರ ವಿಜಾಪುರ ಜಿಲ್ಲೆಯ ಪಟ್ಟದಕಲ್ಲು, ರಾಯಚೂರು, (ಕೊಪ್ಪಳ) ಜಿಲ್ಲೆಯ ಕೊಪ್ಪಳ, ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರ ಮತ್ತು ಬೆಳಗಾವಿ ಜಿಲ್ಲೆಯ ಒಕ್ಕುಂದ ಇವುಗಳ ನಡುವೆ ಇದ್ದ ಪ್ರದೇಶವು ಕನ್ನಡ ನಾಡಿನ ತಿರುಳು. ಶಾಸನಗಳು, ಸಾಹಿತ್ಯ ಮತ್ತು ಸ್ಥಳನಾಮಗಳ ಆಧಾರದ ಮೇಲೆ ಈ ಎಲ್ಲೆಯನ್ನು ಗುರುತಿಸಿದ್ದಾರೆ.

ಕರ್ನಾಟಕದ ಸ್ಥಳನಾಮಗಳನ್ನು ಕುರಿತ ಅತಿಪ್ರಾಚೀನ ಉಲ್ಲೇಖ ಹಲ್ಮಿಡಿ ಶಾಸನದಲ್ಲಿ ಅನಂತರ ಕವಿರಾಜಮಾರ್ಗದಲ್ಲಿ ದೊರೆಯುತ್ತದೆ. ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ 'ಇಸಿಲ' ಎಂಬ ಪದ ಕನ್ನಡದ

ಅತಿಪ್ರಾಚೀನ ಪದಗಳಲ್ಲಿ ಒಂದಾಗಿದೆ, ಎಂಬುದು ವಿದ್ವಾಂಸರ ಅಭಿಪ್ರಾಯ. ಒಟ್ಟಿನಲ್ಲಿ ಕನ್ನಡನಾಡಿನ ಪ್ರಾದೇಶಿಕತೆಯ ನೆಲದಲ್ಲಿ ಕೆಲವು ಪ್ರಾಚೀನ ಸ್ಥಳನಾಮಗಳನ್ನು ಗುರುತಿಸಬಹುದು. ಅವುಗಳಲ್ಲಿ 'ಮುದಗಲ್ಲು' 'ಇಸಿಲ', 'ಹಲ್ಮಿಡಿ', 'ಬಾದಾಮಿ', 'ಕೊಪಣ', 'ಕಿಸುಹೊಳಲು' 'ಪಟ್ಟದಕಲ್ಲು', 'ಪುಲಿಗೆರೆ' 'ಒಕ್ಕುಂದ', 'ಬನವಾಸಿ', 'ಮಸ್ಕಿ' ಪ್ರಮುಖವಾದವು ಹೀಗೆ ಕನ್ನಡನಾಡಿನ ಸ್ಥಳನಾಮಗಳು ನೂರಾರು ವರ್ಷಗಳ ಹಿಂದೆಯೇ ಉಗಮಗೊಂಡು ಅವು ವಿವಿಧ ಬದಲಾವಣೆಗೆ ಒಳಗಾಗಿವೆ.

ಪ್ರಾಚೀನ ಸ್ಥಳನಾಮಗಳಲ್ಲಿ 'ಮುದಗಲ್ಲು' ಪ್ರಮುಖವಾದದ್ದು, ಮುದಗಲ್ಲು ಲಿಂಗಸೂಗೂರು ತಾಲೂಕಿನಿಂದ ೧೮ ಕಿ.ಮೀದೂರದಲ್ಲಿದೆ. ಗ್ರೀಕ್ ದೇಶದ ಪ್ರವಾಸಿ ಹಾಗೂ ಭೂಗೋಳ ತಜ್ಞ 'ಟಾಲೆಮಿ'ಯು ಕ್ರಿ.ಶ. ೧೫೦ ರಲ್ಲಿ ಬರೆದ 'Indian geography' ಎಂಬ ಕೃತಿಯಲ್ಲಿ ಕರ್ನಾಟಕದ ಕೆಲವು ಪ್ರಮುಖ ಐತಿಹಾಸಿಕ ಸ್ಥಳಗಳನ್ನು ಉಲ್ಲೇಖಿಸಿರುತ್ತಾನೆ. ಅವುಗಳಲ್ಲಿ ಮುದಗಲ್ಲು ಅನ್ನು ''Modogallu'' (ಮೋಡೋಗಲ್ಲು) ಎಂದು ಹೆಸರಿಸುತ್ತಾನೆ.[೧೧] ಆಗಾಗಿ ಆ ಕಾಲಕ್ಕೆ ಇದೊಂದು ಇತಿಹಾಸ ಮತ್ತು ಸಂಸ್ಕೃತಿಯ ಪ್ರದೇಶವಾಗಿತ್ತು ಎನ್ನಬಹುದು. 'ಮುದಗಲ್ಲು' ಚರಿತ್ರೆಯ ಪೂರ್ವಕಾಲದ ಮಾನವನ ವಾಸಸ್ಥಳದ ನೆಲೆಯಾಗಿತ್ತು. 'ಮುದಗಲ್ಲು' ಕೋಟೆಯನ್ನು ಹೊಂದಿದ್ದು, ದಕ್ಷಿಣ ಭಾರತದ ಅತ್ಯಂತ ಪ್ರಾಚೀನ 'ಕ್ಯಾಥೋಲಿಕ್' ಚರ್ಚ್‌ನ್ನು ಒಳಗೊಂಡಿದೆ.[೧೨] ಕ್ರಿ.ಶ. ೧೦೪೮ರ ಶಾಸನವೊಂದು 'ಮುದಗಲ್ಲು'ನಲ್ಲಿದ್ದು ಇದು ಇಲ್ಲಿಯ ಅತೀ ಪ್ರಾಚೀನ ಶಾಸನವಾಗಿದೆ. ಆಗ ಮುದಗಲ್ಲು ಕಲ್ಯಾಣ ಚಾಲುಕ್ಯರ ಅರಸ ಒಂದನೇ ಸೋಮೇಶ್ವರನ ಅಧೀನದಲ್ಲಿತ್ತು. ನಂತರ ೧೧ನೇ ಶತಮಾನದಲ್ಲಿ ''ಅಗ್ರಹಾರ ಮುದಗಲ್ಲು'' (ವಿದ್ಯಾಕೇಂದ್ರ) ಎಂದು ಹೆಸರಾಯಿತು.[೧೩] ಕ್ರಿ.ಶ. ೧೫೩೦ರಲ್ಲಿ ಅಚ್ಯುತದೇವರಾಯನ ಕಾಲದಲ್ಲಿ ಮಸ್ಕಿ ಸೀಮೆಯನ್ನು ಇಮ್ಮಡಿ ಮೇದಿನಿರಾಯನಿಗೆ ನೀಡಲಾಗಿತ್ತು. ಈತನ ಅವಧಿಯಲ್ಲಿ ಮುದಗಲ್ಲನ್ನು ''ಮುದಗಲ್ಲುನಾಡು'' ಎಂದು ಕರೆಯಲಾಗುತ್ತಿತ್ತು. ಕ್ರಿ.ಶ. ೧೫೦೩ರಲ್ಲಿ 'ಲಿಂಗಸೂಗೂರು', 'ಮುದಗಲ್ಲು' ಪ್ರದೇಶಗಳು ವಿಜಯನಗರದ ಆಳ್ವಿಕೆಗೆ ಒಳಪಟ್ಟಿದ್ದವು. ನಂತರದಲ್ಲಿ ಕ್ರಿ.ಶ. ೧೫೧೩ರಲ್ಲಿ ಬಹುಮನಿ ಅರಸರ ವಶಕ್ಕೆ ಬರುತ್ತವೆ. ಆ ಸಮಯದಲ್ಲಿ ಮುದಗಲ್ಲನ್ನು ''ಮುದಗಲ್ಲು ಸೀಮೆ'' ಎಂದು ಕರೆಯುತ್ತಿದ್ದರು.[೧೪] ಮುಂದಿನ ದಿನಗಳಲ್ಲಿ 'ಮುದಗಲ್ಲು' ಪಟ್ಟಣವಾಗಿ ಬೆಳೆಯಿತು. ಮುದಗಲ್ಲು ಸ್ಥಳನಾಮವು ಕಾಲ ಕಾಲಕ್ಕೆ ಬದಲಾಗಿರುವುದನ್ನು 'ಸ್ಥಳನಾಮ ಅಧ್ಯಯನ' ಮಾಡಿದರೆ ಅಲ್ಲಿಯ ಇತಿಹಾಸವು ನಮಗೆ ದೊರಕುತ್ತದೆ. ಇದರಿಂದ ಸ್ಥಳನಾಮಗಳಿಂದ ಇತಿಹಾಸವನ್ನು ತಿಳಿಯಬಹುದಾಗಿದೆ. ಕ್ರಿ.ಶ. ೧೫೦ರಲ್ಲಿ ಟಾಲೆಮಿಯು 'ಮುದಗಲ್ಲು' ಅನ್ನು ''ಮೋಡೋಗಲ್ಲು'' ಎಂದು ೧೧ನೇ ಶತಮಾನದಲ್ಲಿ ''ಅಗ್ರಹಾರ ಮುದಗಲ್ಲು'' ಎಂದು ೧೫೧೩ರಲ್ಲಿ ''ಮುದಗಲ್ಲು ಸೀಮೆ'' ಎಂದು, ೧೫೩೦ರಲ್ಲಿ ''ಮುದಗಲ್ಲುನಾಡು'' ಎಂದು, ನಂತರದಲ್ಲಿ ''ಮುದಗಲ್ಲು'' ಎಂಬುದಾಗಿ ಬಳಕೆಗೊಂಡಿರುವುದು ಸ್ಥಳನಾಮದ ಅಧ್ಯಯನದಿಂದ ತಿಳಿದುಬರುತ್ತದೆ. 'ಮುದಗಲ್ಲು' ಅಗ್ರಹಾರ ಆಗಿತ್ತು ಎಂಬುವುದು ಸ್ಥಳನಾಮದ ಅಧ್ಯಯನದಿಂದ ಗೊತ್ತಾಗುವುದು ಸ್ಥಳನಾಮಗಳಲ್ಲಿ ಅತಿ ಪ್ರಾಚೀನವಾದ ಪ್ರದೇಶವು 'ಮುದಗಲ್ಲು' ಆಗಿದೆ.

ಕರಡಿಕಲ್ಲು : ಕರಡಿಕಲ್ಲಿನ ಅತ್ಯಂತ ಪ್ರಾಚೀನ ಉಲ್ಲೇಖ ಕ್ರಿ.ಶ. ೯೨೭ರ ಎರಡೋಣಿ ಶಾಸನದಲ್ಲಿದೆ. ಈ ಶಾಸನವು ಅದನ್ನು 'ಕರಡಿಕಲ್ನಾಡು' ಎಂದು ಕರೆದಿದೆ. ನಂತರ ಕರಡಿಕಲ್ಲು-೩೦೦ ಎಂದು ಪ್ರಸಿದ್ಧಿ ಹೊಂದಿತ್ತು. ಮುದಗಲ್ಲು ೧೩ನೆಯ ಶತಮಾನದ ಆರಂಭಕ್ಕೆ ಕರಡಿಕಲ್ಲು-೩೦೦ರ ರಾಜಧಾನಿಯಾಗಿತ್ತು. ಕರಡಿಕಲ್ಲು ಕ್ರಿ.ಶ. ೧೦೪೬ರ ವೇಳೆಗೆ ಮೂರು ನೂರು ಹಳ್ಳಿಗಳ ವಿಭಾಗವಾಗಿ ರೂಪುಗೊಂಡಿತ್ತು. ಕರಡಿಕಲ್ಲು ಕೆರೆ ಪ್ರಸಿದ್ಧವಾದುದು. ಇದನ್ನು ಕಟ್ಟಿಸಿದಾತ ಬಿಲ್ಲಮರಾಜನೆಂದೂ, ಕೆರೆ ನಿಲ್ಲದೆ ಹೋದಾಗ ಬಿಜ್ಜಮ್ಮ ಎಂಬಾಕೆಯನ್ನು ಕೆರೆಗೆ ಹಾರ ಕೊಡಲಾಯಿತೆಂದೂ 'ಕರಡಿಕಲ್ಲು' ಸ್ಥಳಪುರಾಣ ಹೇಳುತ್ತದೆ. ಕರಡಕಲ್ಲು ಸ್ಥಳಪುರಾಣ ಮತ್ತು 'ಲಿಂಗಸೂಗೂರು'ಗಳಲ್ಲಿ ಹಾಡುವ ಜನಪದ ಮಹಿಳೆಯರು ಇದ್ದಾರೆ. ಇದನ್ನು 'ಕರಡ್ಕಲ್ಲು', 'ಕಡಕಲ್ಲು' ಎಂದು ಕರೆಯುತ್ತಾರೆ. ಈ ಸ್ಥಳನಾಮವು ಶಾಸನಗಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿದೆ.

ಲಿಂಗಸೂಗೂರು : ಲಿಂಗಸೂಗೂರು ಒಂದು ತಾಲೂಕು ಕೇಂದ್ರ ಇಲ್ಲಿಯ 'ಕರಡಿಕಲ್ಲು' ಗ್ರಾಮವು ಶಾಲಿವಾಹನ ಶಕೆ ೧೦೪೦ ಕ್ರಿ.ಶ. ೧೧೧೮ರಲ್ಲಿ ಕದಂಬರ ಆಡಳಿತಕ್ಕೆ ಒಳಪಟ್ಟಿತ್ತು. ಕ್ರಿ.ಶ. ೧೧೨೪ರಲ್ಲಿ ತ್ರಿಭುವನಮಲ್ಲನು ಕಲ್ಯಾಣದ ಸೀಮೆಯಲ್ಲಿದ್ದಾಗ ಆತನ ರಾಣಿ ಅಬ್ಬಲಾದೇವಿಯು ಕರಡಿಕಲ್ಲು-೩೦೦ ಹತ್ತಿರದ 'ಲಿಂಗ' ಎಂಬ ಗ್ರಾಮವನ್ನು ಆಳುತ್ತಿದ್ದ ವಿಷಯ ಲಿಂಗಸೂಗೂರಿನ ಪುರಾತನ ಕಲ್ಲೇಶ್ವರ ದೇವಾಲಯ (ಕಲಿದೇವ)ದ ಶಿಲಾಲಿಪಿಯಲ್ಲಿದೆ. ಲಿಂಗಸೂಗೂರಿನ ಅಷ್ಟದಿಕ್ಕುಗಳ ಬಹು ಭಾಗಗಳಲ್ಲಿ ಲಿಂಗಗಳು ಭೂಗತವಾಗಿರುವ ಕಾರಣ 'ಲಿಂಗ' ಎಂಬ ಹೆಸರು ಬಂದಿತು. ನಂತರದಲ್ಲಿ 'ಲಿಂಗಸಾಗರ'ವಾಯಿತು. ಕಾಲ ಕಳೆದಂತೆ ಆಡುಭಾಷೆಯಲ್ಲಿ 'ಲಿಂಗಸೂಗೂರು' ಆಯಿತು. ಲಿಂಗಸೂಗೂರುನಲ್ಲಿ ಹೈದರಾಬಾದ್ ನಿಜಾಮರು ಬ್ರಿಟೀಷರೊಂದಿಗೆ ಸಂಧಾನ ಮಾಡಿಕೊಂಡು ಸಂಸ್ಥಾನಗಳ ಆಡಳಿತ ನಡೆಸುತ್ತಿದ್ದರು. ಇದು ಅಂದು 'ಛಾವಣಿ' ಎಂದು ಕರೆಯಲ್ಪಟ್ಟಿತ್ತು. 'ಛಾವಣಿ' ಎಂದರೆ ಮಿಲಿಟರಿ ಏರಿಯಾ, ಸೈನಿಕರ ತಾಣ, ಬಿಡಾರ ಅಥವಾ ದಂಡಿನ ಪ್ರದೇಶ, ಇಲ್ಲಿ ಕ್ಯಾಪ್ಟನ್ ವಿಂಡೇಮ್ ಎಂಬ ಬ್ರಿಟಿಷ್ ಸೈನ್ಯಧಿಕಾರಿ ವಾಸವಾಗಿದ್ದ ಈ ಛಾವಣಿ ಇಂದು ಲಿಂಗಸೂಗೂರು ತಾಲೂಕಾಗಿದೆ. ಹಿಂದಿನ ಲಿಂಗಸೂಗೂರು ಇಂದು 'ಕಸಬಾಲಿಂಗಸೂಗೂರು' ಎಂದೆನಿಸಿಕೊಂಡಿದೆ.[೧೨] ಕಸಬಾ ಎಂಬುದು ಉರ್ದುಪದ ಇದರ ಅರ್ಥ ಗ್ರಾಮ ಇದನ್ನು ಲಿಂಗಸೂಗೂರು ಗ್ರಾಮ ಎಂದು ಕರೆದರೆ ಸೂಕ್ತ ಎನ್ನುವುದು ಇತಿಹಾಸಕಾರರ ಸಲಹೆ.

ನಿರ್ದಿಷ್ಟ ಹೆಸರುಗಳುಳ್ಳ ಪದಗಳೇ ಸ್ಥಳನಾಮಗಳು ಭೌಗೋಳಿಕ ಲಕ್ಷಣಗಳನ್ನು ಸೂಚಿಸುವಂತಹ ಎಂಬ ಸಾಮಾನ್ಯ ಅರ್ಥದಲ್ಲಿ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯವನ್ನು ಸೂಚಿಸುವಂತಹ ಎಂಬ ವಿಶೇಷ ಅರ್ಥದಲ್ಲಿ ಸ್ಥಳನಾಮಗಳನ್ನು ಅರ್ಥೈಸಬಹುದು. ಸ್ಥಳಗಳ ವಿಸ್ತೀರ್ಣತೆ ಮತ್ತು ಅಲ್ಲಿ ನೆಲೆನಿಂತ ಜನಸಂಖ್ಯೆ ಮೊದಲಾದವುಗಳ ಆಧಾರದಿಂದ ಅವುಗಳನ್ನು ಹಳ್ಳಿ, ಊರು, ಗ್ರಾಮ ಹಾಳ ಮೊದಲಾಗಿ ಕರೆಯಲಾಗಿದೆ.

ಮಸ್ಕಿ ಕನ್ನಡ ನಾಡಿನ ಪ್ರಾಚೀನ ಸ್ಥಳನಾಮಗಳಲ್ಲಿ ಒಂದು, ಮಸ್ಕಿ ಇತಿಹಾಸದ ಬಗ್ಗೆ ಸಾಕಷ್ಟು ಅಧ್ಯಯನಗಳು ಈಗಾಗಲೇ ನಡೆದಿವೆ. ಶಾಸನಗಳ ಅನ್ವೇಷಣೆಯ ಕಾರ್ಯದಿಂದ ಸಂಪೂರ್ಣ ಅಲಕ್ಷ್ಯಕ್ಕೆ ಒಳಗಾದ ಕಲ್ಯಾಣ ಕರ್ನಾಟಕದ ಕಡೆಗೆ ಶಾಸನ ತಜ್ಞರ ಗಮನವನ್ನು ಮೊತ್ತಮೊದಲಬಾರಿಗೆ ಸೆಳೆದವರು 'ಬೀಡನ್' ಎಂಬ ಇಂಜಿನಿಯರ್, ಮಸ್ಕಿಯ ಗುಡ್ಡಗಳಲ್ಲಿ ಲೋಹ ನಿಕ್ಷೇಪಗಳನ್ನು ಪತ್ತೆಹಚ್ಚಲು ಸಂಚರಿಸುತ್ತಿದ್ದ

ಅವರಿಗೆ ಆಕಸ್ಮಿಕವೆಂಬಂತೆ 'ಅಶೋಕ'ನ ಶಾಸನ ಗೋಚರಿಸಿತು. ೧೯೧೫ರಲ್ಲಿ ಕಂಡುಹಿಡಿದ ಈ ಶಾಸನ ಚರಿತ್ರೆಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ಅದುವರೆಗೆ 'ದೇವಾನಾಂಪ್ರಿಯ', 'ಪ್ರಿಯದರ್ಶಿರಾಜಾ' ಹಾಗೂ 'ದೇವಾನಾಂಪ್ರಿಯರಾಜಾ' ಎಂಬ ಬಿರುದುಗಳನ್ನು ಧರಿಸಿದ್ದ ವ್ಯಕ್ತಿ ಯಾರು? ಎಂಬ ಅನುಮಾನಕ್ಕೆ ಖಚಿತವಾದ ಆಧಾರವನ್ನು ಒದಗಿಸಿತು. ಅಂದಿನಿಂದ ಈ ಭಾಗದ ಶಾಸನಗಳ ಕಡೆಗೆ ವಿದ್ವಾಂಸರು ಗಮನ ಹರಿಸಿದರು. ಈ ಶಾಸನವು ಲಭಿಸಿರುವುದರಿಂದ 'ಮಸ್ಕಿ' ಪ್ರಾಚೀನ ಸ್ಥಳನಾಮಗಳಲ್ಲಿ ಒಂದಾಗಿದೆ. ಅಲ್ಲದೆ 'ಮಸ್ಕಿ'ಯಲ್ಲಿಯ ಪ್ರಾಗೈತಿಹಾಸಿಕ ಇತಿಹಾಸವನ್ನು ಪತ್ತೆಹಚ್ಚುವಲ್ಲಿ 'ಕರ್ನಲ್ ಮೆಡೋಸ್ ಡೀಲ'ರನು ಮೊದಲಿಗನಾಗಿದ್ದಾರೆ. ಕ್ರಿ.ಶ. ೧೮೩೫ರ ಸುಮಾರಿನಲ್ಲಿ ಕರ್ನಲ್ ಮೆಡೋಡ್ ಟೇಲರನು, ಮುಂಬೈ ಶಾಖೆಯ 'Royal asiatic society - iv volume'ನಲ್ಲಿ ಈ ರಾಯಚೂರು ಜಿಲ್ಲೆಯ ಪ್ರಾಚ್ಯವಶೇಷಗಳ ಸಂಪೂರ್ಣ ವಿವರವನ್ನು ನೀಡಿದ್ದಾರೆ. ಕ್ರಿ.ಶ. ೧೮೪೨ರಲ್ಲಿ ಮಸ್ಕಿ ಸಮೀಪದಲ್ಲಿರುವ 'ಬೆಣಕಲ್' ಎಂಬ ಗ್ರಾಮದಲ್ಲಿ ಕಲ್ಲಿನಲ್ಲಿ ನಿರ್ಮಿತವಾದ ಮನುಷ್ಯನ ಆಕೃತಿ ಭಾರತದಲ್ಲಿಯೇ ಅತ್ಯಂತ ಹಳೆಯದೆಂದೂ, 'ಮಸ್ಕಿ', 'ಪಿಕಳಿಹಾಳ'ಗಳಲ್ಲಿ ಶಿಲಾಯುಗ, ನವಶಿಲಾಯುಗ, ತಾಮ್ರಶಿಲಾಯುಗ, ಕಬ್ಬಿಣದ ಯುಗದ ಸಂಸ್ಕೃತಿಗಳ ತಾಣವೆಂದು ಕಲ್ಪಿಸಲಾಗಿದೆ. ದನ, ಕುರಿ, ಮೊದಲಾದ ಪ್ರಾಣಿಗಳ ಎಲುಬುಗಳು, ಗಾಜಿನ, ಮಣ್ಣಿನ ಮಣಿಗಳು, ಚಾಕು, ಶಂಖ, ಮಡಕೆಗಳು, ಬಳೆಗಳು ಹಾಗೂ ತಾಮ್ರದ ಆಯುಧಗಳಿಗಿಂತ ಶಿಲೆಯ ಆಯುಧಗಳು ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗಿವೆ.[೧೬]

'ರೆವರೆಂಡ್ ಜಿ.ಕೇಯಿಸ್'ರವರು ಕ್ರಿ.ಶ. ೧೮೭೦ರಿಂದ ೧೮೮೦ರ ಅವಧಿಯಲ್ಲಿ ಈ ಭಾಗದಲ್ಲಿಯ ಬೃಹತ್ ಶಿಲಾಯುಗದ ಗೋರಿಗಳನ್ನು ಪತ್ತೆಹಚ್ಚಿದ್ದಾರೆ. ಈ ಜಿಲ್ಲೆಯ ಪ್ರಾಗೈತಿಹಾಸಿಕ ಪ್ರಮುಖ ನೆಲೆಗಳೆಂದರೆ, ಲಿಂಗಸೂಗೂರು ತಾಲೂಕಿನ 'ಆನೆಹೊಸುರು', 'ಐದನಾಳ', 'ಕರಡಿಕಲ್ಲು' ಇಲ್ಲಿ ೧೯೩೬-೩೭ರಲ್ಲಿ ಉತ್ಖನನ ಮಾಡಿದಾಗ, ಕಂಚಿನ ಮೂರ್ತಿಗಳು ಹಾಗೂ ಕೆಲವು ಪಾತ್ರೆಗಳು ಸಿಕ್ಕಿವೆ. ಅವುಗಳು ಸದ್ಯ ಮದ್ರಾಸ್ ವಸ್ತುಸಂಗ್ರಹಾಲಯದಲ್ಲಿವೆ. 'ಗೌಡೂರು', 'ಮಸ್ಕಿ'ಗಳಲ್ಲಿ ತಾಮ್ರ ಶಿಲಾಯುಗದ ಸಂಸ್ಕೃತಿ ಇತ್ತು. ಆಗ ಮಾನವ ಶಿಲಾಯುಗದಿಂದ ಲೋಹಯುಗಕ್ಕೆ ಬಂದಾಗ ಮೊದಲು ಬಳಸಿದ ಲೋಹವೇ ತಾಮ್ರ. ಆಯುಧಗಳಿಗಾಗಿ, ತಾಮ್ರ ಮತ್ತು ಶಿಲೆಗಳೆರಡನ್ನೂ ಬಳಸಿದ್ದುದಕ್ಕಾಗಿ ಈ ಯುಗವನ್ನು 'ತಾಮ್ರಶಿಲಾಯುಗ'ವೆಂದು ಕರೆಯುತ್ತಾರೆ. ಅಲ್ಲದೆ ಇಲ್ಲಿ ಕೇಂದ್ರ ಪುರಾತತ್ವ ಸರ್ವೇಕ್ಷಣ ವಿಭಾಗದವರು ೧೯೪೭-೧೯೫೪ರ ವರೆಗೆ ಉತ್ಖನನ ಕೈಗೊಂಡಾಗ ಈ ಸ್ಥಳ ಭಾರತದ ಪುರಾತತ್ವ ಶೋಧಗಳಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಇಲ್ಲಿ ಕಲ್ಲಿನ ಕೊಡಲಿ, ಬಾಚಿ, ಉಳಿ, ಉಂಗುರ, ಬಳೆಗಳು ಲಭ್ಯವಾಗಿವೆ. ಬೃಹತ್ ಶಿಲಾಸಂಸ್ಕೃತಿಗೆ ಸಂಬಂಧಿಸಿದ ಕೆಲವು ಬೃಹತ್ ಕಲ್ಲುಗಳಿಂದ ನಿರ್ಮಿಸಿದ ಗೋರಿಗಳು ಲಭ್ಯವಾಗಿವೆ. ಹೀಗಾಗಿ ಇದು ಸಿಂಧೂ ಬಯಲಿನ ಹರಪ್ಪ ಸಂಸ್ಕೃತಿಯ ಸಮಕಾಲೀನವಾಗಿತ್ತೆಂದು ಹೇಳಬಹುದು. ನಂತರ 'ಮುದಬಾಳ', 'ಬಿಲ್ಲಮರಾಯನ ಗುಡ್ಡ' 'ಹೊನ್ನಳ್ಳಿ', 'ಪಿಕಳಿಹಾಳು', 'ವೆಂಕಟಾಪುರ', ಮಾನ್ವಿ ತಾಲೂಕಿನ 'ಕಲ್ಲೂರಿ'ನಲ್ಲಿ ಮೂರು ತಾಮ್ರದ ಖಡ್ಗಗಳು ಸಿಕ್ಕಿವೆ. 'ಕೋಟೆಕಲ್', 'ವಟಗಲ್'ನಲ್ಲಿ ಬೃಹತ್ ಶಿಲಾಸಂಸ್ಕೃತಿಯ ಸಂದರ್ಭದಲ್ಲಿ ಬಳಸುತ್ತಿದ್ದ ಮಣ್ಣಿನ ವಿವಿಧ ಆಕಾರದ ಮಡಕೆಗಳು, ಮುಚ್ಚಳಗಳು, ಬಟ್ಟಲುಗಳು.

ಕಬ್ಬಿಣದ ಆಯುಧಗಳು ಲಭ್ಯವಾಗಿವೆ. ಮಸ್ಕಿ ಪರಿಸರದಲ್ಲಿರುವ ಇನ್ನಿತರ ಸ್ಥಳಗಳು 'ಕವಿತಾಳ', 'ನವಲಕಲ್', 'ಸಿರವಾರ', 'ಅಂಗೋಳಿ', ಹಾಗೂ 'ಸಿಂಧನೂರು' ತಾಲ್ಲೂಕಿನ 'ಅಂಗೋಲಿ', 'ಗೊಬ್ಬರಕಲ್', 'ರೊಡಲಾಕುಂಡಾ', 'ಕುರಕುಂದಿ', 'ಸಾಲಗುಂದಿ', ಮುಂತಾದವುಗಳು ದೇವದುರ್ಗ ತಾಲ್ಲೂಕಿನ 'ಬೆಣಕಲ್', ಹಳೆ ಸಿಂಧಿಗುಡ್ಡಗಳೂ ಪ್ರಾಗೈತಿಹಾಸಿಕ ಪ್ರಾದೇಶಗಳಾಗಿದ್ದವು. ಮಸ್ಕಿ ಪರಿಸರವು ಈ ಎಲ್ಲಾ ಪ್ರಾಗೈತಿಹಾಸಿಕ ಅಂಶಗಳನ್ನು ತನ್ನ ಒಡಲಲ್ಲಿ ಕ್ರೋಢೀಕರಿಸಿಕೊಂಡಿದೆ. ಹೀಗೆ ಈ ಜಿಲ್ಲೆಯ ಪ್ರಾಗೈತಿಹಾಸಿಕತೆಯ ಕುರಿತಾಗಿ ೧೯೫೨ರಲ್ಲಿ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ 'ಡಾ.ಎಫ್.ಆರ್. ಆಲ್ಜನ್'ರವರು, 'ಪಿಕಳಿಹಾಳಿ'ನಲ್ಲಿ ಸಂಶೋಧನೆ ಕೈಗೊಂಡಾಗ ಈ ಭಾಗ ಸಿಂಧೂಬಯಲಿನಲ್ಲಿ ಹರಪ್ಪ ಮೊಹೆಂಜೊದಾರೊ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹದ್ದು ಎಂದು ಹೇಳಿದ ಮಾತು ಈ ಭಾಗದ ಪ್ರಾಗೈತಿಹಾಸಿಕದ ಮೇಲೆ ಬೆಳಕನ್ನು ಚೆಲ್ಲುವಂತಹದ್ದು[೧೨] ಈ ಎಲ್ಲಾ ಅಂಶಗಳನ್ನು ಒಳಗೊಂಡಿರುವ ಮಸ್ಕಿಪರಿಸರದ ಸ್ಥಳನಾಮಗಳು ಪ್ರಾಚೀನ ಸ್ಥಳನಾಮಗಳಲ್ಲಿ ಒಂದೊಂದು ಸ್ಥಳಗಳು ವಿಭಿನ್ನತೆಯಿಂದ ಕೂಡಿರುತ್ತವೆ. ಮಸ್ಕಿ ಪ್ರದೇಶದಲ್ಲಿ ಇನ್ನೂ ಅನೇಕ ಅಪ್ರಕಟಿತ ಶಾಸನಗಳು ಇವೆ.

ಅಗ್ರಹಾರ ಮತ್ತು ಬ್ರಹ್ಮಪುರಿ

ಪ್ರಾಚೀನ ಕರ್ನಾಟಕದ ಚಾತುರ್ವರ್ಣ್ಯ ಪದ್ಧತಿಯಲ್ಲಿ ಅತ್ಯಂತ ಶ್ರೇಷ್ಠಸ್ಥಾನ ಬ್ರಾಹ್ಮಣರದಾಗಿತ್ತು. ಅಧ್ಯಯನ, ಅಧ್ಯಾಪನಗಳಲ್ಲಿ ನಿರತರಾಗಿದ್ದ ಅವರ ಉಪಜೀವನಕ್ಕೆ ನೀಡುತ್ತಿದ್ದ ತೆರಿಗೆರಹಿತ ಊರುಗಳೇ ಅಗ್ರಹಾರಗಳು ಬ್ರಾಹ್ಮಣರು ಸಾಮಾನ್ಯವಾಗಿ ವಿದ್ಯಾವಂತರಾಗಿದ್ದರಿಂದ ಅಗ್ರಹಾರಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ನಡೆಯುತ್ತಿದ್ದವು. ಪ್ರಾಚೀನ ಕಾಲದ ವಿದ್ಯಾಕೇಂದ್ರಗಳೇ ಅಗ್ರಹಾರಗಳು ಪ್ರೊ.ಡಿ.ಎಲ್.ನರಸಿಂಹಾ ಚಾರ್‌ರವರು ಅಗ್ರ+ಆಹಾರ ಎಂಬ ಎರಡು ಪದಗಳ ಸಮಾಸವನ್ನುತ್ತಾರೆ. ಅಗ್ರವೆಂದರೆ ಶ್ರೇಷ್ಠ, ಅಹಾರವೆಂದರೆ ಸ್ಥಳ. ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ 'ಸ್ಥಳ' ಅಥವಾ 'ಊರು' ಎಂದರ್ಥ. ಬಳಗನೂರು, ಸಾಲಗುಂದೆ, ಕುರುಡಿ, ಕಲ್ಲೂರು, ಗಬ್ಬೂರು ಮೊದಲಾದವುಗಳು ಈ ಭಾಗದಲ್ಲಿರುವ ಅಗ್ರಹಾರಗಳಾಗಿದ್ದವು.

ನಗರಗಳ ಒಂದು ಭಾಗದಲ್ಲಿ ವಾಸವಾಗಿರುವ ಬ್ರಾಹ್ಮಣರ ಓಣಿಗಳನ್ನು ಬ್ರಹ್ಮಪುರಿಗಳೆಂದು ಕರೆಯುತ್ತಾರೆ. ಬ್ರಹ್ಮಪುರಿಗಳ ಸಂಖ್ಯೆ ಕಡಿಮೆಯಿದ್ದು ಇವು ಪಟ್ಟಣದ ಭಾಗಗಳಾಗಿರುತ್ತಿದ್ದವು. ಪ್ರಾಚೀನ ಕಾಲದಲ್ಲಿ ಹಳ್ಳಿಗಳ ಸಂಖ್ಯೆ ಅಧಿಕವಾಗಿದ್ದು ನಗರಗಳ ಸಂಖ್ಯೆ ಕಡಿಮೆ ಇರುವುದು ಕಾರಣವಾಗಿತ್ತು. 'ಕರಡಿಕಲ್ಲು', 'ಮುದಗಲ್ಲು', 'ಬಲ್ಲಟಗಿ', 'ಅತ್ತನೂರು', 'ಗಬ್ಬೂರು' ಇವುಗಳು ಬ್ರಹ್ಮಪುರಿಗಳಾಗಿದ್ದವು. 'ಅಗ್ರಹಾರ' ಹಾಗೂ 'ಬ್ರಹ್ಮಪುರಿ' ಸ್ಥಳನಾಮಗಳು ಶಾಸನಗಳಲ್ಲಿ ಇವುಗಳ ಬಗ್ಗೆ ಮಾಹಿತಿ ಇದ್ದು ಕನ್ನಡನಾಡಿನ ಪ್ರಾಚೀನ ಸ್ಥಳನಾಮಗಳಲ್ಲಿ ಪ್ರಾಚೀನವುಗಳಾಗಿವೆ. ಇಂದು ಮಸ್ಕಿ ಪರಿಸರದಲ್ಲಿ ಲಭ್ಯವಿರುವ ಶಾಸನಗಳಲ್ಲಿ ಸಾಕಷ್ಟು ಸ್ಥಳನಾಮಗಳು ಕಂಡುಬರುವುದನ್ನು ಗಮನಿಸಬಹುದು.

ಸ್ಥಳನಾಮಗಳು ಸಾಮಾನ್ಯವಾಗಿ ಸಂಯುಕ್ತ ಪದಗಳಾಗಿರುತ್ತವೆ. ಎರಡು ಪದಗಳಿಂದ ಕೂಡಿದ ಸ್ಥಳನಾಮಗಳು ಅಧಿಕವಾಗಿರುತ್ತವೆ.

ಪೂರ್ವಪದಕ್ಕೆ ವಿಶಿಷ್ಟ ಅರ್ಥವಿರುತ್ತದೆ. ಉತ್ತರಪದಕ್ಕೆ ಸಾಮಾನ್ಯ ಅರ್ಥವಿರುತ್ತದೆ. ಆದ್ದರಿಂದ ಅದನ್ನು ವಿಶಿಷ್ಟ ಅಥವಾ ನಿರ್ದಿಷ್ಟ ಎಂಬ ಶಬ್ದದಿಂದ ಕರೆಯಲಾಗುತ್ತದೆ. ಸಾಮಾನ್ಯ ಪದವನ್ನು ವಾರ್ಗಿಕ ಎಂದು ಕರೆಯಲಾಗುತ್ತದೆ.

ಸ್ಥಳನಾಮಗಳ ಉಗಮಕ್ಕೆ ಪೂರಕವಾಗುವ ಅಂಶಗಳನ್ನು ಈ ಕೆಳಗೆ ಕಾಣಿಸುವಂತೆ ಮೂರು ಪ್ರಕಾರ (ವಿಧ)ಗಳಾಗಿ ವಿಂಗಡಿಸಬಹುದಾಗಿದೆ.

೧. ಪ್ರಾಕೃತಿಕ ಸ್ಥಳನಾಮಗಳು

೨. ಸಾಂಸ್ಕೃತಿಕ ಸ್ಥಳನಾಮಗಳು.

೩. ಸಂಕೀರ್ಣ ಸ್ಥಳನಾಮಗಳು

೬.೧.೧. ಪ್ರಾಕೃತಿಕ ಸ್ಥಳನಾಮಗಳು

ಮಾನವನು ಪ್ರಕೃತಿಯ ಒಂದು ಭಾಗವಾಗಿ ಬೆಳೆದು ಬಂದಿದ್ದಾನೆ. ಈ ಕಾರಣದಿಂದ ಪ್ರಕೃತಿಯಲ್ಲಿನ ಅನೇಕ ಅಂಶಗಳಿಗೆ ಮಹತ್ವನೀಡಿ, ಸ್ಥಳನಾಮಗಳಲ್ಲಿ ನಿರ್ದಿಷ್ಟ ಆಕೃತಿಮಾವಾಗಿ ಪ್ರಾಕೃತಿಕ ಅಂಶಗಳನ್ನು ಬಳಸಿಕೊಂಡಿರುವುದು ಅತ್ಯಂತ ಪ್ರಾಚೀನ ವಿಧಾನವಾಗಿದೆ. ''ಎತ್ತರದ ಭೂ ಪ್ರದೇಶ, ಬೆಟ್ಟ-ಗುಡ್ಡ, ಕಾಡು, ನದಿ, ಪ್ರಾದೇಶಿಕ ಭೂ ವಿಶಿಷ್ಟತೆ (ಮರಳು, ಕೆಂಪು ಮಣ್ಣು) ಮುಂತಾದ ಅಂಶಗಳು ನಿರ್ದಿಷ್ಟವಾಗಿ ಅಥವಾ ವಾರ್ಗಿಕವಾಗಿ ಕಾರ್ಯನಿರ್ವಹಿಸಿವೆ. ಈ ವಿಶಿಷ್ಟತೆಗಳನ್ನು ಬಳಸಿಕೊಳ್ಳಲು ಕಾರಣವೆಂದರೆ, ಮಾನವನಂತೆ ಪ್ರಕೃತಿಯು ಅಲ್ಪಾಯುಷಿಯಲ್ಲ ಭೌಗೋಳಿಕ ಲಕ್ಷಣದಿಂದ ಒಂದು ನಿರ್ದಿಷ್ಟ ಸ್ಥಳವನ್ನು ಗುರುತಿಸುವಲ್ಲಿ ಸ್ಪಷ್ಟತೆ ಇರುತ್ತದೆ. ಮಾನವನು ಬುದ್ಧಿವಂತಿಕೆಯಿಂದ ಈ ನಿರ್ದಿಷ್ಟಗಳನ್ನು ಬಳಸಿಕೊಂಡಿದ್ದಾನೆ.

೧. ಜಲವಾಚಿ

೨. ಶಿಲಾವಾಚಿ

೩. ಎತ್ತರದ ಭೂಪ್ರದೇಶ/ಬಯಲು

೪. ಪ್ರಾಣಿ ಪಕ್ಷಿವಾಚಿ

೫. ಸಸ್ಯ, ಗಿಡ, ಮರ ಇತ್ಯಾದಿ

೬. ಕ್ಷೇತ್ರವಾಚಕ

೭. ಲೋಹ, ಸಂಪತ್ತು ವಾಚಿ

೮. ಅರಣ್ಯವಾಚಿ

ಜಲವಾಚಿ ಸ್ಥಳನಾಮಗಳು

ಪ್ರಕೃತಿಯಲ್ಲಿರುವ ನೀರು ಜೀವಿಗೆ ಅತ್ಯಂತ ಅವಶ್ಯಕವಾದ ಮೂಲಭೂತ ಅಂಶವಾಗಿದ್ದು ಪ್ರಾಕೃತಿಕ ಸಂಪತ್ತಿನಲ್ಲಿ ಮಹತ್ವದ ಸ್ಥಾನ ಪಡೆದಿದೆ. ನೀರು ಜೀವನಕ್ಕೆ ಅತ್ಯಾವಶ್ಯಕ ಹಾಗೂ ಅನಿವಾರ್ಯವಾದುದರಿಂದ ಹರಿಯುವ ನೀರನ್ನು ತಡೆದು (ಸಂಗ್ರಹಿಸಿ) ಅದರ ಮೂಲಕ ವರ್ಷವಿಡಿ ಬಳಸಬಹುದಾಗಿದೆ. ಈ ರೀತಿ

ಕೃತಕವಾಗಿ ತಡೆದು ನಿಲ್ಲಿಸುವ ಸ್ಥಳವನ್ನು ಕೆರೆ, ಕುಂಟೆ, ಕಟ್ಟೆ ಮುಂತಾದ ಹೆಸರುಗಳಿಂದ ಕರೆಯಬಹುದಾಗಿದೆ. ಜಲಮೂಲ ಸಂಸ್ಕೃತಿಯಿಂದ ಆರಂಭವಾದ ಸಂಸ್ಕೃತಿಯಲ್ಲಿ ಆ ಜಲವನ್ನು ಅವಲಂಬಿಸಿಯೇ ಕೆಲವು ಗ್ರಾಮಗಳಿಗೆ ಹೆಸರು ಕರೆದುಕೊಳ್ಳುವ ರೂಢಿ ಆರಂಭವಾಗಿರಬಹುದು. ಅಂತಹ ಭೂಸ್ಥಿತಿಯನ್ನು ಹೇಳುವ ಸ್ಥಳನಾಮಗಳು ಹೆಚ್ಚು ಹೆಚ್ಚಾಗಿ ದೊರೆಯುತ್ತವೆ. ಮಸ್ಕಿ ಭಾಗದಲ್ಲಿನ 'ಜಲವಾಚಿ' ಸ್ಥಳನಾಮಗಳು ಹೀಗಿವೆ.

ಜಲದುರ್ಗ	ದಬ್ಬೇರ ಮಡು
ತೀರ್ಥಬಾವಿ	ತರಿಬಾವಿ
ಕೌಡನ ಬಾವಿ	ಹೂವಿನ ಬಾವಿ
ದೀನಸಮುದ್ರ	ಮಾವಿನ ಬಾವಿ
ಗುಂಡಸಾಗರ	ಜಕ್ಕ ಅಂತರಗಂಗಿ
ಅಡವಿ ಬಾವಿ	ಹಿರೇ ಅಂತರಗಂಗಿ
ಬಂಡೆಬಾವಿ	ಪುಲಬಾವಿ
ನೀರಲಕೇರಿ	

ಶಿಲಾವಾಚಿ ಸ್ಥಳನಾಮಗಳು

ಪ್ರಾಕೃತಿಕ ಲಕ್ಷಣಗಳನ್ನು ಸೂಚಿಸುವ ಸ್ಥಳನಾಮಗಳಲ್ಲಿ 'ಶಿಲಾವಾಚಿ' ಸ್ಥಳನಾಮಗಳು ಅತ್ಯಂತ ಪುರಾತನವಾದವು. ಶಿಲೆಯ ಅರ್ಥಬರುವ ಕಲ್ಲು, ಬಂಡೆ, ಬೆಂಚಿ, ಗುಡ್ಡ, ಗುಂಡು ಎಂಬ ಪದಗಳನ್ನು ಗುರುತಿಸಬಹುದು. ಕಲ್ಲು ಪದವು ನಿರ್ದಿಷ್ಟ ಹಾಗೂ ವಾರ್ಗಿಕಗಳಲ್ಲಿ ಸಮನಾಗಿ ಬಳಕೆಯಾಗಿದೆ. 'ಶಿಲಾವಾಚಿ' ಪದವು ಪೂರ್ವ ಪದದಲ್ಲಿ ಬಂದರೆ ನಿರ್ದಿಷ್ಟವಾಗಿಯೂ ಉತ್ತರ ಪದದಲ್ಲಿ ಬಂದರೆ ವಾರ್ಗಿಕ ವಾಗಿಯೂ, ಬಳಕೆಯಾಗುತ್ತದೆ. ಮಸ್ಕಿ ಪರಿಸರದಲ್ಲಿ 'ಶಿಲಾವಾಚಿ' ಸ್ಥಳನಾಮಗಳನ್ನು ಗುರುತಿಸಬಹುದಾಗಿದೆ.

ಸಂತೆ ಕಲ್ಲೂರು	ಹಸಮನಕಲ್ಲು
ಬೆಂಚಲದೊಡ್ಡಿ	ಕರಡಿಕಲ್ಲು
ಬಂಡೇಬಾವಿ	ಟನಮನಕಲ್ಲು
ಬಂಡಿಸುಂಕಾಪುರ	ನಿರ್ಲೋಗಲ್
ಗುಡದೂರು	ಸುಣಕಲ್ಲು
ನಾಗರಬೆಂಚಿ	ರಾಯದುರ್ಗ
ಜಾಲಿಬೆಂಚಿ	ಜಲದುರ್ಗ
ಬಯಲುಗುಡ್ಡ	ಕುಪ್ಪಿಗುಡ್ಡ

ಜಲಗುಡ್ಡ ಬಗ್ಗಲಗುಡ್ಡ
ಬೈಲಗುಡ್ಡ ಸಜ್ಜಲಗುಡ್ಡ
ಹನುಮನಗುಡ್ಡ

ಬಯಲು ಎತ್ತರದ ಭೂ ಪ್ರದೇಶ : ದಿನ್ನೆ ಎಂಬಂತಹ ವಾರ್ಗಿಕದ ಮೇಲೆ ಇದನ್ನು ವರ್ಗೀಕರಿಸಲಾಗಿದೆ. ಇವುಗಳು ಪೂರ್ವಪದಗಳು ಜಾತಿ, ವ್ಯಕ್ತಿ, ಪ್ರಾಣಿ, ಪಕ್ಷಿ, ದಾನ್ಯ, ದೈವ, ಪರಿಮಾಣ ಮುಂತಾದವುಗಳನ್ನು ಸೂಚಿಸುವ ಪದಗಳಾಗಿವೆ.

ಬುದ್ದಿನ್ನಿ ನರ್ಕಲದಿನ್ನಿ
ಚಿಕ್ಕದಿನ್ನಿ ಮಾರಲದಿನ್ನಿ
ದೊಡ್ಡದಿನ್ನಿ ಯಲಗಲದಿನ್ನಿ
ಕಮಲದಿನ್ನಿ ತುಗ್ಗಲದಿನ್ನಿ
ಕಮಂಡಲದಿನ್ನಿ

ಸಸ್ಯ, ಗಿಡ, ಮರ ಇತ್ಯಾದಿ ಸ್ಥಳನಾಮಗಳು :

ಯಾವ ಸ್ಥಳಗಳಲ್ಲಿ ನಿರ್ದಿಷ್ಟ ಜಾತಿಯ ಮರ, ಗಿಡ, ಬಳ್ಳಿ, ಬೆಳೆ, ಹುಲ್ಲು, ಸೊಪ್ಪು, ಹೂವು-ಹಣ್ಣು ಇತ್ಯಾದಿಗಳು ಹೆಚ್ಚಾಗಿ ಬೆಳೆಯುತ್ತದೆಯೋ ಅವಕ್ಕೆ ಅನುಗುಣವಾಗಿ ಸ್ಥಳನಾಮಗಳು ಹುಟ್ಟಿ ಕೊಂಡಿರುವುದನ್ನು ಕಾಣಬಹುದು.

ಹುಲ್ಲೂರು ಜಾಲಿಬೆಂಚಿ
ಹೂವಿನ ಬಾವಿ ಕಮಲದಿನ್ನಿ
ಮಾವಿನ ಬಾವಿ ಕಳ್ಳಿಲಿಂಗಸ್ಗೂರು
ತೊಂಡಿಹಾಳ ಸಾಲುಂಚಿಮರಕ್ಯಾಂಪ್
ಉದ್ದಬಾಳ ಮುಳ್ಳೂರು ಕ್ಯಾಂಪ್

ಪ್ರಾಣಿ, ಪಕ್ಷಿ ಸೂಚಕ ಸ್ಥಳನಾಮಗಳು

ಪ್ರಾಣಿ ಮತ್ತು ಪಕ್ಷಿ ಮೂಲಗಳಿಂದಲೂ ಕೆಲವು ಊರುಗಳಿಗೆ ಹೆಸರು ಬಂದಿವೆ. ಅವು ಸಾಕುಪ್ರಾಣಿಗಳಾಗಿರಬಹುದು ಅಥವಾ ಕಾಡುಪ್ರಾಣಿ, ಪಕ್ಷಿಗಳಾಗಿರಬಹುದು. ಪ್ರಾಣಿಗೆ ಸಂಬಂಧ ಪಟ್ಟಂತೆ ನಡೆದ ಘಟನೆಗಳು, ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಣಿಗಳು ವಾಸಿಸುವ ನೆಲೆಯಿದ್ದಲ್ಲಿ ಅದೇ ಹೆಸರಿನಲ್ಲಿ ಸ್ಥಳನಾಮ ಗುರುತಿಸಲಾಗಿದೆ.

ಹುಲಿಗುಡ್ಡ ನಾಗರಬೆಂಚಿ
ಕರಡಿಕಲ್ಲು ನಾಗರಹಾಳ
ನಂದಿಹಾಳ ನಾಗಲಾಪುರ

ಕ್ಷೇತ್ರವಾಚಕ ಸ್ಥಳನಾಮಗಳು

ವ್ಯವಸಾಯಕ್ಕೆ ಯೋಗ್ಯವಲ್ಲದ ಅಥವಾ ಯೋಗ್ಯವಾದ ಮಣ್ಣಿನ ಬಗೆಗಳನ್ನು ಸೂಚಿಸುವ ಘಟಕಗಳು ಸ್ಥಳನಾಮ ನಿರ್ದೇಶನದಲ್ಲಿ ತೋಪು, ತೋಟ, ಗದ್ದೆ, ಬಯಲು ಈ ರೀತಿಯಾಗಿ ಆಯಾ ಸ್ಥಳೀಯ ಪ್ರದೇಶದಲ್ಲಿನ ವಸ್ತು, ವಿಷಯಗಳ ಅವಕಾಶ ಪಡೆದಿರುತ್ತವೆ.

ಬಯಲುಗುಡ್ಡ

ಲೋಹ, ಸಂಪತ್ತುವಾಚಿ ಸ್ಥಳನಾಮಗಳು

ಈ ಭಾಗದಲ್ಲಿ ಹೆಚ್ಚಾಗಿ ಲೋಹಗಳನ್ನು ಬಳಸುತ್ತಿರಬಹುದು. ಹಾಗಾಗಿ ಈ ಹೆಸರುಗಳು ಬಂದಿರಬಹುದಾಗಿವೆ.

ಬೆಳ್ಳಿಹಾಳ ಆಯುಧನಾಳ

ಹೊನ್ನಹಳ್ಳಿ

ಅರಣ್ಯಸೂಚಕ ಸ್ಥಳನಾಮ

ಅರಣ್ಯ ಪ್ರದೇಶವನ್ನು ಸೂಚಿಸುವ ಸ್ಥಳನಾಮಗಳು ಇವಾಗಿದ್ದು, ಕಾಡು, ವನ, ಅಡವಿ ಎಂಬ ನಿರ್ದಿಷ್ಟ ಸೂಚಕವನ್ನು ಹೊಂದಿರುತ್ತದೆ.

ಅಡವಿಬಾವಿ

೬.೧.೨. ಸಾಂಸ್ಕೃತಿಕ ಸ್ಥಳನಾಮಗಳು

೧. ವ್ಯಕ್ತಿವಾಚಿ

೨. ದೈವವಾಚಿ

೩. ವೃತ್ತಿ, ಜಾತಿ ವಾಚಿ

೪. ಪರಿಮಾಣ ಸೂಚಕ

ವ್ಯಕ್ತಿವಾಚಿ ಸ್ಥಳನಾಮಗಳು : ಸಾಮಾನ್ಯವಾಗಿ ಕೆಲವು ಊರುಗಳಿಗೆ ವ್ಯಕ್ತಿಯ ಹೆಸರುಗಳು ಬಂದಿರುತ್ತವೆ. ಕಾಲದೇಶ ಪರಿಸರಕ್ಕೆ ತಕ್ಕಂತೆ ಮಾನವನ ಆಲೋಚನಾ ವಿಧಾನ ಜೀವನ ಶೈಲಿ ಅನೇಕ ಸ್ಥಿತ್ಯಂತರಕ್ಕೆ ಒಳಪಡುತ್ತಲೇ ಇರುತ್ತದೆ. ಸ್ಥಳನಾಮ ನಿರ್ದೇಶನದ ಆರಂಭಿಕ ಹಂತ ನೈಸರ್ಗಿಕ ವಾತಾವರಣವನ್ನು ಅವಲಂಬಿಸಿತ್ತು. ಮುಂದೆ ಸಂಸ್ಕೃತಿಯ ವಿಕಸನದ ಹಾದಿಯಲ್ಲಿ ಜನಾಂಗಿಕವಾಗಿ ಸಾಗಿ ಬಂತು. ಇದರೊಂದಿಗೆ ಅದಂದಿನ ಸಮಾಜದಲ್ಲಿ ಯಾವುದೋ ಕಾರಣಕ್ಕೆ ವಿಶೇಷವಾದ ಘಟನೆಯಿಂದ, ಹೆಸರಾದ ವ್ಯಕ್ತಿಯನ್ನು ಒಂದೊಂದು ಗ್ರಾಮಕ್ಕೆ ಕರೆದರು. ಪರಂಪರೆಯ ನೆನಪಿಗಾಗಿ ಈ ಬಗೆಯ ನಾಮನಿರ್ದೇಶನ ನಡೆಯಿತು. ಮಸ್ಕಿಭಾಗದಲ್ಲಿ ವ್ಯಕ್ತಿ ಆಧರಿತ ಸ್ಥಳನಾಮಗಳು ಹೆಚ್ಚಾಗಿ ಕಂಡುಬರುತ್ತವೆ.

ಗೌಡೂರು	ಚಿತ್ರನಹಾಳ	ನಾಗಲಾಪುರ
ಚುನಕನಹಳ್ಳಿ	ನಂದಿಹಾಳ	ಬಸ್ಸಾಪುರ
ಬಿ.ಜಂಗಮನಹಳ್ಳಿ	ಚೆನಕನಹಾಳ	ಸುಲ್ತಾನಪುರ

ಟನಮನಕಲ್ಲು	ಬೊಮ್ಮನಹಾಳ	ಸೋಮಪುರು
ದಿಗನಾಯಕನಬಾವಿ	ಮಗಟನಹಾಳ	ಕೋಮಲಾಪುರ
ಹನುಮನಗುಡ್ಡ	ಮ್ಯಾದಾರಹಾಳ	ಕಾಳಾಪುರ
ಕೋಮನೂರು	ರಾಮತ್‌ನಾಲ	ರಾಮಾಪುರ
ಅಮರಾವತಿ	ವ್ಯಾಸನಂದಿಹಾಳ	ವೀರಾಪುರ
ಬೇಡರಕಾರ್ಲಕುಂಟೆ	ವೆಂಕನಹಾಳ	ವೆಂಕಟಾಪುರ
ಮಾಚನೂರು	ಗುಡದನಹಾಳ	ಹೆಗ್ಗಾಪುರ
ರಾಮಲೋಟೆ	ಈಚನಹಾಳ	ಸರ್ಜಾಪುರ
ರಾಯದುರ್ಗ	ಮಲ್ಲಾಪುರ	ಪಾಣೆಪುರ
ಲಿಂಗಸೂಗೂರು	ಜಂಗಿರಾಮಾಪುರ	ಈರಾಪುರ
ಮಲ್ಲಾವೂರ	ತಿಮ್ಮಾಪುರ	ಆರ್ಯಬೋಗಾಪುರ
ಗುರುಗುಂಟಾ	ದೇವರಭೂಪುರ	
ಬೆನಕನಹಾಳ	ದೇಸಾಯಿಭೋಗಾಪುರ	
ರಾಮನಗರ ಕ್ಯಾಂಪ್	ಲಕ್ಷ್ಮೀಕ್ಯಾಂಪ್	
ನಾರಾಯಣ ನಗರಕ್ಯಾಂಪ್	ಗೀತಾಕ್ಯಾಂಪ್	
ಶಂಕರನಗರ ಕ್ಯಾಂಪ್	ಸಾಗರ್ ಕ್ಯಾಂಪ್	
ಮಲ್ಲಿಕಾರ್ಜುನ ಕ್ಯಾಂಪ್	ಪಾಂಡುರಂಗ ಕ್ಯಾಂಪ್	

ದೈವವಾಚಿ ಸ್ಥಳನಾಮಗಳು

ವಿವಿಧ ಬಗೆಯ ಧರ್ಮಗಳು ಮತ್ತು ಅಧರ್ಮದ ಹೆಸರಿನ ಆರಾಧ್ಯ ದೈವಗಳು ನೆಲೆಗೊಂಡಿರುವ ಸ್ಥಳಗಳಿಗೆ ಸಂಬಂಧಿಸಿದ ಸ್ಥಳನಾಮಗಳು ಕಂಡುಬರುತ್ತವೆ. ಸಂಸ್ಕೃತಿಯಲ್ಲಿ ದೇವರ ಪಾತ್ರ ಅನನ್ಯವಾದುದು. ಜೀವನದ ಹಲವಾರು ಸಂಗತಿಗಳಲ್ಲಿ ದೈವ ಅಸ್ತಿತ್ವವನ್ನು ಕಂಡುಕೊಳ್ಳುವುದು ನಮ್ಮ ಸಂಸ್ಕೃತಿಯ ಪರಂಪರೆಯಾಗಿ ಮುಂದುವರೆಯುತ್ತದೆ. ಸಮುದಾಯಗಳು ತಾವು ನಂಬಿದ ಕುಲದೈವ, ಮನದೈವ, ಗ್ರಾಮದೇವತೆ ಪ್ರಾದೇಶಿಕ ದೇವತೆ ಹೀಗೆ ಹಲವಾರು ದೇವರುಗಳ ಹೆಸರನ್ನು ತಮ್ಮ ನೆಲೆಗಳಿಗೆ ಇಟ್ಟುಕೊಂಡರೆ ಶುಭವೆಂದು ನಂಬಿದ್ದಾರೆ. ಮಸ್ಕಿ ಪರಿಸರದಲ್ಲಿ ದೊರೆಯುವ ದೈವವಾಚಿ ಸ್ಥಳನಾಮಗಳನ್ನು ಹೀಗೆ ಗುರುತಿಸಬಹುದು.

ಉಳಮೇಶ್ವರ	ಗುಡಿಹಾಳ
ಗುರುಗುಂಟ	ಗದ್ದಿಗಿ
ದೇವರ ಭೂಪುರ	ಲಿಂಗಸೂಗೂರು
ನಾಗರ ಬೆಂಚಿ	

ನಾಗರಹಾಳ

ನಾಗಲಾಪುರ

ಬೆನಕನಹಳ್ಳಿ

ಯರಗುಡಿ

ವ್ಯಾಸನಂದಿಹಾಳ

ಹನುಮನಗುಡ್ಡ

ಜಾತಿ-ವೃತ್ತಿ ವಾಚಿ ಸ್ಥಳನಾಮಗಳು

ಮಸ್ಕಿ ಭಾಗದಲ್ಲಿ ಜಾತಿ-ವೃತ್ತಿ ಸ್ಥಳನಾಮಗಳು ಇರುವುದನ್ನು ಗಮನಿಸಬಹುದು. ಸಾಮಾಜಿಕ ಅಧ್ಯಯನದಲ್ಲಿ ಮುಖ್ಯವಾದ ಅಂಶವೆಂದರೆ ಜಾತಿ ಮತ್ತು ವೃತ್ತಿಗಳು. ಹುಟ್ಟಿನ ಆಧಾರದ ಮೇಲೆ ಗುರುತಿಸಲ್ಪಡುವ ನಿರ್ದಿಷ್ಟ ಗುಂಪನ್ನು ಜಾತಿ ಎಂದು ಕರೆಯುತ್ತೇವೆ. ನಿರ್ದಿಷ್ಟ ಜಾತಿಯನ್ನು ಸ್ಥಳನಾಮಗಳಲ್ಲಿ ವಿಶಿಷ್ಟವಾಗಿ ಸೇರಿಸಿಕೊಳ್ಳಲಾಗಿದೆ. ಜಾತಿಯ ಹೆಸರಿನ ಮೂಲಕವೇ ಊರಿನ ಹೆಸರು ನಿರ್ದೇಶಿತವಾಗಿದೆ.

ಉಪ್ಪಾರ ನಂದಿಹಾಳ

ಜಂಗಮರಹಳ್ಳಿ ಬಿ.

ದಿಗ ನಾಯಕನಹಳ್ಳಿ

ಬೇಡರ ಕಾರ್ಲಕುಂಟೆ

ಮ್ಯಾದಾರಹಾಳ

ವೃತ್ತಿವಾಚಿ

ಮಾನವ ಸಮೂಹಗಳು ಒಂದು ನಿರ್ದಿಷ್ಟವಾದ ಕಸುಬು ಹೊಂದಿದ್ದನ್ನು ಇಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಇದೇ ಊರೇ ಈ ವೃತ್ತಿಯನ್ನು ಮಾಡುವ ಜನಸಮುದಾಯವನ್ನು ಹೊಂದಿತ್ತು ಎಂದು ಹೇಳಲು ಸಾಧ್ಯವಿಲ್ಲವಾದರೂ ಊರಿನಲ್ಲಿ ಬಹುಪಾಲು ಜನರು ಈ ವೃತ್ತಿ ಅವಲಂಬಿಸಿದ್ದರು ಇಲ್ಲವೇ ಪ್ರಾಮುಖ್ಯತೆಯನ್ನು ಪಡೆದವರಾಗಿದ್ದರು.

ಗೌಡೂರು　　ಗೌಡನಬಾವಿ

ದೇಸಾಯಿಭೋಗಾಪುರ　　ಅರ್ಯಭೋಗಾಪುರ

ಸುಲ್ತಾನಪುರ

ಪರಿಮಾಣ ವಾಚಕ

ಸ್ಥಳನಾಮಗಳಲ್ಲಿನ 'ನಿರ್ದಿಷ್ಟಗಳಿಗೆ' ಅನುಗುಣವಾಗಿ ಊರುಗಳು ಪ್ರತ್ಯೇಕ ಗುಂಪಿಗೆ ಸೇರುವುದು ಸಹಜವಾದುದು. ಕೆಲವು ಸಂದರ್ಭದಲ್ಲಿ ನಿರ್ದಿಷ್ಟಗಳು ಒಂದೇ ಇದ್ದರೂ ಪೂರ್ವಪದದಲ್ಲಿರುವ ವಿಶೇಷವು ಒಂದು ಊರನ್ನು ಮತ್ತೊಂದರಿಂದ ಬೇರ್ಪಡಿಸುವ ಗುಣಹೊಂದಿರುತ್ತದೆ. ಪರಿಮಾಣ ಸೂಚಕ ವಿಶೇಷಣವು ಸ್ಥಳನಾಮಗಳಲ್ಲಿ ಈ ಪ್ರತ್ಯೇಕತೆಯನ್ನು ಉಂಟುಮಾಡುತ್ತದೆ. ಮಸ್ಕಿ ಭಾಗದ ಸ್ಥಳನಾಮಗಳಲ್ಲಿ ಅನೇಕ

ಉದಾಹರಣೆಗಳನ್ನು ನೀಡಬಹುದಾಗಿದೆ. ಹಿರಿಯ (ಹಿರೇ) ಕಿರಿಯ (ಚಿಕ್ಕ) ಮುಂತಾದ ವಿಶೇಷಣಗಳು ಊರಿನ ಗಾತ್ರವನ್ನು ಸೂಚಿಸುತ್ತಿರುತ್ತವೆ. ಸಾಮಾನ್ಯವಾಗಿ ಇವುಗಳು ಜೋಡಿ ಗ್ರಾಮಗಳಾಗಿದ್ದು ಸಾಪೇಕ್ಷ ಸ್ಥಳನಾಮಗಳಾಗಿರುತ್ತವೆ. ಒಂದೇ ಹೆಸರಿನ ಎರಡು ಊರುಗಳಿದ್ದಲ್ಲಿ ಇವರೆಡೂ ಎರಡು ವೈರುಧ್ಯ ಗುಣವಿರುವ ವಿಶೇಷಣಗಳನ್ನು ಪೂರ್ವಪದವಾಗಿಟ್ಟುಕೊಂಡಿರುತ್ತದೆ. ನಿರ್ದಿಷ್ಟ ಮತ್ತು ಸಾಮಾನ್ಯ ವಾರ್ಗಿಕಗಳಲ್ಲಿ ಬದಲಾವಣೆಗಳೇನೂ ಕಾಣುವುದಿಲ್ಲ.

ಚಿಕ್ಕ ಅಂತರಗಂಗಿ	ಹಿರೇ ಅಂತರಗಂಗಿ
ಚಿಕ್ಕ ಉಪ್ಪೇರಿ	ಹಿರೇ ಉಪ್ಪೇರಿ
ಚಿಕ್ಕ ಜಾವೂರ	ಹಿರೇ ಜಾವೂರ
ಚಿಕ್ಕ ನಗನೂರು	ಹೀರೇ ನಗನೂರು
ಚಿಕ್ಕ ಯರ್ದಿಹಾಳ	ಹಿರೇ ಯರ್ದಿಹಾಳ
ಚಿಕ್ಕ ಲೆಕ್ಕಿಹಾಳ	ಹಿರೇ ಲೆಕ್ಕಿಹಾಳ
ಚಿಕ್ಕ ಹೆಸರೂರು	ಹಿರೇ ಹೆಸರೂರು

೬.೧.೩. ಸಂಕೀರ್ಣ ಸ್ಥಳನಾಮಗಳು

''ಸ್ಥಳನಾಮಗಳ ಉತ್ತರ ಪದವಾಗಿ ಕಂಡುಬರುವ ಅನೇಕ ರಚನೆಗಳಿಗೆ ಅರ್ಥ ಅಸ್ಪಷ್ಟವಾಗಿರುವುದು ತಿಳಿಯುತ್ತದೆ. ಅವುಗಳ ನಿಷ್ಪತ್ತಿ ಅರ್ಥಗಳನ್ನು ನಿರ್ಧರಿಸುವುದು ಕಷ್ಟಕರವಾಗಿದೆ.''[೮] ಸ್ಥಳನಾಮಗಳ ಮೂಲಕ ಅಧ್ಯಯನ ಮಾಡಿದ ಅಧ್ಯಯನಕಾರರು ಕೆಲವು ವರ್ಗೀಕರಣ ಮಾಡಲಾಗದ ರೂಪಗಳನ್ನು ಸಂಕೀರ್ಣವೆಂದು ಪರಿಗಣಿಸಿದ್ದಾರೆ. ಅಂತಹ ರಚನೆಗಳು ಮಸ್ಕಿ ಭಾಗದಲ್ಲಿ ದೊರೆಯುತ್ತವೆ.

ಅನ್ವರಿ	ಮರಲಿ
ಕನ್ನಾಳ	ಮಿಂಚೇರಿ
ಕನಸಾವಿ	ವಂದಾಲೆ
ಕೋಠಾ	ಹಲ್ಯಾವಟಗಿ
ಗೊನ್ವಾರ	ಭೂಪುರ
ತವಗ	ಪೈದೊಡ್ಡಿ
ತೊಡ್ಕಿ	ಕವಿತಾಳ
ನೌಲಿ	

ಸ್ಥಳನಾಮಗಳಲ್ಲಿ ಬಳಕೆಯಾಗಿರುವ ಸಾಮಾನ್ಯ ವಾರ್ಗಿಕಗಳು

ವಾರ್ಗೀಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ ಕಂಡುಬಂದಿರುವ ವರ್ಗೀಕರಣವನ್ನು ಗಮನಿಸಿದಾಗ ಈ ಕೆಳಗಿನ ವಾರ್ಗಿಕಗಳನ್ನು ಗುರುತಿಸಬಹುದಾಗಿದೆ. ಮಸ್ಕಿ ಭಾಗದಲ್ಲಿ ಕಂಡುಬರುವ ವಾರ್ಗಿಕಗಳು ಈ ಕೆಳಗಿನಂತಿವೆ.

೧. ಏರಿ : ಜಲವಾಚಿ ಕೆರೆಕಟ್ಟೆಯನ್ನು ಹೇಳುವ ಪದ. ನೀರು ನಿಲ್ಲಿಸಲು ಕಟ್ಟಿದ ಕೃತಕ ತಡೆ. ಎತ್ತರ ಭೂ ಪ್ರದೇಶ, ನೀರು ನಿಂತಿರುವ ಭಾಗದ ಹಿನ್ನಿರಿನ ಎತ್ತರದ ಭೂ ಭಾಗ.

ಉಪ್ಪೇರಿ

ಚಿಕ್ಕ ಉಪ್ಪೇರಿ

ಹಿರೇ ಉಪ್ಪೇರಿ

ಮಿಚೇರಿ

೨. ಊರು : ಇದು ಅಚ್ಚದ್ರಾವಿಡ ಪದ. ವಾಸಸ್ಥಳವನ್ನು ಸೂಚಿಸುತ್ತದೆ.

ಕೋಮನೂರು

ಗುಡದೂರು

ಚಿಕ್ಕಜಾವೂರು

ಲಿಂಗಸೂಗೂರು

ಹಾಳೂರು

ಹಿರೇಜಾವೂರು

ಹೊಸೂರು

೩. ಕಲ್ಲು : ನಿರ್ದಿಷ್ಟ ಹಾಗೂ ವಾರ್ಗಿಕವಾಗಿ ಬಳಕೆಯಾಗುವ ಶಿಲಾವಾಚಿ ಘಟಕವಾಗಿದೆ 'ಕಲ್' ರೂಪಗಳಲ್ಲಿ ವ್ಯಂಜ್ಯನಾಂತ್ಯ ವಾರ್ಗಿಕವಾಗಿ ಬಳಕೆಯಾಗುತ್ತಿರುವ ದ್ರಾವಿಡ ರೂಪವಾಗಿದೆ. ಪೂರ್ವಘಟಕದಲ್ಲಿ ಬಳಕೆಯಾದರೆ 'ನಿರ್ದಿಷ್ಟ'ವಾಗಿಯೂ ಉತ್ತರ ಪದದಲ್ಲಿ ಬಳಕೆಯಾದರೆ 'ವಾರ್ಗಿಕ'ವಾಗಿಯೂ ಕಾರ್ಯ ನಿರ್ವಹಿಸುತ್ತದೆ.

ಉದಾ : ಕರಡಿಕಲ್ಲು
ಟನಮನಕಲ್ಲು
ಸುಮಕಲ್ಲು
ಸಂತೆಕಲ್ಲೂರು
ಹನುಮನಕಲ್ಲು

೪. ಕುಂಟೆ : ಜಲವಾಚಿ ಪದ ನೀರಕುಣಿ ಕೊಳ ಈ ಅರ್ಥದಲ್ಲಿ ಬಳಕೆಗೊಳ್ಳುತ್ತದೆ. ನೀರಿನ ಸಂಗ್ರಹ ಮಾಡಿರುವ ಪ್ರದೇಶವಾಗಿದ್ದು, ಪೂರ್ವಘಟಕ ನಿರ್ದಿಷ್ಟದ ಜೊತೆಗೆ ವಾರ್ಗಿಕವಾಗಿ ಬಳಕೆಯಾಗುತ್ತದೆ.

ಉದಾ : ಬೇಡರ ಕಾರ್ಲಕುಂಟೆ ಯರಗುಂಟೆ

೫. ಕಟ್ಟೆ : ಇದೊಂದು ಜಲಸೂಚಿ, ಕೆರೆ, ಏರಿ, ಕಲ್ಲು ಮಣ್ಣುಗಳಿಂದ ಕೂಡಿದ ಎತ್ತರವಾದ ಸ್ಥಳ ಎನ್ನುವ ಅರ್ಥಗಳಿವೆ ಹಾಗೂ ನಿರ್ಮಾಣವಾಚಿಯಾಗಿಯು ಬಳಕೆಯಾಗುತ್ತದೆ.

ಉದಾ : ತಲಿಕಟ್ಟೆ

ಗುಜ್ಜಲಗಟ್ಟಿ

೬. **ಗೋಡಿ :** ಕೆರೆ ಕುಂಟೆಯಿಂದ ಹೆಚ್ಚಾದ ನೀರು ಹೊರಹೋಗುವ ಪ್ರದೇಶದಲ್ಲಿ ಇರುವ ಸ್ಥಳಸೂಚಕ ವಾರ್ಗಿಕವಾಗಿದೆ.

ಉದಾ : ಯರಗೋಡಿ

೭. **ಕೇರಿ :** ಬೀದಿ, ಅಂಗಡಿ, ಓಣಿ ಎಂಬರ್ಥ ನೀಡುತ್ತದೆ. ಕೆಳವರ್ಗದವರು ವಾಸಿಸುವ ಸ್ಥಳವೆಂಬ ಸಂಕುಚಿತ ಅರ್ಥದಲ್ಲಿ ಬಳಕೆಯಾಗುತ್ತದೆ. ಕೆರೆ ವಾರ್ಗಿಕವೇ 'ಕೇರಿ' ಆಗಿ ಬದಲಾವಣೆಯಾಗಿರುವ ಸಾಧ್ಯತೆಯೂ ಇದೆ.

ಉದಾ : ನೀರಲಕೇರಿ

೮. **ಗುಡ್ಡ :** ಭೌಗೋಳಿಕ ಲಕ್ಷಣವನ್ನು ಸೂಚಿಸುವ ಪದ ಬೆಟ್ಟ, ದಿನ್ನೆ ಎಂಬರ್ಥವಿರುವುದು. ಎತ್ತರದ ಭೂ ಭಾಗ ಸೂಚಕ ಪದವಾಗಿದೆ.

ಉದಾ: ಬಯಲುಗುಡ್ಡ ಸಜ್ಜಲಗುಡ್ಡ

ಕುಪ್ಪಿಗುಡ್ಡ ಬಗ್ಗಲಗುಡ್ಡ

ಜಲಗುಡ್ಡ ಹನುಮನಗುಡ್ಡ

ಬೈಲಗುಡ್ಡ ಹುಲಿಗುಡ್ಡ

ಗುಡದೂರ

೯. **ಗುಡಿ :** (ದೈವವಾಚಿ ಪದ) ನಿರ್ಮಾಣವಾಚಿ ಗುಡಿಸಲು, ಮಂಟಪ, ಧ್ವಜ, ಬಾವುಟ, ದೇವಸ್ಥಾನ ಇವುಗಳು ಪರ್ಯಾಯ ಪದವಾಗಿವೆ.

ಉದಾ: ಯರಗುಡಿ

೧೦. **ಪುರ :** ವಾಸ್ತವ್ಯವಾಚಿ ಪದ ಸಂಸ್ಕೃತ ಪದದಿಂದ ಅಂತ್ಯಗೊಳ್ಳುವ ಪುರವಾರ್ಗಿಕವು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತದೆ.

ಉದಾ: ಆರ್ಯಾಭೊಗಾಪುರ ದೇಸಾಯಿನಾಗಾಪುರ

ಈರಾಪುರ ಸುಲ್ತಾನಪುರ

ನಾಗಲಾಪುರ ತಿಮ್ಮಾಪುರ

ಪಾರಂಪುರ ಮೀರಾಪುರ

ಸರ್ಜಾಪುರ ಸೋಮಪುರ

ಹೆಗ್ಗಾಪುರ

೧೧. ದಿನ್ನೆ : ಎತ್ತರವಾದ ಭೂ ಪ್ರದೇಶ, ಭೌಗೋಳಿಕ ಲಕ್ಷಣ ಸೂಚಿಸುವ ಪದ. ದಿಬ್ಬ, ಎತ್ತರದ ಗುಡ್ಡ ದಿನ್ನೆ ಎಂಬುದಾಗಿ ಬಳಕೆಯಾಗುತ್ತದೆ.

ಉದಾ: ಬುದ್ದಿನ್ನಿ

ಕಮಲದಿನ್ನಿ

ಕಮಂಡಲದಿನ್ನಿ

ತುಗ್ಗಲದಿನ್ನಿ

ದೊಡ್ಡದಿನ್ನಿ

ನರ್ಕಲದಿನ್ನಿ

ಚಿಕ್ಕದಿನ್ನಿ

ಮಾರಲದಿನ್ನಿ

ಯಲಗಲದಿನ್ನಿ

೧೨. **ದುರ್ಗ** : ನಿರ್ಮಾಣವಾಚಿ ಸಂಸ್ಕೃತಪದ ಬೆಟ್ಟ, ಕೋಟೆ, ಎಂಬರ್ಥಗಳಿವೆ. ಪ್ರಾಕೃತಿಕವಾಗಿಯೂ ಈ ಕೋಟೆಯ ಲಕ್ಷಣ ಹೊಂದಿರಬಹುದು.

ಉದಾ: ಜಲದುರ್ಗ

ರಾಯದುರ್ಗ

೧೩. **ದೊಡ್ಡಿ** : ವಾಸ್ತವ್ಯವಾಚಿ ಹಟ್ಟಿ, ಕೊಟ್ಟಿಗೆ, ಯಜಮಾನರಿಲ್ಲದಂತಹ ದನಕರುಗಳನ್ನು ಕಟ್ಟುವ ಮನೆ.

ಉದಾ: ಬೆಂಚಲದೊಡ್ಡಿ

ಚಿಕ್ಕಲದೊಡ್ಡಿ

ಯರದೊಡ್ಡಿ

೧೪. **ಬಂಡೆ** : ಶಿಲವಾಚಿ, ಸಣ್ಣಬೆಟ್ಟ-ಗುಡ್ಡ ಸೂಚಕ ಪದ. ನಿರ್ಮಾಣಕ್ಕೆ ಬೇಕಾದ ಕಲ್ಲು ಒಡೆಯುವ ಸ್ಥಳ

ಉದಾ: ಬಂಡಿಸುಂಕಾಪುರ

ಬಂಡೇಬಾವಿ

೧೫. **ಬಾವಿ** : ಜಲವಾಚಿ ನೀರು ನಿಂತಿರುವ ಹಳ್ಳ ಪ್ರಾಕೃತಿಕವಾದ ಅಥವಾ ಕೃತಕವಾಗಿ ನಿರ್ಮಾಣವಾಗಿರಬಹುದು.

ಅಡವಿಬಾವಿ

ಗೌಡನಬಾವಿ

ತೀರ್ಥಬಾವಿ

ದಿಗನಾಯಕನಬಾವಿ

ಪುಲಬಾವಿ

ಮಾವಿನಬಾವಿ

ಹೂವಿನಬಾವಿ

೧೬. ಸಂತೆ : ವಾಣಿಜ್ಯಕೇಂದ್ರ, ವ್ಯಾಪಾರ ನಡೆಯುವ ಸ್ಥಳ. ಪಟ್ಟಣ-ಸಂತೆ ಸ್ಥಳನಾಮ ನಿರ್ದಿಷ್ಟ ಸ್ಥಾನದಲ್ಲಿ ಬಳಕೆಯಾಗಿದೆ.

ಉದಾ: ಸಂತೆಕೇಲೂರು

೧೭. ಹಳ್ಳಿ : ವಾಸ್ತವ್ಯವಾಚಿ ಜನರವಾಸ ಸ್ಥಳವಾಗಿದೆ. ಚಿಕ್ಕ 'ಊರು' ಅಥವಾ 'ಗ್ರಾಮ' ಎಂಬರ್ಥ ನೀಡುತ್ತದೆ.

ಉದಾ: ಚುಕನಹಳ್ಳಿ

ಬಿ.ಜಂಗಮನಹಳ್ಳಿ

ಹೊನ್ನಹಳ್ಳಿ

೧೮. ಸಾಗರ/ಸಮುದ್ರ : ಜಲವಾಚಿ 'ಸಮುದ್ರ' ಜಲವಾಚಿ ಪದಕ್ಕೆ ಪರ್ಯಾಯ ಪದವಾಗಿ ಬಳಕೆ 'ದೊಡ್ಡಕೆರೆ' ಕುಂಟೆಯನ್ನು ಸಾಗರ ಎಂದು ಬಳಸುವುದರ ಮೂಲಕ ಉತ್ಪ್ರೇಕ್ಷೆ ಮಾಡಿರುವ ಸಾಧ್ಯತೆ ಇರುತ್ತದೆ.

ಉದಾ: ಗುಂಡಸಾಗರ

ದೀನಸಾಗರ

ಸಾಗರಕ್ಯಾಂಪ್

೧೯. ಕ್ಯಾಂಪ್ : ಇದು ಇಂಗ್ಲೀಷ್ ಪದ. ಒಂದು ಕಡೆ ಗುಂಪಾಗಿ ನೆಲೆಸುವುದು ಆಂಧ್ರದಿಂದ ವಲಸೆ ಬಂದ ಅನೇಕ ಸಮುದಾಯಗಳು ಕರ್ನಾಟಕದಲ್ಲಿ ಕ್ಯಾಂಪುಗಳನ್ನು ನಿರ್ಮಿಸಿಕೊಂಡು ಅವುಗಳಿಗೆ ವ್ಯಕ್ತಿ, ದೈವ ಸಂಬಂಧಿಸಿದ ಹೆಸರುಗಳನ್ನು ಕೊಟ್ಟಿದ್ದಾರೆ.

ಉದಾ: ಗೀತಾಕ್ಯಾಂಪ್

ನಾರಾಯಣನಗರ ಕ್ಯಾಂಪ್

ಪಾಂಡುರಂಗ ಕ್ಯಾಂಪ್

ರಾಮನಗರ ಕ್ಯಾಂಪ್

ಸಾಗರ ಕ್ಯಾಂಪ್

ಲಕ್ಷ್ಮಿಕ್ಯಾಂಪ್

ಶಂಕರ ಕ್ಯಾಂಪ್

೨೦. ಬೆಂಚಿ : ಜಲವಾಚಿ ಬೆಂಚೆ=ಸಣ್ಣಹೊಂಡ (ವಾಗಾರ್ಥ ಪು. ೧೭) ಸಣ್ಣ ಸರೋವರ, ನೀರಹೊಂಡ ಮಸ್ಕಿಭಾಗದಲ್ಲಿ ಬೆಂಚಿ ಎಂಬುದು ಶಿಲಾವಾಚಿಯಾಗಿ ಬಳಕೆಯಾಗುತ್ತದೆ.

ಉದಾ: ತೊರಲಬೆಂಚಿ

ನಾಗರಬೆಂಚಿ

ಜಾಲಿಬೆಂಚಿ

೨೧. **ಮಡು :** ಜಲವಾಚಿ ನದಿ ಹೊಳೆ ಮುಂತಾದವುಗಳಲ್ಲಿ ಆಳವಾದ ನೀರಿರುವ ಪ್ರದೇಶವು ಮಡು ಎನಿಸಿಕೊಳ್ಳುತ್ತದೆ. ಮಡುವು ಕೊಳ, ಸರೋವರ, ಹಳ್ಳ, ಕೊಳ್ಳ ಇತ್ಯಾದಿಯಾಗಿಯು ಕರೆಯಬಹುದಾಗಿದೆ.

ಉದಾ: ದಬ್ಬೆರಮಡು

೨೨. ಚಿಕ್ಕ/ಹಿರೇ ಪರಿಮಾಣಸೂಚಕ ಪದಗಳು. ಪ್ರದೇಶದ ಸ್ಥಳದ ವ್ಯಾಪ್ತಿಯನ್ನು ತಿಳಿಸುತ್ತದೆ. ಪರಿಮಾಣವಾಚಿ

ಚಿಕ್ಕ ಅಂತರಗಂಗಿ

ಚಿಕ್ಕ ಜಾವೂರ

ಚಿಕ್ಕ ಯರ್ದಿಹಾಳ

ಚಿಕ್ಕ ಲೆಕ್ಕಿಹಾಳ

ಚಿಕ್ಕ ಹೆಸರೂರು

ಹಿರೇ ಅಂತರಗಂಗಿ

ಹೀರೇ ಜಾವೂರ

ಹಿರೇ ಯರ್ದಿಹಳ

ಹಿರೇ ಲೆಕ್ಕಿಹಾಳ

ಹಿರೇ ಹೆಸರೂರು

೨೩. **ತಾಂಡ :** ವಾಸ್ತವ್ಯವಾಚಿ ಲಂಬಾಣಿ ಸಮುದಾಯದವರ ವಾಸದ ನೆಲೆ. ಲಂಬಾಣಿ ಜನರು ಪ್ರತ್ಯೇಕ ಗುಂಪುಗಳಲ್ಲಿ ವಾಸಿಸುತ್ತಾರೆ. ಅವರ ನೆಲೆಗಳಿಗೆ 'ತಾಂಡ' ಎಂದು ಕರೆದುಕೊಂಡಿದ್ದಾರೆ. ಹೆಚ್ಚಾಗಿ ಗ್ರಾಮಗಳ ಪಕ್ಕದಲ್ಲಿ ನಿರ್ಮಿಸಿಕೊಂಡು ಆ ಗ್ರಾಮದ ಹೆಸರಿನ ಮುಂದೆ 'ತಾಂಡ' ಎಂದು ಕರೆದುಕೊಂಡಿರುತ್ತಾರೆ. ಕೆಲವಡೆ ಪ್ರತ್ಯೇಕ ಹೆಸರುಗಳು ಸಿಗುತ್ತವೆ.

ಉದಾ: ಮಸ್ಕಿ ತಾಂಡ

ಭೌಗೋಳಿಕ ವಿಶ್ಲೇಷಣೆಗೆ ಸಹಾಯಕವಾಗುವ ಸ್ಥಳನಾಮಗಳು ಚರಿತ್ರೆ ತಿಳಿಯಲು ಕೊಡುಗೆ ನೀಡುತ್ತವೆ. ಸಂಸ್ಕೃತಿಯಲ್ಲಿ ಕಂಡುಬರುವ ದೈವ, ವ್ಯಕ್ತಿ, ಜಾತಿ, ಧರ್ಮ, ವೃತ್ತಿ, ಪ್ರಾಣಿ, ಪಕ್ಷಿ ಮುಂತಾದ ವಿಶಿಷ್ಟಗಳನ್ನು ಮಸ್ಕಿ ಭಾಗದ ಸ್ಥಳನಾಮಗಳು ಒಳಗೊಂಡಿವೆ. ಮಸ್ಕಿ ಭಾಗದಲ್ಲಿ ಸ್ಥಳನಾಮಗಳ ಬಗ್ಗೆ ಅಧ್ಯಯನ ಮಾಡಿದಾಗ ಇದರಲ್ಲಿ ವ್ಯಕ್ತಿವಾಚಿ ಸ್ಥಳನಾಮಗಳನ್ನು ಸಾಕಷ್ಟು ಪ್ರಮಾಣದ ಸಂಖ್ಯೆ ನೋಡಬಹುದು. ಶಿಲಾವಾಚಿ ಸ್ಥಳನಾಮಗಳ ಕಾಣಸಿಗುತ್ತವೆ. ಈ ಪ್ರದೇಶದಲ್ಲಿ ಪ್ರಾಕೃತಿಕ ಸ್ಥಳ ನಾಮಗಳಿಗಿಂತ ಸಾಂಸ್ಕೃತಿಕ ಸ್ಥಳನಾಮಗಳು ಹೆಚ್ಚಾಗಿವೆ. ಸಂಕೀರ್ಣ ಸ್ಥಳನಾಮಗಳು ಕಡಿಮೆ ಸಂಖ್ಯೆಯಲ್ಲಿ ನೋಡಬಹುದು.

ವ್ಯಕ್ತಿನಾಮಗಳು

೬.೨. ವ್ಯಕ್ತಿನಾಮಗಳು

ಮನುಷ್ಯ ಸಮಾಜ ಜೀವಿ, ಆತನಿಗೆ ವ್ಯಕ್ತಿ ವಸ್ತುಗಳ ಸಂಪರ್ಕ ಅನಿವಾರ್ಯ ಅವುಗಳಲ್ಲಿ ಕೆಲವನ್ನಾದರೂ ಅವನು ಗುರುತಿಸಿಕೊಳ್ಳಲೇಬೇಕು. ಹೀಗೆ ಗುರುತಿಸಿಕೊಳ್ಳಲು ಮುಖ್ಯ ಸಾಧನವಾದುದು ಹೆಸರು. ಹಾಗಾಗಿ ಹೆಸರಿನ ಮುಖ್ಯ ಉದ್ದೇಶ ಸಮೂಹದಿಂದ ವಸ್ತುವನ್ನು, ವ್ಯಕ್ತಿಯನ್ನು ಪ್ರತ್ಯೇಕಿಸಿಕೊಳ್ಳುವುದು, ಗುರುತಿಸಿಕೊಳ್ಳುವುದಾಗಿದೆ. ನಮ್ಮ ಸುತ್ತಮುತ್ತಲಿನ ಪ್ರಪಂಚದಲ್ಲಿ ಅನೇಕ ವ್ಯಕ್ತಿಗಳಿದ್ದಾರೆ. ವಸ್ತುಗಳಿವೆ. ಅವುಗಳಲ್ಲಿ ಅವಶ್ಯ ಎನಿಸಿದವುಗಳು ಮಾತ್ರ ನಮಗೆ ಪ್ರಮುಖವೆನಿಸುತ್ತಿದ್ದು, ಅಂತಹವುಗಳಿಗೆ ಮಾತ್ರ ಹೆಸರನ್ನು ಇಡಲಾಗುತ್ತದೆ. ವ್ಯಕ್ತಿ, ಪ್ರಾಣಿ, ಸಸ್ಯ, ವಸ್ತು, ನದಿ, ಬೆಟ್ಟ, ಸಮುದ್ರ, ಪರಿಸರ, ಸ್ಥಳಗಳು ಅವಶ್ಯವಾದವುಗಳಿಗೆ ಮಾತ್ರ ಹೆಸರಿಸಲಾಗಿದೆ. ಮನುಷ್ಯರಲ್ಲಿ ಪ್ರತಿಯೊಬ್ಬ ಒಂದಲ್ಲ ಒಂದು ರೀತಿ ಒಬ್ಬನಿಗಲ್ಲ ಇನ್ನೊಬ್ಬನಿಗೆ ಅವಶ್ಯ ಮುಖ್ಯವೆನಿಸುವ ಕಾರಣ ಎಲ್ಲಾ ವ್ಯಕ್ತಿಗಳಿಗೂ ಹೆಸರಿರುತ್ತದೆ.

ವ್ಯಕ್ತಿನಾಮವೆಂದರೆ 'ವ್ಯಕ್ತಿನಾಮಗಳ ವೈಜ್ಞಾನಿಕ ಅಧ್ಯಯನವೇ ವ್ಯಕ್ತಿನಾಮ ವಿಜ್ಞಾನ' ಎನ್ನಬಹುದು.[೧] ಪ್ರತಿಯೊಂದು ಸಮಾಜದಲ್ಲಿ ವ್ಯಕ್ತಿನಾಮಕ್ಕೊಂದು ಚರಿತ್ರೆ ಇರುತ್ತದೆ. ವ್ಯಕ್ತಿನಾಮಗಳು ಧಾರ್ಮಿಕ ಮೂಲದಿಂದ ಹುಟ್ಟಿರಬಹುದು ಇಲ್ಲವೆ ಪ್ರಾಚೀನ ಮತ್ತು ಸಮಕಾಲೀನ ಚಾರಿತ್ರಿಕ ವ್ಯಕ್ತಿನಾಮಗಳ ಪ್ರಭಾವದಿಂದ ಹುಟ್ಟಿರಬಹುದು. ಹಾಗೆಯೇ ನಾಮಗಳ ಹುಟ್ಟಿಗೆ ಹಲವು ಕಾರಣಗಳಿರಬಹುದು. ನಮ್ಮ ಜನರ ನಾಮಗಳು ಅವರು ವಾಸಿಸುವ ಭೌಗೋಳಿಕ ಪರಿಸರ ಮತ್ತು ಆಯಾ ಭಾಷಿಕ ಸಮುದಾಯಗಳ ನಂಬಿಕೆ, ಆಚರಣೆ ಮತ್ತು ಸಂಪ್ರದಾಯ ಮುಂತಾದ ಅಂಶಗಳಿಂದ ನಿರ್ಧರಿತವಾಗಿರುತ್ತದೆ. ಹಾಗೆಯೇ ವ್ಯಕ್ತಿ ನಿರ್ವಹಿಸುವ ವೃತ್ತಿ, ಆಯಾ ಸಮುದಾಯದ ಗ್ರಾಮದ ಚಾರಿತ್ರಿಕತೆ, ದೇವಾಲಯ, ನದಿ, ಬೆಟ್ಟ, ಅರಣ್ಯ, ಪ್ರವಾಹ, ಪ್ರಾಣಿ, ಪಕ್ಷಿ, ಋತುಮಾನ, ಪುರಾಣ, ದಂತಕಥೆ ಇತ್ಯಾದಿ ಅಂಶಗಳ ಪ್ರಭಾವದಿಂದ ಹುಟ್ಟಿಕೊಂಡಿವೆ. ಮಸ್ಕಿ ಪರಿಸರದ ಶಾಸನದಲ್ಲಿ ಹೆಚ್ಚು ವ್ಯಕ್ತಿನಾಮಗಳು ಬಳಕೆಯಲ್ಲಿವೆ. ಕೆಲವು ಬಳಕೆ ಇಂದಿಗೂ ಮಸ್ಕಿ ಉಳಿಸಿಕೊಂಡು ಬಂದಿದೆ. ಚಾರಿತ್ರಿಕ ಹಿನ್ನೆಲೆಯಲ್ಲಿ ವ್ಯಕ್ತಿನಾಮಗಳನ್ನು ನೋಡಬಹುದಾಗಿದೆ.

ಶಾಸನೋಕ್ತ ಸ್ಥಳನಾಮಗಳು

ಶಾಸನಸಂ	ದೊರಕಿದ ಸ್ಥಳ	ಶಾಸನದ ಕಾಲ	ಉಲ್ಲೇಖಿತ ಸ್ಥಳ
೧	ಲಿಂಗಸೂಗೂರು	೧೧೨೪	ಮಾಚಿರಾಜ,
			ಸಂಕರಸ
೩	ಯಲಗಲದಿನ್ನಿ	೧೧೨೨	ಮುದ್ದಿಸೆಟ್ಟಿ
೫	ಕರಡ್ಕಲ್	೧೧೬೧	ಸಂಕಯ್ಯ,
			ಧನಂಜಯ,
			ಮಲ್ಲಯ್ಯ
೬	ಕರಡ್ಕಲ್	೧೦೭೯	ಚಾಮುಣ್ಡಸೆಟ್ಟಿ
೮	ನವಿಲೆ	೧೧೧೯	ನಾಗಿಮಯ್ಯ,
			ಬಲದೇವನಾಯಕ
			ರೇವಣಭಟ,
			ಚಾವಣಭಟ್ಟ,
			ಕುಂಬಾರ
			ರಾಚಿಮಯ್ಯ
೯	ಜಲದುರ್ಗ	೧೦೮೭	ಗೋವಿನ್ದಮಯ್ಯ,
			ಬಾಚಿಮಯ್ಯ
			ನಾಯಕ ಕೇಸವಸೆಟ್ಟೆ
೩೦	ಮಸ್ಕಿ	೧೦೩೭	ಮಲಿಮಯ್ಯ ದಾಮೋದರ
೩೨	ಮಸ್ಕಿ	೧೦೧೦	ಕರಿಯಾಯ್ಬಯ್ಯ
೩೪	ಮಸ್ಕಿ	೧೦೧೮	ಪಂಪಯ್ಯ ಬೆಣ್ಣಯ್ಯ,
			ಕಿರಿಯ ಚಿಟ್ಟಯ್ಯ
೩೯	ಬಳಗಾನೂರು	೧೧೯೧	ಸುಬ್ಬದೇವಸೆಟ್ಟಿ ವಿರುಪಾಕ್ಷಸೆಟ್ಟಿ
೪೦	ಬಳಗಾನೂರು	೧೨೦೯	ಬಾಚೈಯ ಪಿನಮಲ್ಲ,
			ನಾರಣದೇವ ಸಿಂಗರಸ ದೇವಯ್ಯ,
			ಪ್ರಭುನಾಗಗವುಡ, ಮಾದಿಗವುಡ

ಮಸ್ಕಿ ಪರಿಸರದಲ್ಲಿ ಲಭ್ಯವಾದ ಶಾಸನಗಳಲ್ಲಿ ವ್ಯಕ್ತಿನಾಮಗಳು ಉಲ್ಲೇಖವಾಗಿರುವುದನ್ನು ಗಮನಿಸಬಹುದು. ಈ ಶಾಸನಗಳು ವ್ಯಕ್ತಿನಾಮದ ಚರಿತ್ರೆಯನ್ನು ತಿಳಿಯಲು ಸಹಾಯಕ್ಕೆ ಬರುತ್ತವೆ. ಮಸ್ಕಿಪರಿಸರದ ಗಡಿಯನ್ನು ತಿಳಿಸಲು ಶಾಸನದಲ್ಲಿರುವ ವ್ಯಕ್ತಿನಾಮಗಳ ಬಳಕೆ ಉಪಯುಕ್ತವಾಗುತ್ತವೆ. ಮಸ್ಕಿ ಪರಿಸರದ ಶಾಸನಗಳಲ್ಲಿ ಹೆಚ್ಚಾಗಿ 'ವೃತ್ತಿಸೂಚಕ', 'ಜಾತಿಸೂಚಕ', 'ಬಂಧುಸೂಚ' ಮುಂತಾದ ಬಳಕೆಯ ವ್ಯಕ್ತಿನಾಮಗಳು ಕಂಡುಬರುತ್ತವೆ. ನಿರ್ದಿಷ್ಟ ಹಾಗೂ ವಾರ್ಗಿಕ ಎರಡೂ ಸೇರಿ ವ್ಯಕ್ತಿನಾಮವಾಗಿ ಮಸ್ಕಿ ಪರಿಸರದ ಶಾಸನಗಳಲ್ಲಿ ಬಳಕೆಯಲ್ಲಿವೆ.

ಒಂದು ನಿರ್ದಿಷ್ಟ ಸ್ಥಳದ ಇತಿಹಾಸವನ್ನು ತಿಳಿಯಲು ಶಾಸನಗಳು, ಚರಿತ್ರೆ, ಜಾನಪದ, ಪುರಾಣ ಮತ್ತು ಕಲೆಗಳು ಹೇಗೆ ಸಹಾಯಕ್ಕೆ ಬರುತ್ತವೋ ಹಾಗೆ ವ್ಯಕ್ತಿನಾಮದ ಚರಿತ್ರೆಯನ್ನು ತಿಳಿಯಲು ಕೂಡ ಸಹಾಯಕ್ಕೆ ಬರುತ್ತವೆ. ಮಸ್ಕಿ ಪರಿಸರದ ವ್ಯಕ್ತಿನಾಮಗಳು ಮಸ್ಕಿ ಕನ್ನಡದ ಗಡಿಯನ್ನು ತಿಳಿಸಲು ಸಹಾಯಕ ಬರುತ್ತವೆ. ಈ ಭಾಗದಲ್ಲಿ ಇರುವ ವ್ಯಕ್ತಿನಾಮಗಳು ಹೆಚ್ಚಾಗಿ ದೇವರ ನಾಮಗಳನ್ನು ಹೊಂದಿದ್ದು, ಇಲ್ಲಿ ಪ್ರಸಿದ್ಧವಾದ ದೇವಾಲಯಗಳಿವೆ. ಮತ್ತು ಚಾರಿತ್ರಿಕ ವ್ಯಕ್ತಿಗಳ ಹೆಸರುಗಳು ಕೂಡ ಈ ಭಾಗದಲ್ಲಿ ಕಾಣಿಸಿಕೊಳ್ಳುತ್ತದೆ. ಒಮ್ಮೊಮ್ಮೆ ಧಾರ್ಮಿಕ ಮತ್ತು ಚಾರಿತ್ರಿಕ ವ್ಯಕ್ತಿನಾಮಗಳು ಕೂಡಿಕೊಂಡೇ ಬರುತ್ತವೆ. ನಮ್ಮ ಪ್ರಾಚೀನ ಮತ್ತು ಸಮಕಾಲೀನ ರಾಜಮನೆತನಗಳು ಪುರುಷ ಮತ್ತು ಸ್ತ್ರೀನಾಮಗಳು ಮತ್ತು ಸಾಮಾನ್ಯ ಜನರ ಸ್ತ್ರೀ ಮತ್ತು ಪುರುಷರ ನಾಮಗಳು ಹೆಚ್ಚಿನ ಪ್ರಮಾಣದಲ್ಲಿ ಧಾರ್ಮಿಕ ಮೂಲದಿಂದ ಹುಟ್ಟಿಕೊಂಡಿವೆ. ಈ ಹಿನ್ನೆಲೆಯಿಂದ ವ್ಯಕ್ತಿನಾಮದ ಚಾರಿತ್ರಿಕ ಅಧ್ಯಯನದೊಳಗೆ ಒಂದು ಸಾಂಸ್ಕೃತಿಕ ಚರಿತ್ರೆ ಇರುವಂತೆ ಸಾಂಸ್ಕೃತಿಕ ಪ್ರಭಾವಿತ ವ್ಯಕ್ತಿನಾಮದಲ್ಲಿ ಒಂದು ಚರಿತ್ರೆ ಅಡಗಿರುತ್ತದೆ. ಹಾಗಾಗಿ ವ್ಯಕ್ತಿನಾಮಗಳ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ ನೆಲೆಗಳು ಪರಸ್ಪರ ಪೂರಕವಾಗಿವೆ. ವ್ಯಕ್ತಿನಾಮಗಳು ಆಯಾ ಪ್ರಾದೇಶಿಕ ಗಡಿರೇಖೆಗೆ ಸೀಮಿತವಾಗಿರುತ್ತವೆ. ಮಸ್ಕಿ ಪ್ರದೇಶದಲ್ಲಿ ವ್ಯಕ್ತಿನಾಮಗಳಿಂದ ಗಡಿರೇಖೆಯನ್ನು ಗುರುತಿಸಬಹುದು. ಇಲ್ಲಿಯ ಪ್ರಾದೇಶಿಕತೆಯಲ್ಲಿ ಪ್ರಸಿದ್ಧ ದೇವಾಲಯಗಳ ಪ್ರಭಾವದಿಂದಲೂ, ಸಾಮಾನ್ಯ ಮತ್ತು ಚಾರಿತ್ರಿಕ ವ್ಯಕ್ತಿನಾಮಗಳ ಪ್ರಭಾವದಿಂದಲೂ ಹುಟ್ಟಿಕೊಂಡಿವೆ. ಈ ಭಾಗದಲ್ಲಿ ಅಮರೇಶ, ಅಮರಪ್ಪ, ಅಮರೇಗೌಡ, ಅಮರ, ಅಮರಪ್ಪನಾಯಕ, ರಾಜಾ ಅಮರಪ್ಪನಾಯಕ ಇತ್ಯಾದಿ ಹೆಸರುಗಳನ್ನು ಕಾಣಬಹುದು. ಮಸ್ಕಿ ಪ್ರದೇಶದ ಪ್ರಸಿದ್ಧ ಐತಿಹಾಸಿಕ ಹಾಗೂ ಧಾರ್ಮಿಕ ಸ್ಥಳವಾದ ಗುರುಗುಂಟ 'ಅಮರೇಶ್ವರ' ದೇವಸ್ಥಾನ ಇರುವುದರಿಂದ ಈ ಮಾದರಿಯ ಹೆಸರುಗಳನ್ನು ಕಾಣಬಹುದು. ರಾಜಕೀಯ ಇತಿಹಾಸದಲ್ಲಿ ಈ ಹೆಸರುಗಳು ಹೆಚ್ಚಾಗಿ ನಾಯಕವಂಶಸ್ಥರಲ್ಲಿ ಕಾಣುತ್ತೇವೆ. ಅಮರಪ್ಪನಾಯಕ, ರಾಜಾ ಇಮ್ಮಡಿ ಅಮರಪ್ಪನಾಯಕ, ರಾಜಾ ಮುಮ್ಮಡಿ ಅಮರಪ್ಪನಾಯಕ, ಇತ್ಯಾದಿ ವ್ಯಕ್ತಿನಾಮಗಳನ್ನು ಇತಿಹಾಸದಿಂದ ತಿಳಿಯಬಹುದು. ಈ ನಾಮಗಳು ಇತಿಹಾಸದಿಂದ ಇಂದಿನವರೆಗೆ ಬಳಕೆಗೊಳ್ಳುತ್ತಿರುವುದು ಮಸ್ಕಿ ಕನ್ನಡದಲ್ಲಿ ಗಮನಿಸಬಹುದಾದ ಅಂಶವಾಗಿದೆ. ಇದೇ ರೀತಿ ಕಕ್ಕೇರಿಯ 'ಸೋಮನಾಥ' ದೇವಾಲಯ ಪ್ರಸಿದ್ಧವಾದ ಸ್ಥಳ. ಇಲ್ಲಿಯ 'ಸೋಮನಾಥ' ಅಂದಿನ ಗುಡಗುಂಟಿ ನಾಯಕ ಮನೆದೈವ ಕೂಡ ಆಗಿದ್ದನು. ಈ ವಂಶದಲ್ಲಿ ಹತ್ತಕ್ಕೂ ಹೆಚ್ಚು ಜನರು 'ಸೋಮ'

ಹೆಸರಿನಿಂದ ಕಾಣಿಸಿ ಕೊಂಡಿದ್ದಾರೆ. ಇದು 'ಸೋಮನಾಥ' ದೇವರ ಬಗ್ಗೆ ಅವರಿಗಿದ್ದ ಅಪಾರ ಶಕ್ತಿ, ಭಕ್ತಿ ಗೌರವವನ್ನು ಸೂಚಿಸುತ್ತದೆ. ಈಗಲೂ ಗುಡಗುಂಟಿ ಕೋಟೆಯಲ್ಲಿ 'ಸೋಮನಾಥ' ದೇವಾಲಯವಿರುವುದನ್ನು ಕಾಣಬಹುದು. ಮಸ್ಕಿ ಪ್ರದೇಶದಲ್ಲಿ ಇತಿಹಾಸದಿಂದ ಹಿಡಿದು ಇಲ್ಲಿಯವರೆಗೂ 'ಸೋಮ' ಎಂಬ 'ನಿರ್ದಿಷ್ಟ' ಹೆಸರು ಇರುವುದನ್ನು ಕಾಣುತ್ತೇವೆ.

ಇತಿಹಾಸದಲ್ಲಿ ಸೋಮಪ್ಪನಾಯಕ, ಜಡೆಸೋಮಪ್ಪನಾಯಕ, ಸೋಮಪ್ಪ ಸೋಮಲಿಂಗನಾಯಕ, ಸೋಮಸರ್ಜಾನಾಯಕ, ರಾಜಾ ಜಡಿಸೋಮಪ್ಪನಾಯಕ ಇತ್ಯಾದಿ ಹೆಸರುಗಳು ಇದ್ದವು. ಇವತ್ತಿನ ದಿನಗಳಲ್ಲಿ ಸೋಮಪ್ಪ ಸೋಮಪ್ಪನಾಯಕ, ಸೋಮಲಿಂಗ ಈ ರೀತಿಯ ಹೆಸರುಗಳು ಬಳಕೆಯಲ್ಲಿವೆ.

ನಿರ್ದಿಷ್ಟ + ವಾರ್ಗಿಕ

ಸೋಮ+ಅಪ್ಪ = ಸೋಮಪ್ಪ

ಸೋಮಪ್ಪ+ನಾಯಕ = ಸೋಮಪ್ಪನಾಯಕ

ಜಡೆಸೋಮಪ್ಪ +ನಾಯಕ = ಜಡೆಸೋಮಪ್ಪ ನಾಯಕ

ರಾಜಾಜಡೆ ಸೋಮಪ್ಪ +ನಾಯಕ = ರಾಜಾಜಡೆಸೋಮಪ್ಪ ನಾಯಕ

ಈ ರೀತಿಯ ಗುಡಗುಂಟಿ ನಾಯಕ ವಂಶಾವಳಿಯಲ್ಲಿ 'ನಿರ್ದಿಷ್ಟ' ಹಾಗೂ ವಾರ್ಗಿಕ ಎರಡು ಸೇರಿ ಇರುವ ಹೆಸರುಗಳ ಉಲ್ಲೇಖವಿದೆ. ಈ ಹಿನ್ನೆಲೆಯಲ್ಲಿಯೂ ನಾವು ವ್ಯಕ್ತಿನಾಮಗಳ ಆಧಾರದಿಂದ ಪ್ರಾದೇಶಿಕತೆಯನ್ನು ನಿರ್ಧರಿಸಬಹುದು. ಇದೇ ರೀತಿಯಾಗಿ ಮಸ್ಕಿ ಪರಿಸರದಲ್ಲಿ 'ಸೂಗೂರೇಶ್ವರ' ದೇವಸ್ಥಾನವಿರುವುದನ್ನು ಕಾಣುತ್ತೇವೆ. 'ಸೂಗೂರೇಶ್ವರ' ದೈವನಾಮವು ಇಲ್ಲಿಯ ಜನರಲ್ಲಿ ವ್ಯಕ್ತಿನಾಮವಾಗಿರುವುದನ್ನು ಕಾಣಬಹುದಾಗಿದೆ. ಈ ದೈವನಾಮವು ಸೂಗಪ್ಪ, ಸೂಗೂರೇಶ್ವರ, ಸೂಗೂರೇಶ, ಸೂಗೂರೇಶಪ್ಪ, ಸೂಗಾರೆಡ್ಡಿ ಇತ್ಯಾದಿಯಾಗಿ 'ನಿರ್ದಿಷ್ಟ' ಹಾಗೂ 'ವಾರ್ಗಿಕ'ಗಳೆರಡೂ ಸೇರಿ ವ್ಯಕ್ತಿನಾಮವಾಗಿ ಬಳಕೆಗೊಳ್ಳುತ್ತದೆ.

ಮಸ್ಕಿಯಲ್ಲಿ ಮಲ್ಲಿಕಾರ್ಜುನ ಹಾಗೂ ಭ್ರಮರಾಂಭ ದೇವಸ್ಥಾನಗಳು ಇತಿಹಾಸ ಪ್ರಸಿದ್ಧವಾಗಿವೆ. ಇಲ್ಲಿನ ಹೆಸರುಗಳಲ್ಲಿ ಕೂಡ ಮಲ್ಲಿಕಾರ್ಜುನ, ಮಲ್ಲಪ್ಪ, ಮಲ್ಲವ್ವ, ಮಲ್ಲಕ್ಕ, ಭ್ರಮರಾಂಭ, ಹೆಸರು ಹೆಚ್ಚಿನ ಮಟ್ಟದಲ್ಲಿ ನೋಡಬಹುದು.

ಚಾರಿತ್ರಿಕವಾದ ವ್ಯಕ್ತಿನಾಮಗಳನ್ನು ಮಸ್ಕಿ ಪ್ರದೇಶದಲ್ಲಿ ಗಮನಿಸಬಹುದು. ಇಲ್ಲಿ ನಾಯಕ ವಂಶಸ್ಥರು ಆಳ್ವಿಕೆ ನಡೆಸಿದ ಕಾರಣ ಈ ಪರಿಸರದಲ್ಲಿ ಮುಖ್ಯವಾಗಿ ಅಮರಪ್ಪನಾಯಕ, ರಾಜಾ ಅಮರಪ್ಪನಾಯಕ, ಅಮರೇಗೌಡ, ಸೋಮಪ್ಪನಾಯಕ, ವೆಂಕಟಪ್ಪನಾಯಕ, ಶಿವಲಿಂಗನಾಯಕ ಈ ರೀತಿಯ ಚಾರಿತ್ರಿಕ ವ್ಯಕ್ತಿನಾಮಗಳು ಜನಸಾಮಾನ್ಯರ ಮೇಲೆ ಪ್ರಭಾವವನ್ನು ಬೀರಿವೆ. ಈ ವ್ಯಕ್ತಿನಾಮಗಳು ನಿರ್ದಿಷ್ಟ ಹಾಗೂ ವಾರ್ಗಿಕಗಳೆರಡನ್ನು ಒಳಗೊಂಡು ಬಳಕೆಗೊಳ್ಳುತ್ತವೆ. ನಾಯಕ ಎಂಬ ಜಾತಿಸೂಚಕವಾಗಿಯೂ ಬಳಕೆಯಲ್ಲಿದೆ.

೧೨ನೇ ಶತಮಾನದ ವಚನ ಸಾಹಿತ್ಯದ ನೇತಾರ ಬಸವಣ್ಣ ಮತ್ತು ೧೬ನೇ ಶತಮಾನದ ಶರಣ ಸಾಹಿತ್ಯದ (ತತ್ವಸಾಹಿತ್ಯ) ಪರಂಪರೆಗಳು ವೀರಶೈವ ಧರ್ಮದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವ್ಯಕ್ತಿನಾಮಗಳು

ಹೆಚ್ಚಾಗಿ ಮಸ್ಕಿ ಪ್ರದೇಶದ ಭಾಗದಲ್ಲಿ ಕಂಡುಬರುತ್ತವೆ. ಸಿಂಧನೂರು ತಾಲ್ಲೂಕು 'ಗೊರೆಬಾಳ'ದಲ್ಲಿರುವ 'ಶರಣಬಸವೇಶ್ವರ' ದೇವಸ್ಥಾನ ಇರುವುದರಿಂದಲೂ ಈ ರೀತಿಯ ವ್ಯಕ್ತಿನಾಮಗಳು ಕಾಣಿಸಿಕೊಳ್ಳುತ್ತವೆ.

ನಿರ್ದಿಷ್ಟ + ವಾರ್ಗಿಕ

ಶರಣ+ಗೌಡ = ಶರಣಗೌಡ

ಶರಣ+ಬಸಪ್ಪ = ಶರಣಬಸಪ್ಪ

ಶಿವ+ಶರಣಪ್ಪ = ಶಿವಶರಣಪ್ಪ

ಶಿವ+ಬಸಪ್ಪ = ಶಿವಬಸಪ್ಪ

ಶರಣ+ಅವ್ವ = ಶರಣವ್ವ

ಶಿವ+ಅಮ್ಮ = ಶಿವಮ್ಮ

ಮುಂತಾದ ವ್ಯಕ್ತಿನಾಮಗಳನ್ನು ಮಸ್ಕಿ-ಭಾಗದಲ್ಲಿ ಇರುವುದನ್ನು ಗಮನಿಸಬಹುದಾಗಿದೆ. ಮಸ್ಕಿ ಪರಿಸರದಲ್ಲಿ ಧಾರ್ಮಿಕ ನೆಲೆಯ ವ್ಯಕ್ತಿನಾಮಗಳು ಹೆಚ್ಚಾಗಿ ಕಂಡುಬರುತ್ತವೆ. 'ನೀಲಕಂಠ', 'ನೀಲಕಂಠೇಶ್ವರ', 'ತಿಮ್ಮಣ್ಣ', 'ತಿಮ್ಮಪ್ಪ', 'ಸಂಗಪ್ಪ', 'ಸೋಮಪ್ಪ', 'ಅಮರಪ್ಪ', 'ಪರಶುರಾಮಣ್ಣ', 'ಪರಶುರಾಮ', 'ರಾಮಪ್ಪ', 'ರಾಮಕ್ಕ', 'ಶಂಕರಲಿಂಗ', 'ಆಂಜನೇಯ', 'ಹನುಮಪ್ಪ' ಇತ್ಯಾದಿಯಾಗಿ ಬಳಕೆಗೊಳ್ಳುವುದನ್ನು ಗಮನಿಸಬಹುದು.

ಹೆಸರುಗಳ ಆಯ್ಕೆಯಲ್ಲಿ ಸಾಮಾನ್ಯವಾಗಿ ಕಂಡುಬರುವ ಪ್ರವೃತ್ತಿಯೆಂದರೆ ಹಿರಿಯರ ಹೆಸರುಗಳು ಮುಂದಿನ ತಲೆಮಾರುಗಳಿಗೆ ಹೋಗುವಂತಹದ್ದು, ಹೆಚ್ಚು ಸಾಂಪ್ರದಾಯಿಕ ಸಮಾಜಗಳಲ್ಲಿ ಪಾಲನೆಯಾಗುತ್ತಿದೆ. ಮಸ್ಕಿ ಪರಿಸರದಲ್ಲಿ ತಮ್ಮ ಮಕ್ಕಳಿಗೆ ಹೆಸರಿಡುವಾಗ ತಮ್ಮ 'ಪ್ರಾದೇಶಿಕ' ದೇವರ ಹೆಸರು, ಇಷ್ಟ ದೇವತೆಯ ಹೆಸರಿಡುವುದನ್ನು ನೋಡಬಹುದು.

ನಿರ್ದಿಷ್ಟ-ವಾರ್ಗಿಕ

ವ್ಯಕ್ತಿನಾಮವನ್ನು ವಿದ್ವಾಂಸರು ಎರಡು ಭಾಗಗಳಾಗಿ ವಿಭಜನೆ ಮಾಡಿದ್ದಾರೆ. ಎರಡು ಭಾಗಗಳಲ್ಲಿ ಮೊದಲನೆಯ ಭಾಗವನ್ನು 'ನಿರ್ದಿಷ್ಟ' ಎಂದು ಎರಡನೆಯ 'ವಾರ್ಗಿಕ' ಎಂದು ಹೇಳಿದ್ದಾರೆ. ಇವರೆಡು ಭಾಗಗಳಲ್ಲಿ ಮೊದಲನೆಯ ಭಾಗವಾದ 'ನಿರ್ದಿಷ್ಟ'ವೆ ವ್ಯಕ್ತಿಯ ನಿಜನಾಮ, ಭಾಷೆಯ ಒಂದು ಪದಘಟಕವೇ ವ್ಯಕ್ತಿನಾಮ ಆಗುವುದು. ಉದಾ: ರಾಜು, ಗೋವಿಂದ, ಪ್ರಕಾಶ, ವಾಸು, ಶಂಕರ, ಶೃತಿ, ಸುಧಾ, ಸುಷ್ಮಾ, ವನಿತ, ಸಂಜನ ಮೊದಲಾದವುಗಳು ವ್ಯಕ್ತಿನಾಮದ ಈ ಘಟಕಗಳಿಗೆ ನಾಮಶಾಸ್ತ್ರದ ಪರಿಭಾಷೆಯಲ್ಲಿ 'ನಿರ್ದಿಷ್ಟ' ಎಂದು ಕರೆಯಲಾಗುತ್ತದೆ.

ಎರಡನೆಯ ಭಾಗವಾದ 'ವಾರ್ಗಿಕ' ಸಂಬಂಧವಾಚಿ ಅಥವಾ ವರ್ಗವಾಚಿ, ಕುಲವಾಚಿ, ವ್ಯಕ್ತಿವಾಚಿ, ಸ್ಥಳವಾಚಿ ಆಗಿರುತ್ತದೆ. ನಿರ್ದಿಷ್ಟಗಳೇ ವ್ಯಕ್ತಿನಾಮದ ಕೇಂದ್ರಭಾಗ ಎನಿಸುವುದರಿಂದ ಅವು ತುಂಬಾ ಮಹತ್ವವನ್ನು ಪಡೆದುಕೊಳ್ಳುತ್ತವೆ. ವ್ಯಕ್ತಿನಾಮ ನಿರ್ದಿಷ್ಟಗಳಿಗೆ ವೃತ್ತಿ, ಜಾತಿ, ಹುದ್ದೆ, ಗೌರವ ಸೂಚಕ

ಮೊದಲಾದ ಪದಗಳು ಸೇರುತ್ತವೆ. ಈ ವರ್ಗವಾಚಿ ಪದಗಳನ್ನು 'ವಾರ್ಗಿಕ'ಗಳೆಂದು ಕರೆಯುತ್ತಾರೆ. ನಿರ್ದಿಷ್ಟದಂತೆ ವಾರ್ಗಿಕಗಳಿಗೂ ತನ್ನದೇ ಆದ ಮಹತ್ವವಿದೆ. ವಾರ್ಗಿಕಗಳು ನಿರ್ದಿಷ್ಟದ ಜೊತೆ ಬಳಕೆಯಾಗುವಾಗ ಕೆಲವು ಸಂದರ್ಭದಲ್ಲಿ ನಿರ್ದಿಷ್ಟದ ಪೂರ್ವ ಪದಗಳಾಗಿಯೂ ಬಳಕೆಯಾಗುತ್ತದೆ. ಕೆಲವು ಸಂದರ್ಭದಲ್ಲಿ ನಿರ್ದಿಷ್ಟದ ಉತ್ತರಪದವಾಗಿಯೂ ಕೆಲಸಮಾಡುತ್ತದೆ. ಅಂಥ ಸಂದರ್ಭದಲ್ಲಿ ವ್ಯಕ್ತಿನಾಮ ಸ್ವರೂಪದಲ್ಲಿ ವ್ಯತ್ಯಾಸಗಳು ಆಗುವುದು. ನಿದರ್ಶನಕ್ಕೆ ಉದಾಹರಣೆ ಗಮನಿಸಬಹುದು.

ವಾರ್ಗಿಕ + ನಿರ್ದಿಷ್ಟ = ವ್ಯಕ್ತಿನಾಮ

ಲಿಂಗಾಯತ + ಬಸಪ್ಪ = ಲಿಂಗಾಯತ ಬಸಪ್ಪ

ಕುಂಬಾರ + ಅಮರಣ್ಣ = ಕುಂಬಾರ ಅಮರಣ್ಣ

ಬೇಲ್ದಾರ್ + ಅಮರೇಶ = ಬೇಲ್ದಾರ್ ಅಮರೇಶ

ಈ ಮೇಲಿನ ಹೆಸರುಗಳಲ್ಲಿ ಜಾತಿ, ವೃತ್ತಿ, ಹುದ್ದೆ, ಸೂಚಕಪದಗಳು ವ್ಯಕ್ತಿನಾಮದ ಪೂರ್ವದಲ್ಲಿ ಬಂದಿವೆ. ಸಮೂಹದಿಂದ ವ್ಯಕ್ತಿಯನ್ನು ಗುರುತಿಸುವಾಗ ಮೇಲಿನ ಈ ಪೂರ್ವ ಪದಗಳು ಪ್ರಧಾನ ಪಾತ್ರವಹಿಸುತ್ತಿದ್ದು ಮತ್ತು ವ್ಯಕ್ತಿಯ ಒಂದು ವರ್ಗವನ್ನು ಸೂಚಿಸುವುದರಿಂದ ಇವುಗಳನ್ನು ವಾರ್ಗಿಕಗಳೆಂದು ಪರಿಗಣಿಸಲಾಗಿದೆ. ಅಲ್ಲದೆ ನಿರ್ದಿಷ್ಟದ ಜೊತೆಗೆ ಗೌರವಸೂಚಿ ಬಂಧುಸೂಚಕ ಅಣ್ಣ, ಅಪ್ಪ, ಬಳಕೆಯಾಗಿದ್ದರೂ ಅವು ಕ್ರಿಯಾತ್ಮಕತೆಯನ್ನು ಕಳೆದುಕೊಂಡು ನಿರ್ದಿಷ್ಟ ಬಾಂಧವ್ಯ ಸೇರಿಹೋಗಿವೆ. ಈ ಹಿನ್ನೆಲೆಯಲ್ಲಿ ಇವುಗಳನ್ನು 'ವಾರ್ಗಿಕ'ಗಳೆಂದು ಪರಿಗಣಿಸಲಾಗುವುದಿಲ್ಲ.

ವಾರ್ಗಿಕ + ನಿರ್ದಿಷ್ಟದ ಉತ್ತರ ಪದವಾಗಿ ಬಳಕೆಯಾಗಿರುವುದು.

ನಿರ್ದಿಷ್ಟ + ವಾರ್ಗಿಕ = ವ್ಯಕ್ತಿನಾಮ

ಸಂದಯ್ಯ + ಸ್ವಾಮಿ = ಸಂದಯ್ಯಸ್ವಾಮಿ

ಹನುಮಂತ + ನಾಯಕ = ಹನುಮಂತ ನಾಯಕ

ರಾಘುವೇಂದ್ರ + ಶೆಟ್ಟಿ = ರಾಘುವೇಂದ್ರಶೆಟ್ಟಿ

ಕೃಷ್ಣ + ರಾವ್ = ಕೃಷ್ಣರಾವ್

ಒಂದು ಹೆಸರಿನ ಲಿಂಗವನ್ನು ಸೂಚಿಸುವುದರೊಂದಿಗೆ ಜಾತಿ, ವೃತ್ತಿ ಮುಂತಾದವು ಕೆಲವು ವಿವರಗಳನ್ನು 'ವಾರ್ಗಿಕ' ಭಾಗವು ತಿಳಿಸುತ್ತದೆ.

ಕೆಲವು ವ್ಯಕ್ತಿನಾಮಗಳು ಆಯಾ ವ್ಯಕ್ತಿಗಳ ನಾಮನಿರ್ದೇಶನ ಮಾಡುವುದರ ಜೊತೆಗೆ ವಾರ್ಗಿಕಗಳು ಬದಲಾದಂತೆ ಜಾತಿ ಸೂಚಕ ನಾಮಗಳಾಗಿ ಬದಲಾವಣೆ ಆಗಿರುವುದನ್ನು ಕೆಳಗಿನ ಉದಾಹರಣೆಯಿಂದ ತಿಳಿಯಬಹುದು.

ನಿರ್ದಿಷ್ಟ + ವಾರ್ಗಿಕ = ವ್ಯಕ್ತಿನಾಮ

ರಾಮ + ಅಣ್ಣ = ರಾಮಣ್ಣ

ರಾಮ + ರಾವ್ = ರಾಮರಾವ್

ರಾಮ + ಶಾಸ್ತ್ರಿ = ರಾಮಶಾಸ್ತ್ರಿ

ರಾಮ + ಅಪ್ಪ = ರಾಮಪ್ಪ

ರಾಮ + ಗೌಡ = ರಾಮಗೌಡ

ರಾಮ + ದೇವರು = ರಾಮದೇವರು

ರಾಮ + ಶೆಟ್ಟಿ = ರಾಮಶೆಟ್ಟಿ

ರಾಮ + ನಾಯಕ = ರಾಮನಾಯಕ

ರಾಮ + ಸ್ವಾಮಿ = ರಾಮಸ್ವಾಮಿ

ರಾಮ + ರಾಜು = ರಾಮರಾಜು

ರಾಮ + ಅಯ್ಯ = ರಾಮಯ್ಯ

ರಾಮ + ಜೋಯಿಸ = ರಾಮಜೋಯಿಸ

ಮುಂತಾದ ರೂಪಗಳು 'ರಾಮ' ಹೆಸರಿನ ಮೂಲ ಪಡೆದಿವೆ. ಇವುಗಳ ವಾರ್ಗಿಕ ಸಹಾಯದಿಂದ ಬ್ರಾಹ್ಮಣ, ಲಿಂಗಾಯತ, ಒಕ್ಕಲಿಗ, ಉಪ್ಪಾರ, ಬೇಡ, ಹೊಲೆಯ, ಮಾದಿಗ ಜನರ ಜಾತಿ ಸೂಚಿ ನಾಮಗಳಾವೆ. ಆದರೆ ವಾರ್ಗಿಕಗಳ ಸಹಾಯದಿಂದ ಸ್ತ್ರೀಯರ ಹೆಸರಿನಲ್ಲಿ ಜಾತಿಸೂಚಿ ನಾಮಗಳನ್ನು ನಿರ್ಣಯಿಸುವುದು ಕಷ್ಟ. ಮಸ್ಕಿ ಪರಿಸರದಲ್ಲಿ ಈ ಹೆಸರುಗಳು ವಿಶಿಷ್ಟವಾಗಿ ಬಳಕೆಗೊಳ್ಳುತ್ತವೆ.

ಇದೇ ರೀತಿ ಒಂದೇ ಮೂಲದ ಹೆಸರಿನ ವಾರ್ಗಿಕಗಳ ಸಹಾಯದಿಂದ ಒಂದೇ ಜಾತಿ ಸೂಚಿನಾಮದಲ್ಲಿ ವಯಸ್ಸು, ಲಿಂಗಗಳ ಭಿನ್ನತೆ ಸೂಚಿಸುತ್ತದೆ.

ನಿರ್ದಿಷ್ಟ + ವಾರ್ಗಿಕ = ವ್ಯಕ್ತಿನಾಮ

ಸುಬ್ಬ + ಅಣ್ಣ ಗೌಡ = ಸುಬ್ಬಣ್ಣಗೌಡ

ಸುಬ್ಬ + ಅಣ್ಣ + ಅಯ್ಯ = ಸುಬ್ಬಣ್ಣಯ್ಯ

ಸುಬ್ಬ + ಅಣ್ಣ + ನಾಯಕ = ಸುಬ್ಬಣ್ಣನಾಯಕ

ಸುಬ್ಬ + ಅಮ್ಮ = ಸುಬ್ಬಮ್ಮ

ಸುಬ್ಬ + ಅಕ್ಕ = ಸುಬ್ಬಕ್ಕ

ಸುಬ್ಬ, ಸುಬ್ಬಿ ಮುಂತಾದ ಪುರುಷ ಮತ್ತು ಸ್ತ್ರೀ ವ್ಯಕ್ತಿನಾಮದ ವಿಸ್ತೃತರೂಪ ಇಲ್ಲವೆ ಸಂಕುಚಿತ ರೂಪಗಳು ಲಿಂಗಗಳನ್ನು ಸೂಚಿಸುತ್ತದೆ. ಮಸ್ಕಿ ಕನ್ನಡದಲ್ಲಿ ಈ ರೀತಿ ವ್ಯಕ್ತಿನಾಮ ವಿಶೇಷತೆಯಿಂದ ಬಳಕೆಯಲ್ಲಿವೆ.

ಎರಡು ನಿರ್ದಿಷ್ಟದಿಂದ ಕೂಡಿದ ವ್ಯಕ್ತಿನಾಮಗಳು

ನಿರ್ದಿಷ್ಟ + ನಿರ್ದಿಷ್ಟ = ವ್ಯಕ್ತಿನಾಮ

ಚಂದ್ರ + ಶೇಖರ = ಚಂದ್ರಶೇಖರ

ರಾಮ + ಚಂದ್ರ = ರಾಮಚಂದ್ರ

ನಾಗ + ಲಕ್ಷ್ಮಿ = ನಾಗಲಕ್ಷ್ಮಿ

ಸುಬ್ಬ + ಲಕ್ಷ್ಮಿ = ಸುಬ್ಬಲಕ್ಷ್ಮಿ

ಮಸ್ಕಿಪರಿಸರದಲ್ಲಿ ಈ ರೀತಿಯ ವ್ಯಕ್ತಿನಾಮಗಳ ಬಳಕೆಯನ್ನು ಗಮನಿಸಬಹುದು.

ವಿಶೇಷಣ + ನಿರ್ದಿಷ್ಟ = ವ್ಯಕ್ತಿನಾಮ

ದೊಡ್ಡ + ಹನುಮಂತಪ್ಪ = ದೊಡ್ಡಹನುಮಂತಪ್ಪ

ಸಣ್ಣ + ಅಮರಪ್ಪ = ಸಣ್ಣಅಮರಪ್ಪ

ದೊಡ್ಡ + ಮಲ್ಲಯ್ಯ = ದೊಡ್ಡಮಲ್ಲಯ್ಯ

ಸಣ್ಣ + ಲಿಂಗಮ್ಮ = ಸಣ್ಣ ಲಿಂಗಮ್ಮ

ದೊಡ್ಡ + ಹಂಪಮ್ಮ = ದೊಡ್ಡಹಂಪಮ್ಮ

ಹಿರೇ + ಸೋಮಪ್ಪ = ಹಿರೇಸೋಮಪ್ಪ

ಸಣ್ಣ + ಸೋಮಪ್ಪ = ಸಣ್ಣ ಸೋಮಪ್ಪ

ಇಲ್ಲಿ ಬಂದಿರುವ ಸಣ್ಣ, ದೊಡ್ಡ ವಿಶೇಷಣಗಳು ಅದೇ ಹೆಸರಿನ ಮತ್ತೊಬ್ಬ ವ್ಯಕ್ತಿಯ ಅಸ್ತಿತ್ವವನ್ನು ತಿಳಿಸುತ್ತದೆ. ದೊಡ್ಡ ಹನುಮಂತಪ್ಪ ಎಂಬುದು ಸಣ್ಣ ಹನುಮಂತಪ್ಪ ಎಂಬ ಇನ್ನೊಬ್ಬ ವ್ಯಕ್ತಿಯ ಇರುವಿಕೆಯನ್ನು ಪರೋಕ್ಷವಾಗಿ ತಿಳಿಸುತ್ತದೆ. ಇಂಥ ವ್ಯಕ್ತಿನಾಮಗಳು ಮಸ್ಕಿ ಪ್ರದೇಶದಲ್ಲಿ ಸಿಗುತ್ತವೆ.

೭. ಒಂದೇ ಕುಟುಂಬದಲ್ಲಿ ಒಂದೇ ಹೆಸರನ್ನು ಮತ್ತೆ ಮತ್ತೆ ಇಡಲಾಗುತ್ತಿತ್ತು. ಕೆಲವು ಮನೆಗಳಲ್ಲಿ ಒಬ್ಬರಿಗಿಂತ ಹೆಚ್ಚು ಜನ ಅದೇ ಹೆಸರಿನ ಜನರಿರುತ್ತಿದ್ದರು. ಆಗ ಅವರನ್ನು ಗುರುತಿಸಲು ಹೆಸರಿನ ಪದಾದಿಯಲ್ಲಿ ವಾರ್ಗಿಕಗಳು ಬರುವುದರಿಂದ ಬಂಧುತ್ವ ವಯಸ್ಸನ್ನು ಸಹ ಸೂಚಿಸುತ್ತದೆ.

ವಾರ್ಗಿಕ + ನಿರ್ದಿಷ್ಟ = ವ್ಯಕ್ತಿನಾಮ

ದೊಡ್ಡ + ಪಕ್ಕೀರಪ್ಪ = ದೊಡ್ಡಪಕ್ಕೀರಪ್ಪ

ಸಣ್ಣ + ಪಕ್ಕೀರಪ್ಪ = ಸಣ್ಣಪಕ್ಕೀರಪ್ಪ

ದೊಡ್ಡ + ಮಲ್ಲಪ್ಪ = ದೊಡ್ಡಮಲ್ಲಪ್ಪ

ಸಣ್ಣ + ಮಲ್ಲಪ್ಪ = ಸಣ್ಣಮಲ್ಲಪ್ಪ

ದೊಡ್ಡ + ನಿಂಗವ್ವ = ದೊಡ್ಡನಿಂಗವ್ವ

ಸಣ್ಣ + ನಿಂಗವ್ವ = ಸಣ್ಣನಿಂಗವ್ವ

ಮಸ್ಕಿಪರಿಸರದಲ್ಲಿ ಬಂಧುತ್ವ ವಯಸ್ಸನ್ನು ಸೂಚಿಸುವ ವ್ಯಕ್ತಿನಾಮಗಳು ಕಂಡುಬರುತ್ತವೆ.

೮. ಕೆಲವು ಸಮುದಾಯಗಳಲ್ಲಿ ವ್ಯಕ್ತಿನಾಮಗಳು ಸ್ತ್ರೀ ಮತ್ತು ಪುರುಷ ಇಬ್ಬರಿಗೂ ಒಂದೇ ಮೂಲದ ಹೆಸರುಗಳಿರುತ್ತಿದ್ದು ಸಂಭೋದನೆ 'ಅ' ಕಾರದಿಂದ ಅಂತ್ಯಗೊಂಡರೆ ಪುಲ್ಲಿಂಗ ಎಂದೂ 'ಇ' ಕಾರದಿಂದ ಅಂತ್ಯಗೊಂಡರೆ ಸ್ತ್ರೀಲಿಂಗ ಎಂದೂ ಸೂಚಿಸುತ್ತದೆ. ಈ ನಿಯಮ ಎಲ್ಲ ಸಂದರ್ಭದಲ್ಲಿ ಸಾಧ್ಯವಿಲ್ಲ.

ಉದಾ :	**ಪುರುಷ**	**ಸ್ತ್ರೀ**
	ಮಲ್ಲ	ಮಲ್ಲಿ
	ಕೆಂಪ	ಕೆಂಪಿ
	ರಾಜ	ರಾಜಿ
	ಬಸವ	ಬಸವಿ
	ನಾಗ	ನಾಗಿ

ಹೀಗೆ ವ್ಯಕ್ತಿನಾಮಗಳಲ್ಲಿ ಹಲವಾರು ವೈವಿಧ್ಯತೆ ಇರುವುದನ್ನು ಮಸ್ಕಿ ಪರಿಸರದಲ್ಲಿ ಕಾಣಬಹುದಾಗಿದೆ. ವ್ಯಕ್ತಿನಾಮಗಳ ಸ್ವರೂಪವನ್ನು ಅನುಲಕ್ಷಿಸಿ ಅವುಗಳನ್ನು ಈ ರೀತಿಯಾಗಿ ವಿಭಾಗಿಸಬಹುದು.

೧. ಸ್ಥಳವಾಚಿ
೨. ವೃತ್ತಿವಾಚಿ
೩. ಜಾತಿವಾಚಿ
೪. ವ್ಯಕ್ತಿವಾಚಿ
೫. ವಸ್ತುವಾಚಿ
೬. ಬಂಧುವಾಚಿ
೭. ವರ್ಣಸೂಚಿ
೮. ಶಿಲಾವಾಚಿ
೯. ಪರಿಮಾಣ ಸೂಚಿ
೧೦. ಶರೀರ ವಲಯ ಸೂಚಿ

ಸ್ಥಳವಾಚಿ

ಪೂರ್ವಜರಲ್ಲಿ ಗ್ರಾಮನಾಮಗಳನ್ನು ವ್ಯಕ್ತಿನಾಮಗಳಿಗೆ ಸೇರಿಸಿ ಬಳಸುವ ವಾಡಿಕೆ ಇತ್ತು. ಮಂಡಿಗೆಯ ಮಾದಿರಾಜ, ಹಾವಿನಾಳ ಕಲ್ಲಯ್ಯ, ಇಂತಹ ಪ್ರಾಚೀನ ನಾಮಗಳಲ್ಲಿ ಗ್ರಾಮಗಳ ಸೂಚನೆ ಇರುವುದರಿಂದ ಈ ಪದ್ಧತಿ ತಕ್ಕಮಟ್ಟಿಗೆ ಹಳೆಯದಂದೇ ಹೇಳಬೇಕು. ಈ ಕುಲನಾಮಗಳಲ್ಲಿ ವ್ಯಕ್ತಿಗಳು ವಾಸಿಸುವ ಮತ್ತು ವಾಸಿಸುತ್ತಿದ್ದ ಪ್ರದೇಶದ ಸೂಚನೆ ಇರುತ್ತದೆ. ಮಸ್ಕಿ ಪರಿಸರದಲ್ಲಿ ಇಂತಹ ಸ್ಥಳವಾಚಿ ವ್ಯಕ್ತಿ ನಾಮಗಳು ಬಳಕೆ ಇರುವುದನ್ನು ನೋಡಬಹುದಾಗಿದೆ.

ನಿರ್ದಿಷ್ಟ + ವಾರ್ಗಿಕ = ವ್ಯಕ್ತಿನಾಮ

ಗುಂಡುರಾವ್ + ದೇಸಾಯಿ = ಗುಂಡುರಾವ್‌ದೇಸಾಯಿ

ವೆಂಕಟೇಶ + ಶೆಟ್ಟಿ = ವೆಂಕಟೇಶಶೆಟ್ಟಿ

ರಾಜಪ್ಪ + ಚಲವಾದಿ = ರಾಜಪ್ಪಚಲವಾದಿ

ಶಿವಪುತ್ರ + ರೆಡ್ಡಿ = ಶಿವಪುತ್ರರೆಡ್ಡಿ

ಬಸಪ್ಪ + ಒಡ್ಡರ = ಬಸಪ್ಪ ಒಡ್ಡರ

ಇಂತಹ ವ್ಯಕ್ತಿನಾಮಗಳು ವೃತ್ತಿ ಸೂಚಿಯೊಂದಿಗೆ ಬಳಕೆಯಲ್ಲಿರುವುದನ್ನು ಮಸ್ಕಿಪರಿಸರದಲ್ಲಿ ಕಾಣಬಹುದು.

ಜಾತಿವಾಚಿ ವ್ಯಕ್ತಿನಾಮಗಳು

ಸಾಮಾಜಿಕ ವರ್ಗಗಳು ಕುಲನಾಮಗಳಂತೆ ಬಳಕೆಯಾಗುತ್ತವೆ. ತಳವಾರ, ದೇಶಪಾಂಡೆ, ಒಡ್ಡರ, ಪುರೋಹಿತ, ದೇಸಾಯಿ ''ಹೆಸರಿನ ನಿರ್ದಿಷ್ಟ ಭಾಗದಿಂದ ಅಂದರೆ ಮೊದಲ ಭಾಗದಿಂದ ಧರ್ಮ, ಲಿಂಗ, ಜಾತಿಯಂತಹ ವಿಷಯಗಳು ಕಂಡುಬಂದರೆ ಹೆಸರಿನ ವಾರ್ಗಿಕ ಭಾಗದಿಂದ ಅಂದರೆ ಎರಡನೇ ಭಾಗದಿಂದ ವ್ಯಕ್ತಿಯ ಜಾತಿ ಸಾಮಾಜಿಕ ಸ್ತರಗಳನ್ನು ಕಂಡುಕೊಳ್ಳಲು ಸಾಧ್ಯವಿದೆ. ಇದನ್ನು ಡಾ.ಎಂ.ಎಂ.ಕಲಬುರ್ಗಿಯವರು ನಾಮ ವಿಜ್ಞಾನ ಪುಸ್ತಕದಲ್ಲಿ ದಾಖಲಿಸಿರುವ ಸಿದ್ಧನಗೌಡ ಪಾಟೀಲರ ಒಂದು ಪದ್ಯಭಾಗದಿಂದ ಸ್ಪಷ್ಟ ಪಡಿಸಿಕೊಳ್ಳಬಹುದು. ಆ ಪದ್ಯ ಹೀಗಿದೆ.

ಅಯ್ಯನಾರ ಹುಡುಗ ಬಸಯ್ಯ ಅಂತ ಗೌಡರಹುಡುಗ ಬಸವಗೌಡ ಅಂತ ಬಣಜಿಗೇರು (ಉಳಿದ ಲಿಂಗಾಯತ ಹುಡುಗ್ರು) ಬಸವರಾಜ ಅಂತ ಆ ಕುರುಬರ ಹುಡುಗ ಬಸಪ್ಪ ಅಂತ, ನಾ-ಬಸ್ಯಾ ಅಂತ ಯಾಕಂದ್ರ ನಾಹೊಲ್ಯಾ ಅಂತ, ಮೇಲಿನ ಪದ್ಯಭಾಗದಲ್ಲಿ ಬಸವ ಎನ್ನುವ 'ನಿರ್ದಿಷ್ಟ' ಒಂದು ಹೆಸರಿನಿಂದ ಒಂದೇ ಸಮಾಜದ ವಿವಿಧ ಜಾತಿ ವರ್ಗಗಳು 'ಅಯ್ಯ', 'ಗೌಡ', 'ಅಪ್ಪ', 'ರಾಜ', ಅಯ್ಯಗಳನ್ನು ಸೇರಿಸಿ ತಮ್ಮಲ್ಲಿರುವ ಭಿನ್ನತೆಯನ್ನು ತೋರಿಸಿವೆ.''[੪]

ವಾರ್ಗಿಕ + ನಿರ್ದಿಷ್ಟ = ವ್ಯಕ್ತಿನಾಮ

ನಾಯಕರ + ಸೋಮ = ನಾಯಕರಸೋಮ

ಕುಂಬಾರ + ಅಮರಣ್ಣ = ಕುಂಬಾರ ಅಮರಣ್ಣ

ಚಲವಾದಿ + ರಾಜಪ್ಪ = ಚಲವಾದಿ ರಾಜಪ್ಪ

ಬೇಲ್ದಾರ್ + ಅಮರೇಶ = ಬೇಲ್ದಾರ್ ಅಮರೇಶ

ಕುರುಬರ + ಶಿವಮ್ಮ = ಕುರುಬರ ಶಿವಮ್ಮ

ಮುಚುಗರ + ವೀರೇಶ್ = ಮುಚುಗರ ವೀರೇಶ

ನಾಯಕರ + ಭೀಮರಾಯ = ನಾಯಕರ ಭೀಮರಾಯ

ಪಿಂಜಾರ + ಬಿಯಮ್ಮ = ಪಿಂಜಾರ್ ಬಿಯಮ್ಮ

ಅಯ್ನೋರು + ಈರಮ್ಮ = ಅಯ್ನೋರು ಈರಮ್ಮ

ವ್ಯಕ್ತಿವಾಚಿ ವ್ಯಕ್ತಿನಾಮಗಳು

ಕೆಲವು ಮನೆತನಗಳಲ್ಲಿ ಆಗಿಹೋದ ಪ್ರಸಿದ್ಧ ಪುರುಷರ ಅಥವಾ ರಾಜಕೀಯ ವ್ಯಕ್ತಿಗಳು, ಚಲನ ಚಿತ್ರನಟರ, ಕ್ರೀಡಾಪಟುಗಳ ಹೆಸರುಗಳು ಚಾಲ್ತಿಯಲ್ಲಿವೆ. ಈ ಮುಂತಾದ ಹೆಸರುಗಳು ಮಸ್ಕಿ ಪರಿಸರದಲ್ಲಿ ಕಾಣಬಹುದಾಗಿದೆ.

ಅಮರಪ್ಪನಾಯಕ

ಸೋಮಪ್ಪನಾಯಕ

ಶಿವರಾಜ್

ಸುಭಾಸ್

ಸುದೀಪ್

ದರ್ಶನ್

ಸಂದೀಪ್

ಸಚಿನ್

ಸಂಜನಾ

ಶೃತಿ

ವಸ್ತುವಾಚಿ ವ್ಯಕ್ತಿನಾಮಗಳು

ಕೆಲವು ವಸ್ತುಗಳ ಸಂಬಂಧ ಮತ್ತು ಬಳಕೆಯಿಂದಾಗಿಯೂ ಅವು ವ್ಯಕ್ತಿಗೆ ಮನೆತನದ ಹೆಸರುಗಳಂತೆ ಅಂಟಿಕೊಂಡಿರುತ್ತವೆ. ಅಂದರೆ ಒಂದು ಮನೆತನಕ್ಕೆ ಸಂಬಂಧಿಸಿದ ವಸ್ತುಗಳಲ್ಲಿ ಪ್ರಧಾನವಾಗಿ ಜನರ ಗಮನ ಸೆಳೆಯುವದೋ ಅದು ಅವರ ಮನೆತನದ ಹೆಸರಾಗುತ್ತದೆ. ಮಸ್ಕಿ ಪರಿಸರದ ವ್ಯಕ್ತಿನಾಮಗಳಲ್ಲಿ ಹೆಚ್ಚಾಗಿ ಕಂಡುಬರುವಂತಹವು ಈ ವಸ್ತುವಾಚಿ ವ್ಯಕ್ತಿನಾಮಗಳು. ಮಸ್ಕಿಪರಿಸರದಲ್ಲಿ ಈ ಕೆಳಗಿನ ವ್ಯಕ್ತಿನಾಮಗಳ ವಿಶಿಷ್ಟವಾಗಿರುವುದನ್ನು ಗಮನಿಸಬಹುದು.

ವಾರ್ಗಿಕ + ನಿರ್ದಿಷ್ಟ = ವ್ಯಕ್ತಿನಾಮ

ಮೆಣಸಿನಕಾಯಿ + ಮಲ್ಲಪ್ಪ = ಮೆಣಸಿನಕಾಯಿ ಮಲ್ಲಪ್ಪ

ಬ್ಯಾಳೇರ್ + ಸಂಗಮ್ಮ = ಬ್ಯಾಳೇರ್ ಸಂಗಮ್ಮ

ಬಂಡಿ + ಕಂಪ್ಲಪ್ಪ = ಬಂಡಿ ಕಂಪ್ಲಪ್ಪ

ಕೊಡ್ಲಿ + ಕರಿಯಪ್ಪ = ಕೊಡ್ಲಿ ಕರಿಯಪ್ಪ

ಉಂಚಟ್ನಿ + ಮಲಕಜಪ್ಪ = ಉಂಚಟ್ನಿ ಮಲಕಜಪ್ಪ

ಸಜ್ಜೆ + ಅಮರಪ್ಪ = ಸಜ್ಜೆಅಮರಪ್ಪ

ಬ್ಯಾಳಿ + ಅಮರಪ್ಪ = ಬ್ಯಾಳಿ ಅಮರಪ್ಪ

ಅಲಸಂದಿವಡಿ + ಪಾತಮ್ಮ = ಅಲಸಂದಿವಡಿ ಪಾತಮ್ಮ

ಹುರ್‌ಕಡ್ಲಿ + ಮಲ್ಲು = ಹುರ್‌ಕಡ್ಲಿ ಮಲ್ಲು

ಕೊಳ್ಳಿ + ವೆಂಕಪ್ಪ = ಕೊಳ್ಳಿ ವೆಂಕಪ್ಪ

ಕಾಯಿಗಡ್ಡಿ + ಶಿವಮ್ಮ = ಕಾಯಿಗಡ್ಡಿ ಶಿವಮ್ಮ

ಬೊಳ್ಳೊಳ್ಳಿ + ಸಯ್ಯದ್‌ಸಾಬ್ = ಬೊಳ್ಳೊಳ್ಳಿ ಸಯ್ಯದ್‌ಸಾಬ್

ಗಡಿಗಿ + ಅಮರಣ್ಣ= ಗಡಿಗಿ ಅಮರಣ್ಣ

ಬೇಲ್ದಾರ್ + ಅಮರೇಶ = ಬೇಲ್ದಾರ್ ಅಮರೇಶ

ಬಂಧುವಾಚಿ ವ್ಯಕ್ತಿನಾಮಗಳು

''ಬಂಧು ಸೂಚಕ ವಾರ್ಗಿಕಗಳು ವಿಶಿಷ್ಟವಾಗಿ ಬಳಕೆಯಾಗುವುದು ಕನ್ನಡ ವ್ಯಕ್ತಿನಾಮಗಳಲ್ಲಿ. ಈ ಬಂಧುವಾಚಕ ಪದಗಳು ಮೂಲತಃ ವ್ಯಕ್ತಿನಾಮಗಳಲ್ಲಿ ಗೌರವ ಸೂಚಕಗಳಾಗಿ ಇದ್ದಿರಬಹುದು. ಆದರೆ ಇಂದು ಇವುಗಳ ಅರ್ಥವ್ಯಾಪ್ತಿ ಬದಲಾವಣೆಗೊಂಡು ಒಂದು ವರ್ಗದ ವ್ಯಕ್ತಿನಾಮಗಳಿಗೆ ಮಾತ್ರ ಸೀಮಿತವಾಗತ್ತಿದೆ ಎಂಬ ಭಾವನೆ ಮೂಡುತ್ತಿದೆ. ಮಸ್ಕಿ ಪರಿಸರದಲ್ಲಿ ಬಳಕೆಯಲ್ಲಿರುವ ಬಂಧುಸೂಚಿ ವ್ಯಕ್ತಿನಾಮಗಳು.

ನಿರ್ದಿಷ್ಟ + ವಾರ್ಗಿಕ = ವ್ಯಕ್ತಿನಾಮ

ಹನುಮಂತ + ಅಪ್ಪ = ಹನುಮಂತಪ್ಪ

ಕರಿ + ಅಪ್ಪ = ಕರಿಯಪ್ಪ

ಭೀಮ + ಅಯ್ಯ = ಭೀಮಯ್ಯ

ಮಲ್ಲ + ಅಯ್ಯ = ಮಲ್ಲಯ್ಯ

ಶಿವ + ಅಣ್ಣ = ಶಿವಣ್ಣ

ಸಂಗ + ಅಣ್ಣ = ಸಂಗಣ್ಣ

ಹುಲುಗ + ಅಜ್ಜ = ಹುಲುಗಜ್ಜ

ಈರ + ಅಜ್ಜ = ಈರಜ್ಜ

ಸೋಮ + ಅಪ್ಪ = ಸೋಮಪ್ಪ

ಶಾಂತ + ಅಮ್ಮ = ಶಾಂತಮ್ಮ

ಸಂಗ + ಅಮ್ಮ = ಸಂಗಮ್ಮ

ಮಲ್ಲ + ಅವ್ವ = ಮಲ್ಲವ್ವ

ತಿಮ್ಮ + ಅವ್ವ = ತಿಮ್ಮವ್ವ

ನಾಗ + ಅಕ್ಕ = ನಾಗಕ್ಕ

ಹಂಪ + ಅಕ್ಕ = ಹಂಪಕ್ಕ

ಗೌರ + ಅಜ್ಜಿ = ಗೌರಜ್ಜಿ

ಬಸ + ಅಜ್ಜಿ = ಬಸಜ್ಜಿ

ವರ್ಣಸೂಚಕ ವ್ಯಕ್ತಿನಾಮಗಳು

ವಾರ್ಗಿಕ + ನಿರ್ದಿಷ್ಟ = ವ್ಯಕ್ತಿನಾಮ

ಕರಿ + ಗೌಡ = ಕರಿಗೌಡ

ಕರಿ + ಬಸಪ್ಪ = ಕರಿಬಸಪ್ಪ

ಕೆಂಪ + ಅಯ್ಯ = ಕೆಂಪಯ್ಯ

ಕರಿ + ಸಿದ್ಧ = ಕರಿಸಿದ್ಧ

ಕರಿ + ಬಸಮ್ಮ = ಕರಿಬಸಮ್ಮ

ವರ್ಣಸೂಚಕ ಬಣ್ಣವನ್ನು ಸೂಚಿಸುವ ವ್ಯಕ್ತಿನಾಮಗಳು ಇರುವುದನ್ನು ಮಸ್ಕಿ ಪರಿಸರದಲ್ಲಿ ಕಾಣಬಹುದು.

ಶಿಲಾವಾಚಿ ವ್ಯಕ್ತಿನಾಮಗಳು

ಶಿಲಾಸೂಚಕವು ಕಲ್ಲು, ಬೆಟ್ಟ, ಗುಡ್ಡ, ಬಂಡಿ ಮುಂತಾದವನ್ನು ಸೂಚಿಸುವ ಸ್ಥಳನಾಮಗಳೊಂದಿಗೆ ವ್ಯಕ್ತಿನಾಮಗಳು ಬಳಕೆಯಲ್ಲಿವೆ.

ವಾರ್ಗಿಕ + ನಿರ್ದಿಷ್ಟ = ವ್ಯಕ್ತಿನಾಮ

ಕಾಟಗಲ್ + ಭೀಮರಾಯ = ಕಾಟಗಲ್ ಭೀಮರಾಯ

ಗುಡುದೂರು + ಲಕ್ಷ್ಮಣ = ಗುಡದೂರು ಲಕ್ಷ್ಮಣ

ಬಂಡಿ + ಕಂಪ್ಲಪ್ಪ = ಬಂಡಿ ಕಂಪ್ಲಪ್ಪ

ಇರಕಲ್ + ಈರಪ್ಪ = ಇರಕಲ್ ಈರಪ್ಪ

ಪರಿಮಾಣ ಸೂಚಕ ವ್ಯಕ್ತಿನಾಮಗಳು

ವ್ಯಕ್ತಿನಾಮ ಪ್ರಮಾಣ (ಪರಿಮಾಣ)ವನ್ನು ಸೂಚಿಸುತ್ತವೆ. ಆದರೆ ಆ ಪರಿಮಾಣಕ್ಕೆ ತಕ್ಕಂತೆ ವ್ಯಕ್ತಿಗಳು ಇರುತ್ತಾರೆಂಬ ನಿಯಮವಿಲ್ಲ.

ವಾರ್ಗಿಕ + ನಿರ್ದಿಷ್ಟ = ವ್ಯಕ್ತಿನಾಮ

ದೊಡ್ಡ + ಭೀಮಪ್ಪ = ದೊಡ್ಡಭೀಮಪ್ಪ

ಸಣ್ಣ + ಭೀಮಪ್ಪ = ಸಣ್ಣಭೀಮಪ್ಪ

ದೊಡ್ಡ + ರಾಮಣ್ಣ = ದೊಡ್ಡರಾಮಣ್ಣ

ಸಣ್ಣ + ರಾಮಣ್ಣ = ಸಣ್ಣರಾಮಣ್ಣ

ದೊಡ್ಡ + ಸೋಮಣ್ಣ = ದೊಡ್ಡಸೋಮಣ್ಣ

ಸಣ್ಣ + ಸೋಮಣ್ಣ = ಸಣ್ಣಸೋಮಣ್ಣ

ಶರೀರ ಅವಯವ ಸೂಚಕ ವ್ಯಕ್ತಿನಾಮಗಳು

ಶರೀರವಾಚಿ ವ್ಯಕ್ತಿನಾಮಗಳನ್ನು ನಾವು ಮಸ್ಕಿ ಪರಿಸರದಲ್ಲಿ ಗಮನಿಸಬಹುದು.

ವಾರ್ಗಿಕ + ನಿರ್ದಿಷ್ಟ = ವ್ಯಕ್ತಿನಾಮ

ಮೀಟಕಾಲ್ + ಮಂಜುನಾಥ = ಮೀಟಕಾಲ್ ಮಂಜುನಾಥ

ರೊಡ್ಡಗೈ + ಚಂದ್ರಣ್ಣ = ರೊಡ್ಡಗೈ ಚಂದ್ರಣ್ಣ

ಗಿಡ್ಡ + ಬಸವರಾಜಪ್ಪ = ಗಿಡ್ಡ ಬಸವರಾಜಪ್ಪ

ವ್ಯಕ್ತಿನಾಮಗಳು-ಆಧುನಿಕತೆ

ಆಧುನಿಕತೆಯ ಪ್ರಭಾವದಿಂದಾಗಿ ಇಂದು ಹಲವಾರು ಕ್ಷೇತ್ರಗಳು ಮಹತ್ತರವಾದ ಬದಲಾವಣೆಗೆ ಒಳಪಟ್ಟಿವೆ. ತೀವ್ರವಾಗಿ ಪ್ರಭಾವಿಸುತ್ತಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಸಾಂಸ್ಕೃತಿಕ ಸಾಹಿತ್ಯಿಕ ವಲಯದಲ್ಲಿಯೂ ವ್ಯಾಪಕವಾಗಿ ಹರಡಿ ತೀವ್ರವಾದ ಬದಲಾವಣೆಗೆ ಕಾರಣವಾಗಿದೆ.

ಮುಖ್ಯವಾಗಿ ವ್ಯಕ್ತಿನಾಮಗಳ ಮೇಲೂ ಆಧುನಿಕತೆಯ ಪ್ರಭಾವವನ್ನು ಗುರುತಿಸಬಹುದು. ವ್ಯಕ್ತಿಯ ಹೆಸರುಗಳ ಮೇಲೂ ಆಧುನಿಕತೆಯ ಪ್ರಭಾವವನ್ನು ಗುರಿತಿಸಬಹುದು. ''ಸಂಸ್ಕೃತ ಹೆಸರುಗಳಲ್ಲೇ ಅಪೂರ್ವವಾಗಿರುವ ಅಥವಾ ಯಾರೂ ಇಟ್ಟಿರದ ಹೊಸ ಹೆಸರುಗಳನ್ನು ಜನರು ಬಯಸುತ್ತಾರೆ. ಶಿಲ್ಪ ಶೃತಿ, ಸಂತೋಷ್, ಶರತ್, ಪ್ರೀತಿ, ಶ್ರೀ, ಚೈತನ್ಯ, ಚೈತ್ರ ಇಂತಹ ಹೆಸರುಗಳು ಬಳಕೆಗೆ ಬರುತ್ತಿವೆ. ರೇಷ್ಮೆಗೆ ಸಂಬಂಧಿಸಿದ ಅಧಿಕಾರಿಗಳು ರೇಶ್ಮ ಎಂದು ಹೆಸರಿಟ್ಟರೆ ಅದಕ್ಕೆ ಅರ್ಥ ಹುಡುಕುವುದು ಅನಗತ್ಯ ಹೊಸದು ಬಹಳಬೇಗ ಹಳತಾಗುವುದು. ಆಗ ಮತ್ತೆ ಹೊಸ ಹೆಸರುಗಳಿಗೆ ಹುಡುಕುವುದು ನಡದೇ ಇದೆ.''[೨೨]

ಇತ್ತೀಚಿನ ದಿನಗಳಲ್ಲಿ ಪೌರಾಣಿಕ, ಪುರಾಣ, ಮಹಾಭಾರತ, ರಾಮಾಯಣದಲ್ಲಿ ಬರುವಂತಹ ಕೆಲವು ವಿಶಿಷ್ಟ ಹೆಸರುಗಳನ್ನು ಹೆಣ್ಣು ಮಗುವಿಗೆ ಇಡುವುದು ಹೆಚ್ಚಾಗಿದೆ. ಉದಾ: ಮೇನಜಾ, ದೇವಿಜಾ, ಅದಿತಿ, ಕಲಾ, ಗೌತಮಿ, ಸುರಭಿ, ಇತ್ಯಾದಿಯಾಗಿ ಹೆಸರುಗಳನ್ನು ಇಡಲಾಗುತ್ತದೆ.

ಸಾಮಾಜಿಕ ರೀತಿ ನೀತಿಗಳು ಅನೇಕ ಬಗೆಯ ತೀವ್ರತರದ ಬದಲಾವಣೆಗೆ ಒಳಗಾಗುತ್ತಿದ್ದರೂ ನಮ್ಮ ಪಾರಂಪರಿಕ ಉಡುಪಿನ ಶೈಲಿ ಕೇಶವಿನ್ಯಾಸ, ಆಹಾರ ಪದ್ಧತಿಗಳು ಇತರೆ ಸಮಾಜಗಳ ಪ್ರಭಾವದಿಂದ ಅನುಕರಣೆಗೆ ಒಳಗಾಗಿದ್ದರೂ ವ್ಯಕ್ತಿನಾಮಗಳಿಗೆ ಒಂದು ಸ್ಥೂಲವಾದ ಚೌಕಟ್ಟಿನೊಳಗೆ ಮಾತ್ರ ಬದಲಾವಣೆಗಳಿಗೆ ಒಳಗಾಗುತ್ತಿವೆ. ಹಿಂದೂ ಧರ್ಮದ ವ್ಯಕ್ತಿ ಹೆಸರುಗಳು ಬದಲಾವಣೆಯಾದರೂ ಆ ಧರ್ಮದೊಳಗಿನ ಇತರ ಉನ್ನತ ವರ್ಗಗಳ ಹೆಸರುಗಳನ್ನಷ್ಟೆ ಅನುಕರಿಸುತ್ತವೆ ಹೊರತು ಕ್ರಿಶ್ಚಿಯನ್ ಅಥವಾ ಮುಸಲ್ಮಾನ ಹೆಸರುಗಳನ್ನು ಇಟ್ಟುಕೊಳ್ಳುವುದಿಲ್ಲ.

ನಂಜ, ಪುಟ್ಟ, ಮರಿಕೆಂಚ ಎಂಬ ಕೆಳವರ್ಗದ ಹೆಸರುಗಳು ನಂದಕುಮಾರ್, ಪ್ರಮೋದ್, ಮಧುಕರ್ ಎಂಬ ತನ್ನದೇ ಸಮಾಜದ ಮೇಲ್ ಶ್ರೇಣಿಯಲ್ಲಿನ ಹೆಸರುಗಳಾಗಿ ಬದಲಾಗುತ್ತದೆಯೇ ಹೊರತು ಬೇರೆ ರೀತಿಯಾಗಿ ಬದಲಾಗುವುದಿಲ್ಲ. ಮುಖ್ಯವಾಗಿ ವ್ಯಕ್ತಿನಾಮಗಳು ಆಧುನಿಕತೆಗೆ ಜಾತಿ, ವೃತ್ತಿ, ಚರಿತ್ರೆ, ದೈವ, ಭಾಷಿಕ ಸಂದರ್ಭಗಳು, ಧರ್ಮ, ಸಿನಿಮಾ, ರಂಗಭೂಮಿ, ಸಾಹಿತ್ಯ, ಸಂಸ್ಕೃತಿ, ಕ್ರೀಡೆ, ತಂತ್ರಜ್ಞಾನ ನಗರೀಕರಣ ಮುಂತಾದ ಹಲವಾರು ಅಂಶಗಳು ಕಾರಣವಾಗುತ್ತವೆ.

ವೃತ್ತಿ

ಜಾತಿಯಂತೆ ವೃತ್ತಿಯೂ ವ್ಯಕ್ತಿನಾಮಗಳಲ್ಲಿ ಇಂದು ವ್ಯಾಪಕವಾಗಿ ಬಳಕೆಗೊಳ್ಳುತ್ತದೆ. ಕೆಲವರು ವೃತ್ತಿಪರರು ಅಭಿಮಾನದ ಸಂಗತಿಯಾಗಿ ಈ ಬಗೆಯ ವೃತ್ತಿವಾಚಿ ಪದವನ್ನು ಬಳಸುತ್ತಾರೆ.

ನಿರ್ದಿಷ್ಟ + ವಾರ್ಗಿಕ = ವ್ಯಕತ್ತಿನಾಮ

ಹನುಮಂತಪ್ಪ + ತಳವಾರ = ಹನುಮಂತಪ್ಪ ತಳವಾರ

ವಿಶ್ವನಾಥ + ಬಡಿಗೇರ = ವಿಶ್ವನಾಥ ಬಡಿಗೇರ

ಕರಿಯಪ್ಪ + ಅಗಸರ = ಕರಿಯಪ್ಪ ಅಗಸರ

ಜಾತಿ

ಜಾತಿಯು ಕೆಳವರ್ಗವಾಗಿರಲಿ, ಮೇಲ್ ವರ್ಗವಾಗಿರಲಿ ಇಂದು ಅವು ಪ್ರತಿಷ್ಠೆಯ ಇಲ್ಲವೇ ಸ್ವಾಭಿಮಾನದ ಸಂಕೇತಗಳು. ಜನತೆಯು ತಮ್ಮ ಹೆಸರಿನೊಂದಿಗೆ ಬಳಸುತ್ತಿರುವುದು ಆಧುನಿಕ ಜಾತ್ಯಾತೀತ ಸಮಾಜದ ಮುಖ್ಯ ಸಂಗತಿಯಾಗಿರುವುದು ಗಮನಿಸಬಹುದು. ಸಾಮಾಜಿಕ ವರ್ಗಗಳು ಕುಲನಾಮಗಳಂತೆ ಬಳಕೆಯಾಗುತ್ತವೆ.

ಸೋಮಪ್ಪ + ನಾಯಕ

ವೆಂಕಟಪ್ಪ + ನಾಯಕ

ಮಾನಪ್ಪ + ಆಚಾರ

ಲಕ್ಷ್ಮಯ್ಯ + ಶೆಟ್ಟಿ

ದೈವ

ಹಿಂದೂ ಧರ್ಮದಲ್ಲಿ ಸಹಸ್ರಾರು ದೇವರುಗಳಿರುವುದು ಮತ್ತು ಆ ಹೆಸರುಗಳನ್ನೇ ಮಕ್ಕಳಿಗೆ ಇಡುವುದು ನಡೆದುಬಂದಿದೆ. ಇದಕ್ಕೆ ಕಾರಣ ಹಿಂದಿನವರಲ್ಲಿದ್ದ ದೈವಭಕ್ತಿ, ಸದಾ ನಮ್ಮ ನಾಲಿಗೆಯಲ್ಲಿ ದೇವರ ಸ್ಮರಣೆಯಿರಲಿ ಎಂಬುದು ಮಕ್ಕಳಿಗೆ ದೇವರ ಹೆಸರು ಇಡಲು ಇದು ಒಂದು ಕಾರಣ. ಹಲವಾರು ಪ್ರಾಚೀನ ದೈವಗಳು ಮಸ್ಕಿ ಪರಿಸರದಲ್ಲಿ ವ್ಯಕ್ತಿನಾಮಗಳಾಗಿವೆ. ಅಲ್ಲದೇ ಸಂಪ್ರದಾಯ ಮತ್ತು ನಂಬಿಕೆಗಳನ್ನು ಬಿಡದ ಕುಟುಂಬಗಳು ತಮ್ಮ ವಂಶ, ಕುಲದೈವಗಳ ಹೆಸರನ್ನು ಇಡುತ್ತಾರೆ. ಮೂರನೇ ತಲೆಮಾರಿನ ಇಂದಿನ ಜನತೆಗೆ ಸ್ವಲ್ಪ ಈ ಹೆಸರುಗಳ ಮಾರ್ಪಟಿನೊಂದಿಗೆ ನಿರ್ದೇಶಿಸಲಾಗುತ್ತದೆ.

ಅಮರಪ್ಪ - ಅಮರೇಶ್

ಮಲ್ಲಪ್ಪ - ಮಲ್ಲೇಶ್

ಹುಲುಗಪ್ಪ - ಹುಲುಗೇಶ್

ಬಸಪ್ಪ - ಬಸವೇಶ

ವೀರಪ್ಪ - ವೀರೇಶ್

ಸೋಮಪ್ಪ - ಸೋಮೇಶ್

ಭಾವನಾಮ

ವ್ಯಕ್ತಿನಾಮ ನಿರ್ದೇಶನದಲ್ಲಿ ಇಂದು ಭಾವನಾಮಗಳು ಹೆಚ್ಚು ಸ್ಥಾನವನ್ನು ಪಡೆದುಕೊಂಡಿವೆ. ಈ ಹಿಂದೆ ಇದ್ದಂತಹ ನಾಮ ನಿರ್ದೇಶನ ಆಕರ ಇಂದಿನ ಆಧುನಿಕ ಹೆಸರುಗಳಲ್ಲಿ ಕಂಡುಬರುವುದು ಕಡಿಮೆ. ಇಂದು ವಾರ್ಗಿಕಗಳು ಮರೆಯಾಗುತ್ತಿವೆ ಹಾಗೂ ವಿಶೇಷಣಗಳು ಕಂಡುಬರುವುದಿಲ್ಲ. ಅಪ್ಪ, ಅಮ್ಮ, ಅಣ್ಣ, ಅವ್ವ, ಅಕ್ಕ, ತಮ್ಮಗಳಂತಹ ಹೆಸರಿನ ಉತ್ತರ ಪದಗಳು ಗ್ರಾಮೀಣ ಪರಿಸರದಲ್ಲಿ ಮಾತ್ರ ಸ್ವಲ್ಪ ಕಾಣಸಿಗುತ್ತವೆ. ಮಸ್ಕಿ ಪರಿಸರದಲ್ಲಿ ಕಂಡುಬರುವ ಕೆಲವು ಭಾವನಾಮಗಳು ಇಂತಿವೆ.

ಶೃತಿ	ವಿನಯ್
ಸಂಜನಾ	ಪುನೀತ್
ಭಾವನಾ	ತರುಣ್
ಸುಧಾ	ಅರುಣ್
ಸಂಗೀತಾ	ಪ್ರವೀಣ್
ಅನುಷಾ	ಪ್ರದೀಪ್
ಶೈಲಜಾ	ರೂಪ

ಸಾಮಾಜಿಕ ಆಯಾಮಗಳು

ಮಾಧ್ಯಮಗಳ ಪ್ರಭಾವವು ಇಂದು ಇತರೆ ಅನೇಕ ಸಂಗತಿಗಳ ಮೇಲೆ ವ್ಯಾಪಕವಾದ ಪರಿಣಾಮ ಬೀರಿರುವಂತೆ, ವ್ಯಕ್ತಿಗಳ ಹೆಸರಿಡುವಿಕೆಯಲ್ಲಿಯೂ ಪ್ರೇರಣೆಯನ್ನು ಮಾಡಿದೆ. ದೂರದರ್ಶನ, ರೇಡಿಯೋ, ಪತ್ರಿಕೆ ಮುಂತಾದವುಗಳಲ್ಲಿ ಹೆಸರುಗಳು ಸಹಜವಾಗಿಯೇ ಎಂಬಂತೆ ಜನರಲ್ಲಿ ನಿರ್ದೇಶನಗೊಳ್ಳುತ್ತಿರುವುದು ಕಂಡುಬರುತ್ತದೆ.

ಸಿನಿಮಾ ಪ್ರಭಾವಿತ ಹೆಸರುಗಳು

ದರ್ಶನ್

ಅಜಯ್

ವಿಜಯ್

ಹೃತಿಕ್

ಅಭಿಷೇಕ್

ಪುನೀತ್

ಐಶ್ವರ್ಯ

ಪ್ರಿಯಾಂಕ

ಭಾವನಾ

ಪೂಜಾ

ಕ್ರೀಡೆಗೆ ಸಂಬಧಿಸಿದ ಹೆಸರುಗಳು

ಕ್ರೀಡೆಗೆ ಸಂಬಂಧಿಸಿದ ಹೆಸರುಗಳನ್ನು ಸಾಕಷ್ಟು ಜನರಲ್ಲಿ ಕಾಣಬಹುದಾಗಿದೆ.

ಸಚಿನ್

ಆನಂದ್

ಶ್ರೀನಾಥ್

ರಾಹುಲ್

ಮತ ಸೂಚಕಗಳು

ಬಸವಮತ ಪ್ರಭಾವ : ೧೨ನೇ ಶತಮಾನದಲ್ಲಿ ಬಾಳಿದ್ದ ಬಸವಣ್ಣನವರು ''ಬಸವ ಮತ ಕರ್ನಾಟಕದಲ್ಲಿ ಸ್ಥಾಪನೆಯಾಯಿತು'' ಆ ಸಮಯದಲ್ಲಿ ವಿಶ್ವಗುರು ಬಸವಣ್ಣನವರ ಪ್ರಭಾವ ಈ ಪ್ರಾಂತದ ಮೇಲೆ ಇದ್ದು ಅದರ ಪರಿಣಾಮದಿಂದಾಗಿ ಇಲ್ಲಿ ಮಕ್ಕಳಿಗೆ ಈಗಲೂ ನಾಮಕರಣ ಮಾಡುತ್ತಾರೆ. ಬಸಣ್ಣ, ಬಸಪ್ಪ, ಬಸವರಾಜ, ಬಸವೇಶ, ಬಸವೇಶ್ವರ ಇತ್ಯಾದಿಯಾಗಿ 'ಬಸವ ಮತ' ಪ್ರಭಾವದೊಂದಿಗೆ ಇರುವ ಹೆಸರು ಕಂಡುಬರುತ್ತವೆ.

ಶೈವಮತ ಪ್ರಭಾವ

ಶೈವಮತ ಪ್ರಭಾವದಿಂದ ಶಿವನಿಗೆ ಸಂಬಂಧಿಸಿದ ಈ ಕೆಳಗಿನ ಹೆಸರುಗಳು ಇಲ್ಲಿ ಹೆಚ್ಚಾಗಿಯೇ ಇರುವುದನ್ನು ನೋಡಬಹುದು. ಮಸ್ಕಿ ಪ್ರದೇಶದಲ್ಲಿ ಇಂತಹ ವ್ಯಕ್ತಿನಾಮಗಳು ಸಾಕಷ್ಟು ಸಿಗುತ್ತವೆ. ಮಲ್ಲಪ್ಪ, ಮಲ್ಲೇಶ, ಈಶ್ವರ, ಮಲ್ಲಿಕಾರ್ಜುನ, ವಿರುಪಾಕ್ಷ, ನಂಜುಂಡ, ವಿಶ್ವನಾಥ, ಪರಮೇಶ್ವರ, ಶಂಕರ ಇತ್ಯಾದಿ ಹೆಸರುಗಳನ್ನು ನೋಡಬಹುದು.

ದೇವತೆ ಸೂಚಕಗಳು

ಪ್ರಾದೇಶಿಕ ದೇವತೆಗಳ ಹೆಸರು ಇರುವ ವ್ಯಕ್ತಿ ನಾಮಗಳನ್ನು ಗುರುತಿಸಬಹುದು. ಹುಲಿಗೆಮ್ಮ, ಗಾಳೆಮ್ಮ, ಕಾಳಮ್ಮ, ಮಾರೆಮ್ಮ, ಸುಂಕಲಮ್ಮ ಮುಂತಾದ ದೇವತೆಗಳ ವ್ಯಕ್ತಿನಾಮಗಳು ಇಲ್ಲಿ ಬಳಕೆಯಲ್ಲಿವೆ.

ಅಡ್ಡ ಹೆಸರು

ವ್ಯಕ್ತಿನಾಮ ಅಧ್ಯಯನ ತುಂಬ ಸ್ವಾರಸ್ಯವಾದ ಭಾಗವಿದು. ವ್ಯಕ್ತಿಗೆ ಸಂಬಂಧಿಸಿದ ಯಾವುದೋ ವೈಶಿಷ್ಟ್ಯವನ್ನು ಅನುಲಕ್ಷಿಸಿ ತಮಾಷೆ ಇಲ್ಲದೆ ಕುಚೋದ್ಯಕ್ಕೆ ಇಡುವ ಹೆಸರು, ಇಲ್ಲಿ ವ್ಯಕ್ತಿಯ ಗುಣ ರೂಪ

ಕ್ರಿಯೆಗಳು ಮಹತ್ವದ ಪಾತ್ರವಹಿಸುತ್ತವೆ. ''ವ್ಯಕ್ತಿಯ ಆಕಾರದ ಯಾವುದೋ ದೋಷ ಅಥವಾ ವೈಶಿಷ್ಟ (ಎತ್ತರ, ಬಣ್ಣ, ನೋಟ, ನಡಗೆ, ಇತ್ಯಾದಿ) ಮಾತಿನ ರೀತಿ (ಬಗ್ಗುವುದು, ಹಾಸ್ಯಮಾಡುವುದು, ಬಹಳ ಮಾತನಾಡುವುದು ಮಾತುಬಾರದಿರುವುದು ಇತ್ಯಾದಿ) ನಡತೆ (ಕಳ್ಳತನ, ಸುಳ್ಳು ಹೇಳುವುದು, ಕುಡಿತ, ಜೂಜು, ಜಂಬ, ಚಾಡಿ ಹೇಳುವುದು ಇತ್ಯಾದಿ) ಇವೇ ಮೊದಲಾದವು ಜನಕ್ಕೆ ಎದ್ದು ಕಾಣುವ ಗುಣಗಳು ಅವುಗಳನ್ನೇ ದೊಡ್ಡದು ಮಾಡಿ, ಅಡ್ಡ ಹೆಸರು ಇಡುತ್ತಾರೆ. ಒಮ್ಮೆ ಯಾರೋ ಆಕಸ್ಮಿಕವಾಗಿ ಬಳಸಿದ ಒಂದು ವಿಶೇಷಣ ಜನರಲ್ಲಿ ಬಳಕೆಗೆ ಬಂದು ಆ ವ್ಯಕ್ತಿಯ ಹೆಸರಿನ ಅನಧಿಕೃತ ಭಾಗವಾಗಿ ಮಾತ್ರವಲ್ಲದೆ ಅದು ಒಂದು ಅನಧಿಕೃತ ಹೆಸರಾಗಿಯೇ ಪರಿಣಮಿಸಬಹುದು''[೬]

ಅಡ್ಡಹೆಸರು ಬಗೆಗಿನ ಪರಿಕಲ್ಪನೆ ಉತ್ತರ ಮತ್ತು ದಕ್ಷಿಣ ಕರ್ನಾಟಕದಲ್ಲಿ ಬೇರೆ ಬೇರೆಯಾಗಿದೆ. ಉತ್ತರ ಕರ್ನಾಟಕದಲ್ಲಿ ಅಡ್ಡಹೆಸರು ಎಂಬುದನ್ನು ಇಂಗ್ಲೀಷ್‌ನ 'Surname' ಎಂಬ ಅರ್ಥದಲ್ಲಿಯೂ ದಕ್ಷಿಣ ಕರ್ನಾಟಕದಲ್ಲಿ ಅಡ್ಡಹೆಸರು ಎಂಬುದನ್ನು 'Nick Name' ಎಂಬ ಅರ್ಥದಲ್ಲಿಯೂ ಸಂವಾದಿಯಾಗಿ ಬಳಸಲಾಗುತ್ತದೆ. 'Surname' ಮತ್ತು 'Nickname' ಎಂಬ ಪದಗಳು ಒಂದಕ್ಕೊಂದು ಪರ್ಯಾಯ ಸೂಚಕಗಳಾಗಿ ಬಳಸಲ್ಪಡುತ್ತವೆ. ಇಲ್ಲಿ ಅಡ್ಡಹೆಸರುಗಳು ವ್ಯಕ್ತಿಯ ಯಾವುದಾದರೊಂದು ವೈಶಿಷ್ಟವನ್ನು ಅನುಲಕ್ಷಿಸಿ ಹುಟ್ಟಿಕೊಳ್ಳುತ್ತವೆ. ವ್ಯಕ್ತಿ ಎದುರಿಗೆ ಇರುವಾಗ ಅಡ್ಡಹೆಸರಿನಿಂದ ಕರೆದರೆ ಸುಮ್ಮನಿರುವುದಿಲ್ಲ ಪ್ರತಿಭಟಿಸಬಹುದು. ಆ ಕಾರಣಕ್ಕಾಗಿ ಅಡ್ಡಹೆಸರು ವ್ಯಕ್ತಿಯ ಗೈರು ಹಾಜರಿಯಲ್ಲಿ ಬಳಸಲ್ಪಡುತ್ತದೆ. ಉದಾಹರಣೆಗೆ ಕುಂಟ ಎಂದು ಯಾರಾದರೂ ಕರೆದರೆ ಆತ ಪ್ರತಿಭಟಿಸಬಹುದು ಆದರೆ ಅವನ ಗೈರು ಹಾಜರಿಯಲ್ಲಿ ಅವನು ಕುಂಟನೇ ಆಗುತ್ತಾನೆ. ಆದರೂ ಅಡ್ಡಹೆಸರಿನ ಸಂಭೋದನೆಗೆ ತುಂಬಾ ಮಿತಿಗಳಿವೆ. ಈ ಲಕ್ಷಣಗಳನ್ನು ಮಸ್ಕಿ ಪರಿಸರದಲ್ಲಿ ಕಾಣಬರುತ್ತಿರುವಂತೆಯೂ ಕರ್ನಾಟಕದ ಇತರ ಪರಿಸರದಲ್ಲಿ ನೋಡಬಹುದು.

ಮಸ್ಕಿ ಪರಿಸರದ ಅಡ್ಡಹೆಸರುಗಳ ಅಧ್ಯಯನದ ಅನುಕೂಲಕ್ಕಾಗಿ ಅಡ್ಡಹೆಸರುಗಳನ್ನು ಈ ರೀತಿ ವರ್ಗೀಕರಿಸಲಾಗಿದೆ.

೧. ಶರೀರವಾಚಿ ಅಡ್ಡಹೆಸರು
೨. ಪ್ರಾಣಿವಾಚಿ ಅಡ್ಡಹೆಸರು
೩. ವಸ್ತುವಾಚಿ ಅಡ್ಡಹೆಸರು
೪. ಗುಣವಾಚಿ ಅಡ್ಡಹೆಸರು
೫. ವ್ಯಕ್ತಿವಾಚಿ ಅಡ್ಡಹೆಸರು
೬. ಇತರ ಅಡ್ಡಹೆಸರು

ಶರೀರವಾಚಿ ಅಡ್ಡಹೆಸರು

ವ್ಯಕ್ತಿಯ ಶಾರೀರಿಕ ಲಕ್ಷಣಗಳನ್ನು ನೇರವಾಗಿ ಸೂಚಿಸುವ ಹೆಸರುಗಳು ಶರೀರವಾಚಿ ಅಡ್ಡಹೆಸರುಗಳು.

ಅಡ್ಡಹೆಸರು ವಿವರಣೆ	ವಿವರಣೆ
ಚೊಂಚ/ಚಿ	ಕೈ ಊನವಾಗಿರುವವನು/ಳು
ಬಾಂಡ್ಲಿ	ತಲೆಯಲ್ಲಿ ಕೂದಲು ಇಲ್ಲದೇ ಇರುವವನು
ಅಲ್ಲಗ/ಗಿ	ಉಬ್ಬುಹಲ್ಲು ಹೊಂದಿವವನು/ಳು
ಬಚ್ಚಬಾಯಿ	ಬಾಯಲ್ಲಿ ಹಲ್ಲು ಇಲ್ಲದಿರುವವನು/ಳು
ಗೂನ	ಬೆನ್ನು ಉಬ್ಬಿರುವವನು/ಳು
ಎಳವ/ವಿ	ತೆಳ್ಳನೆ ಕಾಲು ಇರುವವನು/ಳು
ರೊಡ್ಡ/ಡ್ಡಿ	ಎಡಗೈ ಮುಂದು ಬಳಸುವವನು/ಳು
ಸ್ವಾರಬಾಯಿ	ಬಾಯಿ ಅಗಲವಾಗಿರುವವನು/ಳು
ವಪ್ಪರಿ	ಒಂದೇ ಮಗ್ಗುಲಿನಿಂದ ನೋಡುವವನು/ಳು
ಕಡ್ಡಿಪೈಲ್ವಾನ	ತೆಳ್ಳಗೆ ಇರುವವನು/ಳು
ಕಣ್‌ಬಡಕ	ಸದಾ ಕಣ್ಣರೆಪ್ಪೆ ಬಡಿಯುವವನು/ಳು
ಜಂಪ/ಲಂಬೂ	ಎತ್ತರವಾಗಿರುವವನು/ಳು
ಗಿಡ್ಡ/ಡ್ಡಿ	ಕುಳ್ಳಗೆ ಇರುವವನು/ಳು
ನಿದ್ದಿಬಡಕ/ಕಿ	ಸದಾ ನಿದ್ದಿಯಲ್ಲಿರುವವನು/ಳು
ಉಗ್ಗ	ಗುಕ್ಕು, ಉಗ್ಗು, ತೊದಲು ಮಾತನಾಡುವವನು
ಕುಂಟ/ಟಿ	ಕಾಲು ಊನವಾಗಿರುವವನು/ಳು
ಕಿವುಡ/ಡಿ	ಕಿವಿ ಮಂದವಾಗಿರುವವನು/ಳು
ಮೂಕ/ಕಿ	ಕಡಿಮೆ ಮಾತನಾಡುವವನು/ಳು
ಕುಲ್ಡ/ಲ್ಡಿ	ಕಣ್ಣಿನ ದೋಷ ಉಳ್ಳವನು/ಳು
ಸೊಟ್ಟ/ಟ್ಟಿ	ಡೊಂಕು ನಡೆಯುವವನು/ಳು
ಸ್ವಾಟ್ಯರುಕ/ಕಿ	ತುಟಿಹರಿದಿರುವವನು/ಳು
ಕರಿಯ	ಕಪ್ಪಾಗಿರುವವನು/ಳು
ಕೆಂಪ/ಪಿ	ಕೆಂಪಾಗಿರುವವನು/ಳು
ಹುಂಬ/ಬಿ	ಆಲೋಚನೆ ಇಲ್ಲದೆ ಮಾತನಾಡುವವನು/ಳು

ಪ್ರಾಣಿವಾಚಿ ಅಡ್ಡಹೆಸರುಗಳು

ವ್ಯಕ್ತಿಯ ವಿಶೇಷ ಗುಣಗಳನ್ನು ಅಥವಾ ದೋಷಗಳನ್ನು ಪ್ರಾಣಿಗಳ ಸಹಜ ಲಕ್ಷಣಗಳೊಂದಿಗೆ ಆರೋಪಮಾಡಿ ಇಟ್ಟ ಅನ್ವರ್ಥಕ ನಾಮಗಳೇ ಪ್ರಾಣಿವಾಚಿ ಅಡ್ಡಹೆಸರುಗಳು.

ಅಡ್ಡ ಹೆಸರು	ವಿವರಣೆ
ಗುಬ್ಬಿ	ಸಣ್ಣಧ್ವನಿಯಲ್ಲಿ ಮಾತನಾಡುವವನು/ಳು
ಒಂಟೆ	ಉದ್ದವಾಗಿರುವವನು/ಳು
ಕಲ್ಡಿ	ಮೈ ತುಂಬ ಕೂದಲನ್ನು ಹೊಂದಿರುವವನು
ಜಿರಾಫೆ	ಎತ್ತರವಾಗಿದ್ದು ಕತ್ತುಕೂಡ ಉದ್ದವಾಗಿರುವವನು/ಳು
ನರಿ	ಕುತಂತ್ರ ಬುದ್ಧಿ ಉಳ್ಳವನು/ಳು
ಕೋಳಿ	ಸದಾ ಮಾತಾಡುವವನು/ಳು
ಆನೆಮರಿ	ದಪ್ಪವಾಗಿರುವವನು/ಳು
ನಾಟಿಕೋಳಿ	ತೆಳ್ಳಗಿದ್ದು ಹೆಚ್ಚು ಕೆಲಸಮಾಡುವವನು/ಳು
ಗೂಬೆ	ದೊಡ್ಡ ಕಣ್ಣುಗಳುಳ್ಳವನು/ಳು
ಕೋಣ	ಮಂದಬುದ್ಧಿ ಇರುವವನು/ಳು
ಮುಂಗಲಿ	ಗುಮ್ಮನಂತೆ ಮುಖ ಲಕ್ಷಣ ಇರುವವನು/ಳು
ಕಪ್ಪೆ	ಸದಾ ವಟ ವಟ ಎಂದು ಮಾತನಾಡುವವನು/ಳು

ಮೇಲೆ ಸೂಚಿಸಿರುವ ಪ್ರಾಣಿವಾಚಿ ಅಡ್ಡಹೆಸರುಗಳು ಯಾವುದೇ ಒಂದು ನಿರ್ದಿಷ್ಟ ಕಾರಣದಿಂದ ಇರದೆ ಬೇರೆ ಬೇರೆ ಕಾರಣಗಳಿಂದಲೂ ಬರುವ ಸಾಧ್ಯತೆಗಳಿರುತ್ತವೆ. ಮಸ್ಕಿ ಪರಿಸರದಲ್ಲಿ ಈ ರೀತಿಯ ಪ್ರಾಣಿವಾಚಿ ಅಡ್ಡಹೆಸರು ಸಿಗುತ್ತವೆ.

ವಸ್ತುವಾಚಿ ಅಡ್ಡಹೆಸರುಗಳು

ವ್ಯಕ್ತಿಯ ಶಾರೀರಿಕ ಅಥವಾ ಗುಣ ವೈಶಿಷ್ಟ್ಯಗಳನ್ನು ವಸ್ತುಗಳ ಲಕ್ಷಣಗಳೊಂದಿಗೆ ಆರೋಪಮಾಡಿ ಇಟ್ಟ ಹೆಸರುಗಳು ವಸ್ತುವಾಚಿ ಅಡ್ಡಹೆಸರುಗಳು

ಅಡ್ಡಹೆಸರು	ವಿವರಣೆ
ಪಾಕೆಟ್	ಸಾರಾಯಿ ಕುಡಿಯುವವನು/ಳು
ದೊಣ್ಣೆಮೆಣಸಿನಕಾಯಿ	ದಪ್ಪಮೂಗು ಇರುವವನು/ಳು
ಸೊಡಾಗ್ಲಾಸ್	ಕಣ್ಣಿಗೆ ದಪ್ಪನೆ ಸೊಡಾಗ್ಲಾಸ್ ಹಾಕಿರುವವನು/ಳು
ಬಡಕ/ಕಿ	ತೆಳ್ಳಗೆ ಇರುವವನು/ಳು

ಕಡ್ಡಿಪುಡಿ	ಸದಾ ತಾಂಬುಲ ಬಾಯಲ್ಲಿ ಹಾಕಿರುವವನು/ಳು
ತೊಂಡೆಹಣ್ಣು/ಟೊಮೊಟೊ	ಕೆಂಪಾಗಿರುವವನು/ಳು
ಕೊಲ್ಡ	ದಪ್ಪಗೆ ಇರುವವನು/ಳು
ಅನಾಸಿನ್	ಹೆಚ್ಚು ಮಾತನಾಡಿ ತಲೆ ನೋಯಿಸುವವನು/ಳು

ಗುಣವಾಚಿ ಅಡ್ಡಹೆಸರುಗಳು

ವ್ಯಕ್ತಿಯ ಗುಣ ಸ್ವಭಾವಗಳ ಪ್ರೇರಣೆಯಿಂದ ಇಟ್ಟ ಹೆಸರುಗಳನ್ನು ಗುಣವಾಚಿ ಅಡ್ಡಹೆಸರು ಎಂದು ಕರೆಯಬಹುದಾಗಿದೆ. ಮಸ್ಕಿ ಪರಿಸರದಲ್ಲಿ ಇಂತಹ ಹೆಸರುಗಳನ್ನು ಗಮನಿಸಬಹುದು.

ಅಡ್ಡಹೆಸರು	ವಿವರಣೆ
ಮೊಂಡ/ಡಿ	ಹಠಮಾಡುವವನು/ಳು
ಬುಲ್ಡಿ	ಸದಾಸುಳ್ಳು ಹೇಳುವವನು/ಳು
ಕೆಡುಕ/ಕಿ	ಕೆಡುಕಬುದ್ಧಿ ಇರುವವನು/ಳು
ಹಟಿ	ಎದುರು ಮಾತನಾಡುವವನು/ಳು
ಪ್ಯಾಲಿ	ಅಲ್ಲದ ವಿಷಯವನ್ನು ಮಾತನಾಡುವವನು/ಳು
ಗುಮ್ಮ	ಯಾವಾಗಲೂ ಗಂಟುಮುಖ ಹಾಕಿಕೊಂಡು ಮಾತಾಡದೆ ಇರುವವನು/ಳು
ಸ್ಟಂಟ್	ಅಹಂಕಾರದಿಂದ ಇರುವವನು/ಳು
ಚಾಡಿ	ಒಬ್ಬರ ವಿಷಯ ಮತ್ತೊಬ್ಬರಿಗೆ ಹೇಳುವವನು/ಳು

ವ್ಯಕ್ತಿವಾಚಿ ಅಡ್ಡಹೆಸರು

ಇತಿಹಾಸದಲ್ಲಿ ಆಗಿಹೋದ ವ್ಯಕ್ತಿಗಳ ಹೆಸರು 'ಅಡ್ಡ ಹೆಸರಿನ' ನಿರ್ದೇಶನಕ್ಕೆ ಪ್ರೇರಣೆಯಾಗುತ್ತವೆ. ಅಂದಿನ ಆ ವ್ಯಕ್ತಿಗಳ ಗುಣ ಸ್ವಭಾವ ಇತರ ವ್ಯಕ್ತಿಗಳಲ್ಲಿ ಕಾಣಿಸಿಕೊಂಡರೆ ಆ ಜನ ಆ ವ್ಯಕ್ತಿಗಳ ಹೆಸರನ್ನು ಅಡ್ಡಹೆಸರಾಗಿ ಇಡುವರು.

ಅಡ್ಡಹೆಸರು	ವಿವರಣೆ
ಭೀಮ	ಹೆಚ್ಚು ಶಕ್ತಿ ಉಳ್ಳವನು
ಸತ್ಯಹರಿಶ್ಚಂದ್ರ	ಯಾವಾಗಲೂ ಸತ್ಯ ಹೇಳುವವನು
ನಾರದ	ಒಬ್ಬರ ವಿಷಯ ಮತ್ತೊಬ್ಬರಿಗೆ ಹೇಳುವವನು
ಕುಂಬಕರ್ಣ	ಹೆಚ್ಚು ಊಟ ಹಾಗೂ ನಿದ್ದೆ ಮಾಡುವವನು
ಕರ್ಣ	ಹೆಚ್ಚು ದಾನಮಾಡುವವನು

ಇತರ ಅಡ್ಡಹೆಸರುಗಳು

ಪೆಟ್ಟಿಗೆ, ಹುಚ್‌ಪ್ಯಾಲಿ, ಹಟಿ, ಯಟ್ಟಿಮನುಷ್ಯ, ಲಾಯರ್ ಮುಂತಾದ ಅಡ್ಡಹೆಸರುಗಳು ಮಸ್ಕಿ ಪರಿಸರದಲ್ಲಿ ಬಳಕೆ ಇರುವವು. ಮೌನೇಶ ಎನ್ನುವ ವ್ಯಕ್ತಿ ಗಿಡ್ಡಕ್ಕೆ ಇರುವುದರಿಂದ ಅವರನ್ನ ಗಿಡ್ಡಮೌನಿ ಎಂದೇ ಸಂಭೋದಿಸಲಾಗುತ್ತದೆ. ಅಸಂಬದ್ಧ ಮಾತುಗಳನ್ನು ಆಡುವವರನ್ನ ಇಲ್ಲಿ ಮೂರಕಿವಿ ಎಂದು ಅಡ್ಡಹೆಸರಿನಿಂದ ಭಾಷ ಎಂಬುವವರನ್ನು ಕರೆಯುತ್ತಾರೆ. ಅಡ್ಡ ಹೆಸರುಗಳು ಇನ್ನೊಂದು ಅವು ಕುಚೋದ್ಯಕ್ಕಾಗಿ ಮಾತ್ರ ಬರುವುದಿಲ್ಲ ವ್ಯಕ್ತಿಯನ್ನು ಇನ್ನೂ ಖಚಿತವಾಗಿ ಗುರುತಿಸುವ ಉದ್ದೇಶ ಬರುತ್ತದೆ. ಊರಿನಲ್ಲಿ ಒಂದೇ ಹೆಸರಿನ ಹಲವರಿದ್ದಾರೆ ಅವರನ್ನು ಸರಿಯಾಗಿ ಗುರುತಿಸಲು ಅವು ನೆರವಾಗುತ್ತವೆ.

ಅಡ್ಡಹೆಸರಿನ ಬಳಕೆ

ಮೇಲ್ಜಾತಿಯವರು-ಮೇಲ್ವರ್ಗದವರು, ಕೆಳಜಾತಿ ಕೆಳವರ್ಗದವರನ್ನು ಬಹಿರಂಗವಾಗಿ ಅಡ್ಡಹೆಸರಿನಿಂದ ಕರೆಯಬಹುದಾದರೂ ಕೆಳಜಾತಿ ಕೆಳವರ್ಗದವರು, ಮೇಲ್ಜಾತಿ, ಮೇಲ್ವರ್ಗದವರನ್ನು ಆ ರೀತಿ ಉಲ್ಲೇಖಿಸಬಹುದು, ವ್ಯಕ್ತಿಯ ಗೈರು ಹಾಜರಿಯಲ್ಲಿ ಅಡ್ಡಹೆಸರು ಅಧಿಕೃತ ನಾಮದಂತೆ ವ್ಯಕ್ತಿಯನ್ನು ಸಮೂಹದಿಂದ ಪ್ರತ್ಯೇಕ ಮಾಡಿ ಗುರುತಿಸುವ ಉದ್ದೇಶವನ್ನು ಹೊಂದಿದೆಯಾದರೂ ಅಡ್ಡ ಹೆಸರಿನ ಬಗೆಗೆ ಜನರ ಅಥವಾ ವ್ಯಕ್ತಿಯ ಮನೋಭಾವನೆ ಋಣಾತ್ಮಕವಾಗಿರುವುದರಿಂದ ಅದರ ಬಳಕೆಗೆ ತುಂಬಾ ಮಿತಿಗಳು ಇವೆ. ಅಡ್ಡಹೆಸರಿನ ಬಳಕೆಗೆ ಜಾತಿ, ವರ್ಗ, ವಯಸ್ಸು, ಲಿಂಗ, ಶಿಕ್ಷಣ, ಸಾಮಾಜಿಕ ಸ್ಥಾನಮಾನ, ನಡೆ-ನುಡಿ ಇವೆ ಮೊದಲಾದ ಜೀವನ ಅಂಶಗಳು ಪ್ರೇರಕವಾಗುತ್ತವೆ. ನಗರ ಪರಿಸರಕ್ಕಿಂತ ಗ್ರಾಮೀಣ ಪರಿಸರದಲ್ಲಿ ಅಡ್ಡಹೆಸರಿನ ಬಳಕೆ ಹೆಚ್ಚಾಗಿರುತ್ತದೆ. ಎಷ್ಟೋ ಜನರ ಅಧಿಕೃತ ನಾಮಗಳು ಮರೆಯಾಗಿ ಅಡ್ಡಹೆಸರುಗಳೇ ನಿಜ ನಾಮಗಳಾಗಿ ಪ್ರಖ್ಯಾತ ಪಡೆದಿರುತ್ತವೆ. ಇದು ಗ್ರಾಮೀಣ ಜನರ ನಡುವಿನ ಸಲಿಗೆ ಮತ್ತು ಪ್ರೀತಿಯ ದ್ಯೋತಕವಾಗಿರುತ್ತದೆ. ಪುರುಷಗಿಂತ ಸ್ತ್ರೀಯರಲ್ಲಿ ಅಡ್ಡಹೆಸರಿನ ಬಳಕೆ ಕಡಿಮೆ ಎಂದು ತೋರುತ್ತದೆ. ಮಧ್ಯಮ ವಯಸ್ಕರಲ್ಲಿ ಸಾಧಾರಣವಾಗಿರುತ್ತದೆ. ವೃದ್ಧರಲ್ಲಿ ಅಡ್ಡಹೆಸರಿನ ಬಳಕೆ ಇಲ್ಲವೇ ಎಂತಲೂ ಹೇಳಬಹುದು. ಪುರುಷ ಮತ್ತು ಪುರುಷರ ಮಧ್ಯೆ ಸ್ತ್ರೀ ಸ್ತ್ರೀಯರ ಮಧ್ಯೆ ಅಡ್ಡಹೆಸರಿನ ಬಳಕೆ ಅಧಿಕವಾಗಿರುತ್ತದೆ. ಗೈರು ಹಾಗೂ ಹಾಜರಿಯಲ್ಲಿ ಸಮಾನ ಬಳಕೆಯಾಗುತ್ತದೆ. ಸ್ನೇಹಿತರ ಆತ್ಮೀಯತೆ ಹೆಚ್ಚು ಇದ್ದಾಗ ಅಡ್ಡಹೆಸರು 'ಮುದ್ದು' ಹೆಸರಾಗಿ ಬಳಕೆಯಾಗುತ್ತದೆ.

ಅಡಿಟಿಪ್ಪಣಿ

೧. ಡಾ.ಚನ್ನಬಸವ ಹಿರೇಮಠ, ಸತ್ಯದಹಾದಿ, ಬಂಡಾರ ಪ್ರಕಾಶನ, ಮಸ್ಕಿ ೨೦೦೮, ಪು. ೧೩೪
೨. ಅದೇ, ಪುಟ
೩. ಅದೇ, ಪುಟ
೪. ಅದೇ, ಪುಟ
೫. ಅದೇ, ಪುಟ
೬. ಡಾ ಅಮರೇಶ ಯತಗಲ್, ಇತಿಹಾಸ ಇಂಚರ ಪುಟ ೯ ಅದಿತಿ ಪ್ರಕಾಶನ,
೭. ಪುಟ ೧೭
೮. ಅದೇ, ಪುಟ ೧೭
೯. ಡಾ. ಎಂ. ನಂಜಯ್ಯ ಹೊಂಗಸೂರು, ಸ್ಥಳನಾಮಗಳು, ಪು. ೫
೧೦. ಡಾ.ಎಂ.ನಂಜಯ್ಯ ಹೊಂಗಸೂರು ಸ್ಥಳನಾಮ, ಪುಟ. ೧೬
೧೧. ಡಾ. ಅಮರೇಶ ಯತಗಲ್, ಇತಿಹಾಸ ಇಂಚರ, ಪುಟ ೨೬
೧೨. ಪು. ೨೭
೧೩. ಪುಟ. ೬೦
೧೪. ಪುಟ. ೭೮
೧೫. ಪುಟ. ೦೧
೧೬. ಪುಟ. ೭೨
೧೭. ಪುಟ. ೭೩
೧೮. ಜಾಜಿ ದೇವೇಂದ್ರಪ್ಪ, ಆಂಧ್ರ ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು, ಪುಟ. ೧೦೩
೧೯. ಸಣ್ಣಪಾಪಯ್ಯ, ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು, ಪುಟ. ೧೮
೨೦. ಕೆ.ವಿ.ನಾರಾಯಣ, ವ್ಯಕ್ತಿನಾಮಗಳು, ಪುಟ. ೪೪
೨೧. ಡಾ.ಎಂ.ಚಿದಾನಂದಮೂರ್ತಿ, ವಾಗಾರ್ಥ, ಪುಟ. ೭೭
೨೨. ಡಾ.ಎಂ.ಚಿದಾನಂದಮೂರ್ತಿ, ವಾರ್ಗರ್ಥ, ಪುಟ. ೬೩

ಅಧ್ಯಾಯ ೭

ಮಸ್ಕಿಕನ್ನಡದ ವಿಶಿಷ್ಟ ಪದಗಳು ಮತ್ತು ಪದಗಳ ಪ್ರಯೋಗಾರ್ಥ

ಅಧ್ಯಾಯ ೭

ಮಸ್ಕಿಕನ್ನಡದ ವಿಶಿಷ್ಟ ಪದಗಳು ಮತ್ತು ಪದಗಳ ಪ್ರಯೋಗಾರ್ಥ

ಪ್ರವೇಶ

ಒಂದು ಭಾಷೆ ಸಮಾಜದಲ್ಲಿ ಒಂದೇ ರೀತಿಯಲ್ಲಿ ಇರಲಾರದು. ಅದು ಸದಾಕಾಲ ವ್ಯಕ್ತಿಯಿಂದ ವ್ಯಕ್ತಿಗೆ, ಸಮಾಜದಿಂದ ಸಮಾಜಕ್ಕೆ, ವ್ಯಕ್ತಿಯ ವಯಸ್ಸು ಮುಂತಾಗಿ ಬದಲಾಗುವ ಹಾಗೇ ಭಾಷೆ ಬೆಳೆಯುತ್ತಾ ಹೋಗುತ್ತದೆ. ಭಾಷೆ ಒಂದು ಪ್ರದೇಶದಲ್ಲಿ ಮೇಲುನೋಟಕ್ಕೆ ಒಂದೇ ಬಗೆಯಾಗಿ ಕಾಣಿಸಿಕೊಂಡರೂ ಸಹ ಅದು ಸೂಕ್ಷ್ಮವಾದ ಭಿನ್ನತೆಯನ್ನು ಒಳಗೊಂಡಿರುತ್ತದೆ. ಸದಾ ಬೆಳವಣಿಗೆಯ ಲಕ್ಷಣವನ್ನು ಹೊಂದಿರುವ ಯಾವುದೇ ಭಾಷೆ ಯಾವಾಗಲೂ ಒಂದೇ ರೀತಿಯಲ್ಲಿ ಇರಲು ಸಾಧ್ಯವಿಲ್ಲ. ಒಂದು ಭಾಷೆಯ ಬೆಳವಣಿಗೆಯ ಇತಿಹಾಸ ಆ ಭಾಷೆ ಬಳಕೆಯಲ್ಲಿರುವ ಪ್ರದೇಶ, ಆ ಪ್ರದೇಶದ ರಾಜಕೀಯ, ಆ ಭಾಷೆ ಆಡುವ ಜನರ ಸಾಮಾಜಿಕ ಪರಿಸ್ಥಿತಿ ಮತ್ತು ಅನ್ಯಭಾಷಾ ಸಂಪರ್ಕ ಇಂತಹ ಹಲವಾರು ಬಾಹ್ಯ ಅಂಶಗಳ ಮೇಲೆ ನಿಂತಿರುತ್ತದೆ. ಭಾಷೆ ಬೆಳೆಯುತ್ತಾ ಹೋದಂತೆ ಆಂತರಿಕವಾಗಿ ಅನೇಕ ಬದಲಾವಣೆಗಳನ್ನು ವೈವಿಧ್ಯಗಳನ್ನು ಹೊಂದುವುದನ್ನು ಗಮನಿಸಬಹುದು. ಮಸ್ಕಿಕನ್ನಡದಲ್ಲಿ ವೈವಿಧ್ಯತೆಗಳಿಂದ ಕೂಡಿದ ಅನೇಕ ವಿಶಿಷ್ಟ ಪದಗಳು ಬಳಕೆಯಲ್ಲಿವೆ. ಮಸ್ಕಿ ಕನ್ನಡ ಒಂದು ವಿಶಿಷ್ಟ ಪ್ರಭೇದ ಎಂದು ನಿರ್ಧರಿಸಲು ಈ ವಿಶಿಷ್ಟ ಪದಗಳು ಮಸ್ಕಿಕನ್ನಡದ ಉಚ್ಚಾರಣೆಯಲ್ಲಿ ನೋಡಬಹುದು. ಅಂದಾಡಿ, ಅನತಿ, ಓತಿ, ಆಣಿತಿಂದು, ಎಂಡೆಗಸ, ಕೂಲ, ಕ್ಯಾಲ, ಕ್ಯಲ್ಯ, ಕೋಲಿ, ಕಬ್ಬಾಟ, ಗಡಚಿಕ್ಕು, ಕುಡಿವಂತಿಗಿ, ಜೆಡಿ, ಚಿಮಣಿ, ಗೊಂತು, ಬೋಳಿ, ನಿಲುಕು, ಬೇಗೆಸೆರೆ, ಸನ್ಯಾಕ, ಸನ್ತಿವಾರ, ಸಂದಕ, ಸರೀಕರು, ಸೋಬ್ತಿ, ಗ್ಯಣ್ಯಾ, ಬಲಾಚಾರ, ಬುತ್ತಿಮಾಡು, ಮಿಣಿ, ಲೋಡು, ಲೋಯಾನ, ಬೋಗ್ಸ್, ಸುಂಕಬುತ್ತಿ, ನೀರ್‌ತಾವ ಮುಂತಾದ ವಿಶಿಷ್ಟ ಪದಗಳನ್ನು ಮಸ್ಕಿಕನ್ನಡದಲ್ಲಿ ಬಳಕೆಯಲ್ಲಿವೆ. ಈ ವಿಶಿಷ್ಟ ಪದಗಳು ಮಸ್ಕಿಕನ್ನಡ ಒಂದು ವಿಶಿಷ್ಟ ಪ್ರಭೇದ ಎಂದು ನಿರ್ಣಯಿಸಲು ಸಹಾಕಾರಿಯಾಗುತ್ತವೆ. ಈ ಅಧ್ಯಾಯದಲ್ಲಿ ಲಿಂಗಾಯತ, ನಾಯಕ, ಹರಿಜನ ಮೂರು ಸಾಮಾಜಿಕ ವರ್ಗಗಳಲ್ಲಿ ಬಳಕೆಯಲ್ಲಿರುವ ವಿಶಿಷ್ಟ ಪದಗಳು ಹಾಗೂ ಪದಪ್ರಯೋಗವನ್ನು ನೀಡಲಾಗಿದೆ. ವಿಶಿಷ್ಟವಾದ ಬಹುಸಂಖ್ಯಾ ಪದಗಳನ್ನು ಮಸ್ಕಿಕನ್ನಡದಲ್ಲಿ ಗುರುತಿಸಬಹುದಾಗಿದೆ.

ಮಸ್ಕಿ ಕನ್ನಡದ ವಿಶಿಷ್ಟ ಪದಗಳು ಮತ್ತು ಪದಗಳ ಅರ್ಥ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಹತ್ತಿರ	ಅತ್ತಿರ/ಅತ್ರ	ಸನ್ಯಾಕ	ಸನ್ಯಾಕ
	ಬರಹಕನ್ನಡ ಹತ್ತಿರ ಪದವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಅತ್ತಿರ' ಎಂದು ಬಳಕೆಗೊಳ್ಳುತ್ತದೆ. ಪದಾದಿಯ 'ಹ' ವ್ಯಂಜನ ಲಿಂಗಾಯತರಲ್ಲಿ 'ಅ' ಸ್ವರಹೊಂದಿ ಬಳಕೆಗೊಂಡಿರುವುದನ್ನು ಗಮನಿಸಬಹುದಾಗಿದೆ.	ನಾಯಕರ ಮಾತಿನಲ್ಲಿ ಬರಹಕನ್ನಡದ 'ಹತ್ತಿರ' ಮಸ್ಕಿಕನ್ನಡದಲ್ಲಿ 'ಸನ್ಯಾಕ' ಎಂದು ವಿಶಿಷ್ಟರೀತಿಯಲ್ಲಿ ಬಳಕೆಗೊಳ್ಳುವುದನ್ನು ಗಮನಿಸಬಹುದಾಗಿದೆ.	ಹರಿಜನರ ಮಾತಿನಲ್ಲಿಯೂ ಸಹ 'ಹತ್ತಿರ' ಪದವು 'ಸನ್ಯಾಕ' ಎಂದು ಬಳಕೆಗೊಳ್ಳುವುದನ್ನು ನೋಡಬಹುದು.
	ಮನಿ ಇಲ್ಲೆ 'ಅತ್ತಿರ' ಅಯ್ತಿ.	ಮನಿ ಇಲ್ಲೆ 'ಸನ್ಯಾಕ' ಅಯ್ತಿ.	ಮನೆ ಇಲ್ಲೆ 'ಸನ್ಯಾಕ' ಅಯ್ತಿ.
ಭಾನುವಾರ	ಸನ್ತಿವಾರ	ಸನ್ತಿವಾರ	ಸನ್ತಿವಾರ
	ಬರಹಕನ್ನಡದಲ್ಲಿ ಬಳಕೆಗೊಳ್ಳುವ ಭಾನುವಾರ ಮಸ್ಕಿಕನ್ನಡದ ಲಿಂಗಾಯತರ ಉಚ್ಚಾರಣೆಯಲ್ಲಿ 'ಸನ್ತಿವಾರ' ಎಂದು ಉಚ್ಚರಣೆಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ ಭಾನುವಾರ ಮಸ್ಕಿಕನ್ನಡದ ನಾಯಕರ ಉಚ್ಚಾರಣೆಯಲ್ಲಿ 'ಸನ್ತಿವಾರ' ಎಂದು ಉಚ್ಚಾರಿತಗೊಳ್ಳುವುದು.	ಬರಹಕನ್ನಡದಲ್ಲಿ ಬಳಕೆಗೊಳ್ಳುವ ಭಾನುವಾರ ಮಸ್ಕಿಕನ್ನಡದ ಹರಿಜನರ ಉಚ್ಚಾರಣೆಯಲ್ಲಿ 'ಸನ್ತಿವಾರ' ಎಂದು ಉಚ್ಚಾರಣೆಗೊಳ್ಳುತ್ತದೆ.
	'ಸನ್ತಿವಾರ' ನಾನ್ ಊರಿಗೆ ವಕೀನಿ.	'ಸನ್ತಿವಾರ' ನಾನ್ ಊರ್ಗಿ ವಕೀನಿ.	'ಸನ್ತಿವಾರ' ನಾನ್ ಊರ್ಗಿ ವಕೀನಿ.
ಮುಚುಗರು	ಮೋಚಿಯರು	ಮೋಚ್ಯಾರು	ಮೋಚ್ಯಾರು
	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಮುಚುಗರು' ಎಂಬ ಜಾತಿ ಸೂಚಕ ಪದವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಮೋಚಿಯರು' ಎಂದು ಬಳಕೆಗೊಳ್ಳುವುದು. ಮಸ್ಕಿಪ್ರದೇಶ	'ಮುಚಗರು' ಎಂಬ ಜಾತಿ ಸೂಚಕ ಪದವು ನಾಯಕರ ಮಾತಿನಲ್ಲಿ 'ಮೋಚ್ಯಾರು' ಎಂದು ಬಳಕೆಗೊಳ್ಳುತ್ತದೆ. 'ಆರ' ಪ್ರತ್ಯಯ ಬಳಕೆಯನ್ನು ನೋಡಬಹುದು.	'ಮುಚುಗರು' ಎಂಬ ಜಾತಿ ಸೂಚಕ ಪದವು ಹರಿಜನರ ಮಾತಿನಲ್ಲಿ 'ಮೋಚ್ಯಾರು' ಎಂದು ಬಳಕೆಗೊಳ್ಳುವುದನ್ನು ಗಮನಿಸಬಹುದು. 'ಆರ' ಪ್ರತ್ಯಯವನ್ನು

	ದಲ್ಲಿ 'ಮುಚಗರು' ಜಾತಿಯ ಜನ ಸಂಖ್ಯೆ ಹೆಚ್ಚು ಇದ್ದು ಇವರ ಒಂದು ಓಣಿಯನ್ನು ನೋಡಬಹುದು. ಮುಚುಗರ ಓಣಿ ಲಿಂಗಾಯತರ ಮಾತಿನಲ್ಲಿ ಮೋಚಿಯರು ಓಣಿ ಎಂದು ಬಳಕೆಗೊಳ್ಳುತ್ತದೆ. 'ಅರು' ಪ್ರತ್ಯಯವನ್ನು ಇಲ್ಲಿ ಗಮನಿಸಬಹುದು.		ನೋಡಬಹುದು.
	ಕಟ್ಗಿ 'ಮೋಚಿಯರು' ಓಣ್ಯಾಗ ಸಿಗ್ತಾವು.	ಕಟ್ಗಿ 'ಮೋಚ್ಯಾರು' ಓಣ್ಯಾಗ ಸಿಗ್ತಾವು.	ಕಟ್ಗೀ 'ಮೋಚ್ಯಾರ' ಓಣ್ಯಾಗ ಸಿಗ್ತಾವು.
ಹೋಗುತ್ತೀಯ	**ಓತಿ**	**ಓತಿ**	**ಓತಿ**
	'ಹೋಗುತ್ತೀಯ' ಎಂಬ ಬರಹ ಕನ್ನಡದ ಪದವು ಮಸ್ಕಿಕನ್ನಡದ ಲಿಂಗಾಯತರ ಉಚ್ಚಾರಣೆಯಲ್ಲಿ 'ಓತಿ' ಎಂದು ಬಳಕೆಯಾಗುತ್ತದೆ.	'ಹೋಗುತ್ತೀಯ' ಎಂಬ ಬರಹಕನ್ನಡ ಪದವು ಮಸ್ಕಿಕನ್ನಡ ನಾಯಕರ ಉಚ್ಚಾರಣೆಯಲ್ಲಿ 'ಓತಿ' ಎಂದು ಬಳಕೆಯಾಗುತ್ತದೆ.	'ಹೋಗತ್ತೀಯ' ಎಂಬ ಬರಹಕನ್ನಡದ ಪದವು ಮಸ್ಕಿ ಕನ್ನಡ ಹರಿಜನರ ಉಚ್ಚಾರಣೆಯಲ್ಲಿ 'ಓತಿ' ಎಂದು ಬಳಕೆಯಾಗುತ್ತದೆ.
	ಸಿಂದನೂರು 'ಓತಿ'.	ಸಿಂದನೂರು 'ಓತಿ'.	ಸಿಂದನೂರು 'ಓತಿ'.
ಈಚಲಪುಟ್ಟಿ	**ಗುಮ್ಮಿ**	**ಗುಮ್ಮಿ**	**ಗುಮ್ಮಿ**
	ಧಾನ್ಯ ಸಂಗ್ರಹಿಸುವ 'ಈಚಲ ಪುಟ್ಟಿ'ಯನ್ನು ಮಸ್ಕಿಕನ್ನಡದ ಲಿಂಗಾಯತರು 'ಗುಮ್ಮಿ' ಎಂದು ಕರೆಯುತ್ತಾರೆ.	ಮಸ್ಕಿಕನ್ನಡ ನಾಯಕರ ಮಾತಿನಲ್ಲಿ 'ಗುಮ್ಮಿ' ಎಂದು ಬಳಕೆಗೊಳ್ಳುವುದು.	ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿಯೂ 'ಗುಮ್ಮಿ' ಎಂದು ಬಳಕೆಗೊಳ್ಳುವುದನ್ನು ಕಾಣಬಹುದು.
	ಆ 'ಗುಮ್ಮಿ'ಯಾಗ ಜ್ವಾಳ ಏಸ್ ಅದಾವು.	ಆ 'ಗುಮ್ಮಿ'ಯಾಗ ಜ್ವಾಳ ಏಸ್ ಅದಾವು.	ಆ 'ಗುಮ್ಮಿ'ಯಾಗ ಜ್ವಾಳ ಏಸ್ ಅದಾವು.

ಬಿದಿರಿನ ಪುಟ್ಟಿ	**ಕೆರಸಿ**	**ಕ್ಯರ್ಸಿ**	**ಕ್ಯರ್ಸಿ**
	ಬರಹಕನ್ನಡದಲ್ಲಿ 'ಬಿದಿರಿನ ಪುಟ್ಟಿ' ಎಂದು ಬಳಕೆಗೊಳ್ಳುವುದನ್ನು ಮಸ್ಕಿ ಕನ್ನಡದ ಲಿಂಗಾಯತರ ಕನ್ನಡದಲ್ಲಿ 'ಕೆರಸಿ' ಎಂದು ಬಳಕೆಗೊಳ್ಳುವುದು.	ಬರಹಕನ್ನಡದಲ್ಲಿ 'ಬಿದಿರಿನ ಪುಟ್ಟಿ' ಎಂದು ಬಳಕೆ ಗೊಳ್ಳುವುದನ್ನು ನಾಯಕರ ಮಾತಿನಲ್ಲಿ 'ಕ್ಯರ್ಸಿ' ಎಂದು ಬಳಕೆಗೊಳ್ಳುವುದು.	ಬರಹಕನ್ನಡದಲ್ಲಿ 'ಬಿದಿರಿನ ಪುಟ್ಟಿ' ಎಂದು ಬಳಕೆಗೊಳ್ಳು ವುದನ್ನು ಹರಿಜನರು ಮಸ್ಕಿ ಕನ್ನಡದಲ್ಲಿ 'ಕ್ಯರ್ಸಿ' ಎಂದು ಕರೆಯುವರು.
	ಆ 'ಕೆರಸಿ'ದಾಗ ಏನೈತಿ.	ಆ 'ಕ್ಯರ್ಸಿ'ದಾಗ ಏನೈತಿ.	ಆ 'ಕ್ಯರ್ಸಿ'ದಾಗ ಏನೈತಿ.
ಬರಲು	**ಸೆಳ್ಳು**	**ಸ್ಯಳ್ಳು**	**ಸ್ಯಳ್ಳು**
	ಬರಹಕನ್ನಡದಲ್ಲಿ 'ಬರಲು' (ಒಣಗಿದ ಕಡ್ಡಿಯಿಂದ ಕೂಡಿದ್ದು) ಎಂದು ಬಳಕೆಗೊಳ್ಳುವ ಪದವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಸೆಳ್ಳು' ಎಂದು ಬಳಕೆಗೊಳ್ಳುತ್ತದೆ.	ಬರಹಕನ್ನಡದ 'ಬರಲು' ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಸ್ಯಳ್ಳು' ಎಂದು ಉಚ್ಚಾರಣೆ ಗೊಳ್ಳುತ್ತದೆ.	ಬರಹಕನ್ನಡದ 'ಬರಲು' ಮಸ್ಕಿಕನ್ನಡ ಹರಿಜನರ ಮಾತಿನಲ್ಲಿ 'ಸ್ಯಳ್ಳು' ಎಂದು ಬಳಕೆಗೊಳ್ಳುವುದು.
	'ಸೆಳ್ಳು' ಚಿಕ್‍ದು ಅಯ್ತಿ.	'ಸ್ಯಳ್ಳು' ಸಣ್‍ದು ಅಯ್ತಿ.	'ಸ್ಯಳ್ಳು' ಸಣ್‍ದು ಅಯ್ತಿ.
ಹಲ್ಲಿನ ಕುಂಟೆ	**ಜಂತೆ ಕುಂಟೆ**	**ಜಂತಿ ಕುಂಟೆ**	**ಜಂತಿ ಕುಂಟೆ**
	ಕೃಷಿ ಚಟುವಟಿಕೆಗಳಲ್ಲಿ ಬಳಸುವ 'ಹಲ್ಲಿನ ಕುಂಟೆ' ಎಂಬ ಬರಹ ಕನ್ನಡ ಪದವು ಮಸ್ಕಿಕನ್ನಡದಲ್ಲಿ ಲಿಂಗಾಯತರ ಮಾತಿನಲ್ಲಿ 'ಜಂತೆ ಕುಂಟೆ' ಎಂದು ಬಳಕೆಗೊಳ್ಳುವುದು.	ಬರಹಕನ್ನಡದಲ್ಲಿ 'ಹಲ್ಲಿನ ಕುಂಟೆ' ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಜಂತಿ ಕುಂಟೆ' ಎಂದು ಬಳಕೆಗೊಳ್ಳುವುದು.	ಬರಹಕನ್ನಡದ ಹಲ್ಲಿನ ಕುಂಟೆ ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ಜಂತಿ ಕುಂಟೆ' ಎಂದು ಬಳಕೆಗೊಳ್ಳುವುದು.
	'ಜಂತೆ ಕುಂಟೆ'ಯಿಂದ ಮಡಿ ಮಾಡು.	'ಜಂತಿ ಕುಂಟೆ'ಯಿಂದ ಮಡಿ ಮಾಡು.	'ಜಂತಿ ಕುಂಟೆ'ಯಿಂದ ಮಡಿ ಮಾಡು.
ನಳ	**ಕೊಳಾಯಿ**	**ಕ್ವಳಾಯಿ**	**ಕ್ವಳಾಯಿ**
	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ನಳ' ಎಂಬ ಪದ ಮಸ್ಕಿಕನ್ನಡದ	ಬರಹಕನ್ನಡದ 'ನಳ' ಪದವು ಮಸ್ಕಿಕನ್ನಡದ ನಾಯಕರು	ಬರಹಕನ್ನಡದ 'ನಳ' ಪದ ಮಸ್ಕಿಕನ್ನಡದ ಹರಿಜನರ

	ಲಿಂಗಾಯತರ ಉಚ್ಚಾರಣೆಯಲ್ಲಿ 'ಕೊಳಾಯಿ' ಎಂದು ಬಳಕೆಗೊಳ್ಳುವುದು.	ಉಚ್ಚಾರಣೆಯಲ್ಲಿ 'ಕ್ವಳಾಯಿ' ಎಂದು ಬಳಕೆಗೊಳ್ಳುವುದು.	ಉಚ್ಚಾರಣೆಯಲ್ಲಿ 'ಕ್ವಳಾಯಿ' ಎಂದು ಬಳಕೆಗೊಳ್ಳುವುದು.
	ಇವತ್ 'ಕೊಳಾಯಿದಾಗ' ನೀರ್ ಬರಂಗ್ ಇಲ್ಲ.	ಇವತ್ 'ಕ್ವಳಾಯಿದಾಗ' ನೀರ್ ಬರಂಗ್ ಇಲ್ಲ.	ಇವತ್ 'ಕ್ವಳಾಯಿದಾಗ' ನೀರ್ ಬರಂಗ್ ಇಲ್ಲ.
ಪೆಟ್ಟಿಗೆ ಪೆಟಾರಿ	**ಪೆಟಾರಿ/ಸಂದಕ**	**ಸಂದಕ**	**ಸಂದಕ**
	ಬರಹಕನ್ನಡ ಬಳಕೆಗೊಳ್ಳುವ 'ಪಿಟಾರಿ' ಪದ ಪ್ರಯೋಗವು ಮಸ್ಕಿ ಕನ್ನಡದ ಲಿಂಗಾಯತರ ಮಾತಿನಲ್ಲಿ 'ಪೆಟಾರಿ' ಮತ್ತು ಸಂದಕ ಎಂದು ಎರಡು ರೀತಿಯ ಉಚ್ಚಾರಣೆಯನ್ನು ಗಮನಿಸಬಹುದು.	ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಪಿಟಾರಿ' ಪದ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಸಂದಕ' ಎಂದು ಉಚ್ಚಾರಣೆ ಗೊಳ್ಳುವುದು.	ಬರಹಕನ್ನಡದಲ್ಲಿ ಬಳಕೆಗೊ ಳ್ಳುವ 'ಪಿಟಾರಿ' ಪದ ಮಸ್ಕಿ ಕನ್ನಡ ಹರಿಜನರ ಮಾತಿನಲ್ಲಿ 'ಸಂದಕ' ಎಂದು ಉಚ್ಚಾರಣೆ ಗೊಳ್ಳುವುದು.
	'ಸಂದಕ'ದಾಗ ರಕ್ಕ ಏಟ ಅಯ್ತಿ ಪೆಟಾರಿದಾಗ ರಕ್ಕ ಏಟ್ ಅಯ್ತಿ.	'ಸಂದಕ'ದಾಗ ರಕ್ಕ ಏಟ್ ಅಯ್ತಿ.	'ಸಂದಕ'ದಾಗ ರಕ್ಕ ಏಟ್ ಅಯ್ತಿ.
ಸೋಪು/ ಸಾಬೂನು	**ಸಾಬೂನು/ಸಬೂರ್‌ಕರ್**	**ಸಬೂರ್‌ಕರ್**	**ಸಬೂರ್‌ಕರ್**
	ಬರಹಕನ್ನಡದಲ್ಲಿ ಬಳಕೆಗೊಳ್ಳು ತ್ತಿರುವ ಇಂಗ್ಲೀಷ್‌ನ 'ಸೋಪು' ಹಾಗೂ ಕನ್ನಡದ 'ಸಾಬೂನು' ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಸಾಬೂನು/ ಸಬೂರ್‌ಕರ್' ಎಂದು ಉಚ್ಚಾರಣೆಯಲ್ಲಿದೆ.	ಬರಹಕನ್ನಡ 'ಸಾಬೂನು' ಇಂಗ್ಲೀಷ್‌ನ 'ಸೋಪು' ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಸಬೂರ್‌ಕರ್' ಎಂಬ ರೀತಿಯಲ್ಲಿ ಪದ ಪ್ರಯೋಗಗೊಳ್ಳುತ್ತಿದೆ.	ಬರಹಕನ್ನಡದ 'ಸಾಬೂನು' ಇಂಗ್ಲೀಷ್‌ನ 'ಸೋಪು' ಮಸ್ಕಿ ಕನ್ನಡದ ಹರಿಜನರ ಮಾತಿನಲ್ಲಿ 'ಸಬೂರಕರ್' ಎಂದು ಪದ ಪ್ರಯೋಗಗೊಳ್ಳುತ್ತದೆ.
	'ಸಾಬೂನು' ಕೊಡು.	'ಸಬೂರ್‌ಕರ್' ಕ್ವಡು.	'ಸಬೂರ್‌ಕರ್' ಕ್ವಡು.

ಹಾಗೇ ನೋಡು	**ಗಾ ನೋಡು**	**ಗಾ ನೋಡು**	**ಗಾ ನೋಡು**
	ಬರಹಕನ್ನಡದಲ್ಲಿ 'ಹಾಗೇ ನೋಡು' ಎಂಬ ಕೂಡು ಪದ ಬಳಕೆ ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಗಾನೋಡು' ಎಂದು 'ಹ' ಕಾರ ಲೋಪಗೊಂಡು ಬಳಕೆಯಲ್ಲಿದೆ.	ಬರಹಕನ್ನಡದ 'ಹಾಗೇ ನೋಡು' ಎಂದು ಕೂಡು ಪದ ಮಸ್ಕಿ ಕನ್ನಡದ ನಾಯಕ ಮಾತಿನಲ್ಲಿ 'ಗಾನೋಡು' ಎಂದು 'ಹ' ಕಾರ ಲೋಪಗೊಂಡು ಬಳಕೆಯಲ್ಲಿದೆ.	ಬರಹ ಕನ್ನಡದ 'ಹಾಗೇ ನೋಡು' ಎಂಬ ಕೂಡು ಪದ ಮಸ್ಕಿ ಕನ್ನಡದ ಹರಿಜನರ ಮಾತಿನಲ್ಲಿ 'ಗಾನೋಡು' ಎಂದು ಬಳಕೆಯಲ್ಲಿದೆ. 'ಹ' ಕಾರ ಲೋಪಗೊಂಡಿರುವುದನ್ನು ಗಮನಿಸಬಹುದು.
	'ಗಾ ನೋಡ್'ಅಲ್ಲಿ ಬರಕತ್ಯಾನ.	'ಗಾ ನೋಡ್' ಅಲ್ಲಿ ಬರಕತ್ಯಾನ.	'ಗಾ ನೋಡ್' ಅಲ್ಲಿ ಬರಕತ್ಯಾನ.
ಸಮ ವಯಸ್ಕರು	**ಸರೀಕರು**	**ಸರೀಕರು**	**ಸರೀಕರು**
	ಬರಹಕನ್ನಡದಲ್ಲಿ 'ಸಮವಯಸ್ಕರು' ಎಂದು ಪ್ರಯೋಗಗೊಳ್ಳುವ ಕೂಡು ಪದ ಮಸ್ಕಿಕನ್ನಡ ಲಿಂಗಾಯತರ ಉಚ್ಚಾರಣೆಯಲ್ಲಿ 'ಸರೀಕರು' ಎಂದು ಉಚ್ಚಾರಗೊಳ್ಳುತ್ತದೆ.	ಬರಹಕನ್ನಡದ 'ಸಮವಯಸ್ಕರು' ಎಂದು ಪ್ರಯೋಗಗೊಳ್ಳುವ ಕೂಡುಪದ ಮಸ್ಕಿಕನ್ನಡದ ನಾಯಕರ ಉಚ್ಚಾರಣೆಯಲ್ಲಿ 'ಸರೀಕರು' ಎಂದು ಉಚ್ಚಾರಣೆಗೊಳ್ಳುತ್ತದೆ.	ಬರಹಕನ್ನಡದ 'ಸಮವಯಸ್ಕರು' ಎಂದು ಪ್ರಯೋಗಗೊಳ್ಳುವ ಕೂಡುಪದ ಮಸ್ಕಿ ಕನ್ನಡದಲ್ಲಿ ಹರಿಜನರ ಉಚ್ಚಾರಣೆಯಲ್ಲಿ 'ಸರೀಕರು' ಎಂದು ಉಚ್ಚಾರಗೊಳ್ಳುತ್ತದೆ.
	ರಾಮಕೆಂಚ ಇಬ್ರೂ 'ಸರೀಕರು'.	ರಾಮಕೆಂಚ ಇಬ್ರೂ 'ಸರೀಕರು'.	ರಾಮಕೆಂಚ ಇಬ್ರೂ 'ಸರೀಕರು'.
ಸಣ್ಣವರಿಗೆ	**ಚಿಕ್ಕವರಿಗೆ**	**ಚಿಕ್ಕೋರಿಗೆ**	**ಚಿಕ್ಕೋರಿಗೆ**
	ಬರಹಕನ್ನಡದಲ್ಲಿ 'ಸಣ್ಣವರಿಗೆ' ಎಂದು ಬಳಕೆಗೊಳ್ಳುವ ಪದ ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಚಿಕ್ಕವರಿಗೆ' ಎಂದು ಉಚ್ಚಾರಗೊಳ್ಳುವುದು.	ಬರಹಕನ್ನಡದ 'ಸಣ್ಣವರಿಗೆ' ಎಂದು ಬಳಕೆಗೊಳ್ಳುವ ಪದ ಮಸ್ಕಿಕನ್ನಡದಲ್ಲಿ ನಾಯಕರ ಮಾತಿನಲ್ಲಿ 'ಚಿಕ್ಕೋರಿಗೆ' ಎಂದು ಉಚ್ಚಾರಗೊಳ್ಳುವುದು.	ಬರಹಕನ್ನಡದ 'ಸಣ್ಣವರಿಗೆ' ಎಂದು ಬಳಕೆಗೊಳ್ಳುವ ಪದ ಮಸ್ಕಿಕನ್ನಡದ ಹರಿಜನ ಮಾತಿನಲ್ಲಿ 'ಚಿಕ್ಕೋರಿಗೆ' ಎಂದು ಉಚ್ಚಾರಗೊಳ್ಳುವುದು.

	ಮೋದ್ಲು ಚಿಕ್ಕವರಿಗೆ ಬರಾಕ್ ಏಳ್.	ಮದ್ಲ ಚಿಕ್ಕೋರಿಗೆ ಬರಾಕ್ ಏಳ್.	ಮದ್ಲ ಚಿಕ್ಕೋರಿಗೆ ಬರಾಕ್ ಏಳ್.
ಮೊಟ್ಟ ಮೊದಲು	ಮುಂಚೇಕೆ	ಮುಂಚ್ಯಾಕ	ಮುಂಚ್ಯಾಕ
	ಬರಹಕನ್ನಡದಲ್ಲಿ 'ಮೊಟ್ಟ ಮೊದಲು'ಎಂದು ಬಳಕೆ ಗೊಳ್ಳುವ ಕೂಡುಪದ ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಮುಂಚೇಕೆ' ಎಂದು ಬಳಕೆಗೊಳ್ಳುವುದು.	ಬರಹಕನ್ನಡದಲ್ಲಿ 'ಮೊಟ್ಟ ಮೊದಲು' ಎಂದು ಬಳಕೆಗೊಳ್ಳುವ ಕೂಡುಪದ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಮುಂಚ್ಯಾಕ' ಎಂದು ಬಳಕೆಗೊಳ್ಳುವುದು	ಬರಹಕನ್ನಡದ 'ಮೊಟ್ಟ ಮೊದಲು' ಎಂದು ಬಳಕೆ ಗೊಳ್ಳುವ ಕೂಡು ಪದ ಮಸ್ಕಿಕನ್ನಡ ಹರಿಜನರ ಮಾತಿನಲ್ಲಿ 'ಮುಂಚ್ಯಾಕ' ಎಂದು ಬಳಕೆಗೊಳ್ಳುವುದು.
	'ಮುಂಚೇಕೆ' ನಾನ್ ಊರಿಗೆ ವೋಗ್ತಿ.	'ಮುಂಚ್ಯಾಕ' ನಾನ್ ಊರ್ಗಿ ವೋಗ್ತಿ.	'ಮುಂಚ್ಯಾಕ್' ನಾನ್ ಊರ್ಗಿ ವೋಗ್ತಿ.
ತೆಗೆದು ಕೊಂಡು ಬಾ	ತಗಂಡ್‌ಬಾ	ತಗಂಬಾ	ತಗಂಬಾ
	ಬರಹಕನ್ನಡದಲ್ಲಿ ಬಳಕೆಯ ಲ್ಲಿರುವ 'ತೆಗೆದುಕೊಂಡು ಬಾ' ಎಂಬ ಕೂಡು ಪದ ಮಸ್ಕಿ ಕನ್ನಡದ ಲಿಂಗಾಯತರ ಮಾತಿನಲ್ಲಿ 'ತಗಂಡ್‌ಕೇಸಿ ಬಾ' ಎಂದು ಉಚ್ಚಾರಗೊಳ್ಳುವುದು.	ಬರಹಕನ್ನಡದಲ್ಲಿ ಬಳಕೆ ಯಲ್ಲಿರುವ 'ತೆಗೆದು ಕೊಂಡು ಬಾ' ಎಂಬ ಕೂಡುಪದ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ತಗಂಡಕೇಸಿ ಬಾ' ಎಂದು ಉಚ್ಚಾರಗೊಳ್ಳುವುದು.	ಬರಹಕನ್ನಡದಲ್ಲಿ ಬಳಕೆ ಯಲ್ಲಿರುವ 'ತೆಗೆದುಕೊಂಡು ಬಾ' ಎಂಬ ಕೂಡು ಪದ ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ತಗಂಡಕೇಸಿ ಬಾ' ಎಂದು ಉಚ್ಚಾರಗೊಳ್ಳುತ್ತದೆ.
	ಕಟ್ಗಿನ್ನ 'ತಗಂಡ್‌ಕೇಸಿ ಬಾ'.	ಕಟ್ಗಿನ್ನ 'ತಗಂಡಕೇಸಿ ಬಾ'.	ಕಟ್ಗಿನ್ನ 'ತಗಂಡಕೇಸಿ ಬಾ'.
ಏನಾದರು	ಏನಾರ	ಏನಾರ	ಏನಾರ
	ಬರಹಕನ್ನಡದಲ್ಲಿ 'ಏನಾದರು' ಎಂಬ ಪದವು ಮಸ್ಕಿ ಕನ್ನಡದ ಲಿಂಗಾಯತರ ಮಾತಿನಲ್ಲಿ	ಬರಹಕನ್ನಡದಲ್ಲಿ 'ಏನಾದರು' ಎಂಬ ಪದವು ಮಸ್ಕಿಕನ್ನಡದ	ಬರಹಕನ್ನಡದಲ್ಲಿ 'ಏನಾದರು' ಎಂಬ ಪದವು ಮಸ್ಕಿಕನ್ನಡದ

	'ಏನಾರ' ಎಂದು ಉಚ್ಚಾರ ಗೊಳ್ಳುತ್ತದೆ.	ನಾಯಕರ ಮಾತಿನಲ್ಲಿ 'ಏನಾರ' ಎಂದು ಉಚ್ಚಾರಗೊಳ್ಳುತ್ತದೆ.	ಹರಿಜನರ ಮಾತಿನಲ್ಲಿ 'ಏನಾರ' ಎಂದು ಉಚ್ಚಾರಗೊಳ್ಳುವುದು.
	ಉಣ್ಣಾಕ 'ಏನಾರ' ಅಯ್ತಿ ಅನಾ ನೋಡ್.	ಉಣ್ಣಾಕ 'ಏನಾರ' ಅಯ್ತಿ ಅನಾ ನೋಡ್.	ಉಣ್ಣಾಕ 'ಏನಾರ' ಅಯ್ತಿ. ಅನಾ ನೋಡಿ.
ಬಹಳ ಇದೆ	**ಬಾಳೈತಿ**	**ಬಾಳೈತಿ**	**ಬಾಳೈತಿ**
	ಬರಹಕನ್ನಡದಲ್ಲಿ 'ಬಹಳ ಇದೆ' ಎಂಬ ಪದವು ಮಸ್ಕಿ ಕನ್ನಡದ ಲಿಂಗಾಯತರ ಮಾತಿನಲ್ಲಿ 'ಬಾಳೈತಿ' ಎಂದು ಬಳಕೆಯಲ್ಲಿದೆ.	ಬರಹಕನ್ನಡದಲ್ಲಿ 'ಬಹಳ ಇದೆ' ಎಂಬ ಪದವು ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಬಾಳೈತಿ' ಎಂದು ಬಳಕೆಯಲ್ಲಿದೆ.	ಬರಹಕನ್ನಡದಲ್ಲಿ 'ಬಹಳ ಇದೆ' ಎಂಬ ಪದವು ಮಸ್ಕಿ ಕನ್ನಡದ ಹರಿಜನರ ಮಾತಿನಲ್ಲಿ 'ಬಾಳೈತಿ' ಎಂದು ಬಳಕೆಯಲ್ಲಿದೆ.
	ನನ್ನತ್ರ ರೊಕ್ಕ 'ಬಾಳೈತಿ'.	ನನ್ನತ್ರ ರೊಕ್ಕ 'ಬಾಳೈತಿ'.	ನನ್ನತ್ರ ರೊಕ್ಕ 'ಬಾಳೈತಿ'.
ಕಿಟಕಿ	**ಜಾಲಂದ್ರ**	**ಜಾಲಂದ್ರ**	**ಜಾಲಂದ್ರ**
	ಬರಹಕನ್ನಡದ 'ಕಿಟಕಿ' ಪದ ಪ್ರಯೋಗ ಮಸ್ಕಿ ಕನ್ನಡದ ಲಿಂಗಾಯತರ ಮಾತಿನಲ್ಲಿ 'ಜಾಲಂದ್ರ' ಎಂದು ಬಳಕೆ ಗೊಳ್ಳುತ್ತದೆ.	ಬರಹಕನ್ನಡದ 'ಕಿಟಕಿ' ಎಂಬ ಪದ ಪ್ರಯೋಗ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಜಾಳಂದ್ರ' ಎಂದು ಬಳಕೆಗೊಳ್ಳುತ್ತದೆ.	ಬರಹಕಕನ್ನಡದ 'ಕಿಟಕಿ' ಎಂಬ ಪದ ಪ್ರಯೋಗ ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ಜಾಲಂದ್ರ' ಎಂದು ಬಳಕೆಗೊಳ್ಳುತ್ತದೆ.
	'ಜಾಲಂದ್ರ'ದಾಗ ಉಳಬನ್ನು.	'ಜಾಲಂದ್ರ'ದಾಗ ಉಳಬನ್ನು.	'ಜಾಲಂದ್ರ'ದಾಗ ಉಳಬನ್ನು.
ಹೊದಿಕೆ	**ಒದಕಂಬದು**	**ಸುಜನಿ/ಒದಕಂಬದು**	**ಸುಜನಿ/ಒದಕಂಬದು**
	ಬರಹಕನ್ನಡದಲ್ಲಿ ಬಳಕೆಯ ಲ್ಲಿರುವ'ಹೊದಿಕೆ', 'ಚಾದರು'ಎಂಬಪದ ರೂಪವು ಮಸ್ಕಿಕನ್ನಡದ ಲಿಂಗಾಯತರ ಉಚ್ಚಾರಣೆಯಲ್ಲಿ 'ಒದಕಂಬದು' ಎಂದು	ಬರಹಕನ್ನಡದಲ್ಲಿ ಬಳಕೆ ಯಲ್ಲಿರುವ 'ಹೊದಿಕೆ' ಪದರೂಪವು ಮಸ್ಕಿ ಕನ್ನಡದ ನಾಯಕರ ಉಚ್ಚಾರಣೆಯಲ್ಲಿ 'ಸುಜನಿ' ಹಾಗೂ 'ಒದಕಂಬದು'	ಬರಹಕನ್ನಡದಲ್ಲಿ ಬಳಕೆ ಯಲ್ಲಿರುವ 'ಹೊದಿಕೆ' ಪದ ರೂಪವು ಮಸ್ಕಿಕನ್ನಡದ ಹರಿಜನರ ಉಚ್ಚಾರಣೆಯಲ್ಲಿ 'ಸುಜನಿ' ಹಾಗೂ 'ಒದಕಂಬದು' ಎಂಬೆರಡು

	ಬಳಕೆಗೊಳ್ಳುವುದು.	ಎಂಬೆರಡು ರೀತಿಯಲ್ಲಿ ಬಳಕೆಗೊಳ್ಳುವುದನ್ನು ಗಮನಿಸಬಹುದು.	ರೀತಿಯಲ್ಲಿ ಬಳಕೆಗೊಳ್ಳುವುದನ್ನು ಗಮನಿಸಬಹುದು.
	ನನ್ನತ್ರ ಆಸ್ಗಿ, 'ಒದಕಂಬದ' ಅಸ್ಟ ಅದಾವು.	ನನ್ನತ್ರ ಆಸ್ಗಿ, 'ಸುಜನಿ' ಅಸ್ಟ ಅದಾವು.	ನನ್ನತ್ರ ಆಸ್ಗಿ, 'ಸುಜನಿ' ಅಸ್ಟ ಅದಾವು.
ತಮಾಷೆ	**ಕುವ್ವಾಡ** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ತಮಾಷೆ' ಎಂಬ ಪದ ಮಸ್ಕಿಕನ್ನಡ ಲಿಂಗಾಯತರ ಉಚ್ಚಾರದಲ್ಲಿ 'ಕುವ್ವಾಡ' ಎಂದು ಉಚ್ಚಾರಣೆಗೊಳ್ಳುವುದನ್ನು ಗಮನಿಸಬಹುದು.	**ಕುವ್ವಾಡ** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ತಮಾಷೆ' ಎಂಬ ಪದ ಮಸ್ಕಿಕನ್ನಡದ ನಾಯಕರ ಉಚ್ಚಾರದಲ್ಲಿ 'ಕುವ್ವಾಡ' ಎಂದು ಉಚ್ಚಾರಣೆಗೊಳ್ಳುವುದನ್ನು ಗಮನಿಸಬಹುದು.	**ಕುವ್ವಾಡ** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ತಮಾಷೆ' ಪದವು ಮಸ್ಕಿಕನ್ನಡದ ಹರಿಜನರ ಉಚ್ಚಾರದಲ್ಲಿ 'ಕುವ್ವಾಡ' ಎಂದು ಉಚ್ಚಾರಣೆಗೊಳ್ಳುವುದನ್ನು ಗಮನಿಸಬಹುದು.
	'ಕುವ್ವಾಡ' ಮಾಡ್ಬೆ ಅಸ್ಟಬುಡು.	'ಕುವ್ವಾಡ' ಮಾಡ್ಬೆ, ಅಸ್ಟೆ ಬುಡು.	'ಕುವ್ವಾಡ' ಮಾಡ್ಬೆ, ಅಸ್ಟೆ ಬುಡು.
ಊಟದ ಚಾಪೆ	**ಚಿಡಿಚಾಪೆ**	**ಚಿಡಿಚಾಪಿ**	**ಚಿಡಿಚಾಪಿ**
	ಬರಹಕನ್ನಡದಲ್ಲಿ 'ಊಟದ ಚಾಪೆ' ಎಂದು ಬಳಕೆಗೊಳ್ಳುವ ಪದ ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಚಿಡಿಚಾಪೆ' ಎಂದು ಬಳಕೆಗೊಳ್ಳುವುದು.	ಬರಹಕನ್ನಡದಲ್ಲಿ 'ಊಟದ ಚಾಪೆ' ಎಂದು ಬಳಕೆಗೊಳ್ಳುವ ಪದ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಚಿಡಿಚಾಪಿ' ಎಂದು ಬಳಕೆಗೊಳ್ಳುವುದು.	ಬಹರಕನ್ನಡದಲ್ಲಿ 'ಊಟದ ಚಾಪೆ' ಎಂದು ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ಚಿಡಿಚಾಪಿ' ಎಂದು ಬಳಕೆಗೊಳ್ಳುವುದು.
	'ಚಿಡಿಚಾಪೆ' ಮ್ಯಾಗ ಕೂತ್ಕಂಡು ಊಟ ಮಾಡಮ.	'ಚಿಡಿಚಾಪಿ' ಮ್ಯಾಗ ಕುತ್ಕಂಡು ಊಟ ಮಾಡಮ.	'ಚಿಡಿಚಾಪಿ' ಮ್ಯಾಗ ಕುತ್ಕಂಡು ಊಟ ಮಾಡಮ.
ಮಜಾ	**ಮಜ್ಜಾ/ಜಮಾವು** ಬರಹಕನ್ನಡದಲ್ಲಿ ಬಳಕೆಯಲ್ಲಿರುವ 'ಮಜಾ' ಎಂಬ	**ಜಮಾವು** ಬರಹಕನ್ನಡದಲ್ಲಿ ಬಳಕೆಯಲ್ಲಿರುವ 'ಮಜಾ'	**ಜಮಾವು** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಮಜಾ' ಎಂಬ ಪದವು

	ಪದವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ ಮಜ್ಜಾ ಮತ್ತು 'ಜಮಾವು' ಎಂಬೆರಡು ರೀತಿಯಲ್ಲಿ ಬಳಕೆಗೊಳ್ಳುವುದನ್ನು ಗಮನಿಸಬಹುದು.	ಎಂಬ ಪದವು ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಜಮಾವು' ಎಂದು ಬಳಕೆಗೊಳ್ಳುತ್ತದೆ.	ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ಜಮಾವು' ಎಂದು ಬಳಕೆಗೊಳ್ಳುತ್ತದೆ.
	ನಾಟ್‌ಗ್ ನೋಡಿ 'ಮಜ್ಜಾ' ಮಾಡಿದ್ವೆ	ನಾಟ್‌ಗ ನೋಡಿ 'ಜಮಾವು' ಮಾಡಿದ್ವೆ	ನಾಟ್‌ಗ ನೋಡಿ 'ಜಮಾವು' ಮಾಡಿದ್ವಿ
ಶಾಂತ	**ತಮಣಿ** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಶಾಂತ' ಪದವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ತಮಣಿ' ಎಂದು ಉಚ್ಚಾರಗೊಳ್ಳುತ್ತದೆ.	**ತಮಣಿ** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಶಾಂತ' ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ತಮಣಿ' ಎಂದು ಉಚ್ಚಾರಗೊಳ್ಳುತ್ತದೆ.	**ತಮಣಿ** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಶಾಂತಿ' ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ತಮಣಿ' ಎಂದು ಉಚ್ಚಾರಗೊಳ್ಳುತ್ತದೆ.
	ಏಟ್ ಗಲಾಟಿ ಇತ್ತು 'ತಮಣಿ' ಆಯ್ತು.	ಏಟ್ ಗಲಾಟಿ ಇತ್ತು 'ತಮಣಿ' ಆಯ್ತು.	ಏಟ್ ಗಲಾಟಿ ಇತ್ತು 'ತಮಣಿ' ಆಯ್ತು.
ಕೆಲಸ	**ದಂದಾ** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಕೆಲಸ' ಎಂಬ ಪದವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ದಂದಾ' ಎಂದು ಉಚ್ಚಾರಗೊಳ್ಳುತ್ತದೆ.	**ದಂದಾ** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಕೆಲಸ' ಪದವು ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ದಂದಾ' ಎಂದು ಉಚ್ಚಾರಗೊಳ್ಳುತ್ತದೆ.	**ದಂದಾ** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಕೆಲಸ' ಪದವು ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ದಂದಾ' ಎಂದು ಉಚ್ಚಾರಗೊಳ್ಳುತ್ತದೆ.
	ಏನಾರ 'ದಂದಾ' ಇದ್ರ ಏಳ್ರಿ ಮಾಡ್ತೀನಿ	ಏನಾರ 'ದಂದಾ' ಇದ್ರ ಏಳ್ರಿ ಮಾಡ್ತೀನಿ	ಏನಾರ 'ದಂದಾ' ಇದ್ರ ಏಳ್ರಿ ಮಾಡ್ತೀನಿ
ಶಕ್ತಿ ಪ್ರದರ್ಶನ	**ಐಸತ್ತು** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಶಕ್ತಿಪ್ರದರ್ಶನ' ಎಂಬ	**ಐಸತ್ತು** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಶಕ್ತಿಪ್ರದರ್ಶನ'	**ಐಸತ್ತು** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಶಕ್ತಿಪ್ರದರ್ಶನ'

	ಪದರೂಪವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಐಸತ್ತು' ಎಂದು ಉಚ್ಚಾರಗೊಳ್ಳುತ್ತದೆ.	ಎಂಬ ಪದರೂಪವು ಮಸ್ಕಿ ಕನ್ನಡದ ನಾಯಕರ ಮಾತಿನಲ್ಲಿ 'ಐಸತ್ತು' ಎಂದು ಉಚ್ಚಾರಗೊಳ್ಳುತ್ತದೆ.	ಎಂಬ ಪದರೂಪವು ಮಸ್ಕಿ ಕನ್ನಡದ ಹರಿಜನರು ಮಾತಿನಲ್ಲಿ 'ಐಸತ್ತು' ಎಂದು ಉಚ್ಚಾರಗೊಳ್ಳುತ್ತದೆ.
	ಅವನ್ ನನ್ ಮ್ಯಾಲ ಏನ 'ಐಸತ್ತು' ನಡೆಸಾನ.	ಅವನ್ ನನ್ನ ಮ್ಯಾಲ ಏನ 'ಐಸತ್ತು' ನಡೆಸಾನ.	ಅವನ್ ನನ್ನ ಮ್ಯಾಲ ಏನ 'ಐಸತ್ತು' ನಡೆಸಾನ.
ಗೆಳೆತನ	ಸೋಬ್ತಿ	ಸೋಬ್ತಿ	ಸೋಬ್ತಿ
	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಗೆಳೆತನ' ಎಂಬ ಪದರೂಪವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಸೋಬ್ತಿ' ಎಂದು ಉಚ್ಚಾರಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಗೆಳೆತನ' ಎಂಬ ಪದರೂಪವು ಮಸ್ಕಿ ಕನ್ನಡದ ನಾಯಕರ ಮಾತಿನಲ್ಲಿ 'ಸೋಬ್ತಿ' ಎಂದು ಉಚ್ಚಾರಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಗೆಳೆತನ' ಎಂಬ ಪದರೂಪವು ಮಸ್ಕಿ ಕನ್ನಡದ ಹರಿಜನರು ಮಾತಿನಲ್ಲಿ 'ಸೋಬ್ತಿ' ಎಂದು ಉಚ್ಚಾರಗೊಳ್ಳುತ್ತದೆ.
	ನನ್ ಜತಿಗೆ 'ಸೋಬ್ತಿ' ಮಾಡಕತ್ತ್ಯಾನ.	ನನ್ ಜತಿಗೆ 'ಸೋಬ್ತಿ' ಮಾಡಕತ್ತ್ಯಾನ.	ನನ್ ಜತಿಗೆ 'ಸೋಬ್ತಿ' ಮಾಡಕತ್ತ್ಯಾನ.
ಗೆಳೆಯ	ಗ್ಯಣ್ಯಾ	ಗ್ಯಣ್ಯಾ	ಗ್ಯಣ್ಯಾ
	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಗೆಳೆಯ' ಎಂಬ ಪದರೂಪವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಗ್ಯಣ್ಯಾ' ಎಂದು ಉಚ್ಚಾರಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಗೆಳೆಯ' ಎಂಬ ಪದರೂಪವು ಮಸ್ಕಿ ಕನ್ನಡದ ನಾಯಕರ ಮಾತಿನಲ್ಲಿ 'ಗ್ಯಣ್ಯಾ' ಎಂದು ಉಚ್ಚಾರಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಗೆಳೆಯ' ಎಂಬ ಪದರೂಪವು ಮಸ್ಕಿ ಕನ್ನಡದ ಹರಿಜನರು ಮಾತಿನಲ್ಲಿ 'ಗ್ಯಣ್ಯಾ' ಎಂದು ಉಚ್ಚಾರಗೊಳ್ಳುತ್ತದೆ.
	'ಗ್ಯಣ್ಯಾ'ನ್ನ ಕರ್ಕಂಡ್ ಬಾ.	'ಗ್ಯಣ್ಯಾ'ನ್ನ ಕರ್ಕಂಡ್ ಬಾ.	'ಗ್ಯಣ್ಯಾ'ನ್ನ ಕರ್ಕಂಡ್ ಬಾ.
ಹುಡುಗಿ	ಉಡ್ಗಿ	ಪುಳ್ಳೈ ಉಡ್ಗಿ	ಪುಳ್ಳೈ ಉಡ್ಗಿ
	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಹುಡುಗಿ' ಎಂಬ ಪದರೂಪವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಹುಡುಗಿ' ಎಂಬ ಪದರೂಪವು ಮಸ್ಕಿ ಕನ್ನಡದ ನಾಯಕರ ಮಾತಿ	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಹುಡುಗಿ' ಎಂಬ ಪದರೂಪವು ಮಸ್ಕಿ ಕನ್ನಡದ ಹರಿಜನರು ಮಾತಿ

	'ಉಡ್ಗಿ' ಎಂದು ಉಚ್ಚಾರಗೊಳ್ಳುತ್ತದೆ.	ನಲ್ಲಿ 'ಪುಳೈ' ಮತ್ತು 'ಉಡ್ಗಿ' ಎಂದು ಉಚ್ಚಾರಗೊಳ್ಳುತ್ತದೆ	ನಲ್ಲಿ 'ಪುಳೈ' ಮತ್ತು 'ಉಡ್ಗಿ' ಎಂದು ಉಚ್ಚಾರಗೊಳ್ಳುತ್ತದೆ.
	ಆ 'ಉಡ್ಗಿ'ನ್ನ ಕರಿ.	ಆ 'ಪುಳೆ'ನ್ನ ಕರಿ.	ಆ 'ಪುಳೈ'ನ್ನ ಕರಿ.
ಪಂಚಾಂಗ	ಬಲಾಚಾರ	ಬಲಾಚಾರ	ಬಲಾಚಾರ
	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಪಂಚಾಂಗ' ಪದವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಬಲಾಚಾರ' ಎಂದು ಉಚ್ಚಾರಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಪಂಚಾಂಗ' ಪದವು ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಬಲಾಚಾರ' ಎಂದು ಉಚ್ಚಾರಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಪಂಚಾಂಗ' ಪದವು ಮಸ್ಕಿಕನ್ನಡದ ಹರಿಜನರು ಮಾತಿನಲ್ಲಿ 'ಬಲಾಚಾರ' ಎಂದು ಉಚ್ಚಾರಗೊಳ್ಳುತ್ತದೆ.
	ನನ್ ವ್ಯಾಳೆ ಸರಿಯಿಲ್ಲ ಸ್ವಲ್ಪು 'ಬಲಾಚಾರ' ತಗುದು ನೋಡ್ರಿ.	ನನ್ ವ್ಯಾಳೆ ಸರಿಯಿಲ್ಲ ಸ್ವಲ್ಪು 'ಬಲಾಚಾರ' ತಗುದು ನೋಡ್ರಿ.	ನನ್ ವ್ಯಾಳೆ ಸರಿಯಿಲ್ಲ ಸ್ವಲ್ಪು 'ಬಲಾಚಾರ' ತಗುದು ನೋಡ್ರಿ.
ವೇಳೆ	ವ್ಯಾಳೆ	ಯ್ಯಾಳೆ	ಯ್ಯಾಳ
	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ವೇಳೆ' ಪದವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ವ್ಯಾಳೆ' ಎಂದು ಉಚ್ಚಾರಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ವೇಳೆ' ಪದವು ಮಸ್ಕಿ ಕನ್ನಡದ ನಾಯಕರ ಮಾತಿನಲ್ಲಿ 'ಯ್ಯಾಳೆ' ಎಂದು ಉಚ್ಚಾರಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಯ್ಯಾಳ' ಪದವು ಮಸ್ಕಿಕನ್ನಡದ ಹರಿಜನರು ಮಾತಿನಲ್ಲಿ 'ಯ್ಯಾಳೆ' ಎಂದು ಉಚ್ಚಾರಗೊಳ್ಳುತ್ತದೆ.
	ಇವತ್ ಎದ್ 'ವ್ಯಾಳೆ' ಸರಿಯಿಲ್ಲ.	ಇವತ್ ಎದ್ 'ಯ್ಯಾಳೆ' ಸರಿಯಿಲ್ಲ.	ಇವತ್ ಎದ್ 'ಯ್ಯಾಳ' ಸರಿಯಿಲ್ಲ.
ಸೀರೆಮಾಡು	ಬುತ್ತಿಮಾಡು	ಬುತ್ತಿಮಾಡು	ಬುತ್ತಿಮಾಡು
	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಸೀಮಂತ' ಪದವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಸೀಮಂತ' ಪದವು ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಸೀಮಂತ' ಪದವು ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ

	'ಬುತ್ತಿಮಾಡು' ಎಂದು ಉಚ್ಚಾರಗೊಳ್ಳುತ್ತದೆ.	'ಬುತ್ತಿಮಾಡು' ಎಂದು ಉಚ್ಚಾರಗೊಳ್ಳುತ್ತದೆ.	'ಬುತ್ತಿಮಾಡು' ಎಂದು ಉಚ್ಚಾರಗೊಳ್ಳುತ್ತದೆ.
	ನಿನ್ನೆ ಅಕ್ಕುಗ ಬುತ್ತಿಮಾಡಿದ್ರು	ನಿನ್ನೆ ಅಕ್ಕುಗ ಬುತ್ತಿಮಾಡಿದ್ರು	ನಿನ್ನೆ ಅಕ್ಕುಗ ಬುತ್ತಿಮಾಡಿದ್ರು
ಕಸುಮುಸು ರೆಮಾಡು	ಮನೆಮಾಡು	ಮನಿಮಾಡು	ಮನಿಮಾಡು
	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಕಸಮುಸುರೆ ಮಾಡು' ಪದವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಮನೆಮಾಡು' ಎಂದು ಉಚ್ಚಾರಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಕಸಮುಸುರೆ ಮಾಡು' ಪದವು ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಮನಿಮಾಡು' ಎಂದು ಉಚ್ಚಾರಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಕಸಮುಸುರೆ ಮಾಡು' ಪದವು ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ಮನಿಮಾಡು' ಎಂದು ಉಚ್ಚಾರಗೊಳ್ಳುತ್ತದೆ.
	ಇವತ್ 'ಮನೆಮಾಡಕೆ' ಬರ್ತಾಳ.	ಇವತ್ 'ಮನಿಮಾಡಕೆ' ಬರ್ತಾಳ.	ಇವತ್ 'ಮನಿಮಾಡಕೆ' ಬರ್ತಾಳ.
ಅಡ್ನಬೀಳು	ವಾಟಬೀಳು	ವಾಟ್ ಬೀಳು	ವಾಟ್‌ಬೀಳು
	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಅಡ್ನಬೀಳು' ಪದವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ವಾಟಬೀಳು' ಎಂದು ಉಚ್ಚಾರಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ ಅಡ್ನಬೀಳು ಪದವು ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ವಾಟ್‌ಬೀಳು' ಎಂದು ಉಚ್ಚಾರಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ ಅಡ್ನಬೀಳು ಪದವು ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ವಾಟ್‌ಬೀಳು' ಎಂದು ಉಚ್ಚಾರಗೊಳ್ಳುತ್ತದೆ.
	ಪಕ್ಕದ ಗಿಡ 'ವಾಟ್‌ಬಿದ್ದ' ಅಯ್ತಿ.	ಪಕ್ಕದ ಗಿಡ 'ವಾಟ್‌ಬಿದ್ದ' ಅಯ್ತಿ.	ಪಕ್ಕದ ಗಿಡ 'ವಾಟಬಿದ್ದೈತಿ'.
ಸಗಣೆಕಸ	ಎಂಡೆಗಸ	ಎಂಡೆಗಸ	ಎಂಡೆಗಸ
	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಸಗಣೆಕಸ' ಪದವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಸಗಣೆಕಸ' ಪದವು ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಸಗಣೆಕಸ' ಪದವು ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ

	'ಎಂಡೆಗಸ' ಎಂದು ಉಚ್ಚಾರಗೊಳ್ಳುತ್ತದೆ.	'ಎಂಡೆಗಸ' ಎಂದು ಉಚ್ಚಾರಗ್ಳೊಳ್ಳುತ್ತದೆ.	'ಎಂಡೆಗಸ' ಎಂದು ಉಚ್ಚಾರಗೊಳ್ಳುತ್ತದೆ.
	ಬೆಳಗ್ಗಿಂದ 'ಎಂಡೆಗಸ' ಅಂಗಾ ಅಯ್ತಿ.	ಬೆಳಗ್ಗಿಂದ 'ಎಂಡೆಗಸ' ಅಂಗೈತಿ.	ಬೆಳಗ್ಗಿಂದ 'ಎಂಡೆಗಸ' ಅಂಗೈತಿ.
ಸ್ವಂತ ಕೋಣೆ	ಖಾಸಾಕೋಣೆ	ಖಾಸಾಕೋಲಿ/ಕೋಣೆ	ಖಾಸಾಕೋಲಿ/ಕೋಣೆ
	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಸ್ವಂತಕೋಣೆ' ಪದವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಖಾಸಕೋಣೆ' ಎಂದು ಉಚ್ಚಾರಣೆಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಸ್ವಂತಕೋಣೆ' ಪದವು ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಖಾಸಾಕೋಲಿ' ಅಥವಾ 'ಖಾಸಾಕೋಣೆ' ಎಂದು ಬಳಕೆಗೊಳ್ಳುವುದು.	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಸ್ವಂತಕೋಣೆ' ಪದವು ಮಸ್ಕಿಕನ್ನಡದ ಹರಿಜನರು ಮಾತಿನಲ್ಲಿ 'ಖಾಸಾಕೋಲಿ' ಅಥವಾ 'ಖಾಸಾಕೋಣೆ' ಎಂದು ಬಳಕೆಗೊಳ್ಳುವುದು.
	ಅವನ್ 'ಖಾಸಾಕೋಣೆ' ಅದು.	ಅವನ್ 'ಖಾಸಾಕೋಲಿ' ಅದು.	ಅವನ್ 'ಖಾಸಾಕೋಲಿ' ಅದು.
ಜಡೆ	ಜಡಿ/ಯರಳು	ಜೆಡಿ/ಯರಳು	ಜೆಡಿ/ಯರಳು
	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಜಡೆ' ಪದವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಜಡಿ', 'ಯರಳು' ಎಂದು ಉಚ್ಚಾರಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಜಡೆ' ಪದವು ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಜಡೆ', 'ಯರಳು' ಎಂದು ಉಚ್ಚಾರಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಜೆಡೆ' ಪದವು ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ಜೆಡಿ', 'ಯರಳು' ಎಂದು ಉಚ್ಚಾರಗೊಳ್ಳುತ್ತದೆ.
	ಅಕಿ 'ಜಡಿ' ಉದ್ದ ಅಯ್ತಿ.	ಅಕಿ 'ಜಡಿ' ಉದ್ದ ಅಯ್ತಿ.	ಅಕಿ 'ಯರಳು' ಉದ್ದ ಅಯ್ತಿ
ಅಂಕಣಪಟ್ಟಿ	ಗೊಂತು	ಗೊಂತು	ಗೊಂತು
	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಅಂಕಣಪಟ್ಟಿ' ಯನ್ನು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಅಂಕಣಪಟ್ಟಿ' ಯನ್ನು ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಅಂಕಣಪಟ್ಟಿ' ಯನ್ನು ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ

	'ಗೊಂತು' ಎಂದು ಉಚ್ಚಾರಗೊಳ್ಳುತ್ತದೆ.	'ಗೊಂತು' ಎಂದು ಉಚ್ಚಾರಗೊಳ್ಳುತ್ತದೆ.	'ಗೊಂತು' ಎಂದು ಉಚ್ಚಾರಗೊಳ್ಳುತ್ತದೆ.
	ದನಗಳೆಲ್ಲವೂ 'ಗೊಂತು' ನಲ್ಲಿ ಅದಾವನ ನೋಡ್ರಿ.	ದನಗಳೆಲ್ಲವೂ 'ಗೊಂತು' ನಲ್ಲಿ ಅದಾವನ ನೋಡ್ರಿ.	ದನಗಳೆಲ್ಲವೂ 'ಗೊಂತು' ನಲ್ಲಿ ಅದಾವನ ನೋಡ್ರಿ.
ಖೈದಿ	ಕೈದು	ಕೈದು	ಕೈದು
	ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಖೈದಿ' ಪದವು ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಕೈದು' ಎಂದು ಬಳಕೆಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಖೈದಿ' ಪದವು ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಕೈದು' ಎಂದು ಬಳಕೆಗೊಳ್ಳುತ್ತದೆ.	ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಖೈದಿ' ಪದವು ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ಕೈದು' ಎಂದು ಬಳಕೆಗೊಳ್ಳುತ್ತದೆ.
	ಇಲ್ಯಾರು 'ಕೈದು'ಗಳು ಇಲ್ಲ.	ಇಲ್ಯಾರು 'ಕೈದು'ಗಳು ಇಲ್ಲ.	ಇಲ್ಯಾರು 'ಕೈದು'ಗಳು ಇಲ್ಲ.
ಬುದ್ದಿ ಇಲ್ಲದವು	ಮೂಳ್ಗಳು	ಮೂಳ್ಗಳು	ಮೂಳ್ಗಳು
ತಿರುಗಿ	ವಳ್ಳಿ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ತಿರುಗಿ' ಎಂಬ ಪದ ಮಸ್ಕಿಕನ್ನಡದ ಲಿಂಗಾಯತರಲ್ಲಿ 'ವಳ್ಳಿ' ಎಂದು ಉಚ್ಚಾರ ಗೊಳ್ಳುವುದು. ದೌಡ್ 'ವಳ್ಳಿ' ಬಾ.	ವಳ್ಳಿ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ತಿರುಗಿ' ಎಂಬ ಪದ ಮಸ್ಕಿಕನ್ನಡದ ನಾಯಕರಲ್ಲಿ 'ವಳ್ಳಿ' ಎಂದು ಉಚ್ಚಾರಗೊಳ್ಳುವುದು. ದೌಡ್ 'ವಳ್ಳಿ' ಬಾ.	ವಳ್ಳಿ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ತಿರುಗಿ' ಎಂಬ ಪದ ಮಸ್ಕಿಕನ್ನಡದ ಹರಿಜನರಲ್ಲಿ 'ವಳ್ಳಿ' ಎಂದು ಉಚ್ಚಾರಗೊಳ್ಳುವುದು. ದೌಡ್ 'ವಳ್ಳಿ' ಬಾ.
ಮೊರ	ಮರ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಮೊರ' ಪದವು ಕಾಳು, ರಾಗಿ ಮುಂತಾದ ವುಗಳನ್ನು ಹಸನುಮಾಡಲು ಬಳಸುವ ಸಾಧನ ಮಸ್ಕಿ ಕನ್ನಡದ ಲಿಂಗಾಯತರಲ್ಲಿ 'ಮರ' ಎಂದು ಉಚ್ಚಾರ ಗೊಳ್ಳುವುದು. 'ಮರ'ದಾಗ ಜ್ವಾಳನ್ನ ಅಸಮಾಡು.	ಮರ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಮೊರ' ಪದವು ಕಾಳು, ರಾಗಿ ಮುಂತಾದ ವುಗಳನ್ನು ಹಸನುಮಾಡಲು ಬಳಸುವ ಸಾಧನ ಮಸ್ಕಿ ಕನ್ನಡದ ನಾಯಕರಲ್ಲಿ 'ಮರ' ಎಂದು ಉಚ್ಚಾರ ಗೊಳ್ಳುವುದು. 'ಮರ'ದಾಗ ಜ್ವಾಳನ್ನ ಅಸಮಾಡು.	ಮರ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಮೊರ' ಪದವು ಕಾಳು, ರಾಗಿ ಮುಂತಾದ ವುಗಳನ್ನು ಹಸನುಮಾಡಲು ಬಳಸುವ ಸಾಧನ ಮಸ್ಕಿ ಕನ್ನಡದ ಹರಿಜನರಲ್ಲಿ 'ಮರ' ಎಂದು ಉಚ್ಚಾರ ಗೊಳ್ಳುವುದು. 'ಮರ'ದಾಗ ಜ್ವಾಳನ್ನ ಅಸಮಾಡು.

ಬರುವಹಾಗಿದೆ.	ಬರಂಗ್ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಬರುವಹಾಗಿದೆ' ಎನ್ನುವ ಕೂಡು ಪದ ಮಸ್ಕಿ ಕನ್ನಡದ ಲಿಂಗಾಯತಲ್ಲಿ 'ಬರಂಗ್' ಎಂದು ಬಳಕೆ ಗೊಳ್ಳುತ್ತದೆ. ಮಳಿ 'ಬರಂಗ್' ಆಗ್ಯೆತಿ.	ಬರಂಗ್ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಬರುವಹಾಗಿದೆ' ಎನ್ನುವ ಕೂಡು ಪದ ಮಸ್ಕಿಕನ್ನಡದ ನಾಯಕರಲ್ಲಿ 'ಬರಂಗ್' ಎಂದು ಉಚ್ಚಾರಣೆಗೊಳ್ಳುತ್ತದೆ. ಮಳಿ 'ಬರಂಗ್' ಆಗ್ಯೆತಿ.	ಬರಂಗ್ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಬರುವಹಾಗಿದೆ' ಎನ್ನುವ ಕೂಡು ಪದ ಮಸ್ಕಿ ಕನ್ನಡದ ಹರಿಜನರಲ್ಲಿ 'ಬರಂಗ್' ಎಂದು ಉಚ್ಚಾರಣೆಗೊಳ್ಳುತ್ತದೆ. ಮಳಿ 'ಬರಂಗ್' ಆಗ್ಯೆತಿ.
ನೇರ	ನಿಸುರು ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ನೇರ' ಪದ ರೂಪ ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ನಿಸುರು' ಎಂದು ಬಳಸುವು ದನ್ನು ಗಮನಿಸಬಹುದಾಗಿದೆ. 'ನಿಸುರು' ಇರಾ ಕಟ್ಗಿ ತಗಂಡ್ ಕೇಸಿ ಬಾ.	ನಿಸುರು ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ನೇರ' ಪದ ರೂಪ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ನಿಸುರ' ಎಂದು ಬಳಸುವು ದನ್ನು ಗಮನಿಸಬಹುದಾಗಿದೆ. 'ನಿಸುರು' ಇರಾ ಕಟ್ಗಿ ತಗಂಡ್ ಕೇಸಿ ಬಾ.	ನಿಸುರು ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ನೇರ' ಪದ ರೂಪ ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ನಿಸುರು' ಎಂದು ಬಳಸುವು ದನ್ನು ಗಮನಿಸಬಹುದಾಗಿದೆ. 'ನಿಸುರು' ಇರಾ ಕಟ್ಗಿ ತಗಂಡ್ ಕೇಸಿ ಬಾ.
ಪಕ್ಕಕ್ಕೆ ಸರಿ	ಅರಗಾಗು ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಪಕ್ಕಕ್ಕೆ ಸರಿ' ಎನ್ನುವ ಕೂಡು ಪದ ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಅರಗಾಗು' ಎಂದು ಉಚ್ಚಾರಗೊಳ್ಳುವುದು. ದನಗುಳು ಬರ್ತಾವು 'ಅರಗಾಗು'.	ಅರಗಾಗು ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಪಕ್ಕಕ್ಕೆ ಸರಿ' ಎನ್ನುವ ಕೂಡು ಪದ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಅರಗಾಗು' ಎಂದು ಉಚ್ಚಾರಗೊಳ್ಳುವುದು. ದನಗುಳು ಬರ್ತಾವು 'ಅರಗಾಗು'.	ಅರಗಾಗು ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಪಕ್ಕಕ್ಕೆ ಸರಿ' ಎನ್ನುವ ಕೂಡು ಪದ ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ಅರಗಾಗು' ಎಂದು ಉಚ್ಚಾರಗೊಳ್ಳುವುದು. ದನಗುಳು ಬರ್ತಾವು 'ಅರಗಾಗು'.

ಪಕ್ಕಕ್ಕೆ ಸರಿದು ಹೋಗು	ಓಳುಮಾಡು	ಓಳುಮಾಡು	ಓಳುಮಾಡು
	ಬರಹಕನ್ನಡದಲ್ಲಿ ಬಳಕೆಗೊಳ್ಳುವ ‘ಪಕ್ಕಕ್ಕೆ ಸರಿದು’ ಹೋಗು ಎನ್ನುವ ಕೂಡು ಪದ ರೂಪ ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ ‘ಓಳುಮಾಡು’ ಎಂದು ಬಳಕೆಗೊಳ್ಳುವುದು.	ಬರಹಕನ್ನಡದಲ್ಲಿ ಬಳಕೆಗೊಳ್ಳುವ ‘ಪಕ್ಕಕ್ಕೆ ಸರಿದು’ ಹೋಗು ಎನ್ನುವ ಕೂಡು ಪದ ರೂಪ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ ‘ಓಳುಮಾಡು’ ಎಂದು ಬಳಕೆಗೊಳ್ಳುವುದು.	ಬರಹಕನ್ನಡದಲ್ಲಿ ಬಳಕೆಗೊಳ್ಳುವ ‘ಪಕ್ಕಕ್ಕೆ ಸರಿದು’ ಹೋಗು ಎನ್ನುವ ಕೂಡು ಪದ ರೂಪ ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ ‘ಓಳುಮಾಡು’ ಎಂದು ಬಳಕೆಗೊಳ್ಳುವುದು.
	‘ಓಳುಮಾಡಿ‘ ವೋಗ್.	‘ಓಳುಮಾಡಿ’ ವೋಗ್.	‘ಓಳುಮಾಡಿ’ ವೋಗ್.
ಬಿಡುವು	ವರ್ಪು	ವರ್ಪು	ವರ್ಪು
	ಬರಹಕನ್ನಡದಲ್ಲಿ ಬಳಕೆಗೊಳ್ಳುವ ‘ಬಿಡುವು’ ಪದ ರೂಪ ಮಸ್ಕಿಕನ್ನಡದ ಲಿಂಗಾಯತರಲ್ಲಿ ‘ವರ್ಪು’ ಎಂದು ಉಚ್ಚಾರಗೊಳ್ಳುವುದು ಈ ಪದ ಪ್ರಯೋಗವು ಮಳೆ ಬಂದು ನಿಂತ ಸಂದರ್ಭದಲ್ಲಿ ಬಳಸುತ್ತಾರೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ ‘ಬಿಡುವು’ ಪದ ರೂಪ ಮಸ್ಕಿಕನ್ನಡದ ನಾಯಕರಲ್ಲಿ ‘ವರ್ಪು’ ಎಂದು ಉಚ್ಚಾರಗೊಳ್ಳುವುದು. ಈ ಪದ ಪ್ರಯೋಗವು ಮಳೆ ಬಂದು ನಿಂತ ಸಂದರ್ಭದಲ್ಲಿ ಬಳಸುತ್ತಾರೆ.	ಬರಹಕನ್ನಡದಲ್ಲಿ ಬಳಕೆಗೊಳ್ಳುವ ‘ಬಿಡುವು’ ಪದ ರೂಪ ಮಸ್ಕಿಕನ್ನಡದ ಹರಿಜನರಲ್ಲಿ ‘ವರ್ಪು’ ಎಂದು ಉಚ್ಚಾರಗೊಳ್ಳುವುದು. ಈ ಪದ ಪ್ರಯೋಗವು ಮಳೆ ಬಂದು ನಿಂತ ಸಂದರ್ಭದಲ್ಲಿ ಬಳಸುತ್ತಾರೆ.
	ಮಳೆ ‘ವರಪಾದಂಗ’ ಕಾಣ್ತಾದ ವೋಗಾಮ ನಡಿ.	ಮಳೆ ‘ವರಪಾದಂಗ’ ಕಾಣ್ತಾದ ವೋಗಾಮ ನಡಿ.	ಮಳೆ ‘ವರಪಾದಂಗ’ ಕಾಣ್ತಾದ ವೋಗಾಮ ನಡಿ.
ಬಿಡುವು ಇಲ್ಲದೇ	ತೆರ್ಪು	ತೆರ್ಪು	ತೆರ್ಪು
	ಬರಹಕನ್ನಡದಲ್ಲಿ ‘ಬಿಡುವು ಇಲ್ಲದೇ’ ಎಂದು ಬಳಕೆಗೊಳ್ಳುವ ಪದ ರೂಪ ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ ‘ತೆರ್ಪು’ ಎಂದು ಉಚ್ಚಾರಗೊಳ್ಳುತ್ತಿದೆ.	ಬರಹಕನ್ನಡದಲ್ಲಿ ‘ಬಿಡುವು ಇಲ್ಲದೇ’ ಎಂದು ಬಳಕೆಗೊಳ್ಳುವ ಪದ ರೂಪ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ ‘ತೆರ್ಪು’ ಎಂದು ಉಚ್ಚಾರಗೊಳ್ಳುತ್ತಿದೆ.	ಬರಹಕನ್ನಡದಲ್ಲಿ ‘ಬಿಡುವು ಇಲ್ಲದೇ’ ಎಂದು ಬಳಕೆಗೊಳ್ಳುವ ಪದ ರೂಪ ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ ‘ತೆರ್ಪು’ ಎಂದು ಉಚ್ಚಾರಗೊಳ್ಳುತ್ತಿದೆ.

	ಈ ಪದವನ್ನು ಮಳೆಯು ಅಥವಾ ಇನ್ನಾವುದು ಆಗಲಿ ಒಂದೇ ಸಮನೆ ಬಿಡುವು ಇಲ್ಲದೇ ಬರುತ್ತಿರುವ ಸಂದರ್ಭ ದಲ್ಲಿ ಈ ಪದ ಬಳಕೆ ಕಾಣಬಹುದು. ಮಳಿ 'ತೆರ್ಪು' ಇಲ್ದಂಗ ಬರಕತ್ತೈಯ್ತಿ.	ಈ ಪದವನ್ನು ಮಳೆಯು ಅಥವಾ ಇನ್ನಾವುದು ಆಗಲಿ ಒಂದೇ ಸಮನೆ ಬಿಡುವು ಇಲ್ಲದೇ ಬರುತ್ತಿರುವ ಸಂದರ್ಭ ದಲ್ಲಿ ಈ ಪದ ಬಳಕೆ ಕಾಣಬಹುದು. ಮಳಿ 'ತೆರ್ಪು' ಇಲ್ದಂಗ ಬರಕತ್ತೈಯ್ತಿ.	ಈ ಪದವನ್ನು ಮಳೆಯು ಅಥವಾ ಇನ್ನಾವುದು ಆಗಲಿ ಒಂದೇ ಸಮನೆ ಬಿಡುವು ಇಲ್ಲದೇ ಬರುತ್ತಿರುವ ಸಂದರ್ಭ ದಲ್ಲಿ ಈ ಪದ ಬಳಕೆ ಕಾಣಬಹುದು. ಮಳಿ 'ತೆರ್ಪು' ಇಲ್ದಂಗ ಬರಕತ್ತೈಯ್ತಿ.
ದಡ್ಡ	**ತೊರ್ಗ** ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ದಡ್ಡ' ಪದ ರೂಪ ಮಸ್ಕಿಕನ್ನಡದ ಲಿಂಗಾಯತರ ಉಚ್ಚಾರದಲ್ಲಿ 'ತೊರ್ಗ' ಎಂದು ಆಗುತ್ತದೆ. ಈ ಪದವನ್ನು ವ್ಯಕ್ತಿ ಸಂಬೋಧನೆಯಲ್ಲಿ ಕಾಣಬಹುದು. ಅವನ್ ಬಾಳಾ 'ತೊರ್ಗ' ಅದಾನ.	**ತ್ವರ್ಗ** ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ದಡ್ಡ' ಪದ ರೂಪ ಮಸ್ಕಿಕನ್ನಡದ ನಾಯಕರ ಉಚ್ಚಾರಣೆಯಲ್ಲಿ 'ತ್ವರ್ಗ' ಎಂದು ಆಗುತ್ತದೆ. ಈ ಪದವನ್ನು ವ್ಯಕ್ತಿ ಸಂಬೋಧನಯಲ್ಲಿ ಕಾಣಬಹುದು. ಅವ್ನ ಬಾಳಾ 'ತ್ವರ್ಗ' ಅದಾನ.	**ತ್ವರ್ಗ** ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ದಡ್ಡ' ಪದ ರೂಪ ಮಸ್ಕಿಕನ್ನಡದ ಹರಿಜನರ ಉಚ್ಚಾರಣೆಯಲ್ಲಿ 'ತ್ವರ್ಗ' ಎಂದು ಆಗುತ್ತದೆ. ಈ ಪದವನ್ನು ವ್ಯಕ್ತಿ ಸಂಬೋಧನೆಯಲ್ಲಿ ಕಾಣಬಹುದು. ಅವ್ನ ಬಾಳಾ 'ತ್ವರ್ಗ' ಅದಾನ.
ಸಡಿಲು	**ಸಡ್ಲ/ಸೈಲು** ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಸಡಿಲು' ಪದ ರೂಪ ಮಸ್ಕಿಕನ್ನಡದ ಲಿಂಗಾಯತರಲ್ಲಿ 'ಸಡ್ಲ' ಎಂದು ಬಳಕೆಗೊಳ್ಳುತ್ತದೆ. ಇಂಗಾ 'ಸಡ್ಲ' ಬಿಟ್ರ ಮ್ಯಾಕ ವೋಗ್ತಾನ.	**ಸಡ್ಲ/ಸೈಲು** ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಸಡಿಲು' ಪದ ರೂಪ ಮಸ್ಕಿಕನ್ನಡದ ನಾಯಕರಲ್ಲಿ 'ಸಡ್ಲ' ಎಂದು ಬಳಕೆಗೊಳ್ಳುತ್ತದೆ. ಇಂಗಾ 'ಸಡ್ಲ' ಬಿಟ್ರ ಮ್ಯಾಕ ವೋಗ್ತಾನ.	**ಸಡ್ಲ/ಸೈಲು** ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಸಡಿಲು' ಪದ ರೂಪ ಮಸ್ಕಿಕನ್ನಡದ ಹರಿಜನರಲ್ಲಿ 'ಸಡ್ಲ' ಎಂದು ಬಳಕೆಗೊಳ್ಳುತ್ತದೆ. ಇಂಗಾ 'ಸಡ್ಲ' ಬಿಟ್ರ ಮ್ಯಾಕ ವೋಗ್ತಾನ.

ನೆಮ್ಮದಿ	ಆಳಾರ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ನೆಮ್ಮದಿ' ಪದ ರೂಪ ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಅಳಾರ' ಎಂದು ಬಳಕೆ ಗೊಳ್ಳುವುದನ್ನು ಗಮನ ಸಬಹುದು. ಮನಸ್ಸಿಗೆ ನೆಮ್ಮದಿ ಸಿಕ್ಕಾಗ ಇಂಥ 'ಅಳಾರ' ಪದ ಬಳಕೆಯನ್ನು ಕಾಣಬಹುದು. ಈಗ ಮನಸ್ಸಿಗೆ 'ಅಳಾರಾತು' ನೋಡ್.	ಅಳಾರ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ನೆಮ್ಮದಿ' ಪದ ರೂಪ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಅಳಾರ' ಎಂದು ಬಳಕೆ ಗೊಳ್ಳುವುದನ್ನು ಗಮನ ಸಬಹುದು. ಮನಸ್ಸಿಗೆ ನೆಮ್ಮದಿ ಸಿಕ್ಕಾಗ ಇಂಥ 'ಅಳಾರ' ಪದ ಬಳಕೆಯನ್ನು ಕಾಣಬಹುದು. ಈಗ ಮನಸ್ಸಿಗೆ 'ಅಳಾರಾತು' ನೋಡ್.	ಅಳಾರ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ನೆಮ್ಮದಿ' ಪದ ರೂಪ ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ಅಳಾರ' ಎಂದು ಬಳಕೆ ಗೊಳ್ಳುವುದನ್ನು ಗಮನ ಸಬಹುದು. ಮನಸ್ಸಿಗೆ ನೆಮ್ಮದಿ ಸಿಕ್ಕಾಗ ಇಂಥ 'ಅಳಾರ' ಪದ ಬಳಕೆಯನ್ನು ಕಾಣಬಹುದು. ಈಗ ಮನಸ್ಸಿಗೆ ಅಳಾರಾತು ನೋಡ್.
ಸೊಕ್ಕು	ತ್ಯಗುವು ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಸೊಕ್ಕು' ಪದ ರೂಪ ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ತ್ಯಗುವು' ಎಂದು ಉಚ್ಚಾರ ಗೊಳ್ಳುತ್ತದೆ. ಅವ್ನಿಗೆ ಏಟ 'ತ್ಯಗುವು' ಅಯ್ತಿ.	ತ್ಯಗ್ಬು ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಸೊಕ್ಕು' ಪದ ರೂಪ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ತ್ಯಗ್ಬು' ಎಂದು ಉಚ್ಚಾರ ಗೊಳ್ಳುತ್ತದೆ. ಅವ್ನಿಗೆ ಏಟ್ 'ತ್ಯಗ್ಬು' ಅಯ್ತಿ.	ತ್ಯಗ್ಬು ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಸೊಕ್ಕು' ಪದ ರೂಪ ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ತ್ಯಗ್ಬು' ಎಂದು ಉಚ್ಚಾರ ಗೊಳ್ಳುತ್ತದೆ. ಅವ್ನಿಗೆ ಏಟಂ 'ತ್ಯಗ್ಬು' ಅಯ್ತಿ.
ಬಿಡು	ಬುಡು ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಬಿಡು' ಪದ ಮಸ್ಕಿಕನ್ನಡದ ಲಿಂಗಾಯತರಲ್ಲಿ 'ಬುಡು' ಎಂದು ಉಚ್ಚಾರಗೊಳ್ಳುತ್ತಿದೆ. ಈ ಪದದಲ್ಲಿ ಪದಾದಿಯಲ್ಲಿ 'ಇ' ಕಾರವು ಲೋಪಗೊಂಡು	ಬುಡು ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಬಿಡು' ಪದ ಮಸ್ಕಿಕನ್ನಡದ ನಾಯಕ ರಲ್ಲಿ 'ಬುಡು' ಎಂದು ಉಚ್ಚಾರಗೊಳ್ಳುತ್ತಿದೆ. ಈ ಪದದಲ್ಲಿ ಪದಾದಿಯಲ್ಲಿ 'ಇ' ಕಾರವು ಲೋಪಗೊಂಡು	ಬುಡು ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಬಿಡು' ಪದ ಮಸ್ಕಿಕನ್ನಡದ ಹರಿಜನ ರಲ್ಲಿ 'ಬುಡು' ಎಂದು ಉಚ್ಚಾರಗೊಳ್ಳುತ್ತಿದೆ. ಈ ಪದದಲ್ಲಿ ಪದಾದಿಯಲ್ಲಿ 'ಇ' ಕಾರವು ಲೋಪಗೊಂಡು

	‘ಉ’ ಕಾರ ಬಳಕೆಗೊಳ್ಳು ವುದನ್ನು ಇಲ್ಲಿ ಗಮನಿಸಬಹುದು. ಅಕ್ಕುನ್ನ ಊರಿಗೆ ಬುಡು.	‘ಉ’ ಕಾರ ಬಳಕೆಗೊಳ್ಳು ವುದನ್ನು ಇಲ್ಲಿ ಗಮನಿಸಬಹುದು. ಅಕ್ಕುನ್ನ ಊರ್ಗಿ ಬುಡು.	‘ಉ’ ಕಾರ ಬಳಕೆಗೊಳ್ಳು ವುದನ್ನು ಇಲ್ಲಿ ಗಮನಿಸಬಹುದು. ಅಕ್ಕುನ್ನ ಊರ್ಗಿ ಬುಡು.
ಭಾರ	ವಲವು/ವಜ್ಜಿ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ ‘ಭಾರ’ ಪದವು ಮಸ್ಕಿಕನ್ನಡದ ಲಿಂಗಾಯತರಲ್ಲಿ ‘ವಲವು’, ‘ವಜ್ಜಿ’ ಎಂದು ಬಳಕೆ ಗೊಳ್ಳುವುದು. ಏಟೊಂದು ‘ವಲುವು’ ಅಯ್ತು.	ವಲವು/ವಜ್ಜಿ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ ‘ಭಾರ’ ಪದವು ಮಸ್ಕಿಕನ್ನಡದ ನಾಯಕರಲ್ಲಿ ‘ವಲವು’, ‘ವಜ್ಜಿ’ ಎಂದು ಬಳಕೆ ಗೊಳ್ಳುವುದು. ಏಟೊಂದು ‘ವಲುವು’ ಅಯ್ತು.	ವಲವು/ವಜ್ಜಿ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ ‘ಭಾರ’ ಪದ ಮಸ್ಕಿಕನ್ನಡದ ಹರಿಜನರಲ್ಲಿ ‘ವಲವು’, ‘ವಜ್ಜಿ’ ಎಂದು ಬಳಕೆ ಗೊಳ್ಳುವುದು. ಏಟೊಂದು ‘ವಲುವು’ ಅಯ್ತು.
ಬಹಳ	ಬಾಳಾ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ ‘ಬಹಳ’ ಪದ ರೂಪ ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ ‘ಬಾಳಾ’ ಎಂದು ಬಳಕೆಯಲ್ಲಿದೆ. ಮನಿಗೆ ‘ಬಾಳಾ’ ಮಂದಿ ಬಂದಾರ.	ಬಾಳಾ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ ‘ಬಹಳ’ ಪದ ರೂಪ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ ‘ಬಾಳಾ’ ಎಂದು ಬಳಕೆಯಲ್ಲಿದೆ. ಮನಿಗೆ ‘ಬಾಳಾ’ ಮಂದಿ ಬಂದಾರ.’	ಬಾಳ ಬರಹಕನ್ನಡದಲ್ಲಿ ಬಳಕೆ ಗೊಳ್ಳುವ ‘ಬಹಳ’ ಪದ ರೂಪ ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ ‘ಬಾಳಾ’ ಎಂದು ಬಳಕೆಯಲ್ಲಿದೆ. ಮನಿಗೆ ‘ಬಾಳಾ’ ಮಂದಿ ಬಂದಾರ.
ಬೆಳಕಿನ ಕಿಂಡಿ	ಗಬಾಕ್ಷಿ/ಗವಾಂಚಿ ಮನೆಯಲ್ಲಿ ಬೆಳಕಿಗಾಗಿ ಬಿಟ್ಟಿರುವ ‘ಬೆಳಕಿನ ಕಿಂಡಿ’ ಕೂಡು ಪದ ಬರಹಕನ್ನಡ ರೂಪವು ಮಸ್ಕಿಕನ್ನಡದ	ಗಬಾಕ್ಷಿ/ಗವಾಂಚಿ ಮನೆಯಲ್ಲಿ ಬೆಳಕಿಗಾಗಿ ಬಿಟ್ಟಿರುವ ‘ಬೆಳಕಿನ ಕಿಂಡಿ’ ಕೂಡು ಪದ ಬರಹಕನ್ನಡ ರೂಪವು ಮಸ್ಕಿಕನ್ನಡದ	ಗಬಾಕ್ಷಿ/ಗವಾಂಚಿ ಮನೆಯಲ್ಲಿ ಬೆಳಕಿಗಾಗಿ ಬಿಟ್ಟಿರುವ ‘ಬೆಳಕಿನಕಿಂಡಿ’ ಕೂಡು ಪದ ಬರಹಕನ್ನಡ ರೂಪವು ಮಸ್ಕಿಕನ್ನಡದ

	ಲಿಂಗಾಯತರ ಮಾತಿನಲ್ಲಿ 'ಗಬಾಕ್ಲಿ' ಹಾಗೂ 'ಗವಾಂಚಿ' ಎಂದು ಎರಡು ರೀತಿಯಲ್ಲಿ ಬಳಕೆಗೊಳ್ಳುವುದು	ನಾಯಕರ ಮಾತಿನಲ್ಲಿ 'ಗಬಾಕ್ಲಿ' ಹಾಗೂ 'ಗವಾಂಚಿ' ಎಂದು ಎಂದು ಎರಡು ರೀತಿಯಲ್ಲಿ ಬಳಕೆಗೊಳ್ಳುವುದು	ಹರಿಜನರ ಮಾತಿನಲ್ಲಿ 'ಗಬಾಕ್ಲಿ' ಹಾಗೂ 'ಗವಾಂಚಿ' ಎಂದು ಎರಡು ರೀತಿಯಲ್ಲಿ ಬಳಕೆಗೊಳ್ಳುವುದು.
	ಮಳಿ ಬರ್ತಾದ 'ಗಬಾಕ್ಲಿ' ಮುಚ್ಚಿ ಬಾ ಇಲ್ಲಂದ್ರ ಮನೆಲ್ಲ ನೀರ್‌ತಾವ.	ಮಳಿ ಬರ್ತಾದ 'ಗಬಾಕ್ಲಿ' ಮುಚ್ಚಿ ಬಾ ಇಲ್ಲಂದ್ರ ಮನೆಲ್ಲ ನೀರ್‌ತಾವ.	ಮಳಿ ಬರ್ತಾದ 'ಗಬಾಕ್ಲಿ' ಮುಚ್ಚಿ ಬಾ ಇಲ್ಲಂದ್ರ ಮನೆಲ್ಲ ನೀರ್‌ತಾವ.
ಸೋರುತ್ತವೆ	**ನೀರ್‌ತಾವ**	**ನೀರ್‌ತಾವ**	**ನೀರ್‌ತಾವ**
	ಬರಹಕನ್ನಡದಲ್ಲಿ ಬಳಕೆಗೊ ಳ್ಳುವ 'ಸೋರುತ್ತವೆ' ಎಂಬ ಪದ ರೂಪ ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ನೀರ್‌ತಾವ' ಎಂದು ಬಳಕೆ ಗೊಳ್ಳುತ್ತವೆ.	ಬರಹಕನ್ನಡದಲ್ಲಿ ಬಳಕೆಗೊ ಳ್ಳುವ 'ಸೋರುತ್ತವೆ' ಎಂಬ ಪದ ರೂಪ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ನೀರ್‌ತಾವ' ಎಂದು ಬಳಕೆ ಗೊಳ್ಳುತ್ತವೆ.	ಬರಹಕನ್ನಡದಲ್ಲಿ ಬಳಕೆಗೊ ಳ್ಳುವ 'ಸೋರುತ್ತವೆ' ಎಂಬ ಪದ ರೂಪ ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ನೀರ್‌ತಾವ' ಎಂದು ಬಳಕೆ ಗೊಳ್ಳುತ್ತವೆ.
	ಜಿನಿಗು ಮಳಿ ಬಂದ್ರ ಮನಿ 'ನೀರ್‌ತಾವ'.	ಜಿನಿಗು ಮನಿ ಬಂದ್ರ ಮನಿ 'ನೀರ್‌ತಾವ'.	ಜಿನಿಗು ಮಳಿ ಬಂದ್ರ ಮನಿ 'ನೀರ್‌ತಾವ'.
ಇಲ್ಲಅಂದರೆ	**ಇಲ್ಕಂದ್ರ**	**ಇಲ್ಕಂದ್ರ**	**ಇಲ್ಕಂದ್ರ**
	ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಇಲ್ಲಅಂದರೆ' ಕೂಡು ಪದ ಮಸ್ಕಿಕನ್ನಡದ ಲಿಂಗಾಯತರಲ್ಲಿ 'ಇಲ್ಕಂದ್ರ' ಎಂದು ಉಚ್ಚಾರಣೆಯಲ್ಲಿದೆ.	ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಇಲ್ಲಅಂದರೆ' ಕೂಡು ಪದ ಮಸ್ಕಿಕನ್ನಡದ ನಾಯಕರಲ್ಲಿ 'ಇಲ್ಕಂದ್ರ' ಎಂದು ಉಚ್ಚಾರಣೆಯಲ್ಲಿದೆ.	ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಇಲ್ಲಅಂದರೆ' ಕೂಡು ಪದ ಮಸ್ಕಿಕನ್ನಡದ ಹರಿಜನರಲ್ಲಿ 'ಇಲ್ಕಂದ್ರ' ಎಂದು ಉಚ್ಚಾರಣೆಯಲ್ಲಿದೆ.
	ರೃಕ್ಕ ಕ್ಟಟ್ರ ಇಸ್ಕ 'ಇಲ್ಕಂದ್ರ' ನಾ ಬಂದ ಕೇಳ್ತೀನಿ.	ರೃಕ್ಕ ಕ್ಟಟ್ರ ಇಸ್ಕ 'ಇಲ್ಕಂದ್ರ' ನಾ ಬಂದ ಕೇಳ್ತೀನಿ.	ರೃಕ್ಕ ಕ್ಟಟ್ರ ಇಸ್ಕ 'ಇಲ್ಕಂದ್ರ' ನಾ ಬಂದ ಕೇಳ್ತೀನಿ.
ಇಷ್ಟಪಟ್ಟು	**ಬಗಸಿ**	**ಬಗಸಿ**	**ಬಗಸಿ**
	ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಇಷ್ಟಪಟ್ಟು'	ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಇಷ್ಟಪಟ್ಟು'	ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಇಷ್ಟಪಟ್ಟು'

	ಪದ ರೂಪ ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಬಗಸಿ' ಎಂದು ಬಳಕೆ ಗೊಳ್ಳುತ್ತದೆ. ಅಕಿ 'ಬಗಸಿ' ತಿನ್ನಾಕತ್ತ್ಯಾಳ.	ಪದ ರೂಪ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಬಗಸಿ' ಎಂದು ಬಳಕೆ ಗೊಳ್ಳುತ್ತದೆ. ಅಕಿ 'ಬಗಸಿ' ತಿನ್ನಕತ್ತ್ಯಾಳ.	ಪದ ರೂಪ ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ಬಗಸಿ' ಎಂದು ಬಳಕೆ ಗೊಳ್ಳುತ್ತದೆ. ಅಕಿ 'ಬಗಸಿ' ತಿನ್ನಕತ್ತ್ಯಾಳ.
ಕಾಳಜಿ	ಕಾವಜಿ 'ಕಾಳಜಿ' ಎಂಬ ಬರಹ ಕನ್ನಡದ ಪದವು ಮಸ್ಕಿ ಕನ್ನಡದ ಲಿಂಗಾಯತರ ಮಾತಿನಲ್ಲಿ 'ಕಾವಜಿ' ಎಂದು ಬಳಕೆಗೊಳ್ಳುತ್ತದೆ. 'ಳ' ಕಾರ ಲೋಪಗೊಂಡು 'ವ' ಕಾರ ಆಗಮಿಸಿರುರುವುದನ್ನು ಗಮನಿಸಬಹುದಾಗಿದೆ. ಮಗನ ಬಗ್ಗೆ ಸ್ವಲ್ಪುನೂ 'ಕಾವಜಿ' ಇಲ್ಲ.	ಕಾವಜಿ 'ಕಾಳಜಿ' ಎಂಬ ಬರಹ ಕನ್ನಡದ ಪದವು ಮಸ್ಕಿ ಕನ್ನಡದ ನಾಯಕರ ಮಾತಿನಲ್ಲಿ 'ಕಾವಜಿ' ಎಂದು ಬಳಕೆಗೊಳ್ಳುತ್ತದೆ. 'ಳ' ಕಾರ ಲೋಪಗೊಂಡು 'ವ' ಕಾರ ಆಗಮಿಸಿರುವುದನ್ನು ಗಮನಿಸಬಹುದಾಗಿದೆ. ಮಗನ ಬಗ್ಗೆ ಸ್ವಲ್ಪುನೂ 'ಕಾವಜಿ' ಇಲ್ಲ.	ಕಾವಜಿ 'ಕಾಳಜಿ' ಎಂಬ ಬರಹ ಕನ್ನಡದ ಪದವು ಮಸ್ಕಿ ಕನ್ನಡದ ಹರಿಜನರ ಮಾತಿನಲ್ಲಿ 'ಕಾವಜಿ' ಎಂದು ಬಳಕೆಗೊಳ್ಳುತ್ತದೆ. 'ಳ' ಕಾರ ಲೋಪಗೊಂಡು 'ವ' ಕಾರ ಆಗಮಿಸಿರುವುದನ್ನು ಗಮನಿಸಬಹುದಾಗಿದೆ. ಮಗನ ಬಗ್ಗೆ ಸ್ವಲ್ಪುನೂ 'ಕಾವಜಿ' ಇಲ್ಲ.
ಸೆಕೆ	ಕುದಿ/ಉಮ್ರು ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಸೆಕೆ' ಪದ ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಕುದಿ ಉಮ್ರು' ಎಂದು ಎರಡು ರೀತಿಯಲ್ಲಿ ಬಳಕೆಯಲ್ಲಿದೆ. 'ಉಮ್ರು' ಬಾಳಾ, ಅಯ್ತಿ ಮಳಿ ಬಂದ್ರ ಬರ್‌ಬೋದ್.	ಕುದಿ/ಉಮ್ರು ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಸೆಕೆ' ಪದ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಕುದಿ', 'ಉಮ್ರು' ಎಂದು ಎರಡು ರೀತಿಯಲ್ಲಿ ಬಳಕೆಯಲ್ಲಿದೆ. 'ಉಮ್ರು' ಬಾಳಾ, ಅಯ್ತಿ ಮಳಿ ಬಂದ್ರ ಬರ್‌ಬೋದ್.	ಕುದಿ/ಉಮ್ರು ಬರಹಕನ್ನಡದಲ್ಲಿ ಬಳಕೆ ಗೊಳ್ಳುವ 'ಸೆಕೆ' ಪದ ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ಕುದಿ', 'ಉಮ್ರು' ಎಂದು ಎರಡು ರೀತಿಯಲ್ಲಿ ಬಳಕೆಯಲ್ಲಿದೆ. 'ಉಮ್ರು' ಬಾಳ, ಅಯ್ತಿ ಮಳಿ ಬಂದ್ರ ಬರ್‌ಬೋದ್.
ಉಳಿದುಕೊಳ್ಳು	ಮಕ್ಕಾಂ 'ಉಳಿದುಕೊಳ್ಳು' ಎನ್ನುವ ಬರಹಕನ್ನಡದ ಪದ ರೂಪ	ಮಕ್ಕಾಂ 'ಉಳಿದುಕೊಳ್ಳು' ಎನ್ನುವ ಬರಹಕನ್ನಡದ ಪದ ರೂಪ	ಮಕ್ಕಾಂ 'ಉಳಿದುಕೊಳ್ಳು' ಎನ್ನುವ ಬರಹಕನ್ನಡದ ಪದ ರೂಪ

	ಮಸ್ಕಿಕನ್ನಡದ ಲಿಂಗಾಯತರಲ್ಲಿ 'ಮಕ್ಕಾಂ' ಎಂದು ಬಳಕೆಯಲ್ಲಿದೆ. ಇವತ್ ಬೀಗರ ಮನ್ಯಾಗ 'ಮಕ್ಕಾಂ' ಊಡಿ ನಾಳೆ ನಮ್ ಊರಿಗೆ ವೋಗಾಮ.	ಮಸ್ಕಿಕನ್ನಡದ ನಾಯಕರಲ್ಲಿ 'ಮಕ್ಕಾಂ' ಎಂದು ಬಳಕೆಯಲ್ಲಿದೆ. ಇವತ್ ಬೀಗರ ಮನ್ಯಾಗ 'ಮಕ್ಕಾಂ' ಊಡಿ ನಾಳೆ ನಮ್ ಊರ್ಗೆ ವೋಗಾಮ.	ಮಸ್ಕಿಕನ್ನಡದ ಹರಿಜನರಲ್ಲಿ 'ಮಕ್ಕಾಂ' ಎಂದು ಬಳಕೆಯಲ್ಲಿದೆ. ಇವತ್ ಬೀಗರ ಮನ್ಯಾಗ 'ಮಕ್ಕಾಂ' ಊಡಿ ನಾಳೆ ನಮ್ ಊರ್ಗೆ ವೋಗಾಮ.
ಸ್ಪಷ್ಟ	**ಸಸುವು** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಸ್ಪಷ್ಟ' ಪದ ಬಳಕೆ ಮಸ್ಕಿಕನ್ನಡದ ಲಿಂಗಾಯತರ ಮಾತಿನಲ್ಲಿ 'ಸಸುವು' ಎಂದು ಉಚ್ಚಾರಗೊಳ್ಳುವುದು. ಆ ಉಡ್‌ಗುಂದು ಬಾಯಿ ಏಟ್ 'ಸಸುವೈತಿ' ಏಟ್ ಚಂದ ಮಾತಾಡ್ತದ.	**ಸಸುವು** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಸ್ಪಷ್ಟ' ಪದ ಬಳಕೆ ಮಸ್ಕಿಕನ್ನಡದ ನಾಯಕರ ಮಾತಿನಲ್ಲಿ 'ಸಸುವು' ಎಂದು ಉಚ್ಚಾರಗೊಳ್ಳುವುದು ಆ ಉಡ್‌ಗುಂದು ಬಾಯಿ ಏಟ್ 'ಸಸುವೈತಿ' ಏಟ್ ಚಂದ ಮಾತಾಡ್ತದ.	**ಸಸುವು** ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಸ್ಪಷ್ಟ' ಪದ ಬಳಕೆ ಮಸ್ಕಿಕನ್ನಡದ ಹರಿಜನರ ಮಾತಿನಲ್ಲಿ 'ಸಸುವು' ಎಂದು ಉಚ್ಚಾರಗೊಳ್ಳುವುದು. ಆ ಉಡ್‌ಗುಂದು ಬಾಯಿ ಏಟ್ 'ಸಸುವೈತಿ' ಏಟ್ ಚಂದ ಮಾತಾಡ್ತದ.

ಅಧ್ಯಾಯ ೮

ಮಸ್ಕಿಕನ್ನಡದ ಪದಕೋಶ

ಅಧ್ಯಾಯ ೮

ಮಸ್ಕಿಕನ್ನಡದ ಪದಕೋಶ

ಮಸ್ಕಿಪರಿಸರದಲ್ಲಿ ಬಳಸುವ ಕನ್ನಡವನ್ನು ಬರಹಕನ್ನಡದೊಂದಿಗೆ ತುಲನೆ ಮಾಡಿದಾಗ ಬರಹ ಕನ್ನಡಕ್ಕಿಂತ ಭಿನ್ನವಾಗಿದೆ. ಈ ಪದಕೋಶದಲ್ಲಿ ದೇಶ್ಯ, ಅನ್ಯ ದೇಶ್ಯ ಹಾಗೂ ಸ್ವೀಕೃತಗಳೆಂದು ಗುರುತಿಸದೇ ಸಂಗ್ರಹಿಸಿದಂತೆ ದಾಖಲಿಸಿದೆ. ಬಳಕೆಯ ಹಿನ್ನೆಲೆಯನ್ನು ಆಧರಿಸಿ ಪ್ರಧಾನ ಗುಂಪುಗಳನ್ನಾಗಿ ವಿಂಗಡಿಸಿ ನಿದರ್ಶನಗಳನ್ನು ಪಟ್ಟಿಮಾಡಿದೆ. ಅವು ಈ ರೀತಿ ಇವೆ.

೧. ಬಂಧುತ್ವ ಸೂಚಕಪದಗಳು

೨. ಜಾತಿ ಮತ್ತು ವೃತ್ತಿಸೂಚಕ ಪದಗಳು

೩. ಮಾನವ ದೇಹದ ಸಂಬಂಧ ಸೂಚಕ ಪದಗಳು

೪. ಪ್ರಾಣಿ-ಪಕ್ಷಿ-ಕೀಟ ಸಂಬಂಧಿಸಿದ ಸೂಚಕ ಪದಗಳು

೫. ಸಂಖ್ಯಾಸೂಚಕ ಪದಗಳು

೬. ಹವಾಮಾನ ಸೂಚಕ ಪದಗಳು

೭. ಆಭರಣ ಸೂಚಕ ಪದಗಳು

೮. ಕೃಷಿ, ಗಿಡ ಇತ್ಯಾದಿ ಸೂಚಕ ಪದಗಳು

೯. ಆಹಾರ ಸೂಚಕ ಪದಗಳು

೧೦. ಸಾಮಾನ್ಯವಾಚಕ, ಸರ್ವನಾಮ, ಕ್ರಿಯಾವಾಚಕ, ಗುಣವಾಚಕ, ಇತ್ಯಾದಿ ಪದಗಳು.

೦೧. ಬಂಧುತ್ವಸೂಚಕ ಪದಗಳು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಅಕ್ಕ	ಅಕ್ಕ	ಯಕ್ಕ	ಯಕ್ಕ
ಅಜ್ಜ	ತಾತ	ಅಜ್ಜ/ಮುತ್ತ್ಯಾ	ಅಜ್ಜ/ಮುತ್ತ್ಯಾ

ಅಜ್ಜಿ	ಅಜ್ಜಿ	ಅಜ್ಜಿ/ಅಬ್ಬೆ	ಅಜ್ಜಿ/ಅಬ್ಬೆ
ಅತ್ತಿಗೆ	ಅತ್ತಿಗಿ/ವೈನಿ	ಅತ್ತಿಗಿ	ಅತ್ತಿಗಿ
ಅತ್ತೆ	ಅತ್ತಿ	ಅತ್ತಿ	ಅತ್ತಿ
ಅಣ್ಣ	ಅಣ್ಣ	ಯಣ್ಣ	ಯಣ್ಣ
ಅಳಿಯ	ಅಳಿಯ	ಅಳ್ಯಾ	ಅಳ್ಯಾ
ಗಂಡ	ಗಂಡ	ಗಂಡ	ಗಂಡ
ಚಿಕ್ಕಪ್ಪ	ಚಿಗಪ	ಕಕ್ಕ/ಚಿಗಪ	ಕಕ್ಕ/ಚಿಗಪ
ಚಿಕ್ಕಮ್ಮ	ಚಿಗಮ	ಸಣವ/ಚಿಗವ	ಸಣವ/ಚಿಗವ
ತಂದೆ	ಅಪ್ಪ	ಅಪ್ಪ/ಯಪ್ಪ	ಯಪ್ಪ
ತಾಯಿ	ಅವ್ವ	ಅವ್ವ/ಯವ್ವ	ಯವ್ವ
ನಾದಿನಿ	ನಾದಿನಿ	ನಾದ್ನಿ	ನಾದ್ನಿ
ದೊಡ್ಡಪ್ಪ	ದೊಡಪ	ದ್ವಡಪ	ದ್ವಡಪ
ದೊಡ್ಡಮ್ಮ	ದೊಡಮ	ದ್ವಡವ	ದ್ವಡವ
ನೆಗಣ್ಣಿ	ನೆಗನ್ನಿ	ನೆಗನ್ನಿ	ನೆಗನ್ನಿ
ಬೀಗ	ಬೀಗ	ಬೀಗ	ಬೀಗ
ಬೀಗತಿ	ಬೀಗತಿ	ಬೀಗ್ತಿ	ಬೀಗ್ತಿ
ಮಗ	ಮಗ	ಮಗಾ	ಮಗಾ
ಮಗು	ಮಗು	ಮಗು/ಕೂಸು	ಮಗು/ಕೂಸು
ಮಗಳು	ಮಗಳ	ಮಗ್ಳು	ಮಗ್ಳು
ಮಾವ	ಮಾವ	ಮಾವ	ಮಾವ
ಮಲತಾಯಿ	ಮಲತಾಯಿ	ಮಲ್ತಾಯಿ	ಮಲ್ತಾಯಿ
ಮೊಮ್ಮಗ	ಮಮ್ಮಗ	ಮಮ್ಗ	ಮಮ್ಗ
ಮೊಮ್ಮಗಳು	ಮಮ್ಮಗಳು	ಮಮ್ಮಗ್ಳು	ಮಮಗ್ಳು
ಮೈದುನ	ಮೈದು	ಮಯದುನ	ಮಯದುನ
ಸೊಸೆ	ಸೊಸಿ	ಸ್ವಸಿ	ಸ್ವಸಿ

೦೨. ಜಾತಿ ಮತ್ತು ವೃತ್ತಿ ಸೂಚಕ ಪದಗಳು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಅಕ್ಕಸಾಲಿಗರು	ಅಕ್ಸಾಲರು	ಅಕ್ಸಾಲರು/ಅಕ್ಕಾಲ್ರು	ಅಕ್ಸಾಲ್ರು/ಅಕ್ಕಾಲ್ರು

ಕಮ್ಮಾರ	ಕಂಬಾರ	ಕಂಬಾರ	ಕಂಬಾರ
ಗಾರೆ ಕೆಲಸದವರು	ವಡ್ಡರು	ವಡ್ಡರು	ವಡ್ರು
ಗ್ರಾಹಕರು	ಗಿರಾಕಿಗಳು	ಗಿರಾಕಿಗಳು	ಗಿರಾಕಿಗಳು
ನಾಯಕ/ಬೇಡರು	ಬ್ಯಾಡ್ರು	ಬ್ಯಾಡ್ರು	ಬ್ಯಾಡ್ರು
ಪಟೇಲ	ಪಾಟೀಲ	ಪಾಟೀಲ	ಪಾಟೀಲ
ಪೂಜಾರಿ	ಪೂಜಾರಿ	ಸ್ವಾಮ್ನಾರು	ಸ್ವಾಮ್ನಾರು
ಬಟ್ಟೆ ನೇಯುವವ	ನೇಕಾರ	ನೇಕಾರ	ನೇಕಾರ
ಬಡಿಗರು	ಬಡಿಗೇರು	ಬಡಿಗೇರ್	ಬಡಿಗೇರ್
ಬ್ರಾಹ್ಮಣ	ಬ್ರಾಮ್ಮನ	ಬ್ರಾಂಬ್ರು	ಬ್ರಾಂಬ್ರು
ಮಡಿವಾಳ	ಅಗಸ/ಮಡಿವಾಳ	ಅಗಸ	ಅಗಸ
ಮುಚುಗರು	ಮೋಚಿಯರು	ಮೋಚ್ಯಾರು	ಮೋಚ್ಯಾರು
ಮೂರ್ತಿಮಾಡುವವರು	ಪಾಂಚಾಳರು	ಪಾಂಚಾಳ್ರು	ಪಾಂಚಾಳ್ರು
ಮೇದರು	ಮ್ಯಾದಾರ	ಮ್ಯಾದ್ರ	ಮ್ಯಾದ್ರ
ಲಿಂಗಾಯತರು	ಲಿಂಗಾಯತರು	ನಿಂಗಾಯತ್ರು	ನಿಂಗಾಯತ್ರು
ಶೆಟ್ಟರು	ಸೆಟ್ರು	ಸ್ಯಟ್ರು	ಸ್ಯಟ್ರು

೦೩. ಮಾನವ ದೇಹದ ಸಂಬಂಧ ಪದಗಳು

ಬರಹ ಕನ್ನಡ	**ಲಿಂಗಾಯತ**	**ನಾಯಕ**	**ಹರಿಜನ**
ಎಲುಬು	ಯಲ್ಬು	ಯಲ್ಬು	ಯಲ್ಬು
ಕಣ್ಣು	ಕಣ್	ಕಣ್	ಕಣ್
ಕತ್ತು	ಕುತ್ಗಿ	ಕುತ್ಗಿ	ಕುತ್ಗಿ
ಕರಳು	ಕಳ್ಳು	ಕಳ್ಳು	ಕಳ್ಳು
ಕಾಲು	ಕಾಲ್	ಕಾಲ್	ಕಾಲ್
ಕೆನ್ನೆ	ಕಪಳ	ಕಪಳ	ಕಪಳ
ಕೈ	ಕಯಿ	ಕಯಿ	ಕಯಿ
ಗುಂಗುರು ಕೂದಲು	ಉಂಗ್ರಕೂದ್ಲು	ಉಂಗ್ರುಕೂದ್ಲ	ಉಂಗ್ರುಕೂದ್ಲ
ಜಡೆ	ಜಡಿ	ಜೆಡಿ	ಜೆಡಿ
ಬಾಣಂತಿ	ಬಾಣ್ತಿ	ಬಾಣ್ತಿ	ಬಾಣ್ತಿ
ಬಾಯಿ	ಬಾಯಿ	ಬಾಇ	ಬಾಇ

ಬುರುಡೆ	ಬುಲ್ಡಿ	ಬುಲ್ಡಿ	ಬುಲ್ಡಿ
ರಕ್ತ	ರಕತ	ರಗ್ತ	ರಗ್ತ
ಸೊಂಟ	ನಡ/ಸ್ವಂಟ	ನಡ	ನಡ
ಹೃದಯ	ಯದಿ	ಯದಿ	ಯದಿ

೦೪. ಪ್ರಾಣಿಪಕ್ಷಿಕೀಟ ಸೂಚಕ ಇತ್ಯಾದಿ ಪದಗಳು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಅಳಿಲು	ಉಂಚಿಕಟ	ಉಂಚಿಕಟ	ಉಂಚಿಕಟ
ಆಮೆ	ತಾಂಬೇಲಿ	ತ್ಯಾಂಬ್ಲಿ	ತ್ಯಾಂಬ್ಲಿ
ಇರುವೆ	ಇರುಬಿ	ಇರ್‌ಬಿ	ಇರ್‌ಬಿ
ಇಲಿ	ಇಲಿಚೆಮ್ಮ	ಇಲಿಚೆಮ್ಮ	ಇಲಿಚೆಮ್ಮ
ಉಡ	ಉಡವ	ಉಡವ	ಉಡವ
ಎತ್ತು	ಯತ್ತ	ಯತ್ತ	ಯತ್ತ
ಓತಿಕೇತ	ತೊಂಡಿಕಟ	ತ್ವಂಡಿಕಟ	ತ್ವಂಡಿಕಟ
ಕರಡಿ	ಕಲ್ಡಿ	ಕಲ್ಡಿ	ಕಲ್ಡಿ
ಕರು	ಕರ	ಕರ	ಕರ
ಕಾಡುಹಂದಿ	ಯೇದು	ಯೇದು	ಯೇದು
ಕೆರೆಹಾವು	ಕ್ಯಾರಾವು	ಕ್ಯಾರಾವು	ಕ್ಯಾರಾವು
ಕೊಂಬು	ಕೋಡು	ಕೋಡು	ಕೋಡು
ಕೋಣ	ಕ್ವಾಣ	ಕ್ವಾಣ	ಕ್ವಾಣ
ಗಿಳಿ	ಗಿಳಿ/ಗಿಣಿ	ಗಿಣಿ	ಗಿಣಿ
ಗುಬ್ಬಚ್ಚಿ	ಗುಬ್ಬಿ	ಗುಬ್ಬಿ	ಗುಬ್ಬಿ
ಗೂಬೆ	ಗೂಗಿ	ಗೂಗಿ	ಗೂಗಿ
ಗೂಳಿ	ಗುಳೇರಿ	ಗುಳೇರಿ	ಗುಳೇರಿ
ಗೊರಸು	ಗೊರಚು	ಗ್ವರ್ಚು	ಗ್ವರ್ಚು
ಗೌಜುಗ	ಕೌಜ್‌ಗ	ಕೌಜ್‌ಗ	ಕೌಜ್‌ಗ
ಚಿರತೆ	ಚಿರತ	ಚಿರ್ತ	ಚಿರ್ತ
ಚೇಳು	ಚೋಳು	ಚೋಳ	ಚೋಳ
ಜಿಂಕೆ	ಜಿಂಕ	ಜಿಂಕ	ಜಿಂಕ

ಜಿರಳೆ	ಜಿರಲಿ	ಜಿರ್ಲಿ	ಜಿರ್ಲಿ
ಟಗರು	ಟಗ್ರು	ಟ್ಯಗ್ರು	ಟ್ಯಗ್ರು
ತಗಣೆ	ತಗಣೆ	ತಿಗಿಣೆ	ತಿಗಿಣೆ
ತೋಳ	ತ್ವಾಳ	ತ್ವಾಳ	ತ್ವಾಳ
ನವಿಲು	ನವಿಲ	ನವಿಲ	ನವಿಲ
ಪಾರಿವಾಳ	ಪಾರವಾಳ	ಪಾರ್ವಾಳ	ಪಾರ್ವಾಳ
ಬಾವುಲಿ	ತೋಲಬಾಪುರಿ	ತೋಲಬಾಪುರಿ	ತೋಲಬಾಪುರಿ
ಬಿಳಿಹಕ್ಕಿ	ಬೆಳ್ಳಕ್ಕಿ	ಬೆಳ್ಳಕ್ಕಿ	ಬೆಳ್ಳಕ್ಕಿ
ಮಿಕ	ಮಿಕ	ಮಿಕ	ಮಿಕ
ಮೇಕೆ	ಆಡು	ಆಡು	ಆಡು
ಮೊಲ	ಮಲ	ಮಲ	ಮಲ
ಮುಂಗಸಿ	ಮುಂಗ್ಲಿ	ಮುಂಗ್ಲಿ	ಮುಂಗ್ಲಿ
ಮೀನು	ಮೀನ	ಮೀನ	ಮೀನ
ಸಣ್ಣಜೇನು	ಚಿಟ್ಟಿಜೇನು	ಚಿಟ್ಟಿಜೇನು	ಚಿಟ್ಟಿಜೇನು
ಸಿಂಹ	ಸಿಮ್ಮ	ಸಿಮ್ಮ	ಸಿಮ್ಮ
ಸೊಳ್ಳೆ	ಸ್ವಳ್ಳಿ/ದ್ವಾಮಿ	ದ್ವಾಮಿ	ದ್ವಾಮಿ
ಹಾವುರಾಣಿ	ಅವುರಾಣಿ	ಅವುರಾಣಿ	ಅವುರಾಣಿ
ಹೆಗ್ಗಣ	ಯಗ್ಣ	ಯಗ್ಣ	ಯಗ್ಣ

೦೫. ಸಂಖ್ಯಾಸೂಚಕ ಪದಗಳು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಒಂದು	ವೊನ್ದು	ವಂದು	ವಂದು
ಎರಡು	ಯಲ್ಡು	ಯಲ್ಡು	ಯಲ್ಡು
ನಾಲ್ಕು	ನಾಕು	ನಾಕು	ನಾಕು
ಐದು	ಅಯುದು	ಅಯುದು	ಅಯುದು
ಏಳು	ಯೇಳು	ಯೇಳು	ಯೇಳು
ಹನ್ನೆರಡು	ಅನ್ನೆಲ್ಡು	ಅನ್ನಲ್ಡು	ಅನ್ನಲ್ಡು
ಮೂವತ್ತೊಂಬತ್ತು	ಮುವತ್ತೊಂಬತ್ತು	ಮುವತ್ರೊಂಬತ್ತು	ಮುವತ್ರೊಂಬತ್ತು
ಒಂದುನೂರು ಐವತ್ತು	ದೀಡ್‌ನೂರು	ದೀಡ್‌ನೂರು	ದೀಡ್‌ನೂರು

ನಾಲ್ಕುನೂರು	ನಾನೂರು	ನಾನೂರು	ನಾನೂರು
ಸಾವಿರ	ಸಾವ್ರ	ಸಾವ್ರ	ಸಾವ್ರ
ಲಕ್ಷ	ಲಕ್ಸ	ಲಕ್ಸ	ಲಕ್ಸ

ಭಿನ್ನರೂಪ ಸಂಖ್ಯಾವಾಚಕಗಳು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ನಾಲ್ಕುಮಂದಿ	ನಾಲ್ವರ	ನಾಲ್ವರ	ನಾಲ್ವರ
ಮೂರುಮಂದಿ	ಮೂವರು	ಮುವರು	ಮುವರು
ಕಾಲು	ಪಾವು	ಪಾವು	ಪಾವು
ಮುಕ್ಕಾಲು	ಮೂರುಪಾವು	ಮೂರುಪಾವು	ಮೂರುಪಾವು
ಒಂದುಕಾಲು	ಸೇರುಪಾವು	ಸೇರುಪಾವು	ಸೇರುಪಾವು
ಒಂದು ಅರ್ಧಸೇರು	ದೀಡ್‌ಸೇರು	ದೀಡ್‌ಸೇರು	ದೀಡ್‌ಸೇರು

೦೬. ಹವಮಾನ ಸೂಚಕ ಪದಗಳು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಚಳಿ	ತಂಡಿ	ತಂಡಿ	ತಂಡಿ
ತಂಪು	ತಣ್ಣಗ	ತಣ್ಣಗ	ತಣ್ಣಗ
ತುಂತುರು	ಜಿನಿಜಿನಿ	ಜಿನಿಜಿನಿ	ಜಿನಿಜಿನಿ
ದಗೆ	ಕುದಿ	ಕುದಿ	ಕುದಿ
ದಿನ	ದಿನ	ದಿವ್ಸ	ದಿವ್ಸ
ನಾಡಿದ್ದು	ನಾಡದ	ನಾಡ್ದ	ನಾಡ್ದ
ನೆನ್ನೆ	ನಿನ್ನೆ	ನಿನ್ನೆ	ನಿನ್ನೆ
ಬೇಸಿಗೆ	ಬ್ಯಾಸಿಗಿ	ಬ್ಯಾಸ್ಗಿ	ಬ್ಯಾಸ್ಗಿ
ಮಧ್ಯಾಹ್ನ	ಮಧ್ಯಾನ	ಮಧ್ಯಾನ	ಮಧ್ಯಾನ
ಮೋಡ	ಮಾಡ	ಮಾಡ	ಮಾಡ
ಮೊನ್ನೆ	ಮನ್ನಿ	ಮನ್ನಿ	ಮನ್ನಿ
ಮುಂಜಾನೆ	ಮುಂಜಾಲ	ಮುಂಜಾಲ	ಮುಂಜಾಲ
ಸಂಜೆ	ಚಂಜಿ/ಸಂಜ್ಕಿ	ಚಂಜ್ಕಿ/ಬೇಗಸೆರೆ	ಚಂಜ್ಕಿ/ಬೇಗಸೆರೆ
ಸರಿರಾತ್ರಿ	ಸವತ್ತು	ಸವತ್ತು	ಸವತ್ತು
ಸೆಕೆ	ಸೆಕಿ/ಉಮ್ರು	ಸೆಕೆ/ಉಮ್ರು	ಸೆಕೆ/ಉಮ್ರು

೦೭. ಆಭರಣ ಸೂಚಕ ಪದಗಳು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಕೈಬೆರಳಿಗೆ ಧರಿಸುವುದು	ಉಂಗರ	ಉಂಗ್ರ	ಉಂಗ್ರ
ಕತ್ತಿಗೆ ಧರಿಸುವುದು	ಟಿಕೆಮಣಿ	ಟಿಕೆಮಣಿ	ಟಿಕೆಮಣಿ
	ಗುನ್ನಡಕಿ	ಗುನ್ನಡಕಿ	ಗುನ್ನಡಕಿ
	ಬೋರ್‌ಮಳಸರ	ಬೋರ್‌ಮಳಸರ	ಬೊರ್‌ಮಳಸರ
ತೋಳ್ಬಂದಿ	ಬಂದಿ/ಪಟ್ಟೆ	ಬಂದಿ	ಬಂದಿ
ಕಿವಿಗೆ ಧರಿಸುವುದು	ವಾಲಿ	ವಾಲಿ	ವಾಲಿ
	ಬುಗುಡಿ	ಬುಗುಡಿ	ಬುಗುಡಿ
	ಮುರುವು	ಮುರುವು	ಮುರುವು
ಮೂಗಿಗೆ ಧರಿಸುವುದು	ಮುತ್ತು/ನತ್ತು	ಮುತ್ತು/ನತ್ತು	ಮುತ್ತು/ನತ್ತು
ಸೊಂಟಕ್ಕೆ ಧರಿಸುವುದು	ಡಾಬು	ಡಾಬು	ಡಾಬು

೦೮. ಕೃಷಿ, ಗಿಡ, ಸೂಚಕ ಪದಗಳು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಎಲೆ	ತಪ್ಲ	ತಪ್ಲ	ತಪ್ಲ
ಕಟ್ಟು	ಸೂಡು	ಸೂಡು	ಸೂಡು
ಕಳೆ	ಕಸ	ಕಸ	ಕಸ
ಕಾಲುವೆ	ಕಲೇವು	ಕಲೇವು	ಕಲೇವು
ಕಪ್ಪುಭೂಮಿ	ಯರಿಭೂಮಿ	ಯರಿಭೂಮಿ	ಯರಿಭೂಮಿ
ಕೆಂಪುಭೂಮಿ	ಮಸಾರಿ	ಮಸಾರಿ	ಮಸಾರಿ
ಕೊಂಬೆ	ಕೊಲ್ಲಿ/ಕ್ವಲ್ಯ	ಕೊಲ್ಲಿ/ಕ್ವಲ್ಯ	ಕೊಲ್ಲಿ/ಕ್ವಲ್ಯ
ಕೊಯಿಲು	ಕೊಯ್ಲಿ/ಕಟಾವು	ಕೊಯ್ಲಿ/ಕಟಾವು	ಕೊಯ್ಲಿ/ಕಟಾವು
ತೆಗದಮರ	ತ್ಯಾಗ್ದಮರ	ತ್ಯಾಗ್ದಮರ	ತ್ಯಾಗ್ದಮರ
ತೋಟ	ತ್ವಾಟ	ತ್ವಾಟ	ತ್ವಾಟ
ನೇಗಿಲು	ಮಡಿಕಿ	ಮಡ್ಕಿ	ಮಡ್ಕಿ
ಬೆಣಚುಕಲ್ಲು	ಬಿಳಿಚುಕಲ್	ಬಿಳಿಚ್ಕಲ್	ಬಿಳಚ್ಕಲ್
ಸಗಣೆಗೊಬ್ಬರ	ಯಂಡಿಗೊಬ್ರ	ಯಂಡಿಗ್ವಬ್ರ	ಯಂಡಿಗ್ವಬ್ರ
ಹಿಟ್ಟುಕಲ್ಲು	ಸುಣಕಲ್	ಸುಣಕಲ್	ಸುಣಕಲ್

೦೯. ಆಹಾರ ಸೂಚಕ ಪದಗಳು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಅಡಿಕೆ	ಅಡ್ಕಿ	ಅಡ್ಕಿ	ಅಡ್ಕಿ
ಅಮರೆ	ಅಮ್ರಿ	ಅಮ್ರಿ	ಅಮ್ರಿ
ಅರಶಿಣ	ಅರಿಸ್ನ	ಅರಿಸ್ನ	ಅರಿಸ್ನ
ಅವರೆಕಾಳು	ಅಂಬರಿಕಾಳು	ಅಂಬ್ರಿಕಾಳು	ಅಂಬ್ರಿಕಾಳು
ಆಲೂಗಡ್ಡೆ	ಬಟಾಟಿ	ಬಟಾಟಿ	ಬಟಾಟಿ
ಈರುಳ್ಳಿ	ಉಳ್ಳಾಗಡ್ಡಿ	ಉಳಾಗಡ್ಡಿ	ಉಳಾಗಡ್ಡಿ
ಎಳ್ಳು	ಯಳ್ಳು	ಯಳ್ಳು	ಯಳ್ಳು
ಏಲಕ್ಕಿ	ಯಾಲಕ್ಕಿ	ಯಾಲಕ್ಕಿ	ಯಾಲಕ್ಕಿ
ಔಡಲ	ಅವುಡಲು	ಅವುಡ್ಲ	ಅವುಡ್ಲ
ಕಡಲೆ	ಕಡ್ಲಿ	ಕಡ್ಲಿ	ಕಡ್ಲಿ
ಕಲ್ಲಂಗಡಿ	ಕಳಂಗ್ಡಿ	ಕಳಂಗ್ಡಿ	ಕಳಂಗ್ಡಿ
ಗಜ್ಜರಿ	ಗಜ್ರಿ	ಗ್ಯಜ್ರಿ	ಗ್ಯಜ್ರಿ
ಗೆಣಸು	ಗಣಸು	ಗ್ಯಣ್ಸು	ಗ್ಯಣ್ಸು
ಜವಳಿಕಾಯಿ	ಚವಳಿಕಾಯಿ	ಚವ್ಳಿಕಾಯಿ	ಚವ್ಳಿಕಾಯಿ
ಜೀರಿಗೆ	ಜೀರ್ಗಿ	ಜೀರ್ಗಿ	ಜೀರ್ಗಿ
ತೆಂಗಿನಕಾಯಿ	ಟೆಂಗ್ನಿಕಾಯಿ	ಟೆಂಗ್ನಿಕಾಯಿ	ಟೆಗ್ನಿಕಾಯಿ/ಟೆಂಗ್ನಿಕಾಯಿ
ದಾಳಿಂಬೆ	ಡಳಂಬ್ರಿ	ಡಳಂಬ್ರಿ	ಡಳಂಬ್ರಿ
ನವಣೆ	ನವಣಿ	ನ್ಯವಿಣಿ	ನ್ಯವಿಣಿ
ನಿಂಬೆಹಣ್ಣು	ಲಿಂಬೆಣ್ಣು	ಲಿಂಬೆಣ್ಣು	ಲಿಂಬೆಣ್ಣು
ನೇರಳೆಹಣ್ಣು	ನೀರ್ಲಣ್ಣು	ನೀರ್ಲಣ್ಣು	ನೀರ್ಲಣ್ಣು
ಪಡವಲಕಾಯಿ	ಕಲ್ಪಟ್ಲಕಾಯಿ	ಕಲ್ಪಟ್ಲಕಾಯಿ	ಕಲ್ಪಟ್ಲಕಾಯಿ
ಪಪ್ಪಾಯಿ	ಪರಂಗಿ/ಪಪಾಯಿ	ಪರಂಗಿ/ಪಪಾಯಿ	ಪರಂಗಿ/ಪಪಾಯಿ
ಬೆಳ್ಳುಳ್ಳಿ	ಬೊಳ್ಳುಳ್ಳಿ	ಬೊಳ್ಳುಳ್ಳಿ	ಬೊಳ್ಳುಳ್ಳಿ
ಮಡಿಕೆ	ಮೆಟ್ಗಿ	ಮಿಟ್ಗಿ	ಮಿಟ್ಗಿ
ಮೆಂತೆ	ಮ್ಯಂತ್ಯ	ಮ್ಯಂತ್ಯ	ಮ್ಯಂತ್ಯ
ಮೊಸಂಬಿ	ಮುಸಂಬಿ	ಮುಸಬಿ	ಮುಸಬಿ

ಸಜ್ಜೆ	ಚಜ್ಜಿ	ಚಜ್ಜಿ	ಚಜ್ಜಿ
ಸೀಬೆಹಣ್ಣು	ಜಂಪಲದಣ್ಣು	ಜಂಪ್ಲದಣ್ಣು	ಜಂಪ್ಲದಣ್ಣು
ಸೂರ್ಯಕಾಂತಿ	ಸೂರ್ಯಪಾನ	ಸೂರ್ಯಪಾನ	ಸೂರ್ಯಪಾನ
ಸೊಪ್ಪು	ಪಲ್ಯ	ಪಲ್ಯ	ಪಲ್ಯ
ಹಲಸುಹಣ್ಣು	ಅಲಸನಣ್ಣು	ಅಲಸ್ನಣ್ಣು	ಅಲಸ್ನಣ್ಣು
ಹುಚ್ಚೆಳ್ಳು	ಗುರೆಳ್ಳು	ಗುರೆಳ್ಳು	ಗುರೆಳ್ಳು

೧೦. ಸಾಮಾನ್ಯವಾಚಕ, ಗುಣವಾಚಕ, ಸರ್ವನಾಮ, ಕ್ರಿಯಾವಾಚಕ, ಇತ್ಯಾದಿ ಪದಗಳು

ಬರಹ ಕನ್ನಡ	**ಲಿಂಗಾಯತ**	**ನಾಯಕ**	**ಹರಿಜನ**
ಎತ್ತರ	ಯತ್ರ	ಯತ್ರ	ಯತ್ರ
ಎಳೆಯ	ಯಳೆದು	ಯಳೆದು	ಯಳೆದು
ಕಡಿಮೆ	ಕಮ್ಮಿ	ಕಮ್ಮಿ	ಕಮ್ಮಿ
ಕೀಳು	ಕಿತ್ಗ	ಕಿತ್ಗ	ಕಿತ್ಗ
ಕುಳ್ಳು	ಗಿಡ್ಡ	ಗಿಡ್ಡ	ಗಿಡ್ಡ
ಕೆಳಗೆ	ಕೆಳಗ	ಕ್ಯಳ್ಗ	ಕ್ಯಳ್ಗ
ಗುಂಡನೆ	ದುಂಡ್ಕ	ದುಂಡ್ಕ/ಗುಂಡ್ಕ	ದುಂಡ್ಕ/ಗುಂಡ್ಕ
ಚಿಕ್ಕ	ಸಣ್ಣ	ಸಣ್ಣ	ಸಣ್ಣ
ಚೂರು	ತಟಗು	ತಟಗು	ತಟಗು
ಡೊಂಕು	ಸೊಟ್ಟ	ಸ್ವಟ್ಟ	ಸ್ವಟ್ಟ
ತೆಳ್ಳನೆ	ತೆಳ್ಗ	ತ್ಯಳ್ಗ	ತ್ಯಳ್ಗ
ದಡ್ಡ	ದಡ್ಡ/ಮಬ್ಬು	ಮಬ್ಬು	ಮಬ್ಬು
ದಪ್ಪ	ಗಡತರ	ಗಡತರ	ಗಡತರ
ನಡುವೆ	ನಡಬರಕ	ನಡಬರ್ಕ	ನಡಬರ್ಕ
ಭಾರ	ವಜ್ಜಿ/ವಲವು	ವಜ್ಜಿ/ವಲವು	ವಜ್ಜಿ/ವಲವು
ಮಂದ	ಮಬ್ಬು	ಮಬ್ಬು	ಮಬ್ಬು
ಮೇಲು	ಮ್ಯಾಲ	ಮ್ಯಾಲ	ಮ್ಯಾಲ
ಸ್ವಲ್ಪ	ತಟಗು	ತಟಗು	ತಟಗು
ಸಿಹಿ	ಸಿಯಾ	ಸಿಯಾ	ಸಿಯಾ
ಹೆಚ್ಚು	ಬಾಳ	ಬಾಳಾ	ಬಾಳಾ
ಹೊರಗೆ	ವರಗ	ವರ್ಗ	ವರ್ಗ

ಕ್ರಿಯಾಪದ, ನಾಮಪದ ಇತ್ಯಾದಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಅದುಮು	ದಬ್ಬು	ವತ್ತು/ದಬ್ಬು	ವತ್ತು/ದಬ್ಬು
ಇಡು	ಇಡು	ಇಕ್ಕು	ಇಕ್ಕು
ಉಗುಳು	ಉಗುಳು	ಉಗ್ಳು	ಉಗ್ಳು
ಉಜ್ಜು	ತಿಕ್ಕು	ತಿಕ್ಕು	ತಿಕ್ಕು
ಉಡು	ತೊಡು	ತ್ವಡು	ತ್ವಡು
ಉರುಳು	ಉಳ್ಳು	ಉಳ್ಳು	ಉಳ್ಳು
ಎಗರು	ಯಗರು	ಯಗ್ರು	ಯಗ್ರು
ಒತ್ತು	ನೂಕು	ನೂಕು	ನೂಕು
ಒದರು	ಕಬಾಸು	ಕಬಾಸು	ಕಬಾಸು
ಒದೆ	ವದಿ	ವದಿ	ವದಿ
ಎರಚು	ಉಗ್ಗು	ಉಗ್ಗು	ಉಗ್ಗು
ಎಸಿ	ವಗಿ	ವಗಿ	ವಗಿ
ಎಳಿ	ಜಗ್ಗು	ಜಗ್ಗು	ಜಗ್ಗು
ಕಚ್ಚು	ಕಡಿ	ಕಡಿ	ಕಡಿ
ಕತ್ತರಿಸು	ಕತ್ರಸು	ಕತ್ರಿಸು	ಕತ್ರಿಸು
ಕದಡು	ಕಲಸು	ಕಲಸು	ಕಲಸು
ಕುಯ್ಯಿ	ಕೊಯ್ಯಿ	ಕೊಯ್ಯಿ	ಕೊಯ್ಯಿ
ಕೂಡು	ಕುಂದ್ರು	ಕುಂದ್ರು	ಕುಂದ್ರ
ಕೆಣಕು	ತಡವು	ತಡವು	ತಡವು
ಕೆರಳು	ಕೆಳ್ಳು	ಕಳ್ಳು	ಕಳ್ಳು
ಕೆರೆ	ಕೆರಿ	ಕ್ಯರಿ	ಕ್ಯರಿ
ಕೊರಗು	ಚಿಂತಿ	ಸಿಂತಿ	ಸಿಂತಿ
ಗುಡಿಸು	ಬಳಿ	ಬಳಿ	ಬಳಿ
ಗೆಬರು	ಕೆಬ್ರು	ಕ್ಯಬ್ರು	ಕ್ಯಬ್ರು
ಚಚ್ಚು	ಜಜ್ಜು	ಜಜ್ಜು	ಜಜ್ಜು
ಚೀಪು	ಜಿಬಕ	ಜಿಬಕ	ಜಿಬಕ

ಚಲ್ಲು	ಚೆಲ್ಲು	ಚೆಲ್ಲು	ಚೆಲ್ಲು
ತೀಡು	ಲಟಾಸು	ಲಟಾಸು	ಲಟಾಸು
ತುರುಕು	ವತ್ತು	ವತ್ತು	ವತ್ತು
ತೇಗು	ತೇಕು	ತೇಕು	ತೇಕು
ನಿಲ್ಲು	ನಿಂದ್ರು	ನಿಂದ್ರು	ನಿಂದ್ರು
ನುಗ್ಗು	ತೂರು	ತೂರು	ತೂರು
ನೆಗೆ	ಜಿಗಿ	ಜಿಗಿ	ಜಿಗಿ
ಪೆಟ್ಟು	ಏಟು	ಏಟು	ಏಟು
ಪರಚು	ಚೂರು	ಚೂರು	ಚೂರು
ಬೊಗಳು	ವದರು	ವದ್ರು	ವದ್ರು
ಮಡಚು	ಮಡಸು	ಮಡ್ಸು	ಮಡ್ಸು
ಮಲಗು	ಮಕ	ಮಕ	ಮಕ
ಮಸೆ	ಮಸಿ	ಮಸಿ	ಮಸಿ
ಮುಳುಗು	ಮುಣುಗು	ಮುಣುಗು	ಮುಣ್ಗು
ಮೀಟು	ಎಬ್ಬು	ಎಬ್ಬು	ಎಬ್ಬು
ರೇಗು	ಸಿಟ್ಟು	ಸಿಟ್ಟು	ಸಿಟ್ಟು
ಸವರು	ಸಾರ್ಸು	ಸಾರ್ಸು	ಸಾರ್ಸು
ಸೀಳು	ಸೀಳ್	ಸೀಳ್	ಸೀಳ್
ಹರಡು	ಅಲ್ಡು	ಅಲ್ಡು	ಅಲ್ಡು
ಹಿಗ್ಗು	ಇಗ್ಗು	ಇಗ್ಗು	ಇಗ್ಗು
ಹೆಣೆ	ಎಣೆ	ಎಣೆ	ಎಣೆ
ಹೊಡೆ	ಬಡಿ	ಬಡಿ	ಬಡಿ
ಹೊರಡು	ವಲ್ಡು	ವಲ್ಡು	ವಲ್ಡು
ಹೊಲಿ	ವಲಿ	ವಲಿ	ವಲಿ
ಹೊಸಿ	ವಸಿ	ವಸಿ	ವಸಿ
ಕಪ್ಪು	ಕರಿ	ಕರಿ	ಕರಿ
ಕೆಂಪು	ಕೆಂಪು	ಕ್ಯಂಪು	ಕ್ಯಂಪು
ಬಿಳಿ	ಬೆಳ್ಳಗ	ಬೆಳ್ಗ	ಬೆಳ್ಗ

ನೇರಳೆ	ನೀಲಿ	ನೀಲಿ	ನೀಲಿ
ಹಸಿರು	ಅಸ್ರು	ಅಸ್ರು	ಅಸ್ರು
ಹಳದಿ	ಅಳ್ದಿ	ಅಳ್ದಿ	ಅಳ್ದಿ
ಅಂಗಡಿ	ಅಂಗಡಿ	ಅಂಗ್ಡಿ	ಅಂಗ್ಡಿ
ಅಂಗಳ	ಅಂಗಳ	ಅಂಗ್ಳ	ಅಂಗ್ಳ
ಅಂತಸ್ತು	ಮಹಡಿ	ಮಹಡಿ	ಮಹಡಿ
ಅಲಮಾರಿ	ಅಲ್ಮರಿ	ಅಲ್ಮರಿ	ಅಲ್ಮರಿ
ಇಟ್ಟಿಗೆ	ಎಳ್ಳಿ	ಎಳ್ಳಿ	ಎಳ್ಳಿ
ಕಿಟಕಿ	ಕಿಡಿಕಿ	ಕಿಡ್ಕಿ	ಕಿಡ್ಕಿ
ಕೋಟೆ	ಕ್ವಾಟಿ	ಕ್ವಾಟಿ	ಕ್ವಾಟಿ
ಕೋಣೆ	ಕೋಣಿ	ಕೋಣಿ/ಲಿ	ಕೋಣಿ/ಲಿ
ಗುಡಿಸಲು	ಜೋಪಡಿ/ಗುಡಿಸ್ಲಿ	ಜೋಪಡಿ/ಗುಡಿಸ್ಲಿ	ಜೋಪಡಿ/ಗುಡಿಸ್ಲಿ
ಗೋಡೆ	ಗ್ವಾಡಿ	ಗ್ವಾಡಿ	ಗ್ವಾಡಿ
ಚಾಪೆ	ಚಾಪಿ	ಚ್ಯಾಪಿ	ಚ್ಯಾಪಿ
ಚಿಲಕ	ಲಾಳದಂಡಿಗಿ	ಲಾಳದಂಡಿಗಿ	ಲಾಳದಂಡಿಗಿ
ಚರಂಡಿ	ಗಟಾರ	ಗಟಾರ	ಗಟಾರ
ಜಗಲಿ	ಜಗ್ಲಿ/ಕಟ್ಟೆ	ಜಗ್ಲಿ/ಕಟ್ಟೆ	ಜಗ್ಲಿ/ಕಟ್ಟೆ
ತಲೆದಿಂಬು	ಲೋಡು	ಲೋಡು	ಲೋಡು
ತಲೆಬಾಗಿಲು	ತಲಬಾಗ್ಲಿ	ತಲಬಾಗ್ಲಿ	ತಲಬಾಗ್ಲಿ
ತೊಟ್ಟಿಲು	ತ್ವಟ್ಲ	ತ್ವಟ್ಲ	ತ್ವಟ್ಲ
ತೊಲೆ	ತುಂಡು	ತುಂಡು	ತುಂಡು
ನಡುಮನೆ	ನಡ್ಲಮನಿ	ನಡ್ಲಮನಿ	ನಡ್ಲಮನಿ
ನೆಲ	ನಲ	ನ್ಯಲ	ನ್ಯಲ
ಬಚ್ಚಲು	ಬಚ್ಲ	ಬಚ್ಲ	ಬಚ್ಲ
ಬಾಗಿಲು	ಬಾಗ್ಲಿ	ಬಾಗ್ಲಿ	ಬಾಗ್ಲಿ
ಬೀಸಣಿಗೆ	ಬೀಸಣಿಕಿ	ಬೀಸಣ್ಕಿ	ಬೀಸಣ್ಕಿ
ಮಹಡಿಮನೆ	ಬಿಲ್ಡಿಂಗ್	ಬಿಲ್ಡಿಂಗ್/ ಮಾಡ್ಯಾದಮನಿ	ಬಿಲ್ಡಿಂಗ್/ ಮಾಡ್ಯಾದಮನಿ

ಮಾಳಿಗೆ	ಮಾಳ್ಗಿ	ಮಾಳ್ಗಿ	ಮಾಳ್ಗಿ
ಮೆಟ್ಟಿಲು	ಪ್ಯಾಂಟಣಿಕಿ/ಪ್ಯಾಂಟ್ಗಿ	ಪ್ಯಾಂಟಣಿಕಿ/ಪ್ಯಾಂಟ್ಗಿ	ಪ್ಯಾಂಟಣಿಕಿ/ಪ್ಯಾಂಟ್ಗಿ
ರಾಟೆ	ಮಿಷಿನ್	ಮಿಷಿನ್	ಮಿಷಿನ್
ಸರಳು	ಸಳ್ಳು	ಸಳ್ಳು	ಸಳ್ಳು
ಹೆಂಚು	ಅಂಚು	ಅಂಚು	ಅಂಚು
ಹಣತೆ	ಪ್ರಣ್ತಿ	ಪೋಣ್ತಿ	ಪೋಣ್ತಿ
ಹಾಸಿಗೆ	ಆಸ್ಗಿ	ಆಸ್ಗಿ	ಆಸ್ಗಿ
ಹಿತ್ತಿಲು	ಇತ್ಲ	ಇತ್ಲ	ಇತ್ಲ
ಹೊಸ್ತಿಲು	ವಸ್ಲಿ	ವಸ್ಲಿ	ವಸ್ತಿಲಿ/ವಸ್ಲಿ
ಈಳಿಗೆಮಣೆ	ಎರಚಮಣಿ	ಎರ್ಚಮಣಿ	ಎರ್ಚಮಣಿ
ಎಣ್ಣೆ	ಯಣ್ಣಿ	ಯಣ್ಣಿ	ಯಣ್ಣಿ
ಏಣಿ	ನಿಚ್ಚಣಿಕಿ	ನಿಚ್ಚಣಿಕಿ	ನಿಚ್ಚಣಿಕಿ
ಒನಕೆ	ವನ್ಕಿ	ವಣ್ಕಿ	ವಣ್ಕಿ
ಒರಳು	ವಳ್ಳು	ವಳ್ಳು	ವಳ್ಳು
ಕನ್ನಡಿ	ಕನಡಿಅಳ್ಳು	ಕನಡಿಅಳ್ಳು	ಕನಡಿಅಳ್ಳು
ಕಸಬರಿಗೆ	ಬಾರಿಗಿ	ಬಾರ್ಗಿ	ಬಾರ್ಗಿ
ಕೊಡೆ	ಚತ್ರಿಕಿ	ಚತ್ರಿಕಿ	ಚತ್ರಿಕಿ
ಚಂಡು	ಚೆಂಡ	ಚೆಂಡ	ಚೆಂಡ
ಪೆಟ್ಟಿಗೆ	ಪ್ಯಾಟರಿಕಿ/ಪೆಟಾರಿ	ಪ್ಯಾಟರಕಿ/ಸಂದಕ	ಪ್ಯಾಟರಕಿ/ಸಂದಕ
ಬಟ್ಲು	ಬಟ್ಲ	ಬಟ್ಲ	ಬಟ್ಲ
ಬಾಚಣಿಗೆ	ಬಾಚಣಿಕಿ	ಬಾಚಣ್ಕಿ	ಬಾಚಣ್ಕಿ
ಬೀಸುವಕಲ್ಲು	ಬೀಸಕಲ್	ಬೀಸಕಲ್	ಬಿಸಕಲ್
ಬೆಣ್ಣೆ	ಬೆಣ್ಣಿ	ಬ್ಯಣ್ಣಿ	ಬ್ಯಣ್ಣಿ
ಮುಚ್ಚಳ	ಮುಚ್‌ಳ	ಮುಚ್‌ಳ	ಮುಚ್‌ಳ
ಲತ್ತಣಿಗೆ	ಲತ್ತಣಿಕಿ	ಲತ್ತಣಿಕಿ	ಲತ್ತಣ್ಕಿ
ಸೌಟು	ಸೌಟು	ಚೌಟು	ಚೌಟು

ಸಂಕೀರ್ಣ ಪದಗಳು

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಇಕ್ಕಳ	ಇಕ್ಳ	ಇಕ್ಳ	ಇಕ್ಳ
ದೋಣಿ	ಅರಗೋಲುಪುಟ್ಟಿ	ಅರಗೋಲುಪುಟ್ಟಿ	ಅರಗೋಲುಪುಟ್ಟಿ
ಚಪ್ಪರ	ಚೆಪ್ಪರ	ಚೆಪ್ಪರ	ಚೆಪ್ಪರ
ನೊಗ	ನಗ	ನಗ	ನಗ
ಗುಳಿಗೆ	ಗುಳ್ಗಿ	ಗುಳ್ಗಿ	ಗುಳ್ಗಿ
ದಿನ್ನೆ	ಬಗಡಿ	ಬಗಡಿ	ಬಗಡಿ
ಸಮತಟ್ಟು	ಸವತಳ	ಸವತಳ	ಸವತಳ
ಮರುಭೂಮಿ	ಪಡಬೂಮಿ	ಪಡಬೂಮಿ	ಪಡಬೂಮಿ
ಬಯಲುಭೂಮಿ	ಬೀಳ್ಳು	ಬೀಳ್ಳು	ಬೀಳ್ಳು
ಸಿಹಿನೀರು	ಸಿವಿನೀರು	ಸಿವಿನೀರು	ಸಿವಿನೀರು
ಕೆಮ್ಮಣ್ಣು	ಕೆಂಪಚಟ್ಟು	ಕ್ಯಂಪಚಟ್ಟು	ಕ್ಯಂಪಚಟ್ಟು
ನಕ್ಷತ್ರ	ಚುಕ್ಕಿ	ಚುಕ್ಕಿ	ಚುಕ್ಕಿ
ನಸುಕು	ನಸುಗ್ಲೆ	ನಸುಗ್ಲೆ	ನಸುಗ್ಲೆ
ಮಧ್ಯರಾತ್ರಿ	ಪುಣೆವಂದು	ಪುಣೆವಂದು	ಪುಣೆವಂದು
ಕೊರೆಯುವಚಳಿ	ಬಾರಿತಂಡಿ	ಬಾರಿತಂಡಿ	ಬಾರಿತಂಡಿ
ಪೂರ್ವದಿಕ್ಕು	ತಳಕ/ಪೂರ್ವ	ತಳಕ	ತಳಕ
ಪಶ್ಚಿಮದಿಕ್ಕು	ಪಶ್ಚಿಮ/ಮ್ಯಾಕ	ಮ್ಯಾಕ	ಮ್ಯಾಕ
ಉತ್ತರ ದಿಕ್ಕು	ಉತ್ರ/ಅನುಮನದಿಕ್ಕು	ಅನುಮನದಿಕ್ಕು	ಅನುಮನದಿಕ್ಕು
ದಕ್ಷಿಣದಿಕ್ಕು	ದಕ್ಸಿನ	ದಕ್ಸಿನ	ದಕ್ಸಿನ
ಅಶ್ವಿನಿ	ಅಸ್ವಿನಿ	ಅಸ್ವಿನಿ	ಅಸ್ವಿನಿ
ಭರಣಿ	ಬರಣಿ	ಬರಣಿ	ಬರಣಿ
ಕೃತ್ತಿಕ	ಕೀರ್ತುಕ	ಕೀರ್ತುಕ	ಕೀರ್ತುಕ
ರೋಹಿಣಿ	ರೋಣಿ	ರೋಣಿ	ರೋಣಿ
ಮೃಗಶಿರ	ಮಿರಗ	ಮಿರಗ	ಮಿರಗ
ಮಘ	ಮಗಿ	ಮಗಿ	ಮಗಿ
ಹುಬ್ಬ	ಉಬ್ಬ	ಉಬ್ಬ	ಉಬ್ಬ

ಉತ್ತರ	ಉತ್ತರ/ಉತ್ರಿ	ಉತ್ರಿ	ಉತ್ರಿ
ವಿಶಾಖ	ಇಸಾಕಿ	ಇಸಾಕಿ	ಇಸಾಕಿ
ಪುಷ್ಯ	ಪುಸ್ಯ	ಪುಸ್ಯ	ಪುಸ್ಯ
ಆಶ್ಲೇಷ	ಆಸ್ಲೀಸ	ಆಸ್ಲೀಸ	ಆಸ್ಲೀಸ
ಅನುರಾಧ	ಅನುರಾಗಿ	ಅನುರಾಗಿ	ಅನುರಾಗಿ
ಚಿತ್ತ	ಚಿತ್ತಿ	ಚಿತ್ತಿ	ಚಿತ್ತಿ
ಶುಭ	ಸುಬ	ಸುಬ	ಸುಬ
ಹುಲಿ	ಉಲಿ	ಉಲಿ	ಉಲಿ
ನೊಣ	ನ್ವಣ	ನ್ವಣ	ನ್ವಣ
ತೊಣಚಿ	ತ್ವನ್ಸಿ	ತ್ವನ್ಸಿ	ತ್ವನ್ಸಿ
ಗೆದ್ದಲು	ಗೆದ್ಲಿ	ಗೆದ್ಲಿ	ಗೆದ್ಲಿ
ಸಣ್ಣಕಪ್ಪೆ	ಸಣ್ಣಕ್ವಪ್ಪಿ	ಸಣ್ಕ್ವಪಿ	ಸಣಕ್ವಪ್ಪಿ
ಜಂತುಹುಳ	ಜಂತುಳ	ಜಂತುಳ	ಜಂತುಳ
ಕೂರಿಗೆ	ಕೂರ್ಗಿ	ಕೂರ್ಗಿ	ಕೂರ್ಗಿ
ಮೊಳಕೆ	ಮಳ್ಕಿ/ನ್ಯಾಟಗಿ	ಮಳ್ಕಿ/ನ್ಯಾಟಗಿ	ಮಳ್ಕಿ/ನ್ಯಾಟಗಿ
ಗೇಣು	ಚೋಟು	ಚೋಟು	ಚೋಟು
ತೆನೆ	ತ್ಯನಿ	ತ್ಯನಿ	ತ್ಯನಿ

ಬರಹ ಕನ್ನಡ	ಲಿಂಗಾಯತ	ನಾಯಕ	ಹರಿಜನ
ಈಜು	ಈಜು/ಈಸು	ಈಸು	ಈಸು
ಚಕ್ಕಡಿ	ಬಂಡಿ	ಬಂಡಿ	ಬಂಡಿ
ಹುಣ್ಣಿಮೆ	ಉಣಿಮಿ/ಉಣ್ವಿ	ಉಣ್ವಿ	ಉಣ್ವಿ
ಅಮವಾಸೆ	ಅಮಾಸಿ	ಅಮಾಸಿ	ಅಮಾಸಿ
ಔಷಧಿ	ಅವುಸದಿ	ಅವುಸದಿ	ಅವುಸದಿ
ಟೊಮೊಟೊ	ಟಮಟ	ಟಮಟ	ಟಮಟ
ಬುನಾದಿ	ಬುನಾದಿ/ತರ	ತರ	ತರ
ರೊಟ್ಟೆ	ರ್ವಟ್ಟಿ	ರಟ್ಟಿ	ರಟ್ಟಿ
ಬೇಳೆ	ಬ್ಯಾಳಿ	ಬ್ಯಾಳಿ	ಬ್ಯಾಳಿ
ಮೊಸರು	ಮಸ್ರ	ಮಸ್ರ	ಮಸ್ರ

ಹೋಳಿಗೆ	ಓಳಿಗಿ	ಓಳ್ಗಿ	ಓಳ್ಗಿ
ಸಜಕ	ಚಜಕ	ಚಜಕ	ಚಜಕ
ಸ್ಟೋವ್	ಸ್ಟವ್	ಟವ್	ಟವ್
ಹಂಡೆ	ಅಂಡಿ	ಅಂಡಿ	ಅಂಡಿ
ಬಿಂದಿಗೆ	ಕೊಡ	ಕ್ವಡ	ಕ್ವಡ
ಚಂಬು	ಚೆಂಬು	ಚೆಂಬು	ಚೆಂಬು
ಲೋಟ	ಗ್ಲಾಸ್/ಜಾಂಬ್	ಗ್ಲಾಸ್/ಜಾಂಬ್	ಗ್ಲಾಸ್/ಜಾಂಬ್
ಕೊಣಬಿಗೆ	ಕ್ವಣಿಮಿ	ಕ್ವಣಿಮಿ	ಕ್ವಣಿಮಿ
ಚುಚ್ಚುಗ	ಚುಚ್ಗ	ಸುಚ್ಗ	ಸುಚ್ಗ
ಮಣೆ	ಮಣಿ	ಮಣಿ	ಮಣಿ
ಚಮಚ	ಚಮ್ಚ	ಸಮ್ಚ	ಸಮ್ಚ
ತಟ್ಟೆ	ತಟ್ಟಿ/ಗಂಗಳ	ಗಂಗಳ	ಗಂಗಳ
ಕುದಿಸು	ಕುದ್ಸು	ಬೇಯ್ಸು	ಬೇಯ್ಸು
ಪುಡಿಮಾಡು	ಸಣಮಾಡು	ಸಣಮಾಡು	ಸಣಮಾಡು
ರೊಟ್ಟೆತಟ್ಟು	ರ್ವಟಿಮಾಡು	ರಟ್ಟಿಮಾಡು	ರಟ್ಟಿಮಾಡು
ಲಟ್ಟಿಸು	ಲಟಾಸ್	ಲಟಾಸ್	ಲಟಾಸ್
ತುರಿ	ಯರ್ಜ	ಯರ್ಜ	ಯರ್ಜ
ಸೋಪ್ಪುಬಿಡಿಸು	ಪಲ್ಯಸೋಸು	ಪಲ್ಯಸೋಸು	ಪಲ್ಯಸೋಸು
ಅಕ್ಕಿಜಾಲಿಸು	ಜಾಲ್ಸು	ಜಾಲ್ಸು	ಜಾಲ್ಸು
ಊಟಮಾಡು	ಉಣ್ಣು	ಉಣ್ಣು	ಉಣ್ಣು
ಊಟಬಡಿಸು	ಊಟಕೊಡು	ಊಟಕೊಡು	ಊಟಕೊಡು
ತೊಳೆ	ತ್ವಳಿ	ತ್ವಳಿ	ತ್ವಳಿ
ಬೀಗ	ಪತ್ತ	ಪತ್ತ	ಪತ್ತ
ಕೈಚೀಲ	ಕಯಿಚೀಲ	ಕಯ್ಸಿಲ	ಕಯ್ಸಿಲ
ಸೀಮೆಎಣ್ಣೆದೀಪ	ಚಿಮಣಿದೀಪ	ಚಿಮಣಿದೀಪ	ಚಿಮಣಿದೀಪ
ವಿಶ್ವಾಸ	ವಿಸ್ವಾಸ	ವಿಸ್ವಾಸ	ವಿಸ್ವಾಸ
ಯುಗಾದಿ	ಉಗಾದಿ	ಉಗಾದಿ	ಉಗಾದಿ
ವಿಜಯದಸಮಿ	ವಿಜಯದಸಮಿ	ವಿಜಯದಸ್ಮಿ	ವಿಜಯದಸ್ಮಿ

ದೀಪಾವಳಿ	ದಿಪಾಳಿ	ದಿಪಾಳಿ	ದಿಪಾಳಿ
ಕರ್ಪೂರ	ಕರ್ಪುರ	ಕಪ್ಪುರ	ಕಪ್ಪುರ
ಭಜನೆ	ಬಜಿನಿ	ಬಜ್ನಿ	ಬಜ್ನಿ
ನಾಮಕರಣ	ನಾಮ್ಕರಣ	ನಾಮ್ಕರಣ/ ಯಸರಿಡದ	ನಾಮ್ಕರಣ/ ಯಸರಿಡದ
ಋತುಮತಿ	ಮೈನರ್ತರ/ ಮೆಯಿನರದರ	ಮೈನರ್ತಾರ/ ಮೆಯಿನರದರ	ಮೈನರ್ತರ/ ಮೆಯಿನರದ
ಜವಳ	ಜವ್ಳ	ಜವ್ಳ	ಜವ್ಳ
ಚಡ್ಡಿ	ಚೆಡ್ಡಿ	ಚೆಡ್ಡಿ	ಚೆಡ್ಡಿ
ಚಣ್ಣ	ಚೆಣ್ಣ	ಚೆಣ್ಣ	ಚೆಣ್ಣ
ಸೀರೆ	ಸೀರಿ	ಸೀರಿ	ಸೀರಿ
ಅರ್ಧಸೇರು	ಅಚ್ಚೇರು	ಅಚ್ಚೇರು	ಅಚ್ಚೇರು
ಒಂದುಮುಕ್ಕಾಲು	ಪಾವುಕಮ್ಮಿಯಲ್ಡು	ಪಾವುಕಮ್ಮಿಯಲ್ಡು	ಪಾವುಕಮ್ಮಿಯಲ್ಡು
ಒಬ್ಬ	ವಬ್ಬ	ವಬ್ಬ	ವಬ್ಬ
ಇಬ್ಬರು	ಇಬ್ರು	ಇಬ್ರು	ಇಬ್ರು
ಮಧ್ಯದವನು	ನಡ್ಲವ	ನಡ್ಲವ	ನಡ್ಲವ
ಕೊನೆಮಗ	ಸಣ್ಣಾತ	ಸಣ್ಣಾತ	ಸಣ್ಣಾತ
ಒಂದುಅರ್ಧಲಕ್ಷ	ದೀಡ್‌ಲಕ್ಸ	ದೀಡ್‌ಲಕ್ಸ	ದೀಡ್‌ಲಕ್ಸ
ತುಂತುರು	ಜಿಟುಗ	ಜಿಟುಗ	ಜಿಟುಗ
ತೆಗೆದುಕೋ	ತಗಾ	ತಗಾ	ತಗಾ
ಪೋಣಿಸು	ಪೋಣ್ಸು/ದೂರ್ಸು	ಪೋಣ್ಸು/ದೂರ್ಸು	ಪೋಣ್ಸು/ದೂರ್ಸು
ಅಗಲ	ಅಗ್ಲ	ಅಗ್ಲ	ಅಗ್ಲ
ನಡುಮಧ್ಯ	ನಡಬರ್ಕ	ನಡಬರ್ಕ	ನಡಬರ್ಕ
ಒಂಟಿಎತ್ತಿನಗಾಡಿ	ವಂಟಿಬಂಡಿ	ವಂಟಿಬಂಡಿ	ವಂಟಿಬಂಡಿ
ಜಟಕಾಬಂಡಿ	ಟಾಂಗ	ಟಾಂಗ	ಟಾಂಗ
ಬುಗುರಿ	ಬಗರಿ	ಬಗರಿ	ಬಗರಿ
ಗೋಲಿ	ಗೋಲಿಗುಂಡು	ಗೋಲಿಗುಂಡು	ಗೋಲಿಗುಂಡು
ಚಿಣ್ಣಿಕೋಲು	ಚಿಣ್ಣೆ	ಚಿಣ್ಣೆ	ಚಿಣ್ಣೆ

ಕುಂಟೆಬಿಲ್ಲಿ	ಕುಂಡ್ಲಿಪ	ಕುಂಡ್ಲಿಪ	ಕುಂಡ್ಲಿಪ
ಕೊಳಲು	ಕೊಳವೆ/ಕ್ವಳಲು	ಕೊಳವೆ	ಕೊಳವೆ
ತಮಟೆ	ದಮಡಿ	ದಮಡಿ	ದಮಡಿ
ಹಾರ್ಮೋನಿಯಂ	ಪೇನ್‌ಪೆಟಿಗಿ	ಪೇನ್‌ಪೆಟ್ಗಿ	ಪೇನ್‌ಪೆಟ್ಗಿ
ತಂತಿವಾದ್ಯ	ಏಕನಾಥಕಾಯಿ	ಏಕನಾತಕಾಯಿ	ಏಕನಾತಕಾಯಿ
ದುಡಿಮೆ	ದುಡ್ಮಿ	ದುಡ್ಮಿ	ದುಡ್ಮಿ
ಕೆಟ್ಟಬುದ್ಧಿ	ದುರ್ಬುದ್ದಿ	ದುರ್ಬುದ್ದಿ	ದುರ್ಬುದ್ದಿ
ಭಡಭಡ	ಸರಗ್ನ/ಬಡಬಡ	ಸರಗ್ನ	ಸರಗ್ನ
ಜುಳುಜುಳು	ದುಳುದುಳು	ದುಳದುಳ	ದುಳದುಳ
ಬೆಕ್ಕು	ಬೆಕ್ಕು/ಕ್ಯಾಸಿ	ಕ್ಯಾಸಿ	ಕ್ಯಾಸಿ
ದುಃಖ	ದುಕ್ಕ	ದುಕ್ಕ	ದುಕ್ಕ
ನೆಮ್ಮದಿ	ನೆಮದಿ	ನ್ಯಮ್ದಿ	ನ್ಯಮ್ದಿ
ಅನುಮಾನ	ಅನ್ಮಾನ	ಅನ್ಮಾನ	ಅನ್ಮಾನ
ವಂಚನೆ	ವಂಚಿನಿ	ವಂಚ್ನಿ	ವಂಚ್ನಿ
ಶಾಂತಿ	ಸ್ಯಾಂತಿ	ಸ್ಯಾಂತಿ	ಸ್ಯಾಂತಿ
ಮುನಿಸು	ಮುನ್ಸು	ಮುನ್ಸು	ಮುನ್ಸು
ಕಿರುಕುಳ	ತ್ವಂದ್ರಿ	ತ್ವಂದ್ರಿ	ತ್ವಂದ್ರಿ
ಚಟ	ಚೆಟ	ಚೆಟ	ಚೆಟ
ಮರೆವು	ಮರುವು	ಮರುವು	ಮರುವು
ಕೀರ್ತಿ	ಕೀರುತಿ	ಕೀರುತಿ	ಕೀರುತಿ
ಮರ್ಯ್ಯಾದೆ	ಮರಾದಿ	ಮರಾದಿ	ಮರಾದಿ
ನೆನಪು	ನೆಪ್ಪು	ನ್ಯಪ್ಪು	ನ್ಯಪ್ಪು
ಆಶ್ಚರ್ಯ	ಆಚರ್‍ಯ	ಆಚರ್‍ಯ	ಆಚರ್‍ಯ
ಪುಣ್ಯ	ಪುಣ್ಯ	ಪುನ್ಯ	ಪುನ್ಯ
ಗೊಂದಲ	ಗ್ವಂದ್ಲ	ಗ್ವಂದ್ಲ	ಗ್ವಂದ್ಲ
ನಷ್ಟ	ನಸ್ಟ	ನಸ್ಟ	ನಸ್ಟ
ಪುಕ್ಕಲು	ಅಂಜುಬುರಕ	ಅಂಜುಬುರ್ಕ	ಅಂಜುಬುರ್ಕ
ಸೂಕ್ಷ್ಮ	ಸೂಕ್ಸಮ	ಸೂಕ್ಸಮಿ	ಸೂಕ್ಸಮಿ

ವಾಸನೆ	ವಾಸ್ನಿ	ವಾಸ್ನಿ	ವಾಸ್ನಿ
ದುರ್ನಾತ	ಗಬ್ಬುನಾತ	ಗಬ್ಬುನಾತ	ಗಬ್ಬುನಾತ
ಸ್ವಚ್ಛ	ಅಸನ/ವಾಣ	ಅಸನ/ವಾಣ	ಅಸನ/ವಾಣ
ಚಾಡಿ	ಚುಚ್ಚು	ಚುಚ್ಚು	ಚುಚ್ಚು
ತುಂಟ	ಚಿದಗತನ	ಚಿದಗತನ	ಚಿದಗತನ
ಸೆಳೆತ	ಸಳ್ತ	ಸಳ್ತ	ಸಳ್ತ
ಕಾವು	ಬೆಚ್ಗ/ಕಾವು	ಬೆಚ್ಗ/ಕಾವು	ಬೆಚ್ಗ/ಕಾವು
ಮೃದು	ಮಿದು	ಮಿದು	ಮಿದು
ಎಡವಟ್ಟು	ಯದರು	ಯದರು	ಯದರು
ಜಂಬ	ಕೊಬ್ಬು	ಕ್ವಬು	ಕ್ವಬ್ಬು
ಹೊಟ್ಟೆಕಿಚ್ಚು	ಕುಲ್‌ತನ	ಕುಲ್‌ತನ	ಕುಲ್‌ತನ
ಆರೋಗ್ಯ	ಆರಗ್ಯ	ಆರಗ್ಯ	ಆರಗ್ಯ
ಬೆನ್ನುಮೂಳೆ	ಬ್ಯನ್ಮೂಳಿ	ಬ್ಯನ್ಮೂಳಿ	ಬನ್ಮೂಳಿ
ಹಿಮ್ಮಡಿ	ಇಮ್ಡಿ	ಇಮ್ಡಿ	ಇಮ್ಡಿ
ಮೊಣಕಾಲು	ಮಣ್ಕಾಲು	ಮಣ್ಕಾಲು	ಮಣ್ಕಾಲು
ಜ್ವರ	ಜರ	ಜರ	ಜರ
ಕೆಮ್ಮ	ಕ್ಯಮ್ಮು	ಕ್ಯಮ್ಮು	ಕ್ಯಮ್ಮು
ನೋವು	ಬ್ಯಾನಿ	ಬ್ಯಾನಿ	ಬ್ಯಾನಿ
ಮುಖ	ಮುಕ	ಮಾರಿ	ಮಾರಿ
ಅವನು	ಅತ	ಅತ	ಅತ
ಅವಳು	ಅಕಿ	ಅಕಿ	ಅಕಿ
ಅನ್ನ	ಅನ್ನ	ಅನ್ನ/ಅಂಬು	ಅನ್ನ/ಅಂಬು
ಅಳುತ್ತಾ ಇರತೀ	ಅತಕಂತಾಇರ್ತಿ	ಅತಕಂತಾಇರ್ತಿ	ಅತಕಂತಾಇರ್ತಿ
ಇದ್ದಾನೆ	ಅದಾನ	ಅದಾನ	ಅದಾನ
ಚಿಮುಕು	ಸಿಮ್ಸು	ಸಿಮ್ಸು	ಸಿಮ್ಸು
ಚರ್ಮ	ತೊಗ್ಲು	ತ್ವಗ್ಲು	ತ್ವಗ್ಲು
ಜೊತೆಗೆ	ಜತಿಗಿ	ಜತ್ಗಿ	ಜತ್ಗಿ
ಗಂಡುಮಕ್ಕಳು	ಗಣ್‌ಮಕ್ಳು	ಗೊಣ್‌ಮಕ್ಳು	ಗೊಣ್‌ಮಕ್ಳು

ಕೊರಡು	ಕೊಲ್ಡ	ಕ್ವಲ್ಡ	ಕ್ವಲ್ಡ
ಉಡುಗೊರೆ	ಮುಯ್ಯ	ಮುಯ್ಯಿ	ಮುಯ್ಯಿ
ಉಸುಕು	ಉಸ್ಗು	ಉಸ್ಗು	ಉಸ್ಗು
ಪಕ್ಕಕ್ಕೆ	ಮಗ್ಗುಲು	ಮಗ್ಲು	ಮಗ್ಲು
ಬಸುರಿ	ಬಸಿರಿ	ಬಸ್ರಿ	ಬಸ್ರಿ
ಹೋಗುತ್ತೀಯಾ	ಓತಿ	ಓತಿ	ಓತಿ
ಸುಮ್ಮನೆ	ಸುಂಕ	ಸುಂಕ	ಸುಂಕ
ಸ್ನಾನಮಾಡು	ಮೈತ್ವಳ್ಕ	ಮೈತ್ವಳ್ಕ	ಮೈತ್ವಳ್ಕ
ಸಮೀಪ	ಸನೀಪ	ಸನ್ಯಾಕ	ಸನ್ಯಾಕ
ಅಗ್ಗ/ಕಡಿಮೆ	ಸೋವಿ	ಸೋವಿ	ಸೋವಿ
ಶಿಳ್ಳು	ಸಿಳ್ಳು	ಸಿಳ್ಳು	ಸಿಳ್ಳು
ಸೇವಂತಿಗೆ	ಸ್ಯಾವಂತ್ಗಿ	ಸ್ಯಾವಂತ್ಗಿ	ಸ್ಯಾವಂತ್ಗಿ
ಸಂಬಾರು	ಸಾರು	ಸಾರು	ಸಾರು
ವ್ಯವಹಾರ	ಯವಾರ	ಯವಾರ	ಯವಾರ
ರಪ್ಪೆ	ರಪ್ಪಿ	ರ‍್ಯಪ್ಪಿ	ರ‍್ಯಪ್ಪಿ
ಮುಹೂರ್ತ	ಮೂರ್ತ	ಮೂರ್ತ	ಮೂರ್ತ
ಪ್ರಾಯ	ಅರೇವು	ಅರೇವು	ಅರೇವು
ಜಾಣ	ಜಾಣ	ಸ್ಯಾಣ್ಯ	ಸ್ಯಾಣ್ಯ
ಕುರ್ಚಿ	ಕುರ್ಜಿ	ಕುರ್ಜಿ	ಕುರ್ಜಿ
ಮದುಮಗಳು	ಮದಮಗಳು/ಮದ್ಲಿಗಿತ್ತಿ	ಮದುಮಗ್ಳು/ ಮದ್ಲಿಗಿತ್ತಿ	ಮದುಮಗ್ಳು/ ಮದ್ಲಿಗಿತ್ತಿ
ಒಂದುಗಂಟೆ	ವಂತಾಸು	ವಂತಾಸು	ವಂತಾಸು
ಸಾಗುವಳಿ	ಕೋರಿಗೆ	ಕೋರಿಗೆ	ಕೋರಿಗೆ
ತಿರುಗು	ವಳ್ಳು	ವಳ್ಳು	ವಳ್ಳು
ಜನ್ಮ	ಜಲ್ಮ	ಜಲ್ಮ	ಜಲ್ಮ
ಶಾವಿಗೆ	ಸ್ಯಾವ್ಗಿ	ಸ್ಯಾವ್ಗಿ	ಸ್ಯಾವ್ಗಿ
ತಲೆಮಧ್ಯೆ	ನೆತ್ತೆ	ನ್ಯತ್ತಿ	ನ್ಯತ್ತಿ
ಆಮೇಲೆ	ಆಮೆಕಡಿ	ಆಮೆಕಡಿ	ಆಮೆಕಡಿ

ನನ್ನದು	ನಂದು	ನಂದು	ನಂದು
ನಿನ್ನದು	ನಿಂದು	ನಿಂದು	ನಿಂದು
ವ್ಯಸನ	ಯಸನ	ಯಸ್ನ	ಯಸ್ನ
ಮದುವೆ	ಮದ್ವಿ	ಮದ್ವಿ	ಮದ್ವಿ
ಮಠ	ಮಟ	ಮಟ	ಮಟ
ಪ್ರಾರಂಭ	ಚಲುವು/ಸುರುವು	ಚಲುವು/ಸುರುವು	ಚಲುವು/ಸುರುವು
ಪ್ರಯಾಣ	ಪಯಣ	ಪಯಣ	ಪಯಣ
ತರಕಾರಿ	ಕಾಯಿಪಲ್ಲೆ	ಕಾಯಿಪಲ್ಲೆ	ಕಾಯಿಪಲ್ಲೆ
ಜಾತಿ	ಜಾತಿ/ಮಂದಿ	ಜಾತಿ/ಮಂದಿ	ಜಾತಿ/ಮಂದಿ
ಜರಡಿ	ಜಲ್ಡಿ	ಜಲ್ಡಿ	ಜಲ್ಡಿ
ಚಿಲ್ಲರೆ	ಚಿಲ್ಲರ	ಚಿಲ್ರ/ಸಿಲ್ರ	ಚಿಲ್ರ/ಸಿಲ್ರ
ಗ್ರಹಣ	ಗ್ರಅಣ	ಗ್ರಾಣ	ಗ್ರಾಣ
ಗೊಂಚಲು	ಗ್ವಂಚ್ಲ	ಗ್ವಂಚ್ಲ	ಗ್ವಂಚ್ಲ
ಗುರುವಾರ	ಬ್ರೇಸ್ವಾರ	ಬ್ರೇಸ್ವಾರ	ಬ್ರೇಸ್ವಾರ
ಓಣಿ	ವೋಣಿ	ವೋಣಿ	ವೋಣಿ
ಊರಿನದನ	ಜಂಗ್ಳದನ	ಜಂಗ್ಳದನ	ಜಂಗ್ಳದನ
ಇತ್ತಕಡೆ	ಇತ್ತಾಗ/ಇತ್ತಕಡಿ	ಇತ್ತಾಗ/ಇತ್ಕಡಿ	ಇತ್ತಾಗ/ಇತ್ಕಡಿ
ಹೋಗುತ್ತವೆ	ಓತಾವ	ಓತಾವ	ಓತಾವ
ಚಲಿಕೆ	ಸಲ್ಕಿ	ಸಲ್ಕಿ	ಸಲ್ಕಿ
ಮಾಡುವುದಕ್ಕೆ	ಮಾಡಕ	ಮಾಡಾಕ	ಮಾಡಾಕ
ಹತ್ತಿ	ಅತ್ತಿ	ಅತ್ತಿ	ಅತ್ತಿ
ತಿನ್ನುಜೋಳ	ತಿನ್ನಜ್ವಾಳ	ತಿನ್ನಜ್ವಾಳ/ ತಿಂಬಜ್ವಾಳ	ತಿನ್ನಜ್ವಾಳ/ ತಿಂಬಜ್ವಾಳ
ಹೋಗುತ್ತಾನೆ	ಓತಾನ	ಓತಾನ	ಓತಾನ
ಬರುತ್ತಾನೆ	ಬರ್ತಾನ	ಬರ್ತಾನ	ಬರ್ತಾನ
ನಿಲ್ಲುವುದಿಲ್ಲ	ನಿಲ್ಲಂಗಿಲ್ಲ	ನಿಲ್ಲಂಗಿಲ್ಲ	ನಿಲ್ಲಂಗಿಲ್ಲ
ಬರುತ್ತಿಲ್ಲ	ಬರಾಕಿಲ್ಲ	ಬರಾಕಿಲ್ಲ	ಬರಾಕಿಲ್ಲ
ಬರುವುದಿಲ್ಲ	ಬರಂಗಿಲ್ಲ	ಬರಂಗಿಲ್ಲ	ಬರಂಗಿಲ್ಲ

ಸಮತಟ್ಟಾದಭೂಮಿ	ಸವತಟ್ಟ	ಸವತಟ್ಟ/ಸವತೂಕ	ಸವತಟ್ಟ/ಸವತೂಕ
ಎತ್ತರಭೂಮಿ	ಬಗಡಿ	ಬಗಡಿ/ವಂಟೆದಿಬ್ಬ	ಬಗಡಿ/ವಂಡೆದಿಬ್ಬ
ತಗ್ಗಾದಭೂಮಿ	ನಾಲಾ	ನಾಲಾ	ನಾಲಾ
ಅರನಳಿಗೆ (ಮಳೆನೀರುಹೊರಹೋಗುವುದು)	ಡೋಣಿ	ಡೋಣಿ	ಡೋಣಿ
ಗುಣೇವು	ಮಾಡ	ಮಾಡ	ಮಾಡ
ಬೆಳಕಿಂಡಿ	ಗವಾಂಚಿ/ಗಬಾಕ್ಲಿ	ಗವಾಂಚಿ/ಗಬಾಕ್ಲಿ	ಗವಾಂಚಿ/ಗಬಾಕ್ಲಿ
ನೀರಿನಗುಂಡಿ	ಮಡ್ಗ	ಮಡ್ಗ	ಮಡ್ಗ
ಅಂಬಲಿ	ಕಟಾಂಬ್ಲಿ	ಕಟಾಂಬ್ಲಿ	ಕಟಾಂಬ್ಲಿ
ತೆಂಗಿನಸಿಪ್ಪೆ	ಟೆಂಗಿನಪೀಚು	ಟೆಂಗ್ನಿಪೀಚು	ಟೆಗ್ನಿಪೀಚು
ತೊಗಟೆ	ತೊಗಟೆ/ತಬಡೆ	ತ್ವಗ್ಟಿ/ತಬಡೆ	ತ್ವಗ್ಟಿ/ತಬಡೆ
ಹುಣಸೆಬೀಜ	ಪಿಚ್ಚೆ	ಪಿಚ್ಚೆ	ಪಿಚ್ಚೆ
ಕುರಿಗಳು	ಕುರಿಹಿಂಡು	ಕುರಿಹಿಂಡು	ಕುರಿಹಿಂಡು
ದನದಕೊಟ್ಟಿಗೆ	ದನದಮನಿ	ದನ್ನಮನಿ	ದನ್ನಮನಿ
ಕೆಳಗೆ ಇಡು	ಅಡಿಗಿಡು	ಅಡಿಗಿಡು	ಅಡಿಗಿಡು
ತೆನೆ	ಕಂಕಿ	ಕಂಕಿ	ಕಂಕಿ
ಹಲ್ಲಿನಕುಂಟೆ	ಜಂತಿಕುಂಟಿ	ಜಂತಿಕುಂಟಿ	ಜಂತಿಕುಂಟಿ
ಉತ್ತಣಿಬಾರಿಗೆ	ಸೆಳ್ಳು	ಸೆಳ್ಳು	ಸೆಳ್ಳು
ಬಿದರಿನ ಪುಟ್ಟಿ	ಕೆರಸಿ	ಕೆರಸಿ	ಕೆರಸಿ
ಇಕ್ಕಳ	ಇಕ್ಕ/ಚಿಮ್ಮಿಗಿ	ಇಕ್ಕ/ಚಿಮ್ಮಿಗಿ	ಇಕ್ಕ/ಚಿಮ್ಮಿಗಿ
ವಕ್ರಕಲ್ಲು	ಮೋಟಕಲ್	ಮೋಟಕಲ್	ಮೋಟಕಲ್
ಬಿರುಗಾಳಿ	ಓಡುಗಾಳಿ	ಓಡುಗಾಳಿ	ಓಡುಗಾಳಿ
ಹನಿಹನಿಮಳೆ	ತುಪ್ರಿಮಳಿ	ತುಪ್ಪಿಮಳಿ	ತುಪ್ರಿಮಳಿ
ಬಳ್ಳಿ	ಬ್ಯಳ್ಳಿ	ಬ್ಯಳ್ಳಿ	ಬ್ಯಳ್ಳಿ
ಬೊಡ್ಡೆ	ಬಡ್ಡಿ	ಬಡ್ಡಿ	ಬಡ್ಡಿ
ನರಿ	ನ್ಯರಿ	ನ್ಯರಿ	ನ್ಯರಿ
ತೋಳ	ತ್ವಾಳ	ತ್ವಾಳ	ತ್ವಾಳ
ಕಹಿ	ಇಸ್ಸಾ	ಇಸ್ಸಾ	ಇಸ್ಸಾ

ಅನಕ್ಷರಸ್ಥರು	ಮೋಟುಮಂದಿ	ಮೋಟುಮಂದಿ	ಮೋಟುಮಂದಿ
ಗೂಳಿ	ಗುಳೇರಿ	ಗುಳೇರಿ	ಗುಳೇರಿ
ಜೇಡ	ಜಡಪರಿ	ಜಡಪರಿ	ಜಡಪರಿ
ಯಾವುದಕ್ಕೆ	ಯದುಕ	ಯದುಕ	ಯದುಕ
ಭತ್ತ	ಕವಳಿ	ಕವ್ಳಿ	ಕವ್ಳಿ
ನೇಗಿಲು	ಮಡಕಿ	ಮಡ್ಕಿ	ಮಡ್ಕಿ
ಚೆನ್ನಾಗಿ	ಬರಾಬರಿ	ಬರಾಬರಿ	ಬರಾಬರಿ
ಕಪಲೆ/ಏತ	ಮಟ್ಟಿಬಾವಿ	ಮಟ್ಟಿಬಾವಿ	ಮಟ್ಟಿಬಾಯಿ
ಎಲ್ಲವೂ	ವೋಸು	ವೋಸು	ವೋಸು
ಇದೆ	ಅಯ್ತಿ	ಅಯ್ತಿ	ಅಯ್ತಿ
ಬೆಳುವ	ಬೆಳ್ವ	ಬೆಳ್ವ	ಬೆಳ್ವ
ಜೀವನ	ಬಾಳೇವು	ಬಾಳೇವು	ಬಾಳೇವು
ಕೆಳಗಿನದು	ಬುಡ್ಕೆಂದು	ಬುಡ್ಕಂದು	ಬುಡ್ಕಂದು
ಸಣ್ಣವರು	ಸಣ್ಣಾರು	ಸಣ್ಣನಾರು	ಸಣ್ಣನಾರು
ದೊಡ್ಡವರು	ದ್ವಡ್ಡಾರು	ದ್ವಡ್ಡನಾರು	ದ್ವಡ್ಡನಾರು
ನಡೆಯುವುದಿಲ್ಲ	ನಡ್ಯಂಗಿಲ್ಲ	ನಡ್ಯಂಗಿಲ್ಲ	ನಡ್ಯಂಗಿಲ್ಲ
ಸುಮ್ಮನೆ	ಸುಮ್ನ	ಸುಮ್ನ	ಸುಮ್ನ
ಅವರಹತ್ತಿರ	ಅವರಕುಡ	ಅವರಕುಡ	ಅವರಕುಡ
ಏನಾದರೂ	ಏನರಾ	ಏನರಾ	ಏನರಾ
ಒಳ್ಳೆಯವನು	ವಳ್ಳೇತ	ವಳ್ಳೇತ	ವಳ್ಳೇತ
ಅವರಲ್ಲಿ	ಅವರತಾಕ	ಅವ್ರತಾಕ	ಅವ್ರತಾಕ
ತೆಗೆದುಕೊಂಡುಹೋದ	ತಗಂಡಕೇಸಿವೋದ	ತಗಂಡಕೇಸಿವೋದ	ತಗಂಡಕೇಸಿವೋದ
ಕೊಟ್ಟುಹೋಗು	ಕ್ವಟ್‌ಕೇಸಿವೋಗು	ಕ್ವಟ್‌ಕೇಸಿವೋಗು	ಕ್ವಟ್‌ಕೇಸಿವೋಗು
ದಾರಿಉದ್ದಕ್ಕೂ	ದಾರಿಗುಂಟ	ದಾರಿಗುಂಟ	ದಾರಿಗುಂಟ
ಹತ್ತಿರಹತ್ತಿರ	ಅತ್ಯತ್ರ	ಅತ್ಯತ್ರ	ಅತ್ಯತ್ರ
ಬರುತ್ತಿದ್ದಾರೆ	ಬರಕತ್ತ್ಯಾರ	ಬರಕತ್ತ್ಯಾರ	ಬರಕತ್ತ್ಯಾರ
ಬೇರೆಯವರು	ಬದಲ್ಯಾರ	ಬದಲ್ಯಾರ	ಬದಲ್ಯಾರ
ಹಂದರ	ಅಂದ್ರ	ಅಂದ್ರ	ಅಂದ್ರ

ಬೇರೆ	ಬ್ಯಾರ್ಯ	ಬ್ಯಾರ್ಯ	ಬ್ಯಾರ್ಯ
ಅಪ್ಪುಮಾಡು	ಅಟಮಾಡು	ಅಟಮಾಡು	ಅಟಮಾಡು
ಬೇಸರ	ಬ್ಯಾಸ್ರ	ಬ್ಯಾಸ್ರ	ಬ್ಯಾಸ್ರ
ಹೆದರಿಕೆ	ಅಂಜಿಕೆ	ಅಂಜ್ಕಿ	ಅಂಜ್ಕಿ
ಹಾಗೇಆದರೆ	ಅಂಗಾರ	ಅಂಗಾರ	ಅಂಗಾರ
ನಿಜ	ಕರೆ	ಕರೆ	ಕರೆ
ತೆಗೆದುಕೊಂಡು ಬಾ	ತಗಂಡಕೆಸಿ ಬಾ	ತಗಂಬಕೇಸಿ ಬಾ	ತಗಂಬಕೇಸಿ ಬಾ
ಬಲವಂತ	ಬಲಾಡ್ಯ	ಬಲಾಡ್ಯ	ಬಲಾಡ್ಯ
ಅಂತಹೇಳು	ಅಂತೇಳು	ಅಂತೇಳು	ಅಂತೇಳು
ಹಚ್ಚಿಕೊಳ್ಳು	ಅಚಿಕಂಡಿ	ಅಚಿಕಂಡಿ	ಅಚಿಕಂಡಿ
ಹಗಲುಹೊತ್ತು	ಅಗಲತ್ತು	ಅಗ್ಲತ್ತು	ಅಗ್ಲತ್ತು
ಉದ್ಯೋಗ	ಉದ್ಯೂಗ	ಉದ್ಯೂಗ	ಉದ್ಯೂಗ
ವ್ಯಾಪಾರ	ಯಾಪಾರ	ಯಾಪಾರ	ಯಾಪಾರ
ಈಕಡೆ	ಇಕಡಿ	ಇಕಡಿ	ಇಕಡಿ
ಅನಿವಾರ್ಯ	ನಿರುವು	ನಿರುವು	ನಿರುವು
ಎಷ್ಟು	ಏಟ/ಏಸು	ಏಟು/ಏಸ	ಏಟ/ಏಸ
ನಡೆದಾಡಿ	ಅಡ್ನಾಡಿ	ಅಡ್ನಾಡಿ	ಅಡ್ನಾಡಿ
ಎದ್ದೇಳು	ಯದಳು	ಯದಳು	ಯದಳು
ಕೊತ್ತಂಬರಿ	ಕೊತಂಬ್ರಿ	ಕ್ವತಂಬ್ರಿ	ಕ್ವತಂಬ್ರಿ
ಹೇಳಿದಷ್ಟು	ಏಳದಾಟ	ಏಳದಾಟ	ಏಳದಾಟ
ಕಾಲು ಕೆ.ಜಿ	ಪಾವು ಕೆ.ಜಿ	ಪಾವು ಕೆ.ಜಿ	ಪಾವು ಕೆ.ಜಿ
ಯಾರಾದರು	ಯಾರ್‍ಯಾರ	ಯಾರ್‍ಯಾರ	ಯಾರ್‍ಯರ
ತಿಂಡಿ	ನಾಷ್ಟ	ನಾಷ್ಟ	ನಾಷ್ಟ
ಹರಾಜು	ಯಲಾಮು	ಯಲಾಮು	ಯಲಾಮು
ಸ್ಪೆಷಲ್‌ಚಹಾ	ಕೆ.ಟಿ	ಕೆ.ಟಿ	ಕೆ.ಟಿ
ತಿರುಗಿ ಬಾ	ವಳ್ಳಿಬಾ	ವಳ್ಳಿಬಾ	ವಳ್ಳಿಬಾ
ಚೆನ್ನಾಗಿದ್ದಾರೆ	ಆರಾಮರ	ಆರಾಮರ	ಆರಾಮರ
ಹೇಗೆ	ಯ್ಹಂಗ	ಯ್ಹಂಗ	ಯ್ಹಂಗ

ಮದುವೆ ಅಡುಗೆ	ದ್ವಡ್ಡಡಗಿ	ದ್ವಡ್ಡಡಗಿ	ದ್ವಡ್ಡಡಗಿ
ನೋಡಿಕೊಂಡು	ನೋಡ್ಕಂಡ	ನೋಡ್ಕಂಡ	ನೋಡ್ಕಂಡ
ಸಲುವಾಗಿ	ಸಲ್ವಾಗಿ	ಸಲ್ವಾಗಿ	ಸಲ್ವಾಗಿ
ದಾಟಿ	ತಡಾದು	ತಡಾದು	ತಡಾದು
ಒಮ್ಮೆಲೆ	ಏಕದಂಕಲೆ	ಏಕದಂಕಲೆ	ಏಕದಂಕಲೆ
ಶಾಲೆ	ಸ್ಯಾಲಿ	ಸ್ಯಾಲಿ	ಸ್ಯಾಲಿ
ಧಾನ್ಯಗಳು	ಕಾಳುಕಡ್ಡಿ	ಕಾಳುಕಡ್ಡಿ	ಕಾಳುಕಡ್ಡಿ
ಕೊಡಲಿ	ಕೊಡ್ಳಿ	ಕ್ವಡ್ಳಿ	ಕ್ವಡ್ಳಿ
ಬೇಗ	ದೌಡ್/ಲಾಗ್‌ಲಚ್	ದೌಡ್/ಲಾಗ್‌ಲಚ್	ದೌಡ್/ಲಾಗ್‌ಲಚ್
ತೆಳ್ಳಗ	ತೆಳ್ಗ	ತೆಳ್ಗ	ತೆಳ್ಗ
ಹಿಂದುಗಡೆ	ಇಂದ್ಗಡಿ	ಇಂದ್ಗಡಿ	ಇಂದ್ಗಡಿ
ಮುಂದುಗಡೆ	ಮುಂದ್ಗಡಿ	ಮುಂದ್ಗಡಿ	ಮುಂದ್ಗಡಿ
ಕೊಲ್ಲು	ಕೊಲ್ಲಿ	ಕೊಲ್ಲಿ	ಕೊಲ್ಲಿ
ವೇಳೆ	ವ್ಯಾಳಿ	ಯಾಳಿ	ಯಾಳಿ
ಪಕ್ಕಕ್ಕೆ	ಬಗ್ಲ	ಬಗ್ಲ	ಬಗ್ಲ
ಸೋಮವಾರ	ಸೋಮಾರ	ಸೋಮಾರ	ಸೋಮಾರ
ಹೋಗಲಿ	ಓಲಿ	ಓಲಿ	ಓಲಿ
ತೊಂದರೆ	ತ್ರಾಸ	ತ್ರಾಸ	ತ್ರಾಸ
ಎಷ್ಟುಹೊತ್ತು	ಏಟವತ್ತು	ಏಟ್ಟತ್ತು	ಏಟ್ಟತ್ತು
ಮುಖ	ಮಾರಿ	ಮಾರಿ	ಮಾರಿ
ತಂಬಿಗೆ	ತಂಬ್ಗಿ	ತಂಬ್ಗಿ	ತಂಬ್ಗಿ
ಸರಿಸಮ	ಸವಾ	ಸವಾ	ಸವಾ
ಗೆಳೆಯ	ಗ್ಯಣ್ಯಾ	ಗ್ಯಣ್ಯಾ	ಗ್ಯಣ್ಯಾ
ಕಳೆ	ಕಳಿ/ತ್ಯಗಿ	ಕಳಿ/ತ್ಯಗಿ	ಕಳಿ/ತ್ಯಗಿ
ಪೆದ್ದ	ಪ್ಯಾಲಿ	ಪ್ಯಾಲಿ	ಪ್ಯಾಲಿ
ಕಡೆಯಿಂದ	ಕಡಿಂದ	ಕಡಿಂದ	ಕಡಿಂದ
ಕಂಬಳಿ	ಕಂಬ್ಳಿ/ಗೊಂಗ್ಡಿ	ಕಂಬ್ಳಿ/ಗೊಂಗ್ಡಿ	ಕಂಬ್ಳಿ/ಗೊಂಗ್ಡಿ
ಯೋಜನೆ	ಯೋಜ್ನಿ/ಮಸಲತ್	ಯೋಜ್ನ/ಮಸಲತ್ತು	ಯೋಜ್ನ/ಮಸಲತ್ತು

ರಸ್ತೆ	ಆದಿ/ರೋಡ್	ಆದಿ/ರೋಡ್	ಆದಿ/ರೋಡ್
ಅತಿ	ಅಗದೀ	ಅಗದೀ	ಅಗದೀ
ಸೋಜಿಗ	ಚೋಜ್ಗ	ಚೋಜ್ಗ	ಚೋಜ್ಗ
ಕುರುಡ	ಕುಲ್ಡ	ಕುಲ್ಡ	ಕುಲ್ಡ
ಮನೆತನ	ಮನ್ತೆನ	ಮನ್ತನ	ಮನ್ತನ
ಕಿವುಡ	ಕಿವ್ಡ	ಕಿವ್ಡ	ಕಿವ್ಡ
ಇಷ್ಟು	ಈಟು	ಈಟು	ಈಟು
ಇವನು	ಇತ	ಇತ	ಇತ
ಕೇಳಲಿ	ಕೇಳ್ಳಿ	ಕೇಳ್ಳಿ	ಕೇಳ್ಳಿ
ತಿನ್ನಲಿ	ತಿನ್ಲಿ	ತಿನ್ಲಿ	ತಿನ್ಲಿ
ಹಾಡಲಿ	ಆಡ್ಲಿ	ಆಡ್ಲಿ	ಆಡ್ಲಿ
ಬರದೆ	ಬರ್ಲಿಕ್ರ	ಬರ್ಲಿಕ್ರ	ಬರ್ಲಿಕ್ರ
ತರದೆ	ತರ್ಲಿಕ್ರ	ತರ್ಲಿಕ್ರ	ತರ್ಲಿಕ್ರ
ಕೊರೆ	ಕ್ವರಿ	ಕ್ವರಿ	ಕ್ವರಿ
ಎಡಕ್ಕೆ	ಯಡ್ಗಡಿ	ಯಡ್ಗಡಿ	ಯಡ್ಗಡಿ
ಬಲಕ್ಕೆ	ಬಲ್ಗಡಿ	ಬಲ್ಗಡಿ	ಬಲ್ಗಡಿ
ಒಗೆ	ವಕಡ	ವಕಡ	ವಕಡ
ಏಕೆ	ಯಾಕ	ಯಾಕ	ಯಾಕ
ಮುಂದೆ	ಮುಂದ	ಮುಂದ	ಮುಂದ
ಸಪ್ಪೆ	ಸಪ್ಪ/ಸಪ್ಗ	ಸಪ್ಪ/ಸಪ್ಗ	ಸಪ್ಪ/ಸಪ್ಗ
ಹಿತ್ತಿಲು	ಇತ್ಲ	ಇತ್ಲ	ಇತ್ಲ
ಬಿಳುಪು	ಬಿಳ್ಪ	ಬಿಳ್ಪ	ಬಿಳ್ಪ
ಬೆಳ್ಳಿ	ಬ್ಯಳ್ಳಿ	ಬ್ಯಳ್ಳಿ	ಬ್ಯಳ್ಳಿ
ನೆನೆ	ನ್ಯನಿ	ನ್ಯನಿ	ನ್ಯನಿ
ಮೆರೆ	ಮ್ಯಾರಿ/ವರ್ಮ	ಮ್ಯಾರಿ/ವರ್ಮ	ಮ್ಯಾರಿ/ವರ್ಮ
ಕೊಡಿಸು	ಕ್ವಡುಸು	ಕ್ವಡ್ಸು	ಕ್ವಡ್ಸು
ಮೋಟರ್	ಮಾಟರ್	ಮಾಟರ್	ಮಾಟರ್
ಮೊಸಳೆ	ಮಸಿಳಿ	ಮಸ್ಳಿ	ಮಸ್ಳಿ

ಗೊನೆ	ಗ್ವನಿ	ಗ್ವನಿ	ಗ್ವನಿ
ಮೊಣಕೈ	ಮಳಕ್ಯೆ	ಮಳಕ್ಯೆ	ಮಳಕ್ಯೆ
ಜೋಡಿ	ಜ್ವತಿ/ಜತಿ	ಜ್ವತಿ/ಜತಿ	ಜ್ವತಿ/ಜತಿ
ಪುಸ್ತಕ	ಪುಸ್್ತಗ	ಪುಸ್್ತಗ	ಪುಸ್್ತಗ
ನಾಟಕ	ನಾಟ್್ಗ	ನಾಟ್್ಗ	ನಾಟ್್ಗ
ಚೂರು	ತ್ವೂರು	ತ್ವೂರು	ತ್ವೂರು
ಚುಟ್ಟ	ತ್ವುಟ್ಟ	ತ್ವುಟ್ಟ	ತ್ವುಟ್ಟ
ಶುಕ್ರವಾರ	ಸುಕ್ರವಾರ	ಸುಕ್ರವಾರ	ಸುಕ್ರವಾರ
ವಿಶೇಷ	ವಿಸೇಸ	ವಿಸೇಸ	ವಿಸೇಸ
ವ್ಯಸನ	ಯಸ್ನ	ಯಸ್ನ	ಯಸ್ನ
ಇವೆ	ಅದಾವ	ಅದಾವ	ಅದಾವ
ತಳ್ಳು	ನೂಕು	ನೂಕು	ನೂಕು
ಆಕೆ	ಅಕಿ	ಅಕಿ	ಅಕಿ
ಬಿದ್ದಳು	ಬಿದ್ಲು	ಬಿದ್ಲು	ಬಿದ್ಲು
ಮುರಿದಿದೆ	ಮುರುದಯ್ತಿ	ಮುರುದಯ್ತಿ	ಮುರುದಯ್ತಿ
ಕುಳಿತಿದ್ದಾರೆ	ಕುಂತಾರ	ಕುಂತಾರ	ಕುಂತಾರ
ಬಿತ್ತಿದಂತೆ	ಬಿತ್ತಿದಂಗ	ಬಿತ್ತಿದಂಗ	ಬಿತ್ತಿದಂಗ
ಕುಳಿತಿದೆ	ಕುಂತಯ್ತಿ	ಕುಂತಯ್ತಿ	ಕುಂತಯ್ತಿ
ಹುಳು	ಉಳ	ಉಳ	ಉಳ
ಹೊರತೆಗೆ	ಕಡಿಗೆತೆಗಿ	ಕಡ್ಗಿತೆಗಿ	ಕಡ್ಗಿತೆಗಿ
ಹೋಗೋಣ	ಓಗಾಮ	ಓಗಾಮ	ಓಗಾಮ
ಗಂಡುಮಗು	ಗ್ವಂಡುಮಗು	ಗ್ವಂಡುಮಗು	ಗ್ವಂಡುಮಗು
ಕಾಣುತ್ತಿದೆ	ಕಾಣಕತ್ಯೆತಿ	ಕಾಣಕತ್ಯೆತಿ	ಕಾಣಕತ್ಯೆತಿ
ತೆಗೆದರು	ತೆಗೆದ್ರು	ತ್ಯಗುದ್ರು	ತ್ಯಗುದ್ರು
ಬಂದಿದೆ	ಬನ್ದಯ್ತಿ	ಬನ್ದಯ್ತಿ	ಬನ್ದಯ್ತಿ
ಸೇರಿದರು	ಕಲ್ತ್ರು	ಕಲ್ತ್ರು	ಕಲ್ತ್ರು
ಬರುತ್ತೇನೆ	ಬರ್ತೀನಿ	ಬರ್ತೀನಿ	ಬರ್ತೀನಿ
ಹಾಳೆ	ಆಳಿ	ಆಳಿ	ಆಳಿ

ಜಿಪುಣ	ಜಿಬ್ಬ	ಜಿಬ್ಬ	ಜಿಬ್ಬ
ಜೋರಾಗಿ	ಜಿಗೂದ	ಜಿಗೂದ	ಜಿಗೂದ
ಹಾರಿದ	ಜಿಗಿದ	ಜಿಗದ	ಜಿಗದ
ಬೈತಲೆ	ಪಾಪಡಿ	ಪಾಪಡಿ	ಪಾಪಡಿ
ಫ್ಯಾನ್	ತಿರುಗಣಿ/ಪಂಕ	ಪಂಕ/ತಿರುಗಣಿ	ಪಂಕ/ತಿರುಗಣಿ
ಬೇಡ	ವಲ್ಯ	ವಲ್ಯ	ವಲ್ಯ
ಮುಳ್ಳು	ಮುಳುವು	ಮುಳುವು	ಮುಳುವು
ಈಗ	ಇವಾಗ	ಇವಾಗ	ಇವಾಗ
ವ್ಯತ್ಯಾಸ	ಯತ್ಯಾಸ	ಯತ್ಯಾಸ	ಯತ್ಯಾಸ
ಎಲ್ಲವು	ಎಲ್ಲಾವೋಸು	ಎಲ್ಲಾವೋಸು	ಎಲ್ಲಾವೋಸು

ಅಧ್ಯಾಯ ೯

ಮಸ್ಕಿಕನ್ನಡದ ಸೀಮಾರೇಖೆ

ಅಧ್ಯಾಯ ೯

ಮಸ್ಕಿಕನ್ನಡದ ಸೀಮಾರೇಖೆ

ಸಂಬೋಧಕ ಉಪಭಾಷೆಗಳನ್ನು ಕಂಡು ಅಧ್ಯಯನ ಮಾಡಿ ನಂತರ ಉಪಭಾಷೆ ಭೂಪಟ ತಯಾರಿಸುತ್ತಾನೆ. ಸಂಗ್ರಹಿಸಿದ ಆಕರಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಅವುಗಳ ಧ್ವನಿ, ಪದ, ವಾಕ್ಯ, ಅರ್ಥ, ವ್ಯಾಕರಣ, ಮುಂತಾದವುಗಳಲ್ಲಿ ಕಾಣಿಸಿಕೊಳ್ಳಬಹುದಾದ ವ್ಯತ್ಯಾಸಗಳನ್ನು ಗುರುತಿಸುವುದು, ನಂತರ ಅವುಗಳ ಭೂಪಟವನ್ನು ತಯಾರಿಸಬೇಕಾಗುತ್ತದೆ. ಸಾಮಾನ್ಯವಾಗಿ ಭಾಷೆಯಲ್ಲಿ ಪ್ರಾದೇಶಿಕ ಭೇದಗಳು ಕಂಡುಬರುವುದನ್ನು ಗಮನಿಸುತ್ತೇವೆ. ರಾಜಕೀಯ ಗಡಿಯಲ್ಲಿ ಒಂದು ಉಪಭಾಷೆ ಎಲ್ಲಿ ಕೊನೆಗೊಳ್ಳುತ್ತದೆ ಹಾಗೂ ಇನ್ನೊಂದು ಉಪಭಾಷೆ ಎಲ್ಲಿಂದ ಪ್ರಾರಂಭವಾಗುತ್ತದೆ ಎಂದು ನಿರ್ದಿಷ್ಟವಾಗಿ ಹೇಳಲು ಅಸಾಧ್ಯ. ಎರಡು ಉಪಭಾಷೆಗಳು ಕೂಡುವ ಪ್ರದೇಶವು ಒಂದು ರೇಖೆಯಾಗಿರದೆ; ಒಂದು ಚಿಕ್ಕ ಪ್ರದೇಶವೇ ಆಗಿರುತ್ತದೆ. ಇಂತಹ ಪ್ರದೇಶದಲ್ಲಿ ಎರಡೂ ಉಪಭಾಷೆಯ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಒಂದು ಪದ ಅಥವಾ ಧ್ವನಿಯು ಎಲ್ಲೆಲ್ಲಿ ಬಳಕೆಯಲ್ಲಿದೆ ಎಂಬುದನ್ನು ತೋರಿಸುವ ರೇಖೆಯೇ ಆ ಪದದ ಅಥವಾ ಧ್ವನಿಯ 'ಸೀಮಾರೇಖೆ'. ''ಭೌಗೋಳಿಕವಾಗಿ ಶಬ್ದಗಳ ವ್ಯಾಪ್ತಿ ಎಲ್ಲಿಯವರೆಗಿದೆ ಎನ್ನುವುದನ್ನು ಕಂಡುಕೊಂಡು ನಿರ್ದಿಷ್ಟ ಧ್ವನಿ, ಶಬ್ದ, ವಾಕ್ಯ, ಅರ್ಥ, ವಿಶೇಷತೆಗಳನ್ನು ಮತ್ತು ಅವು ಬಳಕೆಯಲ್ಲಿರುವ ಸ್ಥಳಗಳನ್ನೆಲ್ಲ ಭೂಪಟದಲ್ಲಿ ಗುರುತಿಸಬೇಕು. ಅನಂತರ ಒಂದೇ ರೂಪದ ಹಾಗೂ ಅರ್ಥ ಬರುವಂತಹ ರೂಪಗಳು ಬಳಕೆಯಲ್ಲಿರುವ ಸ್ಥಳಗಳನ್ನು ಗುರುತಿಸಿ ರೇಖೆ ಎಳೆಯಲಾಗಿದೆ. ಈ ರೇಖೆ ಒಂದು ನಿರ್ದಿಷ್ಟ ಭಾಷಾರೂಪದ ವ್ಯಾಪ್ತಿಯನ್ನು ಹೇಳುತ್ತದೆ. ಇದನ್ನೇ 'ಸೀಮಾರೇಖೆ' ಎಂದು ಕರೆಯುವರು. ಇದರಿಂದ ಒಂದು ಉಪಭಾಷಾ ಕ್ಷೇತ್ರದ ಭಾಷಾರೂಪದ ಯಾವ ಯಾವ ಸ್ಥಳಗಳಲ್ಲಿ ಭಿನ್ನತೆ ಹೊಂದಿದೆ ಎಂಬುದು ಸ್ಪಷ್ಟವಾಗುತ್ತದೆ. ಭಾಷೆಯ ಗಡಿ ಪರಿವೀಕ್ಷಣೆ ಮಾಡುವುದರಿಂದ ಒಂದು ಭಾಷೆಯಲ್ಲಿನ ಒಳನುಡಿಗಳನ್ನು ಗುರುತಿಸಬಹುದು. ಈ ರೀತಿಯ ಭಾಷಿಕ ಗಡಿಗುರುತಿಸುವುದರಿಂದ ನಿರ್ದಿಷ್ಟ 'ಪ್ರಭೇದ' ವಲಯವನ್ನು ತಿಳಿಯಬಹುದು.

'ಮಸ್ಕಿಕನ್ನಡ' ತನ್ನದೇ ಆದಂತಹ ಗಡಿರೇಖೆಯನ್ನು ಗುರುತಿಸಿಕೊಂಡಿದೆ. ಮಸ್ಕಿ ಒಂದು ಪ್ರಸಿದ್ಧ ಐತಿಹಾಸಿಕ ಸ್ಥಳವಾಗಿರುವುದರಿಂದ ಈ ಭಾಗದ ಕನ್ನಡವನ್ನು ಮಸ್ಕಿ ಊರಿನ ಹೆಸರಿಂದ ಗುರುತಿಸಲಾಗಿದೆ. 'ಮಸ್ಕಿ ಕನ್ನಡ' ಸೀಮಾರೇಖೆಯನ್ನು ಧ್ವನಿ, ಪದ, ವಾಕ್ಯ ಇತ್ಯಾದಿ ರೂಪಗಳಿಂದ ನಿರ್ಧರಿಸಿ ಭೂಪಟವನ್ನು ತಯಾರಿಸಲಾಗಿದೆ. ಮಸ್ಕಿ ಊರಿನಿಂದ ಸುಮಾರು ೬೫-೭೦ ಕಿ.ಮೀ.ನಷ್ಟು ಸುತ್ತಲೂ ಗಡಿಯನ್ನು ಗುರುತು

ಮಾಡಿಕೊಳ್ಳಲಾಗಿದೆ. ಈ ಗಡಿ ಒಳಗಡೆ ರಾಯಚೂರು, ಕೊಪ್ಪಳ, ಬಳ್ಳಾರಿ, ಯಾದಗಿರಿ ಜಿಲ್ಲೆಗಳ ಕೆಲವು ಊರುಗಳು ಬರುತ್ತವೆ. ನಾವು ದಿಕ್ಕುಗಳಿಂದ ಗಡಿಯನ್ನು ತಿಳಿಯುವುದಾದರೆ ದಕ್ಷಿಣ-ಆಗ್ನೇಯ-ನೈರುತ್ಯ ಭಾಗಕ್ಕೆ ಸಿಂಧನೂರು, ಸಿರುಗುಪ್ಪಗಳಿಗೆ ಹೊಂದಿಕೊಂಡಂತೆ ಗಡಿಯನ್ನು ಗುರುತಿಸಲಾಗಿದೆ. ಉತ್ತರ-ಈಶಾನ್ಯ ಭಾಗವಾಗಿ ಸುರಪುರ ತಾಲೂಕಿನ ತಿಂತಿಣಿ ಊರಿನವರೆಗೆ ಗುರುತಿಸಲಾಗಿದೆ. ಪಶ್ಚಿಮ-ನೈರುತ್ಯ-ವಾಯುವ್ಯ ಭಾಗದಲ್ಲಿ ಕೊಪ್ಪಳ, ಜಿಲ್ಲೆಯನ್ನು ಹಾಗೂ ಪಶ್ಚಿಮ ಭಾಗದಲ್ಲಿ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿಗೆ ಹತ್ತಿರವಾಗಿ ಲಿಂಗಸೂಗೂರು ತಾಲೂಕಿನ ಕಡೆ ಊರುಗಳನ್ನು ಗಡಿಗೆ ಒಳಪಡಿಸಲಾಗಿದೆ. ಪೂರ್ವ-ಈಶಾನ್ಯ ಭಾಗದಲ್ಲಿ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಕೆಲವು ಊರುಗಳನ್ನು ಗಡಿಗೆ ಹತ್ತಿರವಾಗಿ ಬಳಸಿಕೊಳ್ಳಲಾಗಿದೆ.

ಮಸ್ಕಿಕನ್ನಡದ ಗಡಿಯನ್ನು ಗುರುತಿಸಲು ಮುಖ್ಯವಾಗಿ ಈ ಕೆಳಗಿನ ಊರುಗಳನ್ನು ಕ್ಷೇತ್ರಕಾರ್ಯಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

೧. ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ರಾವಿಹಾಳು.

೨. ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಕವಿತಾಳ ಹಾಗೂ ನುಗುಡೋಣಿ ಹೊಸೂರು.

೩. ಯಾದಗಿರಿ ಜಿಲ್ಲೆ ಸುರಪುರ ತಾಲೂಕಿನ ತಿಂತಿಣಿ.

೪. ಲಿಂಗಸೂಗೂರು ತಾಲೂಕಿನ ಅಮದಿಹಾಳ.

೫. ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕಿನ ಗುನ್ನಾಳ.

೬. ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಪುಟಗಮರಿ.

ಈ ಮೇಲಿನ ಊರುಗಳಲ್ಲಿ ಕೈಗೊಂಡು ಕ್ಷೇತ್ರಕಾರ್ಯದಲ್ಲಿ ಲಭಿಸಿದ ಮಾಹಿತಿಯನ್ನು ಮಸ್ಕಿಕನ್ನಡದ ಗಡಿ ಎಂದು ದಾಖಲಿಸಿದೆ. ನಕ್ಷೆಯನ್ನು ತಯಾರಿಸಲಾಗಿದೆ.

ಧ್ವನಿಹಂತ

ಬರಹ ಕನ್ನಡ	ಗೆಳೆಯ	ಜಿಂಕೆ	ಬಳ್ಳಿ	ಗುಡಿಸಲು	ಬಾಗಿಲು	ಜಡೆ
ರಾವಿಹಾಳು	ಗ್ಯಣ್ಯಾ	ಜಿಂಕ	ಬ್ಯಳ್ಳಿ	ಗುಡಿಸ್ಲಿ	ಬಾಗ್ಲಿ	ಜೆಡಿ
ನು-ಹೊಸುರು	ಗ್ಯಣ್ಯಾ	ಜಿಂಕ	ಬ್ಯಳ್ಳಿ	ಗುಡಿಸ್ಲಿ	ಬಾಗ್ಲಿ	ಜೆಡಿ
ಕವಿತಾಳ	ಗ್ಯಣ್ಯಾ	ಜಿಂಕ	ಬ್ಯಳ್ಳಿ	ಗುಡಿಸ್ಲಿ	ಬಾಗ್ಲಿ	ಜೆಡಿ
ತಿಂತಿಣಿ	ಗ್ಯಣ್ಯಾ	ಜಿಂಕ	ಬ್ಯಳ್ಳಿ	ಗುಡಿಸ್ಲಿ	ಬಾಗ್ಲಿ	ಜೆಡಿ
ಅಮದಿಹಾಳ	ಗ್ಯಣ್ಯಾ	ಜಿಂಕ	ಬ್ಯಳ್ಳಿ	ಗುಡಿಸ್ಲಿ	ಬಾಗ್ಲಿ	ಜೆಡಿ
ಗುನ್ನಾಳ	ಗ್ಯಣ್ಯಾ	ಜಿಂಕ	ಬ್ಯಳ್ಳಿ	ಗುಡಿಸ್ಲಿ	ಬಾಗ್ಲಿ	ಜೆಡಿ
ಪುಟಗಮರಿ	ಗ್ಯಣ್ಯಾ	ಜಿಂಕ	ಬ್ಯಳ್ಳಿ	ಗುಡಿಸ್ಲಿ	ಬಾಗ್ಲಿ	ಜೆಡಿ

ಮೇಲಿನ ಉದಾಹರಣೆಗಳನ್ನು ಗಮನಿಸಿದರೆ ಧ್ವನಿಹಂತದಲ್ಲಿ ಬಳ್ಳಾರಿ, ರಾಯಚೂರು, ಕೊಪ್ಪಳ ಉಪಭಾಷೆಗಿಂತ ಮಸ್ಕಿಕನ್ನಡದಲ್ಲಿ ಭಿನ್ನರೀತಿಯಾಗಿ ಬಳಕೆಯಾಗಿವೆ. ಮೇಲಿನ ಈ ಏಳು ಊರುಗಳಲ್ಲಿ

ಬರಹಕನ್ನಡದ 'ಜಿಂಕೆ' ಪದವು ಧ್ವನಿವ್ಯತ್ಯಾಸವಾಗಿ 'ಜಿಂಕ' ಎಂದು ಬಳಕೆಯಲಿದೆ. ಪದಾಂತ್ಯದಲ್ಲಿ ಬರುವ 'ಎ' ಸ್ವರ ಮಸ್ಕಿಕನ್ನಡದಲ್ಲಿ 'ಅ' ಸ್ವರವಾಗಿ ಬಳಕೆಯಲ್ಲಿದೆ. ಬಳ್ಳಾರಿ, ರಾಯಚೂರು, ಕೊಪ್ಪಳ ಉಪಭಾಷೆಗಳಲ್ಲಿ ಜಿಂಕೆ ಪದವು 'ಜಿಂಕೆ', 'ಜಿಂಕಿ' ಇತ್ಯಾದಿಯಾಗಿ ಪ್ರಯೋಗವಾಗುತ್ತದೆ. 'ಮಸ್ಕಿಕನ್ನಡದ' ಸೀಮಾರೇಖೆಯಲ್ಲಿ ಬರಹಕನ್ನಡದ 'ಬಳ್ಳಿ' ಪದರೂಪವು ಧ್ವನಿವ್ಯತ್ಯಾಸದೊಂದಿಗೆ 'ಬ್ಯಳ್ಳಿ' ಎಂದು ಬಳಕೆಯಾಗುತ್ತದೆ. ಇಲ್ಲಿ ಪದಾದಿಯ 'ಅ' ಸ್ವರದ ಬದಲಿಗೆ ಅದರ ಉಪಧ್ವನಿಯಾದ 'ಅ್ಯ' ಸ್ವರವನ್ನು ಉಚ್ಚಾರಣೆ ಮಾಡಲಾಗುತ್ತದೆ. 'ಗುಡಿಸಲು' ಪದರೂಪವು ಮಸ್ಕಿಕನ್ನಡದಲ್ಲಿ 'ಗುಡಿಸ್ಲಿ' ಎಂದು ಪ್ರಯೋಗವಾಗುವುದನ್ನು ಗಮನಿಸಬಹುದು. ಪದಾಂತ್ಯದ 'ಉ' ಸ್ವರವು ಮಸ್ಕಿಕನ್ನಡದಲ್ಲಿ 'ಇ' ಸ್ವರವಾಗಿ ಪರಿವರ್ತನೆಯೊಂದಿಗೆ ಬಳಕೆಯಲ್ಲಿದೆ. ಮಸ್ಕಿಕನ್ನಡದ ಸ್ವರೂಪವನ್ನು ವಿವರಿಸುವುದಕ್ಕೆ ಸೀಮಾರೇಖೆಯೊಂದನ್ನು ತಯಾರಿಸಲಾಗಿದೆ. ಅವೊಂದು ಸೀಮಾರೇಖೆಯೊಳಗೆ ರಾವಿಹಾಳು, ನುಗುಡೋಣಿ ಹೊಸೂರು, ಕವಿತಾಳ, ತಿಂತಿಣಿ, ಅಮದಿಹಾಳ, ಗುನ್ನಾಳ, ಪುಟಗಮರಿ ಮುಂತಾದ ಊರುಗಳಲ್ಲಿ 'ಗುಡಿಸ್ಲಿ' ಎಂದು ಬಳಕೆಯಲ್ಲಿದೆ. ಮಸ್ಕಿಕನ್ನಡದ ಸೀಮಾರೇಖೆಯ ಹೊರ ಊರುಗಳಲ್ಲಿ 'ಗುಡಿಸ್ಲ' ಎಂದು ಉಚ್ಚಾರಣೆಯಲ್ಲಿದೆ. ಇಲ್ಲಿ 'ಅ' ಸ್ವರ ಪದಾಂತ್ಯದಲ್ಲಿ ಬಳಸುವುದನ್ನು ಕಾಣಬಹುದು. ಇದೇ ರೀತಿ 'ಬಾಗ್ಲಿ' ಪದರೂಪದಲ್ಲಿ ಪದಾಂತ್ಯದಲ್ಲಿ 'ಇ' ಸ್ವರವನ್ನು ಬಳಸಿರುವುದನ್ನು ಗಮನಿಸಬಹುದು. ಬರಹಕನ್ನಡದಲ್ಲಿ 'ಬಾಗಿಲು' ಎಂದು ಮೂರು ಅಕ್ಷರದ ಪದ ಬಳಕೆ ಇದೆ. 'ಮಸ್ಕಿಕನ್ನಡದ' ಹೊರವಲಯದ ಊರುಗಳಲ್ಲಿ 'ಬಾಗ್ಲ' ಎಂದು ಪದಾಂತ್ಯದಲ್ಲಿ 'ಅ' ಸ್ವರ ಬಳಕೆ ಮಾಡಿ ಬಳಸುತ್ತಾರೆ. ಆದರೆ ಮಸ್ಕಿಕನ್ನಡದ ಸೀಮಾರೇಖೆಯಲ್ಲಿ ಬರುವ ಏಳು ಊರುಗಳಲ್ಲಿಯೂ 'ಬಾಗ್ಲಿ' ಎಂದು ಬಳಕೆ ಕಂಡುಬರುತ್ತದೆ. ಬರಹಕನ್ನಡದ 'ಜಡೆ' ರೂಪವು ಮಸ್ಕಿ ಪರಿಸರದಲ್ಲಿ ಪದಾದಿಯ 'ಅ' ಸ್ವರ ಲೋಪಮಾಡಿ 'ಎ' ಸ್ವರವನ್ನು ಬಳಕೆಮಾಡುತ್ತಾರೆ. ಪದಾಂತ್ಯದಲ್ಲಿ 'ಎ' ಸ್ವರದ ಬದಲಿಗೆ 'ಇ' ಸ್ವರವನ್ನು ಬಳಕೆಮಾಡುತ್ತಾರೆ.

ಬರಹಕನ್ನಡದ 'ಜಡೆ' ಪದ ಮಸ್ಕಿಕನ್ನಡದಲ್ಲಿ 'ಜೆಡಿ' ಎಂಬುದಾಗಿ ಬಳಕೆ ಇದೆ. ಆದರೆ ಇತರೆ ಪ್ರಭೇದಗಳಲ್ಲಿ ಜಡಿ, ಜಡೆ, ಇತ್ಯಾದಿ ಬಳಕೆಯನ್ನು ಗಮನಿಸಬಹುದು. 'ಗೆಳೆಯ' ರೂಪವು ಮಸ್ಕಿಕನ್ನಡದಲ್ಲಿ ವಿಶಿಷ್ಟವಾಗಿ ಬಳಕೆಯಲ್ಲಿದೆ. 'ಗೆಳೆಯ' ಪದರೂಪದಲ್ಲಿ ಬರುವ ಪದಾದಿಯ 'ಎ' ಸ್ವರ ಲೋಪವಾಗಿ 'ಅ್ಯ' ಸ್ವರ ಬಳಕೆಯಾಗುವುದು ಹಾಗೆಯೇ ಮೂರಕ್ಷರದ ಪದವು ಎರಡಕ್ಷರ ಪದವಾಗಿ ಬಳಕೆಗೊಳ್ಳುವುದು ಇಲ್ಲಿನ ವಿಶೇಷವಾಗಿದೆ. ಪದಾಂತ್ಯದಲ್ಲಿ ಸ್ವರ ದೀರ್ಘವಾಗಿ ಬಳಕೆಯಾಗುತ್ತದೆ.

ಪದ ಹಂತ

ಬರಹ ಕನ್ನಡ	ಆಮೆ	ಓತಿಕೇತ	ಉಡ	ಗೂಳಿ	ಬಾವುಲಿ
ರಾವಿಹಾಳು	ತಂಬೇಲಿ	ತ್ವಂಡಿಕಟ	ಉಡಮ	ಗುಳೇರಿ	ತೊಲಬಾಪುರಿ
ನು-ಹೊಸುರು	ತ್ಯಂಬೇಲಿ	ತ್ವಂಡಿಕಟ	ಉಡವಾ	ಗುಳೇರಿ	ತೋಲಬಾಪುರಿ
ಕವಿತಾಳ	ತ್ಯಂಬೇಲಿ	ತ್ವಂಡಿಕಟ	ಉಡವಾ	ಗುಳೇರಿ	ತೋಲಬಾಪುರಿ
ತಿಂತಿಣಿ	ತ್ಯಾಂಬ್ಲ	ತ್ವಂಡಿಕಟ	ಉಡವಾ	ಗುಳೇರಿ	ತೋಲಬಾಪುರಿ
ಅಮದಿಹಾಳ	ತ್ಯಾಂಬ್ಲ	ತ್ವಂಡಿಕಟ	ಉಡವಾ	ಗುಳೇರಿ	ತೋಲಬಾಪುರಿ

ಗುನ್ನಾಳ	ತ್ಯಾಂಬ್ಲ	ತ್ಯಂಡಿಕಟ	ಉಡವಾ	ಗುಳೇರಿ	ತೋಲಬಾಪುರಿ
ಪುಟಗಮರಿ	ತ್ಯಾಂಬ್ಲ/ ಆಮಿ	ತ್ಯಂಡಿಕಟ	ಉಡವಾ	ಗುಳೇರಿ/ ಹೋರಿ	ತೋಲಬಾಪುರಿ

ಮೇಲಿನ ಪ್ರಾಣಿ, ಪಕ್ಷಿ ಸೂಚಕ ಪದಗಳು 'ಮಸ್ಕಿಕನ್ನಡದ' ಸೀಮಾರೇಖೆಯಲ್ಲಿ ವಿಶಿಷ್ಟವಾದ ಪದರಚನೆಯನ್ನು ಒಳಗೊಂಡಿದೆ. 'ಆಮೆ' ಪದರೂಪ 'ತಂಬೇಲಿ' ಎಂಬ ಪರ್ಯಾಯ ಪದವಾಗಿ ಬಳಕೆಯಾಗಿದೆ. 'ತಂಬೇಲಿ' ಎಂಬ ಪದದಲ್ಲಿ ಸ್ವಲ್ಪ ಧ್ವನಿವ್ಯತ್ಯಾಸದೊಂದಿಗೆ ತ್ಯಾಂಬ್ಲ ಎಂಬ ಇನ್ನೊಂದು ಪದದ ಬಳಕೆಯನ್ನು ಗಮನಿಸಬಹುದು. ರಾವಿಹಾಳು, ನುಗುಡೋಣಿ ಹೊಸೂರು, ಕವಿತಾಳಗಳಲ್ಲಿ 'ಆಮೆ' ರೂಪಕ್ಕೆ ಬದಲಾಗಿ 'ತಂಬೇಲಿ' ಎಂಬ ಪರ್ಯಾಯವನ್ನು ಬಳಕೆ ಮಾಡಲಾಗುವುದು. ಅಲ್ಲದೇ ಧ್ವನಿ ವ್ಯತ್ಯಾಸದೊಂದಿಗೆ ತಿಂತಿಣಿ, ಅಮದಿಹಾಳ, ಗುನ್ನಾಳ, ಪುಟಗಮರಿಗಳಲ್ಲಿ 'ತ್ಯಾಂಬ್ಲ' ಎಂಬ ಬಳಕೆಯನ್ನು ನೋಡಬಹುದು. ಆದರೆ 'ಪುಗಟಮರಿ' ಎಂಬ ಊರಲ್ಲಿ 'ತ್ಯಾಂಬ್ಲ' ಹಾಗೂ 'ಆಮಿ' ಎಂಬೆರಡು ರೂಪಗಳು ಕಂಡುಬರುತ್ತವೆ. 'ಓತಿಕೇತ' ಎಂಬ ರೂಪವು ಈ ಏಳು ಊರುಗಳಲ್ಲಿ 'ತ್ಯಂಡಿಕಟ' ಎಂಬುದಾಗಿ ಬಳಕೆಯಲ್ಲಿದೆ. 'ಮಸ್ಕಿಕನ್ನಡ' ಸೀಮಾರೇಖೆಯನ್ನು ಹೊರತುಪಡಿಸಿ 'ಓತಿಕೇತ' ಪದಬಳಕೆ 'ಡೋಣಿಕಟ' ಎಂಬ ಪದರೂಪ ಬಳಕೆಯಲ್ಲಿರವುದನ್ನು ಗಮನಿಸಬಹುದು. 'ಉಡ' ಎರಡಕ್ಷರದ ಪದ ರಾವಿಹಾಳುವಿನಲ್ಲಿ 'ಉಡಮ' ಎಂದು ಬಳಕೆಗೊಂಡರೆ, ಉಳಿದ ಆರು ಊರುಗಳಲ್ಲಿ 'ಉಡವಾ' ಎಂದು ಮೂರಕ್ಷರ ಪದವಾಗಿ ಬಳಕೆಯಲ್ಲಿದೆ. ಮಸ್ಕಿಕನ್ನಡ ಸೀಮಾರೇಖೆಯ ಹೊರಭಾಗದಲ್ಲಿ 'ಉಡ' ಎಂಬುದಾಗಿ ಬರಹಕನ್ನಡದ ಪದ ಬಳಸುವುದನ್ನು ಕಾಣಬಹುದು. 'ಮಸ್ಕಿಕನ್ನಡ' ಸೀಮಾರೇಖೆಯಲ್ಲಿ 'ಉಡ' ಪದಕ್ಕೆ 'ಉಡಮ' ಹಾಗೂ 'ಉಡವಾ' ಎಂಬೆರಡು ಪದ ಬಳಕೆ ಇರುವುದನ್ನು ನೋಡಬಹುದು. ಅದೇ ರೀತಿ 'ಗೂಳಿ' ಬರಹಕನ್ನಡ ಪದರೂಪ ಮಸ್ಕಿಕನ್ನಡದಲ್ಲಿ ಮೂರಕ್ಷರದ ಪದವಾಗಿ 'ಗುಳೇರಿ' ಎಂದು ವಿಶೇಷವಾಗಿ ಬಳಕೆಯಾಗುತ್ತಿದೆ. ಎಲ್ಲಾ ಏಳು ಊರುಗಳಲ್ಲಿ 'ಗುಳೇರಿ' ಪದವನ್ನು ಗಮನಿಸಬಹುದು. ಹಾಗೂ ಪುಟಗಮರಿ ಎಂಬ ಊರಲ್ಲಿ 'ಹೋರಿ' ಎಂಬ ಪದರೂಪವು ಕಾಣಿಸುತ್ತದೆ. 'ಬಾವುಲಿ' ಬರಹಕನ್ನಡ ಪದವು ಮಸ್ಕಿಕನ್ನಡದ ಎಲ್ಲಾ ಊರುಗಳಲ್ಲಿ 'ತೋಲಬಾಪುರಿ' ಎಂಬ ಪರ್ಯಾಯ ರೂಪವನ್ನು ಬಳಸಲಾಗುತ್ತದೆ. 'ಬಾವುಲಿ' ಎಂದು ಬಳಕೆಗೊಳ್ಳುವ ಬರಹಕನ್ನಡ ರೂಪಕ್ಕೆ ಬದಲಾಗಿ ಮಸ್ಕಿಕನ್ನಡ ಸೀಮಾರೇಖೆಯ ಹೊರಗೆ 'ಕಣ್‌ಕಪಡಿ' ಪದ ಬಳಕೆಯಲ್ಲಿದೆ.

ಬರಹಕನ್ನಡ	ಸಂಜೆ	ಸೋಪು	ಚೀಪು	ಮೊಳಕೆ	ಕೊಂಬೆ
ರಾವಿಹಾಳು	ಬೇಗಸರೆ/ಸಂಜ್ಕಿ	ಸಬೂರ್‌ಕರ್	ಜಿಬಕ	ನ್ಯಾಟ್ಗಿ	ಕ್ಯಲ್ಯ
ನು-ಹೊಸೂರು	ಬೇಗಸರೆ	ಸಬೂರ್‌ಕರ್	ಜಿಬಕ	ನ್ಯಾಟ್ಗಿ	ಕ್ಯಲ್ಯ
ಕವಿತಾಳ	ಬೇಗಸರೆ	ಸಬೂರ್‌ಕರ್	ಜಿಬಕ	ನ್ಯಾಟ್ಗಿ	ಕ್ಯಲ್ಯ
ತಿಂತಿಣಿ	ಬೇಗಸರೆ	ಸಬೂರ್‌ಕರ್	ಜಿಬಕ	ನ್ಯಾಟ್ಗಿ	ಕ್ಯಲ್ಯ
ಅಮದಿಹಾಳ	ಬೇಗಸರೆ	ಸಬೂರ್‌ಕರ್	ಜಿಬಕ	ನ್ಯಾಟ್ಗಿ	ಕ್ಯಲ್ಯ
ಗುನ್ನಾಳ	ಬೇಗಸರೆ	ಸಬೂರ್‌ಕರ್	ಜಿಬಕ	ನ್ಯಟ್ಗಿ	ಕ್ಯಲ್ಯ
ಪುಟಗಮರಿ	ಬೇಗಸರೆ/ಚಂಜ್ಕಿ	ಸಬೂರ್‌ಕರ್/ ಸಾಬೂನು	ಜಿಬಕ	ನ್ಯಟ್ಗಿ	ಕ್ಯಲ್ಯ

'ಸಂಜೆ' ಬರಹಕನ್ನಡ ಪದರೂಪ 'ಮಸ್ಕಿ ಕನ್ನಡ'ದ ಸೀಮಾರೇಖೆಯಲ್ಲಿ 'ಬೇಗಸರೆ' ಎಂಬುದಾಗಿ ಬಳಕೆಯಲ್ಲಿದೆ. ರಾವಿಹಾಳು ಎಂಬಲ್ಲಿ ಸಂಜ್ಕಿ ಎಂದು ಎರಡು ರೂಪಗಳನ್ನು ಹಾಗೂ ಪುಟಗಮರಿಯಲ್ಲಿ 'ಚಂಜ್ಕಿ' 'ಬೇಗಸರೆ' ಎರಡು ರೂಪಗಳು ಬಳಕೆ ಇರುವುದನ್ನು ನೋಡಬಹುದು. ರಾವಿಹಾಳು, ಪುಟಗಮರಿಯಲ್ಲಿ ಎರಡು ರೂಪಗಳು ವಿಶೇಷವಾಗಿ ಬಳಕೆಯಿದೆ. ಇದೇ ರೀತಿ 'ಸೋಪು' ಪದರೂಪ ಭಿನ್ನರೂಪದೊಂದಿಗೆ ಮಸ್ಕಿಕನ್ನಡ ಸೀಮಾರೇಖೆಯಲ್ಲಿ 'ಸಬೂರ್‌ಕರ್' ಎಂದು ಬಳಕೆಯಾಗುತ್ತದೆ. ಎಲ್ಲಾ ಏಳು ಊರುಗಳಲ್ಲಿ ಈ ಪದ ಪ್ರಯೋಗ ಮಾಡಲಾಗುತ್ತಿದೆ ಇದೊಂದು ಗಮನಿಸಬೇಕಾದ ಅಂಶ ಹಾಗೂ ಪುಟಗಮರಿ ಎಂಬಲ್ಲಿ 'ಸಾಬೂನು' ಎನ್ನುವ ಇನ್ನೊಂದು ರೂಪ ಬಳಕೆಯಲ್ಲಿದೆ. 'ಜೇಪು' ಬರಹಕನ್ನಡ ರೂಪವು 'ಜಿಬಕ' ಎಂದು 'ಮಸ್ಕಿಕನ್ನಡದ' ಏಳು ಗಡಿ ಪರಿವೀಕ್ಷಣೆ ಊರುಗಳಲ್ಲಿ ಬಳಕೆಯಿದೆ. 'ಮಸ್ಕಿಕನ್ನಡ' ಸೀಮಾರೇಖೆಯ ಪಕ್ಕದ ಬಳ್ಳಾರಿ ಕನ್ನಡದಲ್ಲಿಈ ಪದರೂಪ ಜೀಪು, ಎಂಬುದಾಗಿ ಬಳಕೆಯಲ್ಲಿದೆ. ಅದೇ ರೀತಿ 'ಮೊಳಕೆ' ಪದರೂಪವು ಮಸ್ಕಿ ಕನ್ನಡದಲ್ಲಿ ಪರ್ಯಾಯ ರೂಪವಾಗಿ ನ್ಯಾಟ್ಗಿ ಎಂಬ ಉಚ್ಚಾರಣೆಯನ್ನು ಪಡೆಯುತ್ತದೆ. ಮಸ್ಕಿಕನ್ನಡದ ಸೀಮಾರೇಖೆಯ ಹೊರಭಾಗವಾದ ಬಳ್ಳಾರಿ ಇತರೆ ಕಡೆಗಳಲ್ಲಿ ನಾಟಿಗಿ ಹಾಗೂ ಮಳ್ಕಿ ಪದಗಳನ್ನು ಬಳಕೆ ಮಾಡುವರು. ಬರಹಕನ್ನಡದಲ್ಲಿ 'ಕೊಂಬೆ' ಎಂದು ಬಳಕೆಯಾಗುವ ಗಿಡ, ಮರ ಸೂಚಕ ಪದ ಮಸ್ಕಿಕನ್ನಡದ ಎಲ್ಲಾ ಏಳು ಸೀಮಾರೇಖೆಯ ವಲಯದಲ್ಲಿ 'ಕ್ವಲ್ಯ' ಎಂಬುದಾಗಿ ಬಳಕೆಯಾಗುತ್ತದೆ. ಪಕ್ಕದ ಕೊಪ್ಪಳ ಭಾಗಗಳಲ್ಲಿ 'ಕ್ವಾಲಿ', 'ಕೊಂಗಿ' ಎನ್ನುವ ಬಳಕೆಯನ್ನು ಕಾಣಬಹುದು. ಬಳ್ಳಾರಿ ಸುತ್ತಮುತ್ತಲು ಪರಿಸರದಲ್ಲಿ 'ಕ್ವಾಲಿ' ಪದ ಬಳಕೆ ಇರುವುದನ್ನು ನೋಡಬಹುದು.

ಬರಹ ಕನ್ನಡ	ಕುಂಟಬಿಲ್ಲೆ	ಕೊಳಲು	ತಂತಿವಾದ್ಯ	ಒದರು	ಅರಚು
ರಾವಿಹಾಳು	ಕುಂಡ್ಲಿಪ	ಕೊಳವೆ	ಏಕನಾಥಕಾಯಿ	ಕಬಾಸ	ಗಡಚಿಕ್ಕು
ನು-ಹೊಸೂರು	ಕುಂಡ್ಲಿಪ	ಕೊಳವೆ	ಏಕನಾಥಕಾಯಿ	ಕಬಾಸ	ಗಡಚಿಕ್ಕು
ಕವಿತಾಳ	ಕುಂಡ್ಲಿಪ	ಕೊಳವೆ	ಏಕನಾಥಕಾಯಿ	ಕಬಾಸ	ಗಡಚಿಕ್ಕು
ತಿಂತಿಣಿ	ಕುಂಡ್ಲಿಪ	ಕೊಳವೆ	ಏಕನಾಥಕಾಯಿ	ಕಬಾಸ	ಗಡಚಿಕ್ಕು
ಅಮದಿಹಾಳ	ಕುಂಡ್ಲಿಪ	ಕೊಳವೆ	ಏಕನಾಥಕಾಯಿ	ಕಬಾಸ	ಗಡಚಿಕ್ಕು
ಗುನ್ನಾಳ	ಕುಂಡ್ಲಿಪ	ಕೊಳವೆ	ಏಕನಾಥಕಾಯಿ	ಕಬಾಸ	ಗಡಚಿಕ್ಕು
ಪುಟಗಮರಿ	ಕುಂಡ್ಲಿಪ	ಕೊಳವೆ	ಏಕನಾಥಕಾಯಿ	ಕಬಾಸ	ಗಡಚಿಕ್ಕು

'ಮಸ್ಕಿಕನ್ನಡದ' ಸೀಮಾರೇಖೆಯ ಹಲವು ವೈವಿಧ್ಯತೆಯ ಪದಕೋಶವನ್ನು ಒಳಗೊಂಡಿದೆ. ಬೇರೆ ಉಪಭಾಷೆ ಗಳಿಗಿಂತ ಮಸ್ಕಿಕನ್ನಡದ ಪದಕೋಶ ಭಿನ್ನವಾಗಿರುವುದನ್ನು ನೋಡಬಹುದು.

ಉದಾಹರಣೆಗೆ; ಹಳ್ಳಿ ಆಟದ ಪರಿಕರಗಳಲ್ಲಿ ಒಂದಾದ 'ಕುಂಟೆಬಿಲ್ಲೆ' ಮಸ್ಕಿಕನ್ನಡದ ಸೀಮಾರೇಖೆಯ ಎಲ್ಲಾ ಏಳು ಊರುಗಳಲ್ಲಿ ಕುಂಡ್ಲಿಪ ಎಂದು ಕರೆಯುವರು. ಅದೇ ರೀತಿ ಸಂಗೀತದ ಪರಿಕರಗಳಲ್ಲಿ ಒಂದಾದ 'ಕೊಳಲು' ಬರಹಕನ್ನಡ ರೂಪವನ್ನು ಮಸ್ಕಿಕನ್ನಡದಲ್ಲಿ 'ಕೊಳವೆ' ಎಂದು ಬಳಕೆಯಾಗುತ್ತದೆ. ಇದೇ ರೀತಿಯ ಇನ್ನೊಂದು ಸಂಗೀತ ಪರಿಕರವಾದ ತಂತಿವಾದ್ಯವನ್ನು ಮಸ್ಕಿಕನ್ನಡದಲ್ಲಿ 'ಏಕನಾಥಕಾಯಿ' ಎಂಬುದಾಗಿ ಬಳಕೆ ಮಾಡುತ್ತಾರೆ. ಗಡಿರೇಖೆಗೆ ಸಂಬಂಧಿಸಿದ ಏಳು ಊರುಗಳಲ್ಲಿ 'ಏಕನಾಥಕಾಯಿ' ಎಂದು ಪರ್ಯಾಯ ರೂಪವನ್ನು

ನೋಡಬಹುದು. 'ಒದರು' ಎನ್ನುವ ಬರಹಕನ್ನಡದ ಕ್ರಿಯಾಪದವು ಮಸ್ಕಿಕನ್ನಡದಲ್ಲಿ 'ಕಬಾಸ' ಎಂದು ಬಳಕೆಯಲ್ಲಿದೆ. ಅದೇ ರೀತಿ 'ಅರಚು' ರೂಪವು 'ಗಡಚಿಕ್ಕು' ಎಂದು ಪ್ರಯೋಗಗೊಳ್ಳುತ್ತದೆ. ಈ ರೀತಿಯ 'ವಿಶೇಷಪದಗಳು' ಬರಹ ಕನ್ನಡಕ್ಕಿಂತ ಭಿನ್ನವಾಗಿ ಮತ್ತು ಸೀಮಾರೇಖೆಯಾಚೆ ವಿಶಿಷ್ಟವಾಗಿ ಬಳಕೆಯಲ್ಲಿರುವುದು ಗಮನಿಸುವಂತಹ ಅಂಶ.

ಬರಹಕನ್ನಡ	ಬೇಗ	ಬೆಳಕಿಂಡಿ	ಕಪಲೆ/ಏತ	ಆಣೆಮಾಡು	ಬಿರುಗಾಳಿ
ರಾವಿಹಾಳು	ಲಾಗ್‌ಲಚ್/ದೌಡ್	ಗಬಾಕ್ಲಿ	ಪಟ್ಟಿಬಾವಿ	ಆಣಿತಿಂದು	ಓಡುಗಾಳಿ
ನು-ಹೊಸುರು	ಲಾಗ್‌ಲಚ್/ದೌಡ್	ಗಬಾಕ್ಲಿ	ಮಚ್ಚಿಬಾವಿ	ಆಣಿತಿಂದು	ಓಡುಗಾಳಿ
ಕವಿತಾಳ	ಲಾಗ್‌ಲಾಚ್/ದೌಡ್	ಗಬಾಕ್ಲಿ	ಮಟ್ಟಿಬಾವಿ	ಆಣಿತಿಂದು	ಓಡುಗಾಳಿ
ತಿಂತಿಣಿ	ಲಾಗ್‌ಲಾಚ್/ದೌಡ್	ಗಬಾಕ್ಲಿ	ಮಟ್ಟಿಬಾವಿ	ಆಣಿತಿಂದು	ಓಡುಗಾಳಿ
ಅಮದಿಹಾಳ	ಲಾಗ್‌ಲಾಚ್/ದೌಡ್	ಗಬಾಕ್ಲಿ	ಮಟ್ಟಿಬಾವಿ	ಆಣಿತಿಂದು	ಓಡುಗಾಳಿ
ಗುನ್ನಾಲ	ಲಾಗ್‌ಲಾಚ್/ದೌಡ್	ಗಬಾಕ್ಲಿ	ಮಟ್ಟಿಬಾವಿ	ಆಣಿತಿಂದು	ಓಡುಗಾಳಿ
ಪುಟಗಮರಿ	ಲಾಗ್‌ಲಾಚ್/ದೌಡ್	ಗಬಾಕ್ಲಿ	ಮಟ್ಟಿಬಾವಿ	ಆಣಿತಿಂದು	ಓಡುಗಾಳಿ

'ಬೇಗ' ಪದಕ್ಕೆ ಎರಡು ರೀತಿಯ ಪದಗಳು ಬಳಕೆಯಲ್ಲಿದೆ. ಒಂದು 'ಲಾಗ್‌ಲಚ್', ಎರಡು ದೌಡು, ಮಸ್ಕಿಕನ್ನಡದಲ್ಲಿ ವಿಶೇಷವಾಗಿ 'ಲಾಗ್‌ಲಚ್' ಪದ ಬಳಕೆಯಲ್ಲಿದೆ. ಈ ಪದರೂಪ ಬೇರೆ ಬಳ್ಳಾರಿ ಕನ್ನಡ ಇತರೆ ಕಡೆಗಳಲ್ಲಿ ಬಳಕೆಯಲ್ಲಿ ಇಲ್ಲ, ಆದರೆ 'ದೌಡ್' ಪದರೂಪ ಕೊಪ್ಪಳ, ಜಿಲ್ಲೆಯಲ್ಲಿ ಕಂಡುಬರುತ್ತದೆ. ಮನೆಗಳಲ್ಲಿ ಬೆಳಕಿಗಾಗಿ ಬಿಟ್ಟಿರುವ ಕಿಂಡಿಯನ್ನು 'ಬೆಳಕಿಂಡಿ' ಎಂದು ಬರಹಕನ್ನಡದಲ್ಲಿ ಕರೆಯುವರು. ಮಸ್ಕಿಕನ್ನಡದಲ್ಲಿ ಬೆಳಕಿಂಡಿ ಪದಕ್ಕೆ ಪರ್ಯಾಯ ರೂಪವಾದ 'ಗಬಾಕ್ಲಿ' ಬಳಕೆಯಿದೆ. ಈ ಬಳಕೆ ಏಳು ಊರುಗಳಲ್ಲಿ ಬಳಕೆಯಲ್ಲಿರುವುದನ್ನು ಗಮನಿಸಬಹುದು ಹಾಗೂ ಈ ಊರುಗಳು ಇನ್ನೂ ಅನೇಕ ಪದಗಳಿಗೆ ಸೀಮಾರೇಖೆಯಾಗಿರುತ್ತವೆ. ತೋಟಗಳಲ್ಲಿ ಬಾವಿಯಿಂದ ನೀರನ್ನು ಎತ್ತುವ ಕೃತಕ ಪರಿಕರವನ್ನು ಬರಹಕನ್ನಡದಲ್ಲಿ ಏತ 'ಕಪಲೆ' ಎಂದು ಕರೆಯುವರು. ಇದನ್ನು ಮಸ್ಕಿಕನ್ನಡದಲ್ಲಿ 'ಮಟ್ಟಿಬಾವಿ' ಎಂದು ಕರೆಯುವರು. 'ಮಸ್ಕಿಕನ್ನಡದ' ಸೀಮಾರೇಖೆಯುದ್ದಕ್ಕೂ ಈ ಪದ ಮಟ್ಟಿಬಾವಿ ಎಂತಲೇ ಬಳಕೆಯಾಗುತ್ತದೆ. 'ಆಣೆಮಾಡು' ಎಂದು ಬಳಕೆಗೊಳ್ಳುವ ಜೋಡು ಪದ ಮಸ್ಕಿಕನ್ನಡದಲ್ಲಿ 'ಆಣಿತಿಂದು' ಎಂದು ವಿಶೇಷವಾಗಿ ಎಲ್ಲಾ ಊರುಗಳಲ್ಲಿ ಬಳಕೆಯಾಗುತ್ತದೆ. ಬೇರೆ ಉಪಭಾಷಾ ಕನ್ನಡಗಳಲ್ಲಿ 'ಆಣೆಮಾಡು' ಎಂಬುದಾಗಿ ಬಳಕೆಯಾದರೆ ಅವುಗಳಿಗೆ ಭಿನ್ನವಾಗಿ ಮಸ್ಕಿಕನ್ನಡದಲ್ಲಿ ಮಾತ್ರ 'ಆಣಿತಿಂದು' ಎಂದೇ ಬಳಕೆಗೊಳ್ಳುವುದು ವೈಶಿಷ್ಟವಾಗಿದೆ. ಬರಹಕನ್ನಡದ 'ಬಿರುಗಾಳಿ' ಪದರೂಪವು ಮಸ್ಕಿಕನ್ನಡದಲ್ಲಿ ಎಲ್ಲಾ ಊರುಗಳಲ್ಲಿ 'ಓಡುಗಾಳಿ' ಎಂದು ಬಳಕೆಯಲ್ಲಿದೆ.

ಬರಹ ಕನ್ನಡ	ತಲೆದಿಂಬು	ಮೆಟ್ಟಿಲು	ಕೊಡೆ	ಪೆಟ್ಟಿಗೆ	ಫ್ಯಾನ್/ಪಂಕ
ರಾವಿಹಾಳು	ಲೋಡು	ಪ್ಯಾಂಟ್ಗಿ	ಸತ್ರಿಕಿ	ಸಂದ್ಕ/ಪ್ಯಾಟರ್ಕ	ತಿರುಗಣಿ
ನು-ಹೊಸೂರು	ಲೋಡು	ಪ್ಯಾಂಟ್ಗಿ	ಚತ್ರಿಕಿ	ಪ್ಯಾಟರ್ಗಿ/ಸಂದಕ್ಕ	ತಿರುಗಣಿ/ಪಂಕ
ಕವಿತಾಳ	ಲೋಡು	ಪ್ಯಾಂಟ್ಗಿ	ಚತ್ರಿಕಿ	ಪ್ಯಾಟರ್ಗಿ/ಸಂದ್ಕ	ತಿರುಗಣಿ/ಪಂಕ

ತಿಂತಿಣಿ	ಲೋಡು	ಪ್ಯಾಂಟ್ಗಿ	ಚತ್ರಿಕಿ	ಪ್ಯಾಟರ್ಕಿ/ಸಂದ್ಕ	ತಿರುಗಣಿ
ಅಮದಿಹಾಳ	ಲೋಡು	ಪ್ಯಾಂಟ್ಗಿ	ಚತ್ರಿಕಿ	ಪ್ಯಾಟರ್ಕಿ	ತಿರುಗಣಿ
ಗುನ್ನಾಳ	ಲೋಡು	ಪ್ಯಾಂಟ್ಗಿ	ಚತ್ರಿಕಿ	ಪ್ಯಾಟರ್ಕಿ	ತಿರುಗಣಿ
ಪುಟಗಮರಿ	ಲೋಡು	ಪ್ಯಾಂಟ್ಗಿ	ಚತ್ರಿಕಿ	ಪ್ಯಾಟರ್ಕಿ	ತಿರುಗಣಿ

ಬರಹ ಕನ್ನಡದಲ್ಲಿ ಬಳಕೆಗೊಳ್ಳುವ 'ತಲೆದಿಂಬು' 'ಮಸ್ಕಿಕನ್ನಡ'ದಲ್ಲಿ 'ಲೋಡು' ಎಂದು ಬಳಕೆಯಲ್ಲಿದೆ. 'ಲೋಡು' ಪದ ಬಳಕೆಯು 'ಮಸ್ಕಿಕನ್ನಡದ' ಸೀಮಾರೇಖೆ ಉದ್ದಗಲಕ್ಕೂ ಬಳಕೆಯಲ್ಲಿದೆ. ಬಳ್ಳಾರಿ ಕನ್ನಡದಲ್ಲಿ 'ತಲೆಗಿಂಬು' ಎಂದು ಬಳಕೆಯಾಗುತ್ತದೆ. ಅದೇ ರೀತಿ ಬರಹಕನ್ನಡದ 'ಮೆಟ್ಟಿಲು' ರೂಪ 'ಮಸ್ಕಿಕನ್ನಡ'ದಲ್ಲಿ 'ಪ್ಯಾಂಟ್ಗಿ' ಎಂದು ಉಚ್ಚಾರಣೆಯಲ್ಲಿದೆ. ಕೊಪ್ಪಳ ಸುತ್ತಮುತ್ತಲಿನಲ್ಲಿ 'ಮೆಟ್ಲು' ಹಾಗೂ 'ಮೆಟ್ಟಣಿಕೆ' ಎಂದು ಎರಡು ರೀತಿಯ ಬಳಕೆಗಳು ಕಂಡುಬರುತ್ತದೆ. ಬಳ್ಳಾರಿ ಪರಿಸರದಲ್ಲಿ 'ಪ್ಯಾಂಟಣಿಕೆ' ರೂಪ ಕಂಡುಬರುವುದು. 'ಕೊಡೆ' ಪದರೂಪವು ಮಸ್ಕಿ ಕನ್ನಡದಲ್ಲಿ 'ಚತ್ರಿಕಿ' ಎಂದು ಬಳಕೆಯಾಗುವುದು. ಈ ರೂಪವನ್ನು ಪರಿವೀಕ್ಷಣೆಯ ಎಲ್ಲಾ ಊರುಗಳಲ್ಲಿ ಬಳಸುವುದನ್ನು ನೋಡಬಹುದು. ಬಳ್ಳಾರಿ ಕನ್ನಡದಲ್ಲಿ 'ಕೊಡೆ' ರೂಪವು 'ಕ್ವಡಿ' 'ಚತ್ರಿ' ಎಂದು ಎರಡು ರೂಪಗಳು ಬಳಕೆಯಲ್ಲಿವೆ. 'ಪೆಟ್ಟಿಗೆ' ಬರಹಕನ್ನಡ ಪದ ಮಸ್ಕಿಕನ್ನಡದಲ್ಲಿ 'ಪ್ಯಾಟರ್ಕಿ' ಹಾಗೂ 'ಸಂದಕ' ಎಂದು ಎರಡು ರೀತಿಯ ಬಳಕೆಯನ್ನು ಗಮನಿಸಬಹುದು. ರಾವಿಹಾಳು, ನುಗುಡೋಣಿ ಹೊಸೂರು, ಕವಿತಾಳ, ತಿಂತಿಣಿಗಳಲ್ಲಿ 'ಪ್ಯಾಟರ್ಕಿ' ಮತ್ತು 'ಸಂದಕ' ಎಂದು ಎರಡು ಪದ ಪ್ರಯೋಗವನ್ನು ಗಮನಿಸಬಹುದು. ಅಮದಿಹಾಳ, ಗುನ್ನಾಳ, ಪುಟಗಮರಿ ಎಂಬಲ್ಲಿ 'ಪ್ಯಾಟರ್ಕಿ' ಎನ್ನುವ ಪ್ರಯೋಗ ಕಂಡುಬರುವುದು. ಬರಹ ಕನ್ನಡದಲ್ಲಿ ಬಳಕೆಗೊಳ್ಳುವ ಇಂಗ್ಲೀಷ್‌ನ 'ಪ್ಯಾನ್' ಪದ ರೂಪ ಮಸ್ಕಿಕನ್ನಡದಲ್ಲಿ 'ಪಂಕ' ಹಾಗೂ 'ತಿರುಗಣಿ' ಎಂಬ ಎರಡು ರೂಪಗಳು ಬಳಕೆಯಲ್ಲಿವೆ. ನುಗುಡೋಣಿ ಹೊಸೂರು, ಕವಿತಾಳಗಳಲ್ಲಿ 'ಪಂಕ' ಹಾಗೂ 'ತಿರುಗಣಿ' ಪ್ರಯೋಗ ಕಂಡುಬಂದರೆ ಉಳಿದ ಊರುಗಳಲ್ಲಿ 'ತಿರುಗಣಿ' ಪ್ರಯೋಗ ಕಂಡುಬರುತ್ತದೆ.

ಬರಹಕನ್ನಡ	ಮೇರೆ	ಜಿಪುಣ	ಬೈತಲೆ	ಸಣ್ಣಜೇನು	ಮಡಿಕೆ
ರಾವಿಹಾಳು	ಮ್ಯಾರಿ/ವರ್ಮ	ಜಿಬ್ಬ	ಪಾಪಡಿ	ಚಿಟ್ಟಿಜೇನು	ಮೆಟ್ಗಿ
ನು-ಹೊಸೂರು	ವರ್ಮ	ಜಿಬ್ಬ	ಪಾಪಡಿ	ಚಿಟ್ಟಿಜೇನು	ಮೆಟ್ಗಿ
ಕವಿತಾಳ	ಮರ್ಮ	ಜಿಬ್ಬ	ಪಾಪಡಿ	ಚಿಟ್ಟಿಜೇನು	ಮೆಟ್ಗಿ
ತಿಂತಿಣಿ	ವರ್ಮ	ಜಿಬ್ಬ	ಪಾಪಡಿ	ಚಿಟ್ಟಿಜೇನು	ಮೆಟ್ಗಿ
ಅಮದಿಹಾಳ	ವರ್ಮ	ಜಿಬ್ಬ	ಪಾಪಡಿ	ಚಿಟ್ಟಿಜೇನು	ಮೆಟ್ಗಿ
ಗುನ್ನಾಳ	ವರ್ಮ	ಜಿಬ್ಬ	ಪಾಪಡಿ	ಚಿಟ್ಟಿಜೇನು	ಮೆಟ್ಗಿ
ಪುಟಗಮರಿ	ವರ್ಮ/ಮ್ಯಾರಿ	ಜಿಬ್ಬ	ಪಾಪಡಿ/ ಬೈತಾಲಿ	ಚಿಟ್ಟಿಜೇನು	ಮೆಟ್ಗಿ/ಮಡ್ಕಿ

ಬರಹ ಕನ್ನಡದಲ್ಲಿ ಉಚ್ಚಾರಗೊಳ್ಳುವ 'ಮೇರೆ' ಹಾಗೂ 'ಗಡಿ' ಎಂಬ ರೂಪ ಮಸ್ಕಿಕನ್ನಡದಲ್ಲಿ 'ವರ್ಮ' ಎಂದು ಬಳಕೆಯಲ್ಲಿದೆ. ರಾವಿಹಾಳುವಿನಲ್ಲಿ 'ಮ್ಯಾರಿ' ಹಾಗೂ 'ವರ್ಮ' ಎಂದು ಎರಡು ರೀತಿಯ

ರೂಪಗಳು ಕಾಣಸುತ್ತವೆ. 'ಪುಟಗಮರಿ' ಎಂಬಲ್ಲಿಯೂ 'ಮ್ಯಾರಿ' ಹಾಗೂ 'ವರ್ಮ' ಎರಡು ಪದ ಬಳಕೆಯನ್ನು ಗಮನಿಸಬಹುದು. ಉಳಿದ ಊರುಗಳಲ್ಲಿ 'ವರ್ಮ' ಎಂಬುದಾಗಿಯೇ ಬಳಕೆ ಇದೆ. ಬರಹಕನ್ನಡದ 'ಜಿಪುಣ' ಪದರೂಪ ಮಸ್ಕಿಕನ್ನಡದ ಸೀಮಾರೇಖೆಯ ಉದ್ದಗಲಕ್ಕೂ 'ಜಿಬ್ಬ' ಎಂದು ಬಳಕೆಯಾಗುತ್ತದೆ. ಬಳ್ಳಾರಿ ಕನ್ನಡದಲ್ಲಿ 'ಜಿಪುಣ' ಪದವು 'ಜುಗ್ಗ' ಎಂದು ಪ್ರಯೋಗವಾಗುವುದು. 'ಬೈತಲೆ' ಬರಹಕನ್ನಡ ರೂಪವು ಮಸ್ಕಿಕನ್ನಡದ ಸೀಮಾರೇಖೆಯಲ್ಲಿ 'ಪಾಪಡಿ' ರೂಪಹೊಂದಿ ಬಳಕೆಯಲ್ಲಿದೆ. 'ಪುಟಗಮರಿ' ಎಂಬ ಊರಲ್ಲಿ 'ಬೈತಾಲಿ' ಎಂಬ ರೂಪವು ಬಳಕೆಯಾಗುತ್ತದೆ. 'ಸಣ್ಣಜೇನು' ಪದ ಪ್ರಯೋಗವು ಮಸ್ಕಿಕನ್ನಡದಲ್ಲಿ 'ಚಿಟ್ಟೆಜೇನು' ಎಂಬುದಾಗಿ ಪ್ರಯೋಗವಾಗುವುದು. ಆದರೆ ಬಳ್ಳಾರಿ ಪರಿಸರದ ಕನ್ನಡದಲ್ಲಿ 'ಸಣ್ಣಜೇನು' ಎಂಬುದಾಗಿಯೆ ಬಳಕೆಗೊಳ್ಳುವುದು. ಆಹಾರ ಸೂಚಕ ಪದ 'ಮಡಿಕೆ' ಮಸ್ಕಿಕನ್ನಡದಲ್ಲಿ 'ಮೆಟ್ಗಿ' ಎಂದು ವಿಶೇಷವಾಗಿ ಬಳಕೆಯಲ್ಲಿದೆ. ಪುಟಗಮಯಲ್ಲಿ 'ಮೆಟ್ಗಿ', 'ಮಡ್ಕಿ' ಎಂದು ಎರಡು ರೂಪಗಳ ಬಳಕೆ ಕಂಡುಬರುತ್ತದೆ. ಕೊಪ್ಪಳ ಸುತ್ತಮುತ್ತಲಿನ ಪರಿಸರದಲ್ಲಿ ಮಡ್ಕಿ ಬಳಕೆ ಕಂಡುಬರುವುದನ್ನು ಗಮನಿಸಬಹುದು. ಮಸ್ಕಿಕನ್ನಡವು ಬಳ್ಳಾರಿ, ಕೊಪ್ಪಳ ಇತ್ಯಾದಿ ಕನ್ನಡಕ್ಕಿಂತ ಧ್ವನಿಯಲ್ಲಿ ಅರ್ಥದಲ್ಲಿ ಭಿನ್ನವಾಗಿರುವುದನ್ನು ಕಾಣುತ್ತೇವೆ. ಈ ಭಿನ್ನತೆಯನ್ನು ಭಾಷಾ ಪ್ರಭೇದಗಳು, ಉಪಭಾಷೆಗಳು ಎಂದು ಭಾಷಾವಿಜ್ಞಾನಿಗಳು ಕರೆದಿದ್ದಾರೆ. ಸಾಮಾಜಿಕವಾಗಿ ಮತ್ತು ಭೌಗೋಳಿಕ ಇರುವ ಈ ಭಿನ್ನತೆಯನ್ನು ಗುರುತಿಸುವುದು ತುಂಬ ಮುಖ್ಯ. ಈ ಸೀಮಾರೇಖೆಯಲ್ಲಿ ಸಾಮಾಜಿಕ ಪ್ರಭೇದಕ್ಕಿಂತ ಭೌಗೋಳಿಕ ಭಿನ್ನತೆಯನ್ನು ಗುರುತಿಸಲು ಯತ್ನಿಸಲಾಗಿದೆ. ಸಾಮಾಜಿಕ ಪ್ರಭೇದಗಳನ್ನು ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಬರಹ ಕನ್ನಡ	ಬುಗುಟಿ	ಕೆಚ್ಚು	ಬರಲು	ಮಾಟ	ದೀಪ
ರಾವಿಹಾಳು	ಬೋಳಿ	ಜಿಗುಟು	ಸೆಳ್ಳು	ಕೈತ್ವಡಕ	ಕಿಮಣಿ/ಚಿಮಣಿ
ನು-ಹೊಸೂರು	ಬೋಳಿ	ಜಿಗುಟು	ಸೆಳ್ಳು	ಕೈತ್ವಡಕ/ಕೈಮಸ್ಕ	ಕಿಮಣಿ
ಕವಿತಾಳ	ಬೋಳಿ	ಜಿಗುಟು	ಸೆಳ್ಳು	ಕೈತ್ವಡಕ/ಕೈಮಸ್ಕ	ಕಿಮಣಿ
ತಿಂತಿಣಿ	ಬೋಳಿ	ಜಿಗುಟು	ಸೆಳ್ಳು	ಕೈತ್ವಡಕು	ಕಿಮಣಿ
ಅಮದಿಹಾಳ	ಬೋಳಿ	ಜಿಗುಟು	ಸೆಳ್ಳು	ಕೈತ್ವಡಕ	ಕಿಮಣಿ
ಗುನ್ನಾಳ	ಬೋಳಿ	ಜಿಗುಟು	ಸೆಳ್ಳು	ಕೈತ್ವಡಕ	ಕಿಮಣಿ
ಪುಟಗಮರಿ	ಬೋಳಿ	ಜಿಗುಟು	ಸೆಳ್ಳು	ಕೈತ್ವಂಡಕ	ಕಿಮಣಿ/ಚಿಮಣಿ

ಬರಹಕನ್ನಡ ಬುಗುಟಿ ಪದ ಮಸ್ಕಿಕನ್ನಡದ ಸೀಮಾರೇಖೆ ಉದ್ದಕ್ಕೂ 'ಬೋಳಿ' ಎಂದು ಬಳಕೆಯಲ್ಲಿದೆ. ಬಳ್ಳಾರಿ ಹಾಗೂ ಇತರೆ ಕನ್ನಡಗಳಲ್ಲಿ 'ಬುಗ್ಗಿ' ಎಂದು ಬಳಕೆಯಾಗುತ್ತದೆ. 'ಕೆಚ್ಚು' ಪದ ಮಸ್ಕಿಕನ್ನಡದಲ್ಲಿ 'ಜಿಗುಟು' ಎಂದು ಬಳಕೆಯಲ್ಲಿದೆ. ಮಸ್ಕಿಕನ್ನಡದ ಪರಿವೀಕ್ಷಣೆ ಊರುಗಳಲ್ಲಿ 'ಜಿಗುಟು' ಪದಪ್ರಯೋಗವನ್ನು ಕಾಣಬಹುದು. ಬಳ್ಳಾರಿ ಕನ್ನಡದಲ್ಲಿ 'ಕೆಚ್ಚು' ಪದವು 'ರೊಚ್ಚು' ಎಂದು ಬಳಕೆಯಲ್ಲಿದೆ. ಬರಹಕನ್ನಡದ 'ಬರಲು' ಪದರೂಪ ಮಸ್ಕಿಕನ್ನಡದ ಎಲ್ಲಾ ಊರುಗಳಲ್ಲಿ 'ಸೆಳ್ಳು' ಎಂದು ಬಳಕೆಗಳ್ಳುವುದು. 'ಬರಲು' ಪದ ಕೊಪ್ಪಳ ಹಾಗೂ ಬಳ್ಳಾರಿ ಕನ್ನಡದಲ್ಲಿ ಬರ್ಲು ಎಂದು ಬಳಕೆಗಳ್ಳುವುದನ್ನು ಗಮನಿಸಬಹುದು. ಬರಹಕನ್ನಡದಲ್ಲಿ ಬಳಕೆಗೊಳ್ಳುವ 'ಮಾಟ' ಪದರೂಪ ಮಸ್ಕಿಕನ್ನಡದಲ್ಲಿ ಎರಡು ರೀತಿ ಬಳಕೆಗೊಳ್ಳುವುದು. ಒಂದು ರೂಪ 'ಕೈ

ತ್ವಡಕ' ಮತ್ತು ಇನ್ನೊಂದು ರೂಪ 'ಕೈ ಮಸ್ಕ'. 'ಕೈ ತ್ವಡಕು' ಪದವು ಮಸ್ಕಿಕನ್ನಡ ಸೀಮಾರೇಖೆಯ ಉದ್ದಕ್ಕೂ ಬಳಕೆಯಿದೆ. 'ಕೈಮಸ್ಕ' ಪದ ನುಗುಡೋಣಿ ಹೊಸೂರು ಹಾಗೂ ಕವಿತಾಳದಲ್ಲಿ ಬಳಕಯಲ್ಲಿದೆ. ಬರಹಕನ್ನಡದಲ್ಲಿ ಬಳಕೆಯಾಗುವ 'ದೀಪ' ಪದವು ಮಸ್ಕಿಕನ್ನಡದಲ್ಲಿ 'ಕಿಮಣಿ' ಎಂದು ಬಳಕೆಯಾಗುತ್ತದೆ. ಕತ್ತಲಿನಲ್ಲಿ ಬೆಳಕಿಗಾಗಿ ಬಳಸುವ ಪರಿಕರ ಇದಾಗಿರುತ್ತದೆ. ಮಸ್ಕಿಕನ್ನಡದ ಪರಿವೀಕ್ಷಣೆಯ ಊರುಗಳಾದ ರಾವಿಹಾಳು ಹಾಗೂ ಪುಟಗಮರಿಯಲ್ಲಿ 'ಚಿಮಣಿ' ಎಂಬ ರೂಪ ಬಳಕೆಯಲ್ಲಿದೆ.

ಬರಹ ಕನ್ನಡ	ಊಟದಚಾಪೆ	ದನಕಾಯುವವನು	ಹೋಗುತ್ತೀಯಾ	ದಪ್ಪ
ರಾವಿಹಾಳು	ಚಿಡಿಚಾಪಿ	ದನಗಾಯಿ	ಓತಿ	ಗಡತರ
ನು-ಹೊಸೂರು	ಚಿಡಿಚಾಪಿ	ದನಗಾಯಿ	ಓತಿ	ಗಡತರ
ಕವಿತಾಳ	ಚಿಡಿಚಾಪಿ	ದನಗಾಯಿ	ಓತಿ	ಗಡತರ
ತಿಂತಿಣಿ	ಚಿಡಿಚಾಪಿ	ದನಗಾಯಿ	ಓತಿ	ಗಡತರ
ಅಮದಿಹಾಳ	ಚಿಡಿಚಾಪಿ	ದನಗಾಯಿ	ಓತಿ	ಗಡತರ
ಗುನ್ನಾಳ	ಚಿಡಿಚಾಪಿ	ದನಗಾಯಿ	ಓತಿ	ಗಡತರ
ಪುಟಗಮರಿ	ಚಿಡಿಚಾಪಿ	ದನಗಾಯಿ	ಓತಿ	ಗಡತರ

ಬರಹ ಕನ್ನಡದಲ್ಲಿ ಬಳಕೆಯಲ್ಲಿರುವ 'ಊಟದಚಾಪೆ' ಮಸ್ಕಿಕನ್ನಡದಲ್ಲಿ 'ಚಿಡಿಚಾಪಿ' ಎಂಬುದಾಗಿ ಬಳಕೆಯಲ್ಲಿದೆ. 'ದನಕಾಯುವವನು' ಎನ್ನುವ ಪದರೂಪ ಮಸ್ಕಿಕನ್ನಡದಲ್ಲಿ 'ದನಗಾಯಿ' ಎಂದು ಬಳಕೆಯಲ್ಲಿದೆ. ಬರಹಕನ್ನಡದಲ್ಲಿ ಬಳಕೆಯಾಗುವ 'ಹೋಗುತ್ತೀಯಾ' ಪ್ರಶ್ನಾರ್ಥಕ ಪದ ಮಸ್ಕಿಕನ್ನಡದಲ್ಲಿ 'ಓತಿ' ಎಂದು ಬಳಕೆಯಾಗುತ್ತದೆ. ಮಸ್ಕಿಕನ್ನಡ ಸೀಮಾರೇಖೆಯನ್ನು ಹೊರತುಪಡಿಸಿ ಹೊರಪರಿಸರದಲ್ಲಿ 'ವೋಗ್ತೀಯಾ' ಎಂಬ ಬಳಕೆಯನ್ನು ಗಮನಿಸಬಹುದು. 'ದಪ್ಪ' ಎನ್ನುವ ಗುಣವಾಚಕ ರೂಪ ಮಸ್ಕಿಕನ್ನಡದಲ್ಲಿ 'ಗಡತರ' ಎಂದು ಬಳಕೆಯಲ್ಲಿದೆ. ಈ ಪದ ರೂಪ ಮಸ್ಕಿಕನ್ನಡ ಸೀಮಾರೇಖೆಯ ಉದ್ದಕ್ಕೂ ಬಳಕೆಗೊಳ್ಳುತ್ತದೆ. ಮಸ್ಕಿಕನ್ನಡ ಸೀಮಾರೇಖೆಯನ್ನು ಹೊರತುಪಡಿಸಿ ಹೊರ ಪರಿಸರದಲ್ಲಿ 'ದಪ್ಪ' ಪದವು 'ದಪ್ಗ' ಎಂದು ಬಳಕೆಯಾಗುತ್ತದೆ.

ಬರಹಕನ್ನಡ	ಮರುಭೂಮಿ	ತಗ್ಗುಪ್ರದೇಶ	ಎತ್ತರಪ್ರದೇಶ
ರಾವಿಹಾಳು	ಪಡಭೂಮಿ	ನಾಲಾ	ವಂಟೆದಿಬ್ಬ/ಬಗಡಿ
ನೂ-ಹೊಸೂರು	ಪಡಬೂಮಿ	ನಾಲಾ	ವಂಟೆದಿಬ್ಬ/ಬಗಡಿ
ಕವಿತಾಳ	ಪಡಬೂಮಿ	ನಾಲಾ	ವಂಟೆದಿಬ್ಬ/ಬಗಡಿ
ತಿಂತಿಣಿ	ಪಡಬೂಮಿ	ನಾಲಾ	ವಂಟೆದಿಬ್ಬ/ಬಗಡಿ
ಅಮದಿಹಾಳ	ಪಡಬೂಮಿ	ನಾಲಾ	ವಂಟೆದಿಬ್ಬ/ಬಗಡಿ
ಗುನ್ನಾಳ	ಪಡಬೂಮಿ	ನಾಲಾ	ವಂಟೆದಿಬ್ಬ
ಪುಟಗಮರಿ	ಪಡಬೂಮಿ	ನಾಲಾ	ವಂಟೆದಿಬ್ಬ

ಬರಹ ಕನ್ನಡದಲ್ಲಿ ಬಳಕೆಯಿರುವ 'ಮರುಭೂಮಿ' ಮಸ್ಕಿಕನ್ನಡದಲ್ಲಿ 'ಪಡಭೂಮಿ' ಎಂಬ ಬಳಕೆಯಲ್ಲಿದೆ. ಈ ರೂಪವು ಏಳು ಪರಿವೀಕ್ಷಣ ಊರುಗಳಲ್ಲಿ 'ಪಡಬೂಮಿ' ಬಳಕೆಯನ್ನು ಗಮನಿಸಬಹುದು. ಅದೇ ರೀತಿ 'ತಗ್ಗುಪ್ರದೇಶ' ಬರಹಕನ್ನಡದ ಭೌಗೋಳಿಕ ಸೂಚಕಪದ ಮಸ್ಕಿಪರಿಸರದ ಕನ್ನಡದಲ್ಲಿ 'ನಾಲಾ' ಎಂದು ಬಳಕೆಯಲ್ಲಿದೆ. ಇನ್ನೊಂದು ಭೋಗೋಳಿಕ ಸೂಚಕ ಪದ 'ಎತ್ತರ ಪ್ರದೇಶ' ಮಸ್ಕಿಕನ್ನಡದಲ್ಲಿ 'ವಂಟೆದಿಬ್ಬ' ಎಂದು ಎಲ್ಲಾ ಪರಿವೀಕ್ಷಣಾ ಸ್ಥಳಗಳಲ್ಲಿ ಹಾಗೂ ರಾವಿಹಾಳು, ನುಗುಡೋಣಿ ಹೊಸೂರು, ಕವಿತಾಳ, ತಿಂತಿಣಿಯಲ್ಲಿ 'ಬಗಡಿ' ಎನ್ನುವ ಇನ್ನೊಂದು ರೂಪ ಕಾಣಿಸುತ್ತದೆ. ಬಳ್ಳಾರಿ ಕನ್ನಡದಲ್ಲಿ 'ದಿನ್ನೆ' ಎನ್ನುವ ಬಳಕೆಯನ್ನು ನೋಡಬಹುದು.

ವಾಕ್ಯಹಂತ

ಮಸ್ಕಿಕನ್ನಡದ ಸೀಮಾರೇಖೆ ಒಳಗಡೆ ವಾಕ್ಯರಚನೆಯಲ್ಲಿ ಭಿನ್ನವಾಗಿರುವ ಅಂಶಗಳನ್ನು ಗಮನಿಸಬಹುದು. ಮಸ್ಕಿಕನ್ನಡದಲ್ಲಿ ಬಳಕೆಗೊಳ್ಳುತ್ತಿರುವ ವಾಕ್ಯರಚನೆ ಇನ್ನಿತರ ಪ್ರಭೇದಗಳಾದ ಬಳ್ಳಾರಿ, ರಾಯಚೂರು, ಕೊಪ್ಪಳ ಕನ್ನಡಗಳಿಗೆ ಪರ್ಯಾಯವಾಗಿ ಮಸ್ಕಿಕನ್ನಡ ತನ್ನದೇ ಆದ ವಾಕ್ಯರಚನೆಯನ್ನು ಹೊಂದಿದೆ.

ಬರಹ ಕನ್ನಡದ ಪದರೂಪ ಮಸ್ಕಿಕನ್ನಡದಲ್ಲಿ ಸಾಕಷ್ಟು ಪರ್ಯಾಯ ಪದಗಳೊಂದಿಗೆ ಬಳಕೆಯಲ್ಲಿದೆ. ಬರಹಕನ್ನಡದ ಪದಬಳಕೆಯು ಮಸ್ಕಿಕನ್ನಡ ಸೀಮಾರೇಖೆಯೊಳಗಡೆ ಒಂದು ಬಗೆಯಾಗಿ ಬಳಕೆಗೊಂಡರೆ ಸೀಮಾರೇಖೆಯ ಹೊರಪರಿಸರದಲ್ಲಿ ಇನ್ನೊಂದು ಬಗೆ ಬಳಕೆಯಾಗುವುದನ್ನು ಗಮನಿಸಬಹುದು. ಮಸ್ಕಿಕನ್ನಡದ ಪದ ಬಳಕೆಯನ್ನು ವಾಕ್ಯರಚನೆಯ ಮೂಲಕ ಪಕ್ಕದ ಹೊರ ಪರಿಸರದ ಕನ್ನಡಗಳಾದ ರಾಯಚೂರು, ಬಳ್ಳಾರಿ, ಕೊಪ್ಪಳ ಕನ್ನಡಗಳ ಜೊತೆ ತೌಲನಿಕವಾಗಿ ಗಮನಿಸಿದಾಗ ವ್ಯತ್ಯಾಸ ಇರುವುದು ಕಂಡುಬರುತ್ತದೆ.

ಬರಹ ಕನ್ನಡದ 'ಇದೆ' ಎನ್ನುವ ಪದ ಮಸ್ಕಿಕನ್ನಡದಲ್ಲಿ 'ಅಯ್ತಿ' ಎಂದು ಬಳಕೆಯಲ್ಲಿದೆ.ಇದೆ ಪದರೂಪ ರಾಯಚೂರು ಕನ್ನಡದಲ್ಲಿ 'ಅದ' ಎಂಬುದಾಗಿ ಬಳಕೆಯಾಗುವುದು. ನಾವು ವಾಕ್ಯರಚನೆಯ ಮೂಲಕ ನೋಡುವುದಾದರೆ ಮಸ್ಕಿಕನ್ನಡದಲ್ಲಿ ''ನನ್‌ಮನ್ಯಾಗ ರೊಕ್ಕ ಅಯ್ತಿ'' ಇದೆ ವಾಕ್ಯಪ್ರಯೋಗ ರಾಯಚೂರು ಕನ್ನಡದಲ್ಲಿ ''ನನ್ನಮನ್ಯಾಗ ರೊಕ್ಕ ಅದ'' ಎಂದು ಬಳಕೆಯಾಗುತ್ತದೆ. 'ಅಯ್ತಿ' ಪದ ಪ್ರಯೋಗ ಮಸ್ಕಿಕನ್ನಡ ಸೀಮಾರೇಖೆಯಲ್ಲಿ ಬಂದರೆ 'ಅದ' ಪದಪ್ರಯೋಗ ರಾಯಚೂರು ಕನ್ನಡದಲ್ಲಿ ಬರುತ್ತದೆ. ಅದೇ ರೀತಿ ಬರಹ ಕನ್ನಡ 'ನನ್ನಹತ್ತಿರ' ಎನ್ನುವ ಕೂಡುಪದ ಮಸ್ಕಿಕನ್ನಡದಲ್ಲಿ 'ನಂತಾಕ' ಎಂದು ಬಳಕೆಯಾಗುತ್ತದೆ. ಆದರೆ ರಾಯಚೂರು ಕನ್ನಡದಲ್ಲಿ 'ನನ್‌ಬಲ್ಲಿ' ಎನ್ನುವ ಬಳಕೆ ಕಂಡುಬರುತ್ತದೆ. ಮಸ್ಕಿಕನ್ನಡದಲ್ಲಿ ''ನಂತಾಕ ಕೊಡು ಅಂತ ಯೇಳ್ಯಾನ'' ಎಂಬ ವಾಕ್ಯರಚನೆ ಕಂಡುಬಂದರೆ, ರಾಯಚೂರು ಕನ್ನಡದಲ್ಲಿ ''ನನ್‌ಬಲ್ಲಿಕೊಡು ಅಂತ ಅಂದಾನ'' ಎಂಬ ವಾಕ್ಯಬಳಕೆ ಕಂಡುಬರುತ್ತದೆ. ಮಸ್ಕಿಕನ್ನಡದ ವಾಕ್ಯರಚನೆ ಹಾಗೂ ರಾಯಚೂರು ಕನ್ನಡ ವಾಕ್ಯರಚನೆಯ ಬಳಕೆ ಬೇರೆ ಬೇರೆಯಾಗಿರುವುದನ್ನು ಗಮನಿಸಬಹುದು.

ಬರಹ ಕನ್ನಡದ 'ನಡುವೆ' ಗುಣವಾಚಕ ಪದ ಮಸ್ಕಿಕನ್ನಡದಲ್ಲಿ 'ನಡಬರ್ಕ' ಎಂಬುದಾಗಿ ಬಳಕೆಯಾಗುತ್ತದೆ. 'ನಡಬರ್ಕ ಅತ ನಿಂತಾನ' ಎನ್ನುವ ವಾಕ್ಯರಚನೆಯ ಬಳಕೆ ಮಸ್ಕಿಕನ್ನಡದ್ದು. ಅದರೆ, ಬಳ್ಳಾರಿ ಕನ್ನಡದ ಬಳಕೆಯಲ್ಲಿ ''ನಡಕ ಆತ ನಿಂತಾನ'' ಎಂಬುದಾಗಿ ಬಳಕೆಯಾಗುತ್ತದೆ. ಇಲ್ಲಿ ಮಸ್ಕಿಕನ್ನಡ ಹಾಗೂ ಬಳ್ಳಾರಿ ಕನ್ನಡ ವಾಕ್ಯರಚನೆಯ ಬಳಕೆಯಲ್ಲಿ ವ್ಯತ್ಯಾಸವನ್ನು ಗಮನಿಸಬಹುದು. ಅಂದರೆ ಮಸ್ಕಿಕನ್ನಡವು

ತನ್ನದೇ ಆದ ವಾಕ್ಯರಚನೆಯನ್ನು ಹೊಂದಿರುವುದು ಕಂಡುಬರುತ್ತದೆ. ಅದೇ ರೀತಿ ಬರಹ ಕನ್ನಡದಲ್ಲಿ 'ಗಂಡುಮಗು' ಕೂಡುಪದರೂಪ ಮಸ್ಕಿಕನ್ನಡದಲ್ಲಿ 'ಗ್ವಂಡಮಗ' ಎಂದು ಬಳಕೆಯಲ್ಲಿದೆ. ಈ ಪದದ ಬಳಕೆ ವಾಕ್ಯರಚನೆಯ ಮಸ್ಕಿಕನ್ನಡದಲ್ಲಿ ''ನಂಗ ಒಬ್ಬ ಗ್ವಂಡಮಗಾ ಅಯ್ತು'' ಎಂಬ ಬಳಕೆಯಲ್ಲಿದೆ ಆದರೆ ಬಳ್ಳಾರಿ ಕನ್ನಡದಲ್ಲಿ ''ನನಗ ಒಬ್ಬ ಗಂಡು ಮಗ ಇದ್ದಾನ'' ಎಂಬ ಬಳಕೆಯಲ್ಲಿದೆ. ಮಸ್ಕಿಕನ್ನಡದ ವಾಕ್ಯರಚನೆ ಬಳ್ಳಾರಿ ಕನ್ನಡದ ವಾಕ್ಯರಚನೆಗಿಂತ ಭಿನ್ನವಾಗಿರುವುದನ್ನು ನೋಡಬಹುದು. ಬರಹಕನ್ನಡದಲ್ಲಿಬಳಕೆಯಲ್ಲಿರುವ 'ಕುಳಿತಿಕೊ' ಪದ ರೂಪ ಮಸ್ಕಿಕನ್ನಡದ ಸೀಮಾರೇಖೆ ಒಳಗಡೆ 'ಕುಲ್‌ತ್ಗ' ಎಂದು ಉಚ್ಚಾರಗೊಳ್ಳುತ್ತದೆ. ಕೊಪ್ಪಳ ಕನ್ನಡದಲ್ಲಿ 'ಕುಳಿತಿಕೊ' ಪದ ಬಳಕೆ 'ಕುಂತ್ಗ' ಎಂದಾಗುವುದು. ಮಸ್ಕಿಕನ್ನಡದ ವಾಕ್ಯರಚನೆಯಲ್ಲಿ ''ಅಲ್ಲೇ ಕುಲ್‌ತ್ಗ ಬರ್ತೀನಿ'' ಎಂಬ ಬಳಕೆ ಕಂಡುಬರುತ್ತದೆ. ಕೊಪ್ಪಳ ಪರಿಸರದ ಕನ್ನಡದಲ್ಲಿ ''ಅಲ್ಲೆಕುಂತ್ಗ ಬರ್ತೀನಿ'' ಎನ್ನುವ ವಾಕ್ಯ ಬಳಕೆ ಕಂಡುಬರುತ್ತದೆ. ಮಸ್ಕಿಕನ್ನಡದ ವಾಕ್ಯರಚನೆ ಕೊಪ್ಪಳ ಕನ್ನಡದ ವಾಕ್ಯರಚನೆಗಿಂತ ಭಿನ್ನವಾಗಿ ಬಳಕೆಯಲ್ಲಿದೆ. ಮಸ್ಕಿಕನ್ನಡದ ವಾಕ್ಯರಚನೆ ಇತರೆ ಬಳ್ಳಾರಿ, ರಾಯಚೂರು, ಕೊಪ್ಪಳ ಕನ್ನಡಕ್ಕಿಂತ ಬೇರೆಯಾಗಿ ನಿಲ್ಲುತ್ತದೆ.

ಅರ್ಥವ್ಯತ್ಯಾಸ

ಮಸ್ಕಿಕನ್ನಡದ ಪದಗಳ ಬಳಕೆಯಲ್ಲಿ ಹಲವು ಅರ್ಥಗಳನ್ನು ಒಳಗೊಂಡಿರುವುದು ಕಂಡುಬರುತ್ತದೆ. ಮಸ್ಕಿಕನ್ನಡದ ಸೀಮಾರೇಖೆಯ ಒಳಗಡೆ ಇಂತಹ ಪದಗಳನ್ನು ಗಮನಿಸಬಹುದು ಮತ್ತು ಮಸ್ಕಿಕನ್ನಡ ಸೀಮಾರೇಖೆಯ ಹೊರ ಪರಿಸರದ ಕನ್ನಡಕ್ಕೆ ಭಿನ್ನವಾಗಿರುವಂತಹ ಅರ್ಥವ್ಯತ್ಯಾಸದ ಪದಬಳಕೆಯಲ್ಲಿ ಕಂಡುಬರುತ್ತದೆ.

ಬರಹ ಕನ್ನಡದ ಪದರೂಪ 'ಎಡಕು' ಮಸ್ಕಿಕನ್ನಡದಲ್ಲಿ ಎರಡು ಅರ್ಥದಲ್ಲಿ ಬಳಕೆಯಿದೆ. ಒಂದು ಅರ್ಥ 'ಕತ್ತು'ಗೆ ಸಮನಾಗಿ ಬಳಕೆಯಾಗುತ್ತದೆ. ಇನ್ನೊಂದು ಅರ್ಥ 'ಎಡುಕು' ಈ ರೂಪ 'ಅಡ್ಡನಾಗು' ಎಂಬುದಕ್ಕೆ 'ಎಡುಕಿದ' ಎನ್ನುವ ಅರ್ಥವು ಬಳಕೆಯಲ್ಲಿದೆ. ಅದೇ ರೀತಿ 'ಸಲಾಕೆ' ಪದರೂಪ ಕಬ್ಬಿಣದ ಪರಿಕರ, ತೋಟ, ಮನೆ, ಗದ್ದೆಗಳಲ್ಲಿ ಬಳಸುವ ವಸ್ತು ಎಂದಾದರೆ. ಇನ್ನೊಂದು ಬಳಕೆ ಅರ್ಥ ಅಡುಗೆಮಾಡುವ ಸಂದರ್ಭದಲ್ಲಿ 'ಕೆದಕಲು' ಅಥವಾ 'ಮುಗುಚಲು' ಬಳಸುವ ಪರಿಕರ ಆಗಿರುತ್ತದೆ. ಅಂದರೆ 'ಸಲಾಕೆ' ಪದರೂಪ ಎರಡು ಅರ್ಥದಿಂದ ಪ್ರಯೋಗವಾಗುತ್ತದೆ. ಮಸ್ಕಿಕನ್ನಡದ ಸೀಮಾರೇಖೆ ಒಳಗಡೆ 'ಪೂರ್ವ' ದಿಕ್ಕು ಸೂಚಕ ಪದ 'ತಳಕ' ಎಂದು ಬಳಕೆಯಾದರೆ 'ಕೆಳಗೆ' ಎನ್ನುವ ಪದರೂಪಕ್ಕೆ ಸಮನಾರ್ಥಕವಾಗಿ 'ತಳಕ' ಎಂದು ಬಳಕೆಯಾಗುತ್ತದೆ. ಇದೇ ರೀತಿ 'ಪಶ್ಚಿಮ' ದಿಕ್ಕು ಸೂಚಕಪದಕ್ಕೆ ಸಮನಾಗಿ 'ಮ್ಯಾಕ' ಎಂಬ ಪ್ರಯೋಗ ಕಂಡುಬಂದರೆ, ಮೇಲೆ ಎನ್ನುವ ಪದಕ್ಕೆ ಸಮನಾಗಿ 'ಮ್ಯಾಕ' ಎನ್ನುವ ಪದ ಬಳಕೆಕಂಡುಬರುತ್ತದೆ. ಎರಡು ಅರ್ಥದಲ್ಲಿ 'ಮ್ಯಾಕ' ಪದ ಬಳಕೆಯಲ್ಲಿದೆ. ಅರ್ಥವ್ಯತ್ಯಾಸದಲ್ಲಿ ಕಂಡುಬರುವ ಪದಗಳು ಮಸ್ಕಿ ಕನ್ನಡವನ್ನು ಹೊರತುಪಡಿಸಿ ಬಳಕೆಯಲ್ಲಿವೆ. ಈ ರೀತಿಯ ಭಾಷಾಭಿನ್ನತೆಗೆ ಸಾಮಾಜಿಕ, ಚಾರಿತ್ರಿಕ, ರಾಜಕೀಯ ಹಾಗೂ ಭೌಗೋಳಿಕ ಕಾರಣಗಳು ಎನ್ನಬಹುದು. ಮಸ್ಕಿಕನ್ನಡ ಭಾಷಿಕ ವಿವಿಧ ಹಂತಗಳಲ್ಲಿ ತನ್ನದೇ ಆದ ಸೀಮಾರೇಖೆಯನ್ನು ಒಳಗೊಂಡಿದೆ.

ಇಂತಹ ವಿಶಿಷ್ಟವಾದ ಭಾಷಿಕ ನೆಲೆಯನ್ನು ಹೊಂದಿರುವ ಭಾಷಿಕ ಅಧ್ಯಯನ ಕ್ಷೇತ್ರಗಳ ಬಗೆಗೆ ಅಧ್ಯಯನ ಮಾಡಬೇಕಾಗಿದೆ. ಈ ಎಲ್ಲಾ ಭಾಷಿಕ ವೈಶಿಷ್ಟ್ಯಗಳನ್ನು ಗಮನಿಸಿದಾಗ ಇದೊಂದು ಕನ್ನಡದ ಮಹತ್ವವಾದ ಪ್ರಾದೇಶಿಕ ಪ್ರಭೇದವೆಂಬ ತೀರ್ಮಾನಕ್ಕೆ ಬರಬೇಕಾಗಿದೆ. ಇಂದು ಬೇರೆ ಬೇರೆ ಕಾರಣಗಳ ಪ್ರಭಾವದಿಂದ ಕನ್ನಡ ಪ್ರಭೇದಗಳಲ್ಲಿ ಬದಲಾವಣೆ ಆಗುತ್ತಿದೆ. ಅಂದರೆ ಒಂದು ಪ್ರಭೇದ ಹುಟ್ಟಿಗೆ ಕಾರಣಗಳು ಇರುವಾಗ; ಒಂದು ಪ್ರಭೇದ ಬದಲಾವಣೆಗೂ ಕಾರಣಗಳಿವೆ. ಇಂತಹ ಸಂದರ್ಭದಲ್ಲಿ 'ಮಸ್ಕಿಕನ್ನಡ' ತನ್ನ ಅನನ್ಯತೆಯನ್ನು ಉಳಿಸಿಕೊಂಡಿದೆ.



ಮಸ್ಕಿ ಕನ್ನಡದ ಸೀಮಾರೇಖೆ

ಅಧ್ಯಾಯ ೧೦

ಮಸ್ಕಿಕನ್ನಡ : ಬದಲಾವಣೆ ಪ್ರಕ್ರಿಯೆ

ಅಧ್ಯಾಯ ೧೦

ಮಸ್ಕಿಕನ್ನಡ : ಬದಲಾವಣೆ ಪ್ರಕ್ರಿಯೆ

ಕನ್ನಡದ ಪ್ರಭೇದಗಳು ಹುಟ್ಟಿಕೊಳ್ಳುವುದಕ್ಕೆ ಕಾರಣಗಳು ಇರುವಾಗ; ಬದಲಾವಣೆ ಆಗುತ್ತಿರುವದಕ್ಕೂ ಕಾರಣಗಳಿವೆ. ಇಲ್ಲಿ ಮುಖ್ಯವಾಗಿ ಬದಲಾವಣೆ ಎಂದರೆ ನಿರ್ದಿಷ್ಟಗೊಳ್ಳುವುದು ಎಂದರ್ಥ. ಅಂದರೆ ಬಳಕೆಯ ವಲಯ ಸೀಮಿತವಾಗುವುದು. ಕನ್ನಡದ ಪ್ರಭೇದಗಳ ಪದಕೋಶ ಇಂದು ನಮ್ಮಿಂದ ದೂರ ಸರಿಯುತ್ತಿವೆ. ಇದಕ್ಕೆ 'ಜಾಗತೀಕರಣ' ಕಾರಣ ಇರಬಹುದು ಎಂದು ವಿದ್ವಾಂಸರು ಚರ್ಚೆ ಮಾಡುತ್ತಿದ್ದಾರೆ.

'ಮೋರ್ ಸಂಸ್ಕೃತಿ' ಮತ್ತು ಡೈಲಿನೀಡ್ಸ್, ಸೂಪರ್ ಮಾರ್ಕೆಟ್ ಸಂಸ್ಕೃತಿಗಳಿಂದ ದೇಶಿ ನೆಲೆಯಲ್ಲಿ ಬಳಕೆಯಾಗುತ್ತಿದ್ದ ಪದಗಳು ಬಳಕೆಯಿಂದ ಜಾರುತ್ತಿವೆ. ಈ ಭಾಷಿಕ ಸಂದರ್ಭ ಮಸ್ಕಿಪರಿಸರದಲ್ಲಿ ಬಳಕೆಯಲ್ಲಿರುವ ಪದಕೋಶದಲ್ಲಿ ಏನಾಗಿದೆ ಎಂಬುದನ್ನು ಗಮನಿಸುವುದಾಗಿದೆ. ಮೋರ್, ಡೈಲಿನೀಡ್ಸ್, ಸೂಪರ್ ಮಾರ್ಕೆಟ್‌ಗಳಲ್ಲಿ ದವಸ ಧಾನ್ಯಗಳೆಲ್ಲ ಪ್ಯಾಕೆಟ್‌ಗಳಲ್ಲಿ ಲಭ್ಯವಿದೆ. ಅವುಗಳನ್ನು ಶುಚಿಮಾಡುವ ಸಂದರ್ಭ ಬರುವುದಿಲ್ಲ. ಹಾಗಾಗಿ ಶುಚಿಮಾಡುವ ಸಂದರ್ಭದಲ್ಲಿ ಬಳಕೆಯಾಗುತ್ತಿದ್ದ ಪದಗಳು ಮಾಯವಾಗುತ್ತಿವೆ ಎಂದು. ಅಂತಹ ಭಾಷಿಕ ಲಕ್ಷಣ ನಿಜನಾ ಎಂಬುದನ್ನು ಪ್ರಸ್ತುತ ಅಧ್ಯಾಯದಲ್ಲಿ ನೋಡಲಾಗಿದೆ.

ಕನ್ನಡ ಭಾಷೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿರುವ ಸ್ವತಂತ್ರ ಭಾಷೆ ಹುಟ್ಟಿದನಿಂದ ಇಲ್ಲಿಯವರೆಗೆ ಅನೇಕ ಅವಸ್ಥೆಗಳನ್ನು, ಉಪಭಾಷೆಗಳನ್ನು, ಪ್ರಭೇದಗಳನ್ನು ಹೊಂದುತ್ತ ಬಂದಿದೆ. ಕಾಲಕಾಲಕ್ಕೆ ಅನೇಕ ಬದಲಾವಣೆಗಳನ್ನು ಅಳವಡಿಸಿಕೊಳ್ಳುತ್ತ, ಬೆಳವಣಿಗೆ ಹೊಂದುತ್ತ ಬಂದಿರುವುದನ್ನು ಗಮನಿಸಬಹುದು. ಅನೇಕ ಸ್ವರ, ಶಬ್ದ, ಅರ್ಥರೂಪಗಳಲ್ಲಿ ಬದಲಾವಣೆಗಳಾಗಿವೆ. ಬೇರೆ ಭಾಷೆಯಿಂದ ಹಲವು ಶಬ್ದಗಳು ಕನ್ನಡದಲ್ಲಿ ಬಂದು ನೆಲೆಸಿವೆ. ಜೀವಂತ ಭಾಷೆ ನಿಂತ

ನೀರಾಗಿರುವುದಿಲ್ಲ. ಅದು ನದಿ, ಹಳ್ಳಿಗಳಿಂದೊಡಗೂಡಿ ಸದಾ ಹರಿಯುತ್ತಿರುತ್ತದೆ ಮತ್ತು ನದಿಯಂತೆ ವಿಭಿನ್ನವಾಗಿ ಚಲಿಸುತ್ತಿರುತ್ತದೆ. ಬೇರೆ ಬೇರೆ ನೆಲೆಗಳಿಂದ ವಿಚಾರಗಳು, ಶಬ್ದಗಳು, ಆ ಮೂಲಕ ಧ್ವನಿಗಳು ಬಂದು ಭಾಷಾಪ್ರವಾಹವನ್ನು ಸೇರುತ್ತಿರುತ್ತವೆ. ಆಗ ಭಾಷೆ ಬದಲಾವಣೆಯ ಪ್ರಕ್ರಿಯೆಗೆ ಒಳಗಾಗುತ್ತದೆ. ಒಂದು ವೇಳೆ ಅದು ಬದಲಾವಣೆಗೆ ಒಳಗಾಗದೆ ಇದ್ದರೆ ನಿಂತ ನೀರಾಗಿ, ಮಲಿತ ನೀರಾಗಿ ಕೆಟ್ಟುಹೋಗುತ್ತದೆ. ಅದೇ ರೀತಿ ಭಾಷೆ ಅವನತಿ ಹೊಂದಿ ಮೃತಭಾಷೆ ಎನಿಸಿಕೊಳ್ಳುತ್ತದೆ. ಅಂದರೆ ಭಾಷೆ ಬದಲಾವಣೆಗೆ ಒಳಗಾದರೆ ಮಾತ್ರ ಅದು ಜೀವಂತ ಭಾಷೆಯ ಲಕ್ಷಣ ಎನಿಸಿಕೊಳ್ಳುತ್ತದೆ. ಮಸ್ಕಿಕನ್ನಡದ ಪ್ರಭೇದದಲ್ಲಿ ಭಾಷೆ ಬದಲಾವಣೆಯಾಗುವುದನ್ನು ಹಲವು ವಿಧಗಳಲ್ಲಿ ನೋಡಬಹುದು.

ಮಸ್ಕಿಕನ್ನಡದಲ್ಲಿ ಸೌಲಭ್ಯಕಾಂಕ್ಷಿಗಳಿಂದಲೂ ಭಾಷೆ ಬದಲಾವಣೆಯಾಗುವುದನ್ನು ಗಮನಿಸಬಹುದು. ಸಂಸ್ಕೃತ ಪ್ರಭಾವ ಕನ್ನಡದ ಮೇಲೆ ಸಾಕಷ್ಟು ಆಗಿದೆ. ಸಂಸ್ಕೃತದ ಪದಗಳು ಕನ್ನಡಕ್ಕೆ ನೇರವಾಗಿಯೂ ಬಂದಿವೆ. ಸಂಸ್ಕೃತ ಪದಗಳು ದಿನ ನಿತ್ಯ ಮಸ್ಕಿಕನ್ನಡದ ಪ್ರಾದೇಶಿಕ ವಲಯದಲ್ಲಿ ಕಂಡುಬರುತ್ತದೆ. ಇಲ್ಲಿ ಸಂಸ್ಕೃತ ಪದಗಳನ್ನು ಉಚ್ಚರಿಸುವುದು ಕಷ್ಟವಾಗುವುದರಿಂದ ತನ್ನ ಸೌಲಭ್ಯಕ್ಕಾಗಿ ಸರಳಗೊಳಿಸಿ ಮಾತನಾಡುವುದು ಕಂಡುಬರುತ್ತದೆ. ಇಲ್ಲಿ ಭಾಷೆ ಕ್ಲಿಷ್ಟತೆಯಿಂದ ಸರಳತೆ ಕಡೆಗೆ ಹರಿಯುವುದನ್ನು ಗಮನಿಸಬಹುದು. ಮಸ್ಕಿಕನ್ನಡದಲ್ಲಿ ಬದಲಾವಣೆಯ ಪ್ರಕ್ರಿಯೆಯನ್ನು ಕೆಲವು ಉದಾಹರಣೆಯಿಂದ ನೋಡಬಹುದು. ಚೈತ್ರ>ಚಯಿತ್ರ, ಕೃತ್ತಿಕ>ಕೀರ್ತುಕ, ಮೃಗಶಿರ>ಮಿರಗ, ಔಷಧಿ>ಅವುಸದಿ, ಶಬ್ದಾರಂಭದಲ್ಲಿ ಸಂಯುಕ್ತಾಕ್ಷರ ವಿರಳಾಕ್ಷರ ಆಗಿರುವುದು ಕಂಡುಬರುತ್ತದೆ. ಸೌಲಭ್ಯಕಾಂಕ್ಷೆಗೋಸ್ಕರ ಮಾಡಿಕೊಂಡು ಬದಲಾವಣೆಯಾಗಿದೆ. ಸ್ಥಳನಾಮ ಹಾಗೂ ವ್ಯಕ್ತಿನಾಮಗಳಲ್ಲಿ ಈ ರೀತಿಯ ಬದಲಾವಣೆಯ ಪ್ರಕ್ರಿಯೆಯನ್ನು ಗಮನಿಸಬಹುದು. ಲಿಂಗಸೂಗೂರು> ಲಿಂಗ್ಸೂರು, ಸಿರುಗುಪ್ಪ>ಸಿರುಗುಂಪ, ಸ್ಥಳನಾಮಗಳಲ್ಲಿ ಆದರೆ, ಹನುಮಂತಪ್ಪ>ಅನ್ಮಪ್ಪ, ಲಕ್ಷ್ಮಣ>ಲಕ್ಸ್ಮ ವ್ಯಕ್ತಿನಾಮಗಳಲ್ಲಿಯೂ ಸೌಲಭ್ಯಕಾಂಕ್ಷೆಗಾಗಿ ಬದಲಾವಣೆ ಆಗಿರುವುದು ಕಂಡುಬರುತ್ತದೆ. ವರ್ತಮಾನಕಾಲ ಉತ್ತಮ, ಮಧ್ಯಮ, ಪ್ರಥಮ ಪುರುಷ ಏಕವಚನದಲ್ಲಿ ಈ ಬದಲಾಗುವ ಪ್ರಕ್ರಿಯೆಯನ್ನು ಕಾಣಬಹುದು. ಹೋಗುತ್ತೇನೆ>ಓತಿನಿ, ಹೋಗುತ್ತೀಯಾ>ಓತಿ, ಹೋಗುತ್ತಾನೆ>ಓತಾನ, ಈ ಬಗೆಯಲ್ಲಿ ವಿಶಿಷ್ಟವಾದ ಬದಲಾವಣೆಯ ಪ್ರಕ್ರಿಯೆ ಕಂಡುಬರುತ್ತದೆ.

ಭಾಷೆ ಜನರ ಮಧ್ಯದಲ್ಲಿ, ಜನರ ನಾಲಿಗೆಯ ಮೇಲೆ ನಿಜಸ್ವರೂಪವನ್ನು ಪಡೆದಿರುತ್ತದೆ. ಭಾಷೆಯ ಬಳಕೆ ಅನೇಕ ಕಾರಣಗಳಿಂದಾಗಿ ವ್ಯತ್ಯಾಸ ದಿನಕಳೆದಂತೆ ನಮ್ಮ ತಿಳವಳಿಕೆಗೆ ಬಾರದಿದ್ದರೂ ಸಹ ಕಾಲಾಂತರದಲ್ಲಿ ಅದು ನಮಗೆ ಗೋಚರಿಸುತ್ತದೆ. ಈ ಬಗೆಯ ಪರಿವರ್ತನೆಯ ಪ್ರಕ್ರಿಯೆಗಳಿಂದಾಗಿ ಬೇರೆ ಬೇರೆ ಭಾಷೆಗಳ ಸಂಪರ್ಕದಿಂದಲೂ ಭಾಷೆ ಬದಲಾಗುತ್ತ ಬೆಳೆಯುತ್ತ ಹೋಗುತ್ತದೆ. ಈ ಅಂಶವನ್ನು ಆಧರಿಸಿ ಭಾಷಾ ಬದಲಾಗುವಿಕೆಯ ಕಾರಣಗಳನ್ನು ತಿಳಿಯಬಹುದು. ಇಂದು ಜಾಗತೀಕರಣ ಮಟ್ಟದ ಆಟಗಳು ಬಂದು ದೇಶಿ ಗ್ರಾಮೀಣ ಆಟಗಳು ನಶಿಸಿಹೋಗಲು ಕಾರಣಗಳಾಗಿವೆ ಎಂದೆನಿಸುತ್ತದೆ. ಉದಾಹರಣೆಗೆ: ಕ್ರಿಕೆಟ್. ಕ್ರಿಕೆಟ್ ಆಟವನ್ನು ದೂರದರ್ಶನದಲ್ಲಿ ನೋಡುವ ಒಂದು ಜನ ವರ್ಗವೇ ಇದೆ. ಆಟವು ಜನರನ್ನು ತನ್ನತ್ತ ಸೆಳೆಯುತ್ತಿದೆ. ಹಳ್ಳಿಗಳಲ್ಲಿ ಕ್ರಿಕೆಟ್ ಆಟದ ಪ್ರಭಾವದಿಂದ ಅರ್ಥಗರ್ಭಿತವಾದ ಹಳ್ಳಿದೇಶಿ ಆಟಗಳು ಮರೆಯಾಗುತ್ತಿವೆ. ಮಸ್ಕಿಪ್ರದೇಶದಲ್ಲಿ ಸಾಕಷ್ಟು ದೇಶಿ

ಆಟಗಳು ಈ ಮುಂಚೆ ಪ್ರಚಲಿತವಿದ್ದವು. ಅದರಲ್ಲಿ ಮುಖ್ಯವಾಗಿ, ಗುಂಡು ಎತ್ತುವುದು, ಗುಂಡಾಟ, ಚಿಣ್ಣಿ, ಗಿಲಿದಂಡ, ಗೋಲಿ ಆಟ, ಬಗರಿ, ಕಬ್ಬಡ್ಡಿ, ಕೊಪ್ಪಿ ಆಟ, ಹಗ್ಗದಾಟ, ಕುಂಡ್ಲಿಪ ಮುಂತಾದವು, ಹಲವಾರು ಕಾರಣಗಳಿಂದ ಇಂದು ಇವು ಮಾಯವಾಗುತ್ತಿವೆ. ಅನ್ಯದೇಶ್ಯ ಆಟಗಳಿಂದ, ದೇಶಿ ಆಟಗಳು ಬದಲಾಗುತ್ತಿವೆ. ಇವುಗಳನ್ನು ನಾವು ಆಂತರಿಕ ಕಾರಣ ಬದಲಾವಣೆ ಎನ್ನಬಹುದು. ಈ ಮುಂಚೆ ಮಸ್ಕಿಕನ್ನಡದಲ್ಲಿ ಅಳತೆ ಮಾಪನ ಸೂಚಕಗಳು ಬಳಕೆಯಲ್ಲಿದ್ದವು. ಇಂದು ಅವುಗಳು ಕಣ್ಣಿನ ಭಾಷೆಯಾಗಿ ಉಳಿದಿದೆ, ಕಿವಿಯ ಭಾಷೆಯಾಗಿ ಅಲ್ಲ.

ಉದಾಹರಣೆಗಳ : ಮೂಲಕ ನೋಡುವುದಾದರೆ, ಸೊಲಿಗೆ (೨ ಸೇರಿನ ಮಾಪನ), ಗಿದ್ನ (ಅರ್ಧಸೇರು), ಚಟಾಕು (ಅರ್ಧಸೇರು), ಒಮ್ಮನ (೮ ಸೇರು) ಇಮ್ಮನ (೧೬ ಸೇರು) ಇವೆಲ್ಲವೂ ಸೇರು ಅಳತೆ ಮಾಪನಗಳು ಮತ್ತು ಹೊಕ್ಕಲ (೧ ಹೇರು, ೧೨೮ ಸೇರಿನ ಅಳತೆ) ಖಂಡುಗ (೪೦ ಚೀಲ, ೨೦ ಕೊಳಗ ಅಳತೆ) ಹರ್ವಿ (ಜೋಳ ಅಳೆಯುವ ೩೨ ಸೇರಿನ ಮಾಪನ) ಈ ಅಳತೆ ಮಾಪನಗಳು ಇಂದು ಮಸ್ಕಿಪ್ರದೇಶದಲ್ಲಿ ನಿರ್ದಿಷ್ಟವಾಗಿ ಬಳಕೆಯಲ್ಲಿವೆ. ದೇಶಿ ರಚನೆಗಳ ಕೆಲಸವನ್ನು ಇಂಗ್ಲಿಶ್ ಭಾಷೆಯ ಪದಗಳಾದ ಗ್ರಾಂ, ಕೆ.ಜಿ. ಕ್ವಿಟಲ್, ಟನ್ ಮುಂತಾದಗಳು ನಿರ್ವಹಿಸುತ್ತಿವೆ. ಜಾಗತೀಕರಣದ ಪ್ರಭಾವದಿಂದ ಮಸ್ಕಿಪರಿಸರದ ದೇಶಿ ಭಾಷೆಗೆ ಬಲವಾದ ಪೆಟ್ಟು ಬೀಳುತ್ತಿದೆ. ಇದೇ ರೀತಿಯಾಗಿ ಧಾನ್ಯವನ್ನು ಸಂಗ್ರಹಿಸುತ್ತಿದ್ದ 'ನೆಲ ಮಾಳಿಗೆ' ಇಂದು ಇಲ್ಲದಂತಾಗಿದೆ. ಧಾನ್ಯವನ್ನು ಸಂಗ್ರಹಿಸುತ್ತಿದ್ದ ಸ್ಥಳವನ್ನು ಈ ಮುಂಚೆ ಬಳಾತ್ರ, ಅಗೇವು, ವಾಡೇವು ಎನ್ನುವ ಪದಗಳು ನಿರ್ವಹಿಸುತ್ತಿದ್ದವು. ಆದರೆ ಇಂದು 'ಗೋಡನ್' ಎಂಬ ಆಂಗ್ಲಭಾಷೆ ಪದ ಬಂದಿದೆ. ಈ ಎಲ್ಲಾ ದೇಶಿಪದಗಳ ಕೆಲಸವನ್ನು ಮಾಡುತ್ತಿದೆ. ಧಾನ್ಯವನ್ನು ಸಂಗ್ರಹಿಸುವ 'ಬಿದಿರಿನ ಪುಟ್ಟಿ'ಗೆ ಮಸ್ಕಿಕನ್ನಡದಲ್ಲಿ 'ಕೆರಿಸಿ' ಎಂದು ಉಚ್ಚಾರಣೆಯಾಗುತ್ತಿತ್ತು. ಅದೇ ರೀತಿ 'ಈಚಲ ಪುಟ್ಟಿ'ಗೆ 'ಗುಮ್ಮಿ' ಎಂದು ಉಚ್ಚಾರವಿತ್ತು. ಆದರೆ ಇಂದು ಈ ಪದಗಳು ಬದಲಾವಣೆಯ ಪ್ರಕ್ರಿಯೆಗೆ ಒಳಗಾಗುತ್ತಿವೆ. ಕಾರಣ ಇಂದು ಪ್ಲಾಸ್ಟಿಕ್‌ನಿಂದ ಹಲವಾರು ವಿಧದ ಬುಟ್ಟಿಗಳನ್ನು ತಯಾರಿಸಲಾಗುತ್ತಿದೆ. ಹಾಗಾಗಿ ಸರಕಾರದ ಅರಣ್ಯ ಇಲಾಖೆಯು ಒತ್ತಡದಿಂದ ಬಿದುರು ಬಳಕೆಯನ್ನು ನಿಷೇದಿಸಲಾಗಿದೆ. ಈ ಎಲ್ಲಾ ಕಾರಣಗಳಿಂದ ಇಂದು ಇವುಗಳ ಬಳಕೆ ಕಡಿಮೆಯಾಗುತ್ತಿದೆ. ಹಾಗೆಯೇ ಕೃಷಿ ಪದಕೋಶಕ್ಕೆ ಸಂಬಂಧಪಟ್ಟಂತೆ ಮಸ್ಕಿಕನ್ನಡದಲ್ಲಿ ಸಾಕಷ್ಟು ಪದಗಳಿವೆ. ಅವುಗಳು ಕೂಡ ಇಂದು ಬದಲಾವಣೆಯ ಹಂತಕ್ಕೆ ತಲುಪುತ್ತಿವೆ.

ಉದಾಹರಣೆಗೆ : ಪಲಗು (ಕುಂಟಿಯ ಕುಡಾ) ದಿಂಡು (ಕೂರಿಗೆ ದಿಂಡು), ಏರ್‌ಕೋಲು (ಬಂಡಿಯ ಹಾರಿಕೋಲುಸ ಬಂಡಿ ಅಡಿಗೆ), ಕಡಾಣೆ (ಕಡೆಗೀಲು) ಕುದುರೆ ಮದ್ದು (ಮೋಕು) ಇತ್ಯಾದಿ ಪದಗಳು ಇಂದು ನಮ್ಮಿಂದ ದೂರವಾಗುತ್ತಿವೆ. ಕಾರಣ ಟ್ರಾಕ್ಟರ್ ಬಂದು ಈ ಮೇಲಿನ ಪದಗಳ ಕೆಲಸವನ್ನು ಸರಳವಾಗಿ ನಿರ್ವಹಿಸುತ್ತಿದೆ. ಬಂಡಿ, ಚಕ್ಕಡಿ, ಪದಗಳು ಸಹ ನಾಶವಾಗುತ್ತಿವೆ. ಜಾಗತೀಕರಣ ಪ್ರಭಾವದಿಂದ ಟ್ರಾಕ್ಟರ್ ಬಳಕೆ ಎಲ್ಲಾ ವಲಯದಲ್ಲೂ ಕಂಡುಬರುತ್ತಿದೆ. ಹಾಗಾಗಿ ರಂಟೆ, ಕುಂಟೆ, ನೊಗ, ತಾಳು ಇತ್ಯಾದಿ ಉಪಕರಣಗಳ ನಮ್ಮಿಂದ ಭಾಷಿಕವಾಗಿ ಇಲ್ಲವಾಗುತ್ತಿವೆ. ಹಾಗೂ ಇವು ಕಣ್ಣಿನ ಭಾಷೆಯಾಗಿ ಉಳಿಯುತ್ತಿವೆ. ಮಸ್ಕಿ ಪ್ರಭೇದದಲ್ಲಿ ಬಳಕೆಯಲ್ಲಿದ್ದ ದೇಶೀ

ಸೊಗಡಿನ ಅಪರೂಪದ ಶಬ್ದ ಸಂಪತ್ತು ಬಳಕೆಯಿಂದ ಇಂದು ತಪ್ಪಿಹೋಗುತ್ತಿದೆ. ಇದಕ್ಕೆ ಕಾರಣಗಳಿವೆ. ಕೇವಲ ರಚನೆಗಳಲ್ಲಿ ಬದಲಾವಣೆ ಕಾಣಿಸದೆ; ಮಸ್ಕಿಕನ್ನಡದಲ್ಲಿ ಅರ್ಥದಲ್ಲಿ ಭಿನ್ನವಾದ ಪದಗಳು ಬದಲಾವಣೆಯ ಹಂತದಲ್ಲಿರುವುದನ್ನು ಗಮನಿಸಬಹುದು. ಸೊಪ್ಪು ಪದರೂಪವು ಎರಡು ಬಗೆಯಲ್ಲಿ ಬಳಕೆಯಾಗುತ್ತಿದೆ. ಅಂದರೆ ತರಕಾರಿ ಸೊಪ್ಪು ಎನ್ನುವ ಶಬ್ದಕ್ಕೆ ಬದಲಾಗಿ 'ಪಲ್ಯ' ಎಂದು ಬಳಕೆಯಲ್ಲಿದೆ. ಬಳ್ಳಾರಿ ಪ್ರಭೇದದಲ್ಲಿ ಊಟಕ್ಕೆ ಮಾಡುವ 'ಪಲ್ಯ'ವನ್ನು 'ಪಲ್ಯ' ಎಂದು ಬಳಕೆಯಾಗುತ್ತದೆ. ಒಂದೇ ರೂಪ ಎರಡು ಅರ್ಥಗಳಲ್ಲಿ ಬಳಕೆಯಲ್ಲಿದೆ. ಉದಾಹರಣೆಗೆ : ಮಸ್ಕಿಕನ್ನಡದಲ್ಲಿ 'ಕಲಿನ್ ಮನಿ' ಮತ್ತು 'ಮ್ಯಾಗಿನ್ ಮನಿ' ಎಂದು ಮನೆತನಕ್ಕೆ ಹೆಸರು ಇಟ್ಟಿರುವುದನ್ನು ಗಮನಿಸಬಹುದು. ಆದರೆ ಇತರೆ ಪ್ರಭೇದದಲ್ಲಿ 'ಕಲಿನ್ ಮನಿ' ಎಂದರೆ 'ಕಲ್ಲಿನಮನೆ', 'ಮ್ಯಾಗಿನ ಮನಿ' ಎಂದರೆ 'ಮಹಡಿಮನಿ' ಎಂದರ್ಥದಲ್ಲಿ ಬಳಕೆಯಲ್ಲಿರುವುದನ್ನು ಗಮನಿಸಬಹುದು. ಇದು ಭಿನ್ನ ಅರ್ಥದಲ್ಲಿ ಬದಲಾವಣೆಯಾಗುವುದನ್ನು ಸೂಚಿಸುತ್ತದೆ. ಇಲ್ಲಿ ಎರಡು ಪ್ರಭೇದಗಳಲ್ಲಿ ಆಗಿರುವ ಬದಲಾವಣೆಯನ್ನು ಚಾರಿತ್ರಿಕವಾಗಿ ಗಮನಿಸಿದಾಗ ಒಂದೇ ಅರ್ಥದಲ್ಲಿ ಬಳಕೆಯಲ್ಲಿ ಇಲ್ಲ. ಬೇರೆ ಬೇರೆ ಅರ್ಥದಲ್ಲಿ ಬಳಕೆಯಲ್ಲಿರುವುದನ್ನು ಗಮನಿಸಬಹುದಾಗಿದೆ.

ಮಸ್ಕಿಕನ್ನಡದಲ್ಲಿ 'ಪೂಲ್' ಎಂದರೆ ಸೇತುವೆ. ಆದರೆ ಮಸ್ಕಿಪರಿಸರದ ಗಡಿಭಾಗದಲ್ಲಿ 'ಬ್ರಿಡ್ಜ್' ಪದ ಸೇತುವೆ ಕೆಲಸವನ್ನು ಮಾಡುತ್ತಿದೆ. ಅದೇ ರೀತಿ ರಸ್ತೆಯ ಮಧ್ಯೆಯಲ್ಲಿ ಹಾಕಿರುವ 'ವೇಗತಡೆಗಳು' ನಮ್ಮಿಂದ ದೂರವಾಗುತ್ತಿದೆ. 'ಜಂಪ್' ಪದ ಅದರ ಕೆಲಸವನ್ನು ನಿರ್ವಹಿಸುತ್ತಿದೆ. 'ಬಿಲ್ಡಿಂಗ್' ಪದ 'ಮಹಡಿಮನೆ' ಎಂಬುದಕ್ಕೆ ಸಮನಾಗಿ ಬಳಕೆಯಲ್ಲಿದೆ. 'ಮಹಡಿಮನೆ' ತುಂಬ ನಿರ್ದಿಷ್ಟ ವಾಗಿರುವುದನ್ನು ಕಾಣಬಹುದು.

ಗಡಿ ಪ್ರಭಾವದಿಂದಲೂ ಭಾಷೆ ಬದಲಾಗುವುದನ್ನು ಗಮನಿಸಬಹುದು. ಅನ್ಯಭಾಷಾ ಪ್ರಭಾವದಿಂದ ಮಸ್ಕಿಕನ್ನಡದಲ್ಲಿ ಹಲವು ಪದಗಳು ಬದಲಾಗಿವೆ. ಮರಾಠಿ ಪ್ರಭಾವದಿಂದ ಮಸ್ಕಿಕನ್ನಡದಲ್ಲಿ ಮೇಲ್ವರ್ಗದ ಜನರಲ್ಲಿ ಕನ್ನಡದ 'ಅತ್ತಿಗೆ' ಪದಕ್ಕೆ ಸಂವಾದಿಯಾಗಿ 'ವೈನಿ' ಎಂಬ ಸಂಬೋಧನಾ ರೂಪವನ್ನು ಬಳಸುವುದನ್ನು ಕಾಣುತ್ತೇವೆ. ಇಲ್ಲಿ 'ಅತ್ತಿಗೆ' ಪದ ತುಂಬ ನಿರ್ದಿಷ್ಟವಲಯದಲ್ಲಿ ಬಳಕೆಯಲ್ಲಿದ್ದರೆ 'ವೈನಿ' ಪದ ವ್ಯಾಪಕವಾಗಿ ಬಳಕೆಯಲ್ಲಿದೆ. ಸಂಖ್ಯಾವಾಚಕ ಪದವಾದ ಒಂದುಅರ್ಧ ಪದಕ್ಕೆ ಸಮನಾಗಿ 'ದೀಡ್' ಎಂಬ ಮರಾಠಿ ಶಬ್ದ ಬಳಕೆಯಲ್ಲಿದೆ. ಈ ಪದರಚನೆ ಮಸ್ಕಿಕನ್ನಡದ ಎಲ್ಲಾ ಸಾಮಾಜಿಕ ವರ್ಗಗಳಲ್ಲಿ ಕಂಡುಬರುತ್ತದೆ. ಬೆಳಗಾವಿ, ವಿಜಾಪುರ, ರಾಯಚೂರು ಭಾಗವು ಪೇಶ್ವೆಯರ ಆಡಳಿತದಲ್ಲಿ ಕೆಲಕಾಲ ಇದ್ದುದರಿಂದ ಇಲ್ಲಿಯ ಕನ್ನಡದ ಮೇಲೆ ಮರಾಠಿ ಪ್ರಭಾವವಾಗಿರುವುದನ್ನು ನೋಡಬಹುದು. ಅದೇ ರೀತಿ ನಿಜಾಮರ ಆಳ್ವಿಕೆ ಸುಮಾರು ೬೦೦ ವರ್ಷಗಳ ದೀರ್ಘಕಾಲ ರಾಯಚೂರು, ಬೀದರ್, ಗುಲ್ಬರ್ಗಾ ಪ್ರದೇಶವನ್ನು ಆಳಿದ್ದಾರೆ. ಹಾಗಾಗಿ ಮಸ್ಕಿಪರಿಸರದಲ್ಲಿ ಉರ್ದುವಿನ ಪ್ರಭಾವ ಬೀರಿರುವುದನ್ನು ಕೆಲವು ಪದಗಳಲ್ಲಿ ಗಮನಿಸಬಹುದು. ಜಬರ್ದಸ್, ಬುಲಾವ್ ಬದ್ನಾಮಿ ಇತ್ಯಾದಿ ಪದಗಳ ಕನ್ನಡದ ಪದಗಳನ್ನು ನಿರ್ದಿಷ್ಟಗೊಳಿಸಿವೆ.

ಮಸ್ಕಿಕನ್ನಡದಲ್ಲಿ 'ಸಬೂರ್‌ಕರ್' ಎಂದರೆ 'ಸೋಪು' ಎಂದರ್ಥ. ಇಂದು ವಿದ್ಯಾವಂತರಲ್ಲಿ ಈ ಪದರೂಪ 'ಸಾಬೂನು', 'ಸೋಪು' ಎಂದು ಉಚ್ಚಾರವಾಗುತ್ತದೆ. ಮುಂದಿನ ದಿನಗಳಲ್ಲಿ ಎಲ್ಲಾ ಅನಕ್ಷರಸ್ಥರಲ್ಲೂ 'ಸೋಪು' ಪದ ಬಳಕೆ ಅಕ್ಷರಸ್ಥರ ಪ್ರಭಾವದಿಂದ ಬಳಕೆಯಾದರೂ ಆಗಬಹುದು ಎಂದೆನಿಸುತ್ತದೆ ಅಲ್ಲವೆ?

ಅಧ್ಯಾಯ ೧೧

ಸಮಾರೋಪ

ಅಧ್ಯಾಯ ೧೧

ಸಮಾರೋಪ

ಕನ್ನಡ ಪ್ರಭೇದಗಳನ್ನು ವರ್ಣಿಸುವ ಕೆಲಸ ಸಾಕಷ್ಟು ಆಗಿದೆ. ಇನ್ನು ಆಗಬೇಕಾಗಿದೆ. ಮೂಲದ್ರಾವಿಡ ಭಾಷೆಯಲ್ಲಿ ಬೇರೆ ಬೇರೆ ಕವಲುಗಳಾಗಿ ಒಡೆದು ಸ್ವತಂತ್ರ ಭಾಷೆಗಳಾಗಿರುವುದು ಚಾರಿತ್ರಿಕ ಸತ್ಯ. ಅಂತಹ ಕವಲುಗಳಾಗಿ ಒಡೆದು ಹೋದ ಭಾಷೆಗಳಲ್ಲಿ ಕನ್ನಡವೂ ಒಂದು. ಹಾಗೆಯೇ ಮೂಲ ಕನ್ನಡ ಭಾಷೆಯು ಬೇರೆ ಬೇರೆ ಕವಲುಗಳಾಗಿ ಒಡೆದು ಆ ಕವಲುಗಳ ಮೂಲಕ ಸಮಕಾಲೀನ ಸಂದರ್ಭದಲ್ಲಿ ಬೇರೆ ಬೇರೆ ಪ್ರಭೇದಗಳಾಗಿ ಬಳಕೆಯಲ್ಲಿರುವುದು ನಿಜವೆ ಸರಿ.

ಕನ್ನಡ ಪ್ರಭೇದಗಳನ್ನು ಚಾರಿತ್ರಿಕವಾಗಿ ಗಮನಿಸಿದಾಗ ಅವುಗಳಿಗೆ ಒಂದು ಚರಿತ್ರೆಯಿದೆ. ನೃಪತುಂಗನಿಂದ ಶ್ರೀಕಂಠಯ್ಯ ಮತ್ತು ವೆಂಕಣ್ಣಯ್ಯನವರಿಗೂ ಕನ್ನಡ ಪ್ರಭೇದಗಳನ್ನು ಉತ್ತರ ಮತ್ತು ದಕ್ಷಿಣ ಮಾರ್ಗವಾಗಿ ಬಳಕೆಯಲ್ಲಿವೆ ಎಂದು ಹೇಳಿರುವುದು ಸತ್ಯ.

ಕನ್ನಡ ಪ್ರಭೇದಗಳನ್ನು ಸ್ವಲ್ಪ ವಿವರವಾಗಿ ಅವುಗಳ ರಚನೆಗಳನ್ನು ಕುರಿತು ಚರ್ಚೆಮಾಡಿದರೆ ಇಲ್ಲಿಯವರೆಗೆ ಮಾಡಿರುವ ವಿಭಾಗ ಕ್ರಮಕ್ಕಿಂತ ಬೇರೆಯಾಗಿ ನೋಡಬೇಕಾಗಿದೆ. ಡಿ.ಎನ್.ಶಂಕರಭಟ್ ಅವರು 'ಕನ್ನಡ ಭಾಷೆಯ ಕಲ್ಪಿತ ಚರಿತ್ರೆ' ಕೃತಿಯ (ಪು. ೫೫) ''ಭೌಗೋಳಿಕವಾಗಿ ಕರಾವಳಿಯ ಕನ್ನಡ ಮತ್ತು ಇತರ ಪ್ರದೇಶದ ಕನ್ನಡವೆಂಬುದಾಗಿ ಏರ್ಪಟ್ಟಿರುವ ಪೂರ್ವ-ಪಶ್ಚಿಮ ವಿಭಾಗವು ಉತ್ತರ-ದಕ್ಷಿಣ ವಿಭಾಗಕ್ಕಿಂತ ಜಾಸ್ತಿ ಪ್ರಾಮುಖ್ಯವಾದುದು ಮತ್ತು ಜಾಸ್ತಿ ಪ್ರಾಚೀನವಾದುದು ಎಂಬ ವಿಷಯ ಸ್ಪಷ್ಟವಾಗುತ್ತದೆ. ಈ ಪೂರ್ವ-ಪಶ್ಚಿಮ ವಿಭಜನೆಗೆ ಆಧಾರವಾಗಬಲ್ಲ ಭಾಷೆಯ ಬದಲಾವಣೆಗಳು ಪೂರ್ವದ ಹಳಗನ್ನಡದಷ್ಟು ಹಿಂದಿನವುಗಳು ಕೆಲವು ಬಹುಶಃ ಇದಕ್ಕಿಂತಲೂ ಹಿಂದಿನವುಗಳು. ಇದಕ್ಕೆ ಬದಲು ಉತ್ತರ-ದಕ್ಷಿಣ ವಿಭಜನೆಗೆ ಆಧಾರವಾಗಬಲ್ಲ ಬದಲಾವಣೆಗಳು ಬಹಳ ಇತ್ತೀಚೆಗಿನವು!'' ಎಂದು ಅಭಿಪ್ರಾಯ ಪಡುತ್ತಾರೆ.

ಈ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಇದು ನಿಜವೆ ಎಂಬುದನ್ನು ಸಾಧಿಸುವುದಕ್ಕೆ ಉತ್ತರ-ದಕ್ಷಿಣಾಭಿಮುಖವಾಗಿರುವ ಮಸ್ಕಿಕನ್ನಡವನ್ನು ಆಯ್ಕೆಮಾಡಿಕೊಂಡಿದೆ. ಅಂದರೆ 'ಮಸ್ಕಿಕನ್ನಡ' ಕನ್ನಡ ಭಾಷೆಯ ಪ್ರಾಚೀನತೆಯನ್ನು ಅಳೆಯುವುದಕ್ಕೆ ಸಿಕ್ಕಿರುವ ಶಾಸನದ ತೌವರೂರು. ಅಂತಹ ಸ್ಥಳದಲ್ಲಿ ಬಳಕೆಯಲ್ಲಿರುವ

ಕನ್ನಡವ ರಚನೆಗಳು ಎಲ್ಲೆಲ್ಲಿ ಬದಲಾವಣೆಗೆ ಒಳಗಾಗಿದೆ. ಎಲ್ಲೆಲ್ಲಿ ಮೂಲ ಕನ್ನಡದ ಲಕ್ಷಣಗಳನ್ನು ಉಳಿಸಿಕೊಂಡಿದೆ ಎಂಬುದನ್ನು ನಿದರ್ಶನ ಸಹಿತ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಕನ್ನಡ ಭಾಷೆಯು ಚರಿತ್ರೆಯನ್ನು ಕಟ್ಟುವುದಕ್ಕೆ ಭೌಗೋಳಿಕವಾಗಿರುವ ಕನ್ನಡ ಭಾಷಾ ಪ್ರಭೇದಗಳು ತುಂಬಾ ಸಹಾಯಕ್ಕೆ ಬರುತ್ತವೆ ಎಂಬುದನ್ನು ಎಲ್ಲೆಲ್ಲಿ ಸಾಧ್ಯವೊ ಅಲ್ಲೆಲ್ಲ ಸಾಧಿಸುವ ಪ್ರಯತ್ನ ಮಾಡಲಾಗಿದೆ. ಇಂದಿನ ಸಂದರ್ಭದಲ್ಲಿ ಬಳಕೆಯಲ್ಲಿರುವ ಕನ್ನಡ ಪ್ರಭೇದಗಳನ್ನು ಬಳಸಿಕೊಂಡು ಕನ್ನಡ ಭಾಷೆಯ ಚರಿತ್ರೆಯನ್ನು ಕಟ್ಟುವ ಕೆಲಸ ಆಗಬೇಕಾಗಿದೆ. ಆ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನ ಒಂದು ಪುಟ್ಟ ಪ್ರಯತ್ನ ಎಂದರೆ ತಪ್ಪಾಗಲಾರದು.

ಉತ್ತರ-ದಕ್ಷಿಣ ವಿಭಜನೆಯಲ್ಲಿ ಬರುವ ಮಸ್ಕಿಕನ್ನಡದ ರಚನೆ ಕನ್ನಡ ಭಾಷೆಯ ಚರಿತ್ರೆ ಕಟ್ಟುವುದಕ್ಕೆ ತುಂಬಾ ಕಡಿಮೆ ಪ್ರಮಾಣದ ಸಹಾಯ ಮಾಡುತ್ತದೆ. ಕನ್ನಡ ಭಾಷೆಯ ಕಲ್ಪಿತ ಚರಿತ್ರೆಯೊಂದನ್ನು ಕಟ್ಟಲು ಭೌಗೋಳಿಕವಾಗಿರುವ ಕನ್ನಡ ಪ್ರಭೇದಗಳು. ಚಾರಿತ್ರಿಕವಾಗಿರುವ ಮತ್ತು ಸಾಮಾಜಿಕ ಪ್ರಭೇದಗಳನ್ನಿಲ್ಲಿ ಕೂಲಂಕುಷವಾಗಿ ಅಧ್ಯಯನ ಮಾಡಬೇಕಾಗಿದೆ. ಕನ್ನಡದಲ್ಲಿ ಇಂತಹ ಅಧ್ಯಯನ ಇನ್ನೂ ಬಾಲ್ಯಾವಸ್ಥೆಯಲ್ಲಿದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ಅಧ್ಯಯನದಲ್ಲಿ ಮಸ್ಕಿಪರಿಸರದಲ್ಲಿ ಬರುವ ಸಾಮಾಜಿಕ ವರ್ಗಗಳಾದ ಲಿಂಗಾಯತ, ನಾಯಕ ಮತ್ತು ಹರಿಜನರು ಮಾತನಾಡುವ ಕನ್ನಡಗಳನ್ನು ಪರಿಗಣಿಸಿದೆ. ಆದರೆ ಇದರಿಂದ ಅಧ್ಯಯನಕ್ಕೊಂದು ಮಹತ್ವ ಬಂದಿದೆ. ಈ ಅಧ್ಯಯನದ ಭಾಷಿಕ ಸಾಮಾಗ್ರಿಯಿಂದ ಕನ್ನಡ ಭಾಷೆಯ ಚರಿತ್ರೆಯನ್ನು ನೆನೆಪಿಸುವ ಅಂಶಗಳು ತುಂಬ ಕಡಿಮೆ. ಉಪಯುಕ್ತವಾಗುವಂತೆ ವಿವರಣಾತ್ಮಕ ಅಧ್ಯಯನ ಮಾದರಿಗಿಂತ ಬೇರೆಯಾಗಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಡಿ.ಎನ್.ಶಂಕರಭಟ್ ಅವರ ಕನ್ನಡ ಭಾಷೆಯ ಕಲ್ಪಿತ ಚರಿತ್ರೆ ಅಧ್ಯಯನ ಮಾದರಿಯಲ್ಲಿ ಪ್ರಸ್ತುತ ಅಧ್ಯಯನವನ್ನು ರೂಪಿಸುವ ಪ್ರಯತ್ನ ಮಾಡಿದೆ.

ಫಲಿತಗಳು

ಮಸ್ಕಿ ಕನ್ನಡವನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ನೋಡಿದಾಗ ನಮಗೆ 'ಮಸ್ಕಿಕನ್ನಡ' ಎಂಬುವುದು ಒಂದು ಇದೆ ಎಂದು ಈ ಅಧ್ಯಯನದಿಂದ ತಿಳಿದುಬರುತ್ತದೆ. ಮಸ್ಕಿಪರಿಸರದ ಶಾಸನಗಳ ಆಧಾರಗಳ ಮೇಲೆ ಶಾಸನಗಳ ಕನ್ನಡಕ್ಕೂ ಬರಹ ಕನ್ನಡಕ್ಕೂ ನಡುವೆ ವ್ಯತ್ಯಾಸ ಗುರುತಿಸಲಾಗಿದೆ. ಹಾಗೂ ಮಸ್ಕಿಪರಿಸರದ ಶಾಸನಗಳ ಕನ್ನಡಕ್ಕೂ ಇಂದಿನ ಮಸ್ಕಿ ಪರಿಸರದಲ್ಲಿ ಬಳಕೆಯಲ್ಲಿರುವ ಕನ್ನಡಕ್ಕೂ ಸಂಬಂಧ ಕಲ್ಪಿಸಿರುವುದರ ಮೂಲಕ 'ಮಸ್ಕಿಕನ್ನಡ' ಒಂದು ಇದೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಮಸ್ಕಿ ಕನ್ನಡದಲ್ಲಿ ವಿಭಕ್ತಿ ಪ್ರತ್ಯಯಗಳು ಬೆಳೆದ ರೂಪಗಳನ್ನು ಶಾಸನಗಳ ಆಧಾರದ ಮೂಲಕ ಕಂಡುಕೊಳ್ಳಲಾಗಿದೆ. ಮಸ್ಕಿ ಪರಿಸರದ ಶಾಸನದ ಭಾಷಾ ಬಳಕೆಯು ಇಂದಿಗೂ ಕೆಲವು ಭಾಷಿಕ ಅಂಶಗಳು ಬಳಕೆಯಾಗುತ್ತಿರುವುದರ ಬಗೆಗೆ ಗಮನಿಸಲಾಗಿದೆ. ಉದಾಹರಣೆ: ಬರಹ ರೂಪದಲ್ಲಿ 'ಇದಿರಾಗಿ' ಎಂದು ಬಳಕೆಯಲ್ಲಿದ್ದರೆ ಮಸ್ಕಿ ಪರಿಸರದ ಶಾಸನದಲ್ಲಿ 'ಇದಿರಾಗಿ' ಎಂದು ಬಳಕೆಗೊಂಡಿದೆ ಆದರೆ ಮಸ್ಕಿಪರಿಸರದ ಕನ್ನಡದಲ್ಲಿ 'ಎದಿರಾಗಿ' ಎಂಬುದಾಗಿ ಬಳಕೆಯಾಗುತ್ತದೆ. ಪದಾದಿಯ 'ಇ' ಕಾರ 'ಎ' ಕಾರವಾಗಿರುವುದನ್ನು ಗಮನಿಸಲಾಗಿದೆ. ಮಸ್ಕಿ ಪರಿಸರದಲ್ಲಿ ವಿಭಕ್ತಿ ಪ್ರತ್ಯಯದ ಸಹಾಯದಿಂದ ಮಸ್ಕಿಕನ್ನಡ ಎಂಬುವುದು ಇದೆ ಎಂಬುದನ್ನು ಈ ಕೆಳಗಿನ ಉದಾಹರಣೆಯಿಂದ

ತಿಳಿಯಬಹುದಾಗಿದೆ. ಶಾಸನದಲ್ಲಿ 'ಊರವೊಲದೊಳ್' ಎಂದು ಬಳಕೆಯಲ್ಲಿದೆ ಆದರೆ ಬರಹ ಕನ್ನಡದಲ್ಲಿ 'ಊರಹೊಲದಲ್ಲಿ' ಎಂದಾಗುವುದು. ಮಸ್ಕಿ ಪರಿಸರದ ಕನ್ನಡದಲ್ಲಿ 'ಊರವಲ್ಲಾಗ' ಎಂದಾಗಿ ಬಳಕೆಯಾಗುವುದನ್ನು ಅಧ್ಯಯನದ ಮೂಲಕ ತಿಳಿದುಬಂದಿದೆ. ಊರವೊಲದೊಳ್>ಊರಹೊಲದಲ್ಲಿ> ಊರವಲ್ಲಾಗ ಈ ರೀತಿ ವಿಭಕ್ತಿ ಪ್ರತ್ಯಯ ಬೆಳೆದುಬಂದಿದೆ. ಅದೇ ರೀತಿ ಬರಹ ಕನ್ನಡದಲ್ಲಿ 'ಚೌಟು' ಎಂದಿದ್ದು, ಮಸ್ಕಿ ಪರಿಸರದ ಶಾಸನದಲ್ಲಿ 'ಸೌಟು' ಎಂದಿದೆ. ಆದರೆ ಮಸ್ಕಿ ಪರಿಸರದ ಕನ್ನಡದಲ್ಲಿ 'ಸೌಟು' ಬಳಕೆಯಿದೆ. ಇಲ್ಲಿ ಶಾಸನದ ಆಡುಭಾಷೆಯನ್ನೇ ಮಸ್ಕಿಕನ್ನಡ ಉಳಿಸಿಕೊಂಡು ಬಂದಿರುವುದನ್ನು ಗಮನಿಸಲಾಗಿದೆ. ಮಾನವೇತರ ಬಹುವಚನ ಪ್ರತ್ಯಯವಾದ 'ಗಳು' ಎಂಬುದರಿಂದಲೂ ಮಸ್ಕಿಕನ್ನಡ ಇದೆ ಎಂದು ಸಾಧಿಸಿ ತೋರಿಸಲಾಗಿದೆ. ಉದಾ: ಮಸ್ಕಿ ಪರಿಸರದ ಶಾಸನದಲ್ಲಿ 'ಕುಡುಗೋಲ್ಗಳ' ಎಂಬ ರೂಪದಲ್ಲಿ-'ಗಳ' ಬಹುವಚನ ಪ್ರತ್ಯಯ ಬಳಕೆಯಾಗಿದೆ. ಬರಹ ಕನ್ನಡದಲ್ಲಿ ಅದು 'ಕುಡುಗೋಲುಗಳು' ಎಂದಾಗುತ್ತದೆ. ಆದರೆ ಮಸ್ಕಿ ಪರಿಸರದ ಕನ್ನಡದಲ್ಲಿ 'ಕುಡುಗೋಲುಗುಳು' ಎಂದು 'ಗುಳು' ಬಹುವಚನ ಪ್ರತ್ಯಯ ಬಳಕೆಯಾಗಿರುವುದನ್ನು ಕಂಡುಕೊಳ್ಳಲಾಗಿದೆ. ಈ ಎಲ್ಲಾ ಉದಾಹರಣೆಗಳಿಂದ ಮಸ್ಕಿಕನ್ನಡ ಒಂದು ಪ್ರಾದೇಶಿಕ ಪ್ರಭೇದ ಎಂದು ಗುರುತಿಸಲಾಗಿದೆ.

ಮಸ್ಕಿಕನ್ನಡದ ಧ್ವನಿರಚನೆ ತನ್ನದೇ ಆದ ಧ್ವನಿಮಾ ರಚನೆಯ ಚಹರೆಯನ್ನು ಉಳಿಸಿಕೊಂಡಿರುವುದನ್ನು ನಿಯಮಗಳ ಮೂಲಕ ಕಂಡುಕೊಂಡಿದೆ. ಮಸ್ಕಿಕನ್ನಡದಲ್ಲಿ ಮೂಲಕನ್ನಡಕ್ಕೆ ಊಹಿಸಲಾದ ಹತ್ತು ಸ್ವರಗಳೂ ಬಳಕೆಯಲ್ಲಿವೆ. ಅದರೊಂದಿಗೆ 'ಅ್ಯ' ಮತ್ತು 'ಆ್ಯ' ಸ್ವರಗಳು ಮತ್ತು 'ಅ್ವ' ಮತ್ತು 'ಆ್ವ' ಸ್ವರಗಳು ವಿಶೇಷವಾಗಿ ಬಳಕೆಯಲ್ಲಿವೆ. ಈ ಎರಡೂ ಸ್ವರಗಳು ಹ್ರಸ್ವಸ್ವರ ಮತ್ತು ದೀರ್ಘಸ್ವರಗಳ ಜೋಡಿಯಂತೆ ಇರುವುದು ಕಂಡುಬರುತ್ತದೆ. ಮಸ್ಕಿ ಕನ್ನಡದಲ್ಲಿ ೧೬ ಸ್ವರಗಳು ಹಾಗೂ ೨೩ ವ್ಯಂಜನಗಳು ಬಳಕೆಯಲ್ಲಿರುವುದನ್ನು ಕಾಣಬಹುದು. ಒಟ್ಟಾರೆಯಾಗಿ ೩೯ ಧ್ವನಿಮಾಗಳು ಮಸ್ಕಿ ಪರಿಸರದಲ್ಲಿ ಬಳಕೆಯಾಗುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಧ್ವನಿ ನಿಯಮಗಳನ್ನು ರೂಪಿಸುವಾಗ ವಿಶಿಷ್ಟವಾದ ಅಂದರೆ ಮಸ್ಕಿಪರಿಸರದಲ್ಲಿ ಬಳಕೆಯಲ್ಲಿರುವ ಕನ್ನಡ ಉಚ್ಚಾರಣೆಯ ನಿಯಮಗಳಿಗೆ ಒತ್ತು ನೀಡಿ ಮೂಲಕನ್ನಡದ ಧ್ವನಿ ಲಕ್ಷಣಗಳನ್ನು ಉಳಿಸಿಕೊಂಡಿರುವುದರ ಬಗೆಗೆ ನಿದರ್ಶನ ಸಹಿತ ವಿಶ್ಲೇಷಣೆ ಮಾಡುವ ಪ್ರಯತ್ನ ಮಾಡಲಾಗಿದೆ.

ಉದಾಹರಣೆ ಪದಾದಿ 'ಇ' ಕಾರ 'ಎ' ಕಾರವಾಗುವುದು.

ಇದಿರು > ಎದಿರು

ಪಿಟಾರಿ > ಪೆಟಾರಿ

ಬಿಳಿಚುಕಲ್ಲು > ಬೆಳಚುಕಲ್ಲು

ಪದಾದಿಯ 'ಉ' ಕಾರ 'ಒ' ಕಾರವಾಗುವುದು.

ಉಡು > ತೊಡು

ಕುಯ್ಯು > ಕೊಯ್ಯು

ತುರುಸು > ತೊರುಸು

ಪದಾಂತ್ಯದಲ್ಲಿ ಬರುವ 'ಎ' ಕಾರ 'ಅ' ಕಾರವಾಗುವುದು.

ಜಿಂಕೆ > ಜಿಂಕ

ಚಿರತೆ > ಚಿರತ

ಮುಂಜಾನೆ > ಮುಂಜಾಲ

ತಾಲವ್ಯ ಸ್ಪರ್ಶಗಳ ಪದಾದಿಯಲ್ಲಿರುವ 'ಅ' ಕಾರ 'ಎ' ಕಾರವಾಗುವುದು.

ಚಪ್ಪರ > ಚೆಪ್ಪರ

ಚಂಡು > ಚೆಂಡು

ಚಡ್ಡಿ > ಚೆಡ್ಡಿ

ಜಡೆ > ಜೆಡಿ

'ಉ' 'ನ' ಉಪಧ್ವನಿ 'ಉ್' ವಿಶೇಷವಾಗಿ ಕಂಡುಬರುತ್ತದೆ.

ಪುಸ್ತಕ > ಪುಸ್ತ್ಗ

ನಾಟಕ > ನಾಟ್ಗ

'ಅ್ಯ' ಮತ್ತು 'ಆ್ಯ' ಸ್ವರ

ಗೆಳೆಯ > ಗ್ಯಣ್ಯಾ

ಬೇರೆ > ಬ್ಯಾರ್ಯ

'ಅ್ವ' ಮತ್ತು 'ಆ್ವ' ಸ್ವರ

ತೊಗಲು > ತ್ವಗ್ಲು

ಜೋಕೆ > ಜ್ವಾಕಿ

'ಚ' ಕಾರ 'ಜ' ಕಾರಗಳ ವಿಭಜನೆ ವಿಶೇಷವಾಗಿ ಬಳಕೆಯಲ್ಲಿದೆ. ಮಸ್ಕಿಕನ್ನಡದ ಪ್ರಭೇದದಲ್ಲಿ 'ಚ' ಕಾರ ಮತ್ತು 'ಜ' ಕಾರಗಳಿಗೆ, ಅವುಗಳ ಪರದಲ್ಲಿ ಬರುವ ಸ್ವರಗಳನ್ನು ಆಧರಿಸಿ ಎರಡು ಬೇರೆ ಬೇರೆ ಉಚ್ಚಾರಗಳಿರುವುದನ್ನು ನೋಡಲಾಗಿದೆ. ಪಶ್ಚೋಚ್ಚ ಮತ್ತು ಪಶ್ಚ ಮಧ್ಯ ಸ್ವರಗಳು (ಉ, ಊ, ಒ ಮತ್ತು ಓಗಳು) ಪರದಲ್ಲಿರುವಾಗ ಇವುಗಳಿಗೆ ದಂತ್ಯೋಚ್ಚಾರಣೆ ಇದೆ ಮತ್ತು ಉಳಿದ ಸ್ವರಗಳ ಪರದಲ್ಲಿರುವಾಗ ತಾಲವ್ಯೋಚ್ಚಾರಣೆ ಇರುವುದನ್ನು ಗಮನಿಸಲಾಗಿದೆ. ಉದಾಹರಣೆ :

ದಂತ್ಯೋಚ್ಚಾರಣೆ

ಚೂರು > ತ್ಸೂರು

ಜೋರು > ದ್ಝೋರು

ತಾಲವ್ಯೋಚ್ಚಾರಣೆ

ಚೆಲ್ಲು > ಚಲ್ಲು

ಜಡಿ > ಜೆಡಿ

ಪದರಚನೆಯಲ್ಲಿ ಬರಹ ಕನ್ನಡಕ್ಕಿಂತ ಮಸ್ಕಿಕನ್ನಡ ವಿಭಿನ್ನವಾಗಿರುವುದನ್ನು ಗಮನಿಸಲಾಗಿದೆ. ದಿಗ್ವಾಚಕಗಳಲ್ಲಿ ಗಮನಿಸುವುದಾದರೆ ಪಶ್ಚಿಮ>ಮ್ಯಾಕ, ಪೂರ್ವ>ತಳಕ, ಉತ್ತರ>ಅನುಮನದಿಕ್ಕು ವಿಶಿಷ್ಟ ರೀತಿಯಲ್ಲಿ ಬಳಕೆಯಲ್ಲಿವೆ. ಅದೇ ರೀತಿ ಸಂಖ್ಯಾವಾಚಕಗಳು ಭಿನ್ನರೀತಿಯಲ್ಲಿ ಪ್ರಯೋಗವಾಗುವುದು ಕಂಡುಬಂದಿದೆ. ಬರಹ ಕನ್ನಡದಲ್ಲಿ 'ಅನೆ' ಪ್ರತ್ಯಯ ಹಚ್ಚಿ ಬಳಕೆಗೊಳ್ಳುವ ಸಂಖ್ಯಾವಾಚಕಗಳು ಕಂಡುಬಂದರೆ ಮಸ್ಕಿಕನ್ನಡದಲ್ಲಿ 'ಎದು' ಪ್ರತ್ಯಯ ಬಳಕೆ ಕಂಡುಬಂದಿದೆ. ಒಂದನೆ>ವಂದ್ನೆದು, ಎರಡನೆ>ಯಾಡ್ನೆದು ಮೂರನೆ> ಮೂರ್ನೆದು ಈ ರೀತಿ ನೋಡಬಹುದಾಗಿದೆ. ಅದೇ ರೀತಿ ಹಣ, ಧಾನ್ಯ ಇತ್ಯಾದಿಗಳನ್ನು ಎಣಿಸುವಾಗ ಅಥವಾ ಅಳತೆ ಮಾಡುವಾಗ ಮಸ್ಕಿಕನ್ನಡದಲ್ಲಿ 'ಒಂದು' ಸಂಖ್ಯೆಯನ್ನು 'ಲಾಭ' ಎಂದು ಉಚ್ಚರಿಸುವ ಮೂಲಕ ಮುಂದಿನ ಸಂಖ್ಯೆಯನ್ನು ಎಣಿಸುವುದು ರೂಢಿಯಲ್ಲಿದೆ. 'ಏಳು' ಎನ್ನುವ ಸಂಖ್ಯೆಯನ್ನು 'ಯೆಚ್ಚಲಿ', 'ಉಲಿಗ್ಯ' ಎಂದು ಎಣಿಸಿ ಮುಂದಿನ ಸಂಖ್ಯೆಯನ್ನು ಎಣಿಸುವುದು ರೂಢಿ ಇರುವುದು ಗಮನಾರ್ಹವಾದುದು. ಕಾಲು>ಪಾವು, ಒಂದು ಕಾಲು ಸೇರು>ಸೇರುಪಾವು, ಒಂದು ಅರ್ಧಸೇರು>ದೀಡ್‌ಸೇರು ಎಂಬುದಾಗಿ ಮರಾಠಿ ಮತ್ತು ಕನ್ನಡ ಭಾಷೆ ಮಿಶ್ರಣದೊಂದಿಗೆ ಬಳಕೆಯಾಗುವುದನ್ನು ಕಂಡುಕೊಳ್ಳಲಾಗಿದೆ. ಲಿಂಗವ್ಯವಸ್ಥೆಯಲ್ಲಿ ಬರಹ ಕನ್ನಡಕ್ಕಿಂತ ಭಿನ್ನವಾಗಿರುವುದು ಕಂಡುಬರುತ್ತದೆ. ಬರಹ ಕನ್ನಡದ ಪುಲ್ಲಿಂಗ 'ಹೋಗುತ್ತಾನೆ' ಎಂಬ ಪದರೂಪ ಮಸ್ಕಿ ಕನ್ನಡದಲ್ಲಿ 'ಓತಾನ' ಎಂದು ಇಲ್ಲಿ 'ಆನೆ' ಪ್ರತ್ಯಯದ ಬದಲಿಗೆ 'ಆನ' ಪ್ರತ್ಯಯ ಬಳಕೆಯಾಗುತ್ತಿದೆ. ಸ್ತ್ರೀಲಿಂಗ ವಾಚಕದಲ್ಲಿ ಬರಹ ಕನ್ನಡ 'ಹೋಗುತ್ತಾಳೆ' ಎಂಬುವುದು ಮಸ್ಕಿ ಕನ್ನಡದಲ್ಲಿ 'ಓತಾಳ' ಎಂದು ಬಳಕೆಯಲ್ಲಿದೆ. ಅಂದರೆ 'ಆಳೆ' ಪ್ರತ್ಯಯದ ಬದಲಿಗೆ 'ಆಳ' ಪ್ರತ್ಯಯ ಬಳಕೆ ಕಂಡುಬರುತ್ತದೆ. ಅದೇ ರೀತಿ ಸ್ತ್ರೀಲಿಂಗ ಹಾಗೂ ಪುಲ್ಲಿಂಗದಲ್ಲಿ 'ಹೋಗುತ್ತೀಯಾ' ಎಂಬ ಬರಹ ಕನ್ನಡದ ಪದರೂಪ ಮಸ್ಕಿಕನ್ನಡದಲ್ಲಿ 'ಓತಿ' ಎಂದು ವಿಶಿಷ್ಟ ರೀತಿಯಲ್ಲಿ ಬಳಕೆಯಲ್ಲಿದೆ.

ಮಸ್ಕಿಕನ್ನಡದಲ್ಲಿ ವಿಭಕ್ತಿ ಪ್ರತ್ಯಯದ ಬಳಕೆ ಬರಹ ಕನ್ನಡಕ್ಕಿಂತ ಬೇರೆಯಾಗಿ ನಿಲ್ಲುವುದನ್ನು ಕಾಣಬಹುದು. ವಿಭಕ್ತಿ ಪ್ರತ್ಯಯದ ವಿಶ್ಲೇಷಣೆಯ ವಿವರವನ್ನು ಎರಡು ಬಗೆಯಲ್ಲಿ ವಿಭಾಗಿಸಿ ವಿವರಿಸಲಾಗಿದೆ. ೧. ವಿಭಕ್ತಿ ಪ್ರತ್ಯಯಗಳ ವರ್ಗೀಕರಣ. ೨. ವಿಭಕ್ತಿಪ್ರತ್ಯಯಗಳ ವಿವರಣೆ ಈ ರೀತಿಯಾಗಿ ವಿಶ್ಲೇಷಣೆ ಮಾಡಲಾಗಿದೆ. ಬರಹಕನ್ನಡದಲ್ಲಿ 'ಅನ್ನು' ದ್ವಿತೀಯ ವಿಭಕ್ತಿ ಪ್ರತ್ಯಯಕಾರ್ಯವನ್ನು ನಿರ್ವಹಿಸಿದರೆ ಮಸ್ಕಿ ಕನ್ನಡದಲ್ಲಿ ಅಗ,- ಅನ್ನ,- ಇಗ,- ನ್ನ,- ನ,- ಗ್ ಈ ಪ್ರತ್ಯಯಗಳು ಕಾರ್ಯನಿರ್ವಹಿಸುತ್ತವೆ. ಮತ್ತು ಪ್ರತ್ಯಯಗಳು ಮಾನವ ಏಕವಚನ ನಾಮಪ್ರಕೃತಿ, ಮಾನವೇತರ ಏಕವಚನ, ನಾಮಪ್ರಕೃತಿ ಹಾಗೂ ಪ್ರಥಮ ಪುರುಷ ಏಕವಚನ, ಸರ್ವನಾಮ ವ್ಯಂಜನಾಂತ ಪ್ರಕೃತಿನಂತರ ಸೇರುತ್ತವೆ. ಬರಹ ಕನ್ನಡದ ತೃತೀಯ ವಿಭಕ್ತಿ ಪ್ರತ್ಯಯ 'ಇಂದ'ವು ಮಸ್ಕಿಕನ್ನಡದಲ್ಲಿ -ಲೆ, -ಲಿನ್ಹಾಸಿ, -ಆಗ್ಲಾಸಿನ್ನ, -ಇಂದ, -ಆಲಿನ್ನ, -ನಿಂದ, -ಲಾಸಿ, -ಆಲಾಸಿ, -ಆಗ್ಲಾಸಿ, -ಲಾಸಿನ್ನ, -ಲಿಂದ, -ಆಗ್ಲಿನ್ನ, -ರಿಂದ ಈ ರೀತಿಯಾಗಿ ಬಳಕೆಯಾಗುವುದನ್ನು ಗಮನಿಸಲಾಗಿದೆ. ಈ ವಿಭಕ್ತಿ ಪ್ರತ್ಯಯಗಳು 'ಇ' ಕಾರಂತ್ಯ, 'ಉ' ಕಾರಂತ್ಯ, 'ಎ' ಕಾರಂತ್ಯ, 'ಅ' ಕಾರಂತ್ಯ, ವ್ಯಂಜನಾಂತ ಮತ್ತು ಸರ್ವನಾಮ ನಾಮಪ್ರಕೃತಿನಂತರ ಸೇರುತ್ತವೆ. ಚತುರ್ಥಿ ವಿಭಕ್ತಿಪ್ರತ್ಯಯ ಬರಹ ಕನ್ನಡದಲ್ಲಿ 'ಗೆ' 'ಇಗೆ', ಎಂಬುದಾಗಿ ಬಳಕೆಗೊಂಡರೆ ಮಸ್ಕಿಕನ್ನಡದಲ್ಲಿ -ಅಗ, -ಕೆ, -ಇಗೆ, -ಗೆ ಇವುಗಳು ಬಳಕೆಯಲ್ಲಿವೆ. ಚತುರ್ಥಿ ವಿಭಕ್ತಿ ಪ್ರತ್ಯಯ ಮಾನವ ಏಕವಚನ ನಾಮಪ್ರಕೃತಿ, ಮಾನವೇತರ ನಾಮಪ್ರಕೃತಿ, ಪ್ರಥಮ ಪುರುಷ ಏಕವಚನ ನಾಮಪ್ರಕೃತಿ, ಸಂಖ್ಯಾವಾಚಕ, ದಿಕ್ಕುಸೂಚಕಗಳ ನಂತರ ಸೇರುತ್ತವೆ. 'ಷಷ್ಠಿ' ವಿಭಕ್ತಿಪ್ರತ್ಯಯ ಬರಹ ಕನ್ನಡದಲ್ಲಿ 'ಅ' ಎಂದು ಬಳಕೆಗೊಂಡರೆ ಮಸ್ಕಿಕನ್ನಡದಲ್ಲಿ -ಅ, -ಇನ್, -ಅಕ,

-ಅದ್, -ಅನ್ ಬಳಕೆಯಲ್ಲಿದೆ. 'ಅ' 'ಷಷ್ಠಿ' ವಿಭಕ್ತಿ ಪ್ರತ್ಯಯ ಪ್ರಥಮ, ಉತ್ತಮ ಪುರುಷ ಏಕವಚನ, ಮಾನವೇತರ ನಾಮಪ್ರಕೃತಿ ಮತ್ತು ಸಂಬಂಧಸೂಚಕ ನಾಮಪ್ರಕೃತಿ ನಂತರ ಸೇರುತ್ತವೆ. ಬರಹ ಕನ್ನಡದಲ್ಲಿ ಸಪ್ತಮಿ ವಿಭಕ್ತಿ ಪ್ರತ್ಯಯ 'ಅಲ್ಲಿ'. ಮಸ್ಕಿಕನ್ನಡದಲ್ಲಿ ಅಲ್ಲಿ, -ಆಳ, -ಅಕ್ಕ, -ಆಗ, -ಒಳು, -ಆನ್, -ಆನ, -ಅಳ್, -ಎ ಈ ರೀತಿಯ ಸಪ್ತಮಿ ವಿಭಕ್ತಿ ಪ್ರತ್ಯಯ ಬಳಕೆಯಲ್ಲಿದೆ. ಈ ಸಪ್ತಮಿ ವಿಭಕ್ತಿ ಪ್ರತ್ಯಯ ಮಾನವ ಮತ್ತು ಮಾನವೇತರ ಏಕವಚನ, ನಾಮಪ್ರಕೃತಿ ಹಾಗೂ ದಿಕ್ಕುಸೂಚಕ ನಾಮಪ್ರಕೃತಿ ನಂತರ ಸೇರುತ್ತವೆ. ಮಸ್ಕಿಕನ್ನಡದಲ್ಲಿ ವಿಭಕ್ತಿ ಪಲ್ಲಟ ಪ್ರಕ್ರಿಯೆ ವಿಶೇಷವಾಗಿದೆ. ಸಾಮಾನ್ಯವಾಗಿ ವಿಭಕ್ತಿ ಪಲ್ಲಟಗಳು 'ದ್ವಿತೀಯ' ವಿಭಕ್ತಿಗೆ ಬದಲಾಗಿ 'ಷಷ್ಠಿ' ವಿಭಕ್ತಿ, 'ದ್ವಿತೀಯ' ವಿಭಕ್ತಿ ಬದಲಾಗಿ 'ಚತುರ್ಥಿ' ವಿಭಕ್ತಿ, 'ತೃತೀಯ' ವಿಭಕ್ತಿ ಬದಲಾಗಿ 'ಸಪ್ತಮಿ', ವಿಭಕ್ತಿ, 'ಷಷ್ಟಿ' ವಿಭಕ್ತಿ ಬದಲಾಗಿ 'ಚತುರ್ಥಿ', 'ಷಷ್ಟಿ'ಗೆ ಬದಲಾಗಿ 'ಸಪ್ತಮಿ', 'ಸಪ್ತಮಿ'ಗೆ ಬದಲಾಗಿ 'ಚತುರ್ಥಿ' ವಿಭಕ್ತಿ ಪ್ರತ್ಯಯ ಬರುವುದನ್ನು ಕಂಡುಕೊಳ್ಳಲಾಗಿದೆ. ಇದೇ ರೀತಿ ವಚನ ವ್ಯವಸ್ಥೆ, ಕ್ರಿಯಾಪದ, ಕ್ರಿಯಾಪ್ರಕೃತಿಗಳು, ಅಕರ್ಮಕ ಕ್ರಿಯಾಪದ, ಸಕರ್ಮಕ ಕ್ರಿಯಾಪದ, ಕಾಲಸೂಚಕ ಪ್ರತ್ಯಯಗಳು, ಅಖ್ಯಾತ ಪ್ರತ್ಯಯಗಳು, ವಿಧ್ಯರ್ಥಕ ಕ್ರಿಯಾಪದ, ನಿಷೇದಾರ್ಥಕ ಕ್ರಿಯಾಪದಗಳು ಇವೆಲ್ಲವೂ ಸಹ ಮಸ್ಕಿಕನ್ನಡದಲ್ಲಿ ಭಿನ್ನವಾಗಿ ಕಂಡುಬರುತ್ತವೆ.

ಮಸ್ಕಿಪರಿಸರದ ಸಂಬಂಧವಾಚಕ ಹಾಗೂ ಸಂಭೋದನ ರೂಪಗಳನ್ನು ರಕ್ತಸಂಬಂಧ ಹಾಗೂ ಇತರೆ ಸಂಬಂಧ ಎಂದು ವಿಭಾಗಮಾಡಿ ಎರಡು ನೆಲೆಯಲ್ಲಿ ಚರ್ಚಿಸಲಾಗಿದೆ. 'ಚಿಕ್ಕಪ್ಪ' ಎಂಬ ಸಂಬಂಧವಾಚಕ ಪದವು ಮೂರು ಬಗೆಯಲ್ಲಿ ಸಂಬೋಧನೆಗೊಳ್ಳುತ್ತಿದೆ. ಚಿಗಪ್ಪ, ಸಣಪ್ಪ, ಕಕ್ಕಾ ಎಂದು ಮೂರು ಸಾಮಾಜಿಕ ವರ್ಗಗಳಲ್ಲಿ ಕಂಡುಬಂದಿದೆ. ಅದೇ ರೀತಿ ತಂದೆಯ ತಂದೆ ಸಂಬಂಧ 'ತಾತ' ಎಂದಾದರೆ, ಈ ಸಂಬಂಧವಾಚಕವು ತಾತ, ಅಜ್ಜ, ಮುತ್ಯಾ ಮೂರು ಬಗೆಯಲ್ಲಿ ಸಂಬೋಧನೆಗೊಳ್ಳುವುದು ಕಂಡುಬರುತ್ತದೆ. ಲಿಂಗಾಯತರಲ್ಲಿ ವೈನಿ, ಅಕ್ಕ ಎಂಬ ಸಂಭೋದನೆ 'ಅತ್ತಿಗೆ'ಗೆ ಸಮನಾಗಿ ಕಂಡುಬಂದರೆ ನಾಯಕ ಹಾಗೂ ಹರಿಜನರಲ್ಲಿ ಅತ್ತಿ ಹಾಗೂ ಅಕ್ಕ ಎಂಬ ಸಂಭೋದನೆ ಕಂಡುಬರುವುದು ವಿಶೇಷವಾಗಿದೆ. ಗಂಡುಮಗ ಪದ ಸಂಭೋದನೆಯಲ್ಲಿ ಗ್ವಂಡುಮಗ ಎಂದಾಗುವುದು. ನಡುವೆ ಹುಟ್ಟಿದ ಗಂಡುಮಗನನ್ನು 'ನಡಲಾತ' ಎಂದು ಸಂಭೋದನೆ ಯಾಗುವುದು. ನಡುವೆ ಹುಟ್ಟಿದ ಹೆಣ್ಣು ಮಗು 'ನಡಲಾಕಿ' ಎಂದು ವಿಶಿಷ್ಟವಾಗಿ ಸಂಭೋದನೆಗೊಳ್ಳುವುದನ್ನು ಮಸ್ಕಿಕನ್ನಡದಲ್ಲಿ ಕಾಣಬಹುದಾಗಿದೆ. ಅದೇ ರೀತಿ 'ಏನಂಗೇ', 'ಏಳಂಗೇ' ಎಂದು ಪರಿಚಯಸ್ಥರಲ್ಲಿ ಹೆಣ್ಣು ಮಕ್ಕಳನ್ನು ಸಂಬೋಧಿಸುವುದು ಮಸ್ಕಿಕನ್ನಡದಲ್ಲಿ ಕಂಡುಬರುತ್ತದೆ.

ಮಸ್ಕಿಕನ್ನಡದ ಸ್ವರೂಪವನ್ನು ಹಾಗೂ ಸೀಮಾರೇಖೆಯನ್ನು ಗುರುತಿಸಲು ಸ್ಥಳನಾಮ ಹಾಗೂ ವ್ಯಕ್ತಿನಾಮಗಳು ಸಹಕಾರಿಯಾಗಿರುವುದು ಕಂಡುಬರುತ್ತದೆ. ಹಾಗೂ ಚಾರಿತ್ರಿಕ ಅಧ್ಯಯನದ ಮೂಲಕ ಈ ಅಂಶವನ್ನು ಕಂಡುಕೊಳ್ಳಲಾಗಿದೆ. ಸ್ಥಳನಾಮಗಳು ಶಾಸನಗಳ ಕಾಲದಿಂದ ಬೆಳೆದುಬಂದ ಬಗೆ ಹಾಗೂ ಅವುಗಳ ರೂಪವನ್ನು ಉಳಿಸಿಕೊಂಡ ಬಗೆಯನ್ನು ಚರ್ಚಿಸಿ ಉದಾಹರಣೆ ಸಹಿತ ವಿವರಿಸಲಾಗಿದೆ. ಉದಾಹರಣೆಗೆ: ಮೂಸೆ(ಯರ)+ಕೆಯ್+ಮೂಸಂಗಯ್>ಮೂಸಂಗಿ>ಮೊಸಗಿ>ಮಸಗಿ>ಮಸ್ಕಿ. ಶಾಸನಗಳಲ್ಲಿ ಉಲ್ಲೇಖಿತವಾದ ನವಿಲೆ, ಲಿಂಗಸೂಗೂರು, ಬಳಗಾನೂರು, ಮುದಗಲ್ಲು, ಜಲದುರ್ಗ ಸ್ಥಳನಾಮಗಳನ್ನು ಗುರುತಿಸಲಾಗಿದೆ. ಮುದಗಲ್ಲು (ಮೋಡೋಗಲ್ಲು) ಜಲದುರ್ಗ (ಕುಡುಗುಂದೆ, ಅಮರಕಲ್ಯಾಣ) ಇತ್ಯಾದಿ ಪೂರ್ವ ನಾಮಗಳ ಬಗ್ಗೆ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ವ್ಯಕ್ತಿನಾಮಗಳು ಚಾರಿತ್ರಿಕವಾಗಿ ಬೆಳೆದು ಬಂದಿರುವುದನ್ನು

ಕಂಡುಕೊಂಡಿದೆ. ಸೋಮಪ್ಪನಾಯಕ, ಅಮರಪ್ಪನಾಯಕ, ಇತ್ಯಾದಿ ವ್ಯಕ್ತಿನಾಮಗಳು ಅಧ್ಯಯನದ ಮೂಲಕ ತಿಳಿದುಬಂದಿದೆ. ಗಡಿ ಗುರುತಿಸಲು ಅಮರೇಶ್ವರ, ಸೋಮನಾಥ ದೈವನಾಮಗಳು ಸಹಾಯಕ್ಕೆ ಬಂದಿವೆ. ಮಸ್ಕಿ ಸೀಮಾರೇಖೆ ಒಳಗಡೆ ಅಮರ, ಅಮರಪ್ಪ, ಅಮರೇಶ, ಅಮರಪ್ಪನಾಯಕ, ಸೋಮ, ಸೋಮೇಶ, ಸೋಮಪ್ಪನಾಯಕ ಇತ್ಯಾದಿಯಾಗಿ ಬಳಕೆಯಲ್ಲಿರುವುದು ವ್ಯಕ್ತಿನಾಮ ಅಧ್ಯಯನದಿಂದ ತಿಳಿದುಬಂದಿದೆ. ಚಾರಿತ್ರಿಕ ನೆಲೆಯಲ್ಲಿ ಸ್ಥಳನಾಮ ಹಾಗೂ ವ್ಯಕ್ತಿನಾಮಗಳನ್ನು ವಿಶ್ಲೇಷಿಸಿ ಮಾಹಿತಿ ನೀಡಲಾಗಿದೆ.

ಮಸ್ಕಿಕನ್ನಡದ ವಿಶಿಷ್ಟ ಪದಗಳು ಮತ್ತು ಪದಗಳ ಪ್ರಯೋಗಾರ್ಥವನ್ನು ವಿವರಿಸಲಾಗಿದೆ. ಈ ಅಧ್ಯಯನವು ಮಸ್ಕಿಕನ್ನಡ ಒಂದು ವಿಶಿಷ್ಟ ಪ್ರಾದೇಶಿಕ ಪ್ರಭೇದ ಎಂದು ನಿರ್ಣಯಿಸಲು ಸಹಕಾರಿಯಾಗಿದೆ. ಲಿಂಗಾಯತ, ನಾಯಕ ಮತ್ತು ಹರಿಜನರ ಮೂರು ಸಾಮಾಜಿಕ ವರ್ಗಗಳ ಹಿನ್ನೆಲೆಯಲ್ಲಿ ವಿಶಿಷ್ಟ ಪದಗಳು ಹಾಗೂ ಪದ ಪ್ರಯೋಗಾರ್ಥವನ್ನು ವಾಕ್ಯರಚನೆಯ ಮೂಲಕ ಬರಹ ಕನ್ನಡದ ಪದರೂಪದೊಂದಿಗೆ ತೌಲನಿಕವಾಗಿ ಕಂಡುಕೊಳ್ಳಲಾಗಿದೆ. ಪ್ರಸ್ತುತ ಪ್ರಬಂಧದ ಈ ಭಾಗವು ಬರಹ ಕನ್ನಡಕ್ಕಿಂತ ಮಸ್ಕಿಕನ್ನಡ ಯಾವ ರೀತಿ ಭಿನ್ನವಾಗಿದೆ ಎನ್ನುವುದನ್ನು ನಿದರ್ಶನ ಸಮೇತವಾಗಿ ಸ್ಪಷ್ಟಪಡಿಸಲಾಗಿದೆ. 'ಭಾನುವಾರ'ವು 'ಸ್ತ್ವಾರ' ಎಂದು ಉಚ್ಚಾರಣೆಯಲ್ಲಿದೆ. 'ಪೆಟ್ಟಿಗೆ' ಪದ 'ಸಂದಕ' ಹಾಗೂ 'ಪ್ಯಾಟರ್ಗಿ' ಎಂದು ಬಳಕೆಯಲ್ಲಿದೆ. 'ಸಮವಯಸ್ಕರು' ಎನ್ನುವ ಬದಲಾಗಿ 'ಸರೀಕರು' ಎಂದು ಉಚ್ಚಾರಗೊಳ್ಳುತ್ತದೆ. 'ಹೊದಿಕೆ' ಪದರೂಪ ಸುಜನಿ, 'ವದಕಂಬಡು' ಎಂದು ಎರಡು ಬಗೆಯಲ್ಲಿ ಬಳಕೆಗೊಳ್ಳುವುದು 'ಊಟದಚಾಪೆ' ಪದ 'ಚಿಡಿಚಾಪಿ' ಎಂತಲೂ, 'ಪಂಚಾಂಗ' ಪದ 'ಬಲಾಚಾರ' ಎಂತಲೂ ವಿಶಿಷ್ಟವಾಗಿ ಬಳಕೆಯಲ್ಲಿದೆ. ಇದೇ ರೀತಿ ಜಮಾವ್ಪ, ಸೋಬ್ರ, ಗ್ಯಾಸ್ಯಾ, ಬುತ್ತಿಮಾಡು, ಗೊಂತು, ಕೈದು, ಕೋರಿ, ಮೂಳ್ಗಳು, ಕೂಲ, ಬವಂಚಿಗಿ, ಕುಲ್‌ತಾಳ, ಸಿಂದ್ರಿಕಲೆ, ಲೋಡು, ಆಣೆಶಿಂದು, ಕ್ವಲ್ಲ, ಲೋಯಾನ, ಭೋಗ್ಗ, ಕಬ್ಯಾಟಿ, ಮಯಿನರದಳ, ಪರಾಮರಿಕೆ, ಕ್ಯಾಲ, ಪಂಚೇರು, ಸುಂಕಬುತ್ತಿ, ದಣಿಕೆ, ಕಕ್ಕಲಾತಿ, ಬೋಳಿ, ಅಂದಾಡಿ, ಕಬ್ಬಟ್ಟಿ, ಗಡಚಿಕ್ಕು, ಇದೇ ರೀತಿ ಮಸ್ಕಿ ಕನ್ನಡದಲ್ಲಿ ಅನೇಕ ವಿಶಿಷ್ಟ ಪದಗಳು ಬಳಕೆಯಲ್ಲಿರುವುದನ್ನು ಗಮನಿಸಿದರೆ ಮಸ್ಕಿ ಕನ್ನಡ ಒಂದು ವಿಶಿಷ್ಟವಾದ ಪ್ರಭೇದವೆಂದು ಗುರುತಿಸಬಹುದು. ವಿಶಿಷ್ಟ ಪದಗಳನ್ನು ವಾಕ್ಯರಚನೆಯಲ್ಲಿ ನೋಡುವುದಾದರೆ ೧. ರಾಮಕೆಂಚ ಇಬ್ರೂ 'ಸರೀಕರು', ಇಲ್ಲಿ 'ಸಮವಯಸ್ಕರು' ಎನ್ನುವುದು 'ಸರೀಕರು' ಎಂದು ಬಳಕೆಗೊಂಡಿದೆ. ೨. 'ಗ್ಯಾಸ್ಯಾ'ನ್ನ ಕರ್ಕೊಂಡ್ ಬಾ. 'ಗೆಳೆಯ' ಎಂಬುವುದು 'ಗ್ಯಾಸ್ಯಾ' ಎಂದು ವಿಶಿಷ್ಟ ರೀತಿಯಲ್ಲಿ ಪ್ರಯೋಗವಾಗಿದೆ. ಇಂತಹ ವಿಶಿಷ್ಟವಾದ ಪದಗಳು ವಾಕ್ಯರಚನೆಯಲ್ಲಿ ಸಾಕಷ್ಟು ಕಂಡುಬಂದಿದ್ದು ಅವುಗಳನ್ನು ದಾಖಲಿಸಲಾಗಿದೆ.

ಮಸ್ಕಿಕನ್ನಡದ ಪದಕೋಶವು ಮಸ್ಕಿಕನ್ನಡ ಒಂದು ಪ್ರಾದೇಶಿಕ ಪ್ರಭೇದ ಎಂದು ಗಟ್ಟಿಗೊಳಿಸಲು ಸಹಾಯಕ್ಕೆ ಬಂದಿದೆ. ಈ ಅಧ್ಯಾಯದಲ್ಲಿ ಮಸ್ಕಿ ಪರಿಸರದಲ್ಲಿ ಬಳಕೆಯಲ್ಲಿರುವ ಬಂಧುತ್ವ, ಜಾತಿ ಮತ್ತು ವೃತ್ತಿ, ಮಾನವ, ಗಿಡ, ಆಹಾರ, ಸಾಮಾನ್ಯವಾಚಕ, ಸರ್ವನಾಮ ಇತ್ಯಾದಿ ಸಂಬಂಧಿಸಿದ ಪದಗಳನ್ನು ಬರಹ ಕನ್ನಡದೊಂದಿಗೆ ತುಲನಾತ್ಮಕವಾಗಿ ಗಮನಿಸಲಾಗಿದೆ. ಮಗ>ಮಗಾ, ಮೈದುನ>ಮಯದುನ, ಓತಿಕೇತ>ತ್ಯಾಂಡಿಕಟಿ, ಕಾಡುಹಂದಿ>ಏದು, ಸಣ್ಣಜೇನು>ಚಿಟ್ಟಿಜೇನು, ಸೆಕೆ>ಕುದಿ, ಉಮ್ರು, ಸಂಜೆ>ಬೇಗಸೆರೆ, ಕೊಂಬೆ>ಕ್ವಲ್ಲ, ಮದಿಕೆ> ಮಿಟ್ಟಿ, ಚೂರು>ತುಣುಗು, ದಪ್ಪ>ಗಡತರ, ಚೀಪು>ಜಿಬುಕ, ಜಿಪುಣ>ಜಿಬ್ಬ, ಮೆಟ್ಟಿಲು>ಪ್ಯಾಂಟ್ಗಿ, ಮೊರೆ> ಅರಗೋಲು ಪಟ್ಟಿ, ಮಧ್ಯರಾತ್ರಿ>ಪೂಣಿವಂದು, ಮೃಗಶಿರ>ಮಿರಗ, ಕೊಳಲು>ಕೊಳವೆ, ಹೊಟ್ಟೆಕಿಚ್ಚು>ಕುಲ್‌ತನ, ಎತ್ತರಭೂಮಿ>ವಂಟಿದಿಬ್ಬ, ತಗ್ಗಾದಭೂಮಿ>ನಾಲಾ, ಚಿಲಕ>ಲಾಳದಂಡಿ,

ಅನಕ್ಷರಸ್ಥರು>ಮೋಟಮಂದಿ, ಅನಿವಾರ್ಯ>ನಿರುಪ್ರ, ಬೇಗ>ದೌಡ್, ಲಾಗಲಚ್, ಒಮ್ಮೆಲೆ>ಏಕದಂಕಲೆ, ಬೈತಾಲೆ>ಪಾಪಡಿ, ಜೋರಾಗಿ> ಜಿಗೂದ ಮುಂತಾದ ವಿಶಿಷ್ಟ ಪದಕೋಶವನ್ನು ಮಸ್ಕಿಪರಿಸರದ ಕನ್ನಡ ಹೊಂದಿರುವುದನ್ನು ಗುರುತಿಸಲಾಗಿದೆ.

ಮಸ್ಕಿಕನ್ನಡದ ಸೀಮಾರೇಖೆಯನ್ನು ಗುರುತಿಸಿ, ವಿವರಿಸಲಾಗಿದ್ದು, ವಿವರಿಸುವಾಗ ಧ್ವನಿಹಂತ, ಪದಹಂತ, ವಾಕ್ಯಹಂತ, ಅರ್ಥ ವ್ಯತ್ಯಾಸ ಮುಂತಾದ ಭಾಷಿಕ ಹಂತಗಳಲ್ಲಿ ಬಳ್ಳಾರಿ, ರಾಯಚೂರು, ಕೊಪ್ಪಳ ಪ್ರಭೇದಗಳಿಗಿಂತ ಹೇಗೆ ಮಸ್ಕಿಕನ್ನಡ ಭಿನ್ನ ಎಂಬುದನ್ನು ಕಂಡುಕೊಳ್ಳಲಾಗಿದೆ. ಧ್ವನಿಹಂತ, ಪದ, ವಾಕ್ಯ ಮತ್ತುಅರ್ಥವ್ಯತ್ಯಾಸ ಇವುಗಳ ಬಳಕೆಯ ಗಡಿಯನ್ನು ನಕ್ಷೆಯ ಮೂಲಕ ಚರ್ಚಿಸಲಾಗಿದೆ. ದಾಖಲಾಗಿರುವ ಧ್ವನಿ, ಪದ, ವಾಕ್ಯ ಮತ್ತು ಅರ್ಥದ ಸಹಾಯದಿಂದ ಮಸ್ಕಿಕನ್ನಡದ ಚಹರೆಯನ್ನು ಕಂಡುಕೊಳ್ಳಲಾಗಿದೆ. ಮಸ್ಕಿಕನ್ನಡದಲ್ಲಿ ಧ್ವನಿಹಂತದಲ್ಲಿ 'ಜಿಂಕೆ' ಪದವನ್ನು 'ಜಿಂಕ' ಎಂದು ಉಚ್ಚಾರವಾದರೆ ಬಳ್ಳಾರಿ ಕನ್ನಡದಲ್ಲಿ 'ಜಿಂಕಿ', 'ಚಿಗಿರಿ' ಎಂದು ಬಳಕೆಯಾಗುವುದನ್ನು ಧ್ವನಿಹಂತದಲ್ಲಿ ಗುರುತಿಸಲಾಗಿದೆ. ಅದೇ ರೀತಿ ಪದಹಂತದಲ್ಲಿ 'ಆಮೆ' ಪದರೂಪ 'ತಂಬೇಲಿ', 'ತ್ಯಾಂಬ್ಲ' ಎಂಬೆರಡು ರೂಪಗಳು ಮಸ್ಕಿ ಪರಿಸರದ ಕನ್ನಡದಲ್ಲಿ ಕಂಡುಬಂದರೆ ಹೊರ ಪರಿಸರದಲ್ಲಿ 'ಆಮಿ' ಎಂದು ಬಳಕೆಯಲ್ಲಿದೆ. 'ಗೂಳಿ' ಪದರೂಪ ಮಸ್ಕಿ ಪರಿಸರದಲ್ಲಿ 'ಗುಳೇರಿ' ಎಂದು ಬಳಕೆಯಾದರೆ ಕೊಪ್ಪಳ, ಬಳ್ಳಾರಿ ಪ್ರಭೇದದಲ್ಲಿ 'ಗೂಳಿ', 'ಹೋರಿ' ಎಂಬೆರಡು ರೀತಿಯಲ್ಲಿ ಬಳಕೆಯಾಗುತ್ತದೆ. ವಾಕ್ಯಹಂತದಲ್ಲಿ ಗಮನಿಸಿದಾಗ ಬರಹ ಕನ್ನಡ ಪದರೂಪಗಳು ಮಸ್ಕಿಕನ್ನಡದಲ್ಲಿ ಪರ್ಯಾಯ ಪದಗಳೊಂದಿಗೆ ವಾಕ್ಯಗಳಲ್ಲಿ ಬಳಕೆಯಲ್ಲಿದೆ. ಬರಹ ಕನ್ನಡದಲ್ಲಿ 'ಇದೆ' ಪದ ಬಳಕೆ ರಾಯಚೂರು ಕನ್ನಡದಲ್ಲಿ 'ಅದ' ಎಂದು ಬಳಕೆಯಾದರೆ, ಮಸ್ಕಿ ಕನ್ನಡದಲ್ಲಿ 'ಅಯ್ತಿ' ಎಂದು ಬಳಕೆಯಾಗುತ್ತದೆ. ವಾಕ್ಯರಚನೆಯಲ್ಲಿ ನೋಡುವುದಾದರೆ ಮಸ್ಕಿಕನ್ನಡದಲ್ಲಿ 'ನನ್ ಮನ್ಯಾಗ ರೊಕ್ಕ ಅಯ್ತಿ' ಎಂಬ ಪ್ರಯೋಗ ಕಂಡುಬರುತ್ತದೆ. ಇದೇ ವಾಕ್ಯ ರಾಯಚೂರು ಕನ್ನಡದಲ್ಲಿ 'ನನ್ನ ಮನ್ಯಾಗ ರೊಕ್ಕ ಅದ' ಎಂದು ಬಳಕೆಯಾಗುವುದನ್ನು ತೌಲನಿಕ ಪ್ರಯೋಗದೊಂದಿಗೆ ಮಸ್ಕಿಕನ್ನಡದ ಸೀಮಾರೇಖೆಯೊಂದನ್ನು ಗುರುತಿಸಲಾಗಿದೆ. ಈ ಅಧ್ಯಾಯವು ಮಸ್ಕಿಕನ್ನಡದ ಸೀಮಾರೇಖೆ ಸುತ್ತುವರೆ ಪ್ರಭೇದಗಳಾದ ಬಳ್ಳಾರಿ ಕನ್ನಡ, ರಾಯಚೂರು ಕನ್ನಡ ಮತ್ತು ಕೊಪ್ಪಳದ ಕನ್ನಡಕ್ಕಿಂತ ಬೇರೆಯಾಗಿರುವುದನ್ನು ತೋರಿಸಲಿಕೊಡಲಾಗಿದೆ.

ಮಸ್ಕಿಕನ್ನಡ ಬದಲಾವಣೆ ಆಗುತ್ತಿರುವುದರ ಬಗೆಗೆ ನಿದರ್ಶನ ಸಹಿತ ಚರ್ಚೆಮಾಡಲಾಗಿದೆ. ಹಾಗೂ ಒಂದು ಪ್ರಭೇದ ಹುಟ್ಟುವುದಕ್ಕೆ ಕಾರಣಗಳು ಇರುವಾಗ; ಬದಲಾವಣೆಗೂ ಕಾರಣಗಳಿವೆ ಎಂಬುದನ್ನು ಮಸ್ಕಿ ಪರಿಸರದಲ್ಲಿಆದ ಬದಲಾವಣೆಯ ಪ್ರಕ್ರಿಯೆ ಮೂಲಕ ಕಂಡುಕೊಳ್ಳಲಾಗಿದೆ. ಮಸ್ಕಿಕನ್ನಡ ಪದಕೋಶ ಇಂದು ನಮ್ಮಿಂದ ದೂರ ಸರಿಯುತ್ತಿದೆ ಎಂದು ನಿದರ್ಶನಗಳ ಮೂಲಕ ಹೇಳಲಾಗಿದೆ. ಸೌಲಭ್ಯಕಾಂಕ್ಷಿಯಿಂದಲೂ ಮಸ್ಕಿಕನ್ನಡ ಬದಲಾವಣೆಯ ಪ್ರಕ್ರಿಯೆಗೆ ಒಳಗಾಗುತ್ತಿದೆ. ಉದಾಹರಣೆಗೆ ಕೃತಿಕ>ಕೀರ್ತುಕ, ಮೃಗಶಿರ>ಮಿರಗ, ಲಿಂಗಸೂಗೂರು>ಲಿಂಗ್ಸೂರು, ಹೋಗುತ್ತೀಯ>ಓತಿ ಇತ್ಯಾದಿ ಪದಗಳನ್ನು ಗಮನಿಸಬಹುದು. ಜಾಗತೀಕರಣದ ಪ್ರಭಾವದಿಂದ ಇಂದು ಗ್ರಾಮೀಣ ದೇಶಿ ಆಟದಲ್ಲಿ ಬಳಕೆಯಾಗುತ್ತಿದ್ದ ಪದಗಳು 'ಕುಂಟೆಬಿಲ್ಲೆ', 'ಕಬ್ಬಡ್ಡಿ', 'ಚಿಣ್ಣಿಕೋಲು' ಇತ್ಯಾದಿ ಹಾಗೂ ಆಟದ ಒಳಪದಗಳ ಹೆಸರುಗಳು ಇಂದು ಕಿವಿಗೆ ಬೀಳದೆ ಹೋಗುತ್ತಿವೆ. ಅದೇ ರೀತಿ ಅಳತೆ ಮಾಪನಗಳಾದ ಸೂಚಕಗಳು ಸೊಲಿಗೆ, ಗಿದ್ನ, ಚಟಾಕು, ಒಮ್ಮನ, ಇಮ್ಮನ, ಮುಂತಾದ ಪದಗಳು ನಿರ್ದಿಷ್ಟವಾಗಿವೆ. ಅರ್ಥವ್ಯತ್ಯಾಸದಲ್ಲಿ ಬದಲಾವಣೆಯ ಪ್ರಕ್ರಿಯೆ ಮಸ್ಕಿಕನ್ನಡದಲ್ಲಿ ಕಂಡುಬಂದಿದೆ.

'ಸೊಪ್ಪು' ಪದರೂಪ ಎರಡು ನೆಲೆಯಲ್ಲಿ ಬಳಕೆಯಾಗುತ್ತಿದೆ. ಅಂದರೆ 'ತರಕಾರಿ ಸೊಪ್ಪು' ಎನ್ನುವ ಶಬ್ದಕ್ಕೆ ಬದಲಾಗಿ 'ಪಲ್ಯ' ಎಂದು ಮಸ್ಕಿಕನ್ನಡದಲ್ಲಿ ಬಳಕೆಯಿದೆ. ಆದರೆ ಬಳ್ಳಾರಿ ಪ್ರಭೇದದಲ್ಲಿ ಊಟಕ್ಕೆ ಮಾಡುವ 'ಪಲ್ಯ'ಕ್ಕೆ 'ಪಲ್ಯ' ಎಂದು ಬಳಕೆಯಾಗುತ್ತದೆ. ಇದೇ ರೀತಿ 'ಸಬೂರ್‌ಕರ್' ದೇಶಿಪದ ಅನಕ್ಷರಸ್ಥರಲ್ಲಿ ಕಂಡುಬಂದರೆ ಅಕ್ಷರಸ್ಥರಲ್ಲಿ 'ಸೋಪು' ಪದ ಬಳಕೆ ಇದೆ ಮುಂದೊಂದುದಿನ ಅಕ್ಷರಸ್ಥರ ಪ್ರಭಾವದಿಂದ 'ಸಬೂರಕರ್' ನಿರ್ದಿಷ್ಟವಾಗಿ, 'ಸೋಪು' ವ್ಯಾಪಕವಾಗಿ ಬಳಕೆಯಾಗಬಹುದು. ಇಂತಹ ಹಲವಾರು ಉದಾಹರಣೆಗಳೊಂದಿಗೆ ಮಸ್ಕಿಕನ್ನಡ ಬದಲಾವಣೆಯ ಪ್ರಕ್ರಿಯೆಯನ್ನು ಗಮನಿಸಲಾಗಿದೆ.

ಸಮಾರೋಪ ಭಾಗದಲ್ಲಿಅಧ್ಯಯನದ ಒಟ್ಟು ನೋಟವನ್ನು, ಅನುಬಂಧದಲ್ಲಿ ಅಧ್ಯಯನದ ಸಂದರ್ಭದಲ್ಲಿ ಪ್ರಯೋಜನಕ್ಕೆ ಬಂದ ಕೃತಿಗಳನ್ನು, ಲೇಖನಗಳನ್ನು, ಪರಾಮರ್ಶನ ಗ್ರಂಥಸೂಚಿಯಲ್ಲಿ ನೀಡಲಾಗಿದೆ.

ಅನುಬಂಧ

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

೦೧. ಅಂಗಡಿ ಎಸ್.ಎಸ್., ಭಾಷಾ ಕ್ಷೇತ್ರಕಾರ್ಯ, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೬.

೦೨. ಅಂಗಡಿ ಎಸ್.ಎಸ್., ಸಂಬಂಧವಾಚಕಗಳು ಮತ್ತು ಸಂಬೋಧನ ರೂಪಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೦೩. ಅಂಗಡಿ ಎಸ್.ಎಸ್., ಸಂಕೀರ್ಣ ವೃತ್ತಿಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೦೪. ಅಂಗಡಿ ಎಸ್.ಎಸ್., ಸಂಬಂಧವಾಚಕಗಳು ಮತ್ತು ಸಂಬೋಧನೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೦೫. ಅಂಗಡಿ ಎಸ್.ಎಸ್., ಜನಪದ ಸಾಹಿತ್ಯ ಭಾಷೆ, ವಿಕಾಶ ಪ್ರಕಾಶನ, ಹೊಸಪೇಟೆ, ೨೦೦೪.

೦೬. ಅಮರೇಶ ನುಗುಡೋಣಿ, ರಾಯಚೂರು ಜಿಲ್ಲೆಯಲ್ಲಿ ಹೈದರಾಬಾದು ಕರ್ನಾಟಕ ವಿಮೋಚನ ಚಳುವಳಿ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೦

೦೭. ಅಮರೇಶ ಯತಗಲ್, ಇತಿಹಾಸ ಮಂಥನ, ಅತಿಥಿ ಪ್ರಕಾಶನ, ಲಿಂಗಸೂಗೂರು, ೨೦೦೭.

೦೮. ಅಮರೇಶ ಯತಗಲ್, ಇತಿಹಾಸ ಇಂಚರ, ಅತಿಥಿ ಪ್ರಕಾಶನ, ಲಿಂಗಸೂಗೂರು, ೨೦೦೭.

೦೯. ಅರಳಗುಪ್ಪಿ ಐ.ಎಸ್., ಸಮಗ್ರ ಹೊಸಗನ್ನಡ ವ್ಯಾಕರಣ, ಸಮಾಜ ಪುಸ್ತಕಾಲಯ, ಧಾರವಾಡ, ೨೦೦೭.

೧೦. ಅಶೋಕ ಕುಮಾರ ರಂಜೇರೆ, ವಿವಿಧ ವೃತ್ತಿ ಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೧೧. ಎಚ್ಚೆಸ್ಕೆ, ಬಳಕೆಯ ಭಾಷೆ, ಚೇತನ್ ಬುಕ್ ಹೌಸ್, ಮೈಸೂರು, ೨೦೦೪.

೧೨. ಕಮ್ಮಾರ ಎಸ್.ಎಂ., ಸಮೂಹ ಮಾಧ್ಯಮಗಳು ಹಾಗೂ ಸಮುದಾಯ, ಮುಂಡರಗಿ, ೧೯೯೯.

೧೩. ಕಲಬುರ್ಗಿ ಎಂ.ಎಂ., ಕನ್ನಡ ನಾಮ ವಿಜ್ಞಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೮೯.

೧೪. ಕೀರ್ತಿನಾಥ ಕುರ್ತಕೋಟಿ, ಭಾಷೆ ಮತ್ತು ಸಂಸ್ಕೃತಿ, ಕುರ್ತುಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ, ೨೦೦೬.

೧೫. ಕುಶಾಲಪ್ಪಗೌಡ ಕೆ., ಕನ್ನಡ ತಿರುಳ ಕನ್ನಡ ಮತ್ತು ಸಮಾಜ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ೧೯೯೧.

೧೬. ಕೃಷ್ಣಯ್ಯ ಎಂ.ಎಚ್., ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು, ೧೯೯೯.

೧೭. ಕೆಂಪೇಗೌಡ ಕೆ., ಸಾಮಾನ್ಯ ಭಾಷಾ ವಿಜ್ಞಾನ, ಭಾರತೀ ಪ್ರಕಾಶನ, ಮೈಸೂರು, ೧೯೯೩.

೧೮. ಕೆಂಪೇಗೌಡ ಕೆ., ಕನ್ನಡ ಉಪಭಾಷೆಗಳ ಅಧ್ಯಯನ, ಭಾರತೀ ಪ್ರಕಾಶನ, ಮೈಸೂರು ೨೦೦೩.

೧೯. ಗಿರಿಜಾಪತಿ ಎನ್.ಎಂ., ಕನ್ನಡ ಭಾಷಾಲೇಖ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೭.

೨೦. ಗೊರವರ ಬ.ಸೋ., ಕನ್ನಡ ರಚನ್ನಾತಕ ಮತ್ತು ಸಮಾಜೋಭಾಷಿಕ ಅಧ್ಯಯನ, ಲಡಾಯಿ ಪ್ರಕಾಶನ, ಗದಗ, ೨೦೦೮.

೨೧. ಚನ್ನಬಸವ ಹಿರೇಮಠ, ಸತ್ಯದ ಹಾದಿ ಭಂಡಾರ ಪ್ರಕಾಶನ, ಮಸ್ಕಿ, ೨೦೦೮.

೨೨. ಚಿದಾನಂದ ಮೂರ್ತಿ ಎಂ., ಭಾಷಾವಿಜ್ಞಾನದ ಮೂಲತತ್ವಗಳು, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೧೯೮೬.

೨೩. ತಂಗಂ, ಮಣಿಯನ್, ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನ, ಶ್ರೀರಾಜೇಂದ್ರ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್, ಮೈಸೂರು ೨೦೦೩

೨೪. ತರೀಕೆರೆ ರಹಮತ್, ಬಹುಭಾಷಾ ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೨೫. ತಿರುಮಲೇಶ್ ಕೆ.ವಿ., ನಮ್ಮ ಕನ್ನಡ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೬.

೨೬. ನರಸಿಂಹಯ್ಯ ಎ.ಎನ್., ಕನ್ನಡ ಪ್ರಥಮ ವ್ಯಾಕರಣ, ವಸಂತ ಪ್ರಕಾಶನ, ಬೆಂಗಳೂರು, ೨೦೦೮.

೨೭. ನಾಗಭೂಷಣ ಸಿ. ಕನ್ನಡ ನಾಡಿನ ಶಾಸನಗಳ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ೨೦೦೯.

೨೮. ನಾರಾಯಣ ಕೆ.ವಿ. (ಸಂ), ಭಾಷೆ ವಿಶ್ವಕೋಶ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೨೯. ನಾರಾಯಣ ಕೆ.ವಿ. (ಸಂ), ವ್ಯಕ್ತಿನಾಮಗಳು ಸ್ವರೂಪ ಮತ್ತು ವಿಶ್ಲೇಷಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೩೦. ನಾರಾಯಣ ಕೆ.ವಿ., ಭಾಷೆಯ ಸುತ್ತ ಮುತ್ತ, ಕ್ರೈಸ್ಟ್ ಕಾಲೇಜು, ಬೆಂಗಳೂರು, ೨೦೦೦.

೩೧. ನಾರಾಯಣ ಕೆ.ವಿ., ಮತ್ತೆ ಭಾಷೆಯ ಸುತ್ತಮುತ್ತ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೪.

೩೨. ನಾರಾಯಣ ಕೆ.ವಿ., ಕನ್ನಡ ಜಗತ್ತು ಅರ್ಧ ಶತಮಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೩೩. ನೇಗಿನಹಾಳ, ಪ್ರಾಕೃತ ಕನ್ನಡ ಶಾಸನಗಳ ಭಾಷಿಕ ಅಧ್ಯಯನ, ಕನ್ನಡ ಅಧ್ಯಯನ ಸಂಸ್ಥೆ, ಧಾರವಾಡ.

೩೪. ನೇಗಿನಹಾಳ, ಎಂ.ಬಿ., ನೇಗಿನಹಾಳ ಪ್ರಬಂಧಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರಸಾರಾಂಗ, ೧೯೯೯

೩೫. ಪಾಂಡುರಂಗಬಾಬು ಡಿ., ನುಡಿನೋಟ, ಆಕಾಶ್ ಪ್ರಕಾಶನ, ಹೊಸಪೇಟೆ, ೨೦೦೫.

೩೬. ಬಸವರಾಜ ಕೋಡಗುಂಟಿ, ವೃತ್ತಿರಂಗಭೂಮಿ ನೋಡುಗರು ಮತ್ತು ಇತರ ಲೇಖನಗಳು, ರೂಪರಶ್ಮಿ ಪ್ರಕಾಶನ, ಧಾರವಾಡ, ೨೦೦೭.

೩೭. ಬಸವರಾಜ ಕೋಡಗುಂಟಿ, (ಸಂ) ಭಾಷಾ ವಿಶ್ಲೇಷಣೆ, ಭಂಡಾರ ಪ್ರಕಾಶನ, ಮಸ್ಕಿ, ೨೦೧೦.

೩೮. ಬಸವರಾಜ ಕೋಡಗುಂಟಿ, ಕನ್ನಡ ವಿಭಕ್ತಿರೂಪಗಳು ಭಂಡಾರ ಪ್ರಕಾಶನ, ಮಸ್ಕಿ, ೨೦೧೦.

೩೯. ಮರುಳಯ್ಯ ಸಾ.ಶಿ., ಕನ್ನಡ ಭಾಷೆಯ ಚರಿತೆ, ಕನ್ನಡ ಸಾಹಿತ್ಯ ಪರಿಷತ್, ೧೯೯೯.

೪೦. ಮಹಾದೇವಯ್ಯ ಪಿ., ಸಾಮಾಜಿಕ ಉಪಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೪೧. ಮಹಾದೇವಯ್ಯ ಪಿ. ಕನ್ನಡ ಮತ್ತು ಜನತೆ, ಸಾರಾ ಎಂಟರ್‌ಪ್ರೈಸಸ್, ಮೈಸೂರು, ೨೦೦೪.

೪೨. ಮಹಾದೇವಯ್ಯ ಪಿ., ದಲಿತರು ಭಾಷೆ ಮತ್ತು ಸಮಾಜ, ಪ್ರಸಾರಾಂಗ, ಕನ್ನಡವಿಶ್ವವಿದ್ಯಾಲಯ, ಹಂಪಿ, ೨೦೦೬.

೪೩. ಮುರುಗೆಪ್ಪ ಎ. ಭಾಷೆಯ ಸ್ವರೂಪ ಮತ್ತು ಐತಿಹಾಸಿಕತೆ ಕರ್ನಾಟಕ ವಿಶ್ವವಿದ್ಯಾಲಯ, ಪ್ರಸಾರಾಂಗ, ಧಾರವಾಡ, ೨೦೦೦.

೪೪. ಮೃತುಂಜಯ ಹೊರಕೇರಿ., ರಾಯಚೂರು ಜಿಲ್ಲಾ ದರ್ಶನ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫

೪೫. ರಾಜಪುರೋಹಿತ ಬಿ.ಬಿ. ಧ್ವನಿಯ ಶ್ರಾವಣ ಮತ್ತು ಚಾಕ್ಷುಷ ರೂಪ, ಭಂಡಾರ ಪ್ರಕಾಶನ, ಮಸ್ಕಿ ೨೦೦೯.

೪೬. ರಾಜೇಂದ್ರ ಎಂ. ನಾಯಕ., ಉಪಭಾಷಾ ವಿಜ್ಞಾನ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೯.

೪೭. ರಾಮಚಂದ್ರರಾವ್ ಬಿ., ಕನ್ನಡ ಭಾಷೆ ಪ್ರಾದೇಶಿಕ ವೈವಿಧ್ಯ, ಐ.ಬಿ.ಎಮ್.ಪ್ರಕಾಶನ, ಬೆಂಗಳೂರು ೧೯೮೩.

೪೮. ರಾಮಚಂದ್ರರಾವ್ ಬಿ., ಕನ್ನಡ ಭಾಷೆಯ ಇತಿಹಾಸ, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು, ೧೯೯೮.

೪೯. ವಿಲ್ಯಂ ಮಾಡ್ತ, ಕನ್ನಡ ಭಾಷೆಯ ರೂಪರೇಷೆಗಳು, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೫.

೫೦. ವಿಲ್ಯಂ ಮಾಡ್ತ, ಆರ್.ವಾಯ್.ಕುಲಕರ್ಣಿ, ನಿಘಂಟು ರಚನಾ ವಿಜ್ಞಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪.

೫೧. ವೆಂಕಟಸುಬ್ಬಯ್ಯ ಜಿ., ಇಗೋ ಕನ್ನಡ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೧.

೫೨. ವೆಂಕಟಸುಬ್ಬಯ್ಯ, ಎರವಲು ಪದಕೋಶ, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಜೆನ್ಸಿ ಸೆಂಟರ್, ಬೆಂಗಳೂರು,, ೧೯೯೮.

೫೩. ಶಂಕರಭಟ್ಟ ಡಿ.ಎನ್., ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ, ಭಾಷಾ ಪ್ರಕಾಶನ, ಮೈಸೂರು, ೨೦೦೧.

೫೪. ಶಂಕರಭಟ್ಟ ಡಿ.ಎನ್., ಕನ್ನಡ ಪದಗಳ ಒಳರಚನೆ, ಭಾಷಾ ಪ್ರಕಾಶನ, ಮೈಸೂರು, ೧೯೯೯.

೫೫. ಶಂಕರಭಟ್ಟ ಡಿ.ಎನ್., ಕನ್ನಡ ವಾಕ್ಯಗಳ ಒಳರಚನೆ, ಭಾಷಾ ಪ್ರಕಾಶನ, ಮೈಸೂರು, ೨೦೦೪.

೫೬. ಶಂಕರಭಟ್ಟ ಡಿ.ಎನ್., ಭಾಷೆಯ ಬಗೆಗೆ ನೀವೇನು ಬಲ್ಲಿರಿ, ಭಾಷಾ ಪ್ರಕಾಶನ, ಮೈಸೂರು, ೨೦೦೨.

೫೭. ಶಂಕರಭಟ್ಟ ಡಿ.ಎನ್., ಕನ್ನಡ ಭಾಷೆಯ ಕಲ್ಪಿತ ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ೧೯೯೫.

೫೮. ಶಾಂತಿನಾಥ ದೇಸಾಯಿ, ಸಾಹಿತ್ಯ ಮತ್ತು ಭಾಷೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೦.

೫೯. ಶಾಲಿನಿ ರಘುನಾಥ, ಉಪಭಾಷಾಧ್ಯಯನ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬೦. ಶಿರೂರು ಬಿ.ವಿ., ಸಂಶೋಧನಾ ಸ್ವರೂಪ, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ, ೨೦೦೦.

೬೧. ಶೇಷಗಿರಿ ರಾವ್ ಎಸ್.ಎಲ್., ಸುಭಾಷ್ ನಿಘಂಟು, ಲಕ್ಷ್ಮಿ ಮುದ್ರಣಾಲಯ, ೧೯೯೮.

೬೨. ಸಂಗಮೇಶ ಸವದತ್ತಿಮಠ, ಭಾಷಾಲೇಖ, ರೂಪರಶ್ಮಿ ಪ್ರಕಾಶನ, ಗುಲಬರ್ಗಾ, ೧೯೯೯.

೬೩. ಸಂಗಮೇಶ ಸವದತ್ತಿಮಠ, ದ್ರಾವಿಡಭಾಷಾ ವ್ಯಾಸಾಂಗ, ಸತೀಶ ಪ್ರಕಾಶನ, ಕಲಬುರ್ಗಿ, ೧೯೮೧.

೬೪. ಸಂಗಮೇಶ ಸವದತ್ತಿಮಠ, ಕನ್ನಡ ಭಾಷಾ ಸ್ವರೂಪ, ರೂಪರಶ್ಮಿ ಪ್ರಕಾಶನ, ಧಾರವಾಡ, ೨೦೦೭.

೬೫. ಸಂಗಮೇಶ ಸವದತ್ತಿಮಠ, ಕನ್ನಡಭಾಷಾ ಪ್ರಭೇದಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೬೬. ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೧.

೬೭. ಸಾಂಬಮೂರ್ತಿ, ಭಾಷೆ ಮತ್ತು ಅಶಾಬ್ದಿಕ ಸಂವಹನ, ಸಿ.ವಿ.ಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪.

೬೮. ಸಾಂಬಮೂರ್ತಿ. ನೇಕಾರರ ವೃತ್ತಿ ಪದಕೋಶ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೭೯. ಸಾಂಬಮೂರ್ತಿ, ಕನ್ನಡದಲ್ಲಿ ಪ್ರತ್ಯಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೭೦. ಸುವರ್ಣಸಿರಿ ರಾಯಚೂರು ಜಿಲ್ಲಾ ೫ನೇ ಕನ್ನಡ ಸಾಹಿತ್ಯ ಸಮ್ಮೇಳನ, ಲಿಂಗಸೂಗೂರು, ನೆನಪಿನ ಸಂಚಿಕೆ, ೧೯೯೯.

೭೧. ಸೋಮಶೇಖರಗೌಡ, ಆಡುಮಾತಿನ ಕನ್ನಡ, ಕನ್ನಡ ಸಾಹಿತ್ಯ ಪತ್ರಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೦.

ಲೇಖನಗಳು

೧. ಬಸವರಾಜ ಕೋಡಗುಂಟಿ, ಮಸ್ಕಿಕನ್ನಡದ ಸಂಬಂಧಿಸಿದ ಒಟ್ಟುಗಳ ನಿಯಮಗಳು ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ.

೨. ಬಸವರಾಜ ಕೋಡಗುಂಟಿ, ಮಸ್ಕಿಕನ್ನಡದಾಗ ಕಾರಕ ಸಂಬಂಧಗಳ ಒಟ್ಟುಗಳು : ಒಂದು ಚಿತ್ರ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ.

ಇಂಗ್ಲೀಷ್ ಲೇಖನಗಳು.

1. Basavaraja Kodagunti. Ablactive case Markas in Maski kannada. Dravidian University, Kuppam.

2. Basavaraja Kodagunti. Sociative case in Maski kannada. Dravidian University, Kuppam.

3. -¯aga : A locative case Markar in Maski Kannada its development in Dravidian Languages.

ಪ್ರಸ್ತುತ ಅಧ್ಯಯನಕ್ಕಾಗಿ ಪರಾಮರ್ಶಿಸಲಾದ ಪಿಎಚ್.ಡಿ ಮಹಾಪ್ರಬಂಧಗಳು

೧. ಆಂಜನೇಯ, ಮ್ಯಾಸಬೇಡರ ಕನ್ನಡ ಸಮಾಜೋಭಾಷಿಕ ಅಧ್ಯಯನ, ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೬

೨. ಪಾಂಡುರಂಗಬಾಬು ಡಿ., ಆದಿಜಾಂಬವರ ಕನ್ನಡ ಒಂದು ವಿವರಣಾತ್ಮಕ ಅಧ್ಯಯನ, ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೯೫

೩. ಓಂಪ್ರಕಾಶ್ ನಾಯಕ, ಆದೋನಿ ಕನ್ನಡ, ಪಿಎಚ್.ಡಿ ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ೨೦೦೭.